
ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೧೭

ಕಾವ್ಯ ಸಾಹಿತ್ಯ : ಭಾಗ-೯



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೨೭ : ಕಾವ್ಯ ಸಾಹಿತ್ಯ : ಭಾಗ-೯

❖

- ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
- ನಿಂಬಸಾಮಂತ ಚರಿತೆ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಸರಸ್ವತಿದೇವಿ ಶಂ. ಭಗವತಿ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI

VOLUME - 27 : KAVYA SAHITY : BHAGA-9

Edited by : Dr. Saraswatidevi S. Bhagavati, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2019
Pages : xxxviii + 584=622

Copies: 1000
Price Rs: 300/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೭–ಕಾವ್ಯ ಸಾಹಿತ್ಯ : ಭಾಗ–೯

ಸಂಪಾದಕರು : ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೧೯
ಪುಟಗಳು: xxxviii + ೫೮೪=೬೨೨

ಪ್ರತಿಗಳು: ೧೦೦೦
ಬೆಲೆ ರೂ: ೩೦೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ–ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ–ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಚೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **-ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **-ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **-ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ

೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನ್ಥಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ **–ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ **–ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ **–ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

‘ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ’ ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ ‘ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ’ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.

❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.

❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಸರಸ್ವತಿದೇವಿ ಶಂ. ಭಗವತಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಸರಸ್ವತಿದೇವಿ ಶಂ. ಭಗವತಿ

ಕನ್ನಡ ಸಂಪಾದನಸಾಹಿತ್ಯದಲ್ಲಿ ಆಕರ ಜ್ಞಾನಶಿಸ್ತನ್ನು ತಂದುಕೊಟ್ಟದ್ದು 'ಗ್ರಂಥಸಂಪಾದನ ಶಾಸ್ತ್ರ.' ಇದು ಪಾಶ್ಚಿಮಾತ್ಯ ವಿದ್ವಾಂಸರಿಂದ ಆರಂಭವಾಯಿತು. ಭಾರತೀಯ ವಿದ್ವಾಂಸರು ಈ ಶಾಸ್ತ್ರವನ್ನು ಅಂತರ್ ಶಿಸ್ತಿಗೆ ಒಳಪಡಿಸಿದರು. ಅವರಿಂದ ಮಹತ್ವದ ಗ್ರಂಥಗಳು ಪ್ರಕಟವಾದವು. ಆಗ 'ಆಕರಮುಖಿಶೋಧ'ಕ್ಕೆ ಹೆಚ್ಚಿನ ಪ್ರಾಮುಖ್ಯತೆ ಪ್ರಾಪ್ತವಾಯಿತು. ಡಾ. ಎಂ. ಎಂ. ಕಲಬುರ್ಗಿಯವರು 'ಆಕರಮುಖಿಶೋಧ'ದ ಪ್ರಮುಖ ಸಂಶೋಧಕರಲ್ಲಿ ಒಬ್ಬರು.

ಡಾ. ಎಂ. ಎಂ. ಕಲಬುರ್ಗಿಯವರು ಸ್ಥಳೀಯ ರಾಜಕೀಯಕ್ಕೆ ಸಂಬಂಧಪಟ್ಟಂತೆ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ(೧೯೭೭), ನಿಂಬಸಾಮಂತ ಚರಿತೆ(೧೯೮೧), ಸಿರುಮಣನಾಯಕನ ಸಾಂಗತ್ಯ(೧೯೮೩), ಸಿರುಮನ ಚರಿತೆ(೧೯೯೧), ಗೊಲ್ಲ ಸಿರುಮನ ಚರಿತೆ(೧೯೯೪), ಹೊಸ ಕುಮಾರರಾಮನ ಸಾಂಗತ್ಯ(೨೦೦೦), ಕೊಮಾರರಾಮಯ್ಯನ ಚರಿತೆ(೨೦೦೧), ಬಾಲಕುಮಾರರಾಮನ ಸಾಂಗತ್ಯ(೨೦೦೭), ಹಳೆಯ ಕುಮಾರರಾಮನ ಸಾಂಗತ್ಯ(೨೦೦೮)ಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಸ್ಥಳೀಯ ಸಾಹಿತ್ಯದ ಬಗ್ಗೆ ಆಸಕ್ತಿ ತಾಳುವ ಮೂಲಕ, ನಮ್ಮ ರಾಜಕೀಯ ಇತಿಹಾಸದ ಕಂದರವನ್ನು ಬಹುಮಟ್ಟಿಗೆ ತುಂಬಲು ಅವರು ಪ್ರಯತ್ನಿಸಿದ್ದಾರೆ.

'ಅಲಕ್ಷಿತ ಸಾಹಿತ್ಯ'ವನ್ನು 'ಲಕ್ಷಿತ ಸಾಹಿತ್ಯ'ವನ್ನಾಗಿಸುವಲ್ಲಿ, ಸ್ಥಳೀಯ ಉಪೇಕ್ಷಿತ ಸಾಹಿತ್ಯದ ಬಗೆಗೆ ಅವರ ಪ್ರಯತ್ನ ನಿರಂತರವಾಗಿತ್ತು. ಆ ಕಾರ್ಯಕ್ಕಾಗಿ ನಾಡಿನ ಅನೇಕ ಹಸ್ತಪ್ರತಿಗಳನ್ನು ಅವರು ಶೋಧಿಸಿ–ಸಂಪಾದಿಸಿ–ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಅಂತಹ ಮಹತ್ವದ ಕೃತಿಗಳಲ್ಲಿ ೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೨. ನಿಂಬಸಾಮಂತ ಚರಿತೆ ಪ್ರಮುಖವಾದವು. ಅವುಗಳ ವಿವರ ಹೀಗಿದೆ :

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ :

ಸ್ಥಳೀಯ ಚರಿತ್ರೆ ಬಗೆಗೆ ವಿಶೇಷ ಆಸಕ್ತಿ ಹೊಂದಿದ ಡಾ. ಕಲಬುರ್ಗಿಯವರು ಪ್ರಾಚೀನ ಕರ್ನಾಟಕದ ಸಣ್ಣ ಅರಸುಮನೆತನಗಳನ್ನು ಕುರಿತು ಅನೇಕ ಕಾವ್ಯಗಳನ್ನು ಶೋಧಿಸಿ, ಸಂಸ್ಕರಿಸಿ,

ಪ್ರಕಟಿಸಿದ್ದಾರೆ. ಈ ದಿಸೆಯಲ್ಲಿ ಅವರು ಪ್ರಕಟಿದ 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ' ಹಲವು ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಇದು ೧೯೭೭ರಲ್ಲಿ ಧಾರವಾಡ ಶ್ರೀ ಮುರುಘಾಮಠದ, ಶ್ರೀ ಬಾಲಲೀಲಾ ಮಹಾಂತಶಿವಯೋಗೀಶ್ವರ ಗ್ರಂಥಮಾಲೆಯ ೯೦ನೆಯ ಪುಸ್ತಕವಾಗಿ ಪ್ರಕಟಗೊಂಡಿದೆ. ಇದನ್ನು ಡಾ. ಬಿ. ಆರ್. ಹಿರೇಮಠ ಅವರ ಜೊತೆಗೂಡಿ ಸಂಪಾದಿಸಲಾಗಿದೆ.

ಈ ಕಾವ್ಯದಲ್ಲಿ ೧೭ ಸಂಧಿ, ೧೪೭೪ ಸಾಂಗತ್ಯ ಪದ್ಯಗಳಿವೆ. ಸುದೀರ್ಘ ಪ್ರಸ್ತಾವನೆಯಲ್ಲಿ ವೀರಶೈವ ಅರಸುಮನೆತನಗಳು, ಇಮ್ಮಡಿ ಚಿಕ್ಕಭೂಪಾಲನ ಚರಿತ್ರೆಯ ವಿವರವನ್ನು ನೀಡಲಾಗಿದೆ.

ಬಿಜ್ಜಾವರವನ್ನು ರಾಜಧಾನಿ ಮಾಡಿಕೊಂಡು ಆಳಿದ ಮಹಾನಾಡಪ್ರಭು ಖ್ಯಾತಿಯ ಇಮ್ಮಡಿ ಚಿಕ್ಕಭೂಪಾಲ ಇದರ ಕಥಾನಾಯಕ. ಪೆನುಗೊಂಡೆಯ ವೆಂಕಟಪತಿರಾಯನ ಪರವಾಗಿ ಹಾವಳಿಯ ಭೈರವೇಂದ್ರನೊಡನೆ ಹೋರಾಡಿ ಈ ಚಿಕ್ಕಭೂಪಾಲ, ಮಗ ತೋಂಟದರಾಯರು ವೀರಸ್ವರ್ಗವೇರಿದ ಘಟನೆ, ಪ್ರಸ್ತುತ ಕೃತಿಯ ವಸ್ತು. ಸಮಕಾಲೀನ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ವಿವರಗಳು ಇಲ್ಲಿವೆ. ೧೫–೧೬ನೆಯ ಶತಮಾನದ ಸಾಂಸ್ಕೃತಿಕ ಅಭ್ಯಾಸಕ್ಕೆ ಇದು ಅಮೂಲ್ಯ ಆಕರವೆನಿಸಿದೆ.

ಈ ಕಾವ್ಯದಲ್ಲಿ ಬರುವ ಸ್ಥಳನಾಮ, ವ್ಯಕ್ತಿನಾಮ, ರಾಜಕೀಯ ಸಂಘರ್ಷ, ನಿರ್ಮಿಸಿದ ದೇವಾಲಯ, ನಂಬಿದ್ದ ಮೌಲ್ಯ ಮೊದಲಾದುವು ೧೬ನೆಯ ಶತಮಾನದ ಒಂದು ಪಾಳೆಯಗಾರ ಪರಿವಾರದ ಮತ್ತು ಪ್ರಜಾಪರಿಸರದ ಸ್ಪಷ್ಟ ಚಿತ್ರವನ್ನೊದಗಿಸುತ್ತವೆ. ರಾಜಧಾನಿ, ರಾಜಗೃಹ, ರಾಜಬೀದಿಗಳ ವಿವರ, ನಾಗವಾಸದ ಉಲ್ಲೇಖ, ಗುರುಸಿದ್ಧಮಲ್ಲೇಶ ಬೋಧಿಸಿದ ರಾಜನೀತಿ, ಜಂಗಮಾರ್ಚನೆ, ಅನುಭವಮಂಟಪ, ಪರನಾರಿ ಸೋದರ ರಾಮನಾಥ ಚರಿತ್ರೆಯ ಪಠಣ, ಸೈನ್ಯಸಂಗ್ರಹ, ಕೋಟೆಯ ಕಾಳಗ, ಚಿನನಾಗನ ಮಸ್ತಕಾರ್ಪಣೆ, ಚೆನ್ನಬಸಮ್ಮನ ಸಹಗಮನ ಮೊದಲಾದ ಪ್ರಸಂಗಗಳು ಆ ಯುಗವನ್ನೇ ತೆರೆದು ತೋರಿಸುತ್ತವೆ. ಈ ಕೃತಿಯ ಕೇಂದ್ರವಸ್ತುವಾದ 'ಹರವೆಯ ಕಾಳಗ'ವಂತೂ ಅಂದಿನ ಪಾಳೆಯಗಾರರಲ್ಲಿ ಸಂಭವಿಸುತ್ತಿದ್ದ ಯುದ್ಧವೊಂದನ್ನು ಚಿತ್ರವತ್ತಾಗಿ ಕಣ್ಣಿಗೆ ಕಟ್ಟುತ್ತದೆ. ಈ ಎಲ್ಲ ದೃಷ್ಟಿಯಿಂದ "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ" ಬೆಲೆಯುಳ್ಳ ಚಾರಿತ್ರಿಕ ಕೃತಿಯಾಗಿ ಪರಿಣಮಿಸಿದೆ.

ಈ ಕೃತಿಯ ಕರ್ತೃ ಮಲ್ಲಿಕಾರ್ಜುನ ಇಮ್ಮಡಿ ಚಿಕ್ಕಭೂಪಾಲನ ಆಸ್ಥಾನಕವಿ. ಕನ್ನಡ–ಸಂಸ್ಕೃತ ಭಾಷೆಗಳ ವಿದ್ವಾಂಸನಾಗಿದ್ದ ಈತನ ಈ ಕೃತಿ ಕವಿತ್ವದೃಷ್ಟಿಯಿಂದಲೂ ಗಮನಾರ್ಹವೆನಿಸಿದೆ. ಸಾಂಗತ್ಯ ಪ್ರಕಾರದಲ್ಲಿ ರತ್ನಾಕರವರ್ಣಿಯ ಭರತೇಶ ವೈಭವವನ್ನು ಬಿಟ್ಟರೆ, ತಪ್ಪದೇ ಗಮನಿಸಬೇಕಾದ ಗ್ರಂಥವಿದು.

ಈ ಕೃತಿಯನ್ನು ಸಂಪಾದಿಸಲು 'ಕರ್ನಾಟಕ ಭಾರತಿ' ಪತ್ರಿಕೆಯಲ್ಲಿ ಪ್ರಕಟವಾದ ಲಿಂಗೈಕ್ಯ ಬಿ. ಶಿವಮೂರ್ತಿಶಾಸ್ತ್ರಿ ಅವರ 'ಬಿಜ್ಜಾವರ–ಸಿದ್ಧಾಪುರ' ಹೆಸರಿನ ಲೇಖನವೆ ಕಾರಣ. ಶ್ರೀ ಶಾಸ್ತ್ರಿಗಳಿಂದ ಲಭ್ಯವಾದ ಕಾಗದ ಪ್ರತಿ(ಕ) ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಶ್ರೀ ಎಸ್. ಶಿವಣ್ಣ ಅವರು ರಾಜವಂಶೀಯರಾದ ಶಂಭೋನಹಳ್ಳಿಯ

ಶ್ರೀ ದೊಡ್ಡ ಕಣ್ಣಪ್ಪಾಜಿ ಅವರಿಂದ ಸ್ನೇಹಿತ ಶ್ರೀ ಶೇಷಶಾಸ್ತ್ರಿ ಅವರ ಮೂಲಕ ಪಡೆದಿದ್ದ ಒಂದು ತಾಳೆಪ್ರತಿಯನ್ನು ಬಳಸಿಕೊಳ್ಳಲಾಗಿದೆ. ಆದರೆ ತಾಳೆಪ್ರತಿಯ ನೇರವಾದ ನಕಲು ಕಾಗದಪ್ರತಿಯೆಂಬುದು ಸ್ಪಷ್ಟ. ಈ "ಎರಡಲ್ಲದ ಒಂದು" ಕೃತಿಯೂ ನಾಶವಾದರೆ ಅಪಾರನಷ್ಟವೆಂಬ ಭಾವನೆಯಿಂದ ಇದನ್ನು ಪರಿಷ್ಕರಣ ಮಾಡಲಾಗಿದೆ. ಅವಶ್ಯವಿರುವಷ್ಟು ಹಸ್ತಪ್ರತಿಗಳಿಲ್ಲದ ಕಾರಣ, ಬಹಳಷ್ಟು ಕಡೆಗಳಲ್ಲಿ ಸಂಪಾದಕರು ಊಹಾತ್ಮಕ ಪಾಠಾಂತರ ಮಾಡಿದ್ದಾರೆ. ಅವುಗಳನ್ನು ಚೌಕಕಂಸಿನಲ್ಲಿ ತೋರಿಸಿದ್ದಾರೆ. ಈ ಆವೃತ್ತಿಯಲ್ಲಿ ಇಂಥ ಸುಮಾರು ೭೦೦ ಊಹೆಗಳನ್ನು ಸಂಪಾದಕರು ಮಾಡಿದ್ದಾರೆ. ಇಷ್ಟಾಗಿಯೂ ಸುಮಾರು ೨೦೦ ಸಂದೇಹಗಳು ಉಳಿದಿದ್ದು, ಅವುಗಳನ್ನು ವರ್ತುಲಕಂಸಾಂತರ್ಗತ ಪ್ರಶ್ನೆಚಿಹ್ನೆಯೊಂದಿಗೆ ಸೂಚಿಸಿರುವುದಾಗಿ ಸಂಪಾದಕರೇ ಪ್ರಾಮಾಣಿಕವಾಗಿ ಹೇಳಿಕೊಂಡಿದ್ದಾರೆ. ಆದರೂ ಈ ಶ್ರೇಷ್ಠ ಐತಿಹಾಸಿಕ ಕಾವ್ಯವನ್ನು ಒಂದೇ ಒಂದು ಹಸ್ತಪ್ರತಿಯ ಮೂಲಕ ಸಂಪಾದಿಸಿ, ಪರಿಷ್ಕರಿಸಿಕೊಟ್ಟಿರುವುದು ಮಹತ್ವದ ಸಂಗತಿಯಾಗಿದೆ.

ನಿಂಬಸಾಮಂತ ಚರಿತೆ:

೧೯೮೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನಿಂದ ಪ್ರಕಟವಾದ ಈ ಕೃತಿ ನಿಂಬಸಾಮಂತನ ಚರಿತೆಯನ್ನು ಹೇಳುತ್ತದೆ.

ಹನ್ನೆರಡನೆಯ ಶತಮಾನದ ಪೂರ್ವಾರ್ಧದ ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿ ಸಮರ್ಥ ಪಾತ್ರವಹಿಸಿದ ನಿಂಬಸಾಮಂತ. ಈತನ ಕುರಿತು ಪಾರ್ಶ್ವಕವಿಯು 'ನಿಂಬಸಾಮಂತ ಚರಿತೆ'ಯನ್ನು ರಚಿಸಿದ್ದಾನೆ. ಈತನ ಕಾಲ ೧೭೩೬ರ ಪೂರ್ವದವನೆಂದು ಸಂಪಾದಕರು ಗುರುತಿಸಿದ್ದಾರೆ. ನಿಂಬಸಾಮಂತ ಚರಿತೆಯು ೧೬ನೆಯ ಶತಮಾನದ ತರುವಾಯ, ಪ್ರತಿಮಾಡಿದ ಕಾಲವಾದ ೧೮ನೆಯ ಶತಮಾನಕ್ಕೆ ಮೊದಲು ಅಂದರೆ ೧೭ನೆಯ ಶತಮಾನದಲ್ಲಿ ಹುಟ್ಟಿರಬಹುದೆಂದು ಹೇಳಲಾಗಿದೆ.

ಕವಿ: ಹೆಸರೇ ಸೂಚಿಸುವಂತೆ ಕವಿ ಜೈನಮತೀಯ. ಈತನ 'ನಿಂಬಸಾಮಂತ ಚರಿತೆ'ಯ ಹಸ್ತಪ್ರತಿ ದೊರೆತುದು ಕೊಲ್ಲಾಪುರ ಪ್ರದೇಶದ ಉದಗಾವಿಯಲ್ಲಿ. ಇದನ್ನು "ಅಷ್ಟಿಗಿಪುರದ ಶ್ರೀ ಅಜಿತನಾಥನ ದಿವ್ಯಚೈತ್ಯಾಲಯದಲ್ಲಿನ ಪ್ರತಿನೋಡಿ" ನಕಲು ಮಾಡಲಾಗಿದ್ದು, ಈ ಗ್ರಾಮ ಕೊಲ್ಲಾಪುರ ಜಿಲ್ಲೆಯ ನೆರೆಯ ಸಾತಾರಾ ಜಿಲ್ಲೆಯಲ್ಲಿದೆ. ಕೃತಿನಾಯಕ ಕೊಲ್ಲಾಪುರದ ನಿಂಬಸಾಮಂತ. ಹೀಗಾಗಿ ಕವಿ ಕೊಲ್ಲಾಪುರ ಪ್ರದೇಶದವನಾಗಿರಬಹುದು. ಕವಿ "ಸೇನಗಣಾಗ್ರಗಣ್ಯ ಶ್ರೀಮಜ್ಜಿನಸೇನದೇವರ ಭೃತ್ಯಂ" ಎಂದು ಹೇಳಿರುವುದರಿಂದ, "ಕರವೀರಕ್ಷೇತ್ರ ಕೊಲ್ಲಾಪುರದ ಶ್ರೀ ಜಿನಸೇನಭಟ್ಟಾರಕ ಸ್ವಾಮಿ ಕರಕೃತ ಸಂಜಾತ ಗುಣಭದ್ರಸ್ವಾಮಿಗಳ ಶಿಷ್ಯರು ಶಾಂತಿಮತಿಕಂತಿಯರು" ಇದನ್ನು ಪ್ರತಿಮಾಡಿರುವುದರಿಂದ ಪಾರ್ಶ್ವನು ಜಿನಸೇನಾಚಾರ್ಯರ ಅದರಲ್ಲಿಯೂ ಕೊಲ್ಲಾಪುರದ ಜಿನಸೇನಾಚಾರ್ಯರ ಶಿಷ್ಯನಾಗಿದ್ದನೆಂದು ಹೇಳಬಹುದು. ಈ ಪೀಠದ ಪರಂಪರೆಯಲ್ಲಿ ಜಿನಸೇನ ಹೆಸರಿನ ಅನೇಕ ಗುರುಗಳು ಆಗಿಹೋಗಿದುದರಿಂದ ಪಾರ್ಶ್ವನ ಗುರು ಜಿನಸೇನನು ಯಾರೆಂಬುದು ಸ್ಪಷ್ಟವಾಗುವುದಿಲ್ಲ.

ಕೃತಿ : 'ನಿಂಬಸಾಮಂತ ಚರಿತೆ' ೫೦೬ ಭಾಮಿನಿಷಟ್ಪದಿಗಳುಳ್ಳ ೫ ಸಂಧಿಯ ಕೃತಿ. ಏಕಕಾಲಕ್ಕೆ ಸಾಹಿತ್ಯ, ಧರ್ಮ ಮತ್ತು ಇತಿಹಾಸಗಳನ್ನು ಪ್ರಕಟಿಸುವುದು ಇಂಥ ಕೃತಿಗಳ ಉದ್ದೇಶವಾಗಿರುತ್ತದೆ. ಆದರೆ ಈ ಕೃತಿಮಾತ್ರ ಸಾಹಿತ್ಯಿಕ ಮತ್ತು ಧಾರ್ಮಿಕ ಅಂಶಗಳಿಗಿಂತ ಹೆಚ್ಚಾಗಿ ಓದುಗರ ಗಮನ ಸೆಳೆಯುವುದು, ಐತಿಹಾಸಿಕ ಅಂಶಗಳ ಮೂಲಕ. ಆದರೆ ಇಲ್ಲಿ ಇತಿಹಾಸಕ್ಕೂ ಸಂಪೂರ್ಣನ್ಯಾಯ ಒದಗದುದು ವ್ಯಸನದ ಸಂಗತಿ. ನಿಂಬಸಾಮಂತನ ತಂದೆ, ತಾಯಿ ಗ್ರಾಮಗಳ; ಆತ ಕೈಕೊಂಡ ಇತರ ರಾಜಕೀಯ, ಅದಕ್ಕಿಂತ ಧಾರ್ಮಿಕ ಕ್ರಿಯಾಕಲಾಪಗಳ; ಜನನ ಮರಣ ಮಿತಿ, ಯುದ್ಧ ವಿಧಾನಗಳ ವಿವರಗಳನ್ನು ಸ್ಪಷ್ಟಪಡಿಸದೇ ಹೋದುದಕ್ಕೆ ಪ್ರಾಚೀನ ಕನ್ನಡಿಗರಿಗಿದ್ದ ಐತಿಹಾಸಿಕ ಅವಜ್ಞೆಯೇ ಕಾರಣ. ಆದರೂ ನಿಂಬಸಾಮಂತ ಮಾಘಣಂದಿಗಳ ಶಿಷ್ಯನೆಂದೂ ಜೈನಮತೀಯರ ಗಾಢ ಪ್ರೀತಿ–ಭಕ್ತಿಗೆ ಪಾತ್ರನಾದವನೆಂದೂ ತಿಳಿಸುತ್ತಿದ್ದು, ಇದಕ್ಕಿಂತ ಆತನ ಯುದ್ಧ ಘಟನೆಯೇ ಈ ಕೃತಿಗೆ ಮಹತ್ವ ಒದಗಿದೆ. ಇಲ್ಲಿ ಎರಡು ಅಂಶಗಳು ಮುಖ್ಯವಾಗಿವೆ. ಒಂದು: ಬಿಜ್ಜಳನೊಡನೆ ಕಾದಿ ಸಾಮಂತ ತೀರಿಕೊಂಡನೆಂಬುದು; ಎರಡು: ಸಲ್ಲೇಖನ ವ್ರತ ಹಿಡಿದು ರಣಾಂಗಣವನ್ನು ಪ್ರವೇಶಮಾಡಿದನೆಂಬುದು.

ಗಂಡರಾದಿತ್ಯನ ಪರವಾಗಿ ನಿಂತು ನಿಂಬದೇವನು ಬಿಜ್ಜಳನೊಂದಿಗೆ ಕೊಲ್ಲಾಪುರದ ನೆರೆಯ ಪಂಚಗಂಗಾ ನದೀ ತೀರದಲ್ಲಿ ಕಾದಿ ಮಡಿದನೆಂದು ಈ ಕೃತಿ ಹೇಳುತ್ತದೆ. ಬಹುಶಃ ಈಗ ಬಿಜ್ಜಳ ಇನ್ನೂ ಚಕ್ರವರ್ತಿಯಾಗಿರದೆ ಮಾಂಡಲಿಕನಾಗಿದ್ದು ಚಾಲುಕ್ಯ ಚಕ್ರವರ್ತಿಗಳ ಪರವಾಗಿ ಏರಿಬಂದಿರಹುದೆಂದು ಸಂಪಾದಕರು ಊಹಿಸಿದ್ದಾರೆ.

ಜೈನಧರ್ಮದಲ್ಲಿ ಕರ್ಮಕ್ಷಯದ ತೀವ್ರತೆಗೋಸುಗ ದ್ವಾದಶ ತಪಸ್ಸು ಅವಶ್ಯ. ಇವುಗಳಲ್ಲಿ ಬಾಹ್ಯತಪಸ್ಸುಗಳ ಒಂದು ಅಂಗ, ಉಪವಾಸವಿಧಿ, ಮರಣ ಸನ್ನಿಹಿತವಾದ ಸಂದರ್ಭದಲ್ಲಿ ಹಿಡಿದ ಈ ಉಪವಾಸ ವಿಧಿಯೇ ಸಲ್ಲೇಖನವ್ರತವೆನಿಸುತ್ತದೆ. ಈ ವ್ರತದಿಂದ ಮಡಿಯುವ ಅನೇಕ ಬಗೆಯ ಮರಣಗಳಲ್ಲಿ 'ಸಮಾಧಿ ಮರಣ'ವೂ ಒಂದು. ಹೀಗೆ ಮರಣಹೊಂದಿದವರ ನೆನಪಿಗಾಗಿ ನಿಲ್ಲಿಸಿದ ಶಿಲೆಗಳೇ ನಿಷಧಿ ಶಿಲೆಗಳು. ಸಲ್ಲೇಖನ ವ್ರತವನ್ನು ಅನಾರೋಗ್ಯ ಮತ್ತು ಅಪಾಯಪ್ರಸಂಗ ಕಾರಣವಾಗಿ ಇನ್ನು ತಾನು ಉಳಿಯುವುದು ಸಾಧ್ಯವಿಲ್ಲ, ಮರಣ ಅನಿವಾರ್ಯವೆಂದು ಖಚಿತವಾದರೆ ಮಾತ್ರ ಹಿಡಿಯಬೇಕು. ಈಗ ನಿಂಬಸಾಮಂತ ಯುದ್ಧವೀರನಿಗೆ ತಕ್ಕ ರೀತಿಯಲ್ಲಿ ಹೋರಾಟವನ್ನು ಕೈಗೆತ್ತಿಕೊಂಡಿದ್ದಾನೆ. ಜೀವದ ಮೇಲೆ ಆಸೆಯಿಡದಿದ್ದರೆ ಮಾತ್ರ ರಣದಲ್ಲಿ ಹೋರಾಟ ಅರ್ಥಪಡೆಯುತ್ತದೆ. ಹೀಗಾಗಿ ಹಿಂದುಗಳು 'ಪ್ರಾಣಪರಿಚ್ಛೇದ ಪ್ರತಿಜ್ಞೆ'ಯನ್ನು ಕೈಕೊಂಡರೆ ಇದಕ್ಕೆ ಪ್ರತಿಯಾಗಿ ಜೈನನಾದ ನಿಂಬದೇವ ಮೌನವ್ರತದೊಡನೆ "ಸಲ್ಲೇಖನವ್ರತ"ವನ್ನು ಸ್ವೀಕರಿಸಿ ರಣರಂಗವನ್ನು ಪ್ರವೇಶಿಸುತ್ತಾನೆ. ಇದು ರಣೋದ್ಯೋಗದಲ್ಲಿ ಸಲ್ಲೇಖನವ್ರತ ಹಿಡಿದ ಏಕೈಕ ಉದಾಹರಣೆಯಾಗಿದ್ದು, ಹಿಂದೂ ವೀರಮರಣಕ್ಕೆ ಜೈನ ಸಮಾಧಿಮರಣವನ್ನು ಹೊಂದಿಸಿಕೊಂಡ ರೀತಿಯೂ ಇಲ್ಲಿ ಗಮನಾರ್ಹವಾಗಿದೆ.

ರಣರಂಗದಲ್ಲಿ ಹಯಾರೂಢನಾಗಿ ಮೌನತಾಳಿ ವೈರಿ ಸಂಹಾರ ಕಾರ್ಯದಲ್ಲಿ ತೊಡಗಿದ ನಿಂಬದೇವ, ಕೊನೆಯ್ಕು ದಿನ ವೈರಿಗಳ ಮೇಲೆ ಮುನ್ನುಗ್ಗಲು ಆಯಾಸ ವ್ಯಕ್ತಪಡಿಸಿದ ತನ್ನ ಕುದುರೆಯ ಕಣ್ಣುಗಳನ್ನು ಉತ್ತರೀಯದಿಂದ ಕಟ್ಟಿ ವೈರಿಸೈನ್ಯ ಸಾಗರದ ಮೇಲೆ ಹರಿಬಿಡುತ್ತಾನೆ.

ಮೈದಣಿ-ಮನದಣಿ ವೈರಿಗಳನ್ನು ಕತ್ತರಿಸುತ್ತ ಸೈನ್ಯವನ್ನು ಭೇದಿಸಿ ಹೋಗಿ ಗಜಾರೋಹಿಯಾದ ಬಿಜ್ಜಳನನ್ನು ಎದುರಿಸುತ್ತಾನೆ. ಶಸ್ತ್ರದಿಂದ ತಲೆಯನ್ನು ಸೀಳುವುದರ ಮೂಲಕ ಆನೆಯನ್ನು ನೆಲಕ್ಕುರುಳಿಸಿ, ದಣಿದ ತಾನೂ ಕೈಸೋತು-ಮೈಸೋತು ಕುದುರೆಯ ಮೇಲಿಂದ ನೆಲಕ್ಕುರುಳುತ್ತಾನೆ. ಅತ್ತ ಬಿಜ್ಜಳನ ಪಟ್ಟದಾನೆಯೂ ಅಸುನೀಗಿತು; ಇತ್ತ ನಾಗಲದೇವಿಯ ಗಂಧವಾರಣ ನಿಂಬದೇವನೂ ಅಸುನೀಗಿದ. ಇಂಥ ಮಹಾವೀರರು ಗಂಡರಾದಿತ್ಯನಲ್ಲಿ ಎಷ್ಟು ಜನರಿರುವರೋ ಎಂಬ ಹೆದರಿಕೆಯಿಂದ ಬಿಜ್ಜಳ ಯುದ್ಧಮಾಡದೆ ನಿಂಬನ ಶಕ್ತಿ-ಸಾಹಸಗಳನ್ನು ಹೊಗಳುತ್ತ ಅತ್ತ ಕಲ್ಯಾಣಕ್ಕೆ ಹೊರಟ; ಇತ್ತ ಗಂಡರಾದಿತ್ಯ ಸಾಮಂತನ ಸಾವಿಗೆ ಪರಿಪರಿಯಾಗಿ ಶೋಕಿಸುತ್ತ ಕೊಲ್ಲಾಪುರಕ್ಕೆ ಹೊರಟ-ಎಂಬಲ್ಲಿ ಕಾವ್ಯ ಮುಕ್ತಾಯಗೊಳ್ಳುತ್ತದೆ.

* * *

ಕಲ್ಯಾಣಕ್ಕೆ ಬಂದ ಚಂಡಿಪುತ್ರರು ಬಿಜ್ಜಳನ ಎದುರು ಗಂಡರಾದಿತ್ಯನ ಬಿರುದು ಹೊಗಳಿದುದೇ ಈ ಯುದ್ಧಕ್ಕೆ ಕಾರಣವಾಯಿತೆಂದು ಕವಿ ಹೇಳುವುದು ಅಷ್ಟು ಸಮಂಜಸವೆನಿಸುವುದಿಲ್ಲ. ಅಲ್ಲದೇ ನಿಂಬನು ಗಂಡರಾದಿತ್ಯನಿಗೆ ಆಸ್ಥಾನದಲ್ಲಿ ಕೈಮುಗಿಯುವಾಗ ಪರ್ಯಾಯವಾಗಿ ತನ್ನ ಬೆರಳಿನಲ್ಲಿಯ ಉಂಗುರದಲ್ಲಿದ್ದ ಜಿನಮುದ್ರೆಗೆ ನಮಸ್ಕರಿಸುತ್ತಿದ್ದನೆಂಬುದು, ಅರಸನಿಂದ ಒಮ್ಮೆ ಇದರ ಪರೀಕ್ಷೆ ನಡೆಯಿತೆಂಬುದು ಸಾಮಾನ್ಯವಾಗಿ ಬೇರೆ ವ್ಯಕ್ತಿಗಳ ವಿಷಯವಾಗಿಯೂ ಕೇಳಿಬರುವ ಸಂಗತಿಯಾಗಿದೆ. ನಿಂಬದೇವನು ಕಟ್ಟಿಗೆಯ ಖಡ್ಗವನ್ನು ಒರೆಯಲ್ಲಿಟ್ಟಿದ್ದ, ಅರಸನ ಪರೀಕ್ಷೆಯಲ್ಲಿ ಅದು ಜ್ವಾಲೆಯನ್ನು ಸೂಸಿತೆಂಬುದು ಕವಿಯ ಪವಾಡಪ್ರಿಯತೆ, ನಿಂಬಭಕ್ತಿಗಳನ್ನು ಸ್ಥಾಪಿಸಿತ್ತದೆ. ಇದಲ್ಲದೆ ಗಂಡರಾದಿತ್ಯನ ಹತ್ತಿರ ದಾನಕ್ಕಾಗಿ ಹಿಂಡುಗಟ್ಟಿಕೊಂಡು ಬಂದ ಬ್ರಾಹ್ಮಣರು ತಮ್ಮ ತಮ್ಮಲ್ಲಿ ಹೊಡೆದಾಡಿದ ಪ್ರಸಂಗ ಬ್ರಾಹ್ಮಣರನ್ನು ಅಪಹಾಸ್ಯ ಮಾಡಲು ಸೃಷ್ಟಿಸಿಕೊಂಡುದಾಗಿದೆ.

ನಿಂಬ, ಸಲ್ಲೇಖನ ಹಿಡಿದುದಕ್ಕಾಗಿ ಜೈನಮತೀಯರು ಮರುಗಿದ ಸಂದರ್ಭ, ನೀತಿಸಾರದ ಪ್ರಸಂಗ, ಗಂಡರಾದಿತ್ಯನ ದುಃಖಪ್ರಸಂಗಗಳು ಈ ಕಾವ್ಯದ ಆಕರ್ಷಕ ಘಟ್ಟಗಳಾಗಿವೆ. ಇದನ್ನು ಬಿಟ್ಟರೆ ಬಾಹತ್ತರನಿಯೋಗ, ಯುದ್ಧಯಾತ್ರೆ, ಯುದ್ಧ ಪದ್ಧತಿ ಇತ್ಯಾದಿ ಸಂಗತಿಗಳು ತಕ್ಕಮಟ್ಟಿಗೆ ಇಲ್ಲಿ ಚಿತ್ರಣಗೊಂಡಿವೆ.

ಒಟ್ಟಿನಲ್ಲಿ ಇದು ಸಾಹಿತ್ಯದೃಷ್ಟಿಯಿಂದ ತೀರ ಮಧ್ಯಮ ವರ್ಗದ ರಸಕಾವ್ಯವಾಗಿದ್ದಂತೆ ಚರಿತ್ರೆಯ ದೃಷ್ಟಿಯಿಂದಲೂ ಮಧ್ಯಮವರ್ಗದ ಇತಿಹಾಸಕಾವ್ಯವಾಗಿದೆ. ಕವಿ ಮನಸ್ಸುಮಾಡಿದ್ದರೆ ಚರಿತ್ರೆಯನ್ನು ಒದಗಿಸುವ ಮೂಲಕ ಕನ್ನಡಕ್ಕೆ ಮಿಗಿಲಾದ ಕಾಣಿಕೆಯನ್ನು ಕೊಡುವ ಸಾಧ್ಯತೆಯಿದ್ದಿತು. ಅದು ಇಲ್ಲಿ ಕೈಗೂಡಿಲ್ಲವಾದುದರಿಂದ ಕವಿಯು ನಿಂಬನ ಇತಿಹಾಸಪ್ರಸಿದ್ಧ ವ್ಯಕ್ತಿತ್ವವಿಗ್ರಹವನ್ನು ಅಪೂರ್ಣವಾಗಿ ಕೆತ್ತಿದನೆನ್ನ ಬೇಕಾಗುತ್ತದೆ.

* * *

ಪ್ರೊ. ಕುಂದಣಗಾರವರ ಗ್ರಂಥಭಾಂಡಾರದಲ್ಲಿ ಲಭಿಸಿದ ಹಸ್ತಪ್ರತಿಯ ಮೂಲಕ ಈ ಕೃತಿಯ ಸಂಪಾದನ ಕಾರ್ಯವನ್ನು ಡಾ. ಕಲಬುರ್ಗಿಯವರು ಪೂರೈಸಿದ್ದಾರೆ. ಜೊತೆಗೆ

ಡಾ. ಬಿ.ವ್ಹಿ.ಶಿರೂರ ಅವರು ಮೈಸೂರು ಹಸ್ತಪ್ರತಿ ಭಾಂಡಾರದಲ್ಲಿರುವ ಪ್ರತಿಯ ಪಾಠಾಂತರ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ "ನಿಂಬದೇವ ಸಾಮಂತ ನೀತಿ" ಹೆಸರಿನ ತಾಳೆಗರಿ ಪ್ರತಿಯ (ನಿಂಬಸಾಮಂತ ಚರಿತೆಯ ನೀತಿಬೋಧೆಯ ಭಾಗ) ನೆರವನ್ನೂ ಪಡೆದುಕೊಂಡಿದ್ದಾರೆ. ಹೀಗೆ ಸಾಧ್ಯವಿದ್ದಷ್ಟು ಹಸ್ತಪ್ರತಿಗಳನ್ನು ದೊರಕಿಸಿಕೊಂಡು ಪರಿಷ್ಕರಣಕಾರ್ಯ್ಯವನ್ನು ಪೂರೈಸಲಾಗಿದ್ದರೂ ಮೂಲದಲ್ಲಿಯೇ ಕವಿಯಿಂದುಂಟಾದ ವಾಕ್ಯರಚನಾವಿಧಾನ ದೋಷ, ಆಮೇಲಿನ ಗ್ರಂಥಪಾತ, ಪಾಠದೋಷ, ಇತ್ಯಾದಿ ಕಾರಣಗಳಿಂದಾಗಿ ಬಹಳ ಸಲ ಊಹೆಗಳನ್ನೇ ಮಾಡಲಾಗಿದೆ. ನೀತಿಬೋಧೆ ಪ್ರಸಂಗದ ಕೆಲವು ಪದ್ಯಗಳಿಗೆ ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿಯ ಪಾಠಾಂತರಗಳನ್ನು ಬಳಸಲಾಗಿದೆ. ಇವು ಕೆಲವೇ ಪದ್ಯಗಳಾಗಿರುವ ಕಾರಣ ಪಾಠಾಂತರ ಪ್ರಸಂಗದಲ್ಲಿ ಆ ಹಸ್ತಪ್ರತಿಯ ಸೂಚನೆಯನ್ನು ಮಾಡಿಲ್ಲವೆಂದು ಸಂಪಾದಕರು ಸೂಚಿಸಿದ್ದಾರೆ.

'ಕ' ಪ್ರತಿ: ಇದು ಪ್ರೊ. ಕುಂದಣಗಾರರವರು ಸ್ವಹಸ್ತದಿಂದ ನಕಲು ಮಾಡಿಕೊಂಡಿರುವ ಕಾಗದ ಪ್ರತಿ. ಮೊದಲಿನ ಮೂರು ಪುಟ ಕೆಂಪು ಮಸಿಯಿಂದ, ಮಿಕ್ಕ ಪುಟಗಳನ್ನು ಕಪ್ಪು ಮಸಿಯಿಂದ ಬರೆಯಲಾಗಿದೆ. ಒಂದೇ ಮಗ್ಗುಲಿಗೆ ಬರೆದ ೮೬ ಪುಟಗಳ ಈ ಪ್ರತಿಯ ಆಕಾರ ೧೧``X೯`` ಇಲ್ಲಿ ತೆಳ್ಳನೆಯ ಹಾಳೆಗಳಲ್ಲಿ ಷಟ್ಪದಿಗಳನ್ನು ೪ ಸಾಲುಗಳಲ್ಲಿ ಬರೆಯಲಾಗಿದೆ. ಈ ಪ್ರತಿಗೆ ಮೂಲವಾದ ಹಸ್ತಪ್ರತಿ ಕೊಲ್ಲಾಪುರಜಿಲ್ಲೆಯ ಉದಗಾವ ಗ್ರಾಮದ ಪಂಡಿತ ಅಪ್ಪಾಶಾಸ್ತ್ರಿಗಳಿಗೆ ಸಂಬಂಧಿಸಿದ್ದು. ಅವರ ಮರಣದ ತರುವಾಯ ಅದು ಬಾಹುಬಲಿ ಕ್ಷೇತ್ರದ ಹಸ್ತಪ್ರತಿ ಭಾಂಡಾರ ಸೇರಿದೆಯೆಂದು ಮೊದಲ ಹಾಳೆಯ ಮಾರ್ಜಿನಿನಲ್ಲಿ ಪ್ರೊ. ಕುಂದಣಗಾರರು ಇಂಗ್ಲೀಷ್‌ನಲ್ಲಿ ಸೂಚಿಸಿರುವರು (ಇಲ್ಲಿ ಅವರ ಇಂಗ್ಲಿಷ್ ಸಹಿ ಮತ್ತು ೧-೮-೧೯೬೧ ದಿನಾಂಕಗಳ ನಮೂದು ಇದೆ). 'ನಿಂಬಸಾಮಂತ ಚರಿತ್ರ'ವು ಎಂದು ಇದನ್ನು ಕರೆಯಲಾಗಿದೆ.

'ಮ' ಪ್ರತಿ: ಇದು ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದ ಪ್ರತಿ, ಇದು ೧೩``X೮`` ಆಕರದ ಕಾಗದ ಪ್ರತಿ. ಒಟ್ಟು ಪುಟಗಳು ೧೫೩. "ಕೊಲ್ಲಾಪುರದ ಸಾಮಂತರಾಜ ಚರಿತೆ" ಎಂದು ಇದನ್ನು ಕರೆಯಲಾಗಿದೆ.

ಈ ಎರಡೂ ಪ್ರತಿಗಳ ಸಹಾಯದಿಂದ ಪ್ರಸ್ತುತ ಕೃತಿಯನ್ನು ಸಂಪಾದಿಸಲಾಗಿದೆ. ಗ್ರಂಥದ ಕೊನೆಯ ಅನುಬಂಧದಲ್ಲಿ ನಿಂಬಸಾಮಂತನಿಗೆ ಸಂಬಂಧಿಸಿದ ಏಳು ಶಾಸನಗಳ ಪಠ್ಯ ನೀಡಿರುವುದು ಮಹತ್ವದ ಸಂಗತಿಯಾಗಿದೆ.

***

ಒಟ್ಟಿನಲ್ಲಿ, ಪಾಚೀನ ಕಾವ್ಯ-ಪುರಾಣಗಳನ್ನು ಶೋಧಿಸಿ-ಸಂಪಾದಿಸಿ-ಪರಿಷ್ಕರಿಸುವುದು ಡಾ. ಕಲಬುರ್ಗಿಯವರ ಕಾರ್ಯ ವಿಶೇಷತೆ. ಅದರಲ್ಲೂ ಸ್ಥಳೀಯ ವೀರನ ಕಥೆ, ಗುಣಮೌಲ್ಯ, ಇತಿಹಾಸ, ಅರಸು ಮನೆತನಗಳ ಚರಿತೆಗಳನ್ನು ಹೇಳುವುದು ಅವರ ಸಂಶೋಧನೆಯ ಮಹತ್ವದ ಉದ್ದೇಶವಾಗಿದೆ.

***

"ಡಾ. ಎಂ.ಎಂ.ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ"ಯ ಅಡಿಯಲ್ಲಿ 'ಡಾ. ಎಂ.ಎಂ.ಕಲಬುರ್ಗಿಯವರ ಸಮಗ್ರ ಸಾಹಿತ್ಯ-ಸಂಪುಟ: ೨೭, ಕಾವ್ಯ ಸಾಹಿತ್ಯ-ಭಾಗ: ೯'ನ್ನು ಸಂಪಾದಿಸುವ ಅವಕಾಶ ದೊರೆತಿರುವುದು ನನ್ನ ಭಾಗ್ಯವಿಶೇಷವೆಂದು ಭಾವಿಸುತ್ತೇನೆ. ಈ ಸಂಪುಟವನ್ನು ಸಂಪಾದಿಸಲು ಅವಕಾಶ ನೀಡಿದ 'ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ'ಯ ಗೌರವ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ, ಅಧ್ಯಕ್ಷರಾದ ಶ್ರೀ ಜಿ.ಕೆ.ಪಾಟೀಲ, ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ, ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ, ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ, ಡಾ. ಹನುಮಂತ ಮೇಲಿನಮನಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಎಲ್ಲ ಸದಸ್ಯರನ್ನು ಪ್ರೀತಿಯಿಂದ ನೆನೆಯುತ್ತೇನೆ. ಈ ಸಂಪುಟದ ಅಕ್ಷರ ದೋಷಗಳನ್ನು ಸರಿಪಡಿಸುವಲ್ಲಿ ನೆರವಾದ ನನ್ನ ಸಂಶೋಧನ ವಿದ್ಯಾರ್ಥಿಮಿತ್ರರಾದ ಶ್ರೀ ರಾಮಚಂದ್ರ ಪಡೆಸೂರ, ಶ್ರೀ ಸಂಗಮೇಶ ಕಜ್ಜಿಡೋಣಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

❖❖

*

ಪರಿವಿಡಿ

ಶ್ರೀ ಬಾಲಲೀಲಾ ಮಹಾಂತಶಿವಯೋಗೀಶ್ವರ ಗ್ರಂಥಮಾಲೆ : ೯೦

ಕವಿ ಮಲ್ಲಿಕಾರ್ಜುನ ಕೃತ

ಮಹಾನಾಡಪ್ರಭು

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

ಸಂಪಾದಕರು


ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಬಿ. ಆರ್. ಹಿರೇಮಠ

ಶ್ರೀ ಬಾಲಲೀಲಾ ಮಹಾಂತಶಿವಯೋಗೀಶ್ವರ ಗ್ರಂಥಮಾಲೆ

ಶ್ರೀ ಮುರುಘಾಮಠ, ಧಾರವಾಡ

೧೯೭೭



ರೂಪನಾರಾಯಣ ಬಸದಿ(ಶೇಷಶಾಯಿ ವಿಷ್ಣುದೇವಾಲಯ)ಕೊಲ್ಲಾಪುರ



ಪಾರ್ಶ್ವನಾಥ ಬಸದಿ(ಮಾನಸ್ತಂಭ ಬಸದಿ) ಕೊಲ್ಲಾಪುರ

ಕೃತಜ್ಞತೆ

(ಪ್ರಥಮ ಆವೃತ್ತಿ)

ಸಾಹಿತ್ಯವೆಂದರೆ ಕೇವಲ ರಸದ ತರಂಗವೆಂಬುದರ ಜೊತೆ, ಬದುಕಿನ ಅಂತರಂಗವೆಂಬ ಭಾವನೆ ಇತ್ತೀಚೆ ಬೆಳಯುತ್ತಲಿದೆ. ಇದಕ್ಕೆ ಉದಾಹರಣೆಯೆನಿಸುವ, ರಾಜಕೀಯ ಮತ್ತು ಸಾಮಾಜಿಕ ಅಂಶಗಳನ್ನೊಳಗೊಂಡ ಕೃತಿಗಳು ಕನ್ನಡದಲ್ಲಿ ಹಲವು ಸಂಖ್ಯೆಯಲ್ಲಿ ಸಿಗುತ್ತವೆ. ಇವುಗಳ ಕಡೆಗೆ ನಾವು ತುಂಬ ಅಲಕ್ಷಿತರಾಗಿದ್ದೇವೆ. ಈ ತಪ್ಪನ್ನು ತಿದ್ದಿಕೊಳ್ಳುವ ರೀತಿಯಲ್ಲಿ ಪ್ರಕಟಿಸಬೇಕಾದ ಕೃತಿಗಳಲ್ಲಿ "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ"ವೂ ಒಂದು.

ದೂರದಲ್ಲಿರುವ ಬಿಜ್ಜಾವರದ ಅರಸುಮನೆತನಕ್ಕೆ ಸಂಬಂಧಪಟ್ಟ, ಇನ್ನೂ ದೂರದ ಬೆಂಗಳೂರಿನಲ್ಲಿದ್ದ ಈ ಕೃತಿಹಸ್ತಯಪ್ರತಿಯನ್ನು ಧಾರವಾಡದವರಾದ ನಾವು ಪ್ರಕಟಿಸುತ್ತಲಿರುವ ಯೋಗಾಯೋಗವು "ಎತ್ತಣಿಂದೆತ್ತ ಸಂಬಂಧ"ಎಂಬ ಆಶ್ಚರ್ಯವನ್ನುಂಟುಮಾಡುತ್ತಲಿದೆ. ಹೀಗಾಗಿ, ನಾವು ಈ ಕೃತಿಯನ್ನು ಪ್ರಕಟಿಸೆದೆವು ಎನ್ನುವುದಕ್ಕಿಂತ "ಬೈಚಿಟ್ಟ ಬಯಕೆ ಕರೆದುದುಂಟು" ಎಂಬಂತೆ ಈ ಕೃತಿಯೇ ನಮ್ಮನ್ನು ಕೈಮಾಡಿ ಕರೆದು, ಪ್ರಕಟವಾಗಬೇಕೆಂಬ ತನ್ನ ಅಭೀಪ್ಸೆಯನ್ನು ಪೂರೈಸಿಕೊಂಡಿದೆ–ಎಂದು ಮಾತ್ರ ಹೇಳಬಯಸುತ್ತೇವೆ.

'ಕರ್ನಾಟಕ ಭಾರತಿ' ಪತ್ರಿಕೆಯಲ್ಲಿ ಪ್ರಕಟವಾದ ಲಿಂಗೈಕ್ಯ ಬಿ. ಶಿವಮೂರ್ತಿಶಾಸ್ತ್ರಿ ಅವರ 'ಬಿಜ್ಜಾವರ–ಸಿದ್ಧಾಪುರ' ಹೆಸರಿನ ಲೇಖನದಲ್ಲಿದ್ದ ಈ ಕೃತಿಯ ಉಲ್ಲೇಖ ನಮ್ಮ ಗಮನವನ್ನು ಸೆಳೆಯಿತು. ಧಾರವಾಡದಲ್ಲಿ ಭೆಟ್ಟಿಯಾದ ಶ್ರೀ ಶಾಸ್ತ್ರಿಗಳೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸುವುದೇ ತಡ, ತಮ್ಮಲ್ಲಿ ಇದರ ಕಾಗದ ಪ್ರತಿ(ಕ)ಇರುವುದಾಗಿ ಹೇಳಿ, ಒಂದು ವಾರದಲ್ಲಿ ಅದನ್ನು ಬೆಂಗಳೂರಿನಿಂದ ಕಳಿಸಿಯೇ ಬಿಟ್ಟರು. ಕೈಸೇರಿದ ಈ ಹಸ್ತಪ್ರತಿಯನ್ನು ಓದುತ್ತಾ ಹೋದಂತೆ ಇತಿಹಾಸ, ಸಾಹಿತ್ಯ, ಧರ್ಮ ನಾ ಮುಂದು ತಾ ಮುಂದು ಎಂದು ನಮ್ಮನ್ನು ಆಕರ್ಷಿಸುತ್ತ ನಡೆದವು. ಪ್ರಕಟಿಸದ ಹೊರತು ಸಮಾಧಾನವಿಲ್ಲದಾಯಿತು. ಆದರೆ ಪಾಠಶುದ್ಧಿಗಾಗಿ ಇನ್ನೊಂದು ಹಸ್ತಪ್ರತಿಯ ನೆರವು ಅವಶ್ಯವೆನಿಸಿ, ಕರ್ನಾಟಕದ ಅನೇಕ ಜನ ವಿದ್ವಾಂಸರಿಗೆ ಪತ್ರ ಬರೆದರೂ ಇದರ ಬೇರೊಂದು ಪ್ರತಿ ಲಭಿಸಲಿಲ್ಲ. ಈ ಪ್ರಸಂಗದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಶ್ರೀ ಎಸ್. ಶಿವಣ್ಣ ಅವರು ನನ್ನ ಪತ್ರವನ್ನು ನೋಡಿದ ಮರುಕ್ಷಣವೇ ಈ

ರಾಜವಂಶೀಯರಾದ ಶಂಭೋನಹಳ್ಳಿಯ ಶ್ರೀ ದೊಡ್ಡ ಕಣ್ಣಪ್ಪಾಜಿ ಅವರಿಂದ ಸ್ನೇಹಿತ ಶ್ರೀ ಶೇಷಶಾಸ್ತ್ರಿ ಅವರ ಮೂಲಕ ಪಡೆದಿದ್ದ ಒಂದು ತಾಳೆಪ್ರತಿಯನ್ನು ಕಳಿಸಿಕೊಟ್ಟರಲ್ಲದೆ, ಪ್ರಿನ್ಸಿಪಾಲ್ ಸಿ. ಮಹಾದೇವಪ್ಪ ಅವರಲ್ಲಿ ಈ ಕೃತಿಯ ಒಂದು ಅಪೂರ್ಣ ಹಸ್ತಪ್ರತಿಯಿದೆಯೆಂದೂ ತಿಳಿಸಿದರು. ನೂರು ಮುಖಗಳಿಂದ ಪ್ರಯತ್ನಿಸಿದರೂ ಆ ಅಪೂರ್ಣ ಹಸ್ತಪ್ರತಿ ನಮ್ಮ ಕೈಸೇರಲಿಲ್ಲ. ಆ ಮಾತು ಬೇರೆ.

ಹೀಗೆ ಎರಡು ಹಸ್ತಪ್ರತಿಗಳು ಸಿಕ್ಕರೂ, ಅವುಗಳಲ್ಲಿ ಕೆಲವು ಗಮನಾರ್ಹ ಪಾಠ ವ್ಯತ್ಯಾಸಗಳಿದ್ದರೂ ತಾಳೆಪ್ರತಿಯ ನೇರವಾದ ನಕಲು ಕಾಗದಪ್ರತಿಯೆಂದು ಸ್ಪಷ್ಟವಾಯಿತು. ಇದ್ದ ಈ "ಎರಡಲ್ಲದ ಒಂದು" ಕೃತಿಯೂ ನಾಶವಾದರೆ ಅಪಾರನಷ್ಟವೆಂಬ ಭಾವನೆಯಿಂದ ಪರಿಷ್ಕರಣಕಾರ್ಯವನ್ನು ಕೈಗೆತ್ತಿಕೊಂಡೆವು. ಅವಶ್ಯವಿರುವಷ್ಟು ಹಸ್ತಪ್ರತಿಗಳಿಲ್ಲದ ಕಾರಣ, ನಾವು ಬಹಳಷ್ಟು ಸಲ ಊಹೆಗೆ ಶರಣು ಹೋಗಿ, ಅವುಗಳನ್ನು ಚೌಕಕಂಸಿನಲ್ಲಿ ತೋರಿಸಬೇಕಾಯಿತು. ಈ ಆವೃತ್ತಿಯಲ್ಲಿ ಇಂಥ ಸುಮಾರು ೭೦೦ ಊಹೆಗಳನ್ನು ನಾವು ಮಾಡಿದ್ದೇವೆ. ಇಷ್ಟಾಗಿಯೂ ಸುಮಾರು ೨೦೦ ಸಂದೇಹಗಳು ಉಳಿದಿದ್ದು, ಅವುಗಳನ್ನು ವರ್ತುಲಕಂಸಾಂತರ್ಗತ ಪ್ರಶ್ನೆಚಿಹ್ನೆಯೊಂದಿಗೆ ಸೂಚಿಸಿದ್ದೇವೆ. ಹೀಗಿದ್ದೂ ಕೆಲವು ಸಂದೇಹಗಳು ಉಳಿದಿರುವ ಸಾಧ್ಯತೆಯಿದೆ. ವಿದ್ವಾಂಸರು ಸೂಚಿಸಿದಲ್ಲಿ ಅವಶ್ಯ ತಿದ್ದುಪಡಿ ಮಾಡಿಕೊಳ್ಳುತ್ತೇವೆ.

ಇಂಥ ಕೃತಿಯನ್ನು ಪ್ರಕಟಿಸಲು ಯೋಗ್ಯ ಪ್ರಕಾಶನಸಂಸ್ಥೆಯ ನೆರವು ಅನಿವಾರ್ಯವಾಗಿದ್ದಿತು. ಧಾರವಾಡದ ಶ್ರೀ ಮುರುಘಾಮಠದ 'ಬಾಲಲೀಲಾ ಮಹಾಂತಶಿವಯೋಗೀಶ್ವರರ ಗ್ರಂಥಮಾಲೆ' ನಮ್ಮ ನಾಡಿನ ಸುಪ್ರಸಿದ್ಧ ಪ್ರಕಟನ ಸಂಸ್ಥೆ. ಅಗ್ರಮಾನ್ಯ ವಿದ್ವಾಂಸರಿಂದ ನೂರಾರು ಕೃತಿಗಳನ್ನು ಬೆಳಕಿಗೆ ತಂದ ಶ್ರೇಯಸ್ಸು ಅದಕ್ಕಿದೆ. ಪ್ರಸ್ತುತ ಪುಸ್ತಕವನ್ನು ಈ ಮಾಲೆಯಲ್ಲಿ ಪ್ರಕಟಿಸಲು ಬಯಸಿದಾಗ ತಕ್ಷಣ 'ಅಸ್ತು' ಹೇಳಿ ಆಶೀರ್ವದಿಸಿದವರು, ಶ್ರೀಮಠದ ಅಧಿಪತಿಗಳಾದ ಪೂಜ್ಯ ಮಹಾಂತ ಅಪ್ಪಗಳು. ಅವರ ಸಾಹಿತ್ಯ-ಸಮಾಜ ವಾತ್ಸಲ್ಯಕ್ಕೆ ಶರಣುಶರಣಾರ್ಥಿಗಳು.

ಈ ಕೃತಿ, ಶ್ರೀಮಠದಿಂದ ಪ್ರಕಟವಾಗುವಲ್ಲಿ ರಾಯಭಾರಿಗಳಂತೆ ಕಾರ್ಯನಿರ್ವಹಿದವರು, ಮಾನ್ಯರಾದ ಪಂಡಿತ ಶ್ರೀ ನಾಗಭೂಷಣಶಾಸ್ತ್ರಿಗಳು. ಯುವಕರ ಬಗ್ಗೆ ಅದರಲ್ಲಿಯೂ ನಮ್ಮ ಬಗ್ಗೆ ಅವರು ಇಟ್ಟುಕೊಂಡ ಅನನ್ಯ ಅಭಿಮಾನಕ್ಕೆ ಕೃತಜ್ಞತೆಗಳು. ಕೈಯಲ್ಲಿ ಒಂದೂ ಹಸ್ತಪ್ರತಿಯಿಲ್ಲದೆ ಅಸಹಾಯಕ ಸ್ಥಿತಿಯಲ್ಲಿ ತೊಳಲುತ್ತಿರುವಾಗ ಪ್ರತಿಯನ್ನು ಒದಗಿಸಿ, ಆಗಾಗ ಪತ್ರ ಬರೆದು, ಕಾರ್ಯಪ್ರಗತಿಯನ್ನು ಕೇಳಿ ಹರ್ಷಿಸುತ್ತಲಿದ್ದ ಪೂಜ್ಯ ಲಿಂ. ಬಿ. ಶಿವಮೂರ್ತಿಶಾಸ್ತ್ರಿಗಳ ಔದಾರ್ಯಕ್ಕೆ ಅನಂತ ವಂದನೆಗಳು.

ಇಲ್ಲಿ ಅವಶ್ಯ ನೆನೆಯಬೇಕಾದ ಇನ್ನೊಬ್ಬ ಸ್ನೇಹಿತರೆಂದರೆ ತಾಳೆಪ್ರತಿ(ತ)ಯನ್ನು ಒದಗಿಸಿದ ಶ್ರೀ ಎಸ್. ಶಿವಣ್ಣ ಅವರು, ಯಾವುದೇ ಕಾವ್ಯಕ್ಕೆ ಎಷ್ಟು ಪ್ರತಿಗಳಿವೆ? ಯಾವ ಊರಿನಲ್ಲಿವೆ? ಯಾರ ವಶದಲ್ಲಿವೆ? ಈ ಎಲ್ಲ ಅಂಕಿ-ಸಂಖ್ಯೆ ಅವರ ತುದಿ ಬೆರಳ ಮೇಲೆ. ಈ ಅರ್ಥದಲ್ಲಿ ಅವರು ಹಸ್ತಪ್ರತಿಯ ಅಂಜನಸಿದ್ದರು. "ನಿಧಾನವ ಕಾಯ್ದಿರ್ದ ಬೆಂತರನಂತೆ" ತಾನೂ ಉಪಯೋಗಿಸದ, ಇನ್ನೊಬ್ಬರಿಗೂ ಉಪಯೋಗಿಸಲು ಅವಕಾಶ ಕೊಡದ "ಹಸ್ತಪ್ರತಿ ನಿಧಾನವ ಕಾಯ್ದಿರ್ದ ಬೆಂತರ" ವ್ಯಕ್ತಿಗಳ ಸಮೂಹಕ್ಕೆ ಅವರೊಬ್ಬರು ಅಪೂರ್ವ ಅಪವಾದ. ಹೀಗೆ "ತ್ಯಾಗಗುಣಕ್ಕೆ ತಾಯ್ವನೆ"ಯಾದ ಶ್ರೀ ಶಿವಣ್ಣನವರಿಗೆ ಋಣಿಯಾಗಿದ್ದೇವೆಯೆಂದು ಹೇಳಿದರೆ ಏನೂ ಹೇಳಿದಂತಲ್ಲ.

ಈ ಕೃತಿಗೆ ಸಂಬಂಧಪಟ್ಟ ಸಾಮಗ್ರಿಯನ್ನು ಸಂಗ್ರಹಿಸುವಲ್ಲಿ ನೆರವಾದವರು ಮದ್ದಗಿರಿ ಸರಕಾರಿ ಜೂನಿಯರ್ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಭೀಮಸೇನ ಕುಲಕರಣಿ ಮತ್ತು ಅವರ ಸಹೋದ್ಯೋಗಿಗಳು, ಮಹಾನಾಡಪ್ರಭುಗಳ ವಂಶಸ್ಥರಾದ ಶುಭೋನಹಳ್ಳಿಯ ಶ್ರೀ ದೊಡ್ಡ ಕಣ್ಣಪ್ಪಾಜಿ ಅವರು. ಅಚ್ಚಿನ ಕಾರ್ಯದಲ್ಲಿ ಆಸಕ್ತಿಯಿಂದ ದುಡಿದವರು ಶ್ರೀ ಎಸ್.ವ್ಹಿ. ಅಯ್ಯನಗೌಡರ ಮತ್ತು ಕು. ಎಚ್.ಸಿ. ಗೋಗಿ ಅವರು. ಶ್ರಮವಹಿಸಿ ಮುದ್ರಿಸಿದವರು ಶ್ರೀ ಮಹಾಂತ ಮುದ್ರಣಾಲಯದ ಒಡೆಯರು, ಇವರೆಲ್ಲರಿಗೂ ವಂದನೆಗಳು.

ಸಂಪಾದಕರು

ದ್ವಿತೀಯ ಆವೃತ್ತಿ

'ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ'ದ ಪ್ರಥಮ ಆವೃತ್ತಿ(೧೯೭೭) ಪ್ರಕಟವಾಗಿ ೩೫ ವರ್ಷ ಗತಿಸಿದವು. ಈ ಅವಧಿಯಲ್ಲಿ ಈ ಕೃತಿಯನ್ನು ಕುರಿತು ತಿಪಟೂರು ಮೊದಲಾದ ನಗರಗಳಲ್ಲಿ ವಿಚಾರ ಸಂಕಿರಣಗಳು ಜರುಗಿದವು; ಎಂ. ಎ. ವಿದ್ಯಾರ್ಥಿಗಳು ಇದನ್ನು ಪಠ್ಯವೆಂದು ಓದಿದರು; ವಿದ್ವಾಂಸರು ಕೆಲವು ಲೇಖನಗಳನ್ನು ಬರೆದು ಪ್ರಕಟಿಸಿದರು. ಹೀಗಿದ್ದೂ ಈ ಶ್ರೇಷ್ಠ ಐತಿಹಾಸಿಕ ಕಾವ್ಯಕ್ಕೆ ಸೂಕ್ತ ಪ್ರಸಿದ್ಧಿ ಸಿಕ್ಕಿಲ್ಲವೆಂದೇ ಹೇಳಬೇಕು.

ಕೇವಲ ಮುದ್ರಣಪ್ರತಿಯ ನಕಲುಕಾರ್ಯ ಪೂರೈಸಿದ್ದರೂ ಯುವಕರು ಬೆಳಕಿಗೆ ಬರಲೆಂದು ನನ್ನ ವಿದ್ಯಾರ್ಥಿ ಮತ್ತು ಸಹಾಯಕ ಸಂಶೋಧಕ ಡಾ. ಬಿ.ಆರ್. ಹಿರೇಮಠ ಅವರ ಹೆಸರನ್ನು ಸಹಸಂಪಾದಕರೆಂದು ಜೋಡಿಸಿಕೊಂಡಿದ್ದೆನು. ಈಗ ನಮ್ಮ ಮಧ್ಯವಿರದಿದ್ದರೂ ಅವರ ಹೆಸರನ್ನು ಈ ಆವೃತ್ತಿಯಲ್ಲಿಯೂ ಉಳಿಸಿಕೊಂಡಿದ್ದೇನೆ.

ಮೊದಲ ಆವೃತ್ತಿಯ ಪ್ರತಿಗಳು ಮುಗಿದು ಬಹಳ ದಿನ ಗತಿಸಿದ್ದವು. ಈಗ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿರುವ ಸಪ್ನ ಬುಕ್‌ಹೌಸ್ ಸಂಸ್ಥೆಯ ಒಡೆಯರೂ ಆತ್ಮೀಯರೂ ಆಗಿರುವ ಶ್ರೀ ನಿತಿನ್ ಷಾ ಅವರಿಗೂ, ಅಲ್ಲಿಯ ಕನ್ನಡ ವಿಭಾಗದ ವ್ಯವಸ್ಥಾಕರೂ ಪ್ರಿಯರೂ ಆಗಿರುವ ಶ್ರೀ ದೊಡ್ಡೇಗೌಡ ಅವರಿಗೂ, ಅಚ್ಚುಕಟ್ಟಾಗಿ ಬೆರಳಚ್ಚು ಪೂರೈಸಿದ ಡಾ. ಹನುಮಂತ ಮೇಲಿನಮನಿ ಅವರಿಗೂ ಧನ್ಯವಾದಗಳು.

ಕಲ್ಯಾಣ ನಗರ — ಎಂ.ಎಂ. ಕಲಬುರ್ಗಿ

ಧಾರವಾಡ — ೨೦೧೩

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

ಕರ್ನಾಟಕದ ಅರಸು ಮನೆತನಗಳ ಉದಯ-ವಿಕಾಸಗಳ ವಿಷಯದಲ್ಲಿ ಅನೇಕ ಧರ್ಮಗಳು ಮಹತ್ವದ ಪಾತ್ರವಹಿಸಿವೆ. ಇವುಗಳಲ್ಲಿ ವೀರಶೈವವೂ ಒಂದು. ಹೀಗಾಗಿ ಪರಮ ವೀರಶೈವನಾದ "ಮಹಾನಾಡ ಪ್ರಭು ಇಮ್ಮಡಿ ಚಿಕ್ಕಭೂಪಾಲ"ನ ಅಧ್ಯಯನಕ್ಕೆ ಹಿನ್ನೆಲೆಯಾಗಿ, ವೀರಶೈವ ಅರಸುಮನೆತನಗಳ ವಿವರಣೆ ಅವಶ್ಯವೆನಿಸುತ್ತದೆ.

೧. ವೀರಶೈವ ಅರಸುಮನೆತನಗಳು

ವೀರಶೈವಧರ್ಮ ತಲೆಯೆತ್ತಿನಿಂತುದು, ಕಲ್ಯಾಣ ಚಾಲುಕ್ಯ ಮತ್ತು ಕಲಚುರಿ ರಾಜ್ಯಗಳ ಅಸ್ತೋದಯ ಸಂಧಿಕಾಲದಲ್ಲಿ. ಈ ಎರಡೂ ಮನೆತನಗಳಿಗೆ ಸಂಬಂಧಿಸಿದ ರಾಣಿ ಸುಗ್ಗಲೆ, ಅಧಿಕಾರಿ ಕೊಂಡುಗುಳಿ ಕೇಶಿರಾಜ, ಬಸವಣ್ಣ, ಚೆನ್ನಬಸವಣ್ಣ, ಸೊಡ್ಡಳ, ಬಾಚರಸ, ಜಗದೇವ, ರಾಯಸದ ಮಂಚಣ್ಣ, ತೆಲುಗು ಜೊಮ್ಮಣ್ಣರನ್ನು ಬಿಟ್ಟರೆ, ಸಿಮ್ಮಲಿಗೆಯ ಚಂದಿಮರಸ, ಚಾಳುಕ್ಯವಂಶದ ಬ್ರಹ್ಮಯ್ಯ, ಕಲ್ಲುಕುರಿಕೆಯ ಸಕಲೇಶಮಾದರಸ, ಪಟ್ಟದಕಲ್ಲಿನ ಅನಿಮಿಷರಾಜರಂಥ ಒಳನಾಡಿನ ಅರಸರೂ, ಮಾಂಡವ್ಯಪುರದ ಬೊಂತಾದೇವಿ, ಮೋಳಿಗೆಯ ಮಾರಯ್ಯರಂಥ ಹೊರನಾಡಿನ ಅರಸರೂ ವೀರಶೈವಧರ್ಮೀಯರೆಂದು ಅನೇಕ ಕನ್ನಡ ಕೃತಿಗಳು ತಿಳಿಸುತ್ತವೆ. ಇವರ ತರುವಾಯ ಕುರುಗೋಡದ ಸಿಂದ ಮತ್ತು ಗೋವೆಯ ಕದಂಬ ಅರಸರಲ್ಲಿ ಕೆಲವರು ವೀರಶೈವದ ಪರಮಭಕ್ತರಾಗಿ ಹೀಗೆ ಕಾಣಿಸಿಕೊಳ್ಳುತ್ತಾರೆ:

ಇಂದಿನ ಬಳ್ಳಾರಿ ಜಿಲ್ಲೆಯಲ್ಲಿ ಸಮಾವೇಶವಾಗುವ ಬಲ್ಲಕುಂದೆನಾಡನ್ನು ಕುರುಗೋಡ ರಾಜಧಾನಿಯಿಂದ ಆಳುತ್ತಲಿದ್ದ ಸಿಂದರು, ನಿಷ್ಠೆಯ ಶಿವೋಪಾಸಕರು. ಕುಮಾರ ಪದ್ಮರಸನ ಸಾನಂದಚರಿತೆಯು ಶಿವನ ಒಡ್ಡೋಲಗದಲ್ಲಿದ್ದ ಶರಣರನ್ನು ಉಲ್ಲೇಖಿಸುತ್ತ,

ಹಿರಿಯ ಮೂಱುಂಜಾವದೇವರು
ಬರಗುರಾಜ ನಿರಂತದೇವರು
ಪರಮನಿರುಗಡು ಮುಲದ ವಿರಳದ ಚಾಕಿರಾಜಯ್ಯ।
ಗಿಱುಗಟೆಯ ಶಿವದೇವನೆಮ್ಮಯ
ಕುಱುಗೋಡ ನೃಪ ರಾಚಮಲ್ಲಂ ಸಲ್ಲಲಿತನಲ್ಲಿ॥[೧]

---

೧. ಕುಮಾರ ಪದ್ಮರಸ: ಸಾನಂದಚರಿತೆ ೬-೮೬.

ಎಂದು ಕುರಗೋಡ ರಾಚಮಲ್ಲನನ್ನು ಸ್ಮರಿಸುತ್ತದೆ. ಈತನು "ಶಿವೈಕಚೂಡಾಮಣಿ, ಅರ್ಚಿತ ಶಿವಪಾದಂ, ಪಾರ್ವತೀಶಾಂಘ್ರಿ ನಿರ್ಭರಭಕ್ತಂ"[೨] ಎಂದು ಪ್ರಖ್ಯಾತನಾದ ಮೊದಲನೆಯ ರಾಚಮಲ್ಲನ ಮೊಮ್ಮಗನೆಂದು ವಿದ್ವಾಂಸರ ಅಭಿಪ್ರಾಯ. "ಬೇಗೆಯೊಳು ಲಿಂಗಮಂ ನುಂಗಿಯುಗುಳುತ್ತಲನುರಾಗಿಸಿದ ಕುರುಗೋಡ ರಾಚಮಲ್ಲಯ್ಯಂ"[೩] ಎಂದು ವೀರಶೈವಾಮೃತ ಮಹಾಪುರಾಣ ಈತನನ್ನು ಕೀರ್ತಿಸಿದೆ. ಒಂದು ಶಾಸನದಲ್ಲಿ ಇವನ ವಿಷಯ ಹೀಗೆ ಬರುತ್ತದೆ:

"ಪೊಡವಿಯ ಸಮಸ್ತಭಕ್ತರ
ನಡುವೆ ಮೃಡಂ ಮೆಚ್ಚಿ ನಿಚ್ಚ ವರಮಂ ಕುಡಲಿ।
ಮ್ಮಡಿ ರಾಚಮಲ್ಲದೇವಂ
ಪಡೆದಂ ನಿತ್ಯ ಪ್ರಸಾದ ರಾಜ್ಯಶ್ರೀಯಂ ॥

ಭಕ್ತರಂ ಪಿರಿದು ಮನ್ನಿಸಲೀಶ್ವರಂ ವರದನಾಗಲ್ ರಾಜ್ಯಮಂ ತಾಳ್ದಿ ವಿಸ್ತರಿಸುತ್ತೊಪ್ಪಿರೆ, ದೇವರೊಂದು ದಿವಸಂ ಪ್ರತ್ಯಕ್ಷದಿಂ ಬರ್ಪುದುಂ, ರಾಚಮಲ್ಲರಸಂ ಭೋಂಕನೆ ಕಂಡು ಪೊಡೆವಟ್ಟಾನಂದದಿಂ . . . . . ಶಿವಲಿಂಗಾರ್ಚನಂ ಮಾಡಿ, ಶರೀರಂ ಬೆರಸುತ್ತುಂಗಾಶ್ವ ಚಂಚಚ್ಚಮರರುಹ ಸಿತಛತ್ರಚಿಹ್ನಾನ್ವಿತ್ವಂ ಶಂಕರನೊಳ್ ಪೊರ್ದಿದಂ."[೪]

ಈ ವಿವರಣೆ, ರಾಜ್ಯವನ್ನಾಳುವ ರಾಚಮಲ್ಲನು ಭಕ್ತಿಸಾಮ್ರಾಜ್ಯವಾಳಿದುದನ್ನೂ ಸ್ಪಷ್ಟಪಡಿಸುತ್ತದೆ. ಈ ಮನೆತನದ ಮಿಕ್ಕ ಅರಸರ ವೀರಶೈವತ್ವದ ಬಗೆಗೆ ಅಭ್ಯಸಿಸುವುದು ಅವಶ್ಯವಿದೆ.

ಕುರಗೋಡ ಸಿಂದರಂತೆ ಗೋವೆಯ ಕದಂಬರೂ ಪರಮಶಿವೋಪಾಸಕರಾಗಿದ್ದರು. 'ಧರ್ಮಾವತಾರ' ಎಂದು ಶಾಸನಗಳಲ್ಲಿ ಕರೆಸಿಕೊಂಡ ಇಮ್ಮಡಿ ಚಟ್ಟಯ್ಯನು ಕೊನೆಗೆ ವಿರಕ್ತನಾದನೆಂದು ತಿಳಿದುಬರುತ್ತದೆ. ಈ ವಂಶದ ವಜ್ರದೇವನನ್ನು ಕುಮಾರ ಪದ್ಮರಸನ 'ಸಾನಂದಚರಿತೆ'ಯು

ಭೋಗ ಬಾಚಯ್ಯಂಗಳುಂ ಶಿವ
ಯೋಗಿ ಸಾಂತಯ್ಯಂಗಳುನ್ನತ
ಬಾಗುಳಿಯಲುರು ಕೇಶಿರಾಜರು ಜಕ್ಕೆಯರ ಬೊಮ್ಮಂ ।
ಭೋಗಿ ವರ ಸಿರಿಶೈಲ ಮಲ್ಲಂ
ಚಾಗಿ ಗೋವೆಯ ವಜ್ರರಾಯ ವಿ
ರಾಗಿ ಗಜೇಶನ ಮಸಣಂ ನಿಜಲಿಂಗಚಿಕ್ಕಯ್ಯಂ॥[೫]

---

೨. ಸಿದ್ಧರಾಮಚರಿತೆಯ ಸಂಗ್ರಹ: ಪೀಠಿಕೆ, ಪು.XIV.
೩. ವೀರಶೈವಾಮೃತ ಮಹಾಪುರಾಣಂ: ೮-೪-೩೫.
೪. ಸಿದ್ಧರಾಮಚರಿತೆಯ ಸಂಗ್ರಹ: ಪೀಠಿಕೆ, ಪು. XIV.
೫. ಕುಮಾರ ಪದ್ಮರಸ: ಸಾನಂದ ಚರಿತೆ ೯-೮೩.

ಹೀಗೆ ಶರಣರ ಸಾಲಿನಲ್ಲಿ ಮನ್ನಿಸಿದೆ. ಮುಮ್ಮಡಿ ಜಯಕೇಶಿಯ ಮಗನಾದ ಈತನು ೧೨೧೪ ರಿಂದ ೧೨೨೮ರ ವರೆಗೆ ಆಳಿದನು. ಈತನ ಧಾರ್ಮಿಕ ಚಲನವಲನಗಳ ಜೊತೆ ಈ ವಂಶದ ಮಿಕ್ಕ ಅರಸರ ಧಾರ್ಮಿಕ ಪ್ರವೃತ್ತಿಯನ್ನೂ ಶೋಧಿಸಬೇಕಾಗಿದೆ.

ಕಲ್ಯಾಣಚಾಲುಕ್ಯರ ತರುವಾಯ ಉತ್ತರ ಕರ್ನಾಟಕದಲ್ಲಿ ದೇವಗಿರಿ ಯಾದವರು, ದಕ್ಷಿಣಕರ್ನಾಟಕದಲ್ಲಿ ಹೊಯ್ಸಳ ಯಾದವರು ಚಕ್ರವರ್ತಿಗಳಾದರು. ಶಿವತತ್ವಚಿಂತಾಮಣಿಯು ದೇವಗಿರಿ ಯಾಧವ ರಾಮಚಂದ್ರನನ್ನು (೧೨೭೧-೧೩೧೧)

ತಾನೊಂದನುಂಡು ಜಂಗಮಕೊಂದನಿಕ್ಕದತಿ
ಮಾಸನಿಧಿ ರಣದೊಳಗೆ ಜೋಡ ತೊಟ್ಟಶ್ವಮಂ
ತಾನೇಱಿ ನೆಗಳಿ ಹೊಗಳಿಸಿಕೊಂಬ ಮನ್ನೆಯರ ಮಂಡಳೀಕರ ಗಂಡನು।
ನಾನಾ ಕಳಾರೂಪ ಸೋಮವಂಶದ ರಾಯ
ಭಾನುಪ್ರಕಾಶನುಂ ದೇವಗಿರಿಯಾಳ್ವನತಿ
ದಾನಿ ಮನ್ನೆಯ ರಾಮರಸ ಭಕ್ತಿಭಾವಕರ ಚರಣಾಂಬುಜಕ್ಕೆ ಶರಣು॥[೬]

ಎಂದು ಕೀರ್ತಿಸಿದೆ. ಈ ಮನೆತನದ ಅನೇಕ ಅಧಿಕಾರಿಗಳು ಶರಣರಿಗೆ, ಅದರಲ್ಲಿಯೂ ಸಿದ್ಧರಾಮನಿಗೆ ವಿಪುಲ ದತ್ತಿಗಳನ್ನು ನೀಡಿರುವರು. ಹೊಯ್ಸಳ ನರಸಿಂಹ ಬಲ್ಲಾಳನ ಮಂತ್ರಿ ಕೆರೆಯ ಪದ್ಮರಸ ಮತ್ತು ಕೆರೆಯ ಪದ್ಮರಸರ ಸೋದರಮಾವ ಗೌರಿಪದಣ್ಣಾಯಕರು ಪರಮವೀರಶೈವರು. ಸಾಸಲದ ಭೈರವರಾಜ ಇದೇ ಕಾಲಕ್ಕೆ ಆಗಿ ಹೋಗಿರಬಹುದಾದ ಇನ್ನೊಬ್ಬ ವೀರಶೈವ ಅರಸು.

ಇವುಗಳ ಮುಂದುವರಿಕೆಯಾಗಿ ಅಸ್ತಿತ್ವಕ್ಕೆ ಬಂದ ಅರಸುಮನೆತನವೆಂದರೆ ವಿಜಯನಗರ. ಈ ನಾಡಿನ ಹೊಸ ರಾಜಕೀಯ ಸಂಘಟನೆಗೆ ವೀರಶೈವದ ಆಸರೆ ಅನಿವಾರ್ಯವಾಗಿದ್ದಿತೆಂಬುದರ ನಿದರ್ಶನವೆಂಬಂತೆ ಈ ರಾಜವಂಶ ವೀರಶೈವದ ಆವರಣದಲ್ಲಿಯೇ ಹುಟ್ಟಿ ಬೆಳೆಯಿತು. ಪ್ರೌಢದೇವರಾಯನಂಥಚಕ್ರವರ್ತಿ, ಲಕ್ಕಣ - ಜಕ್ಕಣರಂತಹ ಮಂತ್ರಿಗಳು ಅಪ್ಪಟ ವೀರಶೈವರಾಗಿದ್ದುದನ್ನು ಇಲ್ಲಿ ಸ್ಮರಿಸಬಹುದು.

ವಿಜಯನಗರದ ಗರ್ಭದಿಂದ ಕವಲೊಡೆದ ಮೈಸೂರು ಮತ್ತು ಕೆಳದಿ ಅರಸುಮನೆತನಗಳಲ್ಲಿ ಮೈಸೂರು ವೀರಶೈವದ ಕೃಪೆಯನ್ನು ಕಡೆಗಣಿಸದೆ ಬೆಳೆದರೆ, ಕೆಳದಿ ನೇರವಾಗಿ ವೀರಶೈವಮನೆತನವೇ ಆಗಿದೆ.

ಈ ವರೆಗೆ ವಿವೇಚಿಸಿದುದು ನಮ್ಮ ಸಾಮ್ರಾಜ್ಯ ಪರಂಪರೆಯ ಮುಖ್ಯವಾಹಿನಿ. ಇದರಷ್ಟೇ ಮುಖ್ಯವಾದುವು ಉಪವಾಹಿನಿಗಳು. ವೀರಶೈವರದು ಮುಖ್ಯವಾಹಿನಿಗಿಂತ ಉಪವಾಹಿನಿರೂಪದಲ್ಲಿ ಕರ್ನಾಟಕದ ರಾಜಕೀಯ ಕ್ಷೇತ್ರಕ್ಕೆ ಸಂದ ಕಾಣಿಕೆ ಅಪೂರ್ವವಾದುದು. ಕರ್ನಾಟಕದ ದೊಡ್ಡ ಜನಾಂಗವನ್ನು ಪ್ರತಿನಿಧಿಸುವ ಇವರು, ಅಲ್ಲಲ್ಲಿ ರಾಜಕೀಯ ಕರ್ಣಧಾರತ್ವವನ್ನು ವಹಿಸಿ, ಒಟ್ಟು

---

೬. ಲಕ್ಕಣ ದಂಡೇಶ: ಶಿವತತ್ವ ಚಿಂತಾಮಣಿ ೩೮-೧೩೮.

ರಾಜಕೀಯ ಮಹಾಸೌಧಕ್ಕೆ ಕಂಬ-ಗೋಡೆಗಳಾಗಿ ನಿಲ್ಲಬೇಕಾಯಿತು. ವಿಜಯನಗರ ಸಾಮ್ರಾಟರು ಹೆಸರಿಗೆ ಮಾತ್ರ ರಾಜ್ಯದ ಪರಮಾಧಿಕಾರಿಗಳಾಗಿದ್ದರೂ ಪಾಳೆಗಾರರ 'ಸಾಮೂಹಿಕ ಆಡಳಿತ'ದಿಂದಲೇ ಅವರ ರಾಜ್ಯಭಾರ ಮುನ್ನಡೆಯುತ್ತಿದ್ದಿತು. ಇವುಗಳಲ್ಲಿ ಕೆಲವು ಮೂಲತಃ 'ವೀರಶೈವ' ಮನೆತನಗಳಾಗಿದ್ದರೆ (ಕೆಳದಿ, ಕೊಡಗು, ಹಾಗಲವಾಡಿ, ಪುಂಗನೂರು, ಕಿತ್ತೂರು, ಬೆಳವಡಿ ಇತ್ಯಾದಿ), ಇನ್ನು ಕೆಲವು ಮೂಲತಃ ಬೇಡ, ಜೈನ ಇತ್ಯಾದಿ ಮನೆತನಗಳಾಗಿದ್ದು ಆಮೇಲೆ ವೀರಶೈವವಾಗಿ ಪರಿಣಮಿಸಿದವು (ಬೀಳಗಿ, ಸ್ವಾದಿ, ವಂಟಮುರಿ). ಇವುಗಳನ್ನು ಬಿಟ್ಟರೆ ಕೆಲವು ಮನೆತನಗಳಲ್ಲಿ ಒಬ್ಬಿಬ್ಬರು ಅರಸರು ಮಾತ್ರ ವೀರಶೈವ ಮಾತಾನುಯಾಯಿಗಳಾಗಿದ್ದಾರೆ (ಯಲಹಂಕಪ್ರಭು ಕೆಂಪವೀರಪ್ಪ).

ಹೈದರಲಿ, ಮರಾಠಾ ಮತ್ತು ಇಂಗ್ಲೀಷರ ಕಾಲದಲ್ಲಿ ಮೂಲೆಗುಂಪಾದ ಈ ಪಾಳೆಯಗಳ ಪರಿವೀಕ್ಷಣೆ ನಡೆಸಿದಲ್ಲಿ, ವೀರಶೈವ ಮನೆತನಗಳ ಸಂಖ್ಯೆ ಬಹುದೊಡ್ಡ ಪ್ರಮಾಣದಲ್ಲಿ ಹೊರಬರುವ ಸಾಧ್ಯತೆಯಿದೆ. ಚೆನ್ನಬಸವಪುರಾಣದಲ್ಲಿ ಬರುವ

ಪರಮಜಂಗಮಕಿನ್ನು ದಾಸೋಹಮಂ ಮಾಳ್ಪ
ದೊರೆಗಳಂ ಪೇಳ್ವೆನಾ ನಂಜರಾಯಂ ಮುಂದೆ
ನಿರುತದಿಂ ಕೆಂಜಸೋಮಣ್ಣ ನಾಯಕ ಯೆಳಂದೂರರಸು ಚೆನ್ನೊಡೆಯರು।
ಬರಗಿರಿಯ ದೇವನಾಯಕನು ಬುಕ್ಕಣ್ಣೊಡೆಯ
ನಿರದಲ್ಲಿ ಸಿದ್ಧಮಲಿನಾಯಕಂ ಮತ್ತೆ ಶಿವ
ಶರಣನಾ ಸಂಕಣ್ಣ ನಾಯಕಂ ಜಂಬೂರ ದಾನಿವಾಸದ ದೊರೆಗಳು॥

ಕೇತಿಸಾಗರದ ಚಿಕ್ಕಣಸೆಟ್ಟಿಗಳು ವಿ
ಖ್ಯಾತಿ ಬಿಜ್ಜಾವರದ ಪ್ರಭುವೆ ಚಿಕ್ಕಣಗೌಡ
ಸಾತಿಶಯದಿಂದ ಸುಕಟೂರ ತಮ್ಮನಗೌಡನೆಸೆವ ತಗಡೂರ ಪ್ರಭುವು।
ಪ್ರೀತಿಯಿಂ ತಳಕಾಡ ಚಂದ್ರಶೇಖರನುರುವ
ದಾತನಾ ಭೋಗವಾಡಿಯ ಲಿಂಗರಾಯನತಿ
ಭೂತಹಿತನುಡುವಂಕನಾಡಪ್ರಭು ಮೊದಲಾಗಿ ದಾಸೋಹಮಂ ಮಾಳ್ಪರು॥[೨]

ಎಂಬ ಪದ್ಯಗಳು ವೀರಶೈವ ಪ್ರಭುವರ್ಗವನ್ನು ವಿವರಿಸುತ್ತವೆ. ಇಂಥ ಪ್ರಭುವರ್ಗದಲ್ಲಿ ಎದ್ದುಕಾಣುವ ಮನೆತನ ಬಿಜ್ಜಾವರದ ಮಹಾನಾಡಪ್ರಭುಗಳದು.

೨. ಮಹಾನಾಡ ಪ್ರಭುಗಳು

(ಕಂಚಿ) ಪಲ್ಲವ, ನೊಳಂಬ (ಪಲ್ಲವ), ಮಹಾನಾಡಪ್ರಭು - ಹೀಗೆ ಮೂರು ಹೆಸರುಗಳಲ್ಲಿ ಸಾಗಿಬಂದ ಈ ರಾಜಪರಂಪರೆಯ ಇತಿಹಾಸ, ಕ್ರಿಸ್ತಶಕ ೩ನೆಯ ಶತಮಾನದಷ್ಟು ಪ್ರಾಚೀನವಾಗಿದೆ. ಕರ್ನಾಟಕದ ಆಗ್ನೇಯ ಭಾಗದಲ್ಲಿ ಇವರೆಲ್ಲ ರಾಜ್ಯಭಾರ ನಡೆಸಿದರು.

---

೨. ವಿರುಪಾಕ್ಷ ಪಂಡಿತ: ಚೆನ್ನಬಸವ ಪುರಾಣ: ೬೩-೫೫, ೫೬.

ಕಂಚಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಶಾತವಾಹನರ ತರುವಾಯ ಕರ್ನಾಟಕದ ಕೆಲವು ಭಾಗಗಳನ್ನು ಆಳಿದವರು ಪಲ್ಲವರು. ಶಿವಭಕ್ತರಾದ ಇವರ ಲಾಂಛನ ನಂದಿ, ಧ್ವಜ ಖಟ್ವಾಂಗ. ಕ್ರಿ.ಶ. ಸು. ೯೦೦ಕ್ಕೆ ಪಲ್ಲವ ಅಪರಾಜಿತನನ್ನು ಚೋಳ ಆದಿತ್ಯನು ಸೋಲಿಸುವಲ್ಲಿ ಈ ಮನೆತನ ಕೊನೆಗೊಂಡಿತು.

ಈ ಕಂಚಿಪಲ್ಲವರ ಮೂಲಕ್ಕೆ ಸೇರಿದವರು ನೊಳಂಬಪಲ್ಲವರು. ಈಗ ದಕ್ಷಿಣ ಕರ್ನಾಟಕದ ತುಮಕೂರು ಮೊದಲಾದ ಜಿಲ್ಲೆಗಳಲ್ಲಿರುವ 'ನೊಣಬ' ಎಂಬ ವೀರಶೈವ ಜನಾಂಗ ಇವರ ಪರಂಪರೆಯದಾಗಿದೆ. ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರಿಗೆ ಅಧೀನರಾಗಿ ಈ ನೊಳಂಬ ಪಲ್ಲವರು ಕ್ರಿಸ್ತಶಕ ಶತಮಾನ ೮ರಿಂದ ೧೧ರ ವರೆಗೆ ಆಳಿದರು. ಇವರ ರಾಜಧಾನಿ ಹೆಂಜೇರು (ಹೇಮಾವತಿ), ಕೊನೆಕೊನೆಗೆ ಕಂಪಲಿ. ಇವರು ನೊಳಂಬವಾಡಿ-೩೨೦೦೦ ಪ್ರದೇಶವನ್ನು ಆಳುತ್ತಿದ್ದರು. ತ್ರೈಲೋಕ್ಯಮಲ್ಲನ್ನಿನೊಳಂಬನೊಂದಿಗೆ ಈ ಮನೆತನ ಕ್ರಿ.ಶ. ಸು. ೧೦೫೪ ರಲ್ಲಿ ಕೊನೆಗೊಂಡಿತು.

ಈ ತರುವಾಯದ ನೊಳಂಬ ಪಲ್ಲವ ರಾಜವಂಶ ೧೩ನೆಯ ಶತಮಾನದ ಬಳಿಕ 'ಮಹಾನಾಡಪ್ರಭು' ಹೆಸರಿನಿಂದ ಹೀಗೆ ಕಾಣಿಸಿಕೊಂಡಿದೆ: ನೊಳಂಬವಂಶದ ಮಾರೇಗೌಡ, ಕಾಳಣ್ಣಗೌಡ, ಚನ್ನಪ್ಪಗೌಡ, ಕಾಳಚಿಕ್ಕಪ್ಪಗೌಡ, ರಾಮಪ್ಪಗೌಡ, ಸಂಗಪ್ಪಗೌಡ, ಚಿಕ್ಕಪ್ಪಗೌಡ, ಈ ಏಳುಜನ ಸಹೋದರರು[೮] ಸೊನ್ನಲಾಪುರದಲ್ಲಿ ಗುರು ಸಿದ್ಧರಾಮ ಶಿವಯೋಗಿಯಿಂದ (ಸಿದ್ಧರಾಮಶಿವಯೋಗಿಯ ಕೃಪೆಯಿಂದ?) ನಾಗಮುರಿ ಆಯುಧವನ್ನು ಆಶೀರ್ವಾದ ಪಡೆದು ದಕ್ಷಿಣಕ್ಕೆ ಬಂದು, ವಿಜಯನಗರ ಅರಸರ ಪ್ರೀತಿಯನ್ನು ಸಂಪಾದಿಸಿ[೯] 'ಕೋರಾ' ಎಂಬ ಗ್ರಾಮವನ್ನು ಸ್ಥಾಪಿಸಿ ನೆಲೆನಿಂತರು. ಆಮೇಲೆ ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವ ಉದ್ದೇಶದಿಂದ ಕಾಳಣ್ಣಗೌಡನನ್ನು ಕೋರಾದಲ್ಲಿ ನಿಲ್ಲಿಸಿ, ಮಿಕ್ಕವರಾದ ಚೆನ್ನಪ್ಪಗೌಡರು ತೆರಿಯೂರಿನಲ್ಲಿ, ಸಂಗಪ್ಪಗೌಡರು ಚೇಳೂರಿನಲ್ಲಿ, ಕಾಳಚಿಕ್ಕಪ್ಪಗೌಡರು ಗುಬ್ಬಿ-ಹೊಸಹಳ್ಳಿಗಳಲ್ಲಿ, ರಾಮಪ್ಪಗೌಡರು ಎಣ್ಣೆಗೆರೆಯಲ್ಲಿ, ಚಿಕ್ಕಪ್ಪಗೌಡರು ಬಿದರೆದಲ್ಲಿ ನಿಂತರು. ಹಿರಿಯವರಾದ ಮಾರೇಗೌಡರು ಮುಂದುವರಿದು ಹೋಗಿ 'ಮುಮ್ಮಡಿಪಟ್ಟಣ' ಹೆಸರಿನ ನಗರವನ್ನು ಸ್ಥಾಪಿಸಿದರು. ಈ ಏಳೂ ಗ್ರಾಮಗಳ ಪ್ರದೇಶವೇ 'ಮಹಾನಾಡು.' ಇವುಗಳ ಒಡೆಯರೇ "ಮಹಾನಾಡಪ್ರಭುಗಳು."

ಕರಿತಿಮ್ಮ ಚಿಕ್ಕಭೂಪ:

ಹೊಸಪಟ್ಟಣ (ಗೌರಿಬಿದನೂರು) ಕೇಂದ್ರದಿಂದ ಮಾಂಡಲಿಕನಾಗಿ ರಾಜ್ಯಭಾರ ನಡೆಸುತ್ತಲಿದ್ದ ವಿಜಯನಗರ ಬುಕ್ಕರಾಯನ ಕೈಕೆಳಗೆ, ಈ 'ಮಹಾನಾಡಪ್ರಭುಗಳು' ಆಳುತ್ತಿದ್ದರು. ಬುಕ್ಕರಾಯನು, ಅಣ್ಣ ಹುಕ್ಕನ ತರುವಾಯ ವಿಜಯನಗರದ ಚಕ್ರವರ್ತಿಯಾದ ಸಮಯದಲ್ಲಿ ಹೊಸಪಟ್ಟಣಕ್ಕೆ ಬದಲು ಪೆನುಗೊಂಡೆ ಈ ಪ್ರದೇಶದ ರಾಜಧಾನಿಯಾಯಿತು.

ಮುಮ್ಮಡಿಪಟ್ಟಣದಲ್ಲಿ ನಿಂತು ಕ್ರಮವಾಗಿ ಮಾರೇಗೌಡ, ವೀರೇಗೌಡ, ದೊಡ್ಡಗೌಡರು ಮಹಾನಾಡನ್ನು ಆಳಿದರು. ವಿಜಾಪುರದ ಆದಿಲ್‌ಶಹನು ದೊಡ್ಡಗೌಡರನ್ನು ಯುದ್ಧದಲ್ಲಿ ಕೊಂದು ಮುಮ್ಮಡಿ ಪಟ್ಟಣವನ್ನು ಹಾಳುಮಾಡಿದನು. ಆಗ ಅಪ್ರಾಪ್ತವಯಸ್ಕನಾಗಿದ್ದ ದೊಡ್ಡಗೌಡರ ಮಗ ಹಿರೇಚಿಕ್ಕಪ್ಪಗೌಡರು ತುಂಗವಟಿ ಗೌಡರಲ್ಲಿ ಬೆಳೆದು ದೊಡ್ಡವರಾಗಿ, ಹಾಳಾದ ಮುಮ್ಮಡಿ ಪಟ್ಟಣವನ್ನು ಜೀರ್ಣೋದ್ಧಾರಗೊಳಿಸಿ, ರಾಜ್ಯಭಾರ ನಡೆಸಿದರು. ಕೆಲವು ಕಾಲದ ಮೇಲೆ ಈ ರಾಜಧಾನಿಯು

ಬಿಜ್ಜಾವರಕ್ಕೆ ಸ್ಥಳಾಂತರವಾಯಿತು. ಈ ಹಿರೇಚಿಕ್ಕಪ್ಪಗೌಡರ ಮಗ ಕರಿತಿಮ್ಮ ಚಿಕ್ಕಭೂಪ, ಈತನ ಪ್ರತಾಪಾತಿಶಯಗಳು,

ಮುತ್ತಯ್ಯ ಮುಮ್ಮಡಿ ಕರಿತಿಮ್ಮ ಚಿಕ್ಕಭೂ
ಪೋತ್ತಮರಾದಿಯಾದವರು
ಚಿತ್ತವ ಪಡೆದು ರಾಯರುಗಳ ಮನ್ನಣೆ
ವೆತ್ತರಿಬಿರುದ ತಾಳಿದರು॥[೧೦]

ಕರಿತಿಮ್ಮ ಚಿಕ್ಕೇಂದ್ರ ಸಾಹಸದೆಸಕದೊ
ಳಿರದೆಮ್ಮ ರಾಯರೊಲ್ಮೆಯನು
ಭರದಿಂದ ಪಡೆದು ಸಂತಸವೆತ್ತುದನೀ
ಧರೆ ಬಣ್ಣಿಸುತಿದೆ ಬಿಡದೆ ॥[೧೧]

ಹೀಗೆ "ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ"ದಲ್ಲಿ ವ್ಯಕ್ತವಾಗಿವೆ.

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಈ ಕರಿತಿಮ್ಮ ಚಿಕ್ಕಭೂಪನ ಬೇರೆ ವಿಷಯಗಳು ಹೀಗೆ ಬರುತ್ತವೆ.

ಆ ಪಟ್ಟಣಕಧಿಪತಿಯಾಗಿಹ ಚಿಕ್ಕ
ಭೂಪ ರೂಪಿನೊಳಿಕ್ಷುಚಾಪ
ಪಾಪವಿಲೋಪ ಪ್ರತಾಪನವಗೆ ತಾ
ನೋಪಳಾಗಿಹಳು ಸೋಮಾಂಬೆ॥

ರತಿಯಂತೆ ರೂಪಾನ್ವಿತೆ ಬಲ್ಲತನದೆ ಭಾ
ರತಿಯಂತೆ ಕ್ಷೀರವಾರಿಧಿಯ
ಸುತೆಯಂತೆ ಮಾಂಗಲ್ಯದಿಂದರುಂಧತಿಯಂತೆ
ಪತಿಭಕ್ತಿಯಿಂದಾ ಬನಿತೆ॥

ಶ್ರೀ ತೋಂಟದ ಸಿದ್ಧೇಶ ಪ್ರಸಾದದಿ[ಂ
ದಾ] ತರುಣಿಯ ಗರ್ಭದೊಳು
ಭೂತಳಪತಿಯಿರ್ಮಡಿ ಚಿಕ್ಕೇಂದ್ರ ವಿ
ಖ್ಯಾತನೊಗೆದನೆಸಕದೊಳು॥[೧೨]

---

೮. ಈ ಏಳುಜನರ ಹೆಸರುಗಳು ಒಂದೊಂದು ಮೂಲಗಳಲ್ಲಿ ಬೇರೆಬೇರೆಯಾಗಿವೆ.

೯. ವಿಜಯನಗರದ ಯಾವ ಅರಸನ ಕಾಲದಲ್ಲಿ ಅವರು ದಕ್ಷಿಣಕ್ಕೆ ಬಂದರೆಂಬ ವಿಷಯದ ಬಗ್ಗೆ ಸ್ಪಷ್ಟವಾಗಿ ತಿಳಿದುಬಂದಿಲ್ಲ.

೧೦.ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೧೨-೧೦೦.

೧೧.ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೧೨-೧೦೧.

೧೨.ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ : ೪-೨, ೩,೪.

ಈ ಪದ್ಯಗಳಿಂದ ಕರಿತಿಮ್ಮ ಚಿಕ್ಕಭೂಪಾಲನ ಸತಿ ಸೋಮಾಂಬೆಯೆಂದೂ, ಗುರು ತೋಂಟದ ಸಿದ್ಧಲಿಂಗ ಶಿವಯೋಗಿಯ ಆಶೀರ್ವಾದದಿಂದ ಹುಟ್ಟಿದ ಇವರ ಮಗ ಇಮ್ಮಡಿ ಚಿಕ್ಕಭೂಪಾಲನೆಂದೂ ವ್ಯಕ್ತವಾಗುತ್ತದೆ.

ಇಮ್ಮಡಿ ಚಿಕ್ಕಭೂಪಾಲ:

ಪ್ರಸ್ತುತ ಸಾಂಗತ್ಯದ ಕಥಾನಾಯಕನಾದ ಇಮ್ಮಡಿ ಚಿಕ್ಕಭೂಪಾಲನ ಆಳಿಕೆಯಲ್ಲಿ ಹುಟ್ಟಿರಬಹುದಾದ ಸಿದ್ಧಾಪುರದ ಒಂದು ಶಾಸನ (ಕ್ರಿ.ಶ. ೧೫೫೪) ಹೀಗಿದೆ:

೧. ಶ್ರೀಗಣಾಧಿಪತಯೆಂ ನಮಃ ಸುಭಮಸ್ತು
೨. ಶೋಭನಮಸ್ತು ನಿರ್ವಿಘ್ನಮಸ್ತು ಶ್ರೀ ವೀರಭದ್ರಾ [II*]
೩. ನಮಸ್ತುಂಗ ಸಿರಸ್ತುಂಬಿಚಂದ್ರಚಾಮರ ಚಾ-
೪. ರವೇ[I*] ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ
೫. ಶಂಭವೇ [II*] ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾ-
೬. ಹನ ಶಕವರುಷಂಗಳು ೧೫೦೫ ತದುಪರಿ-
೭. ನ ವಿಜಯಸಂವತ್ಸರದ ಕಾರ್ತಿಕ ಶುಧ ೧೫ಲು
೮. ಶ್ರೀಮದ್ರಾಜಾಧಿರಾಜರಾಜಪರಮೇಶ್ವರ ಶ್ರೀ ವೀರ-
೯. ಪ್ರತಾಪ ಶ್ರೀವೀರವೆಂಕಟಪತಿದೇವ ಮಹಾರಾಯರು
೧೦. ಪೃಥ್ವೀಸಾಂಬ್ರಾಜ್ಯಂಗೆಯಿಉತ್ತಿರಲು ಶ್ರೀಮಂನ್ಮ
೧೧. ಹನಾಡಪ್ರಭುಉ ಬಿಜಾವರದ ಚಿಕಪಗಉಡ-
೧೨. ರ ಮಗ ಯಿ ....ಡರು ಮಲುರೆನಾಡ ಬಿ-
೧೩. ....
೧೪. ....
೧೫. ....
೧೬. ....
೧೭. .... ಮ. ಯದಲು ನಿಂಮ .....
೧೮. ಲ ಕೋಟೇನು ಕಟಿಸಿ ಮಕೆ .... ನಿವ-
೧೯. ರನು ನಿಲಿಸಿ ವಿಘ್ನೇಶ್ವರ ವೀರಭದ್ರ ಭೈಯಿರುವ ಯಿ
೨೦. ವರು ಮುಂತಾದ ಪಂಚದೇವಸ್ತನವನು ನಿಲಿಸಿ ದೇವ
೨೧. ಸ್ತನಗಳನು ಕಟಿದನು ಯಿಂತೀ ಶುಭ ಸಸನಕ್ಕೆ
೨೨. ಮಂಗಳ ಮ II ಶ್ರೀ ಶ್ರೀ ಶ್ರೀ ಜಯಾನುII[೧೩]

೧೩. EC, XIIಮದ್ದಗಿರಿ ೨೧, ಸಿದ್ದಾಪುರ ಕ್ರಿ.ಶ. ೧೫೫೩.

ಇಲ್ಲಿ "ಚಿಕಪಗಉಡರ ಮಗ ಯಿ[ಮ್ಮಡಿ ಚಿಕ್ಕಪ್ಪಗೌ]ಡರು" ಎಂದು ತ್ರುಟಿತ ಭಾಗವನ್ನು ತುಂಬಿಕೊಳ್ಳಬೇಕೆಂದು ತೋರುತ್ತದೆ. ಇದರಿಂದ [ಕರಿತಿಮ್ಮ] ಚಿಕಪ್ಪಗೌಡರ ಮಗ ಇಮ್ಮಡಿ ಚಿಕ್ಕಭೂಪಾಲನ ಕಾಲ ಕ್ರಿ.ಶ. ೧೫೯೪ ಎಂದು ವ್ಯಕ್ತವಾಗುತ್ತದೆ. ಇವನ ಆಳಿಕೆಯಲ್ಲಿ ರಾಮಾಯಣಸಾರ ಮೊದಲಾದ ಸ್ತೋತ್ರಭಾಷ್ಯಗಳ ಗ್ರಂಥಗುಚ್ಛವನ್ನು ಲಿಪಿಸಿದ ರೌದ್ರಿ ಸಂವತ್ಸರವು ಕ್ರಿ.ಶ. ೧೫೬೧ಕ್ಕೆ ಸರಿಹೊಂದುತ್ತದೆ. ಇವನ ಆಸ್ಥಾನದಲ್ಲಿ ಅಮೃತೇಶ್ವರಭಾಷ್ಯ ಹುಟ್ಟಿದ ಮಿತಿಯು (ಶಿವಚಂದ್ರಬಾಣಹರಿಣೇನಾಥಾಂಕಕೇ ಭದ್ರಕೃದ್ವರ್ಷೇ=೧೧೫೧>೧೫೧೧+೭೮=) ಕ್ರಿ.ಶ. ೧೫೮೬ಕ್ಕೆ ಸರಿಹೊಂದುತ್ತದೆ. ಆದರೆ 'ಭದ್ರಕೃತ್'ವು "ಶುಭಕೃತ್" ಎಂದು ಗ್ರಹಿಸಿದರೆ ಇಸ್ವಿ ಕ್ರಿ.ಶ. ೧೬೦೩ ಆಗುತ್ತದೆ. ಕಾರಣ ಈ ಕೃತಿ ಕ್ರಿ.ಶ. ೧೫೮೬ ಇಲ್ಲವೆ ೧೬೦೩ರಲ್ಲಿ ಹುಟ್ಟಿರಬೇಕು. ಹೀಗಾಗಿ ಇವನ ಜೀವನದ ಗರಿಷ್ಠ ಮಿತಿಯು ಸಿದ್ಧಾಪುರ ಶಾಸನದ ಕಾಲ ಕ್ರಿ.ಶ. ೧೫೯೪ ಇಲ್ಲವೆ ಅಮೃತೇಶ್ವರಭಾಷ್ಯದ ಕ್ರಿ.ಶ.೧೬೦೩ ಎಂದು ಇಟ್ಟುಕೊಳ್ಳಬಹುದು.

ಈ ಇಮ್ಮಡಿ ಚಿಕ್ಕಭೂಪಾಲನ ಪಟ್ಟಮಹಿಷಿ ಚೆನ್ನಾಜಮ್ಮನೆಂದು

ಮೃಗಮದಗಂಧಿ ಮೃಗೇಕ್ಷಣೆ ಸಂಪೂರ್ಣ
ಮೃಗಧರ ಸನ್ನಿಭ ವದನೆ
ಮೃಗರಾಜಮಧ್ಯೆ ಚೆನ್ನಾಜಮ್ಮನಾ ನೃಪ
ತಿಗೆ ಪಟ್ಟಮಹಿಷಿಯೆನಿಪಳು॥[೧೪]

ಎಂಬ ಪದ್ಯದಿಂದ ತಿಳಿದುಬರುತ್ತದೆ. ಈ ಹೆಸರು ಕಾವ್ಯದಲ್ಲಿ ಅನೇಕ ಸಲ (೧೧-೮೪, ೧೬-೫೭, ೧೭-೧೪) ಬರುತ್ತಿದ್ದು, ಇವಳಲ್ಲದೆ ಲಿಂಗಮ್ಮನೆಂಬ (೧೨-೧೧೮, ೧೨೫; ೧೬-೫೮, ೧೭-೧೪) ಇನ್ನೊಬ್ಬಳೂ ಇವನ ರಾಣಿಯಾಗಿದ್ದಳು. ತಂದೆ ಕರಿತಿಮ್ಮ ಚಿಕ್ಕಭೂಪಾಲನ ಗುರುವಾದ ತೋಂಟದ ಸಿದ್ಧಲಿಂಗನಲ್ಲಿ ಈ ಇಮ್ಮಡಿ ಚಿಕ್ಕಭೂಪಾಲನಿಗೆ ಅನನ್ಯ ಭಕ್ತಿ. ಅವನು ಆ ಮಹಾಗುರುವಿನ ಆಶೀರ್ವದದಿಂದ ಹುಟ್ಟಿದವನೆಂಬ ಭಕ್ತಿಭಾವ ಕಾರಣವಾಗಿ ತೋಂಟದ ಸಿದ್ಧೇಶ್ವರನ ಉಲ್ಲೇಖ ಕಾವ್ಯದ ಪೀಠಿಕೆ (೧-೫೩), ಚಿಕ್ಕಭೂಪಾಲನ ಜನನ(೪-೪), ತೋಟದರಾಯನ ಗುರುಸಂದರ್ಶನ (೭-೧೨೪), ಸುಪ್ರಭಾತ (೧೦-೧೫), ಲಿಂಗಾರ್ಚನೆ (೧೦-೬೦), ಲಿಂಗೈಕ್ಯ (೧೭-೨) ಮೊದಲಾದ ಪ್ರಸಂಗಗಳಲ್ಲಿ ಬರುತ್ತದೆ.

ತೋಂಟದಾರ್ಯನ ಪರಮಭಕ್ತನಾಗಿದ್ದ ಇಮ್ಮಡಿ ಚಿಕ್ಕಭೂಪಾಲನು, ಪವಾಡದ ದೇವನೆಂಬವನ ಕರಕಮಲಸಂಜಾತನೆಂದು ಪ್ರಸ್ತುತ ಸಾಂಗತ್ಯದಲ್ಲಿ ಬರುವ

ದಾತನು ಪರಮಪ್ರಪೂತನು ನೀತಿಸ
ಮೇತನು ವೈರಿಪ್ರಪೂತ
ಖ್ಯಾತ ಪವಾಡದದೇವ ಹಸ್ತಾಂಬುಜ
ಜಾತನಾ ಮಾನವೇಶ್ವರನು॥[೧೫]

---

೧೪. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೪-೫೬.

೧೫. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೪-೮.

ಎಂಬ ಪದ್ಯದಿಂದ ಸ್ಪಷ್ಟವಾಗುತ್ತದೆ.[೧೬] ಇಲ್ಲಿ ಗಮನಿಸಬಹುದಾದ ಇನ್ನೊಂದು ಹೆಸರು ಗುರುಸಿದ್ಧ ಮಲ್ಲಿಕಾರ್ಜುನ. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದ ೧ನೆಯ ಸಂಧಿಯ ಪದ್ಯ ೫೭ ರಿಂದ ೬೩ರ ವರೆಗಿನ ಭಾಗವನ್ನು ಸೂಕ್ಷ್ಮವಾಗಿ ಓದಿದರೆ "ಆತನ (ಇಮ್ಮಡಿ ಚಿಕ್ಕಭೂಪಾಲನ) ಗುರುರಾಯನು" (೫೮) ". . . . . ಗುರುಸಿದ್ಧಮಲ್ಲಿಕಾರ್ಜುನನು" (೬೨) ಎಂಬ ಅರ್ಥ ಹೊರಟು, ಇವರಲ್ಲಿ ಗುರು-ಶಿಷ್ಯ ಸಂಬಂಧ ಸೂಚಿತವಾಗುತ್ತದೆ. ಈ ಗುರುಸಿದ್ಧಮಲ್ಲಿಕಾರ್ಜುನನ ಹೆಸರು ಕಾವ್ಯದಲ್ಲಿ (೧-೬೨; ೭-೪,೬; ೧೭-೨೪,೯೫) ಪದೇ ಪದೇ ಬರುತ್ತಿದ್ದು, ಈತನು ಪವಾಡದದೇವನ ಪೌತ್ರನೋ (ದಯಾ)ಪಾತ್ರನೋ (೧-೬೨)ಆಗಿರುವ ಸಂಭವವಿದೆ.ಈತನ ಆಜ್ಞೆಯ ಪ್ರಕಾರ ಕವಿಯು ಈ ಕಾವ್ಯ ಬರೆದಿದ್ದಾನೆ(೧-೬೩).

ಗುರು ತೋಂಟದಸಿದ್ಧಲಿಂಗನ ಹೆಸರಿನಲ್ಲಿ ಚಿಕ್ಕಭೂಪಾಲನು ಸಿದ್ಧಾಪುರ ಗ್ರಾಮವನ್ನು ಕಟ್ಟಿಸಿದ್ದು, ಮೇಲಿನ ಶಾಸನ ಈ ಸಂಗತಿಯನ್ನೇ ಹೇಳುತ್ತಿರಬಹುದು. ಇದಲ್ಲದೆ ಈತನು ಮದ್ದಗಿರಿ ಮತ್ತು ಚೆನ್ನರಾಯದುರ್ಗ ಹೆಸರಿನ ಇನ್ನೆರಡು ಗ್ರಾಮಗಳನ್ನೂ ಸ್ಥಾಪಿಸಿದನು.

ಗುರುಭಕ್ತನಾದ ಇಮ್ಮಡಿ ಚಿಕ್ಕಭೂಪಾಲನು ಸಾಹಿತ್ಯಭಕ್ತನಾಗಿದ್ದುದೂ ಒಂದು ವಿಶೇಷ. ಕವಿಗಳಿಗೆ ಆಶ್ರಯ ನೀಡಿದುದಲ್ಲದೆ ಹಸ್ತಪ್ರತಿಗಳ ಅಪೂರ್ವಸಂಗ್ರಹವನ್ನೂ ಹೊಂದಿದ್ದನೆಂದು ಹಸ್ತಪ್ರತಿಯೊಂದರ ಅಂತ್ಯದಲ್ಲಿ ಬರುವ "ರೌದ್ರಿ ಸಂವತ್ಸರದ ಶ್ರಾವಣ ಶುದ್ಧ ೧೦ಲ್ಲ ಶ್ರೀನ್ಮಹಾನಾಡಪ್ರಭು ಬಿಜ್ಜಾವರದ ಇಮ್ಮಡಿ ಚಿಕ್ಕಪ್ಪಗೌಡಯ್ಯನವರ ಶಾರದಾಭಂಡಾರಕ್ಕೆ ಅನುಭದ ಸೊಂಪದೇವರ ಮಕ್ಕಳು ಅನುಭವದ ವೀರಸೊಂಪದೇವರು ಬರೆದ ಸ್ತೋತ್ರಭಾಷ್ಯಗಳ ಪುಸ್ತಕಕ್ಕೆ ಶುಭಮಸ್ತು"[೧೭] ಎಂಬ ಪ್ರಶಸ್ತಿಯಿಂದ ತಿಳಿದುಬರುತ್ತದೆ.

ಇಮ್ಮಡಿ ಚಿಕ್ಕಭೂಪಾಲನು ಕೈಕೊಂಡ ಯುದ್ಧಗಳಲ್ಲಿ ಮಿಡಿಗೇಸಿಯ ನಾಗಿರೆಡ್ಡಿ, ವಿಜಯನಗರದ ವೆಂಕಟಪತಿರಾಯ, ಅಳಿಯ ಎಲ್ಲೇಂದ್ರ ಮತ್ತು ಹಾವಳಿಯ ಭೈರೇಗೌಡರೊಡನೆ ಜರುಗಿದುವು ಬಹುಮುಖ್ಯವಾದುವು.

ಮಿಡಿಗೇಸಿಪಟ್ಟಣದಿಂದ ಆಳುತ್ತಲಿದ್ದ ನಾಗಿರೆಡ್ಡಿಗೂ ಚಿಕ್ಕಪ್ಪಗೌಡರಿಗೂ ಒಮ್ಮೆ ಭೆಟ್ಟಿ ಸಂಭವಿಸಿ, ಹಸ್ತಲಾಘವದ ನಂತರ ಮೈತ್ರಿದ್ಯೋತಕವಾಗಿ ಇಬ್ಬರೂ ಸೇವಕರನ್ನು ವಿನಿಮಯಮಾಡಿಕೊಂಡರು. ಚಿಕ್ಕಪ್ಪಗೌಡನ ಸೇವಕರೊಂದಿಗೆ ತನ್ನ ಊರಿಗೆ ಹೋದ ನಾಗಿರೆಡ್ಡಿ "ನೊಣಬ ಕೈಮುಟ್ಟಿದ್ದಾನೆ, ತೊಳೆಯಲು ನೀರು ತಾ" ಎಂದು ಹೆಂಡತಿಗೆ ಹೇಳಿದ. ಇದನ್ನು ಸೇವಕರಿಂದ ಕೇಳಿ ತಿಳಿದುಕೊಂಡ ಇಮ್ಮಡಿ ಚಿಕ್ಕಭೂಪಾಲ ಮಿಡಿಗೇಸಿಪಟ್ಟಣವನ್ನು ಮುತ್ತಿ, ನಾಗಿರೆಡ್ಡಿಯನ್ನು ಸೆರೆಹಿಡಿದು ಸುಡುನೀರಿನಲ್ಲಿ ಅದ್ದಿ ಕೊಂದನು.[೧೮]

---

೧೬. ಈ ಅರಸನ ಆಸ್ಥಾನದಲ್ಲಿ ರಚಿತವಾದ 'ಅಮೃತೇಶ್ವರ ಭಾಷ್ಯ' ಕೃತಿಯ ಕೊನೆಯಲ್ಲಿ ಬರುವ "ಪ್ರೌಢದೇವಗುರೌಜ್ಜಗಜ್ಜನ ಘನಾನಂದಾಬ್ಧಿಚಂದ್ರೋಪಮಂ" ವಾಕ್ಯದಲ್ಲಿ ಈ ಪವಾಡದದೇವನ ಸೂಚನೆಯಿದ್ದಂತಿದೆ.

೧೭. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಾಂಡಾರ ತಾಳೆಗರಿ ನಂ. ಕೆ. ೧೧೧೭.

೧೮. ಕೆ. ನಾರಾಯಣಾಚಾರ್ಯ: ಮಧುಗಿರಿಚರಿತ್ರೆ (೧೯೪೫), ಪು.೨೨-೨೪.

ಪೆನುಗೊಂಡೆಯಿಂದ ಆಳುತ್ತಲಿದ್ದ ವಿಜಯನಗರದ ಅರಸು ವೆಂಕಟಪತಿರಾಯನ (೧೫೮೬-೧೬೧೪) ೭೭ ಜನ ಪಾಳೆಯಗಾರರಲ್ಲಿ ಒಬ್ಬನಾದ ಈ ಇಮ್ಮಡಿ ಚಿಕ್ಕಭೂಪಾಲನು ತನ್ನ ರಾಜ್ಯವನ್ನು ಕೋಟೆ, ಕೊತ್ತಳಗಳಿಂದ ಸುಭದ್ರಗೊಳಿಸುತ್ತಿರುವುದು, ವೆಂಕಟಪತಿರಾಯನಲ್ಲಿ ತಪ್ಪುಭಾವನೆಯನ್ನು ಮೂಡಿಸಿತು. ಅರಸನ ಆಜ್ಞೆಯ ಮೇರೆಗೆ ಏರಿಬಂದ (ಚೆನ್ನಪಟ್ಟಣದ) ಜಗದೇಕರಾಯನು ಸೋತು ಹಿಂದಿರುಗಲು, ಸ್ವತಃ ವೆಂಕಟಪತಿರಾಯನೇ ಅಸಂಖ್ಯ ಸೈನ್ಯಸಮೇತ ಬಂದು ಸಿದ್ಧಾಪುರದ ನೆರೆಯಲ್ಲಿ ಬೀಡುಬಿಟ್ಟನು. ತನ್ನ 'ಸ್ವಾಮಿಭಕ್ತಿ'ಯನ್ನು ಋಜುಗೊಳಿಸಲು ಯೋಚಿಸಿದ ಚಿಕ್ಕಪ್ಪಗೌಡ, ಅಂದು ರಾತ್ರಿ ಪರಿಮಿತ ಸೈನ್ಯದೊಂದಿಗೆ ಪಾಳೆಯವನ್ನು ಪ್ರವೇಶಿಸಿ, ಗಾಢನಿದ್ರೆಯಲ್ಲಿದ್ದ ಅರಸನನ್ನು ಮಂಚಸಹಿತ ಎತ್ತಿತಂದು ವೈಭವೋಪೇತ ಮಂಟಪದಲ್ಲಿ ಇಳುಹಿದ. ಮುಂಜಾನೆ ವೆಂಕಟಪತಿರಾಯ ಎಚ್ಚರುವಷ್ಟರಲ್ಲಿ ರಾಜೋಚಿತ ಕಾಣಿಕೆ ಸಮೇತ ಕೈಮುಗಿದು ನಿಂತ. ಈ ವೀರವಿನಯವನ್ನು ಮೆಚ್ಚಿದ ವೆಂಕಟಪತಿರಾಯ, ಸಮರಸಂದರ್ಭವನ್ನು ಸಮಾರಂಭಸಂದರ್ಭವನ್ನಾಗಿಸಿ, ಚಿಕ್ಕಪ್ಪಗೌಡನಿಗೆ "ರಾಜಾ" ಬಿರುದನ್ನು ದಯಪಾಲಿಸಿದ. ಈ ಸಾಂಗತ್ಯದಲ್ಲಿ ಬರುವ

ಶಂಕೆಯಿಲ್ಲದೆ ಜಗದೇಕರಾಯರ ಕೊಡೆ
ತಾಂ ಕೈಕೊಂಡು ಕಾಳಗವ
ವೆಂಕಟಪತಿರಾಯರ ಮೆಚ್ಚಿಸಿದ ನಿ
ಶ್ಶಂಕನಿರ್ಮಡಿ ಚಿಕ್ಕೇಂದ್ರ ॥[೧೯]

ಕಿರುವರೆಯದೊಳೆ ವೆಂಕಟಪತಿರಾಯರಿ
ಗರಿಕೆಯಾದಿರಿ ಶೌರ್ಯದಲಿ ॥[೨೦]

ಎಂಬ ಪದ್ಯಗಳು ಇದೇ ಪ್ರಸಂಗವನ್ನು ಸೂಚಿಸುತ್ತಿರಬಹುದು.

ಅಳಿಯ ಎಲ್ಲೇಂದ್ರನೆಂಬವನೊಂದಿಗೆ ಈತನು ಯುದ್ಧ ಕೈಕೊಂಡುದನ್ನು

ಅಳಿಯ ಎಲ್ಲೇಂದ್ರನ ದಳವನೆಲ್ಲವ ಕೊಳು
ಗುಳದೊಳಗೊಂದೆ ತೇಜಿಯೊಳು
ಹಳದಿಯ ಬಿರುದಾಂಕನಿರ್ಮಡಿಚಿಕ್ಕನು
ತುಳಿಸದನಿಳೆ ಮೆಚ್ಚುವಂತೆ॥[೨೧]

ಎಂಬ ಪದ್ಯ ಸೂಚಿಸುತ್ತಿದ್ದು, ಈ ಯುದ್ಧದ ವಿವರಗಳನ್ನು ಶೋಧಿಸಬೇಕಾಗಿದೆ.

ಇವುಗಳಿಗಿಂತ ಪ್ರಮುಖವಾದುದೆಂದರೆ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯಕ್ಕೆ ವಸ್ತುವಾಗಿರುವ ಹರವೆಕೋಟೆಯ ಕಾಳಗ. ಕಾರೆಯಹಳ್ಳಿಯ ಗೌಡ ಹಾವಳಿಯ ಭೈರವೇಂದ್ರನು ಅರಸು ವೆಂಕಟಪತಿರಾಯನು ರಾಜ್ಯದಲ್ಲಿಲ್ಲದ ಸಮಯವನ್ನು ಸಾಧಿಸಿ ಅವನ ರಾಜಧಾನಿಯಾದ

---

೧೯. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೪-೩೭.

೨೦. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೧೨-೧೦೨.

೨೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೪-೩೮.

ಪೆನುಗೊಂಡೆಯನ್ನು ಕೈವಶಮಾಡಿಕೊಂಡು ೧೮ ಲಕ್ಷ ವಿತ್ತವನ್ನು ಅಪಹರಿಸಿದನು. ಇದನ್ನು ಕೇಳಿ ಕೆಂಡವಾದ ಇಮ್ಮಡಿ ಚಿಕ್ಕಭೂಪಾಲನು

ರಾಯಸಿಂಹಾಸನಕೆರಡೆಣಿಪುದು ಹೆತ್ತ

ತಾಯ ತಬ್ಬಿದ ತೆರನಂತೆ ।[೨೨]

ಎಂದು ಗರ್ಜಿಸಿ ಯುದ್ಧವನ್ನು ಸಾರಿದನು. ಇವನ ಹಿರಿಯ ಕುಮಾರ ತೋಂಟದ ರಾಯನು ತಂದೆಯೊಂದಿಗೆ ಯುದ್ಧಕ್ಕೆ ನಡೆದ. ಜೊತೆಗೆ ಬಸವೇಂದ್ರ, ಶೇಖೆಂದ್ರ, ಅಳಿಯ ಸೋಮೇಂದ್ರ, ಬೋಳ ವೀರೇಂದ್ರ, ಅಳಿಯ ಲಕ್ಕಣ್ಣ, ಅಳಿಯ ಕಲ್ಲೇಂದ್ರ, ಅಳಿಯ ವೀರೇಂದ್ರ, ಅಳಿಯ ಮುದ್ದೇಂದ್ರ, ಅಳಿಯ ಲಿಂಗೇಂದ್ರ, ಮಿಡಿಗೇಸಿಯ ಚಿನ್ನಪ್ಪನಾಯಕ, ದಿವ್ಯಲಿಂಗ, ಕೊಡಗಿಹಳ್ಳಿಯ ಬಸವ, ದೊಡ್ಡೇರಿಯ ಕೆಂಪ, ಬುಕ್ಕಪಟ್ಟಣದ ಕೆಂಪಣಗೌಡ, ತೆರಯೂರ ನಂಜ, ಗರಣೆಯ ತೋಟಿ, ಮಣೂರ ಮಲ್ಲ, ಧಾಳಿವಾಟದ ಸಿದ್ಧ, ಮೋದೆದ ತಿಮ್ಮಣ್ಣ, ಬೇಲೆದ ಹೊನ್ನಗಿರಿಯ, ಮುದ್ದೇನಹಳ್ಳಿಯ ತಮ್ಮ, ತೋವಿನಕೆರೆಯ ತೋಟದಳವಾಯಿ ಮುಂತಾದವರೂ ಯುದ್ಧಕ್ಕೆ ನಡೆದರು. ಹಾವಳಿ ಭೈರವೇಂದ್ರನ ರಾಜ್ಯವನ್ನು ಹಾಳುಗೆಡವುತ್ತ ಹೊರಟು ಸುಪ್ರಸಿದ್ಧ ಹರವೆಯ ಕೋಟೆಯನ್ನು ಮುತ್ತಿ ಕೈವಶಮಾಡಿಕೊಂಡರು. ಈ ದಾಳಿಗೆ ಅಂಜಿ ಹತಾಶನಾದ ಭೈರವೇಂದ್ರನು

ಎರಬೊಮ್ಮನಹಳ್ಳಿ ಹರಿಯಸಮುದ್ರವೀ

ಹರುವೆಯಗ್ರಹಾರವನು

ಪಿರಿಯ ಪಿರಂಗೆರಡಾನೆ ಈರೈದು ಸಾ

ವಿರ ಹೊನ್ನ ನಿನಗೀವೆ . . . . .॥ [೨೩]

ಎಂದು ಹೇಳಿ ಒಪ್ಪಂದಕ್ಕೆ ಮಂತ್ರಿಯನ್ನು ಕಳುಹಿಸಿದನು. "ಪೆನುಗೊಂಡೆಯನ್ನು ಬಿಡಬೇಕು. ಮಿಡಿಗೇಸಿಯನ್ನು ಕೊಡಬೇಕು" ಎಂಬ ಇಮ್ಮಡಿ ಚಿಕ್ಕಭೂಪಾಲನ ಕರಾರಿನಿಂದಾಗಿ ಸಂಧಾನ ಸಾಧ್ಯವಾಗದೇ ಹೋಯಿತು. ಮರುದಿನ ಮತ್ತೆ ಕದನ ನಡೆಯುವಲ್ಲಿ ಚಿಕ್ಕಭೂಪಾಲನ ಕಡೆಯವರು ಭೈರವೇಂದ್ರನ ಮದ್ದಾನೆಯನ್ನು ಸೆರೆಹಿಡಿದರು. ಇದರಿಂದ ಅಪಮಾನಿತನಾದ ಭೈರವೇಂದ್ರನ ಸೇನಾಪತಿ ಬೈಚೇಂದ್ರನು, ಇಮ್ಮಡಿ ಶಕ್ತಿಯಿಂದ ಮರುದಾಳಿ ಮಾಡಿದ. ಇವನನ್ನು ಎದುರಿಸುತ್ತ ತೋಟಂದರಾಯ ವೀರಸ್ವರ್ಗವೇರಿದ; ಈತನ ಪತ್ನಿ ಚೆನ್ನಬಸವಮ್ಮ 'ಮಹಾಸತಿ'ಯಾದಳು. ಪ್ರಿಯಪುತ್ರನ ವಿಯೋಗವನ್ನು ಸಹಿಸದೆ ಇಮ್ಮಡಿ ಚಿಕ್ಕಭೂಪಾಲ ಅಸುನೀಗಿದ; ಆತನ ಮಡದಿಯರೂ 'ಮಹಾಸತಿ'ಯಾದರು.

ಇಮ್ಮಡಿ ಚಿಕ್ಕಭೂಪಾಲ ಮತ್ತು ತೋಂಟದರಾಯರು ಮಡಿದ ಅಂದರೆ ಹರವೆಯ ಕೋಟೆಕಾಳಗ ಸಂಭವಿಸಿದ ಕಾಲ ಖಚಿತವಾಗಿ ಎಲ್ಲಿಯೂ ನಮೂದವಾಗಿಲ್ಲ. ಸಿದ್ಧಾಪುರ ಶಾಸನದ ಕ್ರಿ.ಶ. ೧೫೫೪ ಇಲ್ಲವೆ ಅಮೃತೇಶ್ವರಭಾಷ್ಯ ರಚನೆಯ ಕ್ರಿ.ಶ. ೧೫೮೬ ಇಲ್ಲವೆ ಕ್ರಿ.ಶ. ೧೬೦೩ ಇಮ್ಮಡಿ ಚಿಕ್ಕಭೂಪಾಲನ ಗರಿಷ್ಠ ಮಿತಿಯೆಂದು ಹಿಂದೆ ಹೇಳಲಾಗಿದೆ. ಇವನ ತರುವಾಯ ಬಂದ ಸಪ್ಪೇಂದ್ರ

---

೨೨. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೧೨-೭೨.

೨೩. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೧೪-೧೮.

(ಮುಮ್ಮಡಿ ಚಿಕ್ಕಭೂಪಾಲ)ನ ಹೆಸರಿನಲ್ಲಿ ಕ್ರಿ.ಶ. ೧೬೦೬ರ ಶಾಸನವೊಂದು ಸಿಗುವುದರಿಂದ ಈ ಕಾಳಗ ಕ್ರಿ.ಶ. ೧೫೯೪/೧೬೦೩ ಮತ್ತು ೧೬೦೬ರ ಮಧ್ಯ ಘಟಿಸಿರಬೇಕು.[೨೪]

ತೋಂಟದರಾಯ:

ಮಹಾನಾಡಪ್ರಭುವಂಶದ ಉತ್ತರಾಧಿಕಾರಿಯಾಗಿ, ಸಿಂಹಾಸನವೇರದೆ ವೀರಸ್ವರ್ಗವೇರಿದ ಬಾಲವೀರ, ಯುವರಾಜ ತೋಂಟದರಾಯ. 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ'ದಲ್ಲಿ ಈತನು 'ಗುರುಸಿದ್ಧಮಲ್ಲೇಶ'ನೆಂಬ ಗುರುವಿನ ದರ್ಶನಕ್ಕೆ ಹೋಗುವುದೂ "ಗುರುಸಿದ್ಧಮಲ್ಲಿಕಾರ್ಜುನದೇವ ನಿನ್ನ ಶ್ರೀ ಚರಣದೊಳಿಂಬುಗೊಡು" ಎಂದು ಬಿನ್ನವಿಸಿಕೊಳ್ಳುವುದೂ ಇವರ ಗುರು-ಶಿಷ್ಯ ಸಂಬಂಧವನ್ನು ಸೂಚಿಸುತ್ತವೆ.

ವಿರಕ್ತತೋಂಟದಾರ್ಯನ ಮನೋವಿಜಯತಾತ್ಪರ್ಯಚಂದ್ರಿಕೆ ಮತ್ತು ಸಿದ್ಧೇಶ್ವರ ಪುರಾಣಗಳಲ್ಲಿ ಬರುವ

"ವೈರಿನೃಪಮದವದ್ವಿರದಮೃಗಾಧಿಪನಸಹಾಯಶೂರ ಚರಲಿಂಗಪಾದಸೇವನಾತತ್ಪರ ಬಿಜ್ಜವರಪುರವರಾಧಿಪ ತೋಂಟದ ಸಿದ್ಧಲಿಂಗಭೂಪಾಲಕನಿಂ ಪರಿಪೂಜಿತನಾದ ನಂದಿಯಪುರದ ಸಿಂಹಾಸನಾಧೀಶ್ವರ ಪರ್ವತೇಶ್ವರಕರಕಮಲಸಂಜಾತ ನಿರಂಜನಲಿಂಗಪದಧ್ಯಾನಾಸಕ್ತಚಿತ್ತನಾದ ತೋಂಟದ ಸಿದ್ಧಲಿಂಗನೆಂ"[೨೫]

". . . . . ನಂದಿಯಪುರದ ಸಿಂಹಾಸನಾಧಿಪನಹ
ಗುರುಚೆನ್ನನಂಜೇಶನಮಲಕರಕಮಲದೊ
ಳ್ಪರಿರಂಜಿಸುತ್ತೊಗೆದ ಪರ್ವತೇಂದ್ರನ ಹಸ್ತ
ಸರಸಿಜೋದ್ಭವ ತೋಂಟದಾರ್ಯ . . . ."[೨೬]

ಈ ಹೇಳಿಕೆಗಳನ್ನವಲಂಬಿಸಿ ತೋಂಟದ ಭೂಪಾಲನು ಚೆನ್ನನಂಜೇಶನ ಶಿಷ್ಯನಾಗಿದ್ದ ಪರ್ವತೇಶ್ವರನ ಶಿಷ್ಯನಾದ (ವಿರಕ್ತ) ತೋಂಟದ ಸಿದ್ಧಲಿಂಗನ ಭಕ್ತನೆಂದು ವಿದ್ವಾಂಸರು ಹೇಳುತ್ತಾರೆ,[೨೭] ಆದರೆ ಈ ಪದ್ಯದಿಂದ ಹೊರಡುವ ಅರ್ಥಸಾಧ್ಯತೆ ಮತ್ತು ಕಾಲ ಸಾಮಿಪ್ಯದೃಷ್ಟಿಗಳಿಂದ ತೋಂಟದ ಭೂಪಾಲನು ಪರ್ವತೇಶನ ಶಿಷ್ಯನೆಂದು ಹೇಳುವುದು ಸೂಕ್ತವೆನಿಸುತ್ತದೆ.[೨೮]

---

೨೪. Another (inscription) on the overchanging rock of cave at the foot of Maddagiri near Gurammanamath . . . . . tells us that Hiriyamma, consort of the Mahanadaprabhu Mummadi-Chikkappagouda of Bijjavar caused to be erected as Sivadharmma, a viraktamath in the year Prabhave . . . . . . The year Prabhava may stand for 1606 A.D. (MAR 1918 P.56).

೨೫. ವಿರಕ್ತತೋಂಟದಾರ್ಯ: ಮನೋವಿಜಯತಾತ್ಪರ್ಯಚಂದ್ರಿಕೆಯ ಅಂತ್ಯ.

೨೬. ವಿರಕ್ತತೋಂಟದಾರ್ಯ: ಸಿದ್ಧೇಶ್ವರಪುರಾಣ: ೧-೨೫.

೨೭. ವಿ. ಶಿವಾನಂದ: ವಿರಕ್ತತೋಂಟದಾರ್ಯನ ಕರ್ನಾಟಕ ಶಬ್ದಮಂಜರಿ, ಪೀಠಿಕೆ, ಪು.೨೫.

೨೮. ಈ ತೋಂಟದರಾಯನ ಮಗ ಇಮ್ಮಡಿ ತೋಂಟದರಾಯನು 'ವಜ್ರಬಾಹುಚರಿತೆ' ಅಥವಾ 'ತೋಂಟದಯ್ಯನ ಕಾವ್ಯ' ಎಂಬ ಗ್ರಂಥ ಬರೆದಿರುವನೆಂದು ಲಿಂ. ಬಿ. ಶಿವಮೂರ್ತಿ ಶಾಸ್ತ್ರಿಗಳು ಹೇಳುವುದು (ಕ.ಭಾ.:೮-೨, ಪು.೬೦) ನಾಮಸ್ಸಾಮದ ಭ್ರಾಂತಿಯೆಂದು ತೋರುತ್ತದೆ.

ಮಡಿದ ತೋಂಟದರಾಯನಿಗೆ ದ್ವಾರಪಾಲಕರು ಕೈಲಾಸಪುರದ ಬಾಗಿಲಲ್ಲಿ ತಡೆದು ನಿಲ್ಲಿಸಲು ಗುರು ಬೋಳಬಸವೇಶ್ವರನು ತಕ್ಷಣ ಲಿಂಗೈಕ್ಯನಾಗಿ ಹೋಗಿ, ಶಿಷ್ಯನಿಗೆ ಕೈಲಾಸಪ್ರವೇಶವನ್ನು ದಯಪಾಲಿಸಿದನೆಂಬ ಘಟನೆಯನ್ನು ನಿರೂಪಿಸುವ ಗುರುರಾಜ ಚಾರಿತ್ರವು, ಬೋಳಬಸವೇಶ ಮತ್ತು ತೋಂಟದರಾಯರು ಗುರು-ಶಿಷ್ಯರೆಂದು ಸಾಧಿಸುತ್ತದೆ.[೨೯] ಈ ಅಂಶವನ್ನು ಪೋಷಿಸುವ ರೀತಿಯಲ್ಲಿ ನಿರಂಜನವಂಶರತ್ನಾಕರವು ಬೋಳಬಸವೇಶ್ವರನು ಬಿಜ್ಜಾವರದಲ್ಲಿ ಐಕ್ಯನಾದನೆಂದು ಹೇಳುತ್ತದೆ. ಈ ಬೋಳಬಸವೇಶನ ಗದ್ದುಗೆ ಮತ್ತು ಮಠಗಳು ಈಗಲೂ ಬಿಜ್ಜಾವರದ ವಿಸ್ತೀರ್ಣವೆನಿಸಿರುವ ಸಿದ್ಧಾಪುರದಲ್ಲಿವೆ. ಈತನ ಮಠವನ್ನು ಬಾಳಯ್ಯಸ್ವಾಮಿಮಠ ಇಲ್ಲವೆ ಬೋಳಾರಾಧ್ಯಮಠವೆಂದು ಜನರು ಕರೆಯುತ್ತಾರೆ.[೩೦]

ಮುಮ್ಮಡಿ ಚಿಕ್ಕಭೂಪಾಲ:

ತಂದೆ ಇಮ್ಮಡಿ ಚಿಕ್ಕಭೂಪಾಲ, ಮಗ ತೋಂಟದರಾಯರು ಯುದ್ಧದಲ್ಲಿ ಮಡಿದ ಕಾರಣ, ಗುರು ಬೋಳಬಸವೇಶ್ವರರು ಇನ್ನೊಬ್ಬ ಮಗ ಸಪ್ಪೇಂದ್ರನಿಗೆ ರಾಜ್ಯ ಪಟ್ಟವನ್ನು ಕಟ್ಟಿ ಆಶೀರ್ವದಿಸುತ್ತಾರೆ. ಮುಮ್ಮಡಿ ಚಿಕ್ಕಭೂಪಾಲನೆಂದು ಖ್ಯಾತಿವೆತ್ತ ಈತನು ರಾಜಧಾನಿಯನ್ನು ಬಿಜ್ಜಾವರದಿಂದ ಮದ್ದಗಿರಿಗೆ ವರ್ಗಾಯಿಸಿದ. ಅಲ್ಲಿ ಶ್ರೀಶೈಲ ಮತ್ತು ಕಕುದ್ಗಿರಿಗಳಿಗೆ ಸಮಾನವಾದ ಮಲ್ಲೇಶಮಂದಿರವನ್ನು ಕಟ್ಟಿಸಿ (೧೭-೮೯) ಸುಪ್ರಸಿದ್ಧ ದೊರೆಯಾಗಿ ಮೆರೆದ. ಸ್ವತಃ ಕವಿಯೂ ಕವಿಜನಾಶ್ರಯನೂ ಆಗಿದ್ದ ಈತನು ಸಂಸ್ಕೃತದಲ್ಲಿ "ಅಭಿನವ ಭರತಸಾರಸಂಗ್ರಹ" ಎಂಬ ಗ್ರಂಥವನ್ನು ರಚಿಸಿರುತ್ತಾನೆ.[೩೧] ಈ ಮುಮ್ಮಡಿ

---

೨೯. ಗುರುರಾಜಚಾರಿತ್ರ: ೧೬-೨, ೩, ೪, ತೋಂಟದಾರ್ಯರ ಶಿಷ್ಯನಲ್ಲದ ಬೇರೊಬ್ಬ ಬೋಳಬಸವೇಶ್ವರನೆಂದು ಹೇಳುವ ಪ್ರಿ. ಸಿ. ಮಹಾದೇವಪ್ಪ ಅವರ ಅಭಿಪ್ರಾಯ (ಭಾವಚಿಂತಾರತ್ನ ೧೯೬೩. ಪೀಠಿಕೆ ಪು.XX)ದಲ್ಲಿ ಹುರುಳು ಕಾಣುವುದಿಲ್ಲ.

೩೦. ಕರ್ನಾಟಕಭಾರತಿ: ೮-೨ ಬಿಜ್ಜಾವರ ಮತ್ತು ಸಿದ್ಧಾಪುರ: ಬಿ. ಶಿವಮೂರ್ತಿ ಶಾಸ್ತ್ರಿ.

೩೧. ಅಭಿನವ ಭರತಸಾರಸಂಗ್ರಹ: ಸಂ. ಆರ್. ಸತ್ಯನಾರಾಯಣ. ಶ್ರೀ ವರಲಕ್ಷ್ಮಿ ಅಕಾಡೆಮಿ ಪಬ್ಲಿಕೇಶನ್, ಸೀರೀಜ ನಂ.೪-೧೯೬೦. ಈ ಗ್ರಂಥದಲ್ಲಿ ಇಮ್ಮಡಿ ಚಿಕ್ಕಭೂಪಾಲನ ವಿಷಯ ಹೀಗೆ ಬರುತ್ತದೆ:

i. ಏತತ್ಕರಣಧಾತ್ವಾದಿಶುಷ್ಕವಾದ್ಯ ಭೇದಾಂತಾನಾಂ ಲಕ್ಷಣಪ್ರಪಂಚೋ ವಿಸ್ತರಭೀರುಣಾ ಮುಮ್ಮಡಿ ಚಿಕ್ಕಭೂಪಾಲೇನ ಸಂಗಿತರತ್ನಾಕರೇ ದ್ರಷ್ಟವ್ಯ ಇತಿ ನಾತ್ರಲಿಖಿತಃ (ಪುಟ:೨೬)

ii. ಆಸ್ಮಿನ್ ಮದ್ದಗಿರೀಂದ್ರೇಣ ಚಿಕ್ಕಭೂಪೇನ ನೋಚ್ಯತೇ (ಪುಟ:೪೨)

iii. ದೀರ್ಘಾಯುಃ ಪುತ್ರಪೌತ್ರ ಪ್ರಕರವಿಗದತಾರಾಜ್ಯಭಾವ್ಯಾರ್ಥಯುಕ್ತಃ।
ಶ್ರೀಮದ್ವಿಜ್ಞಾನರೇಂದ್ರೋ ಮಧುಗಿರಿನಿಲಯೇ ಮುಮ್ಮಡಿ ಚಿಕ್ಕಭೂಪಃ
ವೃಷಾಚಲಾಧೀಶಪದಾರವಿಂದೇ ಸಮರ್ಪಿತೇಸ್ಮಿನ್ ಭರತಪ್ರಬಂಧೇ।
ವಿನೂತ್ನ ಸಾರೇ ಘನಸಂಗ್ರಹೇ ಚ ವಾದ್ಯಾಧಿಕಾರಂ ವ್ಯತನೋತ್ಸಮರ್ಮಾ॥ (ಪುಟ:೧೧೮)

iv. ಅಥಾಸ್ಮಿನ್ ಗೀತಾಧ್ಯಾಯೇ ಗೀತಸ್ಯ ಪ್ರಾಧಾನ್ಯಾದಾದೌ ರತ್ನಾಕರೋಕ್ತಸಂಗೀತ ಲಕ್ಷಣೋಕ್ತಿದ್ವಾರಾ ಗೀತಮಹಾತ್ಮ್ಯಂ ವಕ್ತುಕಾಮೇನ ಮುಮ್ಮಡಿಚಿಕ್ಕಭೂಪಾಲೇನ ಪ್ರಥಮಂ ತಾವತ್ಸಂಗೀತಲಕ್ಷಣಮುಚ್ಯತೇ॥ (ಪುಟ:೧೧೯)

v. ಇತ್ತೇತದುದ್ದೇಶಾನುಸಾರೇಣಾಸ್ಯ ಗ್ರಂಥಸ್ಯ ಸಂಗ್ರಹತ್ವಾದ್ವಿಸ್ತರಭೀರುಣಾ ಮದ್ದಗಿರಿ ಶಾಸನಾಂಕೇನ ಮುಮ್ಮಡಿ ಚಿಕ್ಕಭೂಪಾಲೇನ ಯಥೋಚಿತಂ ನಾದಾದೀನಾಂ ಲಕ್ಷ್ಯಲಕ್ಷಣಾನಿವಕ್ತುಕಾಮೇನ ಸತಾ ಪ್ರಥಮಂ ತಾವದ್ರತ್ನಾಕರೋಕ್ತಂ ನಾದಸ್ವರೂಪಂ ನಿರೂಪ್ಯತೇ॥ (ಪುಟ:೧೨೧)

vi. ಏತೇಷಾಂ ಲಕ್ಷ್ಮಾನಿ ಸಂಗೀತರತ್ನಾಕರೇ ದ್ರಷ್ಟವ್ಯಾನಿ। ಗ್ರಂಥವಿಸ್ತಾರ ಭೀತೇನ ಮುಮ್ಮಡಿಚಿಕ್ಕಭೂಪಾಲೇನ ನಾತ್ರ ಲಿಖಿತಾನಿ॥ (ಪುಟ:೧೬೭)

vii. ಏತತ್ಪ್ರಕಾರೇಣ ಅನ್ಯೇಷಾಂ ರಾಗಾಣಾಂ ಲಕ್ಷ್ಮಾಣಿ ಸಂಗೀತರತ್ನಾಕರೇ ದ್ರಷ್ಟವ್ಯಾನೀತಿ ಗ್ರಂಥವಿಸ್ತರಭೀರುಣಾ ಮುಮ್ಮಡಿ ಚಿಕ್ಕಭೂಪಾಲೇನ ನಾತ್ರ ಲಿಖಿತಾನಿ (ಪುಟ:೨೦೬)→

ಚಿಕ್ಕಭೂಪಾಲನ ಹೆಸರಿನಲ್ಲಿ ಮದ್ದಗಿರಿ ಮತ್ತು ಬ್ರಹ್ಮಸಮುದ್ರ ಶಾಸನಗಳು ಹುಟ್ಟಿದ್ದು, ಮದ್ದಗಿರಿ ಶಾಸನವನ್ನು ಕುರಿತು "An inscription near Bhimana-Done on the South slope of Maddagiridurga states that Hanuman-Done was cause created by Mummadi Chikkappa Gauda in the year Vijaya probably represents 1646 A.D" ಎಂದು ವಿದ್ವಾಂಸರು ಹೇಳುವುದರಿಂದ ಕ್ರಿ.ಶ. ೧೬೪೬ರಲ್ಲಿ ಈತನು ಹನುಮನಡೋಣೆಯನ್ನು ಕಟ್ಟಿಸಿದನೆಂದೂ, ಈಗ ಅದನ್ನು ಭೀಮನಡೋಣೆಯೆಂದು ಕರೆಯುವರೆಂದೂ ತಿಳಿದುಬರುತ್ತದೆ. ಬ್ರಹ್ಮಸಮುದ್ರದಲ್ಲಿ ಸಿಗುವ ಶಾಸನವೊಂದು ಹೀಗಿದೆ:

೧. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನಶಕವರುಶಂಗಳು
೨. ೧೪೪೪ನೆಯ . . . . . ದಲು ಸಲುವ ವಿಳಂಬಿ ಸಂ. ಪುಷ್ಯ ಶು. ೧೦ ಲು ಶ್ರೀಮನ್ಮ -
೩. ಹಾರಾಜಾಧಿರಾಜ ಪರಮೇಶ್ವರ ವೀರಪ್ರತಾಪ ಶ್ರೀವೀರ ಶ್ರೀರಾಮಕೃಷ್ಣ-
೪. ದೇವ ಮಹಾರಾಯರ್ರೈಯನವರು ಪೆನುಗೊಂಡೆಯಲು ರತ್ನಸಿಂಹಾಸ-
೫. ನಾರೂಢರಾಗಿ ಪ್ರಥ್ವೀಸಾಂಬ್ರಾಜ್ಯಂಗೆಉತ್ತಿರಲು ಶ್ರೀಮನು ಮಹಾನಾಡ-
೬. ಪ್ರಭು ಬಿಡ್ಯವರದ ಮುಂಮಡಿ ಚಿಕ್ಕಪ್ಪಗೌಡರ್ರೈಯನವರು ನಂಮ ಆಳಿ-
೭. . . . . . . ಕೆರೆಯಪಗೌಡ ನಂಮ ಹೆಂಣ್ಣುಮಗಳ ಕ . . . ೦ಮ-
೮. ಗೆ ಕೊಟ ಗ್ರಾಮ ಉಂಬಳಿಯ ಕ್ರಮವೆಂತೆಂದರೆ ಕೋರಯ ಮಾಗಣೆಗೆ ಸಲುವ

→viii. ಅಥ ಕ್ರಮಪ್ರಾಪ್ತಂ ರತ್ನಾಕರೋಕ್ತಪ್ರಬಂಧಲಕ್ಷಣಂ ವಕ್ತುಕಾಮೇನ ಮುಮ್ಮಡಿ ಚಿಕ್ಕಭೂಪಾಲೇನ ಪ್ರಥಮಂ ತಾವದ್ಗೀತಲಕ್ಷಣಂ ಲಕ್ಷ್ಯತೇ (ಪುಟ:೩೦೫)

ix. ಶುದ್ಧಾಶ್ಚತುರ್ವಿಧಾಶ್ಚೇತ್ಯಾದಿನಾ ಶಾರ್ಙ್ಗದೇವೇನ ವರ್ಣಿತಸ್ಯ ಏಲಾಪ್ರಪಂಚಸ್ಯಾತಿ ವಿಸ್ತಾರತ್ವಾದತ್ರ ವಿಸ್ತರಭೀತ್ಯಾ ಮುಮ್ಮಡಿಚಿಕ್ಕಭೂಪಾಲೇನ, ತತ್ಪ್ರಪಂಚಸ್ತತ್ರೈವ ದೃಷ್ಟವ್ಯ ಇತ್ಯಸ್ಮಿನ್ ಗ್ರಂಥೇ ನ ಲಿಖಿತಃ (ಪುಟ:೩೧೫)

x. ಇತಿ ಹರಿಪಾಲಿಯೋಕ್ತಪ್ರಬಂಧೋದ್ದೇಶಃ। ರತ್ನಾಕರೋಕ್ತಪ್ರಬಂಧಪ್ರಪಂಚಸ್ಯಾತಿವಿಸ್ತರತ್ವಾದಸ್ಯ ಗ್ರಂಥಸ್ಯ ಸಂಗ್ರಹತ್ವಾಚ್ಚ ಕತಿಚಿತ್ ಪ್ರಬಂಧಾನ್ ಲಕ್ಷ್ಯಲಕ್ಷಣಸಹಿತಾನ್ ಲಿಖಿತ್ವಾಪರೇಷಾಂ ಸಂಬಂಧಾನಾಂ ಲಕ್ಷ್ಯಲಕ್ಷಣಾನಿ ಸಂಗೀತರತ್ನಾಕರೇ ದೃಷ್ಟವ್ಯಾನೀತಿ ಮನೀಷಯಾ ಮುಮ್ಮಡಿಚಿಕ್ಕಭೂಪಾಲೇನೋದ್ದೇಶಮಾತ್ರಂ ಲಿಖಿತಮ್ (ಪುಟ:೩೨೨)

xi. ಇತಿ ಶ್ರೀಮದ್ದಗಿರಿಶಾಸನಾಂಕ, (ಮರೆಹೊಕ್ಕ)ವರಕಾವ, ಮಾರಾಂತರ ಕೊಲ್ಲ, ವಡೆಗೆರೆಮಲ್ಲ, ವಂಕಿಣಿನಾರಾಯಣಾಂಕ, ಗಂಡಭೇರುಂಡ, ತಲಾಘುರಾಯ, ಚೋಳಂಭೇರಿ ಮಂಡಲಿಕರಗಂಡ, ಸರನೇಜ(?ಸಮರನೋದ) ಬಿರುದಾಂಕ, ಯೇಳ್ನಾಟ ಪಟ್ಟಭದ್ರ, ಹಗಲು ಕಗ್ಗೊಳು (-ಕಗ್ಗೊಲೆ) ರಾಯ, ಅಲ್ಲಾಮು(ಮಲ್ಲಾನು)ಖಾನ ಸಪ್ತಾಂಗಹರಣ, ಶ್ರೀರಂಗರಾಯ ಶೇಖರದತ್ತಶಂಖಚಕ್ರಬಿರುದ, ಶ್ರೀಮದ್ದ್ವಿಜವರ (ಶ್ರೀಮದ್ಬಿಜ್ಜವರ) ಪುರವರಾಧೀಶ್ವರೋಜ್ಜ್ವಲ, ಮುಮ್ಮಡಿ (ಇಮ್ಮಡಿ?) ಚಿಕ್ಕಭೂಪಾಲಕುಮಾರ, ಮಾರಪ್ರತಿಮಾನ, ಕುಮಾರ ಸಮೀರನಂದನ ಶೌರ್ಯಬಲಾಧಿಕ, ವಿತರಣನೂತನರವಿತನಯ, ಪ್ರತಾಪಸಹಾಯ ವಿಕ್ರಮಾರ್ಕ, ಚತುಃಷಷ್ಟಿ ಕಲಾಪ್ರವೀಣ, ಮುಮ್ಮಡಿ ಚಿಕ್ಕಭೂಪಾಲ ವಿರಚಿತೇ ಅಭಿನವಭರತಸಾರಸಂಗ್ರಹಾಖ್ಯೇ ಶ್ರೀವೆಂಕಟೇಶ್ವರಪಾದಾರವಿಂದಾಂಕಿತೇ ಗ್ರಂಥೇ ದ್ವಿತೀಯಾಖ್ಯಾಯಾಂ ಭರತಸಂಜೀವಿನ್ಯಾಂ ನಾದಾದಿ ಗೀತ ಗುಣಾಂತಪ್ರಪಂಚೋ ನಾಮ ಪಂಚಮೋಧ್ಯಾಯಃ॥ (ಪುಟ:೩೨೫)

೯.	ಬ್ರಂಹಸಮುದ್ರದ ಕಾಲುವಳಿ ಕರಿಕೆರೆ ಗ್ರಾಮವನು ಉಂಬಳಿಯಾಗಿ ಕೊಟ್ಟೆವಾ
೧೦.	. . . . . ಆಚಂದ್ರಾರ್ಕ ಸ್ಥಾಯಿಯಾಗಿ . . . .
೧೧.	ತ್ರ ಪೌತ್ರಪಾರಂಪರ್ಯ್ಯವಾಗಿ ಅನುಭವಿಸಿ . . . .
೧೨.	. . . . . . ಕಕನಾಡ . . . .
೧೩.	. . . . ವಾರಣಾಸಿಲಿ ಗೋವ ಕೊಂದ ಪಾಪಕರೆ ಹೋಹರು
೧೪.	. . . . ವ ಹಾಗೆ . . . . ವಿಸಿದ ಹಾಗೆ
೧೫.	. . . . ದುಗೆ ಕೊಟ ಹಾಗೆ . . . .
೧೬.	. . . . ಹಂದಿಯ ಕೊಂದು ತಿಂದ ಹಾಗೆ . . . .[೩೨]

(ಮುಂದೆ ಕಾಣುವುದಿಲ್ಲ)

ಮುಮ್ಮಡಿ ಚಿಕ್ಕಭೂಪಾಲನು ಕರಿಯಪಗೌಡನೆಂಬವನಿಗೆ ಮಗಳನ್ನು ಕೊಟ್ಟು, ಕರಿಕೆರೆ ಗ್ರಾಮವನ್ನು ಬಳುವಳಿ ನೀಡಿದನೆಂದು ತಿಳಿಸುವ ಈ ಶಾಸನದ ಕಾಲ ಕ್ರಿ.ಶ. ಸು. ೧೫೬೨. ಈ ಇಸ್ವಿ ಸಪ್ಪೇಂದ್ರನ ಆಳಿಕೆಗೆ ಸುಮಾರು ಒಂದು ಶತಮಾನದಷ್ಟು ಹಿಂದೆ ಹೋಗುವುದರಿಂದ ಶಾಸನದಲ್ಲಿರಬೇಕಾದ ಶಕೆ ೧೪೮೪ ಅಲ್ಲ, ಶಕೆ ೧೫೮೪ ಎಂದು ಊಹಿಸಬಹುದು.

ಇಲ್ಲಿ ಅವಶ್ಯ ಗಮನಿಸಬೇಕಾದ ಇನ್ನೊಂದು ಶಾಸನವೆಂದರೆ ಮದ್ದಗಿರಿ ತಾಲೂಕಿನ ಜೋಡಿದಾಸೇನಹಳ್ಳಿಯದು.

೧.	ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಷಲಿವಹನಷ-
೨.	ಖವರುಷ ೧೬೦೮ ಅಕ್ಷಯನಾಮ ಸಂವತ್ಸರ-
೩.	ದ ಕಾರ್ತ್ತಿಕ ಬಹುಳ ೧೩ಯಲು ಕಲ್ಯಾಣಪಟ್ಟಣ-
೪.	ಕೆ ವಟಿಕರ್ತರಾಗಿ ೮೮೯೬೦೦೦ ಜಂಗಮಕ್ಕೆ
೫.	ದಾಸೋಹವ ಮಾಡಿ ! ನಿಚ್ಚ ಪವಾಡವ ಮೆರೆದ ಕ-
೬.	ಪ್ಪಟಿಯ ಸಂಗಬಸವರಾಜೇಂದ್ರನು । ಷಡ್ವರುಶ-
೭.	ನ ಸ್ತಪನಚಾರ್ಯರಾದ । ಷಟುಸ್ತಳದ ಪ್ರ-
೮.	. ಗಳಾದ । ಹ ೧೨ಡು ಸಾವಿರ ಸ್ವಯ ಜಂಗ-
೯.	ಮೇಶ ಅನುಭವಮೂರ್ತಿಯಾಗಿ ಗ್ನಾನಸಂಭವ-
೧೦.	ದಿ ಅರುಹಿಕೊಟ್ಟಂಥ ಚಿಕ್ಕದಣಾಯಕ
೧೧.	ಚೆನ್ನಬಸವರಾಜೇಂದ್ರನು । ಶಾಂಬುಲೋಕ-
೧೨.	ಕಧಿಪತಿಗಳಾದಂಥ ಸಾಂಕೆಕೋಳಾಹ-
೧೩.	ಳನೆಂಬ ಬಿರಿದಿನ ಮಹಿಮೆಯಲಿ ಚರಿಸಿ-
೧೪.	ದ । ಅಲ್ಲಿಮಹ್ವಾಬಸವಂಗಳು ಯಿಂತವ-

೩೨. EC. XII ತುಮಕೂರ ೬೬ ಕರಿಕೆರೆ (ಕ್ರಿ.ಶ. ೧೫೬೨).

೧೫. ರು[ಭಯ]ನು. . . . . [ಅಮರಗ] ಗಣಂಗಳು ಸಹ-

೧೬. ವಾಗಿ ಬಂದ ಕೆಂಡಶಂಕರೇಶ್ವರದೇವರ ಪದಪಂಕ-

೧೭. ಜಭ್ರಮರರಾದ । ಯಿಂಮಡಿ ಚಿಕ್ಕಪ್ಪಗೌಡನ ಕುಮಾ-

೧೮. ರ ಹಿರಿಗೌಡನು ನೇರಲಕೆರೆ . . . . . ದಾಸಿನಾಯಕ-

೧೯. ಹಳ್ಳಿ ಪ್ರತಿನಾಮ ಕಲ್ಯಾಣಪುರದ ಸೀಮೆಯಲಿ

೨೦. ನಿಧಿನಿಕ್ಷೇಪಜಲಾಪಾಷಾಣ ಮುಂತಾದ ಸಕಲವಂನು

೨೧. ಪಾದಕೆ ನಮಸ್ಕಾರ ಮಾಡಿ ವೊಪಿಸಿದನೂ । ಯಿದಕೆ ಅ-

೨೨. ವವ ಅಳಿಪಿದರು . . . . ನದರೆ ದೇವಲೋಕ

೨೩. ಮರ್ತ್ಯಲೋಕಕೆ ಹೊರಗು ಬಾ . . . . . ರಿಸ-

೨೪. . . . . ವನಾದರು

೨೫. . . . .

೨೬. ವಳುಪಿದ . .

೨೭. ಕೆ ಹೋಹರು [॥][೩೩]

ಈ ಶಾಸನ, ಇಮ್ಮಡಿ ಚಿಕ್ಕಭೂಪಾಲನ ಮಗ ಹಿರಿಗೌಡನೆಂಬವನ ಆಳಿಕೆಯಲ್ಲಿ ಕ್ರಿ. ಶ. ೧೬೮೬ರಂದು ಹುಟ್ಟಿದೆ. ನಮಗೆ ಗೊತ್ತಿದ್ದ ಮಟ್ಟಿಗೆ ಚಿಕ್ಕಭೂಪಾಲನಿಗೆ ಚೆನ್ನಪ್ಪಗೌಡ, ತೋಂಟದರಾಯ, ಸಪ್ಪೇಂದ್ರ ಎಂದು ಮೂವರು ಮಕ್ಕಳು. ಚೆನ್ನಪ್ಪಗೌಡ ಎಳೆಯ ವಯಸ್ಸಿನಲ್ಲಿಯೇ ತೀರಿಕೊಂಡ, ತೋಂಟದರಾಯ ಹರವೆಯ ಕಾಳಗದಲ್ಲಿ ವೀರಸ್ವರ್ಗವೇರಿದ, ರಾಜ್ಯವಾಳಿದವ ಸಪ್ಪೇಂದ್ರ. ಹೀಗಿರುವಾಗ ಇಲ್ಲಿ ಹೇಳಲಾದ ಹಿರಿಗೌಡ ಯಾರೆಂಬುದು ಗೊತ್ತಾಗುವುದಿಲ್ಲ. ಇದನ್ನು ಬಿಟ್ಟರೆ ಈ ಶಾಸನ, ಮಹಾನಾಡಪ್ರಭು ಮನೆತನ ವೀರಶೈವ ಆವರಣದಲ್ಲಿ ಬದುಕುತ್ತಿದ್ದ ಬಗೆಯನ್ನು ತಿಳಿಸುತ್ತದೆ. ಶರಣಸಂಪ್ರದಾಯದ ಕೆಂಡಶಂಕರೇಶ್ವರದೇವರಿಗೆ ಹಿರಿಗೌಡನು ಹಳ್ಳಿಯೊಂದನ್ನು ದಾನವಾಗಿ ನೀಡಿದುದು ಈ ಶಾಸನದ ವಿಷಯ.[೩೪] ಇದೆಲ್ಲವನ್ನು ನೋಡಿದರೆ ತೋಂಟದ ಸಿದ್ಧಲಿಂಗ ಮತ್ತು ಅವನ ಶಿಷ್ಯರಿಂದ ತುಂಬಿ ಬಂದ ವೀರಶೈವದ ಮರುಸುಗ್ಗಿಗೆ, ಪರಮ ವೀರಶೈವರಾದ ಈ ಪ್ರಭುಗಳು ರಾಜೋಚಿತವಾದ ಆಶ್ರಯ ನೀಡಿದರೆಂದು ವ್ಯಕ್ತವಾಗುತ್ತದೆ. ರಾಜರ ಈ ಔದಾರ್ಯವನ್ನು ಅರ್ಥಮಾಡಿಕೊಂಡ ಕಾರಣ ತೋಂಟದಾರ್ಯರ ಶಿಷ್ಯ ಬೋಳಬಸವೇಶನು ವೀರಶೈವ ಚಟುವಟಿಕೆಗೆ ಎಡೆಯೂರನ್ನು ಬಿಟ್ಟು, ಈ

---

೩೩. EC. XII ಮದ್ದಗಿರಿ ೮ ಜೋಡಿದಾಸೇನಹಳ್ಳಿ (ಕ್ರಿ.ಶ. ೧೬೮೬).

೩೪. ಈ ವಂಶದವರಿಗೆ ಸಂಬಂಧಪಟ್ಟ ಇನ್ನೂ ಕೆಲವು ಶಾಸನಗಳು ಹೀಗೆ ಸಿಗುತ್ತವೆ:ಕಮ್ಮನ ಕೋಟೆ ಶಾಸನ (ಶಕ ೧೩೪೦- ಕ್ರಿ.ಶ. ೧೪೧೯) "ಬಿಜಾವರದ ಸಿಂಗೇಗೌಡನ ಮಕ್ಕಳು ರಾಮಗೌಡರಿಗೆ ಕೊಡುಗೆಯಾಗಿ" ಮದ್ದಗಿರಿ ಇತ್ಯಾದಿ ಕೊಟ್ಟುದನ್ನೂ, ನಾಗೇನಹಳ್ಳಿ ಶಾಸನ (ಶಕ ೧೪೧೭- ಕ್ರಿ.ಶ. ೧೪೯೬) "ಶ್ರೀಮನ್ಮಹಾನಾಡಪ್ರಭು ತಿಂಮಣಗೌಡರ ಮಗ ಕಲಿಯತಂಮಯ್ಯಗೌಡರು" ಎಂಬವನ ಉಲ್ಲೇಖವನ್ನೂ, ಬೆಂಗಳೂರ ಮ್ಯುಜಿಯಂ ತಾಮ್ರಶಾಸನ (ಶಕ ೧೬೮೨- ಕ್ರಿ.ಶ.೧೭೬೦) "ಶಂಕರಗೋತ್ರದ ಶಿವಸೂತ್ರದ ಶ್ರೀಮಂನ್ಮಹಾನಾಡಪ್ರಭು ಗುಬ್ಬಿ ಮುಂಮಡಿ ಹೊನ್ನಪ್ಪಗೌಡರಯ್ಯನವರ ಪೌತ್ರರಾದ ತೋಟಪ್ಪಗೌಡರೈಯ್ಯನವರ ಪುತ್ರರಾದ ಶ್ರೀಮಂನ್ಮಹಾನಾಡಪ್ರಭು ಗುಬ್ಬಿ ಮುಂಮಡಿ ಹೊಂನಪ್ಪಗೌಡರೈಯ್ಯ"ನವರ ಉಲ್ಲೇಖವನ್ನೂ ಮಾಡುತ್ತವೆ.

ಬಿಜ್ಜಾವರವನ್ನೇ ಕೇಂದ್ರವನ್ನಾಗಿ ಮಾಡಿಕೊಂಡಂತಿದೆ. ಒಂದೇ ಪಟ್ಟಣದಲ್ಲಿ ರಾಜ್ಯಶಕ್ತಿ ಮತ್ತು ಧರ್ಮಶಕ್ತಿಗಳು ಅಧಿಷ್ಠಾನಗೊಂಡ ಅಪೂರ್ವ ಸಂದರ್ಭವದು.

ಈತನ ತರುವಾಯ ಈ ವಂಶದವರು ಮೈಸೂರು ಒಡೆಯರ, ಮರಾಠರ ಮತ್ತು ಬ್ರಿಟಿಶ್‌ರ ಅಧೀನರಾಗಿ ಆಳಿದ್ದರು. ಬಾಳಿದರು. ಇಂದಿಗೂ ಈ ಮನೆತನದವರು ಮದ್ದಗಿರಿ ಸಮೀಪದ ಶಂಭೋನಹಳ್ಳಿಯಲ್ಲಿ ವಾಸವಾಗಿರುವರು.

೩. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

"ಕವಿಯಾಸ್ಥಾನಕ್ಕೆ ಭೂಷಣಂ" ಎಂದು ನಮ್ಮ ರಾಜರೂ 'ವಿನಾಶ್ರಯಂ ನ ಶೋಭಂತೇ ಪಂಡಿತಾ ವನಿತಾ ಲತಾಃ' ಎಂದು ನಮ್ಮ ಕವಿಗಳೂ ನಂಬಿದ ಮೇರೆಗೆ ಪ್ರಾಚೀನ ಕನ್ನಡಸಾಹಿತ್ಯ ರಾಜಾಶ್ರಯದಲ್ಲಿ ಬೆಳೆಯುತ್ತ ಬಂದಿತು. ಕಲ್ಯಾಣಚಾಳುಕ್ಯ, ಹೊಯ್ಸಳ ಮೊದಲಾದ ಚಕ್ರವರ್ತಿಗಳಲ್ಲದೆ ಸಾಮಂತರೂ ಪಾಳೆಯಗಾರರೂ ಈ ಪರಂಪರೆಯನ್ನು ಪಾಲಿಸಿಕೊಂಡು ಬಂದರು. ಇದಕ್ಕೆ ಮಹಾನಾಡಪ್ರಭುಗಳು ಅಪವಾದವಲ್ಲ. ಇಮ್ಮಡಿ ಚಿಕ್ಕಭೂಪಾಲ, ತೋಂಟದರಾಯ ಮತ್ತು ಸಪ್ಪೇಂದ್ರ – ಇಷ್ಟು ಅವಧಿಯಲ್ಲಿ ಸ್ವತಃ ಸಪ್ಪೇಂದ್ರ ಕವಿಯಾಗಿದ್ದರೆ, ತೋಂಟದರಾಯ[೩೫] ನಿಂದ (ಪರ್ವತೇಂದ್ರ ಅಥವಾ ಪರ್ವತೇಂದ್ರನ ಶಿಷ್ಯ) ವಿರಕ್ತ ತೋಂಟದಾರ್ಯನು ಪೂಜಿತನಾಗಿದ್ದಾನೆ. ಇದಲ್ಲದೆ ಮಲ್ಲಿಕಾರ್ಜುನ ಎಂಬವನ ಹೆಸರಿನಲ್ಲಿ ಅನೇಕ ಕೃತಿಗಳು ಸಿಗುತ್ತವೆ. ಇಂಥ ಸಾಹಿತ್ಯಿಕ ಪರಿಸರದಲ್ಲಿ ಕವಿ ಮಲ್ಲಿಕಾರ್ಜುನನಿಂದ 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ' ಸೃಷ್ಟಿ ಪಡೆಯಿತು.[೩೬]

ಕವಿಪರಿಚಯ:

ಮಲ್ಲಿಕಾರ್ಜುನ ಹೆಸರಿನಲ್ಲಿ ಶಂಕರಕವಿಕೃತ ಸಂಸ್ಕೃತ ಬಸವಪುರಾಣಟೀಕೆ, ಗುರುರಾಜಕೃತ ಸಂಸ್ಕೃತ ಪಂಡಿತಾರಾಧ್ಯಚರಿತ್ರ ಟೀಕೆ, ಮಗ್ಗೆಯ ಮಾಯಿದೇವನ ಶತಕತ್ರಯಟೀಕೆ[೩೭]ಗಳನ್ನು ಕವಿಚರಿತೆಕಾರರು ಹೆಸರಿದ್ದರೆ, ಇತ್ತೀಚೆ ರಾಮಾಯಣಸಾರ ವ್ಯಾಖ್ಯಾನ, ಭಾರತಸಾರವ್ಯಾಖ್ಯಾನ, ಬ್ರಹ್ಮತರ್ಕಸ್ತವದ ಕನ್ನಡ ಟೀಕು, ಪಂಚಶ್ಲೋಕಿ ವ್ಯಾಖ್ಯಾನ, ಆದಿತ್ಯಸ್ತೋತ್ರವ್ಯಾಖ್ಯಾನ, ಶಿವಕರ್ಣಾಮೃತ ಕರ್ಣಾಟಕವ್ಯಾಖ್ಯಾನ, ಅಮೃತೇಶ್ವರ ಭಾಷ್ಯ-ಈ ಟೀಕಾಕೃತಿಗಳ ಹಸ್ತಪ್ರತಿಗಳು ಲಭಿಸಿವೆ. ಇದಲ್ಲದೆ ಚೆನ್ನಮಲ್ಲೇಶ್ವರ ಶತಕವೂ ಈತನದಾಗಿರಬಹುದು. ಈಗ ಮಲ್ಲಿಕಾರ್ಜುನ ಹೆಸರಿನಲ್ಲಿ ಪ್ರಸ್ತುತ ಕಾವ್ಯ 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ' ದೊರೆತು ಅಚ್ಚಾಗುತ್ತಲಿದೆ. ಈ ಟೀಕೆ, ಶತಕ, ಸಾಂಗತ್ಯಗಳಲ್ಲಿ ಕವಿ ಮತ್ತು ಆಶ್ರಯದಾತನ ವಿಷಯ ಹೀಗಿದೆ:

---

೩೫. ತೋಂಟದ ಸಿದ್ಧಲಿಂಗಯತಿಯ ಶಿಷ್ಯನಾದ ತೋಂಟದ ಭೂಪಾಲ ಮತ್ತು ಸಂಗಮಾಂಬೆಯರ ಮಗನೂ ಚಿಟ್ಟನಪುರಿಗೆ ಪ್ರಭುವೂ ಆದ ಇಮ್ಮಡಿ ತೋಂಟದಯ್ಯನೆಂಬವನು (೧೫೩೦) ವಜ್ರಬಾಹುಚರಿತೆಯೆಂಬ ವೀರಶೈವಕೃತಿಯನ್ನು ಬರೆದಿರುವನು (ಕ. ಕ. ಚ.II ಪು. ೧೭೬). ಈ ಇಮ್ಮಡಿ ತೋಂಟದಯ್ಯನಿಗೂ ಬಿಜ್ಜಾವರದ ತೋಂಟದರಾಯನಿಗೂ ಕೆಲವರು ಸಂಬಂಧ ಕಲ್ಪಿಸಿದ್ದಾರೆ (ನೋಡಿ. ಮಹಾದೇವನ ಮಹಾಲಿಂಗೇಂದ್ರ ವಿಜಯ, ಸಂ. ಎಲ್. ಬಸವರಾಜು, ಪೀಠಿಕೆ, ಪು. ೫೫ ಮತ್ತು ಬಿ. ಶಿವಮೂರ್ತಿಶಾಸ್ತ್ರಿಗಳು: ಕ-ಭಾ. ೮-೨, ಪು.೬೦) ಈ ಬಗ್ಗೆ ವಿಚಾರಿಸಬೇಕು.

೩೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ (=ತೋಂಟದರಾಯನ ಸಾಂಗತ್ಯ)ದ ಕರ್ತೃ ಸಿದ್ಧಮಲ್ಲೇಶನೆಂದು ಮಧುಗಿರಿ ಚರಿತ್ರೆ (ಪು. ೩೩)ಯಲ್ಲಿ ಹೇಳಿದುದು ತಪ್ಪೆಂದು ತೋರುತ್ತದೆ.

ಟೀಕೆಗಳಲ್ಲಿಯ ವಿಷಯ:

ಸಂಸ್ಕೃತ ಪಂಡಿತಾರಾಧ್ಯಚಾರಿತ್ರ ಟೀಕು:

ಅಂತ್ಯ: "ಇದು ಶ್ರೀಮದಮೃತೇಶ್ವರ ಕರುಣಾಕಟಾಕ್ಷವೀಕ್ಷಣಪ್ರಸಾದಲಬ್ಧಸಾರಸಾರಸ್ವತ ಸಾಮ್ರಾಜ್ಯ ಸಂಪೂಜ್ಯ ಸಕಲಕಲಾಕಲಾಪ ನೂತನಭೋಜರಾಜ . . . . . . ಚೋಳಂಭೇರಿ ಮಂಡಲಿಕರ ಗಂಡಭೇರುಂಡ ತಲಾಘುರಾಯ ರಾಯರಾವುತ ವೇಶ್ಯಾಭುಜಂಗ . . . . ಪುರವರಾಧೀಶ್ವರ ಚಿಕ್ಕಭೂರಮಣಗರ್ಭಕಲ ಶಾಂಬುರಾಶಿರಾಕಾನಿಶಾನಾಯಕ ಸೋಮಾಂಬಿಕಾಹೃದಯನಂದನವನಹರಿಚಂದನ ಶ್ರೀಮದಿಮ್ಮಡಿ ಚಿಕ್ಕಭೂಪಾಲ ಕೃಪಾಲಾಲಿತ ಕವಿಕುಮುದಶಶಾಂಕ ಶ್ರೀವತ್ಸಾಲಂಕೃತ ಮಲ್ಲಿಕಾರ್ಜುನಸುಧೀ ವಿರಚಿತ . . . . . ."[೩೮]

ಸಂಸ್ಕೃತ ಬಸವಪುರಾಣ ಟೀಕು:

ಅಂತ್ಯ: "ಇದು ಶ್ರೀಮದಮೃತೇಶ್ವರ ಚರಣಾರವಿಂದಮಕರಂದಾ ಸ್ವಾದಾಮಂದನಂದ ದಿಂದಿರಾಯಮಾಣವಿಶುದ್ಧಾಂತಃಕರಣ ವಂಕಿಣಿನಾರಾಯಣಾಂಕ ಸಮರನಿಶ್ಶಂಕ ಚಿಕ್ಕಭೂಪಾಲಗರ್ಭಾಬ್ಧಿ ಚಂದ್ರೋದಯ ಸೋಮಾಂಬಿಕಾಗರ್ಭ ಶುಕ್ತಿಮುಕ್ತಾಫಲ ಸತತಸಂತರ್ಪಿತ ನಿರವಧಿಕವೀರಮಾಹೇಶ್ವರ ವಾಂಛಿತಾರ್ಥಸಾರ್ಥ ಶ್ರೀಮದ್ವಿಜ್ಜವರಪುರವರಾಧೀಶ್ವರ ಶ್ರೀಮದಿಮ್ಮಡಿ ಚಿಕ್ಕಭೂಪಾಲ ಕೃಪಾಲಾಲಿತ ಮಲ್ಲಿಕಾರ್ಜುನಕವೀಶ್ವರ ವಿರಚಿತಂ"[೩೯]

ರಾಮಾಯಣಸಾರ ವ್ಯಾಖ್ಯಾನ:

ಆದಿ: "ಶ್ರೀಕಂಠಾಕೃತಿ ವೀರಶೈವಚರಣದ್ವಂದ್ವಾರವಿಂದಾರ್ಚನಾ।
ತತ್ಪಾದೋದಕ ತತ್ಪ್ರಸಾದಮಹಿಮಾ ಪ್ರಖ್ಯಾತತೀರ್ಥೋಜ್ವಲಃ।
ಶ್ರೀಮಚ್ಚಿಕ್ಕನೃಪಾಲಗರ್ಭಜಲಧಿಪ್ರೋದ್ಭೂತಚಿಂತಾಮಣಿಃ।
ಶ್ರೀರಾಮಾಯಣಸಾರ ವಿವರಣಂ ಕರ್ನಾಟಯಾ ಟೀಕತೇ॥"

ಭಾರತಸಾರ ವ್ಯಾಖ್ಯಾನ:

ಆದಿ: "ಭಾರತಸಾರವ್ಯಾಖ್ಯಾಂ ಕರೋತಿ ಕರ್ನಾಟಭಾಷಯಾ ವಿದುಷಾಂ
ತೋಷಾಯ ಚಿಕ್ಕಧರಣೀಪತಿಸ್ ಸ್ಪೃಹಣೀಯ ಕೀರ್ತಿಸರಣೀಯಃ"

ಅಂತ್ಯ: "ಭುಜತೇಜೋರಾಶಿರಾಜತ್ತುರಕದಳವಿಭಾಳಾಗ್ರಣ್ಯ ಶರಣ್ಯೋ।
ವಿಜಯೋ ಶ್ರೀ ಚಿಕ್ಕಭೂಪಃ ಪ್ರಚುರತರಯಶಾ ಮಲ್ಲಿನಾಥಾಹ್ವಯೇನ।
ಸುಜನೇನಾಕಾರಯದ್ವಾರ[ತ] ವಿವೃತಿಮಿಮಾಂ ಚಾರುಕರ್ನಾಟಭಾಷಾಂ ।
ದ್ವಿಜರಾಜೋತ್ತಂಸ ಶೈಲೇಶ್ವರ ಚರಣ ಸಕಸ್ಸಂಭವೇಂದಿಂದಿರೇಣ॥"

---

೩೭. ಮಲ್ಲಿಕಾರ್ಜುನನು ಶತಕತ್ರಯಕ್ಕೆ ಟೀಕೆ ಬರೆದಿರುವನೆಂದು ಕವಿಚರಿತೆಕಾರರು ಹೇಳುವರಾದರೂ ಅದರ ಭಾಗವನ್ನು ಉದ್ಧರಿಸಿಕೊಟ್ಟಿಲ್ಲ.

೩೮. ಕ. ಕ. ಚ. II (೧೯೭೩) ಪು. ೨೬೫.

೩೯. ಕ. ಕ. ಚ. II (೧೯೭೩) ಪು. ೨೬೫.

ಬ್ರಹ್ಮತರ್ಕಸ್ತವದ ಕನ್ನಡ ಟೀಕು:

ಆದಿ : ಶ್ರೀಮದ್ಬಿಜ್ಜವರಾನ್ವವಾಯತಿಲಕಃ ಶ್ರೀ ಚಿಕ್ಕಭೂಪಾಲಕಃ।
ಶೈವಾಮ್ನಾಯ ಪಯಃಪಯೋಧಿಲಹರೀ ರಾಕಾನಿಶಾನಾಯಕಃ।
ಕರ್ನಾಟೋಕ್ತಿ ಕಲಾಕಲಾವಕಲಿತ ಶ್ರೀ ಬ್ರಹ್ಮತರ್ಕಸ್ತವ।
ವ್ಯಾಖ್ಯಾನಂ ವಿತನೋತಿನೂತನವಚೋಗಾಂಭೀರ್ಯಲೀಲಾಸ್ಪದಂ॥"

ಅಂತ್ಯ: "ವೀರಾಶಂಸನ ವೀರಭದ್ರವಿಜಯಾಹಂಕಾರ ಶಂಕಾಕರ ।
ಶ್ರೀರಾಡಿಮ್ಮಡಿಚಿಕ್ಕಭೂಪಮಹಿತಃ ಶ್ರೀ ಮಲ್ಲಿನಾಥಃ ಕವಿಃ।
ಕರ್ನಾಟಸ್ಫುಟವಾಗ್ವಿಜೃಂಭಣಕಳಾಂಚದ್ಬ್ರಹ್ಮತರ್ಕಸ್ತವ।
ವ್ಯಾಖ್ಯಾನಂ ಕೃತವಾನ್ಮಹೇಶಚರಣಾಂಭೋಜಾತಪುಷ್ಪಂಧಯಃ॥"

ಪಂಚಶ್ಲೋಕಿ ವ್ಯಾಖ್ಯಾನ:

ಆದಿ: "ಕರ್ನಾಟೀ ಶ್ರೀಕರ್ಣಪೂರಾಯಮಾಣಾಂ।
ಪಂಚಶ್ಲೋಕೀಂ ಪಂಚಿತಾಂ ವಾಗ್ವಿಪಂಚೀಂ।
ಕರ್ನಾಟೀಯಾಂ ಚಿಕ್ಕಣಕ್ಷೋಣಿಪಾಲ।
ಪ್ರಾಪ್ತಖ್ಯಾತಿರ್ಮಲ್ಲಿನಾಥಃ ಕರೋತಿ॥"

ಅಂತ್ಯ: "ಅರ್ಥಿಪ್ರತ್ಯರ್ಥಿವೃಂದಂ ತದ ಭಜಕ ಯಶೋದಾನ ವಿದ್ಯಾವಿನೋದಂ।
ತಸ್ಮಾದ್ವಾನೇ ವಿನೋದಿತ್ಯಖಿಲನೃಪಸಭಾಣಿಯಜ್ಜನ್ಮ ನಾಮ।
ಸೋಯಂ ರತ್ನತ್ರಯಾಖ್ಯ ಸ್ತುತಿಮತಿ ಲಲಿತಾಂ ಚಿಕ್ಕಣಕ್ಷೋಣಿಜಾನಿ।
ವ್ಯರ್ಕ್ತಂ ವ್ಯಾಚಿಕರತ್ಕನ್ನಡಕವನವಿದಾ ಮಲ್ಲಿನಾಥೇನಶೈವೀಂ॥"

ಆದಿತ್ಯಸ್ತೋತ್ರದ ವ್ಯಾಖ್ಯಾನ:

ಆದಿ : "ಶ್ರೀಮಚ್ಚಿಕ್ಕಮಹೀಪಾಲಕೃಪಾ[ಕ]ಲಿತ ಚೇತಸಾ।
ಆದಿತ್ಯಸ್ತೋತ್ರ ರತ್ನಸ್ಯ ವ್ಯಾಕ್ರಿಯಾ ಕ್ರಿಯತೇ ಮಯಾ।
ಆದಿತ್ಯ ಸ್ತೋತ್ರ ರತ್ನಸ್ಯ ವೃತ್ತಿರ್ಗೂಢಪ್ರಕಾಶಿನೀ।
ಅಸ್ಮಾಭಿರೇವ ಕ್ರಿಯತೇ ನಾತಿಸಂಕೋಚವಿಸ್ತರಾ॥"

ಶಿವಕರ್ಣಾಮೃತ ಕರ್ನಾಟಕ ವ್ಯಾಖ್ಯಾನ:

ಆದಿ : "ವೀರಾಗ್ರೇಸರ ಚಿಕ್ಕಭೂಮಿಪತಿನಾ ದತ್ತದ್ವಿಪಾಂದೋಲಿಕಾ ।
ಲಂಕಾರಾದಿಸಮಸ್ತ ವೈಭವಕಳಾಸಂಪತ್ತಿ ಸಂತೋಷಿತಃ।
ಕರ್ನಾಟೀಯ ವಚೋನಿಚೋಳಲಲಿತ ಶ್ರೀಶೈವಕರ್ಣಾಮೃತ।
ವ್ಯಾಖ್ಯಾನಂ ವಿತನೋತಿ ಸಜ್ಜನನುತಃ ಶ್ರೀಮಲ್ಲಿನಾಥಃ ಕವಿಃ॥"

ಅಂತ್ಯ: "ಸಮಗ್ರ ಗುಣಶಾಲಿ ಬಿಜ್ಜವರ ಚಿಕ್ಕಭೂಪಾಗ್ರಣಿ।
ರುದಾರಕರ ಮಲ್ಲಿಕಾರ್ಜುನಕವೀಶ್ವರೇಣ ಸ್ಫುಟಂ।
ಅಕಾರಯದುದಾತ್ತಧೀರಮಳ ಶೈವಕರ್ಣಾಮೃತ।
ಸಿತಿ ಪ್ರವರ ಟಿಪ್ಪಣಂ ವಿಧಿ . . . .॥"
. . . . ಮಖವಂದ . . . . ಭೋಜ್ವಲಾ।

ಲೀಲಾಸಾದಿತ ದುರ್ಗಮಾಧಿಕರಣಾ ಕರ್ನಾಟಸೂಕ್ತ್ಯಾ।
. . . . ಕೃ . . . . ಷ್ಮ. . . . .।
ಶ್ರೀಮದ್ಬಿಜ್ಜವರೇಂದ್ರ ಚಿಕ್ಕನೃಪತೇರಾಚಂದ್ರತಾರಂ ಕ್ಷಿತೌ॥"

"ರೌದ್ರಿಸಂವತ್ಸರದ ಶ್ರಾವಣಶುದ್ಧ ೧೧ಲ್ಲು ಶ್ರೀಮನ್ಮಹಾನಾಡಪ್ರಭು ಬಿಜ್ಜವರದ ಇಮ್ಮಡಿ ಚಿಕ್ಕಪ್ಪಗೌಡರೆಯ್ಯನವರ ಶಾರದಾ ಭಂಡಾರಕ್ಕೆ ಅನುಭವದ ಸೊಂಪದೇವರ ಮಕ್ಕಳು ವೀರ ಸೊಂಪದೇವರು ಬರೆದ ಸ್ತೋತ್ರಭಾಷ್ಯಗಳ ಪುಸ್ತಕ."

ಅಮೃತೇಶ್ವರ ಭಾಷ್ಯ:

ಅಂತ್ಯ: "ಶ್ರೀಶಾಲಿಮದ್ದಗಿರಿಶಾಸನ ರಾಜಮಾನೋ।
ಮಾನ ಶ್ರೀಯಾಜಿತ ಕುರು ಕ್ಷಿತ . . . . . .।
. . . . ಬಿಜ್ಜವರವಾಶಲಳಕ್ಷನೂತ್ನ।
ರತ್ನಂ ಸದಾ ಜಯತಿ ತಿಮ್ಮನರೇಂದ್ರ ನಾಮಾ॥
ತದಾತ್ಮಜಶ್ಚಿಕ್ಕನರೇಂದ್ರ ಚಂದ್ರೋ।
ವೈರಿಕ್ಷಮಾಪಾಲ ಮುಖಾಂಬುಜಾರೀಃ।
ಸಂಪ್ರಾಪ್ತವಾನ್ಯೋ ಜಮದಾಡಿಕಾಯಾಂ।
ಕಾಂತಂ ಸುರತ್ರಾಣ ಯಶೋವಿಲಾಸಂ॥
ನಡುನಾಡಗೂಳಿ ಬಿರುದೋಜ್ವಲಶಾಲಿ।
. . . . ತಲಶೀಲಿ।
ಮೃಡಭಕ್ತಿಭಾವಭರಿತಾಂತರ ಭಾಣ।
ನಡಮೀನಪಾಳಿಘನ ಸೌಂದರಭಾವಃ॥

ದಿಕ್ಕುಲಪೂರಿತ ಕೀರ್ತಿಂ ಚಿಕ್ಕಮಹೀಪಾಲ ಮೌಲಿಶಾರ್ದೂಲಂ।
ಭೂಭೃತ್ಕಟಕ ವಿಹಾರಾದೃಷ್ಟಾಭಿತಾಹಿವೈರಿಸಾರಂಗಾಃ॥

ದುರ್ಗಾರೋಹಣವೈಖರೀಪದತೃಣಂಗರ್ವಾಂಧಭೂಭೃದ್ವರಃ।
ಶ್ಲಾಘಾಲಂಘನ . . . . ಗಂಗಾಮೃತಪ್ರಾಯಕಃ।
ಲೀಲಾಮಾತ್ರಮರಾತಿರಾಜನಗರೀ ರಥ್ಯಾ ಸುವಾಹ್ಯಾಳಿಕಾ।
ಯಸ್ಯಾಸೀತ್ಸಮಹೀತಳೇ ವಿಜಯತೇ ಚಿಕ್ಕಪ್ಪಭೂಪಾಲಕಃ॥

ತದಾತ್ಮಜಸ್ತೋಟದ ಸಿದ್ಧಲಿಂಗ।
ನಾಮಾ ನೃಪೋ ಭಾತಿ ಮಹಾನುಭಾವಃ
ಯತ್ಕೀರ್ತಿಹಂಸೀ ಕರದಂಡಜಾಂಡ॥
ಷಂಡಂ ಪಿಚಂಡಾಂಡನಿಭಂ ಬಿಭರ್ತಿ॥

ಹರಿದಶ್ವರತ್ನ ಚರಮಾಸಿತೋಲ್ಲಸ।
ನ್ವರಿಚಾರಕೇ . . . .।
ಕಿರಣೈಸಹಸ್ರಗುಣಿತೈರಿವಾರುಣೋ।
ವಿರರಾಜ ತೋಟದ ಧರಾತಲೇಶ್ವರಃ॥

ವಂಕಿಣಿ ನಾರಾಯಣ ಸಂಕಾಶಸ್ತಾಲಾಂಕಯುದ್ಧನಿಶ್ಯಂಕಃ।
ಸಜಯತಿ ಚೋಳಂಭೇರಿ ಮಂಡಲಿಕರ ಗಂಡ ತೋಟದಕ್ಷ್ಮಾಪಃ ॥

ಕೃತ್ವಾಭ್ಯುನ್ನತಸಾಲಕೂಲ ವಿಹೃತಿಂ ಖಾತ್ವಾ ನಿಶಾಂತಾವನೀಂ।
ಪೀತ್ವಾ ಜೀವನಮಾಗಳಂ ಘನತರಾಹಂಕಾರ ದೂರ್ವಾಂಕುರಾನ್।
. . . . ದರ . . . . ರಂ ಪ್ರತಿಪಂ ವೃಷಂ।
ಸಂಚಿನ್ವನ್ನಡುನಾಡಗೂಳಿ ಬಿರುದ ಶ್ರೀ ತೋಟದಯ್ಯಪ್ರಭುಃ॥

ತೇನ ರಾಜತಿಲಕೇನ ಮಾನಿತ।
ಸ್ಸಾಹಿತಿನಿಗಮಪಾಂಡಿತಿ ಖನಿಃ।
ಮಲ್ಲಿಕಾರ್ಜುನಸ್ಸುಧಿರ್ವಿರಾಜತೇ।
ಮಲ್ಲಿಕಾಕುಸುಮ ಮಂಜುಭಾಷಃ॥

. . . . ತೃಪಿತಾಮಹೋಪ ನತಂ ತ್ರೈಪದ್ಯವೃದ್ಧಾಗ್ರಣಿ।
ರ್ದ್ಧೀರಾಹೋಬಲ ನಾಮಕೋವಿದ . . . . . . ।
ಗ್ವೈಭವತರ್ಕ್ಕ ಭಾಸ್ಕರ ಕುವಾಗ್ಬಗಾಶಯ ವ್ಯಂಜಿಕಾ।
ಸಾಂಖ್ಯ ತ್ರಾಸ ವಿಶೇಷಣೀ ಮುಖಿಮ . . . .॥

ಸೋಯಂ ಶ್ರೀ ಮಲ್ಲಿನಾಥಾಹ್ವಯವಿಬುಧವರಸ್ತತ್ಪೌತ್ರಃ ಕ್ಷಮಾವಾನ್
ಶಬ್ದತರ್ಕ . . . . ಪ್ರಥಿತಮ . . . . ಜ್ಜಭೃಂಗಃ
ಪ್ರಾಂಚತ್ಕರ್ನಾಟಕಭಾಷೋಭಯ ಪಟುತರ ವಾಗ್ಭಾಷ್ಯಮೇತತ್ಪ್ರಚಕ್ರೇ।
ತತ್ಪ್ರಾತೀತಾ ವೃತಾಧೀಶ್ವರ ವಿಶದಯಶಶ್ಚಂದ್ರಮಾಪೂರಪೂರ್ಣಂ॥

ಯಾವದ್ಧತ್ತೇ ಶಿರಸಿ ಗಿರಿಶೋಯಾಮಿನೀ ರಾಜರೇಖಾಂ।
ಯಾವನ್ನಂದಿಪ್ರಮಥಗಣವರಾಟ್ಕೀರ್ತಿರಾಶಾಂತರೇಷು।
ಯಾವದ್ಭಾತಿ ಕ್ಷಿತಿಧರಸುತಾ ಕಂಠದೇಶೀ ಸುಕಂಠೀ।
ತಾವತ್ಸ . . . . ಪ್ಯತಾಂ ಭಾಷ್ಯಮೇತತ್॥

ಶಾಕಾಬ್ದೇ ಶಿವಚಂದ್ರಬಾಣಹರಿಣೀನಾಥಾಂಕಕೇ ಭದ್ರಕೃ।
ದ್ವರ್ಷೇಮಾಘುವಳಕ್ಷಪಕ್ಷ ವಿಲಸತ್ಪೂರ್ಣಾಭೃಗೌವಾಸರೇ।
ಪೌಢೇ ದೇವಗುರೌಜ್ಞಗಜ್ಞನಘನಾನಂದಾಬ್ಧಿಚಂದ್ರೋಪಮಂ।
ಭಾಷ್ಯಾಂ ಸ್ಯಾದಮೃತೇಶ್ವರಸ್ಯ ಜಯತಾರಾಚಂದ್ರತಾರಾರುಣಂ॥

ಯೇ ನಿತ್ಯಂ ಗುರುಲಿಂಗಜಂಗಮ . . . . ನಾ।
ಸ್ತತೀರ್ಥಾಮರವಾಹಿನೀ ಪರಿಚರಚ್ಚಂಚನ್ಮರಾಳಾ ಘನಾಃ।
ಯೇತುದ್ವಾದಶಭೇದಭಿನ್ನ ಸಹಜಪ್ರಾಸಾದಸಂಸ್ಥಾಯಿನ।
ಸ್ತೇ ಭೂಯಾ ಸುರಶೇಷವೈಭವಯುತಾ ಲಿಂಗಾಂಗಿನಸ್ಸಂತತಂ॥

ಇತ್ಯೇವಂ ಗುರುತರ ವೀರಶೈವ ಚರ್ಯಾಮರ್ಯಾದೌ ಮಣಿ
ಮುಕುರೇಽಮೃತೇಶ್ವರಸ್ಯ ಭಾಷ್ಯೇಸ್ಮಿನ್ನಿಗದಿತಮಾಗಮಾರ್ಥರಮ್ಯಂ
. . . . ಜನವಿಹಾರಿ ಬಾಣಸಂಜ್ಞಂ ಪೂರ್ಣಂ ಚೈತದ್ಭಾಷ್ಯಂ॥"

ಈ ಉದ್ಧರಣೆಗಳಲ್ಲಿ ಕೆಲವು ಕೇವಲ 'ಮಲ್ಲಿನಾಥ' ಎಂದು, ಇನ್ನು ಕೆಲವು ಕೇವಲ 'ಮಲ್ಲಿಕಾರ್ಜುನ' ಎಂದು ಬಳಸಿದರೆ, ಶಿವಕರ್ಣಾಮೃತಟೀಕೆಯ ಆದಿಯಲ್ಲಿ 'ಮಲ್ಲಿನಾಥ' ಎಂದೂ ಅಂತ್ಯದಲ್ಲಿ 'ಮಲ್ಲಿಕಾರ್ಜುನ' ಎಂದೂ ಬಳಸಿರುವುದರಿಂದ ಟೀಕೆಗಳಲ್ಲಿ ಬರುವ ಈ ಹೆಸರುಗಳು ಒಬ್ಬನನ್ನು ಸೂಚಿಸುತ್ತಿವೆಯೆಂದು ಹೇಳಬೇಕಾಗುತ್ತದೆ.

ಅಮೃತೇಶ್ವರಭಾಷ್ಯದ ಪ್ರಕಾರ ಈ ಕವಿಗೆ ಸಪ್ಪೇಶ್ವರನೆಂಬ ಗುರುವಿನಲ್ಲಿ ಅನನ್ಯಭಕ್ತಿ. ಈ ಕಾರಣವಾಗಿಯೇ ಅಮೃತಸಪ್ಪೇಶ್ವರಭಾಷ್ಯವೆಂದು ಇದಕ್ಕೆ ಹೆಸರಿಟ್ಟುದು. ಈ ಕೃತಿಯನ್ನು ಬರೆಯಲು ಬಿನ್ನವಿಸಿಕೊಂಡವನು ಚೆನ್ನವೀರ ಹೆಸರಿನ ವ್ಯಕ್ತಿ.

ಈ ಮಲ್ಲಿಕಾರ್ಜುನನು ಅಹೋಬಲನೆಂಬ ವಿದ್ವಾಂಸನ ಮೊಮ್ಮಗಳ ಮಗನು (=ಪ್ರಪೌತ್ರ). ಚಿಕ್ಕಭೂಪಾಲನು "ದ್ವಿಪಾಂದೋಲಿಕಾಲಂಕಾರಾದಿ ಸಮಸ್ತವೈಭವ" ಅಂದರೆ ಆನೆ, ಪಲ್ಲಕ್ಕಿ, ಅಲಂಕಾರ ಮೊದಲಾದವುಗಳನ್ನು ನೀಡಿ ಈತನನ್ನು ಗೌರವಿಸಿದ್ದನೆಂದು 'ಶಿವಕರ್ಣಾಮೃತವ್ಯಾಖ್ಯಾನ' ತಿಳಿಸುತ್ತದೆ. ಈ ಕವಿಯು ತಂದೆ ಚಿಕ್ಕಭೂಪಾಲ, ಮಗ ತೋಂಟದಭೂಪಾಲ ಇಬ್ಬರ ಪ್ರೀತಿಗೂ ಪಾತ್ರನಾದವನೆಂದು ಮೇಲಿನ ಉದ್ಧರಣೆಗಳಿಂದ ವ್ಯಕ್ತವಾಗುತ್ತದೆ.

ಚೆನ್ನಮಲ್ಲೇಶ್ವರ ಶತಕದಲ್ಲಿಯ ವಿಷಯ:

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿ ಚೆನ್ನಮಲ್ಲಿಕಾರ್ಜುನಕೃತ ಚೆನ್ನಮಲ್ಲೇಶ್ವರ ಶತಕ ಹೆಸರಿನ ಪ್ರತಿಯಿದೆಯೆಂದು ಹಸ್ತಪ್ರತಿಸೂಚಿ ತಿಳಿಸುತ್ತದೆ.[೪೦] ಇದು ೧೧೩ ವೃತ್ತ ಮತ್ತು ಕೆಳಗಿನ

---

೪೦. ಮೈಸೂರು ಹಸ್ತಪ್ರತಿಸೂಚಿ I-೪೯೦.

ಶ್ರುತಿಸೂಕ್ತಿರತ್ನಮಾಲಾ
ಸ್ತುತಿಯಂ ಗುರುಕರುಣದಿಂದ ಪೇಳ್ದಂ ಸ್ವಯಶೋ।
ಜಿತ ಮಲ್ಲಿಕಾರ್ಜುನಂ ಪರಿ
ಹೃತಪರಿಮಿತ ಚೆನ್ನಮಲ್ಲಿಕಾರ್ಜುನದೇವಂ ॥

ಶಿವಮಹಿಮಾಶತಕಂ ವೈ
ಷ್ಣವ ವಾಗದ್ವೈತ ಕರ್ಮಿಗಳ ಹೃಚ್ಛಲ್ಯಂ।
ಪ್ರವರ ಶಿವಭಕ್ತ ಪರಿಷ
ದ್ಭವನದೊಳಿದು ಬೇಳ್ಪ ರತ್ನದೀಪಿಕೆಯೆನಿಕುಂ ॥

ಎಂಬ ಎರಡು ಕಂದಪದ್ಯಗಳನ್ನೊಳಗೊಂಡಿದೆ. ಇವುಗಳಲ್ಲಿ ಮೊದಲನೆಯ ಪದ್ಯವು ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದ ಕೊನೆಯ

ಕ್ಷಿತಿಪತಿ ಇಮ್ಮಡಿ ಚಿಕ್ಕಭೂಪಾಲನ
ಕೃತಿಯನುನ್ನತ ನಿಜಕೀರ್ತಿ
ಜಿತ ಮಲ್ಲಿಕಾರ್ಜುನನುರೆ ಪೇಳ್ದ ನೆರೆ ಲೋಕ।
ನುತ ಚೆನ್ನಮಲ್ಲಿಕಾರ್ಜುನನು॥

ಎಂಬ ಪದ್ಯಕ್ಕೆ ಸಮಾನವಾಗಿರುವುದರಿಂದ ಈ ಎರಡೂ ಕೃತಿಗಳ ಕರ್ತೃ ಒಬ್ಬನೇ ಆಗಿರುವ ಸಾಧ್ಯತೆ ಇದೆ.

ಆದರೆ ಮೇಲಿನ ಪದ್ಯಗಳನ್ನು ಸೂಕ್ಷ್ಮವಾಗಿ ನೋಡಿದರೆ ಕೃತಿಯ ಹೆಸರು "ಚೆನ್ನಮಲ್ಲೇಶ್ವರ ಶತಕ"ವಲ್ಲ; "ಶಿವಮಹಿಮಾಶತಕ." ಕವಿಯ ಹೆಸರು ಚೆನ್ನಮಲ್ಲಿಕಾರ್ಜುನವಲ್ಲ; ಮಲ್ಲಿಕಾರ್ಜುನವೆಂದು ಸ್ಪಷ್ಟವಾಗುತ್ತದೆ.[೪೧]

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದ ಕರ್ತೃ ಮಲ್ಲಿಕಾರ್ಜುನ:

ಈ ಕೃತಿಯನ್ನು ರಚಿಸಿದವನು ಮಲ್ಲಿಕಾರ್ಜುನನೆಂದು ಪ್ರಸ್ತುತ ಸಾಂಗತ್ಯದಲ್ಲಿ ಬರುವ

೧. "ಮಲ್ಲಿಕಾರ್ಜುನ ಪೇಳಿದ ಕಾವ್ಯದ ಸೊಬಗು"[೪೨]
೨."ಮಲ್ಲಿಕಾರ್ಜುನ ಕೃತಿ ರಸಿಕರ ಮನವನಿರ್ಕುಳಿಗೊಳ್ಳದಿಹುದೇ"[೪೩]

---

೪೧. ಕ. ಕ. ಕ. II-೨೪೬ ರಲ್ಲಿ (ಚೆನ್ನ) ಮಲ್ಲಿಕಾರ್ಜುನ ಕವಿಯ ಹೆಸರಿನಲ್ಲಿ "ಗುರುಸ್ತೋತ್ರದ ಟೀಕೆ"ಯನ್ನು ಸೂಚಿಸಿದ್ದಾರೆ. ಇದು ಸಂದೇಹ.

೪೨. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧-೮೩.

೪೩. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧-೮೪.

೨. ಆತ ನಮ್ಮೊಳು ಸವಿಮಾತನಾಡುತ ವಿ
ಖ್ಯಾತ ಚಿಕ್ಕೇಂದ್ರಚರಿತೆಯ
ಪ್ರೀತಿಯಿಂದೊಲಿದು ಪೇಳನೆ ಪೇಳ್ದೆನಿಂತಿದ
ನೋತು ಲಾಲಿಪುದು ಸಜ್ಜನರು ॥[೪೮]

೩. ಕೃತಿನಾಮ ಕರ್ಣರಸಾಯನಯಿಂತಪ್ಪ
ಕೃತಿಪತಿ ಚಿಕ್ಕಭೂವರನು ॥[೪೯]

೪. ಚಿಕ್ಕಭೂಪಾಲನ ಸದಮಳ ಚಾರುಚರುತೆ ॥[೫೦]

೫. ಪದೆದರಿ ಶಿವಭಕ್ತನ ಚಿಕ್ಕೇಂದ್ರನ
ಸದಮಲ ಸತ್ಪುಣ್ಯ ಕಥೆಯ ॥[೫೧]

೬. ಇದು ಗುರುಭಕ್ತನಿರ್ಮಡಿ ಚಿಕ್ಕಭೂಪನ
ಸದಮಳ ಪುಣ್ಯಕಥೆ . . . . ॥[೫೨]

೭. ಕೃತಿಕನ್ಯೆಯ ಸಿದ್ಧಮಲ್ಲೇಶ ಚಿಕ್ಕಭೂ
ಪತಿಗೆ ಮಾಡಿದನು ಮದುವೆಯ ॥[೫೩]

೮. ಇದು ಬಿಜ್ಜವರದಿರ್ಮಡಿ ಚಿಕ್ಕಭೂಪನ
ಸದಮಳ ಚಾರುಚಾರಿತ್ರ॥[೫೪]

೯. ಕ್ಷಿತಿಪತಿಯಿರ್ಮಡಿ ಚಿಕ್ಕಭೂಪಾಲನ
ಕೃತಿಯ . . . . . . ॥[೫೫]

ಎಂದು ಕವಿಯೇ ಹೇಳಿರುವುದರಿಂದ ಈ ಕೃತಿಯನ್ನು ನಾವು "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ" ಎಂಬ ಹೆಸರಿನಿಂದ ಕರೆದಿದ್ದೇವೆ. ಇದು ಸ್ವೀಕಾರಾರ್ಹವೂ ಸಮುಚಿತವೂ ಎಂದು ನಮ್ಮ ನಂಬುಗೆ.

ಕೃತಿ ಮಹತ್ವ: ಒಂದು ಕೃತಿ ಹಲವು ದೃಷ್ಟಿಯಿಂದ ಮಹತ್ವ ಗಳಿಸಿರುತ್ತದೆ. ಪ್ರಸ್ತುತ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ ಇತಿಹಾಸಕೃತಿಯಾಗಿ, ಕಾವ್ಯಕೃತಿಯಾಗಿ ತುಂಬ ಬೆಲೆ ಪಡೆಯುತ್ತದೆ.

ಶುದ್ಧ ಚಾರಿತ್ರಿಕ ಕಾವ್ಯರಚನಾ ಪರಂಪರೆ ಕನ್ನಡದಲ್ಲಿ ಬೆಳೆದುಬರಲಿಲ್ಲ. ಪ್ರಾರಂಭದಲ್ಲಿ ಜೈನಕವಿಗಳು ಆಶ್ರಯದಾತನನ್ನು ಪುರಾಣಪುರುಷನೊಂದಿಗೆ 'ತಗುಳ್ಚಿ ಪೇಟುವ' ಸಂಪ್ರದಾಯವನ್ನು ತೆರೆದ ಫಲವಾಗಿ ಶೂದ್ರಕ, ವಿಕ್ರಮಾರ್ಜುನ ವಿಜಯ, ಭುವನೈಕ ರಾಮಾಭ್ಯುದಯ, ಸಾಹಸಭೀಮವಿಜಯ ಮೊದಲಾದ ಕೃತಿಗಳು ಹುಟ್ಟಿ ಬಂದವು. ಆ ಮೇಲೆ ನಾಗವರ್ಮನ ಕಾದಂಬರಿ, ಆಂಡಯ್ಯನ

೪೮. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧-೬೩.
೪೯, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧-೮೮.
೫೦. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧-೯೫.
೫೧, ೫೨, ೫೩. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೯೮, ೧೦೦; ೧೭-೯೫.
೫೪, ೫೫. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೭-೯೬, ೯೭.

ಕಬ್ಬಿಗರಕಾವಗಳಂತಹ ಪರ್ಯಾಯ ಚಾರಿತ್ರಿಕ ಕಾವ್ಯಗಳು ಕಣ್ಣು ತೆರೆದವು. ಏನೆ ಬರೆಯಲಿ, ಇವರಿಗೆ ಪೌರಾಣಿಕ ಘಟನೆಯೇ ಚೌಕಟ್ಟು, ಪುರಾಣಪುರುಷರೇ ಆದರ್ಶ. ಈ ದಾರಿಯನ್ನು ಬಿಟ್ಟು ಕನ್ನಡದಲ್ಲಿ ಚಾರಿತ್ರಿಕ ಸಾಹಿತ್ಯನಿರ್ಮಾಣಕ್ಕೆ ಮನಸ್ಸು ಮಾಡಿದ ಮೊದಲಿಗರು ವೀರಶೈವ ಕವಿಗಳು. ೧೨ನೆಯ ಶತಮಾನದ ಶರಣರನ್ನು ಕುರಿತು ೧೩ನೆಯ ಶತಮಾನದ ಕವಿಗಳಾದ ಹರಿಹರ, ರಾಘವಾಂಕರಿಂದ ಚಾರಿತ್ರಿಕಸಾಹಿತ್ಯ ವಿಪುಲಪ್ರಮಾಣದಲ್ಲಿ ಸೃಷ್ಟಿಯಾಯಿತು. ತರುವಾಯ ಭೀಮಕವಿ, ವಿರೂಪಾಕ್ಷಪಂಡಿತರು ಈ ಪರಂಪರೆಯನ್ನು ಮುಂದುವರಿಸಿದರಾದರೂ ಇವರ ಕೃತಿಗಳು ಪವಾಡಕ್ಕೆ ಮನಸೋತು ಪುರಾಣ ಪೀಠವನ್ನೇರಿದವು. ಇವುಗಳನ್ನು ಬಿಟ್ಟರೆ ಕನ್ನಡದಲ್ಲಿ ಕೆಳದಿನೃಪವಿಜಯ, ಚಿಕ್ಕದೇವರಾಜ ವಂಶಾವಳಿ, ಚಿಕ್ಕದೇವರಾಜ ವಿಜಯ, ಬಿಳಗಿ ಅರಸರ ವಂಶಾವಳಿ, ಕಂಠೀರವ ನರಸರಾಜವಿಜಯ, ಕುಮಾರರಾಮನ ಸಾಂಗತ್ಯ, ಜಗದೇವರಾಯನ ಕಾವ್ಯ, ದೇವರಾಜೇಂದ್ರ ಸಾಂಗತ್ಯ, ಜಿನದತ್ತರಾಯ ಚರಿತೆ, ರಾಜನೃಪ ಚರಿತೆ, ಸರಜಾ ಹನುಮೇಂದ್ರ ಯಶೋವಿಲಾಸ, ಸಿರುಮನ ಸಾಂಗತ್ಯ, ಸೊಣ್ಣ ಭೈರೇಗೌಡನ ಚರಿತ್ರೆ, ಕೊಲ್ಲಾಪುರ ಸಾಮಂತರಾಜಚರಿತ್ರೆ ಮೊದಲಾದ ಚರಿತ್ರರೂಪದ ಕೃತಿಗಳು ಹುಟ್ಟಿವೆ. ಇವುಗಳ ಸಾಲಿನಲ್ಲಿ ನಿಲ್ಲುತ್ತದೆ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ.

ಈ ಕಾವ್ಯದಲ್ಲಿ ಬರುವ ಸ್ಥಳನಾಮ, ವ್ಯಕ್ತಿನಾಮ, ರಾಜಕೀಯ ಸಂಘರ್ಷ, ನಿರ್ಮಿಸಿದ ದೇವಾಲಯ, ನಂಬಿದ್ದ ಮೌಲ್ಯ ಮೊದಲಾದುವು ೧೬ನೆಯ ಶತಮಾನದ ಒಂದು ಪಾಳೆಯಗಾರ ಪರಿವಾರದ ಮತ್ತು ಪ್ರಜಾಪರಿಸರದ ಸ್ಪಷ್ಟ ಚಿತ್ರವನ್ನೊದಗಿಸುತ್ತವೆ. ರಾಜಧಾನಿ, ರಾಜಗೃಹ, ರಾಜಬೀದಿಗಳ ವಿವರ, ನಾಗವಾಸದ ಉಲ್ಲೇಖ, ಗುರುಸಿದ್ಧಮಲ್ಲೇಶ ಬೋಧಿಸಿದ ರಾಜನೀತಿ, ಜಂಗಮಾರ್ಚನೆ, ಅನುಭವಮಂಟಪ, ಪರನಾರಿ ಸೋದರ ರಾಮನಾಥ ಚರಿತ್ರೆಯ ಪಠನ, ಸೈನ್ಯಸಂಗ್ರಹ, ಕೋಟೆಯ ಕಾಳಗ, ಚಿನನಾಗನ ಮಸ್ತಕಾರ್ಪಣೆ, ಚೆನ್ನಬಸಮ್ಮನ ಸಹಗಮನ ಮೊದಲಾದ ಪ್ರಸಂಗಗಳು ಆ ಯುಗವನ್ನೇ ತೆರೆದು ತೋರಿಸುತ್ತವೆ. ಈ ಕೃತಿಯ ಕೇಂದ್ರವಸ್ತುವಾದ 'ಹರವೆಯ ಕಾಳಗ'ವಂತೂ ಅಂದಿನ ಪಾಳೆಯಗಾರರಲ್ಲಿ ಸಂಭವಿಸುತ್ತಿದ್ದ ಯುದ್ಧವೊಂದನ್ನು ಚಿತ್ರವತ್ತಾಗಿ ಕಣ್ಣಿಗೆ ಕಟ್ಟುತ್ತದೆ. ಈ ಎಲ್ಲ ದೃಷ್ಟಿಯಿಂದ "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ" ಬೆಲೆಯುಳ್ಳ ಚಾರಿತ್ರಿಕ ಕೃತಿಯಾಗಿ ಪರಿಣಮಿಸಿದೆ.

ಒಂದು ಕಾವ್ಯದ ಉತ್ಕೃಷ್ಟತೆ, ಕವಿಯು ಕಂಡದ್ದು ಏನು? ಕಂಡರಿಸಿದ್ದು ಹೇಗೆ? ಎಂಬ ಅಂಶಗಳನ್ನು ಅವಲಂಬಿಸಿರುತ್ತದೆ. ಈ ಎರಡೂ ಕ್ರಿಯೆಗಳು ಸಮಪ್ರಮಾಣದಲ್ಲಿ ಮೇಳವಿಸಿದರೆ ಮಾತ್ರ ಕಾವ್ಯಕ್ಕೆ ಜೀವಂತಿಕೆ ಪ್ರಾಪ್ತವಾಗುತ್ತದೆ. ಮಲ್ಲಿಕಾರ್ಜುನ ಈ ದರ್ಶನ-ಪ್ರದರ್ಶನಗಳ ಪ್ರಜ್ಞೆಯುಳ್ಳ ಕವಿ. ಆದರೆ ಪ್ರಾಚೀನ ಕನ್ನಡ ಕಾವ್ಯಗಳಲ್ಲಿಯಂತೆ ಕಾಲಧರ್ಮಕ್ಕನುಗುಣವಾಗಿ ಬಂದ ಬೇಟೆ, ವೇಶ್ಯಾವಾಟಿ, ವಸಂತಋತು, ಲಿಂಗಾರ್ಚನೆ, ಜಂಗಮಾರ್ಚನೆ, ಗುರುಬೋಧೆ ಮುಂತಾದ ಅಷ್ಟಾದಶ ವರ್ಣನೆ, ನೀತಿಬೋಧೆ ಭಾಗಗಳು ಎಷ್ಟೇ ಸುಂದರವಾಗಿದ್ದರೂ ಈ ಕೃತಿಯ "ಸಾವಯವಶಿಲ್ಪ"ಕ್ಕೆ ಭಂಗ ತಂದಿವೆ.

ಈ ಅನಿವಾರ್ಯ ದೋಷವನ್ನು ಬಿಟ್ಟರೆ ಪಾತ್ರಪೋಷಣೆ, ಕವಿಕಲ್ಪನೆ, ಮೌಲ್ಯ ನಿರೂಪಣೆಗಳಲ್ಲಿ ತುಂಬ ಸಾರ್ಥಕತೆ ತೋರಿಬರುತ್ತದೆ. ಕಾವ್ಯದ ಪ್ರಧಾನ ಅಂಗವಾಗಿರುವ ಇಮ್ಮಡಿ ಚಿಕ್ಕಭೂಪಾಲ, ತೋಂಟದರಾಯರ' ಪಾತ್ರಪೋಷಣೆಯಲ್ಲಿ ನಿರ್ವಹಿಸಿದ ಕವಿಕಾರ್ಯವು ಹೊಣೆಗಾರಿಕೆಯಿಂದ

ಕೂಡಿದುದಾಗಿದೆ. ಹೀಗಾಗಿ ಅಂತಸ್ತು, ವಯಸ್ಸುಗಳಿಗೆ ತಕ್ಕಂತೆ ಇಮ್ಮಡಿ ಚಿಕ್ಕಭೂಪಾಲನ ಪಾತ್ರ, ಧರ್ಮವೀರ-ಯುದ್ಧವೀರ ನೀತಿಗಳನ್ನು ಸಮೀಕರಿಸಿಕೊಳ್ಳುತ್ತ, ತೋಂಟದರಾಯನ ಪಾತ್ರವು ಯುವಕನ ತವಕವನ್ನು ತೋರಿಸುತ್ತ ಕಾವ್ಯದುದ್ದಕ್ಕೂ ಮುಂದುವರಿದಿವೆ.

ಅಂಗದೊಳೊಂದಿದ ಸತ್ಕ್ರಿಯ ವಿಮಲಾಂತ
ರಂಗದೊಳರಿವು ಭಾವದೊಳು
ಸಂಗೊಳಿಸಿಪ್ಪೇಕತೆಯ ನಿಜಾನಂದ
ಸಾಂಗಮಾಗಿರಲೆಸೆದಿರ್ಪ ॥[೫೬]

ಎಂಬಂತೆ ಅಂಗದ ಕ್ರಿಯೆ ಮತ್ತು ಅಂತರಂಗದ ಜ್ಞಾನಗಳನ್ನು ಭಾವದಲ್ಲಿ ಸಮನ್ವಯಗೊಳಿಸಿಕೊಂಡ 'ನಿಜಾನಂದ' ಜೀವನ ಚಿಕ್ಕಭೂಪಾಲನದು. ತ್ಯಾಗ-ಭೋಗ, ಧರ್ಮ-ರಾಜಧರ್ಮಗಳ ವ್ಯವಹಾರದಲ್ಲಿ ಶರಣಸಂಸ್ಕೃತಿಯ ಸತ್ವಪೂರ್ಣ ಯಜಮಾನನಂತೆ ಶೋಭಿಸಿ, ಕಾವ್ಯದುದ್ದಕ್ಕೂ ತುಂಬಿ ಹರಿಯುತ್ತದೆ, ಈ ಪಾತ್ರ.

ತೋಂಟದರಾಯ ತಂದೆಗೆ ತಕ್ಕ ಮಗನಾದರೂ ಪ್ರಾಯಕ್ಕೆ ತಕ್ಕ ತವಕ ಈ ಪಾತ್ರದ ಗುಣವಿಶೇಷ.

ಪರಬಲವನು ಕಂಡು ಮೈಗರೆವವನೀ
ಶ್ವರಸಮುದಾಯದ ಗಂಡ।
ವರವನಿತೆಯರ ಸಂಗಕೆ ಹೇಸದ ಭೂ
ವರರ ಗಂಡನು ತೋಟೇಂದ್ರ ॥[೫೭]

ಹೀಗೆ ಶೌರ್ಯ ಮತ್ತು ಶುಚಿತ್ವಗಳು ಈತನ ಜೀವಜೀವಾಳ. ಇವುಗಳನ್ನು ಅನುಷ್ಠಾನಗೊಳಿಸುವಲ್ಲಿ ತೋಂಟದರಾಯನಿಗೆ ಕುಮಾರರಾಮನೇ ಆದರ್ಶ. ಕುಮಾರರಾಮನಂತೆ ಆವೇಶದಿಂದ ಕೂಡಿದ ಈ 'ಅಭಿನವ ಕುಮಾರರಾಮ'ನ ದುಡುಕು, ಸಾಹಸಗಳು ಬಾಲವೀರ ಪಾತ್ರೋಚಿತವೆನಿಸಿ, ಮಹಾಭಾರತದ ಅಭಿಮನ್ಯು, ಬಭ್ರುವಾಹನರನ್ನು ನೆನಪಿಸುತ್ತವೆ.

'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ'ದ ಇನ್ನೊಂದು ಹೆಸರು 'ಕರ್ಣರಸಾಯನ.' ಈ ಮಾತಿಗೆ ಅರ್ಥ ತುಂಬುತ್ತವೆ, ತತ್ತ್ವ, ಶೃಂಗಾರ, ವೀರ ಸನ್ನಿವೇಶಗಳು. ಅರಸನ ಲಿಂಗಾರ್ಚನೆ, ಜಂಗಮಾರ್ಚನೆ, ಲಿಂಗೈಕ್ಯಪ್ರಸಂಗಗಳಲ್ಲಿ ಅನುಭಾವದ ತಿಳಿಜಲ, ತತ್ತ್ವದ ತರಂಗ ತುಂಬಿ ಸೂಸಿದುದಕ್ಕೆ

ಆನು ತಾನೆಂಬೆರಡಿಲ್ಲದ ನಿಜಲಿಂ
ಗಾನುಭಾವದ ನಿರುಗೆಯೊಳು
ಮಾನಿತ ಪರಮಸುಜ್ಞಾನಿ ಚಿಕ್ಕೇಂದ್ರನು
ತಾನಿರ್ದನತಿ ಮುದದಿಂದೆ॥[೫೮]

---

೫೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೪-೨೨.
೫೭. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೪-೬೯.
೫೮. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೦-೧೦೭.

ಮೊದಲಾದ ಪದ್ಯಗಳನ್ನು ನೋಡಬಹುದು. ಕವಿ ಮಲ್ಲಿಕಾರ್ಜುನ ಅನುಭಾವ ಕವಿಯಾದುದರಿಂದಲೇ "ಉಂಡವ ತೇಗುವಂತಾತ್ಮನ ಭಾವಿಸಿ ಕಂಡವನದ ಪೇಳಬೇಕು" ಎಂಬ ರತ್ನಾಕರವರ್ಣಿಯ ಉಕ್ತಿ ಇಲ್ಲಿ ಸಾರ್ಥಕತೆ ಪಡೆದಿದೆ. ಜಂಗಮಾರೋಗಣೆ ಪ್ರಸಂಗದಲ್ಲಿ "ಚೆನ್ನಯ್ಯನವರ ತೊತ್ತಿನ ಮಗನೆಂದೆನ್ನ ಮನ್ನಿಸಿ" ಸ್ವೀಕರಿಸಿರಿ ಎಂದು ತುತ್ತು ಹಿಡಿದು ಒತ್ತಾಯಿಸುವಲ್ಲಿ, ಚೆನ್ನಯ್ಯನು ಶಿವನಿಗೆ ಊಟ ಮಾಡಿಸಿದುದರ ಸೂಚನೆಯಿದೆ. ತೋಂಟದ ರಾಯನು ವೀರಮರಣವನ್ನಪ್ಪಿದರೂ

ನಾಕದ ಹೆಂಗಳ ಕಂಗೊಂಬನೆ ಜಗ
ದೇಕವೀರನು ತೋಟೇಂದ್ರ।
ಏಕಪತ್ನಿವ್ರತದಿಂದ ಚರಿಸಿ ಪಿ
ನಾಕಿಯ ಪದವ ಸಾರಿದನು ॥[೫೯]

ಎನ್ನುವಲ್ಲಿ ವೀರಸ್ವರ್ಗವು ವೀರಶೈವಕ್ಕೆ ವಿದೂರವೆನ್ನುವ ಭಾವ ವ್ಯಕ್ತಪಟ್ಟಿದೆ. ಚೆನ್ನಬಸವಮ್ಮ ಮಹಾಸತಿಯಾದುದನ್ನು

ಪರಮಪಂಚಾಕ್ಷರಿಯನು ಜಪಿಸುತ ಶ್ರೀ
ಗುರುಸಿದ್ಧ ಮಲ್ಲಿಕಾರ್ಜುನನ
ಚರಣವ ಮಂಡೆಯೊಳಿಟ್ಟು ಲಿಂಗವ ನೋಡಿ
ವೆರಸಿದಳಾತ್ಮವಲ್ಲಭನ॥[೬೦]

ಎನ್ನುವಲ್ಲಿ ವೀರಶೈವಕ್ಕೆ ಮಾನ್ಯವಲ್ಲದ ಸತಿಪದ್ಧತಿಯನ್ನು ಮರೆಮಾಚಲಾಗಿದೆ. ಕವಿಯು ವೀರಶೈವತತ್ತ್ವಗಳನ್ನು ಎಷ್ಟು ಸೂಕ್ಷ್ಮವಾಗಿ ಪಾಲಿಸುವನೆಂಬುದನ್ನು ಈ ಪ್ರಸಂಗಗಳು ವ್ಯಕ್ತಪಡಿಸುತ್ತವೆ.

ಕವಿಗೆ ಶೃಂಗಾರದ ಬಗ್ಗೆ ತುಂಬ ವ್ಯಾಮೋಹ. ಆದರೆ ಅದು ಉನ್ಮತ್ತ ಶೃಂಗಾರವಲ್ಲ, ಉದಾತ್ತ ಶೃಂಗಾರ. ತೋಂಟದರಾಯನ ಸತಿ ಚೆನ್ನಬಸವಮ್ಮನ ವರ್ಣನೆ, ವನಕೇಳೀ-ಜಲಕೇಳೀ ವರ್ಣನೆ, ವೇಶ್ಯಾವಾಟಿಕೆಯ ವರ್ಣನೆಗಳಲ್ಲಿ ಸಹ ಶೃಂಗಾರ ಅಡ್ಡದಾರಿ ಹಿಡಿಯುವುದಿಲ್ಲ.

ಅಳಕವಾರಡಿ ಮೊಗವಂಬುಜ ಕುಚಚಕ್ರ
ವಳಿ ತೆರೆ ಗಂಭೀರನಾಭಿ।
ಸುಳಿಯೆನಲೆಸೆಯೆ ಪೊಕ್ಕರು ಸುದತಿಯರಾ
ಕೊಳದೊಳು ಕೊಳ ಪೊಗುವಂತೆ॥[೬೧]

---

೫೯. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೫-೮೩.
೬೦. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೬-೮೫.
೬೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೮-೧೦೫.

ಕಂಗಳ ರೋಚಿ ಕದಂಪಿನ ರುಚಿ ಹಾ
ರಂಗಳ ಚಾರುಮರೀಚಿ।
ಸಂಗೊಳಿಸೆಸೆವ ಲಂತಾಗಿಯರೊಲಿದೀವ
ಮಂಗಳಾರತಿಯನೆತ್ತಿದರು॥[೬೨]

ಇಂಥ ನೂರು ನೂರು ಪದ್ಯಗಳು ಇಲ್ಲಿ ಲಭಿಸುತ್ತಿದ್ದು, ಕೆಲವು ಸಲ ಶೃಂಗಾರವು ಭಕ್ತಿಯಲ್ಲಿ ಪರ್ಯವಸಾನವಾಗುವುದಕ್ಕೆ

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳ ತಳಿರಾಗೆ ಪಾರ್ವತಿಯ।
ಲಲಿತಯೌವನವನಚೈತ್ರನೆನಿಪ ಶಿವ।
ನೊಲಿದೆಮಗೀಗೆ ರಾಗವನು॥[೬೩]

ಎಂಬ ಪದ್ಯವನ್ನು ನೋಡಬಹುದು.

ಹರವೆಯ ಕಾಳಗವೇ ಈ ಕೃತಿಯ ಕೇಂದ್ರಬಿಂದುವಾಗಿರುವುದರಿಂದ ಎತ್ತಲೂ, ವೀರರಸ ತೆರೆತೆರೆಯಾಗಿ ಕಾವ್ಯದ ಅಂಚುಗಳನ್ನು ತಟ್ಟುತ್ತದೆ.

ಮುತ್ತಿ ಮೇಲ್ವವರಿದೆಡಬಲ ಹಿಂದು ಮುಂದೆ ಬಂ
ದೊತ್ತರಿಪರಿಬಲವೆಂಬ।
ವೊತ್ತನೊತ್ತರಿಸಿದ ಕಡಲೊಳು ನೀರಳ್ಕೆ
ವೆತ್ತ ನೀರ್ಗಿಚ್ಚೆನಿಸಿದನು॥[೬೪]

ಎಂಬಂತಹ ಭಾಗಗಳಂತೂ ವೀರರಸದ ಮಡುಗಳಾಗಿ ತೋರುತ್ತವೆ. ಈ ಪ್ರಸಂಗಗಳು ದೇಶಿಯಿಂದ ಇನ್ನೂ ಉದ್ದೀಪಗೊಳ್ಳುವುದರಿಂದ, ದೇಶಿ ಬಳಕೆಯಲ್ಲಿ ಕವಿ ತುಂಬ ಶ್ರೀಮಂತನಾಗಿ ಕಾಣುತ್ತಾನೆ. ಉದಾ:

೧. ದೀಪದೊಳೊಗೆದಿಹ ದೀಪದಂದದಿ ಚಿಕ್ಕ।
ಭೂಪನಾತ್ಮಜನು ತೋಟೇಂದ್ರ।[೬೫]

೨. ಅರಸೆಂಬ ತರಸಿಗೆ ರಾಜ್ಯಬಲಗಳೆಂ।
ಬೆರಡು ಬಟ್ಟಲು ಸಮನಾಗಿ।
ಯಿರದಿರವರೊಳೊಂದು ಹೆಚ್ಚು ಕುಂದಾದೊಡೆ।
ದೊರೆತನ ನೆಲೆದಪ್ಪುವುದು॥[೬೬]

---

೬೨. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೦-೯೧.
೬೩. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ಪ್ರತಿಯೊಂದು ಸಂಧಿಯ ಅಂತ್ಯ.
೬೪. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೫-೩೯.
೬೫. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೪-೯೦.
೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೭-೮೬.

೩. ರಾಯಸಿಂಹಾಸನಕೆರಡೆಣಿಪುದು ಹೆತ್ತ।
ತಾಯ ತಬ್ಬಿದ ತೆರನಂತೆ।[೬೭]

೪. ಹುಲಿಯ ಮುರಿಯು ಹುಲು ಮೇವುದೆ।[೬೮]

೫. ಒಂದು ಕೈಯಿಂ ನಟ್ಟೆರಡು ಕೈಯಿಂ ಕೀಳು।
ವಕಿದವ ನೀನೆಸಗುವರೆ।[೬೯]

೬. ಕೆರೆಯ ನೀರನು ಕೆರೆಗಿತ್ತಪೆನೆಂದೆಂಬ ।
ತೆರನನಿದೆಲ್ಲಿ ಕಲಿತನು।[೭೦]

೭. ಟಿಟ್ಟಿಭನುರೆ ಸೊಕ್ಕಿ ಗಂಡಭೇರುಂಡನ ।
ಪಟ್ಟಕೆ ಮನವಿಡುವಂತೆ।[೭೧]

೮. ಮೇಲನರಿಯದ ನೃಪಾಲನ ಬಾಳುವೆ।
ಗಾಳಿಗೊಡ್ಡಿದ ಸೊಡರು।[೭೨]

೯. ಹಕ್ಕಿಯ ಹಿಂಡಿನೊಳಗೆ ಗಂಡುಸಾಳುವ।
ಹೊಕ್ಕಂತೆ . . . . . .।[೭೩]

೧೦. ನೆಲ್ಲಿಯ ಕಾಯಿ[ಗೆ]ಟ್ಟ ಕಲ್ಲ ಕೊಂಡಂದದೆ।
ಚಲ್ಲವರಿದುದರಿ ಕಟಕ।[೭೪]

೧೧. ಗೋಳಿಟ್ಟರಾಗ ಗೋಣೊಡೆವಂತೆ ।[೭೫]

೧೨. ಈ ಬಿರುದದು ಮಕ್ಕಳು ಕಟ್ಟಿದ ಕೆರೆಯೆ।[೭೬]

೧೩. ಬಿಲ್ಲು ಬೆಳವಲಕಾಯಿ ಪಿಡಿವಂದದೆ ನೀರ।
ಗುಳ್ಳೆಯಂತಿಹ ದೇಹವನು।[೭೭]

---

೬೭. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೨-೭೨.
೬೮. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೨-೧೦೭.
೬೯. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೪-೧೫.
೭೦. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೪-೭೧.
೭೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೪-೨೪.
೭೨. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೪-೩೫.
೭೩. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೫-೨೮.
೭೪. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೬-೨೦.
೭೫. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೬-೮೧.
೭೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೨-೧೦.
೭೭. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೨-೯.

೧೪. ಮರೆದನೆ . . . . ಹಬ್ಬದ ಕುರಿಯಂತೆ ಹೊಯಿಸಿಕೊಂಡುದನು॥[೭೮]

೧೫. ಕೊರಲ ಸತ್ವಕೆ ತಕ್ಕ ಪೊರೆಯ ಪೊರುವರ್‍ಯೆಸೆ।[೭೯]

೧೬. ಗಿರಿಜೆಯ ಕೊರಲೊಳೆಸೆವ ಮಂಗಳಸೂತ್ರ।

ವಿರುತಿಹನ್ನೆಗಮಿರುತಿರಲಿ।

ಸುರುಚಿರ ಕರ್ಣರಸಾಯನವೆನಿಪೀ ।

ವರ ಕೃತಿ . . . . . ।[೮೦]

೧೭. ಕಣ್ಣನೀರೊಳು ತೊಪ್ಪನೆ ತೋಯುತಾತನ।

ಬಣ್ಣಿಸಿಕೊಂಡೊರಲಿದರು।[೮೧]

ಈ ಮೊದಲಾದ ಪ್ರಯೋಗಗಳು, ದೇಶೀಮಟ್ಟು ಎನಿಸಿದ ಸಾಂಗತ್ಯದಲ್ಲಿ ತುಂಬ ಸೊಗಸಾಗಿ ಹೊಂದಿಕೊಂಡು, ರಚನೆಗೆ ಕಸುವನ್ನೂ ಕಾಂತಿಯನ್ನೂ ಪೂರೈಸುತ್ತಿವೆ. ಇಂಥ ಕಲ್ಪನಾರಮ್ಯತೆ, ರಚನಾಕೌಶಲಗಳಿಂದಾಗಿ 'ಕರ್ಣರಸಾಯನ' ಎಂಬ ಹೆಸರು ಕಾವ್ಯಕ್ಕೆ ತುಂಬ ಒಪ್ಪುತ್ತದೆ.

ಶರಣರ ವಚನ (೭-೧೬, ೧೯, ೨೯, ೬೭, ೧೨೦), ಸರ್ವಜ್ಞನ ವಚನ (೯-೯೬) ಮತ್ತು ರತ್ನಾಕರನ ಭರತೇಶವೈಭವ (ಜಂಗಮಾರೋಗಣೆ, ರಾಣಿಯರ ಹೂಗಾಣಿಕೆ ಸಮರ್ಪಣೆ)ಗಳ ಪ್ರಭಾವಕ್ಕೆ ಒಳಗಾಗಿದ್ದರೂ ಅವನ್ನೆಲ್ಲ ಅರಗಿಸಿಕೊಂಡು ಸ್ವತಂತ್ರಮತಿಯನ್ನು ಮೆರೆದಿದ್ದಾನೆ.

ಒಟ್ಟಿನಲ್ಲಿ, ಚರಿತ್ರೆಯ ದೃಷ್ಟಿಯಿಂದ ಎರಡೂ ಬೆಲೆಯುಳ್ಳ ಕೃತಿಗಳಾಗಿದ್ದರೂ ಕಥೆಯ ರೋಚಕತೆಯಿಂದಾಗಿ ಕುಮಾರರಾಮನ ಸಾಂಗತ್ಯ, ಕವಿತ್ವದ ಉತ್ಕೃಷ್ಟತೆಯಿಂದಾಗಿ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ ದೊಡ್ಡಬೆಲೆ ಪಡೆಯುತ್ತವೆ. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ ಸಾಂಗತ್ಯಕವಿಗಳ ಸಾಲಿನಲ್ಲಿ ಮಲ್ಲಿಕಾರ್ಜುನ ರತ್ನಾಕರನಿಗೆ ದ್ವಿತೀಯ; ಮಿಕ್ಕವರಿಗೆ ಅದ್ವಿತೀಯ.

ಛಂದಸ್ಸು: ಕನ್ನಡದಲ್ಲಿ ರಗಳೆ, ಷಟ್ಪದಿಗಳಂತೆ 'ಸಾಂಗತ್ಯ'ವೆಂಬುದು ಛಂದೋಪ್ರಕಾರವೂ ಹೌದು; ಸಾಹಿತ್ಯಪ್ರಕಾರವೂ ಹೌದು. ನಾಗವರ್ಮನಾಗಲೀ ಅವನ ತರುವಾಯದ ಛಾಂದಸಿಗರಾಗಲೀ ಇದರ ಲಕ್ಷಣ ಹೋಗಲಿ, ಹೆಸರನ್ನು ಸಹ ಹೇಳಿಲ್ಲ. ಗ್ರಂಥಸ್ಥ ಪದ್ಯಗಳನ್ನು ಗಮನಿಸಿ ಕೈಪಿಡಿಕಾರರು ಮೊದಲು ಮಾಡಿ ಇತರ ವಿದ್ವಾಂಸರು ಈ ವೃತ್ತದ ಉಗಮ, ವಿಕಾಸ, ಲಕ್ಷಣ ಇತ್ಯಾದಿಗಳನ್ನು ಚರ್ಚಿಸುತ್ತಲಿದ್ದಾರೆ. ಈ ಚರ್ಚೆ ಒಂದು ಘಟ್ಟ ಮುಟ್ಟಿ ಇತ್ತೀಚೆ ಎರಡನೆಯ ಘಟ್ಟದತ್ತ ಹೊರಳಿದೆ.

ಒಂದನೆಯ ಘಟ್ಟದ ಚರ್ಚೆ: ಸಾಂಗತ್ಯ ಗ್ರಂಥಗಳನ್ನು ಗಮನಿಸಿ, ಈ ವೃತ್ತದ ಲಕ್ಷಣವನ್ನು ಕೈಪಿಡಿಕಾರರು

---

೭೮. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೨-೭೪.

೭೯. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೪-೧೦.

೮೦. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೭-೯೪.

೮೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ; ೧೬-೬೩.

ವಿ. ವಿ. ವಿ. ವಿ.
ವಿ. ವಿ. ಬ್ರ.
ವಿ. ವಿ. ವಿ. ವಿ.
ವಿ. ವಿ. ಬ್ರ.

ಎಂದು ಸರಿಯಾಗಿಯೇ ಹೇಳಿದ್ದಾರೆ. ಆದರೆ ಸಾಂಗತ್ಯದ ಸುಗ್ಗಿಸಮಯಕ್ಕೆ ಮೊದಲು ಆಗಿಹೋದವನೆಂದು ಭಾವಿಸಲಾದ ದೇಪರಾಜನ ಸೊಬಗಿನ ಸೋನೆಯ

ವಿ. ವಿ. ವಿ. ವಿ.
ವಿ. ವಿ. ವಿ.
ವಿ. ವಿ. ವಿ. ವಿ.
ವಿ. ವಿ. ವಿ.

ಈ ವಿನ್ಯಾಸದ ವೃತ್ತಗಳನ್ನೂ ಕವಿಚರಿತೆಕಾರರು 'ಸಾಂಗತ್ಯ'ವೆಂದೇ ಕರೆದುದು ವಿದ್ವಾಂಸರು ದಾರಿತಪ್ಪುವಂತೆ ಮಾಡಿತು. ಆಗ ಈ ಸರ್ವ ವಿಷ್ಣುವುಳ್ಳುದಾಗಿದ್ದ ಸಾಂಗತ್ಯವೇ ಮುಂದೆ ೭ ಮತ್ತು ೧೪ನೆಯ ಸ್ಥಾನಗಳಲ್ಲಿ ಬ್ರಹ್ಮಗಣವಾಗಿರುವ ಸಾಂಗತ್ಯವಾಗಿ ಪರಿವರ್ತನೆಗೊಂಡಿತೆಂದು ಭಾವಿಸಿದರು. 'ಕನ್ನಡ ಛಂದೋವಿಕಾಸ' ಮೊದಲಾದ ಕೃತಿಗಳು ಈ ಅಭಿಪ್ರಾಯವನ್ನು ಮತ್ತೆಮತ್ತೆ ಪೋಷಿಸಿದವು. ಆದರೆ ಇತ್ತೀಚೆ ಸರ್ವವಿಷ್ಣುವುಳ್ಳ ದೇಪರಾಜಾದಿಗಳ ವೃತ್ತದ ಹೆಸರು 'ಸಾಂಗತ್ಯ'ವಲ್ಲ, 'ಸೊಬಗಿನ ಸೋನೆಯ ವರ್ಣ'ವೆಂದು ಹೇಳಿ ಎರಡನ್ನೂ ಪ್ರತ್ಯೇಕವಾಗಿ ಭಾವಿಸುತ್ತಲಿದ್ದಾರೆ.

ಎರಡನೆಯ ಘಟ್ಟದ ಚರ್ಚೆ: ಸೊಬಗಿನ ಸೋನೆಯ ವರ್ಣದೊಂದಿಗೆ ಏರ್ಪಟ್ಟಿದ್ದ ತೊಡಕನ್ನು ಬಿಡಿಸಿಕೊಂಡು ಇತ್ತೀಚೆ 'ಸಾಂಗತ್ಯ'ವನ್ನು ಉಗಮ, ಲಕ್ಷಣ ಇತ್ಯಾದಿ ದೃಷ್ಟಿಯಿಂದ ಈಗ ಸ್ವತಂತ್ರವಾಗಿ ಚರ್ಚಿಸುತ್ತಲಿರುವರು. ಈ ವಿಷಯವಾಗಿ ಪ್ರೊ. ಎಚ್. ದೇವೀರಪ್ಪ ಅವರು ನೀಡಿದ ಕೆಳಗಿನ ನಿರ್ಣಯ ತುಂಬ ಉಪಯುಕ್ತವೆನಿಸಿದೆ.:[೮೨]

ವಿ ವಿ
ಗುರುಸೋಮ । ನಾಥನ।

ವಿ ವಿ
ಕರುಣದಿಂ । ಭೈರವೇ ।

ವಿ ವಿ ಬ್ರ
ಶ್ವರನ ಚ। ರಿತೆ ಪಂಚ । ಸಂಧಿ ।

---

೮೨. ಎಚ್. ದೇವೀರಪ್ಪ: ಸಾಂಗತ್ಯ-ಷಟ್ಪದ (ಸಾಧನೆ ೨-೨)

ವಿ ವಿ
ವರವೃತ್ತ । ಮೈದು ಸಾ ।

ವಿ ವಿ
ವಿರದ ಮೇ । ಲಿನ್ನೂರು ।

ವಿ ವಿ ಬ್ರ
ಭರಿತ ಷ । ಟ್ಪದಮಿದು। ಗಣನೆ॥

೧೬ನೆಯ ಶತಮಾನದ ಕಿಕ್ಕೇರಿ ನಂಜುಂಡಾರಾಧ್ಯ ತನ್ನ ಭೈರವೇಶ್ವರ ಕಾವ್ಯ (೫೧-೬೧)ದಲ್ಲಿ ಇಂಥ ಪದ್ಯಗಳನ್ನು ಬಳಸಿ "ಷಟ್ಪದ" ಎಂದು ಕರೆದಿರುವನು. ಇಂಥ ಪದ್ಯಗಳಿಂದ ಕಟ್ಟಲಾದ ಬೇರೆ ಕೃತಿಗಳೆಂದರೆ ಸತ್ಯೇಂದ್ರಚೋಳಸಾಂಗತ್ಯ, ದೀಪದ ಕಲಿಯರ ಕಾವ್ಯ ಮತ್ತು ಕರಸ್ಥಲ ನಾಗಲಿಂಗನ ಚರಿತ್ರೆ. ಈ ಪದ್ಯಜಾತಿಯನ್ನು ಬಹುಶಃ 'ಸಾಂಗತ್ಯ' ಹೆಸರಿನ ರಾಗದಲ್ಲಿ ಹಾಡುತ್ತಿರಬಹುದು. ಇತ್ತೀಚಿನ ಸಾಂಗತ್ಯ ಕೃತಿಗಳ ಹಸ್ತಪ್ರತಿಗಳ ಆದಿಯಲ್ಲಿ ರಾಗ "ಸಾಂಗತ್ಯ" ಎಂದು ಬರೆದುದು ಈ ಅಂಶವನ್ನು ಬೆಂಬಲಿಸುತ್ತದೆ. ಇದರಿಂದಾಗಿ 'ಷಟ್ಪದ'ಕ್ಕೆ 'ಸಾಂಗತ್ಯ' ಎಂಬ ಪರ್ಯಾಯನಾಮ ರೂಢವಾಗಿ 'ಷಟ್ಪದ' ಎಂಬುದು ನಿಂತುಹೋಗಿರಬೇಕು. ಇದಲ್ಲದೆ ವಿ. ವಿ.। ವಿ. ವಿ. । ವಿ. ವಿ. ರು। ಈ ವಿನ್ಯಾಸದ ವೃತ್ತಕ್ಕೆ ಇರುವ 'ಷಟ್ಪದಿ' ಹೆಸರು ಮತ್ತು ಈ 'ಷಟ್ಪದ' ಹೆಸರುಗಳಲ್ಲಿಯ ಉಚ್ಚಾರಸಾದೃಶ್ಯದ ಭ್ರಾಂತಿಯನ್ನು ತಪ್ಪಿಸುವುದಕ್ಕೋಸುಗ 'ಷಟ್ಪದ' ಎಂಬುದನ್ನು ಬಿಟ್ಟುಕೊಟ್ಟು 'ಸಾಂಗತ್ಯ' ಎಂಬ ಹೆಸರನ್ನೇ ಹೆಚ್ಚು ಹೆಚ್ಚು ಬಳಸತೊಡಗಿರಬೇಕು.

ಕಾಲಕ್ರಮದಲ್ಲಿ ಆರು ಪಾದಗಳ ಈ ಪದ್ಯವನ್ನು ನಾಲ್ಕು ಪಾದಗಳಲ್ಲಿ ಬರೆಯಲು ಪ್ರಾರಂಭಿಸಿದ ಫಲವಾಗಿ ೨ ಮತ್ತು ೫ನೆಯ ಪಾದಗಳು ಮಧ್ಯದಲ್ಲಿ ಬಂದು, ತಮ್ಮ ಪ್ರಾಸವನ್ನು ಕಳೆದುಕೊಂಡಿರಬೇಕು.

ಶಿಶುಮಾಯಣನ 'ಅಂಜನಾಚರಿತೆ' ಮೊದಲಾದ ಕೃತಿಗಳಲ್ಲಿ ಇಂಥ ಒಳಪ್ರಾಸವುಳ್ಳ ಹಾಗೂ ಒಳಪ್ರಾಸವಿಲ್ಲದ ಎರಡೂ ಬಗೆಯ ಸಾಂಗತ್ಯಗಳು ಸಿಗುವುದನ್ನು ಇಲ್ಲಿ ನೋಡಬಹುದು.

ಇಳೆಯೆಂಬ ಸತಿಗಜ। ಪೊಳೆವ ಪಚ್ಚೆಯ ಛತ್ರ ।
ಗಳನು ನಿರ್ಮಿಸಿದನೆಂಬಂತೆ।
ಪಲವು ಪೊಂಬಾಳೆಯ । ತಳೆದು ಪೂಗಾಳಿಗ।
ಳಲಘು ಫಲದಿನೊಪ್ಪುತಿಹವು॥[೮೩]

ಅಂಜನಾಚರಿತವೆಂದೆಂಬ ನಾಮವು ಕೃತಿ
ಗೆಂಜಲಲ್ಲನ್ವರ್ಥಕವು ।

---

೮೩. ಕ.ಕ.ಚ.I. (೧೯೬೧), ಪುಟ. ೪೦೬.

ಕಂಜಭವನ ರಾಣಿಯ ನಯನದೊಳೆಸೆ।
ವಂಜನವಾದ ಕಾರಣದೆ॥[೪೪]

ಒಟ್ಟಿನಲ್ಲಿ ಒಳಪ್ರಾಸದ ಸಾಂಗತ್ಯದಿಂದ ಒಳಪ್ರಾಸವಿಲ್ಲದ ಸಾಂಗತ್ಯಗಳು ಹುಟ್ಟಿಕೊಳ್ಳುವಲ್ಲಿ, ಮೂಲತಃ ಇದು "ಆರು ಪಾದಗಳ ಪದ್ಯ" ಎಂಬ ಅಂಶವೇ ಮರೆತುಹೋಗಿ, ನಾಲ್ಕು ಪಾದಗಳ ಒಳಪ್ರಾಸವಿಲ್ಲದ ಸಾಂಗತ್ಯಗಳು ರೂಢಗೊಂಡಿರಬೇಕೆಂದು, ಈ ವರೆಗಿನ ಚರ್ಚೆಯಿಂದ ಸಿದ್ಧವಾಗುತ್ತದೆ.

ಸಾಂಗತ್ಯ ಇಷ್ಟು ರುಚಿಕಟ್ಟಾದ ಬಂಧವಾಗಿದ್ದರೂ ಇದರ ಪ್ರಾಚೀನತೆ ದೂರ ಹೋಗದುದು ವಿದ್ವಾಂಸರಿಗೆ ಯೋಚನೆಗೀಡು ಮಾಡಿದೆ. ಆದರೆ ಒಳಪ್ರಾಸವುಳ್ಳ ಸಾಂಗತ್ಯಪದ್ಯ (ಷಟ್ಪದ)ದ ಸುಳುಹು ಚಂದ್ರರಾಜನ (ಕ್ರಿ.ಶ. ೧೦೨೫) ಮದನತಿಲಕದಲ್ಲಿಯೇ ದೊರೆಯುತ್ತಿದೆ. ಅಲ್ಲಿ ಬರುವ

ಅಂಗನೃಪಾಯತಿ ತುಂಗಭುಜಂ ಕಲಿಯಂಗಿತ ಶಿಕ್ಷಿತನಿಂದುಯಶಂ
ಪಿಂಗಜದೊಂಗತ ಭೃಂಗಕಚಂ ಕಲಿ ಮಂಗಳಲಕ್ಷಣಯುಕ್ತನಿವಂ
ಸಂಗರಕೇಸರಿ ಸಂಗಗುಣಂ ಬಲಿ ಭೃಂಗರದಕ್ಷನುವಾಯತನುಂ
ಸಂಗದ ಸನ್ಮತಿರಂಗವಹಂ ಸಲೆ ಭಂಗಿಯನೀಕ್ಷಿಸಿ ಮಾಚನೃಪಂ॥

ಎಂಬ ಪದ್ಯದಿಂದ ಅನೇಕ ವೃತ್ತಗಳ ಜೊತೆ 'ಎರಡುಂ ಷಟ್ಪದಿಯುಂ' ಹೊರಡುವವೆನ್ನುತ್ತಾನೆ, ಚಂದ್ರರಾಜ. ಈ ಮಾತಿಗೆ ಈ ವರೆಗೆ ವಿದ್ವಾಂಸರು "ಒಂದು ಬಗೆಯ ಎರಡು ಷಟ್ಪದಿಗಳು" ಎಂದು ಅರ್ಥ ಹಚ್ಚಿ

ಅಂಗನೃಪಾಯತಿ	ಸಂಗರ ಕೇಸರಿ
ತುಂಗಭುಜಂ ಕಲಿ	ಸಂಗಗುಣಂ ಬಲಿ
ಯಂಗಿತ ಶಿಕ್ಷಿತನಿಂದುಯಶಂ।	ಭೃಂಗರದಕ್ಷನುವಾಯತನುಂ।
ಪಿಂಗಜದೊಂಗತ	ಸಂಗದ ಸನ್ಮತಿ
ಭೃಂಗಕಚಂ ಕಲಿ	ರಂಗವಹಂ ಸಲೆ
ಮಂಗಳ ಲಕ್ಷಣಯುಕ್ತನಿವಂ॥	ಭಂಗಿಯನೀಕ್ಷಿಸಿ ಮಾಚನೃಪಂ ॥

ಎಂದು ಒಂದೇ ಬಗೆಯ ಎರಡು ಷಟ್ಪದಿಗಳನ್ನು ಹೊರಗೆ ಹಿರಿಯುತ್ತಾರೆ. ಆದರೆ ಎಚ್. ದೇವೀರಪ್ಪನವರು ಇದಕ್ಕೆ ''ಎರಡು ಬಗೆಯ ಎರಡು ಷಟ್ಪದಿಗಳು'' ಎಂದು ಅರ್ಥ ಹಚ್ಚಿ - ಕೆಳಗಿನಂತೆ ಇನ್ನೊಂದು ಬಗೆಯ ಎರಡು ಷಟ್ಪದಿಗಳನ್ನು

II.	ಅಂಗನೃಪಾಯತಿ	ಸಂಗರಕೇಸರಿ
	ತುಂಗಭುಜಂ ಕಲಿ	ಸಂಗಗುಣಂ ಬಲಿ
	ಯಂಗಿತ ಶಿಕ್ಷಿತನಿಂದು।	ಭೃಂಗರದಕ್ಷನುವಾಯ।

೪೪. ಕ.ಕ.ಚ.I. (೧೯೬೧), ಪುಟ. ೪೦೭.

ಪಿಂಗಜದೊಂಗತ। ಸಂಗದ ಸನ್ಮತಿ
ಭೃಂಗಕಚಂ ಕಲಿ ರಂಗವಹಂ ಸಲೆ
ಮಂಗಳ ಲಕ್ಷಣಯುಕ್ತ॥ ಭಂಗಿಯನೀಕ್ಷಿಸಿ ಮಾಚ॥

ಹೀಗೆ ಹೊರಗೆ ಹಿರಿಯುತ್ತಾರೆ.

ಈ ಎರಡೂ ವೃತ್ತಗಳಿಗೆ ಚಂದ್ರರಾಜನು ಕ್ರಮವಾಗಿ ಷಟ್ಪದಿ, ಷಟ್ಪದ ಎನ್ನದೆ "ಎರಡು ಷಟ್ಪದಿ" ಎಂದಿರುವುದನ್ನು ಗಮನಿಸಿದರೆ, ಆತನ ಕಾಲಕ್ಕಾಗಲೇ ಹೆಸರಿನ ಬಗ್ಗೆ ಉಚ್ಚಾರಸಾಮ್ಯದ ಭ್ರಾಂತಿಯಿಂದ ತಪ್ಪು ಕಲ್ಪನೆ ಉಂಟಾಗಿದ್ದಿತೆಂದು ತೋರುತ್ತದೆ. ಇದೆಲ್ಲವನ್ನು ಅವಲೋಕಿಸಿದರೆ ಒಳಪ್ರಾಸದ ಸಾಂಗತ್ಯ (=ಷಟ್ಪದ)ವು ೧೧ನೆಯ ಶತಮಾನಕ್ಕೆ ಹಿಂದೆಯೇ ಪ್ರಚಾರದಲ್ಲಿದ್ದು, ಮುಂದಿನ ಅವಧಿಯಲ್ಲಿ ಒಳಪ್ರಾಸರಹಿತ ಸಾಂಗತ್ಯವಾಗಿ ಮಾರ್ಪಟ್ಟಿತೆಂದು ಹೇಳಬೇಕಾಗುತ್ತದೆ.

ಪ್ರಸ್ತುತ 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ' ಒಳಪ್ರಾಸವಿಲ್ಲದ ಸಾಂಗತ್ಯವೆನಿಸಿ, ಸಾಹಿತ್ಯದೃಷ್ಟಿಯಿಂದ ಮೋಹನತರಂಗಿಣಿ, ಭರತೇಶವೈಭವ, ಹದಿಬದೆಯ ಧರ್ಮಗಳ ಸಾಲಿನಲ್ಲಿ ನಿಲ್ಲುತ್ತದೆ. ಉದಾ:

೧. ದುರ್ಜನ ಲೋಕವಿಸರ್ಜನ ಕುಸುಮಶ
ರಾರ್ಜುನ ಕಾನನ ದಹನ।[೮೫]

೨. ಆ ಪಟ್ಟಣಕಧಿಪತಿಯಾಗಿಹ ಚಿಕ್ಕ
ಭೂಪ ರೂಪಿನೊಳಿಕ್ಷುಚಾಪ ॥[೮೬]

೩. ಬಗಸೆಗಂಗಳೊಳು ಬಟ್ಟಾಡುವ ಕಂಬನಿ
ಯೊಗುತಿರೆ ಜನನಿ ಲಿಂಗಮ್ಮ।[೮೭]

೪. ಆರತಿಯೆತ್ತಿದರಾ ರತಿರಾಜನ
ಸೂರೆಗೊಂಬುವ ಚದುರೆಯರು।[೮೮]

ಮೊದಲಾದ ರಚನೆಗಳಲ್ಲಿಯ ಸಹಜತೆ, ಸೊಬಗು ಈತನ ಛಂದೋಪ್ರಭುತ್ವವನ್ನು ಸೂಚಿಸುತ್ತವೆ. ಸಾಮಾನ್ಯ ಕಾವ್ಯದಂತೆ ಲಯದ ತಂತಿಯಲ್ಲಿ ಪದಗಳು ಪವಣಿಕೆಯಾಗುತ್ತ ಹೋಗದೆ, ಭಾವವು ಭಾಷೆಯಲ್ಲಿ ಹೆಪ್ಪುಗಟ್ಟುತ್ತ ನಡೆದ ರೀತಿ, ಅನೇಕ ಕಡೆಗಳಲ್ಲಿ ಓದುಗನ ಅನುಭವಕ್ಕೆ ಬರುತ್ತದೆ.

---

೮೫. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೧-೪.
೮೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೪-೨.
೮೭. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೧೨-೧೦೮.
೮೮. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ: ೧೨-೧೨೧.

೪. ಕಥಾಸಾರ

೧. ಸಲಹು ಮಹಾಗುರು ಚೆನ್ನಮಲ್ಲೇಶ:

'ಸಲಹು ಮಹಾಗುರು ಚೆನ್ನಮಲ್ಲೇಶ' ಎಂದು ಭಕ್ತಿಯಿಂದ ಮಣಿದು, ಶಿವ ಪಾರ್ವತಿ ನಂದಿ ವೀರಭದ್ರ ಷಣ್ಮುಖರನ್ನು ಕವಿಯು ತನ್ನ ಹೃದಯಕಮಲಕ್ಕೆ ಆಹ್ವಾನಿಸಿಕೊಳ್ಳುತ್ತಾನೆ. ಇವರೆಲ್ಲರೂ 'ಪಾಲಿಪುದೀ ಕೃತಿಯ' ಎಂಬುದು ಅವನ ಪ್ರಾರ್ಥನೆ. 'ವೀರಶೈವಾಚಾರವನವನಿಯೊಳುದ್ಧರಿಸಿದ' ಬಸವದಂಡೇಶ ಮತ್ತು ಚೆನ್ನಬಸವಣ್ಣನವರನ್ನು, 'ಪರಮಲಿಂಗಾಂಗಸಂಗಾನುಭವವ ಶಿವಶರಣಸಂತತಿಗೆ' ಬೋಧಿಸಿದ ಪ್ರಭುದೇವ ಮಡಿವಾಳಮಾಚಿದೇವ ಮಾದಿರಾಜ ಹೊಡೆಹುಲ್ಲಬಂಕಣ್ಣ ಸಿದ್ಧರಾಮ ಉರಿಲಿಂಗಪೆದ್ದಿ ಹಡಪದಪ್ಪಣ್ಣ ಕಿನ್ನರಿಬೊಮ್ಮಣ್ಣ ಮೊದಲಾದ ಶಿವಶರಣರನ್ನು, ಅಕ್ಕನಾಗಲೆ ಚೋಳಿಯಕ್ಕ ಮುಕ್ತಾಯಿ ಸತ್ಯಕ್ಕ ಚೆಂಗಳೆ ವೈಜಕವ್ವೆ ಅಕ್ಕಮಹಾದೇವಿ ಅಮ್ಮವ್ವೆ ಪೊದಳಿನಿಂಬಕ್ಕ ಮೊದಲಾದ ಶಿವಶರಣೆಯರನ್ನು, ಪಾಲ್ಕುರಿಕೆ ಸೋಮೇಶ್ವರ ಭೀಮಕವಿ ಚಾಮಯ್ಯ ಹರಿಹರ ಪದ್ಮರಸ ರಾಘವಾಂಕ ಮೊಗ್ಗೆಯ ಮಾಯಿದೇವಾದಿ ಶಿವಕವಿಗಳನ್ನು, ಲೋಕಪ್ರಸಿದ್ಧನಾದ ತೋಂಟದಸಿದ್ಧನನ್ನು, ಸಪ್ಪೇಶ್ವರ ಒಪ್ಪತ್ತಿನ ಚೆನ್ನಬಸವೇಶ್ವರ ಬೋಳಬಸವಾದಿ ವಿರಕ್ತರನ್ನು ತ್ರಿಕರಣಪೂರ್ವಕ ಸ್ತುತಿಸುತ್ತಾನೆ.

'ಗುರುಲಿಂಗಜಂಗಮಭಕ್ತಿಯುಕ್ತ'ನಾದ ಬಿಜ್ಜಾವರದಿರ್ಮಡಿ ಚಿಕ್ಕನು ಪರಬಲದೊಳು ಕಾದಿಮೆರೆದು 'ಆತ್ಮಜ ಸಹ ಹರನೊಳೊಂದಿದ' ಸಂಗತಿಯನ್ನು ಗುರುಸಿದ್ಧಮಲ್ಲಿಕಾರ್ಜುನನ ಸೂಚನೆಯ ಮೇರೆಗೆ ವರ್ಣಕ ಕವಿಗಳ ಮಾರ್ಗದಲ್ಲಿ ರಚಿಸುವುದಾಗಿ ಕವಿ ತಿಳಿಸುತ್ತಾನೆ. ಸಹೃದಯರು ಈ ಕೃತಿಯ ಗುಣವನ್ನು ಗ್ರಹಿಸಿ, ದೋಷವನ್ನು ಮನಮೆಚ್ಚಿದಳ ಅಳಕವ ತಿದ್ದುವಂತೆ ತಿದ್ದಬೇಕೆಂದು ಕೇಳಿಕೊಂಡು, ಕೃತಿಪತಿ ಚಿಕ್ಕಭೂವರ, ಕೃತಿಯ ಪಾಲಿಸುವವರು ಈಶ್ವರ ಭಕ್ತರು- ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ಇದು ಶಿವಭಕ್ತ ಇಮ್ಮಡಿ ಚಿಕ್ಕಭೂಪಾಲನ ಸದಮಲ ಸತ್ಪುಣ್ಯ ಕಥೆ. ಈ ಕೃತಿಯನ್ನು ವಾಚಿಸುವವರು ರಸಿಕರು, ಭಾವಜ್ಞರು, ಬಲ್ಲ ಬಲ್ಜಾಣರು, ಅಸಮ ಕೋವಿದರು. ಕೇಳುವವರು ಚರಲಿಂಗಭಕ್ತರು, ಶರಣರು, ನಿರಪಮಚರಿತರು, ಸದ್ಗುಣಚರಿತರು - ಎಂದು ಈ ಕವಿ ತನ್ನ ಶಿವಕಾವ್ಯದ ಅಗ್ಗಳಿಕೆಯನ್ನು ಸಾರಿಸಾರಿ ಹೇಳುತ್ತಾನೆ.

೨. ಆ ನಾಡು ಸೊಗದೆ ನಾಕಕೆ ಬೀಡು:

'ಅವನಿವನಿತೆಯುಟ್ಟ ಚಿತ್ರಾಂಬರ'ದಂತೆ ಸಮುದ್ರ ಕಂಗೊಳಿಸುತ್ತದೆ. 'ಭೂನಾರಿ ಸಂತಸದಿಂದ ತಾನೊಲ್ದು ತಳೆದ ಪೊಂಗಳಸ'ದಂತೆ ಕಾಣುವ ಮೇರುಪರ್ವತವು, ವಿದ್ಯಾಧರ ಗಂಧರ್ವಯಕ್ಷ ಸುರುಚಿರರತ್ನ ಸುಧಾನಿರ್ಜರವಾಹಿನಿ ಸುರಮಿಥುನ ಸಿದ್ದರುಗಳಿಂದ ತನ್ನ ವೈಭವವನ್ನು ಹೆಚ್ಚಿಸಿಕೊಂಡಿದೆ. ಈ ಮೇರುಪರ್ವತದ ದಕ್ಷಿಣದಿಕ್ಕಿನಲ್ಲಿ ರಮಣೀಯವಾಗಿ ಬೆಳಗುತ್ತಿರುವ ಕನ್ನಡದೇಶದಲ್ಲಿ 'ಮಲೆಯೆಲ್ಲ ಮಲಯಜಗರು, ಚರಿಸುವ ಮೃಗಕುಲವೆಲ್ಲ ಕತ್ತುರಿ ಮೃಗವು, ಶಿಲೆಯೆಲ್ಲ ಪರುಷ, ಪಶುಗಳೆಲ್ಲ ಸುರಧೇನು, ಜಲವೆಲ್ಲ ಸುಧೆ.' ಕನ್ನಡ ನಾಡಿನಲ್ಲಿರುವ ಹಳ್ಳಿಗಳೂ ಅಗ್ರಹಾರಗಳೂ 'ವಿತರಣ ಕಾರ್ಯ ವಿದ್ಯಾದಿಸದ್ಗುಣ'ರಾದ ಸಜ್ಜನರಿಂದ, 'ಪತಿಭಕ್ತಿ ರೂಪ ಶೀಲ'ವತಿಯರಾದ ಸತಿಯರಿಂದ ತುಂಬಿತುಳುಕುತ್ತಿವೆ. ಇಲ್ಲಿಯ ಜಲಸಂಪತ್ತು ವನಸಂಪತ್ತು ಪಕ್ಷಿಸಂಪತ್ತು ಅಪೂರ್ವವಾದುವು. ನೀರೆರೆವ ಕೋಮಲಾಂಗದ ನಿತಂಬಿನಿಯರಿಂದ ಹಾಗೂ ರಸಿಕ ಪಥಿಕರಿಂದ ಸೊಬಗುವಡೆದ ಕನ್ನಡದೇಶ, ಸ್ವರ್ಗವನ್ನು

ಸ್ಪರ್ಧಿಸುವಂತಿದೆ. ಹೀಗೆ ಮನೋಹರವಾಗಿ ಕಂಗೊಳಿಸುವ ಕನ್ನಡ ನಾಡಿನಲ್ಲಿ ಶೋಭಿಸುತ್ತಿದೆ, ಬಿಜ್ಜಾವರ.

೩. ಆ ಪೊಳಲ ವೈಭವವನೇನೆಂಬೆ:

ಕನ್ನಡನಾಡಿನ ಶಿರೋರತ್ನವಾಗಿರುವ ಬಿಜ್ಜಾವರವು ನದಿ, ಕೆರೆ, ವನ, ಬೆಳೆ, ಸರೋವರಗಳ ಸಂಪತ್ತಿನಿಂದ ಮೆರೆಯುತ್ತಿದ್ದಿತು. ಈ ನಗರದ ಹೊರವಲಯದಲ್ಲಿರುವ ಉದ್ಯಾನವು 'ಮೀನಕೇತನ ಚಕ್ರವರ್ತಿಯ ನಿಜರಾಜಧಾನಿ' ಎನಿಸಿದ್ದಿತು. ಅದು ಪಲಸು, ತೆಂಗು, ಚೆಂದೆಂಗು, ಆಡುವ ನವಿಲು, ಪಾಡುವ ಕೋಗಿಲೆ, ಕಳಹಂಸೆ, ಮದಾಳಿ, ತಿಳಿಗೊಳ, ಪ್ರಿಯ-ಪ್ರಿಯೆರಿಂದ ಪರಿಶೋಭಿಸುತ್ತಿದ್ದಿತು. ಬಿಜ್ಜಾವರ ನಗರವನ್ನು, ಬಟ್ಟದೆನೆ, ಮುತ್ತಿನದೆನೆ, ಪುಲಿಮೊಗ, ಗೋಪುರ, ಕೊತ್ತಳ, ಅಳ್ವೇರಿಗಳಿಂದ ಕೂಡಿದ ಅಭೇದ್ಯವಾದ ಕೋಟೆ ಸುತ್ತಿಕೊಂಡಿದ್ದಿತು. ಒಳಗೆ ಅಂಗಸಾಧನೆಯಲ್ಲಿ ನಿರತರಾದ ಕಡುಗಲಿಗಳ ಗರಡಿಮನೆಗಳಿದ್ದವು. ಇಕ್ಕೆಲಗಳಲ್ಲಿ ತುಂಬುಲಿಗರಂಗಡಿ, ಕಂಚಿನಂಗಡಿ, ಗಂಧದಂಗಡಿ, ರನ್ನದಂಗಡಿ ಮೊದಲಾದ ಅಂಗಡಿ ಸಾಲುಗಳಿದ್ದವು. ಸೂಳೆಗೇರಿ ನಾಗವಾಸದ ಕೇರಿಗಳೂ ಅಲ್ಲಿದ್ದವು. ಇವುಗಳಲ್ಲದೆ ಆರ್ಯಮಂಡಲವನು ಚುಂಬಿಸುವ ರಾಯರಾವುತ, ಮಾವುತ, ಪಟುಭಟ, ರಾಯಭಾರಿ, ದಂಡನಾಯಕ, ಮಂತ್ರಿ, ಮಂಡಲೇಶ್ವರ, ಮನ್ನೆಯ, ಕವಿ, ಗಮಕಿ, ವಾದಿ, ವಾಗ್ಮಿ, ಶಿವಭಕ್ತ, ಸೇವಕ, ಮಾಗಧ ಮೊದಲಾದವರ ಕರುಮಾಡಗಳು ಆ ನಗರದ ಸೌಂದರ್ಯವನ್ನು ಸಾರುತ್ತಿದ್ದವು.

ಕರಣಿಕಶಾಲೆ, ಭಂಡಾರಶಾಲೆ, ವಾಗಲಶಾಲೆ, ಚಿತ್ರಶಾಲೆ, ಶಯನಶಾಲೆ, ಭೋಜನಶಾಲೆಗಳಿಂದ ಅರಮನೆ ರಾರಾಜಿಸುತ್ತಿದ್ದಿತು. ಅಲ್ಲಿಯ ಭವನಗಳು 'ಪವಳದ ಕಂಬ, ಪಚ್ಚೆಯ ತೊಲೆ, ಪಳುಕಿನ ಬೋದಿಗೆ, ಮರಕತದ ಮೇಲ್ವಲಗೆ, ನೀಲದ ನೆಲಗಟ್ಟು'ಗಳಿಂದ ಶೋಭಿಸುತ್ತಿದ್ದವು. ಹೀಗೆ ಸಂಪತ್ತಿನ ನೆಲೆವೀಡಾದ ಅರಮನೆ, ವೈಭವದ ಶಿಖರವಾಗಿ ಪ್ರಕಾಶಿಸುತ್ತಿದ್ದಿತು.

ಇಂಥ ಅರಮನೆಯಿಂದ ಕೂಡಿದ ಬಿಜ್ಜಾವರದಲ್ಲಿ ವೇದಘೋಷ, ಮಂಗಳತೂರ್ಯ, ತುರಗ ಹೇಷಾರವ, ಗಜಧ್ವನಿ ಎಡಬಿಡದೆ ಕೇಳಿಬರುತ್ತಿದ್ದವು. ಈ ಪಟ್ಟಣದ ನಿವಾಸಿಗಳು ಶಿವಭಕ್ತರು, ನೀತಿವಂತರು, ದಾನಿಗಳು, ಸಜ್ಜನರು, ಜ್ಞಾನಿಗಳು, ಸುಖಿಗಳು ಮತ್ತು ಪರಮಶಿವಾನುಭಾವಿಗಳು. ಪಟ್ಟಣವು 'ಸಿರಿವೆಣ್ಣಿನ ನೆಲೆವನೆ, ಶಿವಭಕ್ತಿಯ ಹರವರಿ, ನೀತಿಯ ನೆಲೆ, ನಿಪುಣತೆಯ ತಾಯ್ವನೆ, ಪ್ರೀತಿಯ ಗೊತ್ತು' ಆಗಿದ್ದಿತು.

೪. ಇಮ್ಮಡಿ ಚಿಕ್ಕಭೂಪನಿಗೆ ಪಡಿಗಾಣೆನವನಿಪರೊಳಗೆ:

ಬಿಜ್ಜಾವರ ಪಟ್ಟಣಕ್ಕಧಿಪತಿಯಾಗಿದ್ದವ ಚಿಕ್ಕಭೂಪ. ರೂಪಾನ್ವಿತೆ ಹಾಗೂ ಪತಿಭಕ್ತಿ ಸಂಪನ್ನಳಾದ ಸೋಮಾಂಬೆ ಈತನ ಕುಲವಧು. ಈ ರಾಜದಂಪತಿಗಳ ಕುಮಾರ ಇಮ್ಮಡಿ ಚಿಕ್ಕೇಂದ್ರ. ರೂಪ, ಗುಣ, ಶೀಲಸಂಪನ್ನನಾದ ರಾಜಕುಮಾರನ ಗುರು ಪವಾಡದೇವ. ಗುರುಸೇವೆ, ಲಿಂಗಪೂಜೆ, ಜಂಗಮದಾಸೋಹ ಈತನ ನಿತ್ಯಕರ್ಮಗಳು. ಮನ, ಬುದ್ಧಿ, ಪ್ರಾಣ, ಚಿತ್ತಗಳಲ್ಲಿ ಶಿವಧ್ಯಾನ ಶಿವಚಿಂತನೆಗಳು ನೆಲೆಗೊಂಡು 'ಶಿವಶರಣರೆ ಗತಿ, ಶಿವಶರಣರೆ ಮತಿ, ಶಿವಶರಣರೆ ಬಂಧುಬಳಗ'ವೆಂಬ ಭಾವನೆ ಈತನಲ್ಲಿ ಜ್ವಲಿಸುತ್ತಿದ್ದಿತು. ಸಹಜಭಕ್ತಿಯಿಂದ ತನುಮನಧನಗಳನ್ನು ಗುರುಲಿಂಗಜಂಗಮಕ್ಕೆ ಅರ್ಪಿಸಿದ ಅವನದು 'ಲಿಂಗಸಹಿತ ನಡೆ, ಲಿಂಗಸಹಿತ ನುಡಿ, ಲಿಂಗಸಹಿತ ಮಾಳ್ಪದೆಲ್ಲ.' ಹೀಗೆ ಅಂತರಂಗ-ಬಹಿರಂಗಗಳಲ್ಲಿ ಶಿವಜ್ಞಾನ ಶಿವಾಚಾರಗಳನ್ನು ಸಂಗಮಿಸಿಕೊಂಡಿದ್ದವನು, ಇಮ್ಮಡಿ ಚಿಕ್ಕಭೂಪಾಲ.

ಭರತನ ನೀತಿ, ಧರ್ಮರಾಜನ ಸದ್ಧರ್ಮತೆ, ವರಮನುಗಳ ಸನ್ಮಾರ್ಗ, ತರಣಿಜನ ಔದಾರ್ಯಗಳು ಈ ರಾಜಕುಮಾರನ ವ್ಯಕ್ತಿತ್ವದ ರಜತರೇಖೆಗಳೆನಿಸಿದ್ದವು.

ಶೈಶವದಲ್ಲಿಯೇ ಉತ್ತಮ ಸಂಸ್ಕಾರದಲ್ಲಿ ಬೆಳೆದ ಇಮ್ಮಡಿ ಚಿಕ್ಕಭೂಪಾಲನು ಧರ್ಮವೀರನಾಗಿದ್ದಂತೆ ಯುದ್ಧವೀರನೂ ಆಗಿದ್ದನು. ಜಗದೇಕರಾಯನ ಕೂಡ ಕದನವನ್ನು ಕೈಕೊಂಡು ವಿಜಯನಗರದ ಅರಸು ವೆಂಕಟಪತಿರಾಯನ ಮೆಚ್ಚುಗೆ ಗಳಿಸಿದ್ದನು. ಅಳಿಯ ಎಲ್ಲೇಂದ್ರನನ್ನು, ಹಾವಳಿಯ ಭೈರಭೂಪನ ಗಡಿದುರ್ಗವಾದ ಮಿಡಿಗೇಶಿಯನ್ನು ಲೀಲಾಜಾಲವಾಗಿ ಜಯಿಸಿದ ವೀರನೀತ. ಸ್ವಾಮಿದ್ರೋಹಿಯ ಗಂಡ, ನೀತಿಯ ಬಿಟ್ಟು ಭೂಮಿಯನಾಳ್ವರ ಗಂಡ, ತಾಮಸದಿಂದುಕ್ಕಿ ಸೊಕ್ಕಿ ಮುಂಗಾಣದ ಭೂಮಿಪಾಲರ ಗಂಡ-ಎಂದು ಈತನು ಪ್ರಸಿದ್ಧನಾಗಿದ್ದನು. ಈ ದಾನವಿನೋದಿಯ ನಿತ್ಯದಾನದ ಎದುರು ಕಲ್ಪವೃಕ್ಷವೂ ಅಳುಕುತ್ತಿದ್ದಿತು. ಹೀಗೆ ಧರ್ಮವೀರ, ಯುದ್ಧವೀರ, ದಾನವೀರನಾಗಿದ್ದ ಇಮ್ಮಡಿ ಚಿಕ್ಕಭೂಪತಿಯ ಪಟ್ಟದರಸಿ ಚೆನ್ನಾಜಮ್ಮ. ಈ ರಾಜದಂಪತಿಗಳ ಉದರದಲ್ಲಿ 'ದೀಪದೊಳೊಗೆದಿಹ ದೀಪದಂದದಿ' ತೋಟೇಂದ್ರ ಜನಿಸಿದನು. ಇವನಲ್ಲಿ 'ಕಾಮನ ಚೆಲ್ವು, ಸುತ್ರಾಮನ ವೈಭವ, ರಾಮಭದ್ರನ ವಿಖ್ಯಾತಿ, ಭೀಮನದಟು, ಸೋಮನ ಶಾಂತಿ' ನೆಲೆಗೊಂಡಿದ್ದವು. ಈತನು 'ಗುರುಭಕ್ತಿಯೊಳು ಕಾಮಿ, ದುರತಾದಿಯೊಳು ಕ್ರೋಧಿ'ಯಾಗಿ ಶಸ್ತ್ರವಿದ್ಯೆ, ಗಜವಿದ್ಯೆಗಳಲ್ಲಿ ಪಳಗಿ, ಕಡಲಿನ ಗಾಂಭೀರ್ಯ, ಜಲದ ಪಾವಿತ್ರ್ಯಗಳನ್ನು ಮೈಗೂಡಿಸಿಕೊಂಡು ತಂದೆಯಂತೆ ಅಪ್ರತಿಮ ಶೌರ್ಯ-ಸಾಹಸಿಯಾಗಿ ಬೆಳೆದನು.

೫. ಜಾಣ ತೋಟೇಂದ್ರನ ರಾಣಿಯ ಬಣ್ಣಿಸಲಳವೆ:

ನೂತನ ರತಿದೇವಿಯೆನಿಸಿದ ಚೆನ್ನಬಸವಮ್ಮ ತೋಟೆಂದ್ರನ ಪಟ್ಟಮಹಿಷಿ. ನಾರಿಕುಲ ಶಿರೋಮಣಿಯಾದ ಈಕೆಯ ರೂಪರಾಶಿ ದೇವಕನ್ನಿಕೆಯರನ್ನೂ ಮೀರಿಸುವಂತಿದ್ದಿತು. ಶೃಂಗಾರಸಾಗರದ ಅಧಿದೇವತೆಯೆನಿಸಿದ್ದ ಚೆನ್ನಬಸವಮ್ಮನ ಪಾದ, ಉಗುರು, ತೊಡೆ, ನಡು, ಪೊಕ್ಕಳ, ವಕ್ಷ, ನಿತಂಬ, ಮುಖ, ಕಣ್ಣು, ಕುಂತಳ, ತೋಳ, ಹಸ್ತಗಳಲ್ಲಿ ಗಟ್ಟಿಗೊಂಡ ಚೆಲುವಿನ ಮಿಂಚು ಕಣ್ಣು ಕೋರೈಸುವಂತಿದ್ದಿತು. ಇವಳ ನಡೆಯೆಲ್ಲವತಿ ಮೃದು, ನುಡಿಯೆಲ್ಲ ಸವಿ, ಮೊಗವೆಲ್ಲ ನಗೆಗಣ್ಣು. ಚಾರುಚರಿತೆಯೂ ಪರಮಪತಿವ್ರತೆಯೂ ಹರಭಕ್ತಿಸಂಯುತೆಯೂ ಆದ ಈ ಸೀಮಂತಿನಿಯರ ಸೀಮಂತಮಣಿ ಚೆನ್ನಬಸವಮ್ಮ ಹಾಗೂ ಯುವರಾಜ ಶಿರೋಮಣಿ ತೋಟೇಂದ್ರರು ಲತಾಂತ ಮಾರ್ಗಣಕೇಳಿಯಲ್ಲಿ ಸುಖಮಯವಾಗಿ ಕಾಲ ಕಳೆಯುತ್ತಿದ್ದರು.

೬. ತೋಟೇಂದ್ರ ನಡೆದ ಬೇಟೆಗೆಂದು:

ವಿಲಾಸ, ವೈಭವಗಳಿಂದ ಕೂಡಿದ ಸುಕುಮಾರ ತೋಟೇಂದ್ರನಿಗೆ ಅರಮನೆಯ ಕ್ರೀಡೆಗಳಲ್ಲಿ ಹೊತ್ತು ನೂಕುವುದು ಬೇಸರವೆನಿಸಿ, ಬೇಟೆಗೆ ಹೋಗಲು ನಿರ್ಧರಿಸಿದ. ಪ್ರವಾಹರೂಪದಲ್ಲಿ ಬಂದು ಸೇರಿದ ಸಿಂಗ ಸಿರುಮ ನಾಳ ಮಲೆಯ ಬುಸುವ ಚಿನ್ನರಂಗ ರಟ್ಟುಡಿಕೆಂಪ ದಿಮ್ಮ ಕೆಂಗ ಕಸವ ಕಾಚ ಕಾಟ ಕಮರ ಗಿಡ್ಡವೆಂಗ ಪೆದ್ದುಗ ಚಿಕ್ಕ ಕರಿಯ ಚಿನ್ನಚಿನ್ನೋಬ ಕೋಡಂಗಿ ಲಕ್ಕ ಲಕುಮ ರೊಡ್ಡತಿಮ್ಮ ಬೊಕ್ಕ ಬೋಳೇದಿಮ್ಮ ಮೊದಲಾದ ಬೇಡರೊಂದಿಗೆ ತೋಟೇಂದ್ರನು ಕುದುರೆಯನ್ನೇರಿ ಬೇಟೆಗೆ ನಡೆದನು.

ಗವಿ, ಶೈಲ, ಕಮ್ಮರಿ, ಹಾಸರೆ, ಹರಿವ ನದಿಗಳಿಂದ ಶೋಭಿಸುತ್ತಿದ್ದ ಮದ್ದಗಿರಿ ತಪ್ಪಲಿನ ಹಿಂದಿರುವ ಕಾನನ ಪಾದಪ ಗುಲ್ಮ ಲತಾ ಮೃಗ ಖಗ ಪೂರವದಿಂದ, ವನಕರಿ ಖಗಮೃಗನಿಚಯ

ನಿಸ್ವನದಿಂದ ರುದ್ರಭಯಂಕರವಾಗಿ ತೋರುತ್ತಿದ್ದಿತು. ಭೋರಿಡುವ ಈ ಅಡವಿಯನ್ನು ಭಿಲ್ಲರ ತಿಂತಿಣಿಸಮೇತ ಪ್ರವೇಶಿಸುವಲ್ಲಿ, ತುರುವಿಂಡುಗಳ ಗೋಪಿಯರ ಗಡಣದ ಮನೋಹರ ದೃಶ್ಯಗಳು ಕಣ್ಣನ್ನು ಸೆಳೆಯುತ್ತಿದ್ದವು. ಇದನ್ನು ದಾಟಿ ನಟ್ಟಡವಿಯಲ್ಲಿ ನಡೆದ ಶಬರರು 'ಎಕ್ಕಲನೂರಿದೆಡೆ, ಸೊಕ್ಕಾನೆ ಕಲಕಿದ ಕೊಳ, ಮೊಲ ಮಲಗಿದ ತಾಣ, ಹುಲ್ಲೆಯ ಹುಲಿ ಮುರಿದೆಡೆ'ಗಳನ್ನು ನೋಡುತ್ತ, ನಡೆ, ಹೆಜ್ಜೆವಿಡಿ, ಸುರುವಂ ಕಟ್ಟು, ಸುನಿಗಳನ್ನು ಬಿಡು, ಹುಲಿಯ ಹೊಕ್ಕಿರಿ, ಸರಲಂ ತುಡು' ಎಂದು ಸಾರುವಲ್ಲಿ ಹುಯ್ಯಲು ಅಡವಿಯನ್ನು ವ್ಯಾಪಿಸಿತು. ತೊತ್ತಳದುಳಿಯುತ್ತ ಬೇಟೆಯಲ್ಲಿ ನಿರತರಾದ ಬೇಡರು ಮೊಲ, ಹಕ್ಕಿ, ಹುಲ್ಲೆ, ಹುಲಿ, ಹೆಬ್ಬುಲಿಗಳನ್ನು ಹೊಕ್ಕಿರಿದರು. ಇಂಥ ಬೇಡಪಡೆಯನ್ನು ಅಂಜಿಸಿ ಆಹುತಿ ತೆಗೆದುಕೊಳ್ಳುತ್ತಲಿದ್ದ ಸೊಕ್ಕಿದ ಎಕ್ಕಲನನ್ನು ಯುವರಾಜ ತೋಟೇಂದ್ರ ನೆಲಕ್ಕುರುಳಿಸಿದನು. ಹೀಗೆ ಬೇಟೆಯ ತೃಷೆಯನ್ನು ಹಿಂಗಿಸಿಕೊಂಡ ರಾಜಕುಮಾರ, ಕಾಡಮೃಗಗಳನ್ನು ಹೊತ್ತು ನಡೆವ ಶಬರರ ಸಮೇತ, ಸಂಭ್ರಮ ಸಡಗರದಿಂದ ನಗರಕ್ಕೆ ಬಂದನು.

೭. ಸದ್ಗುರುರಾಯ ಪರಮಾನಂದದಿ ಕುವರಗಿಂತೆಂದ:

ಮರುದಿನ ಕುಮಾರ ತೋಟೇಂದ್ರನು ಗುರುಪದದರ್ಶನಾರ್ಥ ಅರಮನೆಯಿಂದ ಹೊರಟನು. 'ಮಣಿಮಂಟಪದ ಸುಖಾಸನದೊಳು ಶಿವಗಣತಿಂತಿಣಿಯ ಮೇಳದೊಳು' ರಾರಾಜಿಸುತ್ತಿರುವ ಗುಣಮಣಿಭೂಷಣನಾದ ಗುರುಸಿದ್ಧ ಮಲ್ಲಿಕಾರ್ಜುನನನ್ನು ಕಂಡು, ಭಕ್ತಿಭಾವದಿಂದ ನಮಸ್ಕರಿಸಿದವನು. ಕುವರನ ಶಿರವಿಡಿದು ಮೇಲಕ್ಕೆತ್ತುತ್ತ ಗುರುರಾಯನು 'ನಿನ್ನ ವರ್ತನೆ ವಿಕರಿಸಿತು. ಜೂಜು ಬೇಂಟೆಗಳಾದಿಯಾದ ದುರ್ವ್ಯಸನಗಳು ಶಿವಪಥದಲ್ಲಿ ನಡೆಯುವವರಿಗೆ ಉಚಿತವಲ್ಲ' ವೆಂದು ಎಚ್ಚರಿಸಿದನು. ಬೇಟೆಯಾಡಿದ ಪಾಂಡುಭೂಪಾಲ, ದಶರಥ, ಪರೀಕ್ಷಿತರು ದುರ್ಧರಸ್ಥಿತಿಯನ್ನು ಅನುಭವಿಸಿದರು. ಮಾಂಡವ್ಯ, ಭೃಗು, ಕೃಷ್ಣ, ದಕ್ಷರು ಹಿಂಸಾಪರವಾಗಿ ಬಾಳಿದುದರಿಂದ ಅನೇಕ ಸಂಕಷ್ಟಗಳಿಗೆ ತುತ್ತಾದರು. ಆದುದರಿಂದ 'ನೋವು ಸಮಾನವಖಿಲಜೀವಜಾಲಕ ಸಾವು ಸಮಾನ' ಎಂದು ತಿಳಿಹೇಳಿ, 'ಕೊಲ್ಲದಿರ್ಪುದೆ ಧರ್ಮ'ವೆಂಬುದು ಶಿವಧರ್ಮದ ಸೂತ್ರವಾಗಿದೆಯೆನ್ನುತ್ತ, ಹಿಂಸಾನಿರಸನದ ಅನೇಕ ಹಿತವಚನಗಳನ್ನು ಕುವರನಿಗೆ ವಿವರಿಸಿದರು. ಸದ್ಗುರುರಾಯನ ನುಡಿಗಳನ್ನು ಕೇಳಿದ ತೋಟೇಂದ್ರ. ತನ್ನ ತಪ್ಪನ್ನು ಒಪ್ಪಿಕೊಂಡು, ಬಿಡಬೇಕಾದುದಾವುದದನ ಬಿಡಿಸುತೆ, ಪಿಡಿಯಬೇಕಾದುದ ಪಿಡಿಸಿ, ನಡೆಯಬೇಕಾದ ಧರ್ಮದೊಳೆನ್ನನು ಮುನ್ನಡೆಸಿ, ರಕ್ಷಿಸಿಬೇಕೆಂದು ಪ್ರಾರ್ಥಿಸಿದನು. ಆಗ ಗುರು ಮಲ್ಲಿಕಾರ್ಜುನನು ಅಧರ್ಮವನ್ನು ಬಿಟ್ಟು, ಧರ್ಮವನ್ನು ಹಿಡಿದು ಶಿವಭಕ್ತಿಮಾರ್ಗದಲ್ಲಿ ನಡೆಯುವ ಪರಿಯನ್ನೂ 'ಹುಸಿಯನಾಡುವವನೇ ಶುದ್ಧ ಹೊಲೆಯನು, ದಯವೆ ಧರ್ಮದ ಮೊತ್ತಮೊದಲ್, ಇಂದ್ರಿಯಂಗಳ ಜಯವೇ ಪರಮನಿಜಸುಖವು. ಸತ್ಯವೇ ಜಪ, ಶಾಂತಿಯೇ ತಪ, ಚಿತ್ತಶುದ್ಧವೇ ನಿರ್ಮಳಭಾವ, ಶಿವಸಾಹಿತ್ಯವೇ ನಿಶ್ಚಲಯೋಗ' ಎಂಬ ನೀತಿಸೂಕ್ತಿಗಳನ್ನೂ ಬೋಧಿಸಿದನು. ಈ ಮಾತುಗಳನ್ನು ಆಲಿಸಿ, ಗುರುವಿನಿಂದ ಬೀಳ್ಕೊಂಡು ತೋಟೇಂದ್ರನು ಅರಮನೆಗೆ ನಡೆದನು.

೮. ಎಳಸಿ ಬಸಂತನೆಯ್ತಂದ:

ನವಕಂದರ್ಪ ಕುಮಾರ ತೋಟೇಂದ್ರನು ಯೌವನವೈಭವಲೀಲೆಯಲ್ಲಿಯೂ, ತಂದೆ ಇಮ್ಮಡಿ ಚಿಕ್ಕಭೂಪಾಲನು ರಾಜವೈಭವಲೀಲೆಯಲ್ಲಿಯೂ ಇರುತ್ತಿರಲು, ವಸಂತನ ಆಗಮನವನ್ನು ಸೂಚಿಸುವಂತೆ 'ಮಾಮರದೊಳು ಕುಡಿ ಮೊನಚಿತು.'ಮಾಧವಿಯ ನನೆದೊಂಗಲ ಕಾಣಿಸಿತು. ಇಂಥ ವಸಂತ ಕಾಲದಲ್ಲಿ

ಇಮ್ಮಡಿ ಚಿಕ್ಕಭೂಪಾಲನ ಓಲಗಕ್ಕೆ ವನಪಾಲಕನು ಬಂದು, 'ಇನಿವಣ್ಗಳ ಬಿಣ್ಪೊನೆಯ'ನರ್ಪಿಸಿ, "ಪೋದುದು ಮಾಗಿ, ಬಂದುದು ಸಮಸಮಯ, ಉದ್ಯಾನವಿನೋದಕ್ಕೆ ಮನವನೀವುದೊಲಿದು" ಎಂದು ಬಿನ್ನವಿಸಿದನು. ವನಪಾಲಕನ ನುಡಿಯನ್ನು ಆಲಿಸಿದ ಅರಸನು ಪಟ್ಟದರಾಣಿ, ಸಹಭೋಗಿನಿಯರ ತಂಡದೊಡನೆ ಪಟ್ಟದಾನೆಯನೇರಿ ವನಕ್ಕೆ ಹೊರಟನು. 'ತಳಿರ ತೋರಣ, ಪಿಕರವ ಕಹಳಾರವ, ಗಿಳಿ ನಲ್ನುಡಿ ನುತಿಯಾಗೆ, ನಲಿದು ವಸಂತನಿದಿರುಗೊಳುತಿರೆ' ಪರಿವಾರದೊಂದಿಗೆ ವನವನ್ನು ಪ್ರವೇಶಿಸಿದನು. ವನದಲ್ಲಿರುವ ಸುರೆಗಿ, ಸಂಪಗೆ, ಇರವಂತಿಗೆ, ಅಸುಗೆ, ಪಾದರಿ, ಪದ್ಮಳಿ, ಪಚ್ಚೆ, ದವನ, ಮರುಗ, ಮಲ್ಲಿಗೆ, ಮೊಲ್ಲೆ, ಗೋರಂಟೆ ಹೂಗಳೂ ತೆಂಗು, ಬಾಳೆ, ಮಾವು, ಮಾದಳ, ರಸದಾಳಿಂಬ ಗಿಡಗಳೂ ಕಾಸಾರ, ಕಳಹಂಸ ಮಿಥುನಗಳೂ ಮನವನ್ನು ಸೂರೆಗೊಳ್ಳುತ್ತಿದ್ದವು. ಅಲ್ಲಿಯ ವಿಲಾಸಮಂಟಪದ ಹೂವಿನ ಹಾಸಿಗೆಯ ಮೇಲೆ ಅರಸನು ಮಂಡಿಸಲು, ತಾಮರಸಾಕ್ಷಿಯರು ಒನಪು, ಒಯ್ಯಾರಗಳಿಂದ ಚಂಪಕ, ಪುನ್ನಾಗ, ಹೊಂಗೇದಗೆ, ಮಡಿವಾಳ, ಮಲ್ಲಿಗೆ, ಮರುಗ, ದವನಗಳನ್ನು ಸಂಗ್ರಹಿಸಿದರು. ಬಳಿಕ ಅರಸನ ನೀರಾಟದಲ್ಲಿ ಪಾಲ್ಗೊಂಡರು. ಜಲಕ್ರೀಡಾತೃಪ್ತನಾದ ಅರಸನಿಗೆ ಹೂವಿನ ಕಟಕ, ಹೂವಿನ ಕರ್ಣಭೂಷಣ, ಹೂವಿನ ಕಂಠಮಾಲೆ, ಹೂವಿನ ಸೂಡಂಗಮಾಲೆ ಮೊದಲಾದ ತೊಡಿಗೆಗಳನ್ನು ತೊಡಿಸಿ 'ಅಲರ ಕಠಾರವ ಕೈಗೊಳಿಸುತೆ, ಕಮ್ಮಲರ ಚಾಮರವ ಢಾಳಿಸುತೆ, ಅಲರ ಸತ್ತಿಗೆಯನೆತ್ತಿದರು.' ಹೀಗೆ ಇಮ್ಮಡಿ ಚಿಕ್ಕಭೂಪಾಲನು ವಸಂತಕೇಳಿಯಲ್ಲಿ ನಲಿದು, ವಿನೋದದಿಂದ ಸಮಯ ಕಳೆದು, ವನದಿಂದ ಹೊರಟು ಅರಮನೆಯನ್ನು ಸೇರಿದನು.

೯. ಬೆಳುದಿಂಗಳು ನಾಡೆ ರಂಜಿಪುದು:

ಚಿಕ್ಕೇಂದ್ರನು ವಸಂತಕೇಳಿಯನ್ನು ಮುಗಿಸಿ, ಅರಮನೆಯನ್ನು ಪ್ರವೇಶಿಸಿ, ಸುಖದಿಂದಿರಲು ಸಂಜೆಗೆಂಪು ತೋರಿ 'ಈ ವಿಶ್ವವನೆಲ್ಲವನಂಜನದಿಂದೆ ವಿಧಿ ರಚಿಸಿದ' ಎನ್ನುವಂತೆ ಕತ್ತಲೆ ದಟ್ಟವಾಗಿ ಆವರಿಸಿತು. ಅಷ್ಟರಲ್ಲಿ ರಾತ್ರಿರಮಣಿಯ ಗರ್ಭವನ್ನು ಸೀಳಿ ಚಂದ್ರಬಿಂಬ ಕಾಣಿಸಿಕೊಂಡಿತು. ಲಿಂಗಾರ್ಚನೆ ಮುಗಿಸಿ, ಲಿಂಗಪ್ರಸಾದ ಸ್ವೀಕರಿಸಿದ ಅರಸು ಚಿಕ್ಕಭೂಪಾಲನು ವಿದೂಷಕನೊಡನೆ ನಗರಶೋಧನೆಗೆಂದು ರಾಜಬೀದಿಯಲ್ಲಿ ನಡೆದನು. ಮನಾನಂದವನ್ನುಂಟುಮಾಡುವ ಹೂವಿನ ಅಂಗಡಿಗಳನ್ನು ದಾಟಿ, 'ಸರಸಭುಜಂಗರ ಸೊಗದಾಣ' ಎನಿಸುವ ಸೂಳೆಗೇರಿಯನ್ನು ಪ್ರವೇಶಿಸಿದನು. 'ನೋಟದಿಂ ವಿಟರನೊಳಗುಮಾಡಿಕೊಂಡು ಒಯ್ಯಾರದ ನಟನೆ, ಮುರುಕದ ನಸುನಗೆಯಿಂದ' ಶೋಭಿಸುವ ವಾರವಧುಗಳೂ, 'ಸನ್ನೆಯಜಿಯದ ಸರಸವಜಿಯದ ಕನ್ನೆ'ಯರೂ ರಾಜನ ಕಣ್ಣಿಗೆ ರಂಜನೆಯನ್ನುಂಟು ಮಾಡಿದರು. ಹೀಗೆ ರಾಜಬೀದಿ, ವೇಶ್ಯಾವಾಟಿಗಳಲ್ಲಿ ವಿಹರಿಸಿದ ಬಳಿಕ, ತನ್ನ ಜೊತೆಯಿದ್ದವರನ್ನು ಕಳುಹಿಸಿ ಅರಮನೆಗೆ ಬಂದು, ಶಿವಧ್ಯಾನಗೈದು ಮಣಿಮಂಚದಲ್ಲಿ ಸುಖದಿಂದ ಮಲಗಿದನು.

೧೦. ಜಯಜಯ ಶಂಕರ ದುರಿತ ಭಯಂಕರ:

ನಿದ್ರೆ ತಿಳಿದ ಧರಣೀಶ್ವರ ಚಿಕ್ಕೇಂದ್ರನು, ಹೃದಯಸಿಂಹಾಸನದಲ್ಲಿ ಶ್ರೀಗುರು ಪಾದಪದ್ಮಂಗಳನು ಅರ್ಚಿಸುತ್ತಿರಲು, ಗಂಧರ್ವಸಮಗಾಯಕಿಯರು ಹೇಳುತ್ತಿದ್ದ ಸುಪ್ರಭಾತವನ್ನು ಕೇಳುತ್ತ ಎದ್ದು, ಪಂಚಾಕ್ಷರಮಂತ್ರವನ್ನು ಉಚ್ಚರಿಸುತ್ತ, ಮಂಚವನ್ನಿಳಿದು ಸ್ನಾನಗೃಹಕ್ಕೆ ಹೊರಟನು. ಸ್ನಾನ ಮುಗಿಸಿ, ದುಕೂಲವನ್ನುಟ್ಟು, 'ಗುರುಪಾದಪದ್ಮವೆ ಪೂಜೆಗೆ ಮೊದಲ್' ಎನ್ನುತ್ತ, ಗುರುವನ್ನು ಭಕ್ತಿಭಾವದಿಂದ ಸ್ತುತಿಸಿ, ನಮಸ್ಕರಿಸಿ ಶಿವಲಿಂಗಾರ್ಚನಮಂದಿರವನ್ನು ಪ್ರವೇಶಿಸಿದನು. ಲಿಂಗವನ್ನು 'ನಡೆನೋಡುತ್ತಿಂತು

ಕೊಂಡಾಡುತವುರ್ದಪ್ಪಿ ಬಿಡದೆ ಮುಂಡಾಡಿ ಮುದ್ದಿಸುತೆ' ಲಿಂಗಸುಖದಲ್ಲಿ ತಲ್ಲೀನನಾಗಿ, ಮೃಡಮೂರ್ತಿಯನ್ನು ಕುರಿತು 'ಎನ್ನ ಕುಲವೆ, ಎನ್ನ ಛಲವೆ, ಎನ್ನ ಪುಣ್ಯವೆ' ಎಂದು ಮನದುಂಬಿ ಹಾಡಿ ಹೊಗಳಿದನು. ಹೀಗೆ ಸಮರಸ ಶಿವಯೋಗಾನಂದವನ್ನು ಹೊಂದಿ, 'ಆನು ತಾನೆಂಬೆರಡಿಲ್ಲದ ನಿಜಲಿಂಗಾನುಭಾವದ ನಿರುಗೆಯೊಳು' ಬೆರೆದನು.

೧೧. ಪರತತ್ತ್ವವೆನಿಸಿತು ಜಂಗಮವು:

ಅರಸು ಚಿಕ್ಕೇಂದ್ರನು ಅತ್ತ ಶಿವಪೂಜೆಯಲ್ಲಿ ನಿರತನಾಗಿರಲು, ಅರಸುಕುಮಾರ ತೋಟೇಂದ್ರನು ಇತ್ತ ಜಂಗಮದ ಅನುಭವಮಂಟಪಕ್ಕೆ ನಡೆದನು. 'ಕಮನೀಯ ಶಿವಲಾವಣ್ಯದಿಂದೊಪ್ಪುವ, ಪರಮಪುರಾತನ ಶಿವಶರಣರ ಭಾಸುರ ದಿವ್ಯಚಾರಿತ್ರಗಳ, ಹರಲೀಲಾಕಥನಂಗಳನೋದುವ ಜಂಗಮರನ್ನು ಕಂಡು ಭಕ್ತಿಭಾವದಿಂದ ನಮಸ್ಕರಿಸಿ, ಶಿವಭಿಕ್ಷಕೆ ಅರಮನೆಗೆ ದಯಮಾಡಿಸಲು ಬಿನ್ನವಿಸಿ, ಅತ್ಯಂತ ವೈಭವದಿಂದ ಅರಮನೆಗೆ ಕರೆತಂದನು. ರಾಜದಂಪತಿಗಳಿಬ್ಬರೂ ಜಂಗಮರನ್ನು ಸಾತ್ವಿಕ ಭಕ್ತಿಯಿಂದ ಸ್ವಾಗತಿಸಿ, ಪಾದ ತೊಳೆದು ನಮಸ್ಕರಿಸಿ, ಭೋಜನಶಾಲೆಗೆ ಕರೆದೊಯ್ದರು. ಲಿಂಗಾರ್ಚನೆಯ ನಂತರ ಮೇದಿನೀಪತಿ ತೋಟೇಂದ್ರನು ಜಂಗಮರ ಪಾದಪೂಜೆಯನ್ನು ಕೈಕೊಂಡು, ಪಾದತೀರ್ಥವನ್ನು ಸೇವಿಸಿದನು.' ಆಮೇಲೆ ರಾಣಿ ಹಾಗೂ ರಾಜಪರಿವಾರ ಸ್ತ್ರೀಯರು 'ಚಿಲುಪಾಲು ಸಕ್ಕರೆ, ಕೆಂಡದ ರೊಟ್ಟಿ, ಇಮ್ಮಾವಿನ ತನಿವಣ್ಣರಸಾಯನ' ಮೊದಲಾದವುಗಳನ್ನು ಜಂಗಮರಿಗೆ ಶಿವಭಾವದಿಂದ ಉಣಬಡಿಸಿದರು. ಆರೋಗಣೆ ಮುಗಿಯುವಲ್ಲಿ ಅರಸುಕುಮಾರನು ಪಟ್ಟಾವಳಿ, ದುಕೂಲ, ದಿವ್ಯಾಂಬರ, ರತ್ನಾಭರಣಗಳಿಂದ ಅವರನ್ನು ಸಿಂಗರಿಸಿ, ಕಣ್ತುಂಬ ನೋಡಿ, ಪರಮತೃಪ್ತಿಯನ್ನು ಪಡೆದನು. ಸಂತೃಪ್ತರಾದ ಜಂಗಮರು ಶಿವಭಕ್ತ ತೋಟೇಂದ್ರನನ್ನು ಆಶೀರ್ವದಿಸಿ ತಮ್ಮ ನಿಲಯಕ್ಕೆ ಮರಳಿದರು.

೧೨. ಜಯವನಿತೆಯನು ಮೆಚ್ಚಿಸಿಕೊಂಬುದೆಂದಾದಪುದೊ:

ಕುಮಾರ ತೋಟೇಂದ್ರನು ಸರಸ ಸತ್ಕಾವ್ಯಗೋಷ್ಠಿಯಲ್ಲಿರಲು ಪಾಠಕನೊಬ್ಬನು ಬಂದು, ಅವನಿಗೆ 'ಪರವೆಂಗಳ ಸೋದರ ರಾಮನ ಚರಿತೆ'ಯನ್ನು ಓದಿಹೇಳುತ್ತಾನೆ. ಇದನ್ನು ಕೇಳಿದ ಅರಸುಕುಮಾರನು ರಾಮನಂತೆಯೇ 'ತೊಡಗಿದ ರಣದೊಳು ಮೀಸೆ ಮೂಡದ ಮುನ್ನ ಕಡಿದಾಡುತೊಡಲನೀಡಾಡಿ ಮೃಡನ ಮೆಚ್ಚಿಪೆನು' ಎಂಬ ವೀರಪ್ರತಿಜ್ಞೆ ಮಾಡಿದನು. ಬಳಿಕ ಸದನಕ್ಕೆ ಹೋಗಿ ಇಷ್ಟಲಿಂಗವನ್ನು ಅರ್ಚಿಸುತ್ತ, 'ನಿನಗುಸುರಲೇನುಂಟೆನ್ನೆದೆಗೊಂಡಿರ್ಪಭಿಮತವ ಮುದದಿಂದ ಕೊಡು' ಎಂದು ಬಿನ್ನವಿಸಿಕೊಂಡ ಸಂದರ್ಭದಲ್ಲಿ, ಹಾವಳಿ ಭೈರೇಂದ್ರನ ಚಿತ್ತದಲ್ಲಿ ಪೆನುಗೊಂಡೆಯನ್ನು ಜಯಿಸಬೇಕೆಂಬ ವಿಷಲತೆ ಪಲ್ಲವಿಸಿ, ಪಸರಿಸಿತು. ಅದರ ಫಲವಾಗಿ ಪೆನುಗೊಂಡೆಯನು ಗೆದ್ದು, ಅನೇಕ ಜನರನ್ನು ಬಂಧಿಸಿದನು. ಇತ್ತ 'ಮತ್ತಗಜಾಶ್ವಪದಾತಿಯ ನೆತ್ತಿಯ ನೆತ್ತರನೆಂದುಣಿಸುವೆನು. ಅಚ್ಚರಸಿಯರನೊಲಿದು ವಿವಾಹವನೆಂದು ಮಾಡುವೆನೊ, ಗಣಸಮುದಾಯಕೆ ಮಣಿದೆರಗುವುದೆಂದೊ' ಎಂದು ಉತ್ಸಾಹಿಸುತ್ತಿದ್ದ ತೋಟೇಂದ್ರನು, ತಂದೆಯ ಜೊತೆ ಓಲಗಗೊಂಡಿರಲು, ಹರಿಕಾರರು ಬಂದು, ಹಾವಳಿ ಭೈರೇಂದ್ರನು ಪೆನುಗೊಂಡೆ ಕೋಟೆಯನ್ನು ಲೂಟಿಮಾಡಿದ ವಿಷಯವನ್ನು ವಿವರಿಸಿದರು. ಹರಿಕಾರರ ಮಾತುಗಳನ್ನು ಕೇಳಿದ ಚಿಕ್ಕಭೂಪಾಲನು ಕಾಲಭೈರವನ ಭೀಕರರೂಪ ತಾಳಿ, ಭೈರೇಂದ್ರನ ಮೇಲೆ ಯುದ್ಧ ಸಾರಿದನು. ಈತನು ಕಳಿಸಿದ ಓಲೆಯನ್ನು ಮನ್ನಿಸಿ ಕೆಂಪೇಂದ್ರ, ತಿಮ್ಮಿನಾಯಕ,

ಹರಿತೀಶ್ವರ ಮೊದಲಾದ ಅರಸರು ನೆರವಿಗೆ ನಿಂತರು. 'ಬಿಡಿಸಬೇಕಾ ಪೆನುಗೊಂಡೆಯನಿಲ್ಲದೆ ಬಿಡಬೇಕೊಡಲನಾಜಿಯೊಳು' ಎಂದು ತೋಟೇಂದ್ರನು ಭೀಷಣಪ್ರತಿಜ್ಞೆಯನ್ನು ಘೋಷಿಸಿ, 'ತಂದೆಯನಿರದಾಹವಕಟ್ಟಿ ಮನೆಯೊಳು ನಿಂದಡೆ ಲೋಕಮೆಚ್ಚುವುದೆ, ಕೊಳಗುಳಕೆನ್ನ ಕಳುಹು, ಕಳುಹದೊಡಾನಳಿದೆನೆಂದು ನಿಶ್ಚಯಿಸು, ಅಳಿದುಳಿದೆನಾದೊಡೆ ನಿಮ್ಮಯ ಗರ್ಭದೊಳು ಬಂದ ಕುವರ ನಾನಲ್ಲ' ಎಂದು ಪದೇ ಪದೇ ಒತ್ತಾಯಿಸಿ, ತಂದೆಯಿಂದ ಅನುಮತಿಯನ್ನು ಪಡೆದನು. ಯುದ್ಧಕ್ಕೆ ಹೊರಟು ನಿಂತ ತೋಟೇಂದ್ರನಿಗೆ ಅವನ ಜನನಿಯರು ಮಂಗಳಾರತಿಯನೆತ್ತಿ 'ವಿಜಯಾಂಗನೆಯ ನೀನಾಳೊ ಕಂದಯ್ಯ, ತಂದೆ ಮಕ್ಕಳು ಸಮರಾಂಗಣ ಜಯಿಸಿರಿ' ಎಂದು ಆಶೀರ್ವದಿಸಿ ಬೀಳ್ಕೊಟ್ಟರು.

೧೩. ಅದೆ ಬಂದುದು ದಾಳಿ:

ಇತ್ತ ಕುಮಾರ ತೋಟೇಂದ್ರನು ಯುದ್ಧ ಕುತೂಹಲಿಯಾಗಿರಲು, ಅತ್ತ ಚಿಕ್ಕಭೂವರನ ಆಜ್ಞೆಯಂತೆ ದಳಪತಿಯೂ ಸೈನ್ಯಸಮೇತ ಬಂದನು. ಅಷ್ಟರಲ್ಲಿ ತಿಮ್ಮಿನಾಯಕ, ರಂಗಪತಿ, ಕೆಂಪೇಂದ್ರರ ಸೈನ್ಯವೂ ಬಂದು ಸೇರಿತು. 'ಎಡ ಬಲ ಹಿಂದು ಮುಂಗಡೆಯೊಳು ಮನ್ನಣೆವಡೆದರಸುಗಳ ಕುವರರು, ಎಸೆವ ಬೆಳ್ಗೊಡೆ ಸೂಳಿರಿದಿಕ್ಕೆಲದಿ ಢಾಳಿಸುವ ಚಮರ ಮುಂಗೆಲದೊಳು' ಇರುತ್ತಿರಲು, ಚಿಕ್ಕೇಂದ್ರನು ಮಹಾಮೇರುವಿನಂತೆ ಮುನ್ನಡೆದನು. ಯುದ್ಧದ ಕಹಳೆಗಳು ಮೊಳಗುತ್ತಿರಲು ಚಿಕ್ಕಭೂಪಾಲನು ಗಡಿ ಪ್ರದೇಶದ ಕೋಟೆಗಳನ್ನು ಸುಟ್ಟು ಸೂರೆಮಾಡಿ, ವೈರಿರಾಜ್ಯವನ್ನು ಪ್ರವೇಶಿಸಿದನು. ನಡುನಾಡಗೂಳಿ ಇಮ್ಮಡಿಚಿಕ್ಕಭೂಪನ ಭೀಕರ ದಾಳಿಗೆ ಭೈರೇಂದ್ರನ ನಾಡಿನ ಪ್ರಜೆಗಳು ತತ್ತರಿಸಿಹೋದರು. ಹೀಗೆ ವೈರಿರಾಜ್ಯವನ್ನು ಕೊಳ್ಳೆಹೊಡೆದು ಆರ್ಭಟಿಸುತ್ತ ಬಂದ ಚಿಕ್ಕೇಂದ್ರನು ಹರುವೆಯ ಕೋಟೆಯನ್ನು ನೋಡಿ, 'ಕೂಗಿದೊಡುಬ್ಬೆದ್ದು ಹೆಚ್ಚುವೀ ಕೋಟೆಯನೀಗ ನಿಲ್ಲದೆ' ಕೈವಶಮಾಡಿಕೊಳ್ಳು ಎಂದು ಹೇಳುವುದೇ ತಡ, ಕದನವಿಕ್ರಮ ತೋಟೇಂದ್ರನು ಯುದ್ಧನಿರತನಾದನು. ವೈರಿಸೈನ್ಯದೊಂದಿಗೆ ಭೀಕರವಾದ ಕಾಳಗ ನಡೆಸಿ, ಹೊರಕೋಟೆಯನ್ನು ವಶಪಡಿಸಿಕೊಂಡನು. ಈ ಸುದ್ಧಿಯನ್ನು ತಿಳಿದು ಸಂತುಷ್ಟನಾದ ಚಿಕ್ಕಭೂಪಾಲನು, ಇನ್ನು ಒಳಕೋಟೆಯನ್ನು ಹೊಕ್ಕಿರಿಯಲು ಮಗನಿಗೆ ಹೇಳಿ, ತಾನು ನಗರದ ಹೊರಗೆ ಬೀಡುಬಿಟ್ಟನು. ಈ ಸಮಯದಲ್ಲಿ ಹರತೀಶನ ತಿಮ್ಮಿನಾಯಕರು, ಸಾವಿರ ದಳಪತಿಗಳು ಸೈನ್ಯದೊಂದಿಗೆ ಚಿಕ್ಕಭೂವರನ ಸಹಾಯಕ್ಕೆ ಬಂದು ಸೇರಿದರು.

೧೪. ಹಿಡಿದರು ಸೊಕ್ಕಿದಾನೆಯನು:

ಪಟ್ಟಣದ ಹೊರಭಾಗದಲ್ಲಿ ಚಿಕ್ಕಭೂಪಾಲನು ಬೀಡುಬಿಟ್ಟಿರಲು, ಕತ್ತಲೆಯನ್ನು ಹೋಳುಮಾಡಿ ಬೆಳದಿಂಗಳು ಥಳಥಳಿಸಿತು. ಆ ಸಮಯದಲ್ಲಿ ಗುಪ್ತವಾಗಿ ಬಂದ ಭೈರೇಂದ್ರನ ಮಂತ್ರಿ ವಂದಿಸಿ, ಯುದ್ಧವನ್ನು ಮುಂದುವರಿಸದೆ 'ನಿನ್ನೊಡಹುಟ್ಟಿದ ಹಾವಳೀಂದ್ರನ ನೀನು ಭಿನ್ನವಿಲ್ಲದೆ ಕೈವಿಡಿದು' ನಡೆಸಬೇಕೆಂದು ಬಿನ್ನವಿಸಿಕೊಂಡನು. ಅರಸನು ಈ ಬಯಲಬಣ್ಣನೆಯ ಮಾತುಗಳಿಗೆ ಕಿವಿಗೊಡಲಿಲ್ಲ. ಮಂತ್ರಿಯು ತನ್ನ ಸಾಮ, ಭೇದೋಪಾಯಗಳ ಆಟ ನಡೆಯದಿರಲು ದಾನೋಪಾಯವನ್ನು ಚಿಂತಿಸಿ, 'ಎರಬೊಮ್ಮನಹಳ್ಳಿ, ಹಿರಿಯ ಸಮುದ್ರ, ಅಗ್ರಹಾರ ಹರುವೆ, ಹಿರಿಯ ಪಿರಂಗಿ, ಎರಡು ಆನೆ, ಹತ್ತುಸಾವಿರ ಹೊನ್ನು' ಕೊಡುವುದಾಗಿ ನುಡಿಯಲು 'ಯಾತರ ಮಾತ? ತಾನೇತರ ಕಾರ್ಯವಿದೇತರ ಸಂಧಾನ? ನಿನ್ನ ಮಾತು ಮನಂಬೊಗದು' ಎಂದು ನುಡಿದು, ಅರಸನು ಮಂತ್ರಿಯನ್ನು ಪ್ರೀತಿಯಿಂದ ಬೀಳ್ಕೊಟ್ಟನು. ಸಂಧಾನಕಾರ್ಯ ಫಲಿಸದೆ ಹೋಗಿ ರಾತ್ರಿ ಸರಿದು ಸೂರ್ಯೋದಯವಾಯಿತು. ಸಂಧಿ ವಿಸಂಧಿಯಾಗಲು

ಭೈರೇಂದ್ರನ ಅಪ್ಪಣೆಯಂತೆ ದಳಪತಿ ಅಳಿಯ ಬೈಚೇಂದ್ರ ಸೈನ್ಯದೊಡನೆ ಯುದ್ಧಕ್ಕೆ ಸಿದ್ಧನಾದನು. ಎರಡೂ ಬಲಗಳ ನಡುವೆ ನಿಕರದ ಹೋರಾಟ ನಡೆಯಿತು. ಚಿಕ್ಕಭೂಪಾಲನ ಕಡೆಯವರು ವೈರಿಸೈನ್ಯವನ್ನು ಸವರಿ, ಭೈರೇಂದ್ರನ ಸೊಕ್ಕಿದಾನೆಯನ್ನು ಸೆರೆಹಿಡಿದರು. ಆನೆಯನ್ನು ಒಪ್ಪಿಸಿ ದೆಸೆಗೆಟ್ಟು ಬರುತ್ತಿದ್ದ ತನ್ನ ಸೈನ್ಯವನ್ನು ಕಂಡು ಬೈಚೇಂದ್ರ ಕೋಪದ ಕಿಡಿ ಕಾರಿದನು. ಮೂವರುರಾಯರು ಮೆಚ್ಚಿದ ಆನೆಯನ್ನು ವೈರಿಗಳಿಗೆ ಒಪ್ಪಿಸಿ, ಹಾವಳಿ ಭೈರೇಂದ್ರನಿಗೆ ಮುಖವನ್ನು ತೋರಿಸುವುದಾದರೂ ಹೇಗೆ? ಎಂದು ವಿಚಾರಿಸಿ, 'ಬಿಡದದ ತಾರದಿರ್ದೊಡೆ ತನ್ನ ತಂದೆಯ ಪೊಡೆಯೊಳೊಗೆದವ ತಾನಲ್ಲ' ಎಂಬ ಪ್ರತಿಜ್ಞೆಯೊಂದಿಗೆ, ಚದರಿದ ಸೈನ್ಯವನ್ನು ಒಗ್ಗೂಡಿಸಿ, ಉರವಣೆಯಿಂದ ವೈರಿಬಲದ ಮೇಲೆ ಎರಗಿದನು.

೧೫. ಶಿವನೊಳೊಂದಿದನಾ ಕುವರ:

ವೈರಿಸೈನ್ಯ ನಾಲ್ಕುದಿಕ್ಕಿನಿಂದಲೂ ತುಂಬಿದ ತೊರೆಯಂತೆ ಚಿಕ್ಕನೃಪನ ಮೇಲೆ ಕವಿಯುತ್ತಿರುವುದನ್ನು ಕಂಡ ತೋಟೇಂದ್ರನು,'ತನುವಿತ್ತೆನ್ನಯ್ಯನೂಳಿಗಕಿದಕಿಂದುಧರನೆ ಸಾಕ್ಷಿಯೆನುತೆ' ಕುದುರೆಯನ್ನೇರಿ ಬಿರುಗಾಳಿಯಂತೆ ರಣರಂಗಕ್ಕೆ ಧಾವಿಸಿದನು. ಖಡ್ಗವನ್ನು ಝಳಪಿಸುತ್ತ ಮಿಂಚಿನಂತೆ ಸಂಚರಿಸಿ, ವೈರಿಗಳನ್ನು ಮೃತ್ಯುದೇವತೆಯ ಬಾಯತುತ್ತ ಮಾಡುತ್ತಿರುವ ತೋಟೇಂದ್ರನಿಗೆ, 'ತಿರುಗೆಲೆಲೆ ಕುಮಾರ ತೋಟೇಂದ್ರ ಮೇಲ್ವರಿವುತಲಿದೆ ರಿಪುಬಲವು' ಎಂದು ಅಳಿಯ ಮುದ್ದೇಂದ್ರ ಸೂಚಿಸಿದನು. ಆಗ 'ರೂಢಿಸಿದರಿಬಿರುದಾಂಕರು ಬೆಂಗೊಟ್ಟೋಡಬಲ್ಲರೆ ರಿಪುಬಲಕೆ' ಎಂದು ಉತ್ತರಿಸಿ, 'ಸೊಕ್ಕಿದಾನೆ ಸರಸಿಯ ಹೊಕ್ಕು ಕಲಕುವಂತೆ' ತೋಂಟದರಾಯ ಪರಬಲಸಮುದ್ರದಲ್ಲಿ ಈಸುಬಿದ್ದನು. ಯುದ್ಧಭೂಮಿ ಅಂಬುವಿನ ಭೀಂಕೃತನಾದ, ಪರಿವ ರಕ್ತಾಂಬುಪ್ರವಾಹಧ್ವನಿ, ತುರಗಕುಲದ ಹೇಷಾರವ, ಮದಕರಿಗಳ ಗರ್ಜನೆ, ಪಟುಭಟರ ಕಿಲಿಕಿಲಿರವಗಳಿಂದ ತುಂಬಿಹೋಯಿತು. ಎರಡೂ ಬಲಗಳು 'ಆವುದೊ ನೆಲನಾವುದೊ ದೆಸೆಯಾಗಸವಾವುದೊ' ಎನಿಸುವಂತೆ ಪರಸ್ಪರ ಒಂದರ ಮೇಲೊಂದು ಅಪ್ಪಳಿಸತೊಡಗಿದವು. ಹೀಗೆ ತೋಟೇಂದ್ರನು ಪ್ರಳಯಕಾಲದ ಭೈರವನಂತೆ ತುರಗ, ಮದಕರಿ, ಸೈನಿಕರನ್ನು ಕಡಿದು ಬಣಬೆಯೊಟ್ಟಿದ. ರಣಾಂಗಣ 'ಜವನ ಬಾಣಸಿನ ಹೆಮ್ಮನೆಯೊ, ಪಸಿದು ಮಸಗುವ ಮಾರಿ ಮಿತ್ತುದೇವಿಯರ ಅವುತಣದೆಡೆಯೊ' ಎನ್ನುವಂತೆ ಕಾಣುತ್ತಿತ್ತು. ತೋಟೇಂದ್ರನ ರಣಪರಾಕ್ರಮವನ್ನು ಮೆಚ್ಚಿದ ವೈರಿಸೈನಿಕರು 'ರಣಕೋವಿದ ತೋಟೇಂದ್ರ ಗುಣಕೆ ಮತ್ಸರವುಂಟೆ' ಎಂದು ಕೀರ್ತಿಸುವಲ್ಲಿ, ಹುಲಿಯಂತೆ ಧೀಂಕಿಟ್ಟು ಬರುತ್ತಿರುವ ಕುದುರೆದಳವನ್ನು ತುಂಡಿಸಿ, ಮೋಡದಂತೆ ಕವಿದ ಶರಜಾಲವನ್ನು ಗಿರಿಯಂತೆ ಎದುರಿಸಿ, ಸೊಕ್ಕಿದಾನೆಗಳನ್ನು ಸೀಳುತ್ತಲೇ 'ಶಿವನೊಳೊಂದಿದನಾ ಕುವರ.'

೧೬. ಕುಮಾರ ಮಾತಾಡೊ ಎನ್ನೊಡನೆ:

ಯುದ್ಧರಂಗದಲ್ಲಿ ತೋಟೇಂದ್ರನ ಹೋರಾಟದ ಸದ್ದು ನಿಲ್ಲಲು, ಮುನ್ನುಗ್ಗಿಬಂದ ಪಟುಭಟರು ಆತನ 'ತುಳುಕುವ ವೀರರಸದ ತಲೆಯನ್ನು' ತುಂಡಿಸಿದರು. ಅಷ್ಟರಲ್ಲಿ ಅಳಿಯ ಮುದ್ದೇಂದ್ರ, ಲಿಂಗೇಂದ್ರರು ವೀರಾವೇಶದಿಂದ ಹೋರಾಡುತ್ತ ವೀರಮರಣ ಹೊಂದಿದ ಕುವರನಲ್ಲಿಗೆ ಬಂದರು. ತೋಟೇಂದ್ರನು ಯುದ್ಧದಲ್ಲಿ ಮಡಿದನೆಂಬ ವಾರ್ತೆಯನ್ನು ಕೇಳಿದ ಇಮ್ಮಡಿ ಚಿಕ್ಕಭೂಪಾಲನು ರುದ್ರಭಯಂಕರನಾಗಿ, ಕುದುರೆಯನ್ನೇರಿ ರಣರಂಗಕ್ಕೆ ಧಾವಿಸಿದನು. ಬಿರುಗಾಳಿರೂಪದ ಈತನ ಆಗಮನವನ್ನು ಕಂಡ ವೈರಿಸೈನ್ಯ ತತ್ತರಿಸಿಹೋಯಿತು. ಯುದ್ಧಭೂಮಿಯಲ್ಲಿ "ಬಿಟ್ಟ ಕಣ್ಬೆಗಿದಡರಿದ ಹುಬ್ಬು ಪಣೆಯೊಳಗಿಟ್ಟ ಭಸಿತದ ತ್ರಿರೇಖೆ ಬಟ್ಟಗದಪು ಸುಲಿಪಲ್ಗಳ ತೊಳಪ"ದಿಂದ ಕಂಗೊಳಿಸುವ

ಕುವರನ ಶಿರವನ್ನು ಕಂಡ ಅರಸನು, "ಗಲ್ಲವ ಪಿಡಿದು ಮುದ್ದಿಪನೊಮ್ಮೆ, ಬಾಯಲ್ಲಿ ಬಾಯಿಟ್ಟು" ದುಃಖಿಸಿದನು. 'ಎನ್ನೊಡನೇಕೆ ಮುನಿಸು? ಮಾತಾಡಯ್ಯಾ, ಎನ್ನಿಂದಾದ ತಪ್ಪಾವುದಯ್ಯಾ? ಕಂದ, ಕಂದಯ್ಯಾ' ಎಂದು ಲಲ್ಲೆಗರೆಯುತ್ತ ಮಗನ ಮೃತದೇಹವನ್ನು ಪಲ್ಲಕ್ಕಿಯಲ್ಲಿರಿಸಿಕೊಂಡು ಅರಮನೆಗೆ ತಂದನು. ಶೋಕದಿಂದ ಆತನ ದೇಹ ತೊಯ್ದುಹೋಗಿದ್ದಿತು. ಅರಸನ ರಾಣಿ ಚೆನ್ನಮ್ಮ, ಲಿಂಗಮ್ಮರು "ವಿಳಸಿತ ಮಣಿಮಯ ಮಂಚದೊಳು ಕೋಮಳ ಹಂಸತೂಳಕಲ್ಪದೊಳು ಮಲಗಲಲಸಿ ನೆಣನೆತ್ತರ ಹೊನಲೊಳು ಮಲಗಲು ಮನವಿಕ್ಕಿದೆಯಾ" ಎಂದು ಮಗನಿಗಾಗಿ ಹಂಬಲಿಸಿ, ಕಣ್ಣೀರು ಸುರಿಸಿದರು. ಪರಿವಾರದ ಸಿದ್ಧಾಜಿ, ಸಪ್ಪೆಕ್ಕ, ಸಿದ್ಧೇಂದ್ರ, ಬಸವಯ್ಯ, ಶಾಖೇಂದ್ರ, ಯಲ್ಲಮೇಂದ್ರ ಹಾಗೂ ಒಡನಾಡಿಗರಾದಿಯಾಗಿ ಎಲ್ಲರೂ ತೋಟೇಂದ್ರನ ವಿಯೋಗದಿಂದ ಗೋಣೊಡೆವಂತೆ ಗೋಳಿಟ್ಟರು. ರಾಣಿ ಚೆನ್ನಬಸವಮ್ಮ ತನ್ನ ಪತಿಯ ವೀರಮರಣದ ಸುದ್ದಿಯನ್ನು ಕೇಳಿ "ಎಡಗೈಯ ಮಣಿಗನ್ನಡಿ, ಬಲಗೈಯೊಳು ಪಿಡಿದಲಗುವ ಜಮದಾಡೆ, ಮುಡಿದ ಗರಿಯ ಬಾಸಿಗವಮರಿದ ರನ್ನದೊಡವೆ"ಗಳಿಂದ ಶೋಭಿತಳಾಗಿ ನರ್ತಿಸಿ, ನಲಿದು "ಅತ್ತೆಮಾವಂದಿರ ಪಾದಕೆರಗಿ ತನ್ನ ಚಿತ್ತವಲ್ಲಭನ ಮೂರ್ತಿಯನು ಚಿತ್ತದೊಳಿಟ್ಟು ಜಾನಿಸುತೆ, ಶ್ರೀಗುರುರಾಯನಿತ್ತ ಲಿಂಗಕೆ ಪೊಡಮಡುತ" ಮಹಾಸತಿಯಾದಳು.

೧೭. ಬೋಳೇಶ್ವರ ಹರಸಿ ಸೀಸೆಯನಿಟ್ಟನೊಸೆದು:

ಧುರಧೀರ ಮಗನೊಡನೆ ಸೊಸೆಯೂ ಮರಣಹೊಂದಿದುದನ್ನು ನೋಡಿ ಸಹಿಸದೆ ಚಿಕ್ಕಭೂಪನು "ಹರಹರ ಗುರುವೆ ಸಿದ್ಧಮಲ್ಲೇಶ" ಎನ್ನುತ್ತ, ಕರತಳದಲ್ಲಿರುವ ಇಷ್ಟಲಿಂಗವನ್ನು ಏಕದೃಷ್ಟಿಯಿಂದ ದೃಷ್ಟಿಸುತ್ತ, ಲಿಂಗಪೂಜೆಯಲ್ಲಿ ತಲ್ಲೀನನಾದನು. "ಇಂದಿನ ನಿನ್ನ ನಿರೂಪದ ಮಣಿಹವು ಸಂದುದೆನಗೆ, ಮರ್ತ್ಯದಾಟ ಒಂದಿನಿಸಿಲ್ಲ, ಮರಳಿ ಮರ್ತ್ಯಕೆ ನಾನು ಬಂದೊಡೆ ನಿಮ್ಮಾಣೆ" ಎಂದು ಮನೋನಿರ್ಧಾರವನ್ನು ಇಷ್ಟಲಿಂಗಕ್ಕೆ ನಿವೇದಿಸಿ, "ನಿಜಲಿಂಗದ ಕಳೆಯೊಳಗೆ" ಬೆರೆತು ಬಯಲಾದನು. ಚೆನ್ನಮ್ಮ, ಲಿಂಗಾಜಮ್ಮ ಮೊದಲಾದ ಅರಸಿಯರೂ "ಲಿಂಗವ ನಿರೀಕ್ಷಿಸುತ ಪಂಚಾಕ್ಷರಿಯನು ಜಪಿಸುತ" ಲಿಂಗದ ಘನತೇಜಯೊಳಗೆ ಬೆರಸಿ ಬೇರಿಲ್ಲದಂತಾದರು. ಈ ಸಮಯದಲ್ಲಿ ಶಿವನು ಪ್ರತ್ಯಕ್ಷನಾಗಿ "ಗುರುಲಿಂಗಜಂಗಮಾರ್ಚನೆಯ ನೀ ಮಾಡಿದ ಪರಿಯೊಳೀ ವರ್ತಮಾನದೊಳು ನಿರುತ ನಿರ್ವಂಚನೆಯಿಂ ಮಾಡುವ ಭಕ್ತರ ಕಾಣೆವು", "ಧರೆಯೊಳಚ್ಚರಿಯೆನಿಸುವ ಬ್ರಹ್ಮರಥವನು ವಿರಚಿಸಿ ಪರಮೋತ್ಸವದೆ ಚರಲಿಂಗಕೆ ಮಾಡುವರುಂಟೆ ನಿನ್ನವೊಲು" ಎಂದು ಚಿಕ್ಕಭೂಪಾಲನನ್ನು ಕೀರ್ತಿಸಿ, "ನಿನಗೆ ಮೆಚ್ಚಿದೆವು, ಎನ್ನಾಣೆ ಕೇಳೈ ನಿನ್ನ ಮನದಭಿಮತವನೆಲ್ಲವನು" ಎಂದನು. ಶಿವನ ಮಾತಿಗೆ ಅರಸನು "ಏನೆಂದುಸುರಬಾರದ ಪರತರ ಸಚ್ಚಿದಾನಂದಮಯ ನಿನ್ನೊಳೊಂದಿ ನಾನೆಂಬುದಳಿದು ನೀನಾದ ಬಳಿಕ ಮತ್ತೇನುಂಟು ಬಯಸುವ ಪದವು?" ಎಂದು ಮರುನುಡಿದನು. ಅರಸನ ಈ ಅಪೂರ್ವ ವರ್ತನೆಗೆ ಸಂತುಷ್ಟನಾದ ಶಿವನು "ಗುರುವನರ್ಚಿಸಿ ಗುರುರೂಪಾದ, ಲಿಂಗವನಿರದೆ ಭಜಿಸಿ ಲಿಂಗವಾದ, ಪರಮ ಜಂಗಮವನಾರಾಧಿಸಿ ಪರತತ್ತ್ವದಿರವಾದ"ವನು ನೀನು, ಎಂದು ನಂದೀಶ ಮೊದಲಾದ ಗಣತಿಂತಿಣಿಯ ಮುಂದೆ ಬಾಯ್ತುಂಬ ಕೊಂಡಾಡಿ, ಎಲ್ಲರನ್ನೂ ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಕೈಲಾಸಕ್ಕೊಯ್ದು, ಸಾಮಿಪ್ಯಪದವಿಯನ್ನಿತ್ತು ಸಲಹಿದನು.

ಇತ್ತ ಗುರು ಬೋಳೇಶ್ವರನು ತೋಂಟದರಾಯನ ತಮ್ಮನಾದ ಸಪ್ಪೇಂದ್ರನನ್ನು ಕರೆದು, "ಸಿರಿನೊಸಲೊಳು ಭಸಿತವನಿಟ್ಟು ಪಟ್ಟವ ಹರುಷದಿ ಕಟ್ಟಿ, ಸಪ್ಪೇಂದ್ರ ಸ್ಥಿರರಾಜ್ಯವನಾಳು" ಎಂದು

ಹರಸಿ ಸೀಸೆಯನಿಟ್ಟನು. ಪಟ್ಟಾಭಿಷಿಕ್ತನಾದ ಸಪ್ಪೇಂದ್ರ ವೈಭವದಿಂದ ರಾಜ್ಯವಾಳಿ ಮುಮ್ಮಡಿ ಚಿಕ್ಕೇಂದ್ರನೆಂದು ಹೆಸರು ಗಳಿಸಿದನು. "ಪರಭೂಪಾಲರ ಮದವನಡಗಿಸುತೆ, ಸರಸ ಸತ್ಕವಿಗಳ ಮನ್ನಿಸುತೆ" ಇರುವ ಸಪ್ಪೇಂದ್ರ ಶ್ರೀಗಿರಿ, ಕಕೋದ್ಗಿರಿ ಕ್ಷೇತ್ರಗಳಿಗೆ ಸಮಾನವಾಗಿ ಮದ್ದಗಿರಿಯಲ್ಲಿ ಮಲ್ಲೇಶಮಂದಿರವನ್ನು ಸ್ಥಾಪಿಸಿ, ದಿನನಿತ್ಯ ಗುರುಭಕ್ತಿ, ಲಿಂಗಪೂಜೆ, ಜಂಗಮದಾಸೋಹಗಳಲ್ಲಿ ನಿರತನಾಗಿ, ಧರ್ಮದಿಂದ ರಾಜ್ಯವನ್ನಾಳಿದನು.

❖❖

*

ಪರಿವಿಡಿ

❖❖

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

ಸಂಧಿ : ೧

ಸಲಹು ಮಹಾಗುರು ಚೆನ್ನಮಲ್ಲೇಶ

ಶ್ರೀಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸನಿಜಾವಾಸ
ಸಾಗರಶಯನಾರ್ಚಿತ ಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ಶ್ರೀಮದಂಬುಜನೇತ್ರಾಂಬುಜಪುತ್ರ ಸು
ತ್ರಾಮಾಮ[೧][ರ][೧]ಮಣಿಮಕುಟ
ಧಾಮಾಕಲಿತಪದತಾಮರಸದ್ವಯ
ಶ್ರೀಮಲ್ಲಿಕಾರ್ಜುನ ಶರಣು ॥೨॥

ಶ್ರೀಕರ ವಿಮಲಶುಭಾಕರ[೨][ವ][೨]ಮಳವಿ
ದ್ಯಾಕರ ಕರುಣಾಕರನೇ
ಲೋಕರಕ್ಷಕ ಮಲ್ಲಿಕಾರ್ಜುನ ಕರುಣಿ ಸು
ಧಾಕರಶೇಖರ ಶರಣು ॥೩॥

ದುರ್ಜನಲೋಕವಿಸರ್ಜನ ಕುಸುಮಶ
ರಾರ್ಜುನಕಾನನದಹನ
ಅರ್ಜುನಶರದ ಶಂಕರ ಶ್ರೀಗಿರಿಮಲ್ಲಿ
ಮಲ್ಲಿಕಾರ್ಜುನ ಶರಣಾಗೆನಗೆ ॥೪॥

೧–೧ದ (ತ,ಕ), ೨–೨ ವಿ (ತ,ಕ)

ನಂಬಿದವರ೩[ಲಂಟಿ]೩ದ ಪಾಪಪಂಕವ
೪[ಕಂ]೪ಬಿಸುತೆಸೆವ ಹೂನ್ಯವನು
ತುಂಬುವ ಕರುಣಿ ಜತಿಗಳೆದೆ*[ಯಂ]*ಬುಜಕೆ
ತುಂಬಿಯೆನಿಪ ಶಿವ ಶರಣು ॥೫॥

ಹಾರ ಪಟೀರ ಕರ್ಪೂರ ಮಂದಾರ$[ನೀ]$
ಹಾರ ಸುಸ್ಮೇರ ಪ್ರಹೀರ
ತಾರಕ ಗೋಕ್ಷೀ೬[ರೇಂದೀವರ]೬ಗೀರ್ವಾ೭[ಣಾ]೭
ಹಾರಾಂಗ ಶಿವ ಶರಣಾಗು ॥೬॥

ಶ್ರೀವನ ಬಿಗ್ಗೊನೆ ಬಿಡುಗಣ್ಣರನೆಲ್ಲ
ನಾವರತಿರು ೮ಬಿಯಳೆರೆಯಾ೮
ಆವನಂಬಿಗೆಯಂಬುದಿ ದೋಣಿಯನಡಿ
ದಾವರೆಗಾನೆರಗುವೆನು(?) ॥೭॥

ಆವನಡಿಯೊಳಲರ್ಗಣ್ಣನ ಕಣ್ಣಿಹು
ದಾವನ ಕರಕಮಲದೊಳು
ತಾವರೆಯಣುಗನ ತಲೆಯಿಹುದವನಡಿ
ದಾವರೆಗಾನೆರಗುವೆನು ॥೮॥

ಮೂದೇವರು ದೊರೆವೆತ್ತೆಸೆದಿರುತಿರೆ
ಮಾದೇವನ ಕೀರ್ತಿಸುತೆ–
ಆದರಿಸದೆಯುಳಿದರ ನು೯[ತಿಸುವೆನೆ]೯ಂಬ
ವಾದಿಯ ಬಾಯ ಮುದ್ರಿಸುವೆ ॥೯॥

ವೇದಾದಿಸರ್ವವಿದ್ಯಾರಂಭದೊಳು ಪ್ರಾಣ
ವಾ೧೦[ದೀ]೧೦ನಮಶ್ಶಿವಾ೧೧[ಯೋ]೧೧ದು
ಮೇದಿನಿಯರಿಯೆ ವಿದ್ಯಾಗುರು*[ಎಂ ಮೊ]*ದ
ಲೋದಿದ್ದುದಿದು ವಿಧಿಯಂತೆ ॥೧೦॥

೩–೩ ನಂಬಿ(ತ,ಕ) ೪–೪ ನ (ತ,ಕ) ೫–೫ ತರಣಿ(ಕ) *–*ಯಂ(ತ,ಕ) $–$ನೆ(ತ,ಕ) ೬–೬ ರಂದೀರ(ತ,ಕ) ೭–೭ಣ (ತ,ಕ) ೮–೮ ಬೆಯೊಳೆರೆಯೋ(ಕ) ೯–೯ ಳವರೆಯ್ತೆಂಬ (ತ,ಕ)೧೦–೧೦ ದಿ(ತ,ಕ) ೧೧–೧೧ ಯೆಂ(ತ,ಕ) *–* ಎಂದೊ(ತ,ಕ)

ಮಂಗಳಾರಂಭದೊಳಖಿಳಕಲ್ಯಾಣಗೇ
ಹಂಗೆ ಶಿವಂಗೆ ಸಾಂಬವಗೆ
ಹಿಂಗದೆ [೧೨]ಕುಂ[೧೨]ಬಿಡುವುದು ವಿಧಿಯೆಂದು ಶಾ
ಸ್ತ್ರಂಗಳು ಬೊಬ್ಬಿಡುತಿಹವು ॥೧೧॥

ವಿದ್ಯಾರಂಭಕಾಲದೊಳಷ್ಟಾದಶ
ವಿದ್ಯಾಧೀಶನೆನಿಸುವ
ಹೃದ್ಯನ ಶಂಭುವಿನಡಿಗೆ ನಮೋಯೆಂ
ದಾದ್ಯರು ಮಿಗೆಯರ್ಚಿಸಿದರು ॥೧೨॥

ಶ್ರುತಿಸೂಕ್ತಿ ಸರ್ವವಿದ್ಯಾನಾಮೀಶ್ವರ
[೧೩]ಮಿ[೧೩]ತಿಯೆಂದೆನುತ ಸಾರುತಿರಲು
ಕೃತಿಮುಖದೊಳು ಸತ್ಕವಿಗಳು ವಿದ್ಯಾ
ಪತಿಯಲ್ಲದವರ್ಗೆರಗು[೧೪][ವರೇ][೧೪] ॥೧೩॥

ಪೊಡಮಡಿ[೧೫]ಕೆ[೧೫]ಗೆ ಕರ್ತನೀಶ್ವರನೇ ಎಂದು
ಗಡಣಿಸಿ ಶತರುದ್ರೀಯ
ನುಡಿವುದನರಿಯು[೧೬]ದಿ[೧೬]ತರ ದೇವತೆಗಳ್ಗೆ
ಪೊಡಮಡುವವನು ಕೋವಿದನೇ ॥೧೪॥

ವೇದಕ್ಕೆ ಜನನಿಯೆನಿಪ ಗಾಯತ್ರಿ ಭ
ರ್ಗೋದೇವಸ್ಯಯೆಂದುಲಿಯೆ
ಮಾದೇವನಲ್ಲದಿತರ ದೇವರನೊ
ಲ್ದಾದರಿಸುವನು ಕೋವಿದನೇ ॥೧೫॥

ಗುರುವೀಶ್ವರನಲರ್ಗಣ್ಣನೆ ಲಘುವೆಂ
ದೊರೆವ ಛಂದೋಕ್ತಿಯನರಿದು
ಗುರುವೆನಿಸಿದ ಶಿವನಿರುತಿರೆ ಲಘುವಾದ
ಹರಿನುತಿ ಕವಿಗನುಮತವೆ ॥೧೬॥

೧೨–೧೨ ತು(ಕ)೧೩–೧೩ ಯಿ(ತ,ಕ) ೧೪–೧೪ ನು(ತ,ಕ) ೧೫–೧೫ತೆ (ಕ)೧೬–೧೬ ನಿ(ತ,ಕ)

ಶತಪತ್ರಪುತ್ರಾಂಬುಜನೇತ್ರ ಪಶುಗಳ್ಗೆ
ಪತಿ ಪಶುಪತಿಯೆಂದೆನುತೆ
ಶ್ರುತಿಯಿರಲಂತಪ್ಪ ಪಶುಗಳಿಗೆರಗುವ
ಮತಿಹೀನ[೧೭][ನರರ][೧೭]ನೇನೆಂಬೆ ॥೧೭॥

ಸರ್ವಮನ್ಯತ್ಪರಿತ್ಯಜ್ಯಯೆನುತೆ[೧೮][ಯ
ಥ][೧೮]ರ್ವ ನಿ[೧೯]ತಾಂತ[೧೯]ಮುಲಿಯಲು
ಪಾರ್ವತಿಯರಸಗಿತರ ದೈವ ಸರಿಯೆಂಬ
ದುರ್ವಿದಗ್ಧರನೇನೆಂಬೆ ॥೧೮॥

ಶ್ರುತಿಯೇಕ ಏವ ರುದ್ರೋಯೆಂದೆನುತಿರ
ಲಿತರದೇವತೆಗಳ ಶಿವಗೆ
ಪ್ರತಿಯಿಟ್ಟು ದಿಕ್ಕಟ ಕಾಲ್ಗೆಡವುತೆ ದು
ರ್ಗತಿ[೧೯][ಗಿ][೧೯]ಳಿವರನೇನೆಂಬೆ ॥೧೯॥

ಪೊಡೆಯ[೨೦][ಲ][೨೧]ರನು ಪೊಂಬೊ[೨೨][ಡಲನೀ][೨೨]ಶನ ಚೆ
ನ್ನಡಿ ಮುಡಿಗಳ ಕಾಬೆವೆಂದು
ಒಡನೆ ಹೆಬ್ಬಂದಿ ಹದ್ದಾಗಿ ಕಾಣದೆ ಹೋದ
ರುಡುಪತಿಧರಗವರೆಣೆಯೆ ॥೨೦॥

ಹರಸುತ ವೀರಭದ್ರೇಶನು ದಕ್ಷಾ
ಧ್ವರದೊ[೨೩]ಳು ರೋ[೨೩]ಡಾಡುತ್ತೈದೆ
ಹರಿ ಮೊದಲಾದಮರರ ತದೆವಂದೆತ್ತ
ಸರಿದುದೊ ದೇವತ್ವ[೨೪][ವ][೨೪]ವರ್ಗೆ ॥೨೧॥

ಕಡಲ ಕಡೆವ ಕಡೆಯೊಳು ಬಿಸಮೊಗೆದು ಬೆಂ
ಬಿಡದಟ್ಟಿ ಸುಡುವ ಕಾಲದೊಳು
ಜಡಜಸಂಭವ ಜಡಜಾಕ್ಷರಿಗಂದಾವ
ಕಡೆಯೊಳಡಗಿತೊ ದೇವತ್ವ ॥೨೨॥

೧೭-೧೭ ರ (ತ) ನರ (ಕ)೧೮-೧೮ ಯೆಧ(ತ,ಕ) ೧೯-೧೯ ಕಾರ(ತ)
೨೦-೨೦ ಗ (ತ,ಕ) ೨೧-೨೧ ಲಾ(ತ,ಕ) ೨೨-೨೨ ಡೆಯನೀ(ತ,ಕ) ೨೩-೨೩ ಳಗೋ(ಕ)೨೪-೨೪ನ (ತ,ಕ)

ಜಲಚರಕೂರ್ಮವರಾಹನಾಗುತೆ ಬಳಿ
ಕಲಸದೆ ಹಲವು ಯೋನಿಯಳು
ಸಲೆ ಹುಟ್ಟಿ ಹುಲುಬೇಡನಂಬಿನಿಂ ಹತವಾದ
ಜಲಜಾಕ್ಷ ದೇವನೆಂತಾದ ॥೨೩॥

ಮುರವೈರಿಗೆ ದುರ್ಭಗ ದುಸ್ಥಿತಿ ದು
ರ್ಮರಣವುಂಟೆಂಬ ನಿಶ್ಚಯಕೆ
ಧರೆಯೊಳು ದೇವಕಿದೇವಿ ಅದಿತಿಯೆಂಬ ಜನ
ಕರೆಂಬವರೆ ಸಾಕ್ಷಿಗಳು ॥೨೪॥

ಮೂಜಗವರಿಯೆ ಜಲಂಧರಸುರರಿಪು
ರಾಜನೊಡನೆ ಕಾದುತ್ತೈದೆ
ಆಜಿರಂಗದೊ[೨೫][ಳವ][೨೫]ನಿಂ ಬನ್ನಂಬಡೆ
ದಾ ಜನಾರ್ದನನೀಶಗೆಣೆಯೆ ॥೨೫॥

ಘುಲ್ಲಶರಾರಿಯಲ್ಲದೆ ದೇವನು ಮ[೨೬][ತ್ತೆ][೨೬]
ಯಿಲ್ಲಿಲ್ಲವೆಂಬ ನಿಶ್ಚಯಕೆ
ಖುಲ್ಲ ದಕ್ಷನ ಜನ್ನವೆ ಸಾಕ್ಷಿ ಮತ್ತೊರ್ವ
ನುಳ್ಳೊಡೆ ಕೆಡುವುದೆ ಯಾಗ ॥೨೬॥

ಹಮ್ಮಿನ ಬಿಮ್ಮು ತಲೆಯನಡ[೨೭][ರಿರೆ][೨೭] ಪರ
ಬೊಮ್ಮದಿರವ ಭಾವಿಸದೆ
ಬೊಮ್ಮವೆ ತಾನೆಂದು ತಲೆಯ ದಂಡವನಿತ್ತ
ಬೊಮ್ಮಗೆತ್ತಣದೊ ದೇವತ್ವ ॥೨೭॥

ಅಸಮನೇತ್ರನ ಸಿರಿಮುಕುಟ ಕಾಣದೆ ಬಂದು
ಹುಸಿಮಾತಿನಿಂ ಕಂಡೆನೆಂದು
ವಸುಧೆಯೊಳಭಿಮಾನತೆವಡೆದಿರುತಿಹ
ವಿಷರುಹಭವ ದೇವನಹುದೆ ॥೨೮॥

೨೫-೨೫ಳೆಡ(ತ,ಕ) ೨೬-೨೬ ತಿ(ತ,ಕ) ೨೭-೨೭ ರಿಕೆ(ತ,ಕ)

ಜಡಜೀವ ಭಾವದೊಳಗೆ ದಳಿವುತಿಹ
ಜಡಜಾಕ್ಷನಾದಿಯಾದವರ
ಮೃಡನುತಿಬಿಟ್ಟು ಪರದೈವವ ನುತಿಪುದು
ಗ್ಗ್ಗಡ ಕವೀಂದ್ರರಿಗನುಮತವೆ ॥೨೯॥

ಜಡೆಮುಡಿಯೊಳು ಬಾಂದೊರೆ[೨೮][ಯೆ][೨೮]ಳೆಪೆರೆ ನೊಸ
ಲೆಡೆಯೊಳು ಮಿ[೨೯]ರು[೨೯]ಪಗ್ನಿಗಣ್ಣ
ಅಡಿಯೊಳಂಬಕವಿಲ್ಲದ ದೇವಗೆ[೩೦][ಕುಂ][೩೦]
ಬಿಡುವುದು ಕವಿಗಳ ಮತವೆ ॥೩೦॥

ಅದು ಕಾರಣವೀ ಕೃತಿಮುಖದೊಳು ಪಂಚ
ವದನನ ಪರಮೇಶ್ವರನ
ಮದನಮರ್ದನನ ಮಹಾದೇವನ ಶ್ರೀ
ಪದಪದ್ಮಯುಗಕೆರಗುವೆನು ॥೩೧॥

ಹರಿನೇತ್ರ ಚರ್ಮ ಕಂಕಾಲಮಸ್ತಕ ಬಂ
ಧುರತರ ಕುಣಪಂಗಳನು
ಚರಣಜ[೩೧][ಘನ ಹಾ][೩೧]ರ ಹಸ್ತಶೂಲದೊಳಾಂತ
ಪರಮೇಶನಡಿಗೆರಗುವೆನು ॥೩೨॥

ಗಂಡರುವುಳ್ಳರೊಳಗ್ಗಳನೆನಿಪನ
ಗಂಡನೆನಿಸಿ ಬಗೆಗೊಳಿಸಿ
ಗಂಡಗಾಡಿಯ ತೋರಿ ಮೆರೆವೀಶನಂಘ್ರಿಗೆ
ಮಂಡಿಪೆನೆನ್ನಳಕವನು ॥೩೩॥

ಚಿದ್ರಮಣಿಯ ರಮಣನ ನಿಜಭಕ್ತೋ
ಪದ್ರವ ವಿದ್ರಾವಣನ
ಭದ್ರನ ಭವದೂರನ ಭಾಳನೇತ್ರನ
[೩೨][ಪದ್ರಾಜೀವಕೆ][೩೨]ರಗುವೆನು ॥೩೪॥

೨೮–೨೮ ಯೊ(ತ,ಕ) ೨೯–೨೯ ಸು(ಕ)೩೦–೩೦ ತುಂ(ಕ) ೩೧–೩೧ ಗದಹ(ತ,ಕ) ೩೨–೩೨ಪದ್ರಾಜಿನಕ್ಕೆ(ತ,ಕ)

ವರಮುಕ್ತಿರಮೆಗಾವಾಸಮೆನಿಸಿ ಮು೩೩[ರ]೩೩
ಹರ೩೪[ನೇತ್ರದುಂಬಿಗಿಂಬಾದ]೩೪
ಪುರಹರನಡಿದಾವರೆಯೆನ್ನ ಮಾನಸ
ಸರಸಿಯೊಳಿರ್ಕೆ ಸಂತಸದಿ ॥೩೫॥

ಪೊಡಮಡುತ್ತೈದೆ ಸೈಗೆಡೆದಿರ್ದ ಬೊಮ್ಮ೩೫[ಕಾ]೩೫
ರೊಡಲರ ಮಣಿಮುಕುಟವನು
ಎಡಹುತೆ ಬಂದು ಮದನಮರ್ದನನ
ತೊಡೆಯೊಳಿಪ್ಪಗಜೆ ರಕ್ಷಿಪುದು ॥೩೬॥

ಅವರ್ತ ನಾಭಿವಾಳಿ ಕಡಿನೊಳ್ಪೆಳ
ವಾವೆಂದು ಭಾಷೆಯನಿತ್ತ
ಭಾವಿಸಿ ಕೈಗೆಯ್ವ ನಸುನಗು೩೬[ವ]೩೬ವುಮಾ
ದೇವಿ ಮಾಡೆಮಗೆ ಮಂಗಳವ(?) ॥೩೭॥

ತನು ಶಿವಧರ್ಮವೆ ರೂಪುಗೊಂಡಿ೩೭ರೆ ಶಾ೩೭
ಶ್ವತಸಚ್ಚಿದಾನಂದಮೂರ್ತಿ
ಜಿತನಿಕ್ಷುಮಾರಾಸುರವೃಷಭೇಂದ್ರ ಸ
ನ್ಮತಿಯನಿತ್ತೆನ್ನ ಪಾಲಿಪುದು ॥೩೮॥

ಸುರಗಣನಮಿತ ಶಿಲಾದಮುನೀಂದ್ರನ
ಸುರುಚಿರಸುಕೃತರೂಪಾದ
ಎರಡನೆ ೩೮[ಮುಕ್ಕಣ್ಣ]೩೮ನೆನಿಸುವ ನಂದೀ
ಶ್ವರ ಪಾಲಿಪುದೆನ್ನನೊಲಿದು ॥೩೯॥

ಫಣಿಕಟಕಂಗಲ್ಲದನ್ಯರ್ಗೆ ಮಣಿಯದ
ಮಣಿದ೩೯[ರ್ಪಣಂ]೩೯ತೆ ರಾಜಿಸುವ
ಗುಣಮಣಿಭೂಷಣ ವೃಷಭನಂಘ್ರಿಗೆ ನಾ
ಮಣಿವೆನು ಭರಿತಭಕ್ತಿಯೊಳು ॥೪೦॥

೩೩–೩೩ ದ(ತ,ಕ) ೩೪–೩೪ ನೆಜಿದುಂದಾದ (ತ,ಕ) ೩೫–೩೫X (ತ,ಕ) ೩೬–೩೬X(ತ,ಕ) ೩೭–೩೭ ಶೇಷಾ(ತ,ಕ) ೩೮–೩೮ ಯಣ್ಣಯ್ಯ(ತ,ಕ) ೩೯–೩೯ ಪ (ಕ) ೪೦–೪೦ ಪ್ಪಲಿಂ(ತ,ಕ)

ರುದ್ರಭಾಳಾಂಬಕಭವ ಭಕ್ತದೇ
ವದ್ರುಮ ದಕ್ಷಮಖಾರಿ
ಭದ್ರಕಾಳಿಯ ಮನದನ್ನನೆ ಶ್ರೀವೀರ
ಭದ್ರ ಪಾಲಿಪುದೀ ಕೃತಿಯ ॥೪೧॥

ಜನಿಸಿದಾಗಳೆ ಕೊಂಚನೆಟ್ಟುಗೊರೆದು ತಾರ
ಕನ ಕೊಂದು ವೃಂದಾರಕರ
ಅನುನಯದಿಂ ಸಲವಿದ ಗಿರಿಜಾನಂದ
ನನ ಧ್ಯಾನಿಸಿ ನವ್ಯಕ್ರೀತಿಯ(?) ॥೪೨॥

ವರ ವೀರಶೈವಾಚಾರವನಿ[೪೧]ಳಿ[೪೧]ಯೊಳು
ದ್ಧರಿಸುತ್ತೆ ಪರವಾದಿಗಳ
ಪರಿಹರಿ[೪೨]ಸೆ[೪೨]ಸದಿರ್ದ ಬಸವದಂಡೇಶನ
ಚರಣಾಂಬುಜಕೆರಗುವೆನು ॥೪೩॥

ಒಂದು ಮೂರಾರು ಮೂವತ್ತಾರು ಇನ್ನೂರ
ನೊಂದಿರ್ಪ ಹದಿನಾರು ಭೇದ
ವೆಂದೆನಿಸಿದ ಚೆನ್ನಬಸವೇಶನಂಘ್ರಿಗೆ
ಸಂದಿಪೆನ್ನೆನ್ನಳಕವನು ॥೪೪॥

ಪರಮಲಿಂಗಾಂಗ ಸಂಗಾನುಭಾವವ ಶಿವ
ಶರಣಸಂತತಿಗೆ ಬೋಧಿಸುತೆ
ಚರಿಸಿದಖಂಡಚಿನ್ಮಯಮೂರ್ತಿ ಪ್ರಭುವಿನ
ಚರಣಕಮಲಕೆರಗುವೆನು ॥೪೫॥

ಮಡಿವಳಮಾಚಿದೇವನ ಮಾದಿರಾಜನ
ಹೊಡೆಹುಲ್ಲಬಂಕಣ್ಣಗಳ
ಮೃಡರೂಪನೆನಿಸುವ ಸಿದ್ಧರಾಮೇಶ್ವರ
ನಡಿಯೊಳೆರಗುವೆನು ಪಣೆಯಾ ॥೪೬॥

೪೧-೪೧ ನಿ(ಕ) ೪೨-೪೨ ಗೆ(ಕ)

ಉರಿಲಿಂಗಪೆದ್ದಿ ಹಡಪದಪ್ಪಣ್ಣ ಕಿ
ನ್ನರಿಯ ಬೊಮ್ಮಣ್ಣ ಮುಂತಾದ
ವರ ಪುರಾತನ ಶರಣರ ಸಂದೋಹದ
ಚರಣಕಮಲಕೆರಗುವೆನು ॥೪೭॥

ಅಕ್ಕನಾಗಲೆ ಚೋಳಿಯಕ್ಕ ಮುಕ್ತಾಯಿ ಸ
ತ್ಯಕ್ಕ ಚಂಗ[೪೩]ಳೆ ವೈಜ[೪೩]ಕ್ಕವ್ವೆ
ಅಕ್ಕಮಹಾದೇವಿ ಅಮ್ಮವ್ವೆ ಪೊದಳಿ ನಿಂ
ಬಕ್ಕನಂಘ್ರಿಗೆ ನಮಿಸುವೆನು ॥೪೮॥

ವೇದವೇದಾಂತ ಸಿದ್ಧಾಂತ ಸಕಲ ಶಾ
ಸ್ತ್ರಾದಿ ವಿದ್ಯಾರೂಪನೆನಿಪ
ಮಾದೇವನಣುಗ ಪಾಲ್ಕುರಿಕೆ ಸೋಮೇಶನ
ಪಾದಪಯೋಜಕೆರಗುವೆ ॥೪೯॥

ಕುಸುಮಶರಾರಿ ಭೀಮೇಶ್ವರಲಿಂಗದ
ಬಸುರೊಳೊಗೆದು ರಾಜಿಸುವ
ಬಸವಕೃತಿಯ ಪೇಳ್ದ ಭೀಮಕವಿಯ ಪಾದ
ಬಿಸರುಹಕಾನೆರಗುವೆನು ॥೫೦॥

ಸಾಯದವರಕಥೆಯುಂಟೆಯೆಂದೆನುತಲಿ
ದಾಯದೊಳುಸಿರ್ವ ಭಾರತಿಯ
ಬಾಯ ಮುದ್ರಿಸಿ ಪ್ರಭುಲೀಲೆಯನೊರೆದ ನಿ
ರ್ಮಾಯ ಚಾಮಯ್ಯಗೆರಗುವೆ ॥೫೧॥

ಶಿವಕವಿ ಹಂಪೆಯ ಹರಿಹರದೇ[೪೪]ವ[೪೪] ರಾ
ಘವಪಂಡಿತ ಪದ್ಮರಸರ
ಭುವನವಿಖ್ಯಾತ ಮೊಗ್ಗೆಯ ಮಾಯದೇವ ಮ
ತ್ತ್ರವರಡಿಗಾ[೪೫]ನೆರಗು[೪೫]ವೆನು ॥೫೨॥

೪೩–೪೩ ಳವ್ವೆಜ(ಕ)
೪೪–೪೪ ವರ(ತ,ಕ) ೪೫–೪೫ನಮಿಸು(ತ)

ಶುದ್ಧನ ವಿಮಳಪ್ರಬುದ್ಧನ ಸೌಖ್ಯಸ
ಮೃದ್ಧನ ಪರಮದೇಶಿಕನ
ಸಿದ್ಧನ ಲೋಕಪ್ರಸಿದ್ಧನ ತೋಂಟದ
ಸಿದ್ಧನಡಿಗೆ ನಮಿಸುವೆನು ॥೫೩॥

ಘನತರ ಮಹಿಮ ಸರ್ಪೇಶ್ವರನೊಪ್ಪ
ತ್ತಿನ ಚೆನ್ನಬಸವೇಶ್ವರನ
ವಿನುತ ಬೋಳೇಶನ ಪದಷಟ್ಪದಯೆನ್ನ
ಮನದಾವರೆಯೊಳೊಪ್ಪಿರ್ಕೆ ॥೫೪॥

೪೬[ಪೋದ ವರ್ತಿಪ ಬಹ]೪೬ ಕಾಲದೊಳೀ೪೭[ಶ]೪೭ನ
ನಾದರರದಿಂದರ್ಚಿಪರ
ಪಾದಪದ್ಮಂಗಳ ಬಲಗೊಂಡು ಪೇಳ್ವೆನು
ಮೋದದೊಳೀ ನವ್ಯಕೃತಿಯ ॥೫೫॥

ಕರ್ಣರಸಾಯನವೆನಿಸುವ ಕೃತಿಯನು
ವರ್ಣಿಸುವೆನು ಮುನ್ನ ನೆಗಳ್ದ
ವರ್ಣಕಕವಿಗಳ ಮಾರ್ಗದೊಳಿ೪೮[ದ್ದು ನಾ
ಮನ್ನಿ]೪೮ಪುದೊಲಿದು ಸಜ್ಜನರು ॥೫೬॥

ಗುರುಲಿಂಗಜಂಗಮಭಕ್ತಿಯುಕ್ತನು ಬಿಜ್ಜ
ವರದಿರ್ಮಡಿ ಚಿಕ್ಕೇಂದ್ರ
ಪರಬಲದೊಳು ಕಾದಿ ಮೆರೆದಾತ್ಮಜ ಸಹ
ಹರನೊಳೊಂದಿದುವ ನಾ೪೯ನು೪೯ಸುರ್ವೆ ॥೫೭॥

ಆತನ ಗುರುರಾಯನು ೫೦[ಜಿ]೫೦ತಮಾಯನು
ಭೂತೇಶ ಭಕ್ತಿಸಹಾಯ
ನೀತಿಸಮೇತ ವಿಧೇಯನು ಕ೫೧ಲಿ೫೧ಪಾರ್ಥ
ಜಾತನಪಾಯವರ್ಜಿತನು(?) ॥೫೮॥

೪೬–೪೬ ಪೊಡವರ್ತಿಪ ಬಹು(ತ) ಪೊಡವರ್ತಿಪರ ಬಹು(ಕ) ೪೭–೪೭ ತ(ತ,ಕ) ೪೮–೪೮ ದ್ದನಬಣ್ಣಿ(ತ,ಕ) ೪೯–೪೯ x (ಕ) ೫೦–೫೦ ಚಿ(ತ,ಕ) ೫೧–೫೧ ವಿ(ತ)

ಚರಲಿಂಗ ಚರಣ ಸರೋರುಹಭೃಂಗನು
ಪರಶಿವತತ್ವಪ್ರಸಂಗ
ಕರುಣಾಪಾಂಗನಭಂಗಸುಜನಸಂಘ
ನುರುತರ ವಿಮಲಾಂತರಂಗ ॥೫೯॥

ಪರಮಪವಿತ್ರಚರಿತ್ರನು ನಿಜಶಿಷ್ಯ
ದುರಿತಲತಾ ತರಿ[೫೨][ದಾ][೫೨]ತ
ಚರಲಿಂಗಭಕ್ತಿಕಳತ್ರಶೀಲಾನ್ವಿತ
ಗುರು ಪವಾಡದದೇವ[೫೩][ಪಾ][೫೩]ತ್ರ(?) ॥೬೦॥

ಸತ್ಯನು ಸುವಿದಾದಿತ್ಯನು ಸಜ್ಜನ
ಸ್ತುತ್ಯನು ಸದ್ಗುರುವಿನುತ
ಕೃತ್ಯನು ಪರಿಹೃತವ್ರಾತ್ಯನು ಚರಲಿಂಗ
ಭೃತ್ಯ[೫೪][ನ][೫೪]ಕೃತ್ಯವರ್ಜಿತನು ॥೬೧॥

ಪರಮತಮದವಾರಣವಿದಳನಸಿಂಹ
ಹರಮಂತ್ರಶೋಭಿತಜಿಹ್ವ
ನಿರುತನಿರ್ಮಲಕೀರ್ತಿಪೂರಿತ ತ್ರಿಭುವನ
ಗುರುಸಿದ್ಧಮಲ್ಲಿಕಾರ್ಜುನನು ॥೬೨॥

ಆತ ನಮ್ಮೊಳು ಸವಿಮಾತನಾಡುತೆ ವಿ
ಖ್ಯಾತ ಚಿಕ್ಕೇಂದ್ರ ಚರಿತೆಯ
ಪ್ರೀತಿಯಿಂದೊಲಿದು ಪೇ[೫೫][ಳೆನೆ][೫೫] ಪೇಳ್ದೆನಿಂತಿದ
ನೋತು ಲಾಲಿಪುದು ಸಜ್ಜನರು ॥೬೩॥

ಮೃದುಪದಯಮಕಗಮಕಜಾತಿರೀತಿಯಿಂ
ಪೊದವಿದ ಸುಕುಮಾರಾರ್ಥ
ಸದಲಂಕೃತ ನವರಸಭಾವಂಗಳಿಂ
ದೆದೆಗೊಳಿಸುವೆನು ಕೋವಿದರ ॥೬೪॥

೫೨-೫೨ ಜಾ(ತ,ಕ) ೫೩-೫೩ ಪೌ(ತ,ಕ) ೫೪-೫೪ ಳನು(ತ,ಕ) ೫೫-೫೫ ಳಿದೆ(ತ,ಕ)

ವಿಳಸಿತ ಗುಣವಿರೆ ಕೈಕೊಳ್ಳುದಿದನಿದ
[೫೬][ಪು][೫೬]ಳು[೫೭][ಕೊಂ][೫೭]ದೊಂದಿರ್ದಡದನು
ಒಲಿದು ತಿದ್ದುವುದು ಜಾಣರು ಮನ ಮಚ್ಚಿದ
ಳಳಕವ ತಿದ್ದುವಂದದೊಳು ॥೧೫॥

ಕೇಳಲೊಡನೆ ಜುಮ್ಮು ಜುಮ್ಮೆನೆ ಮೈನವಿ
ರೇಳುತೆ ಸೊಗಗಡಲೊಳಗೆ
ಆಳದೊಡಾಲಿಸುವರ ಬಗೆ[೫೮][ಯ][೫೮]ಕ್ಕಟ
ಹೇಳಲೇನದು ಕಬ್ಬವೆಂದು ॥೧೬॥

ತೆಗೆದಂತೆ ಹೊಂ[೫೯]ಜ[೫೯]ರಿಗೆಯ ಮಗಮಗಿಪ ಮ
ಲ್ಲಿಗೆಯ ಮಾಲೆಯನೆತ್ತಿದಂತೆ
ಬಗೆವಂದ ಕೃತಿಯನೊರೆವುದೊರೆಯದೊಡೇನು
ತೆಗದೆತ್ತುಗಲ್ಲನೆತ್ತುವರೆ ॥೧೭॥

ಕಬ್ಬೆಂದೊಡೇನು ಮೆಲ್ವುದಕೆ ತಕ್ಕುದೆ? ಮರ
ಗಬ್ಬು ಸಂತಸದಿ ಮೆಲ್ವವರು
ಕಬ್ಬಮೆಂದೊಡೆ ಕೇಳ್ವುದಕೆ ತಕ್ಕುದೆ ಕಾ
ಳ್ಕಬ್ಬವಂತದು ಕೋವಿದರು ॥೧೮॥

ಓದಿದೊಡರ್ಥ ಗೋಚರಿಸದಿರಲು ಬಳಿ
ಕೋದಿ ಯೋಚಿಸೆ ಬಗೆಗೊಳದ
ಆ ದಡ್ಡಗವಿತೆಯನೆಣಿಪರೆ ರಸಿಕ ಸ
ಮ್ಮೋದವೆನಿಪ ಕಬ್ಬದೊಳು ॥೧೯॥

ಗುಣವಿದು ದೋಷವೆಂದೆಂಬ ಭೇದವನಿನಿ
ತೆಣಿಸದೆ ಬಾಯ್ಗೆ ಬಂದಂತೆ
ಅಣಿಯರವಲ್ಲದ ಕುಳಿವಾತನರಸುವ
ಬಣಗುವಾನಿ[೬೦][ಸ][೬೦]ನು ಸತ್ಕವಿಯೆ ॥೨೦॥

೫೬–೫೬ಪ(ತ,ಕ) ೫೭–೫೭ಕೆಂ(ತ,ಕ)೫೮–೫೮ರು(ತ,ಕ) ೫೯–೫೯ ಜೀ(ಕ)೬೦–೬೦ ತ(ತ,ಕ)

[೬೧][ಕಟ್ಟಳೆಗವಡಿ][೬೧]ತರಸನೇರಿದಡದು
ನೆಟ್ಟನೆ [೬೨]ಹೇ[೬೨]ಮಕ್ಕೆ ಸಮವೇ
[೬೩][ಬಿಟ್ಟಿಗಬ್ಬಿಗ][೬೩]ನೃಪಸಭೆಯೊಳಗಿರಲಳ
ವಟ್ಟ ಸತ್ಕವಿಗೆಣೆಯಹನೆ ॥೭೧॥

ಅರಿಯದೆ [೬೪]ಬಾಯ್ಗೆ [೬೪]ಬಂ[೬೫][ದ][೬೫] ಕುಳಿವಾತ ತಾ
ನರಚುವನೊಬ್ಬ ಕಬ್ಬಿಗನು
ಬರಿದೆ ಪೊಗಳಿ ಕೇಳುವನೊಬ್ಬ ಜಾಣ ಮೂ
ಕೊರೆಯ ಮೋಟನ ನುತಿಪಂತೆ ॥೭೨॥

ತಿಳಿವಿಲ್ಲದೆ ನಲ್ಗಬ್ಬಮನೇಳಿಪ
ತಿಳಿದು ಮಚ್ಚರದಿಂದೆ ಪಳಿವ
ಖಳರನಿಳೆಯೊಳಾಗುಮಾಡಿದ ವಿಧಿ ತನ್ನ
ತಲೆಯ [೬೬]ನೀಗಿ[೬೬] ದುದರಿ[೬೭][ರ][೬೭]ವು ॥೭೩॥

ಸುಗುಣವಿಲ್ಲದೆ ವರ್ತಿಪ ಹಿಸುಣರ ನಾ
ಲಗೆಯ ಮೂಲದೊಳು ಪುಟ್ಟಿಸದೆ
ಮಿಗದೊಳು ಕತ್ತುರಿಯನು ಸೃಜಿಸಿದನಜ
ಬಗೆವಡದೇನು ಥಾಂದಸನೊ ॥೭೪॥

ಹೊಲೆಯರ ಬಚ್ಚಲೊ[೬೮][ಳೊಗೆ ದುಮ್ಮತ್ತವ][೬೮]
ನೆಲೆಗೊಂಡ ಜಿಗುಳೆಯಲ್ಲದೊಡೆ
ಖಳರ ನಾಲಗೆ ಸುಜನರ ಜೀವರಕ್ತವ
ನಲಸದ[೬೯][ಲದು][೬೯]ಹೀರುತಿಹುದೆ ॥೭೫॥

ವಿಳಸಿತ ಪರಿಮಳವಿರುತಿರೆ ದುರ್ಗಂಧ
ಕೆಳಸುವ ನೊಳನಂತೆ ಖಳನು
ಲಲಿತ ಸತ್ಕಾವ್ಯದೊಳೆಸೆವ ಲೇಸಿರಲದ
ನುಳಿದು ದೋಷವನರಸುವನು ॥೭೬॥

೬೧–೬೧ ಕಟ್ಟಾಳೆಗವಡೇ(ತ,ಕ) ೬೨–೬೨ರೋ(ಕ), ೬೩–೬೩ ಬೆಟ್ಟಗಬ್ಬಿಗೆ(ತ,ಕ) ೬೪–೬೪ x (ಕ)೬೫–೬೫ದಾ(ತ,ಕ) ೬೬–೬೬ನಿಂಗಿ(ಕ) ೬೭–೬೭ರಾ(ತ,ಕ)೬೮–೬೮ಳಗೆ ದುಮ್ಮತ್ತರಿಯೆ(ತ,ಕ) ೬೯–೬೯ಲೆದ್ದು(ತ,ಕ)

ಜಲಧಿ ಚಂದ್ರನ ಕಂಡುಬ್ಬುವವೊಲು ಪ
ಲ್ಲವಲಮುಬ್ಬುವುದೆ ಸತ್ಕೃತಿಯ
ನೊಲಿದಾಲಿಸಿ ರಸಿಕರು ನಲಿವಂತೆ ಗಾ
ವಿಲ[೨೦]ರದು[೨೦] ಮೆಚ್ಚಿ ಮಚ್ಚುವರೆ ॥೭೭॥

[೨೧]ಎ[೨೧]ಲರ ತಿಟ್ಟಿಂ ತಳಿರೊಲಿವಂತೆ ಕೊರಡು ತಾ
ನೊಲಿವುದೆ ಸರಸ ಸತ್ಕೃತಿಯ
ಒಲಿದು ರಸಿಕರಾಲಿಸಿ ತಲೆವೊಲೆವಂ
ತೊಲೆವರೆ ತಲೆಯ ಗಾವಿಲರು ॥೭೮॥

ಬಗೆವಂದ ಬನಿತೆಯ ಸೊಬಗು ಹಂದಿಗೆ ಸೊಣ
ಕಗೆ ತೆಂಗಾಯಿ ಘೂಕಂಗೆ
ಹಗಲು ನಲ್ಗಬ್ಬದಿಂಪಿನ ಸೊಂಪು ಗಾಂಪಂಗೆ
ಬಗೆಗೊಳಿ[೨೨][ಸ][೨೨]ದೊಡೂಣಯವೇ ॥೭೯॥

ಮೂಕೊರತಿಯ ರೂಪಿಗೆ ಮೆಚ್ಚಿ ಮೋಟನು
ಬಾಕುಳಿತನದೊಳಿಪ್ಪಂತೆ
ಆ ಕುಳಿವಾತಿನ ಬಣಗುವಾತಿಗೆ ವಿ
ವೇಕವಿಹೀನ ಮಚ್ಚುವನು ॥೮೦॥

ಪೋಗಲವರ್ ಮಾತೇಕಿಡುತೊಳು ಗುಣ
ಸಾಗರರೆನಿಪ ಬಲ್ಲವರು
ಈಗಳೀ ನಲ್ಗಬ್ಬಮನಾರೈದನು
ರಾಗದಿಂದೋ[೨೩]ದಿ[೨೩] ಲಾಲಿಪುದು ॥೮೧॥

ರಸಿಕರ ಕರ್ಣರಸಾಯನ ಭಾವಜ್ಞ
ವಿಸರ ಚಿತ್ತಾನಂದಮೆನಿಸಿ
ಎಸೆವ ಸತ್ಕಾವ್ಯವಿಂತಿದು ದುರ್ವಿದಗ್ಧ ನೀ
ರಸರಸಿಕತೆಗೊಳಗಹುದೆ ॥೮೨॥

೨೦-೨೦ ರು(ಕ) ೨೧-೨೧ ಅ(ತ,ಕ) ೨೨-೨೨ ಸಿ (ತ,ಕ) ೨೩-೨೩ ವಿ(ತ) ೨೪-೨೪ತ (ತ,ಕ)

ಆಲಿಸದಿರ್ದೊಡರಿಯೆ ಕಿವಿಗೊಡು೭೪[ತೊ]೭೪ಲಿ
ದಾಲಿಪ ರಸಿಕರ ಮನವ
ಕೋಳಗೊಳ್ಳದೆ ಬಿಡುವುದೆ ಮಲ್ಲಿಕಾರ್ಜುನ
ಪೇಳಿದ ಕಾವ್ಯದ ಸೊಬಗು ॥೮೩॥

ಮನವೊಲ್ದು ಸೆಜ್ಜೆಮನೆಯ ಮಂಚಕೈದುವ
ಮನದನ್ನಳ ನೇವುರದ
ದನಿಯಂತೆ ಮಲ್ಲಿಕಾರ್ಜುನಕೃತಿ ರಸಿಕರ
ಮನವನಿರ್ಕುಳಿಗೊಳ್ಳದಿಹುದೆ ॥೮೪॥

ತುಂಬಜವ್ವನೆಯ ನ೭೫[ಲ್ಗಾ]೭೫ಡಿಯವೊಲಲ
ರಂಬನ ನನೆಯಂಬಿನಂತೆ
ತುಂಬಿಗಳಿಂಚರದಂತೆ ಬ೭೬[ಲ್ಲ]೭೬ರ ಬಗೆ
ಯಂ ಬಂದಿವಿಡಿವುದೀ ಕಾವ್ಯ ॥೮೫॥

ತನಯನ ಮುದ್ದುವಾತಿನಿಯಳ ಸೊ೭೭[ಂಕು]೭೭ ಚಂ
ದ್ರನ ಸಿರಿಯಾ ಚೆಲಿಪಾಲ
ಕೆನೆ ಮಗಮಗಿಪ ಜಾಜಿಯವೊಲು ರಸಿಕರ
ಮನವನೊಲಿಪುದೀ ಕಾವ್ಯ ॥೮೬॥

ತ್ರಿವಿಧಲಿಂಗದಿ ಭಕ್ತಿ ಸತ್ಕ್ರಿ೭೮[ಯಾನ್ವಿ]೭೮ತ ದೋ
ಷವಿದೂರಮಾಗಿ ರಾಜಿಸುವ
ಶಿವಶರಣರವೋಲೆಸೆವುದೀ ಕೃತಿಯೆನ
ಲವನಿಯೊಳಿದು ಸೇವ್ಯಮಲ್ತೆ ॥೮೭॥

ಕೃತಿನಾಮ ಕರ್ಣರಸಾಯನಯಿಂತಪ್ಪ
ಕೃತಿಪತಿ ಚಿಕ್ಕಭೂವರನು
ಕೃತಿಯ ಪಾಲಿಪರೀಶ್ವರಭಕ್ತರೆನಲೆನ್ನ
ಕೃತಿ೭೯[ಲೋಕಹಿತ]೭೯ಮಾಗದಿಹುದೆ ॥೮೮॥

೭೫-೭೫ಲಾ(ತ,ಕ) ೭೬-೭೬ ಲ(ತ,ಕ) ೭೭-೭೭ ಕ್ಕು(ತ,ಕ)೭೮-೭೮ ಯ ಗೀ(ತ,ಕ) ೭೯-೭೯ ಯ ಲೋಕತ(ತ,ಕ)
೮೦-೮೦ದಕೆ(ಕ) ೮೧-೮೧ ರ್ದ(ಕ)

ಇದು ಜಾತಿರೀತಿಯಿಂತದು ಭಾವವಿದು ರಸ
ವಿ[೮೦]ದು[೮೦] ಸೊಂಪುವೆತ್ತೆಸೆ[೮೧]ದ[೮೧]ರ್ಥ
ಇದು ಪದವಾಸನೆಯೆಂದು ಭಾವಿಸಬಲ್ಲ
ಚದುರರಾಲಿಪುದೀ ಕೃತಿಯ ||೮೯||

ರಸಿಕರು ಭಾಜ್ಞರು ಬಲ್ಲಬ[೮೨][ಲ್ಲಾ][೮೨]ಣ
ರಸಮಕೋವಿದರು ಸಂತಸದಿ
ಒಸೆದಾಲಿಸಿ ನವರಸಪೂರಮಾಡಿ[೮೩][ಬಾ][೮೩]
ಜಿಸುವುದೀ ಕಾವ್ಯಮನೊಲಿದು ||೯೦||

ಆಲಿಪುದಖಿಳಸಜ್ಜನರೊಲ್ದು ಕೀರ್ತಿವಿ
ಶಾಲನ ವಿಜಯಾಂಗನೆಯ
ತೋಳತೆಕ್ಕೆಯ ಹಿಂಗದಿರ್ಮಡಿ ಚಿಕ್ಕಭೂ
ಪಾಲನ ಚಾರುಚರಿತೆಯ ||೯೧||

ಇದು ಪೂರ್ವದ ಪುರುಷರ ಚಾರಿತ್ರವ
ಲ್ತಿದನೇಕೆ ಕೇಳಬೇಕೆಂಬ
ಮದಿತರ ನುಡಿಯಂತಿರಲೆಂ[೮೪][ಬೆನ][೮೪]ರಿದ
ಲ್ತದಕೆ ಪೇಳುವೆನುತ್ತರವ ||೯೨||

ತಾವು [೮೫][ಕುಂ][೮೫]ಡರು ತಮ್ಮ ತಂದೆಗಳೆನಿಪರು
ಭಾವಿಸಿ ನೋಡೆ ಗೋಳಕರು
ಆ ವರಜಾನುಜರ್ಯೆವರಿಗೊರ್ವಳೆ
ಭಾವಜ ಕೇಳಿಗೆ ಬನಿತೆ ||೯೩||

ಅವರೊಳು ಪಿರಿಯನೆನಿಪನು ಜೂದಾಳಿ ಮೇ
ಣವರಿಗಧಿಕನತಿ ಜಾರ
ಅವರು ವಿಜಯವೇದ್ಯರಾದರವರ ದೇಶ
[೮೬][ವ][೮೬]ವರ ಚರಿತ್ರೆ ಭಾರತವು ||೯೪||

೮೨-೮೨ಲ್ಲಾ(ತ,ಕ) ೮೩-೮೩ ರಾ(ತ,ಕ) ೮೪-೮೪ ಬವ(ತ,ಕ) ೮೫-೮೫ಕಂ(ತ,ಕ)೮೬-೮೬ನ (ತ,ಕ)

ಅದು ಪೂರ್ವದ ಪುರುಷರ ಕತೆಯೆಂದೊಡೇ
ನದು ಪುಣ್ಯಕತೆಯೆ ಕೇಳ್ವುದಕೆ
ಅದಕಿಂತಲಿರ್ಮಡಿ ಚಿಕ್ಕಭೂಪಾಲನ
ಸದಮಳ ಚಾರುಚರಿತ್ರ ॥೯೫॥

ಭಾಳತಳದೊಳು ಭಸಿತ ರುದ್ರಾಕ್ಷಿಯ
ಮಾಲೆ ಕರದೊಳು ಜಿಹ್ವೆಯೊಳು
ಮೂಲಮಂತ್ರವದಿರಲಾತನೆ ಶಿವನೆಂದು
ಹೇಳುತಿಹವು ನಿಗಮಗಳು ॥೯೬॥

ಶಿವನಲ್ಲದವರ್ಗೆ ಶಿವಾರ್ಚನೆ ಶಿವಭಕ್ತಿ
ಸವನಿಸದಾವ ಕಾಲದೊಳು
ಶಿವಭಕ್ತಿಯೊಳು ರತನೆನಿಪ ಮಹಾತ್ಮನೆ
ಶಿವನೆಂದುದು ನಿಗಮೋಕ್ತಿ ॥೯೭॥

ಅದರಿಂದ ಶಿವಭಕ್ತನೆ ಶಿವನೆಂದೆಂ
ಬುದು ಸಿದ್ಧಾಂತವೆಂದರಿದು
ಪದೆ[೮೭][ದ][೮೭]ರಿ ಶಿವಭಕ್ತನ ಚಿಕ್ಕೇಂದ್ರನ
ಸದಮಲ ಸತ್ಪುಣ್ಯ ಕಥೆಯ ॥೯೮॥

ಚರಲಿಂಗಭಕ್ತರು ಕ[೮೮][ರ][೮೮]ಣನಿರ್ಮುಕ್ತರು
ದುರಿತಹರಣರು ಶರಣರು
ನಿರುಪಮಚರಿತರು ಸದ್ಗುಣಭರಿತರು
ಹರುಷದೊಳಾಲಿಪುದಿದನು ॥೯೯॥

ಇದು ಗುರುಭಕ್ತನಿರ್ಮಡಿ ಚಿಕ್ಕಭೂಪನ
ಸದಮಳ ಪುಣ್ಯಕಥೆಯೊಳು
[೮೯][ವೊ][೮೯]ದವಿದ ಕಾವ್ಯಪ್ರಮುಖಪದ್ಧತಿಸಂಧಿ
ಚದುರರ ಹೃ[೯೦]ದಯ[೯೦] ಸಂಬಂಧಿ ॥೧೦೦॥

೮೭-೮೭ ದಾ(ತ,ಕ) ೮೮-೮೮ರು (ತ,ಕ) ೮೯-೮೯ವೇ(ತ,ಕ)೯೦-೯೦ದ(ಕ)

ನಳಿತೋಳು ಶಾಖೆ ಸೆಳ್ಳುಗುರಲದೊರ್ಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೧೦೧॥

ಪ್ರಥಮ ಸಂಧಿ ಸಂಪೂರ್ಣಂ

❖❖

---

೯೧ + ಮಂಗಳ ಮಹಾಶ್ರೀ ಶ್ರೀಗುರುವೆ ಪಂಚವಣ್ಣಿಗೆ ಚೆನ್ನಮಲ್ಲಿಕಾರ್ಜುನದೇವರ ದಿವ್ಯಪಾದಪದ್ಮಂಗಳೇ ಗತಿ(ತ,ಕ)

ಸಂಧಿ : ೨

ಆ ನಾಡು ಸೊಗದೆ ನಾಕಕೆ ಜೋಡು

ಶ್ರೀ ಗಿರಿಜಾನಯನೋತ್ಪಲಹಿಮಕರ
ರಾಗ ವಿರಾಗ ವಿದೂರ
ನಾಗಾಸುರಮರ್ದನ ಶಂಕರ ಶರ
ಣಾಗೆನಗೊಲಿದನವರತ ॥೧॥

ಆದರಣೆಯೊಳಾಲಿಪುದು ಸಜ್ಜನರಿದ
ನೋ[೧][ದಿ][೧]ಪೆ[೨]ನೊ[೨]ಲಿದೆಂತೆನಲು
ಮೇದಿನಿಯನು ಮಿಗೆ ಬಳಸಿಯೊಪ್ಪುವುದು ಸಂ
ಮೋದದಿಂ ನೀರನಿಧಾನ ॥೨॥

ಮಡ[೩]ಲಿರಿ[೩]ದಿಡಿಕಿರಿದೆಡೆಗುಡದಿಹ ಚೆಂ
ಗುಡಿವಳ್ಳಿ ಹ[೪][ಬ್ಬಿ][೪] ರಂಜಿಸುವ
ತಡಿಯ ಚೆಂಬೊಗರ ಚೆಲ್ವಿಕೆ ಪ[೫][ಸ][೫]ರಿಸಿ ದಾಂ
ಗುಡಿ[೬][ಯವೊ][೬]ಲೆಸೆವುದಾ ಕಡಲು ॥೩॥

ಸಿರಿಯರಸನ ಹಕ್ಕೆಮನೆ ಸಿರಿದೇವಿ ಚಂ
ದಿರರ ತಾಯ್ವನೆ ಸಂಕದಿಕ್ಕೆ
ತೆರೆನೊರೆಗಳ ಹರವರಿದಾಣಮೆನಿಸಿ ಸಾ

೧-೧ ದು(ತ,ಕ) ೨-೨ ನ (ಕ)೩-೩ ಲರ (ಕ) ಲಿರ(ತ) ೪-೪ ದಿ (ತ,ಕ)೫-೫ x (ತ,ಕ) ೬-೬ ವುದ (ತ,ಕ) ೭-೭ ದೆ (ತ,ಕ)

ಗರವೆಸಕಂಬಡೆದಿಹು[೭]ದು[೭] ॥೪॥

ಪವಳವಳ್ಳಿಗಳಿನೊಪ್ಪುವ ತಟಮೇಖಲೆ
ನವಮಣಿರುಚಿಯಿಂದೆಸೆದು
ಅವನಿವನಿತೆಯುಟ್ಟ ಚಿತ್ರಾಂಬರವೆನಿ
ಸುವುದಬ್ಧಿ ತೆರೆ[೮][ನಿರಿ][೮]ಯಾಗೆ ॥೫॥

ಬಡಬಾಗ್ನಿ ಪಣೆಗಣ್ಣು ನೊರೆ ಮೈಯ ಭೂತಿ [೯][ಚೆಂ][೯]
ಗುಡಿ ಜಡೆ ಶಂಕ[೧೦][ಶಶಾ][೧೦]ಂಕ
ಬಿಡದೆ ನಿದ್ರಿಪ ವಿಷ್ಣು ಕಂ[೧೧][ದ][೧೧] ದ ಕಪ್ಪಾಗೆ
ಮೃಡನೆನೆ ಕಡಲೆಸೆದಿಹುದು ॥೬॥

ಸುರಪತಿಗೈಶ್ವರಿಯನು ದನುಜಾರಿಗಿಂ
ದಿರೆಯನೆಸೆವ ಕೌಸ್ತುಭ[೧೨][ವ][೧೨]
ಪುರಹರ[೧೩][ಗಿ][೧೩]ಂಗದಿರನನಿತ್ತ ಪೆಂಪಿಂದೆ
ದೊರೆಯೆನಲೆಸೆವುದಾ ಕಡಲು ॥೭॥

[೧೪]ತ್ರೆ[೧೪]ರೆಯೆ ಸೀಗುರಿ ನೊರೆ ಕೊಡೆ ಸಿಡಿವನಿಯೆ ಚಾ
ಮರವಾಮೆ ಮೃಗರಾಜಪೀಠ
ಧರೆ ತನಗೊಳಗಾಗಿರೆ ರಾಜವಿಭಬದೆ
ಧರಣಿಪನೆನಿಪುದಾ ಕಡಲು ॥೮॥

ಅನಿಮಿಷವಾಸವಾಗಿರ್ದು ಸುರಾಶ್ರಯ
ವೆನಿಸುವ ಸಗ್ಗವೇನೆಣೆಯೆ
ತನಗೆಂದು ವಚಿಸುವವೊ[೧೫][ಲ್ಕರೆ][೧೫]ವುದು ಕಡ
ಲನಿಮಿಷವಾಸವಾಗಿರುತೆ ॥೯॥

ಸುರಸರಣಿಯೊಲುಡುಪನಂತರತ್ನ ಮ
ಕರ ಮೀನ ತತ್ಕಟ ಶೋಭಿ(?)
ಸರಸಿಜನಾಭನವೋಲ್ ಶಂಖಚಕ್ರದೆ
ಪರಿವಡೆದಿಹುದಾ ಕಡಲು ॥೧೦॥

೮-೮ ನೀರು (ತ,ಕ) ೯-೯ಚಿಂ (ತ,ಕ) ೧೦-೧೦ ತರಾ (ತ,ಕ) ೧೧-೧೧ ದಾ (ತ,ಕ) ೧೨-೧೨ ದ (ತ,ಕ) ೧೩-೧೩ ನಿ(ತ,ಕ) ೧೪-೧೪ ತೊ(ಕ) ೧೫-೧೫ ಲ್ಕೆರ (ತ,ಕ)

ಶಿವಸಭೆಯಂತೆ ಮುಕ್ತಾಸಿತವಬ್ಜ ಸಂ
ಭವನಂತೆ ಗೋಪತಿ ರಾಜಿ
ಸುವ ಶಾಲೆಯಂತೆ ಬಾಡಬಯುತಮಾಗಿಯಾ
ರ್ಣವಮೊಪ್ಪಿಹುದೇನನೆಂಬೆ ॥೧೧॥

ಆ ನೆಗಳ್ದಂಬುಧಿಯೆಂಬುಡುಗೆಯುಟ್ಟು
ಭೂನಾರಿ ಸಂತಸದಿಂದೆ
ತಾನೊಲ್ದು ತಳೆದ ಪೊಂಗಳಸವೊಯೆನೆ ಜಾಂ
ಬೂನದಶೈಲಮೊಪ್ಪಿಹುದು ॥೧೨॥

ಕುಳಿರಾವರಿಸಿದ ಹಿಮಗಿರಿ ಮೇಲುದಿ
ನೊಳಗಿರ್ಪ ಪೆರ್ಮೊಲೆಯಾಗೆ
ತೊಲಗಿದ ಮೇಲುದಿನಂ[೧೬][ತಿ][೧೬]ರ್ಪ ರ*[ಸೆ]*ವೆಣ್ಣ
ಮೊಲೆಯೆನಲೆಸೆವುದಾ ಮೇರು ॥೧೩॥

ಸುರನಿವಾಸವಪ್ಸರರಿರ್ಕೆ ವಿದ್ಯಾ
ಧರರಿಂಬು ಯಕ್ಷರ ಗೊತ್ತು
ಗರುಡರಂಗಡಿ ಗಂಧರ್ವರ ನೆಲೆ ಸಿ
ದ್ಧರ ಮನೆಯೆನಿಪುದಾ ಶೈಲ ॥೧೪॥

ಹರಿನೀಲ[೧೭][ದಿಂ ಗಂಡ][೧೭]ಶೈಲಂಗಳಿಂ ಸುರು
ಚಿರರತ್ನಕೂಟಗಳಿಂದೆ
ಪರುಸದ ಪಾಸರೆಯಿಂ ಸರ್ಗವ[೧೮][ಣಿ][೧೮]ಗಳ
ಪರಪಿಂದೆಸೆವುದಾ ಮೇರು ॥೧೫॥

ಪರಿವ ಸುಧಾನಿರ್ಜರವಾಹಿನಿಗಳಿಂ
ದು[೧೯][ರು][೧೯]ಸಿದ್ಧರಸದ [೨೦]ದೋಣಿ[೨೦]ಗಳಿಂ
ಸುರಸತಿಯರ ಬಿನದಿಪ ಸರಸಿಗಳಿಂದೆ
ಕರಮೆಸೆವುದು ಕನಕಾದ್ರಿ ॥೧೬॥

೧೬–೧೬ ತೋ (ತ,ಕ) *–* ಸ (ತ,ಕ) ೧೭–೧೭ ದಂ ಗಡ (ತ,ಕ) ೧೮–೧೮ ಣೆ (ತ,ಕ) ೧೯–೧೯ ರ (ತ,ಕ)
೨೦–೨೦ ದೊಣೆ (ಕ)

ಮರುಜವಣಿಯ ಮೆದ್ದು ಸೊದೆಯೀಂಟಿ ನಿರ್ಜರ
ತರುಗಳಡಿಯ ಮೆಲುಕಿರಿದು
ತೊರೆವ ಮೊಲೆಯ ಕರುಗಳಿಗೂಡಿ ಸಗ್ಗಿಗ
ತುರುವಿಂಡು ತುರುಗಿಹುದಲ್ಲಿ ॥೧೭॥

ಪಾರಿಜಾತಮನೇರಿ[೨೧]ದ[೨೧] ದೊಂಬೆಗಳೊಳು
ತಾರಗೆಗಳ ತೊಲಗಿಸುತೆ
ಆರ್ದೈದು ಪೂದಿರಿವ [೨೨][ಸು][೨೨]ರನಾರಿಯರಿಂ
ದಾ ರನ್ನದಪ್ಪಲೊಪ್ಪುವುದು ॥೧೮॥

ಎಸೆವ ಸಗ್ಗಿನವಳ್ಳಿವನೆಯೊಳು ಹೂವಿನ
ಹಸೆಗಳೊಳನುರಾಗದಿಂದೆ
ಸುಸಿಲೆಸಗುವ ಸುರಮಿಥುನಂಗಳಿಂದೆ ಕಂ
ಗೆಸೆವುದಾ ಕಸವರವೆಟ್ಟು ॥೧೯॥

ಮಿಸುಪ ಮಾಣಿಕದ [೨೩][ಕಂದರ ಕಂದರಗಳೊಳ][೨೩]
ಗಸಮಾಕ್ಷಲಿಂಗಪೂಜೆಯನು
ಎಸಗುವ ಮಣಿಭದ್ರಸಿದ್ಧಸಾಧ್ಯಾಮರ
ವಿಸರದಿಂ ಮೆರೆವುದಾ ಮೇರು ॥೨೦॥

ಗೋಮು[೨೪][ಖಾಕಾರವಸುಧೆ ಪೀಠ][೨೪] ಮಣಿಸಾ
ನೇ ಮಣಿಮಂಡನಮಾಗೆ
ಆ ಮಹಾ ರ[೨೫][ಜ][೨೫]ತಲಿಂಗಂಬೊಲು ಮೆರೆವುದು
ಹೇಮಪರ್ವತ ಪರಿವಡೆದು ॥೨೧॥

ಆ ಮೇರುಶೈಲಕ್ಕೆ ತೆಂಕದಿಕ್ಕಿನೊಳ್ಳೈದೆ
ತಾ ಮೆರೆವುದು ಸೊಬಗಿಂದೆ
ರಾಮಣೀಯಕಮಾದ ಕನ್ನಡದೇಶವಿ
ಳಾಮುಖಮಂಡನಮೆನಿಸಿ ॥೨೨॥

೨೧-೨೧ X (ಕ) ೨೨-೨೨ ನೂ (ತ,ಕ) ೨೩-೨೩ ಕಂಧರ ಕಂಧರಗಳೊಳಂ (ತ,ಕ) ೨೪-೨೪ ಖಕಾವಸುದೇಹೀಡ (ತ,ಕ) ೨೫-೨೫ ಜ (ತ,ಕ) + ಕಾಗದಪ್ರತಿಯಲ್ಲಿ ಈ ಪದ್ಯ ೨೬ನೆಯ ಪದ್ಯದ ತರುವಾಯವಿದೆ. ಆದರೆ ಸಂಕೇತದೊಂದಿಗೆ ಇದರ ಸ್ಥಾನ ಇಲ್ಲಿಯೆಂದು ತೋರಿಸಲಾಗಿದೆ.

ಸುರಲೋಕದಂತೆ ವಿಬುಧರಾಜಿ ಸಂವ
ತ್ಸರದಂತೆ ಬಹುಧಾನ್ಯಶೋಭಿ
ತರಣಿಮಂಡಲದಂತೆ ಗೋಕುಲ[೨೬]ಯುತ[೨೬]ಮಾ
ಗಿರುತಿಹುದಾ ಜನಪದವು ॥೨೩॥

[೨೭][ತ][೨೭]ಳಮಧ್ಯ ವಕ್ಷೋರುಹ ನೇತ್ರ ಕುಂತಳ
ದೊಳು ಕ್ಷಾಮಕಠಿಣಕಾ[೨೮][ರಿ][೨೮]ಣ್ಯ
ಚಲನತೆ ಕುಟಿಲತೆಯಿಪ್ಪುದಲ್ಲದೆಯಾ
ನೆಲದೊಳಗರಸಿದೊಡುಂಟೇ ॥೨೪॥

ಕರದಂಡಮೆಂಬುದಂಬುಜದೊಳು ಗೋತ್ರಾರಿ
ಸುರಪನೊಳವಿಚಾರತ್ವ
ಮರುದಾಪ್ತನೊಳಗಪವಿತ್ರನೆ ಪರಿಕಿಸೆ
ಗಿರಿಗಳೊಳಲ್ಲದಲ್ಲುಂಟೇ ॥೨೫॥

ಭ್ರಮಣವೆಂಬುದು ತೊಡೆ ಚಕ್ರಾಂಗದೊಳು ಚಂ
ದ್ರಮನೊಳ್ಳೈದೆ ಕಂದುಕುಂದು
ಭ್ರಮರನೊಳಳಿಯುವಾರಡಿಯೆಂಬುದಲ್ಲದೆ
ವಿಮಳವಿಷಯದೊಳಗುಂಟೆ ॥೨೬॥

ಆ ನಾಡು ಸೊಗದೆ ನಾಕಕೆ ಜೋಡು ಭಾವಿಪೊ
ಡಾ ನಾಡು ಸೊಬಗಿನ ಬೀಡು
ಆ ನಾಡು ಸಿರಿಯಾಡುಂಬೊಲವೆಂದೆನ
[೨೯][ಲಾ][೨೯]ನಾಡಿನಿರವನೇಂ ಪೇಳ್ವೆ ॥೨೭॥

ಕರಿ ಚಮರೀಮೃಗ ಮೃಗರಾಜ ನೆಂಪಡಿ
ಚರಿಸದಿಹಾರಣ್ಯವಿಲ್ಲ
ವರಮಾಜು ಮಣಿಗಣಮೊಗದೆಳೆವಡೆಯದ
ಗಿರಿಗಳಿಲ್ಲಾ ದೇಶದೊಳಗೆ(?) ॥೨೮॥

೨೬-೨೬ X (ಕ) ೨೭-೨೭ರು(ತ,ಕ) ೨೮-೨೮ ರು(ತ,ಕ) ೨೯-೨೯ ವಾ(ತ,ಕ)

ಮಲೆಯೆಲ್ಲ ಮಲಯಜಗರು ಚರಿಸುವ ಮೃಗ
ಕುಲವೆಲ್ಲ ಕತ್ತುರಿಮೃಗವು
ಶಿಲೆಯೆಲ್ಲ ಪರುಷ ಪಶುಗಳೆಲ್ಲ ಸುರಧೇನು
ಜಲವೆಲ್ಲ ಸುಧೆಯಾ ನೆಲದ ॥೨೯॥

ಎಳವಳ್ಳಿ ಮೈಯ ಬಾಲೆಯರಿಪ್ಪ ಕಡೆವಳ್ಳಿ
ಗಳಿನೆಯ್ದೆ ಪೊಂಬಾಳೆಮರನ
ಹಳಿವೂರುಗಳ ಹೆಂಗಳೆಸೆವೂರ್ಗಳಿನೆದೆ
ಗೊಳಿಸಿಹುದಾ ಜನಪದವು ॥೩೦॥

ಗ್ರಾಮಂಗಳೆಲ್ಲಪಹೃತರಿಪುಸೈನ್ಯ ಸಂ
ಗ್ರಾಮಂಗಳೆಸೆವಾರಾಮ
ರಾಮಾಭಿರಾಮ[೩೦][ಸು][೩೦]ಜನಪುಣ್ಯಭಾಜನ
ವಾ ಮಹಾ ಕರ್ನಾಟಕದ ॥೩೧॥

ತೊಳಗುವ ಮಣಿಗೋಪುರವಿಲ್ಲದ ಪುರ
[೩೧][ಅ][೩೧]ಳವಟ್ಟ [೩೨][ಅ][೩೨]ಗ್ರಹಾರವನು
ತಳೆದಂಗನೆಯರಿಲ್ಲದಗ್ರಹಾರಂಗಳ
ನೆಲದೊಳಗರಸಿದೊಡುಂಟೆ ॥೩೨॥

ನಿರುತ ಷಟ್ಕರ್ಮ ಕರ್ಮಕರಪ್ಪ ಭೂದೇ
ವರಿನೆಸೆ[೩೩][ವ][೩೩]ಗ್ರಹಾರಗಳು
ಪರಮಾದ್ವೈತವಿದ್ಯಾಪರಿಣತರಿಂದೆ
ಪುರವರ್ಗವಲ್ಲಿ ರಾಜಿಪವು ॥೩೩॥

ನವಮಣಿರಚಿತ ಹರ್ಮ್ಯಗಳಿಹ ಪರಶಿವ
ಭವನದಿಂದೊಪ್ಪುವೆತ್ತೂರು
ತವದಿರ್ಪ ಸಕಲಸಂಪದದಿನಣುಗರಿನೊ
ಪ್ಪುವುದಲ್ಲಿ ನೆಲೆಗೊಂಡ ಜನವು ॥೩೪॥

೩೦-೩೦ನ (ತ,ಕ) ೩೧-೩೧ ವ(ತ,ಕ) ೩೨-೩೨ ವ(ತ,ಕ) ೩೩-೩೩ ದ(ತ,ಕ)

ವಿತರಣಶೌರ್ಯ ವಿದ್ಯಾದಿಸದ್ಗುಣಜಾಲ
ಯುತರಪ್ಪ ಸಜ್ಜನರಿಂದೆ
ಪತಿಭಕ್ತಿರೂಪಶೀಲಾದಿಗುಣಾನ್ವಿತ
ಸತಿಯರಿಂದೆಸೆವುದಾ ದೇಶ ॥೩೫॥

ಕೊಡನೊಳ೩೪[ಗೊಗೆದನ]೩೪ ಕುಡಿತೆಗೆ ಸಲೆ ಸಂದ
ಕಡ೩೫[ಲ]೩೫ ಪೆಚ್ಚುಗೆಯನೇಳಿಸುತೆ
ಕಡುಗುಣ್ಪಿ೩೬[ನಿಂ]೩೬ದೆ ಪೆರ್ಗೆರೆಗ೩೭[ಳು]೩೭ ದೇಶದೊ
ಳೆಡೆಗೊಂಡು ರಾರಾಜಿಪವು ॥೩೬॥

ಫಲಪುಷ್ಪದಿಂದ೩೮ಲ್ಲಿ೩೮ಯ ಬನ ಬಳಸಿನಿಂ
೩೯ತ್ರ೩೯ ಳನೆಗೆಯ್ಯೊ ಸರ್ವನಿಸರದೆ
ಲಲಿಪುಂಡ್ರೇಕ್ಷುರಾಯಂಚಿಯಿತ್ತಾವರೆ
ಗೊಳಗಳೆಲ್ಲೆಡೆಯೊಳೊಪ್ಪಿಹವು(?) ॥೩೭॥

ಬೆಳೆಯಿಲ್ಲದ೪೦[ದ ಪೊ]೪೦ಲವಿಲ್ಲ ವಿಟಪಿ ತ
ಣ್ಣೆಳಲಿಲ್ಲ೪೧[ದಿಲ್ಲ]೪೧ ಕಮ್ಮಲರ
೪೨[ತ]೪೨ಳೆಯದ ಬಳ್ಳಿ ೪೩[ತಾವ]೪೩ರೆ ನೈದಿಲಿಲ್ಲದ
ಕೊಳನಿಲ್ಲವಾ ರಾಜ್ಯದೊಳಗೆ ॥೩೮॥

ಸಲೆ ಪೆತ್ತು ಪೊತ್ತು ಸಂತಸದಿಂದೆ ತನ್ನನು
ಸಲಪಿದ ಭೂಮಾತೆಗೊಲಿದು
ತಲೆವಾಗಿದುದೆನೆ ಜೋಲ್ದು ಬಲ್ದೆನೆಯಿಂದ
ಕ೪೪[ಳ]೪೪ವೆಗ್ಗೈಯ೪೫[ಲ್ಲಿ]೪೫ ರಾಜಿಪುದು ॥೩೯॥

ಕಳವೆಗೈಗಾಯ್ವ ಹೆಂಗ೪೬[ಳು]೪೬ ನಿಡುಬೊಂಬೆ ಕೋ
ಕಿಳನಾದವಿಡುವಡೆತಿರ್ದ
ನಳನಳಿಸುವ ನಳಿತೋಳೆಳವ೪೭[ಳ್ಳ]೪೭ಗೆ
೪೮[ತ್ರ]೪೮ಳುಕದಿಪ್ಪುದು ಗಿಳಿವಿಂಡು(?) ॥೪೦॥

೩೪–೩೪ ಗೆರೆದನೊ (ತ,ಕ) ೩೫–೩೫ ಕಡ(ತ,ಕ) ೩೬–೩೬ಗಿಂ(ತ,ಕ) ೩೭–೩೭ ಳೆ(ತ,ಕ) ೩೮–೩೮ ಲ್ಲೆ(ಕ) ೩೯–೩೯ಕ (ಕ) ೪೦–೪೦ ದೆ ಫ(ತ,ಕ) ೪೧–೪೧ ದಯನ(ತ,ಕ) ೪೨–೪೨ ಕ(ತ,ಕ) ೪೩–೪೩ x (ತ,ಕ) ೪೪–೪೪ ಳ(ತ,ಕ) ೪೫–೪೫ಲಿ(ತ)೪೬–೪೬ಳ(ತ,ಕ)೪೭–೪೭ ಳ(ತ,ಕ) ೪೮–೪೮ ತ(ತ,ಕ)

ಲಲನೆ ಕತ್ತುರಿಯ ಮಿಣ್ಣೆಗಳ ತನ್ನಯ ಕರ
ತಳದಿಂದಲಿಡೆ ಗಿಳಿವಿಂಡು
ದಳಿತ ಶೋಣಾಂಬುಜದಿಂದ ಪೊರವ[೪೯][ಡುವ][೪೯]ಳಿ
ಕುಳವೆಂದಂಡುಗೊಂಡಿಹವು ॥೪೧॥

ಕಳವೆಯ ತೆಗೆಗಚ್ಚಿ ಪಾಲುಂಡು ಪಾರುವ
ಗಿಳಿವಿಂ[೫೦][ಡು][೫೦] ಮೊಗರಾಗದಿಂದೆ
ತೊಳಪ ಮೈವಸುರಿಂದೆ[೫೧][ಯೆಸೆದೊಪ್ಪಿತ][೫೧]ಂಬರ
ತಳದೊಳಿಂ[೫೨][ದರವಿಲ್ಲೆನಿ][೫೨]ಸಿ ॥೪೨॥

ಇಂತೊಪ್ಪುವ ನೆಲದೊಳು ನೆಲವೆಣ್ಣ ಸೀ
ಮಂತರೇಖೆಯೆನಲೆಸೆದು
ಸಂತಸವಿರ್ಕೆಲದೊಳಗೊದವಿದ ಬೆಳ
ಸಾಂತತೆಯೊ[೫೩]ಲಿ[೫೩]ರಲಯನ(?) ॥೪೩॥

ಮೃಗಧರಕಾಂತ ವೇದಿಕೆಯ ಮೃಣಾಳದೆ
ಸೊಗಯಿಪ ಕೆಮ್ಮುಡಿವಳದೆ
ಮಿಗೆ ರಚಿಸಿದ ಮೇಲ್ವೊದಿಕೆಯಿಂದರವ
ಟ್ಟಿಗೆಗಳಯನ[೫೪]ಳೊ[೫೪]ಪ್ಪಿಹವು(?) ॥೪೪॥

ಲಂಬಿಸಿ ತೋರ್ಪ ಪರಿಮಳಪ್ರಸೂನ ಕ
ದಂಬಮಾಲೆಗಳಿರಲಲ್ಲಿ
ಕುಂಬಕುಂಚದ ಕೋಮಲಾಂಗದ ನವ್ಯ ನಿ
ತಂಬಿನಿಯರು ನೀರೆರೆವರು ॥೪೫॥

ವಾರೆದುರುಂಬೊ[೫೫][ತ್ರಿ][೫೫] ತೋರುವ ಮುಗಿಲೊ
ಯ್ಯಾರದ ದಿಟ್ಟಿ ಮಿಂಚಾಗೆ
ನೀರನೆರೆವ ನೀರೆಯರೆದೆಗೊಳಿಸಿ ಮುಂ
ಗಾರಸಿರಿಯೊಯೆನಿಸಿಹರು ॥೪೬॥

೪೯-೪೯ಡಿದ(ಕ) ೫೦-೫೦ ಡ(ತ,ಕ) ೫೧-೫೧ ದೆಶೆದ ಪೀತಾ(ತ,ಕ)೫೨-೫೨ ದೆರಪಿಲ್ಲೆನೆ(ತ,ಕ) ೫೩-೫೩ ಲನಿ(ತ,ಕ) ೫೪-೫೪ಲೊ ಳೊ(ಕ) ೫೫-೫೫ ೞಟೆ(ತ,ಕ)

ಹಾರೈಸಿಕೊಂಡಿಹ ಚಾದಗೆಗಾ ನವ
ನೀರದನೀವ ನೀರೆನಿಸಿ
ಚಾರುಪಯೋಧರೆಯೋ[೫೬]ವಿಯ[೫೬]ಲ್ಲಿಗೆ[೫೭][ಬ][೫೭]ಹ
ದಾರಿಗರ್ಗೆರೆವರಂಬುವನು ||೪೭||

ನೀರನೆರೆವ ನೀರೆಯ ಬಟ್ಟ ಮೊಗ ಕೈ
ನೀರೊಳು ತೋರೆ ಕಾಣುತ್ತೆ
ದಾರಿಗನಿಂದು [೫೮]ಸಿ[೫೮]ಕ್ಕಿದ[೫೯][ಳೆಂ][೫೯]ದು ಕಡೆಗೊಯ್ದು
ನಾರಿಯರನು ನಗಿಸಿದನು ||೪೮||

ಬಿಡುಗಣ್ಣ ತೆರೆವಾಯಿ ನಿಮಿರ್ದ ಗೋಣೊಡ್ಡಿದ
ಕುಡಿತೆಗೈ ನಸುಬಾಗಿದೊಡಲು
ಸಡಗರಿಸುವ ಮನದಿಂದೆ ದಾರಿಗರು ನೀ
ರ್ಗುಡಿವುತೆ ನಿಂದಿಹರಲ್ಲಿ ||೪೯||

ಕರೆಯೊಂದದ ನೆರೆವೆರೆ ಮೊಗದವಳು ನೀ
ರೆರೆಯೆ ತನ್ನಯ ದಿಟ್ಟಿಯೆಂಬ
ಪೆರೆವಕ್ಕಿಗೂಡಿ ನೀರ್ಗುಡಿದನವಳ ಮೊಗ
ವೆರೆಗಡಿಗಳನಧ್ವಗನು(?) ||೫೦||

ಒಲಿದಂಬುವೆರೆವ ಲತಾಂಗಿ[೬೦][ಯ ಇಟ್ಟಳ][೬೦]
ಮೊಲೆಯೊಳು ನಟ್ಟ ದೃಷ್ಟಿಗಳ
ಅಲುಗಿ ಕಿಳ್ವಂತಧ್ವಗನಂಬುವೀಂಟುತೆ
ತಲೆದೂನೆದನು ತೃಷೆಯಡಗೆ ||೫೧||

ಇಂತು ಮೆರೆವ ಕನ್ನಡದೇಶದೊಳು ಶ್ರೀ
ಕಾಂತೆಯ ತಲೆವಣಿಯೆನಿಸಿ
ಸಂತಸವಾಂತು ಬಿಜ್ಜಾವರವೆಸೆವುದ
ತ್ಯಂತ ವೈಭವದೆಸಕದೊಳು ||೫೨||

೫೬-೫೬ಪಿದ(ಕ) ೫೭-೫೭ಯ(ತ,ಕ)೫೮-೫೮ನೆ(ತ,ಕ) ೫೯-೫೯ ನೆ(ತ,ಕ)
೬೦-೬೦ಯು ಇಟ್ಟಿಡೆ(ತ,ಕ)

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೫೩॥

[೬೧]**ದ್ವಿತೀಯ ಸಂಧಿ ಸಂಪೂರ್ಣಂ**[೬೧]

❖❖

೬೧-೬೧ ಸಂಧಿ ೨ ಕ್ಕಂ ಪದನು ೧೫೩ಕ್ಕಂ ಮಂಗಳ ಮಹಾಶ್ರೀ(ತ,ಕ).

ಸಂಧಿ : ೩

ಆ ಪೊಳಲ ವೈಭವವನೇನೆಂಬೆ

ಶ್ರೀ ಗಿರಿಜಾಕುಚಕುಂಕುಮಾಂಕಿತ ವಕ್ಷ
ಯೋಗಿಮಾನಸನಿ[೧]ಜಾ[೧]ವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ನೆಲವೆಣ್ಣಿನ ಮೊಗವೆನಿಪ ಕನ್ನಡದೇಶ
ದೊಳು ರಯ್ಯವೆತ್ತು ತಾನದರ
ತಲೆದೊಡವೆನಿಸಿ ಮೆರೆವುದು ಬಿಜ್ಜಾವರ
ವಲಘು ಸಂಪದದೆಸಕದೊಳು ॥೨॥

ಕುಂದದೆ ಪರಿವ ತೊರೆಗಳಿಂದೆ ತೊರೆಯಾಣ್ಮ
ನಂದ[೨]ವೆ[೨]ನಿಪ ಕೆರೆಯಿಂದೆ
ನಂದನ ಕಳವೇಕ್ಷುವಾಟಿ[೩][ಕಾ][೩] ಸಾರಂಗ
ಳಿಂದೆ ಕಂಗೊಳಿಪುದಾ ನಗರಿ ॥೩॥

ಆ ನಗರದ ಪೊರವಳಯದೊಳಿರ್ಪುದು
ದ್ಯಾನಮೊಪ್ಪುವುದೇನನೆಂಬೆ
ಮೀನಕೇತನ ಚಕ್ರವರ್ತಿಯ ನಿಜರಾಜ
ಧಾನಿಯೆನಿಪುದಾ ಬನವು ॥೪॥

೧-೧ ಜ(ತ) ೨-೨ ನೆ (ಕ)೩-೩ಕ(ತ,ಕ)

ಹರಸಭೆಯಂತೆ ವಿಶಾಖಾ[4]ನ್ವಿ[4]ತ ಮುರ
ಹರನಾಸ್ಥಾನದಂದ[5][ದ][5]ಲಿ
ನಿರುತ ಸುವರ್ಣಶೋಭಿತಮಾಗಿ ಭಾವಿಸೆ
ಕರಮೊಪ್ಪುತಿಹುದಾ ಬನವು ॥೫॥

ಸುರಪತಿಯಾಸ್ಥಾನದವೊಲು ರಂಭಾ
[6][ಪ][6]ರಿಶೋಭಿ ಗಣಿಕಾಲಯದ
ಪರಿಯಂತೆ ಪಲ್ಲವಕರಿರಾಜಿತಮಾ
ಗಿರುತಿಹುದ್ಯೆದೆ ಕಂಗೊಳಿಸಿ ॥೬॥

ಅಂಗಜ ಬಿತ್ತೆ ಸುಧೆಯನೆರೆಯಲು [7]ಶಶಿ[7]
ಹಿಂಗದೆ ಮಧು ಕಾದಿರಲು
ಪೊಂಗುತೆ ಬೆಳೆದೆಲ್ಲಾದಿ[8]ನ[8] ಕುಸುಮ ಫ
ಲಂಗಳನೀವುದಾ ಬನವು ॥೭॥

ಪಲಸೆಲ್ಲ ಬಕ್ಕೆವಲಸು ತೆಂಗು ಚೆಂದೆಂಗು
ಫಲಿತ ರಸಾಲ ಮಾವೆಲ್ಲ
ಅಲರು ಕಮ್ಮಲರಿಕ್ಷು ಪುಂಡ್ರೇಕ್ಷುವೆಲರು ತಂ
ಬೆಲರಾ ನಗರಿಯ ಬನದ ॥೮॥

ಗಿಳಿಯರಗಿಳಿ ಕೋಗಿಲೆ ಸೊರ್ಕುಕೋಗಿಲೆ
ಯಳಿಕುಳವೆಸೆ[9][ವ ಮ][9]ದಾಳಿ
ಪುಳಿ[10]ನ[10] ತಳದೊಳಾಡುವ ಹಂಸಗಳೆಲ್ಲ
ಕಳಹಂಸಗಳಾ ಬನದ ॥೯॥

ಲಲಿತಲತಾಸದನಂಗಳೊಳೊಲಿದು ಕ
ಮ್ಮಲರ [11]ಹ[11]ಸೆಯೊ[12][ಳು][12] ಸಂತಸದೆ
ಅಲರಂಬನ ಕೇಳಿಯೊಳಾಡುವ ಕಾ
ದಲರಿಂದೆ ಮೆರೆವುದಾ ಬನವು ॥೧೦॥

೪-೪ ಶ್ವಿ (ಕ) ೫-೫ x (ತ,ಕ) ೬-೬ ಸ(ತ,ಕ) ೭-೭ ಸಸಿ (ತ,ಕ) ೮-೮ X (ಕ) ೯-೯ವುದಾ (ಕ) ದುದಾ(ತ)೧೦-೧೦ ವ (ತ,ಕ) ೧೧-೧೧ ಹಾ (ಕ) ೧೨-೧೨ ಳ (ತ,ಕ)

ತಿಳಿಗೊಳದೊಳು ನೀರಾಟವಾಡುವ ಕ
ಮ್ಮಲರ ಸೂಡುವ ಮಾಮರ[೧೩][ದ][೧೩]
ಸೆಳೆಗೊಂಬಿನೊಳಗುಯ್ಯಲಾಡುವ ನೀಲಕುಂ
ತಳೆಯರಿಂ ಮೆರೆವುದಾ ಬನವು ॥೧೧॥

ಆಡುವ ನವಿ[೧೪][ಲೊಡನಾ][೧೪]ಡುವ ಸರವೆತ್ತಿ
ಪಾಡುವ ಕೋಗಿಲೆಯೊಡನೆ
ಪಾಡುವ ಗಾಡಿಕಾತಿಯರ ವಿಲಾಸದ
ಗಾಡಿವೆತ್ತಿಹುದಾ ಬನವು ॥೧೨॥

ಇಂ[೧೫][ತ][೧೫]ಪ್ಪ ಬನದ ಪೊಳಲ ನ[೧೬][ಡುವೆ][೧೬]ಶೌರ್ಯ
ವಂತ ಕುಮಾರರಗ್ಗಳಿಸಿ
ಸಂತತ ಸಾಧನೆಗಳ ಮಾಳ್ಪ ಕಳ[ಕ]ಳ
ಮಂ ತೀವಿ ಗರಡಿಯೊಪ್ಪಿಹವು ॥೧೩॥

ಕವಿದೆರಗುವ ಸಂಚವೆ ತಟ್ಟುತೊಡನೆ ಚಿ
ಮ್ಮುವ ಮೊನೆದಪ್ಪಿಸುತೊಡನೆ
ತಿವಿವ ಕೈವಿಡಿವ ಹತಾಹತಿಯಿಂದೊದ
ಗುವ ಸಾಧನೆಯ ಮಾಳ್ಪರಲ್ಲಿ ॥೧೪॥

ಮುಡುಹನಪ್ಪಳಿಸಿ ಗರ್ಜಿಸಿ ಬಲ್ಪುದೋರೆ ಮೇ
ಲಡಪಾಯು ಚೊಕ್ಕೆಹದಿಂದೆ
ಬಿಡದೆ ಡೊಕ್ಕರಲಾಗ ವೇಗದೆ ಹೋರುವ
ಕಡುಗಲಿ ಮಲ್ಲರೊಪ್ಪಿಹರು ॥೧೫॥

ಇಟ್ಟಂಬು ಮೀರಿ ಪಾರುವ ತೇಜಿಯನಳ
ವ[೧೭][ಟ್ಟರೆ][೧೭]ಪಂಚಧಾರೆಯ[೧೮][ವು][೧೮]
ನೆಟ್ಟನೆ ತೊಡಿಸುತಲಿಹರಾ ಬನದೊಳು
ಪಟ್ಟಸಾಣಿಗಳನವರತ ॥೧೬॥

೧೩-೧೩ ವ (ತ,ಕ) ೧೪-೧೪ ಲಾಟವಾ(ಕ) ಲಾಟನಾ(ತ,ಕ) ೧೫-೧೫ ತೊ(ತ,ಕ)೧೬-೧೬ ಡ (ತ,ಕ)
೧೭-೧೭ ಟ್ಟರಿ(ತ) ಟ್ಟರಿ(ಕ)೧೮-೧೮ ರು (ತ,ಕ)

ನೀರುಣ[೧೯][ಲೆ][೧೯]ಡೆಯಾಡುತಿಟ್ಟಣಿಸುವ ಮದ[೨೦]
ವಾರಣ ಚರಣದೊಳೆಳೆವ
ಭಾರಿಯ ನಿಗಳ ನಿನದ[೨೧]ವಂತ[೨೧] ವರ ಗಂ
[೨೨][ಟಾ][೨೨]ರಾವಮುಡುಗದಂತಲ್ಲಿ ॥೧೭॥

ಶರಧಿ ತನ್ನಣುಗಿಯನತಿ ಮುದದಿಂ ಕೂ
ಡಿರುತಿಹುದೆಂದಾ ಪೊಳಲ
ಪರಿವೇಷ್ಟಿಸಿಕೊಂಡಿರುತಿರ್ದುದೋಯೆನೆ
ಪರಿಘವಲಯವೊಪ್ಪುತಿಹುದು ॥೧೮॥

ಗಣಿಸಲಳವೆಯಾ ಕೋಟೆಯು[೨೩][ದ್ದ][೨೩]ವನುಡು
ಗಣದೊಳು ಬಟ್ಟದೆನೆಗಳು
ಅ[೨೪][ಣೆ][೨೪]ದಿರೆ ನಿಶಿಯೊಳೊಪ್ಪಿರ್ಪುವು ಮುತ್ತಿನ
ಮಣಿದೆನೆಗಳೊಯೆಂದೆನಿಸಿ ॥೧೯॥

ಬಲದಿಂದೆ ಸೊಕ್ಕಿದರಾತಿಮೃಗವ ಕೊಲ್ವ
[೨೫][ಪುಲಿ][೨೫]ಮೊಗದಿಂದೆ ರಾಜಿಸುತೆ
ಕಲಿಗಳೆನಿಪ [೨೬]ತೋ[೨೬]ಪಿನ ಭಟರಿಂದೆ ಕಂ
ಗೊಳಿಪುದಾ ಪುರದ ಗೋಪುರವು ॥೨೦॥

ಪೊಳಲ ಸಜ್ಜನಸಂಪದವನೆಲ್ಲಾಗಳು
ಬಳಸಿ ನಿಟ್ಟಿಪ ಸಗ್ಗಿಗರ
ಥಳಥಳಿಸುವ ನಡೆ[೨೭][ಮಾಡ][೨೭]ಗಳಿವೆನೆ ಕೊ
ತ್ತಳಗಳಂಬರದೊಳೊಪ್ಪಿಹವು ॥೨೧॥

ಕೊತ್ತಳಕೊತ್ತಳಂಗಳ ಮೇಲೆ ಹಳಯಿಗೆ
ಎತ್ತಿತೋರ್ಪುವು ಭೂರಿಗಿರಿಯ
ಸುತ್ತಿ ಬಳಲ್ದಿನ[೨೮][ಗಾ][೨೮]ಗಸಬನಿತೆ ಬೀ
ಸುತ್ತಿಹ [೨೯]ಬಿ[೨೯]ಯಜನಮೆನಿಸಿ ॥೨೨॥

೧೯-೧೯ ವೆ (ತ,ಕ) ೨೦+ದ (ತ,ಕ) ೨೧-೨೧ದಂತ(ಕ) ೨೨-೨೨ ತಾ (ಕ)೨೩-೨೩ ದ್ದ (ತ,ಕ) ೨೪-೨೪ ಣ(ತ,ಕ) ೨೫-೨೫ ಪರಿ(ತ,ಕ) ೨೬-೨೬ಕೋ (ತ) ೨೭-೨೭ ಮಾಂಡ(ತ) ಮಂಡೆ(ಕ) ೨೮-೨೮ ಆ(ತ,ಕ) ೨೯-೨೯ ಜ(ಕ)

ಎಣ್ಣೆ ಮಜ್ಜನ ಗಂಧಾಕ್ಷತೆ ಮೊದಲಾದ
ಬಣ್ಣದ ಹೂಬಲಿಯಿಂದೆ
ದಣ್ಣನೆ ದಣಿದಿರುತಿಹ ಯಂತ್ರಶಿಲೆಗಳ
ಹಣ್ಣಿದಾಳ್ವೇರಿ ರಂಜಿಪುದು ॥೨೩॥

ಕೆಂಬರಲಾಳ್ವೇರಿ[೩೦]ಯು[೩೦] ಹ[೩೧]ಬ್ಬಿ[೩೧] ನಭವನು
[೩೨]ಚು[೩೨]ಂಬಿಸೆ ಸಂಜೆಗೆಂಪೆಂದು
ಶಂಬರಾರಿಯ ಕೇ[೩೩][ಳಿ][೩೩] [೩೪][ಗೆ][೩೪]ಳಸಿಹ ಮುಗುದ ನಿ
ತಂಬಿನಿಯರು ಸಂಭ್ರಮಿಪರು ॥೨೪॥

ಇತ್ತರದಂಗಡಿ ಸಾಲು ಮಳಿಗೆ ಪೆಂಪು
ವೆತ್ತಿಹ [೩೫]ಬೇಹಾ[೩೫]ರಿಗಳ
ಮೊತ್ತ[೩೬][ವೊ][೩೬]ತ್ತಿಲೆಡೆಯಾಡುವ ಜನದ ಸಂ
ಪತ್ತೆಸೆವುದದನೇನನೆಂಬೆ ॥೨೫॥

ಬಗೆಗೊಂಡು ಮೆರೆವ ತಂಬು[೩೭][ಲಿ][೩೭]ಗರಂಗಡಿ ಗಂ
ದಿಗರಂಗಡಿ ಕಂಚುಪಸರ
ಸೊಗಯಿಪ ಗಂಧದಂಗಡಿ ಪೊಂಬಸರ ದೂ
ಸಿಗರಂಗಡಿಗಳೊಪ್ಪಿಹವು ॥೨೬॥

ಅಡಿಮೆಟ್ಟಿ ತಮ್ಮನಗ್ರದೊಳಲ್ಪ ತೃಣವನು
ಬಿ[೩೮][ಡೆವೊತ್ತ][೩೮] ಜಡಧಿಯನುಳಿದು
ಎಡೆಗೊಂಡುದೋ ಮಣಿಗಣಮೆನೆ ರನ್ನದಂ
ಗಡಿಯೊಪ್ಪಿ [೩೯][ರಾ][೩೯]ರಾಜಿಪು[೪೦][ವು][೪೦] ॥೨೭॥

ತೊಳಗುವಿಂಗದಿರನ ಕರೆಗಳೆದುಳಿದಿರ್ದ
ಕಳೆಗಳ ಪೊರೆಪೊರೆಯೆತ್ತಿ
ಪೊಳಲೊಳು ತಂದು ಮಾರುತಲಿರ್ದರೆನೆ ಕಂ
ಗೊಳಿಪುವು ಬಿಳಿಯೆಲೆ ಪಸರ ॥೨೮॥

೩೦–೩೦ಯ (ತ,ಕ) ೩೧–೩೧ ಬ್ಬೆ(ತ,ಕ) ೩೨–೩೨ ಡುಂ(ತ,ಕ) ೩೩–೩೩ ಳ(ಕ) ೩೪–೩೪ ಸೆ (ತ,ಕ) ೩೫–೩೫ ಬ್ಯವಹ(ತ). ೩೬–೩೬ ವ(ತ,ಕ). ೩೭–೩೭ ರಿ (ತ,ಕ) ೩೮–೩೮ ಡೆವೊತ್ತ (ತ,ಕ). ೩೯–೩೯ X (ತ,ಕ). ೪೦–೪೦ ದು (ತ,ಕ)

ಬಗೆಗೊಳಿಸಿಹ ಮಲ್ಲಿಗೆ ಮೊಲ್ಲೆ ಜಾಜಿ ಸಂ
ಪಗೆ ಪಾದರಿ ಪಚ್ಚೆ ದವನ
ಸೊಗಯಿಪ ಪೊಂಗರಿವೂಗಳ ಕಂಪಿನಿಂ
ಮಗಮಗಿಸುವ[೪೧][ವ][೪೧]ಲರ್ವಸರ ॥೨೯॥

ಸಾರಿದ ಜಿತಕಾಮರ ತಿಂದು ತೇಗುವ
ಮಾರಿ ಪೊಕ್ಕರು ಪೊರಮಡದ
ದಾರಿ ಸಿ[೪೨][೦][೪೨]ಗರರ[೪೩]ಸದೇರಿಯೆನಿಪ ಸೂಳೆ
ಗೇರಿ ರಂಜಿಪುದಂತಲ್ಲಿ ॥೩೦॥

ಕುಟಿಲದ[೪೪][ಕೇರಿ][೪೪] ವೈಶಿಕದಾಡುಂಬೊಲ
ವಟಮಟದೆಡೆಯೆನ್ನೆಯದ
ಮಟ ದಂಬಿನಿಂಬು ದುರಾಸೆ ವರ್ತಿಪ ಪೇಟೆ
ಕಟಕಿಯಾಗರವೆನಿಸುವುದು ॥೩೧॥

ಹುಸಿ ನುಸುಳಿ ತಾ[೪೫][ಯ್ವು][೪೫]ನೆ ಟಕ್ಕು ತೌಳಿಯ
ಹ[೪೬]ಸ[೪೬]ರ ಕುಹಕ[೪೭]ವಿಹ[೪೭] ತಾಣ
ನಿಸದ[೪೮]ವಿ[೪೮]ಲ್ಲದ ನೆಲೆ ನೀತಿ ಬಿ[೪೯][ಟ್ಟೆಡೆ][೪೯]ಯೆನ
ಲೆಸೆದಿಹುದಾ ಸೂಳೆಗೇರಿ ॥೩೨॥

ಆ ಸೂಳೆಗೇರಿಯ ಕೆಲಬಲದೊಳು ನಾಗ
[೫೦][ವಾಸದ][೫೦] ಕೇರಿಯೊಪ್ಪಿಹವು
ಲೇಸೆನಿಸುವ ಲಚ್ಚಣವೆ[೫೧]ಟ್ಟಿ[೫೧]ಗೆಯಲ್ಲಿ
ಲಾ[೫೨][ಸ್ಯವಿ][೫೨]ಭ್ರಮದೆಸಕದೊಳು ॥೩೩॥

ರಾಯ ರಾವುತರ ಮಾವುತರ ಮಲ್ಲರ ಬಿರು
ದಾಯತರಹ ಪಟುಭಟರ
ರಾಯ[೫೩]ಭಾರಿಗಳ ಸೂಳಾಯ್ತರ ಕೇರಿಗಳ
ಲಾಯತವೆಸೆದಾಂತಿಹವು ॥೩೪॥

೪೧–೪೧ ಪ(ತ,ಕ). ೪೨–೪೨ X (ತ,ಕ). ೪೩–೪೩ X (ಕ), ೪೪–೪೪ ನೇತಿ (ತ,ಕ). ೪೫–೪೫ ಯೆ (ತ,ಕ). ೪೬–೪೬ ಸ್ಮ(ಕ). ೪೭–೪೭ ಮೀಸುವ (ಕ). ೪೮–೪೮ ದಿ (ಕ). ೪೯–೪೯ ಟ್ಟಡಿ (ತ,ಕ). ೫೦–೫೦ (ತ,ಕ). ೫೧–೫೧ ಟ್ಟು (ತ). ೫೨–೫೨ ಸವ (ತ,ಕ). ೫೩+ರ (ತ,ಕ).

ಅವಸರದವರಾಪ್ತರ ಪಲವೂಳಿಗ
ದವರ ಮಾಗಧರ ಜೋಯಿಸರ
ನವರಸಿಕರ ಬಣಕಾರರ ಭಾಸುರ
[೫೪][ಭ][೫೪]ವನಂಗಳೊಪ್ಪಿ ರಂಜಿಪುವು ॥೩೫॥

ಕವಿ ಗಮಕಿಗಳ ವಾದಿಗಳ ವಾಗ್ಮಿಗಳ ಸ
ದ್ವಿವಿಧ ವಿದ್ಯದ ಕೋವಿದರ
ಶಿವಭಕ್ತರ ಶೀಲವಂತರಾಚಾರ‍್ಯರ
ಭವನಂಗಳೊಪ್ಪಿ ರಂಜಿಪುವು ॥೩೬॥

ದಂಡನಾಯಕರ ಮಂತ್ರಿಗಳತ್ಯಾಪ್ತರ
ಮಂಡಲಾಧಿಪರ ಮನ್ನೆಯರ
ಭಂಡಾರಿಗಳ ಕರುಮಾಡಂಗಳಾರ‍್ಯಮ
ಮಂಡಲವನು ಚುಂಬಿಪುವು ॥೩೭॥

ಬಳ್ಳಿಮಿಂಚಿಹ ಬೆಳ್ಮುಗಿಲೆನ[೫೫]ಲೆ[೫೫]ಸೆವ ಪೊಂ
ಬಳ್ಳಿ ಮೈಬಾಲೆಯರಿಪ್ಪ
ಬಳ್ಳಿ ಮಾಡಗಳೆಡೆಗೊಳಿಸುತಾಕಾಶಮ
ನಳ್ಳಿರುವುತೆ ರಂಜಿಪುವು ॥೩೮॥

ದೊರೆದೊರೆಗಳ ಮಾಡಂಗಳ ನಡುವೆ ಭೂ
ವರ ಮಣಿಹರ್ಮ್ಯ ಕಂಗೊಳಿಸಿ
ಪರಿವಡೆದುದು ಮಣಿಮೇಖಲವಾ ಕುಲ
ಗಿರಿಗಳ ನಡುವೆಸೆವಂತೆ ॥೩೯॥

ಪುರವೆಂಬ ಕಾಸಾರ ಮಧ್ಯದೊಳರಮನೆ
ಸಿರಿಗೆ ತಾನಾವಾಸಮಾಗಿ
ವರ ರಾಜಹಂಸೆ ವೈಭವದಿಂ*[ದಿಪ್ಪ]* ತಾ
ವರೆಯೊ*[ಲೆ]*ದೆಗೊಳಿಸಿಹುದು ॥೪೦॥

೫೪–೫೪ ಳ (ತ,ಕ). ೫೫–೫೫ X (ಕ). *–*ದೊಪ್ಪಿ (ತ,ಕ). *–* ಳೆ (ತ,ಕ),

ಸಿತದಳಾಕಾರದವೋಲ್ ಪದ್ಮಕೋಶ ಸೋ
ಭಿತಮಾಗಿಯಾ ರಾಜಧಾನಿ
ಸಿತಪಕ್ಷದೊ[೫೬][ಲ್][೫೬]ರಾಜರಾಜಿತಮಾಗಿ ಸ
ನ್ನುತಿವೆತ್ತಿಹುದನವರತ ॥೪೧॥

ಹರಗಿರಿಯಂತೆ ಕುಮಾರಕ ರಾಜಿಸೆ
ಕರ ಶೋಭಿ ವೈಕುಂಠದಂತೆ
ನಿರುತ ಲಕ್ಷ್ಮಿ ರಂಜಿತಮಾಗಿ ರಾಜಮಂ
ದಿರವೊಪ್ಪುತಿಹುದೇನೆಂಬೆ ॥೪೨॥

ಅಂತರಂತರದ ಪೆಬ್ಬಾಗಿಲ ಚಾವಡಿ
ಜಂತದ ದಾರಿವಂದಗಳು
ಮುಂತೆ ಕಂಗೊಳಿಸುವ ಕನ್ನವಾಡಗಳ
ಯಂತವುದೋರಿಯೊಪ್ಪಿಹವು(?) ॥೪೩॥

ಕರಣಿಕಶಾಲೆಯುಗ್ರಾಣವಾಗಳಿಯರ
ವರಶಸ್ತ್ರಶಾಲೆ ಕೀಲಾರ
ಹಿರಿದಾದ ಭಂಡಾರ ಬೊಕ್ಕಸಮನೆಗಳಿಂ
ದರಮನೆಯೊಪ್ಪಿ ರಾಜಿಪುದು ॥೪೪॥

ವಾಲಗಶಾಲೆ ಚಿತ್ರದ ಶಾಲೆ ಏಕಾಂತ
ದಾಲಯವಂಗಸಂಭವನ
ಕೇಳಿಯ ಶಾಲೆ ಶಯನಶಾಲೆ ವರಚಂದ್ರ
ಶಾಲೆಯೊಪ್ಪಿಹವಂತಲ್ಲಿ ॥೪೫॥

ರಂಗುವಡೆದ ಭದ್ರಶಾಲೆಯು ಪೆಂ[೫೭][ಡವಾ][೫೭]
ಸಂಗಳು ಗಗನ[ಮಾಲ]ಗಳು
ಲಿಂಗಪೂಜಾಭೋಜನಮಂದಿರ ಸಾಲೆ
ಕಂಗೊಳಿಸಿಹವಂತಲ್ಲಿ ॥೪೬॥

೫೬–೫೬ ಳ್ (ತ,ಕ). ೫೭–೫೭ ಡಾವ (ತ,ಕ).

ಪವಳದ ಕಂಬ ಪಚ್ಚೆಯ ತೊಲೆ ಪಳುಕಿನ
ಜವಳಿ ಬೋದಿಗೆ ಮರಕತದೆ
ಸವೆದ ಮೇಲ್ವಲಗೆ ನೀಲದ ನೆಲಗಟ್ಟಾ
ಭವನಂಗಳೊಳಗೊಪ್ಪುತಿಹವು ॥೪೭॥

ನೀಲದ *ಲೋವೆಯ ಕೆಳಗಾಣಿಮುತ್ತಿನ
ಜೂಳೆಯವಿರೆ [೫೮]ಚಾದ[೫೮]ಗೆಯು
ಮೇಲಕೆ ಮೊಗವೆತ್ತಿ ಕಾರಮುಂ[೫೯]ಬನಿ[೫೯] ಗೆತ್ತು
ಬಾಲಕಿಯರ ನಗಿಸುವವು ॥೪೮॥

ಥಳಥಳಿಸುವ ಮರಕತ ಮಣಿಕುಟ್ಟಿಮ
[೬೦][ತ][೬೦]ಳವ ನಿಟ್ಟಿಸಿ ಸಾರದೆರಲೆ
ಎಳಸೆಳಗರುಕೆಯೆನುತೆ ಮೊಗವಿಟ್ಟು ಕೋ
ಮಲೆಯರ ಮಿಗೆ ನಗಿಸುವವು ॥೪೯॥

ಎಳೆವೆಂಗಳ ಕಂಗಳ ರುಚಿ[೬೧][ಯಂ][೬೧]ಗಣ
ದೊಳು ಮಿಗೆ ದಾಂಗುಡಿಯವರಿಯೆ
ಕಳಹ[೬೨][ಂ][೬೨]ಸವರಿದ ಪಾಲೆಂದು ಮೊಗವನಿಟ್ಟು
ಲಲನೆಯರನು ನಗಿಸುವವು ॥೫೦॥

ಒಲಿದುಯ್ಯಲಾಡುವ ಲಲನೆಯ ನಿಡುಜಡೆ
ಪಳುಕಿನ ಕುಟ್ಟಿಮದಲ್ಲಿ
ಪೊಳೆಯೆ ಕಾಳೋರಗನೆಂದು ಕುಟಿಕಿ ಕೇಕಿ
ಗಳು ನಗಿಸುವವು ಜಾಣೆಯರ ॥೫೧॥

ಲಲನಾ ಘನ ಧಮ್ಮಿಲ್ಲ ಕದಂಬಿನಿ
ವಿಲಸಿತ ಮಣಿಕಾಂಚಿಯುಲಿಪು
ಮೊಳಗು[೬೩] ಕಣ್ಬೆಳಗು ಮಿಂಚಾಗೆ ಕಾರ್ಗಾಲೆಂ
ದೆಳಸಿ ನವಿಲು ನರ್ತಿಪುವು ॥೫೨॥

---

*–*ಲೆ (ತ,ಕ). ೫೮–೫೮ ಬೋದಿ (ಕ). ೫೯–೫೯ ಜಿನಿ (ಕ).೬೦–೬೦ ಕ(ತ,ಕ) ೬೧–೬೧ ವೆಂ (ತ,ಕ) ೬೨–೬೨X(ತ,ಕ) ೬೩ +ತೆ (ತ,ಕ)

ಕನಕಲತಾಂಗಿಯರಂಗವೆನಿಪ ಚಂ
ದನ [೬೪]ಸಾರ[೬೪] ಸೌರಭಕೊಲಿದು
ಅನುಸರಿಸೈದಿಹ ಪೆಣ್ದುಂಬಿವಿಂಡಿನ
ನಿನದವೊಪ್ಪಿಹುದಂತಲ್ಲಿ ॥೫೩॥

ಇಂತು ನಾನಾವೈಭವ ಚಿತ್ರರಚನೆಯ
ನಾಂತು ಕಂಗೊಳಿಸಿ ಶೋಭಿಸುವ
ಅಂತಃಪುರವಾ ಪುರದೊಳಗೆಸೆವುದಾ
ನಂತ ಸಂಪದದೆಸಕದೊಳು ॥೫೪॥

ಅರಿಗಳ ತಲೆನವಿರಡಗು ಕೆನ್ನೀರೆನಿ
ಪುರತ್ರಾಣಕಬಳಜಲದೊಳು
[೬೫][ಪಿ][೬೫]ರಿದಾಗಿ ಸೊಕ್ಕಿದ ವಾಜಿರಾಜಿ ಮಂ
ದಿರವಿಹುದಾ ಪೊಳಲಲ್ಲಿ ॥೫೫॥

ಅಣಿವುತಲಾ ಸೊದೆಗೊಳುತ ಬಟ್ಟೆಯು
ನಣಿಯರಮಾಗಿ ಗೋದುವೆಯ
ಚಣಕದ ರಾಯಗಳವೆ ಮೆಳಸಡಕೆಯ
ಕಣಜಗಳೆಸೆದೊಪ್ಪಿಹವು(?) ॥೫೬॥

ವೇದಪುರಾಣಾಗಮಶಾಸ್ತ್ರತರ್ಕತಂ
ತ್ರಾದಿ ಷಟ್ಕಾವ್ಯನಾಟಕವ
ವೋದಿಯರ್ಥಿಸುವ ಕೋವಿದನಿಚಯ ನಿ
ನಾದವಾ ಪೊಳಲೊಳೊಪ್ಪಿಹವು ॥೫೭॥

ಮಂಗಳತೂರ್ಯತ್ರಯಂಗಳ ನಾದ ತು
ರಂಗಹೇಷಾನಿರ್ಘೋಷ
ಪೊಂಗಿದ [೬೬][ಮ][೬೬]ದಮಾತಂಗಭೃಂಗಿತ ರವ
ಹಿಂಗದು ಪೊಳಲೊಳೆಲ್ಲೆಡೆಯು ॥೫೮॥

ಕಳಹಂಸಗಮನೆಯರೆಡೆಯಾಡಲವರ ಮೇ
ಖಳೆಯ ರನ್ನದ ನೇವುರದ

೬೪–೬೪ ಜಾರು (ತ).೬೫–೬೫ ಪ(ತ,ಕ). ೬೬–೬೬ ವಂ (ತ,ಕ).

[೬೭]ತ್ರ[೬೭]ಳುಕುತೆಯಿಂದೆ ವಿರಾಜಿಪುದೆನಲಾ
ಪೊಳಲ ವೈಭವವನೇನೆಂಬೆ ॥೫೯॥

ಎಲ್ಲರು ಶಿವಭಕ್ತರು ನೀತಿವಂತರು
ಸಲ್ಲಲಿತಾಗಮವಿದರು
ಮಲ್ಲಿಗೆಗೋಲನನೇಳಿಪ ಪರಿಜುಳ್ಳ
ರಲ್ಲಿಪ್ಪರತಿ ಮುದದಿಂದೆ ॥೬೦॥

ದಾನಿಗಳತಿ ಸುಲಭರು ಸುಖಿಗಳು ಸ
ನ್ಮಾನಿಗಳತಿ ಸಜ್ಜನರು
ಜ್ಞಾನಿಗಳಮಳ ಸದ್ಗುಣಿಗಳು ಪರಮ ಶಿ
ವಾನುಭಾವಿಗಳಲ್ಲಿಹರು ॥೬೧॥

ಸಿರಿವೆಣ್ಣಿನ ನೆಲೆವನೆ ಶಿವಭಕ್ತಿಯ
ಹರವರಿ ಜಾಣ್ಮೆಯ ತಾವು
ಹರಿಸದಾಡುಂಬೊಲ ಸೊಬಗಿನಾಗರ ಸಿಂ
ಗರದಿಕ್ಕೆಯೆನಿಪುದಾ ನಗರಿ ॥೬೨॥

ನೀತಿಯ ನೆಲೆ ನಿಪುಣತೆಯ ತಾಯ್ವನೆ ಸೌ
ಖ್ಯಾತಿಶಯದ ಜನ್ಮಭೂಮಿ
ಪ್ರೀತಿಯ ಗೊತ್ತು ವೈಭವದೆಡೆಯೆನಿಸಿ ವಿ
ಖ್ಯಾತಿವೆತ್ತಿಪುದಾ ನಗರಿ ॥೬೩॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೬೪॥

[೬೮]ತೃತೀಯ ಸಂಧಿ ಸಂಪೂರ್ಣಂ[೬೮]

❖❖

೬೭–೬೭ ಕ (ತ). ೬೮–೬೮ ಅಂತು ಸಂಧಿ ೩ ಕ್ಕಂ ಪದನು ೨೧೭ಕ್ಕಂ ಮಂಗಳ ಮಹಾಶ್ರೀ ಶ್ರೀ ಶಿವಪಂಚವಣ್ಣಿಗೆ ಚನ್ನಮಲ್ಲಿಕಾರ್ಜುನದೇವರ ದಿವ್ಯ ಶ್ರೀಪಾದಪದ್ಮಂಗಳೆ ಗತಿ (ತ,ಕ).

ಸಂಧಿ : ೪

ಇಮ್ಮಡಿ ಚಿಕ್ಕಭೂಪಗೆ ಪಡಿಗಾಣೆನವನಿಪರೊಳಗೆ

ಶ್ರೀಮದಮರ ಪೂರ್ವಾಮರ ಸುರಪ ಪಿ
ತಾಮಹ ಹರಿಗತ ಪಾದ
ತಾಮರಸದ್ವಯ ಮೃತ್ಯುಂಜಯ ಕರು
ಣಾಮಂದಿರ ಸಲಹೆನ್ನ ॥೧॥

ಆ ಪಟ್ಟಣಕಧಿಪತಿಯಾಗಿಹ ಚಿಕ್ಕ
ಭೂಪ ರೂಪಿನೊಳಿಕ್ಷುಚಾಪ
ಪಾಪವಿಲೋಪ ಪ್ರತಾಪನ[೧]ವ[೧]ಗೆ ತಾ
ನೋಪಳಾಗಿಹಳು ಸೋಮಾಂ[೨]ಬೆ[೨] ॥೨॥

ರತಿಯಂತೆ ರೂಪಾನ್ವಿತೆ ಬಲ್ಲತನದೆ ಭಾ
ರತಿಯಂತೆ ಕ್ಷೀರವಾರಿಧಿಯ
ಸುತೆಯಂತೆ ಮಾಂಗಲ್ಯದಿಂದರುಂ
ಧತಿಯಂತೆ ಪತಿಭಕ್ತಿಯಿಂದಾ ಬನಿತೆ ॥೩॥

ಶ್ರೀ ತೋಂಟದ ಸಿದ್ಧೇಶ ಪ್ರಸಾದದಿ[೩][ಂ
ದಾ][೩] ತರುಣಿಯ ಗರ್ಭದೊಳು
ಭೂತಳಪತಿಯಿರ್ಮಡಿ ಚಿಕ್ಕೇಂದ್ರ ವಿ
ಖ್ಯಾತನೊಗೆದನೆಸಕದೊಳು ॥೪॥

೧-೧ ನ(ಕ). ೨-೨ ಚಿ(ಕ). ೩-೩ ತಾ (ತ,ಕ).

ಕರಿ[೪][ಗೈರಾವ][೪]ತನೊಗೆದಂತೊಲು[೫]ವೈ[೫]ಮೊಗ
ಗರುಮೊಗ[೬]ನು[೬]ದಿಸಿದಂದದಲಿ
ತರಿಸಂದು ಚಿಕ್ಕೇಂದ್ರ*ಗಿ*ಮ್ಮಡಿಚಿಕ್ಕನ
ದೆರೆಯನಾಗಿರ್ದನೇಂ ಪೇಳ್ವೆ(?) ॥೫॥

ಚತುರಾಸ್ಯನಾಗಿ ಛಾಂದಸ[೭][ನೆ][೭]ನಲು ಲಕ್ಷ್ಮೀ
ಯುತನಾಗಿ ಗೋವಳನೆನಲು
ಸತತ ವಿಬುಧತತಿಪಾಲನಾಗಿಯುಮಾ
ಕ್ಷಿತಿಪತಿಗೋತ್ರಾರಿಯೊಲು ॥೬॥

ಕಂದುಕುಂದೊಂದದ ಚಂದ್ರಮನೋ ಕರೆ
ಯೊಂದದ ರಾಜಶೇಖರನೋ
ಅಂದವಡೆದ ಕಾಯಮನಾಂತ ಕಂದರ್ಪ
ನೆಂದು ಕೀರ್ತಿಪರಾ ನೃಪನ ॥೭॥

ದಾತನು ಪರಮಪ್ರಪೂತನು ನೀತಸ
ಮೇತನು ವೈರಿವಿಪೂತ
ಖ್ಯಾತ ಪವಾಡದದೇವ ಹಸ್ತಾಂಬುಜ
ಜಾತನಾ ಮಾನವೇಶ್ವರನು ॥೮॥

ಪಣೆಗಣ್ಣನೊರ್ವನಲ್ಲದೆ ಮಿಕ್ಕ ದೈವಕೆ
ಮಣಿಯದ ಬಿರುದಾಂಕನೆನಲು
ಗುಣಮಣಿರಾಜಿತನಿರ್ಮಡಿಚಿಕ್ಕಾ
ಗ್ರಣಿಸುರಗಿರಿಯವೊಲೆಸೆವ ॥೯॥

ಅನುದಿನವವ ಮಾಡುವ ಗುರುಸೇವೆಯ
ಘನತರ ಲಿಂಗಪೂಜೆಯನು
ವಿನುತ ಜಂಗಮಭಕ್ತಿಯ ಬಣ್ಣಿಸಿ ಪೊಗ
[೮][ಳ್ವ][೮]ನುವಾವಗೆ ಸಿದ್ಧಿಪುದು ॥೧೦॥

೪–೪ ರವೈಯಾಗತ (ತ), ರಿವೈಯಾಗತ (ಕ), ೫–೫ ಮೈ (ಕ). ೬–೬ ಗು(ಕ). ೭–೭ X (ತ,ಕ). ೮–೮ ಡ(ತ,ಕ)

ಕುಲದೊಳಾರಾದೊಡಾಗಲಿ ಶಿವಭಕ್ತಿಯ
ನೆಲೆಯನರಿದು ಚರಿಸುವರ
ಸಲೆ ಶಿವನೆಂದರ್ಚಿಪನವರಡಿಗಳ
ನೊಲಿದಿರ್ಮಡಿಚಿಕ್ಕೇಂದ್ರ ॥೧೧॥

ಸಚ್ಚರಿತೆಯನುಳ್ಳ ಶಿವಶರಣರ ಮಿಗೆ
ನಚ್ಚಿ ಮಚ್ಚುತೆ ಬಗೆಗೊಂಡು
ಸ್ವಚ್ಛತವಾಗಿ ವಂಚನೆಯಿಲ್ಲದೆಯವ
ರಿಚ್ಛೆಯ ನೆರೆ ಸಲಿಸುವನು ॥೧೨॥

ಕಸ್ತೂರಿ ಕುಂಕುಮ ಚಂದನ ಕರ್ಪೂರ
ಮುತ್ತುಮಾಣಿಕ ಮುಂತಾದ
ಉತ್ತಮವಸ್ತುವೇನುಂಟದ ಜಂಗಮ
ಕಿತ್ತಲ್ಲದೆ ಭೋಗಿಸನು ॥೧೩॥

ಶಿವಶರಣರ ಕಂಡರೆ ಪೋದ ಜೀವ ಬಂ
ದವೊಲಾಗಳುಬ್ಬಿ ಸಂತಸದಿ
ಅವರಾಜ್ಞೆಯ ಶಿರದೊಳಾಂತರ್ಚಿಪ
ನವರನಂಗಜಹರೆಂದು ॥೧೪॥

ಮುಕ್ಕಣ್ಣನ ಭಕ್ತರಾರುಂಟವರಿಗೆ
ಚಿಕ್ಕವನಾಗಿ ವರ್ತಿಪಗೆ
ಚಿಕ್ಕವ ತಾನೆಂದೆನಿಸುತಲಿರ್ಮಡಿ
ಚಿಕ್ಕನೆನಿಪನಾ ನೃಪತಿ ॥೧೫॥

ಶಿವಶರಣರೆ ಗತಿ ಶಿವಶರಣರೆ ಮತಿ
ಶಿವಶರಣರೆ ಬಂಧುಬಳಗ
ಶಿವಶರಣರೆನ್ನ ಪೊರೆವಾಳ್ದರೆಂದು ತಾ
ನವರ ಸೇವಿಪನೆಡವಿಡದೆ ॥೧೬॥

ಹಮ್ಮಳಿದಂಗಮನೋಧನವಿವು ಶಿವ
ಸೊಮ್ಮೆನುತಾ ರತಿಯಿಂದೆ
ಹೆಮ್ಮೆವಡೆದ ಗುರುಲಿಂಗಜಂಗಮ ಪ[೯]ರ[೯]
ಬೊಮ್ಮವೆಂದರ್ಪಿಸುವ ॥೧೭॥

ಧನಧಾನ್ಯಗ್ರಾಮಸುಕ್ಷೇತ್ರ ಕನ್ಯಾವಾ
ಹನದಾಸಿಗೋಕುಲಮಹಿಷಿ
ವಿನುತ ರತ್ನಾಭರಣಂಗಳ ಜಂಗಮ
ಕನುನಯದಿಂದೀವನೊಲಿದು ॥೧೮॥

ಕೀರ್ತಿವಾರ್ತೆಗಳಿಗೀವವನಲ್ಲ ಪ[೧೦]ದಪ[೧೦]
ದಾರ್ತಿಯೆನಿಸಿ ಮಾಳ್ಪನಲ್ಲ
ಕರ್ತುರ್ ಜಂಗಮಲಿಂಗವೆಂದು ಸಹಜಭಕ್ತಿ
ವರ್ತನೆಯೊಳು ವರ್ತಿಪನು ॥೧೯॥

ಲಿಂಗಬಾಹಿರರಾಗಿಹ ವ್ರತಭ್ರಷ್ಟರ
ಜಂಗಮ[೧೧]ವ[೧೧]ನು ಜರೆವರನು
ಅಂಗಾಲೊಳು ಕಣ್ಣ ತೋರಿದೊಡಂ ತ[೧೨]
ತ್ಸಂಗವೆ ನರಕವೆಂದೆಂಬ ॥೨೦॥

ಅರಿ[೧೩]ತಕ್ಕಾ[೧೩]ಚಾರವಾಚಾರಕ್ಕೆ ಸದ್ಭಕ್ತಿ
ಮೆರೆವ ಸದ್ಭಕ್ತಿಗೆ ನಿಷ್ಠೆ
ನೆರೆ ನಿಷ್ಠೆಗೇಕಭಾವವೆ ಜೀವವೆಂದೆನು
ತರಿದನುಭವದೊಳೊಂದಿಪ್ಪ ॥೨೧॥

ಅಂಗದೊಳೊಂದಿದ ಸತ್ಕ್ರಿಯೆ ವಿಮಲಾಂತ
ರಂಗದೊಳರಿವು ಭಾವದೊಳು
ಸಂಗೊಳಿಸಿ[೧೪][ಪ್ಪೇ][೧೪]ಕತೆಯೆ ನಿಜಾನಂದ
[೧೫]ಸಾ[೧೫]ಂಗಮಾಗಿರಲೆಸೆದಿರ್ಪ ॥೨೨॥

೯–೯ ದ(ಕ) ೧೦–೧೦ x(ಕ) ೧೧–೧೧ ರ (ಕ) ೧೨+ತ(ತ,ಕ). ೧೩–೧೩ ತಿಗಾ(ತ,ಕ). ೧೪–೧೪ ಪ್ಪ (ತ,ಕ). ೧೫–೧೫ ಸಂ(ಕ).

ಪಳಿದರಿಯನು ಮರೆದಾದೊಡೆ ಶಿವಭಕ್ತ
ಕುಲದೊಳು ಕುಂದನಾರ್ೈದು
ಮುಳಿಸನರಿಯನಂಡಲೆವ ಜಂಗಮಲಿಂಗ
ದೊಳಗಾ ಚಿಕ್ಕಭೂವರನು ॥೨೩॥

ತ್ರಿಣಯನಲ್ಲದೆ ಮಿಕ್ಕ ದೈವಂಗಳನೆಲ್ಲ
ನೆಣಿಕೆಗೊಂಬನೆ ಮನದೊಳಗೆ
ತೃಣ[೧೬][ದಿ][೧೬]ನವರ ಕಡೆಯಾಗಿ ಭಾವಿಪನಲ್ಲ
[೧೭][ದ][೧೭]ಣುಮಾತ್ರ ಪೂಜ್ಯರೆಂದೆನ್ನ ॥೨೪॥

ಲಿಂಗಸಹಿತ ನಡೆ ಲಿಂಗಸಹಿತ ನುಡಿ
ಲಿಂಗಸಹಿತ ಮಾಳ್ಪುದೆಲ್ಲ
ಲಿಂಗಸಹಿತ ಸಕಲೇಂದ್ರಿಯ ವರ್ತನೆ
ಸಂಗದೊಳಿರ್ಪ[೧೮]ವ[೧೮]ಂತವಗೆ ॥೨೫॥

ಜಂಗಮ[೧೯]ವ[೧೯]ನು ಶಿವಲಿಂಗವೆಂದೇ ಕಂಡು
ಹೊಂಗಿ ಹೆಚ್ಚುತೆ ಹೊರೆಯೇರಿ
ಹಿಂಗದೆ ಭಯಭಕ್ತಿ ಭೃತ್ಯಭಾವದೊಳು
ಜಂಗಮವನು ಭಜಿಸುವನು ॥೨೬॥

ಲಿಂಗಾಂಗಸೌಖ್ಯದ ಭಾವದೊಳಿರೆ ತಾ
ಹಿಂಗದೆ ಜೀವಭಾವವನು
ಹಿಂಗಿ ಲಿಂಗದೊಳೆರವೆನಿ[೨೦][ಸಿದ][೨೦] ಇತರ ಮ
ತಂಗಳನೊಡಬಡದಿರ್ಪ ॥೨೭॥

ಪರಶಿವ ತನ್ನ ಲೀಲಾಲೋಲತೆಯಿಂದೆ
ಶರಣ ಚಿಲ್ಲಿಂಗವಾದನುವ
ಗುರುಮುಖದಿಂದರಿದದ್ವೈತಮತವನು
ಪರಿಹರಿಸೆಸೆದಿರ್ಪವನು ॥೨೮॥

೧೬–೧೬ ಡಿ (ತ,ಕ). ೧೭–೧೭ ವ (ತ,ಕ). ೧೮–೧೮ ನ(ಕ). ೧೯–೧೯ X (ತ,ಕ). ೨೦–೨೦ ಸಿದೆ (ಕ), ಸದೆ (ತ).

ದ್ವೈತಾದ್ವೈತ[೨೧][ಸ][೨೧]ರಣಿಯ[೨೨][ನು][೨೨]ಳಿದು ಶಿವಾ
ದ್ವೈತ ಸಿದ್ಧಾಂತಪದ್ಧತಿಯ
ವೋತು ಪಿಡಿದು ಬಿಡದಾಚರಿಸವನು ಪು
ರಾತನವಚನವ ನಂಬಿ ॥೨೯॥

ಪೊಡವಿಯೊಳುಡುಮೂಡಿದೊಡೆ ನೇಸರು ಪಡು
ಗಡೆಯೊಳುದಿಸಿ ತೋರಿದೊಡೆ
ಕಡುಗಲಿಯಿರ್ಮಡಿಚಿಕ್ಕದೇವೇಂದ್ರನ
ನುಡಿಯೊಳು ಸವಡು ಸಂಧಿಪುದೆ ॥೩೦॥

ಹಿಡಿಯಲಮ್ಮದು ಗೇದಳಯನದೊಳು ದೃಗ
ರೆಡೆಯಾಡುತೆ ಮೋಸದೊಳು
ಕೆಡಪಿದ [೨೩]ಜೀವಾಳಿ[೨೩] ಜಾಳಿಗೆಗಳನೆನಲಿ
ರ್ಮಡಿಚಿಕ್ಕನಾಜ್ಞೆ ತಾನೆನಿತೊ(?) ॥೩೧॥

ಎರಗಲಮ್ಮದು ಪೆಣ್ದುಂಬಿಯಲರ್ಗಡು
ಪರಿವೊಗದಲೆಯ್ದೆಯರು(?)
ತರಿದು ಬಿಸುಟ ಪೂವಿಗೇನವನಾಜ್ಞೆಯ
ತೆರನನದೇನ ಬಣ್ಣಿಸುವೆ ॥೩೨॥

ಎಳೆಗಾಳಿಯಲ್ಲದೆ ಬಿರುಗಾಳಿ ಮರೆದೊರ್ಮೆ
ಸುಳಿಯದು ಮಿಕ್ಕ ಮಾತೇನು
ಇಳೆಯಾಣ್ಮನಿರ್ಮಡಿಚಿಕ್ಕೇಂದ್ರನಾಣತಿ
ಗಳುಕಿಯಾತನ ರಾಜ್ಯದೊಳು ॥೩೩॥

ಭರತನ ನೀತಿ ಧರ್ಮಜನ ಸದ್ಧರ್ಮತೆ
ವರಮನುಗಳ ಸನ್ಮಾರ್ಗ
ತರಣಿಜನೌದಾರ್ಯವೆಸೆವುದಿರ್ಮಡಿಚಿಕ್ಕ
ಧರಣೀಶನೊಳಗನವರತ ॥೩೪॥

೨೧-೨೧ ಸಾ (ತ,ಕ). ೨೨-೨೨ ಸಾ (ತ,ಕ). ೨೩-೨೩ ಜವಳಿ (ತ).

[೨೪]ಒಡಲೆಲ್ಲ ಶಿವ[೨೪] ಧರ್ಮವೆಡೆಗೊಂಡ ನೆಲೆವನೆ
ನುಡಿಯೆಲ್ಲ ಪರಮಾರ್ಥದೇಳ್ಗೆ
ನಡೆಯೆಲ್ಲ ದಿವ್ಯಾಗಮಮಾರ್ಗಯುತವಿ
ಮ್ಮಡಿ ಚಿಕ್ಕರಾಜಪುಂಗವನ ॥೩೫॥

ದಳಪತಿರಾಯ ಸಪ್ತಾಂಗಸಂಹರಣ ನಿ
ರ್ಮಲ ನಿಶ್ಚಲಾಂತಃಕರಣ
ವಿಳಸಿತ ಸದ್ಗುಣಮಣಿಗಣಭೂಷಣ
ನಿಳೆಯಾಣ್ಮನಿರ್ಮಡಿಚಿಕ್ಕ ॥೩೬॥

ಶಂಕೆಯಿಲ್ಲದೆ ಜಗದೇಕರಾಯರ ಕೊಡೆ
ತಾ ಕೈಕೊಂಡು ಕಾಳಗವ
ವೆಂಕಟಪತಿರಾಯರ ಮೆಚ್ಚಿಸಿದ ನಿ
ಶ್ಶಂಕನಿರ್ಮಡಿಚಿಕ್ಕೇಂದ್ರ ॥೩೭॥

ಅಳಿಯ ಎಲ್ಲೇಂದ್ರನ ದಳವನೆಲ್ಲವ ಕೊಳು
ಗುಳದೊಳಗೊಂ[೨೫][ದೆ][೨೫] ತೇಜಿಯೊಳು
ಹಳದಿಯ ಬಿರುದಾಂಕನಿರ್ಮಡಿಚಿಕ್ಕನು
ತುಳಿಸಿದನಿಳೆ ಮೆಚ್ಚುವಂತೆ ॥೩೮॥

ಕಡುಗಲಿ ಹಾವಳಿ ಭೈರಭೂಪಾಲನ
ಗಡಿದುರ್ಗವಾಗಿ ಮೋಹಿಸುವ
ಮಿಡಿಗೇಶಿಯ ಲೀಲಾಮಾತ್ರದಿ ಕೊಂಡ
ಒಡಗೆರೆಮಲ್ಲನೃಪನು ॥೩೯॥

ವೀರಾಧಿವೀರ ಸದ್ವಿತರಣಗುಣ ಜಿತ
ವಾರಿದನಸಹಯಶೂರ(?)
ವೈರಿಭೂಪಾಲಶುಂಡಾಲದಳ[೨೬][ನ][೨೬]ಕಂ
ಠೀರವನಾ ಮಾನವೇಂದ್ರ ॥೪೦॥

೨೪-೨೪ ವೆಡವೆಲ್ಲ ಸಿಷ(ಕ). ೨೫-೨೫ ಡೆ (ತ,ಕ). ೨೬-೨೬ ನೆ (ತ,ಕ).

ಸ್ವಾಮಿದ್ರೋಹಿಯ ಗಂಡ ನೀತಿಯ ಬಿಟ್ಟು
ಭೂಮಿಯನಾಳ್ವರ ಗಂಡ
ತಾಮಸದಿಂದುಕ್ಕಿ ಸೊಕ್ಕು ಮುಂಗಾಣದ
ಭೂಮಿಪಾಲರ ಗಂಡನವನು ॥೪೧॥

ಪರಬಲವೆನು ಕಂಡು ಮೈಗರೆವವನೀ
ಶ್ವರಸಮುದಾಯದ ಗಂಡ
ಎರೆಬರಿಗೀಯದೊಡಲಹೊರೆವುತ್ತಿರ್ಪ
ದೊರೆಗಳ ಗಡಣದ ಗಂಡ ॥೪೨॥

ಗಂಡಭೇರುಂಡಕವಾಟವಿರಾಜಿತೋ
ದ್ದಂಡ ರಾಯರಾವುತರ
ಗಂಡನೆಂದೆಂಬ ಬಲ್ಬಿರುದನಾಳುವ ಸುಪ್ರ
ಚಂಡ ವಿಕ್ರಮ ಚಿಕ್ಕಭೂಪ ॥೪೩॥

ಕೊಂಡೆಯರಿಗೆ ಕಿವಿಗೊಡುವ ಭೂಪಾಲರ
ಗಂಡ ಸರಸಕೋವಿದರ
ದಂಡಿಪ ದೊರೆಗಳ ಗಂಡ ಸದ್ಗುಣಮಣಿ
ಮಂಡಿತ ಚಿಕ್ಕಭೂಪಾಲ ॥೪೪॥

ಕೊಟ್ಟಭಾಷೆಗೆ ತಪ್ಪುವರ ಗಂಡ ರಣಕೆ ಹಿ
ಮ್ಮೆಟ್ಟುವ ದೊರೆಗಳ ಗಂಡ
ಕೊಟ್ಟು ಕುದಿವ ಕುಂಭಿನಿಪರ ಗಂಡ ಬಲ್
ದಿಟ್ಟನಿರ್ಮಡಿಚಿಕ್ಕಭೂಪ ॥೪೫॥

ಸೂಳೆಯರೋಲಗದೊಳು ತಮ್ಮ ಪಂತವ
ಹೇಳಿಕೊಳುತೆ ರಣದೊಳಗೆ
ತೋಳಬಲ್ಮೆಯ ತೋರಲರಿಯದ ಹೇಡಿ ಭೂ
ಪಾಲರ ಗಂಡ ಚಿಕ್ಕೇಂದ್ರ ॥೪೬॥

ಕುಂದದ ದಾನಧಾರಾಂಬುವಿನಿಂ ತ[೨೭][ನ್ನ][೨೭]
ತಂದೆಯ ಪೆರ್ಚಿಪನೆಂದು
ಇಂದಿರೆ ಮನಸಂದು ಬಂದು ಚಿಕ್ಕೇಂದ್ರನ
ಮಂದಿರದಲಿಯೊಂದಿಹಳು ॥೪೭॥

ಹರಿ ಗೋವಳನಮರೆಂದ್ರ ಜಾರನು ತಾ
ವರೆಗೆ ತಪ್ಪದು ರಾಜಬಾಧೆ
ನಿರುತಮೆಂದೆನುತಿರ್ಮಡಿಚಿಕ್ಕೇಂದ್ರನ
ಸಿರಿ ನಚ್ಚಿ ಮುಚ್ಚಿಕೊಂಡಿಹಳು ॥೪೮॥

ಕಡಲೊಳೊಗೆದು ತಾವರೆಯೊಳಿರುತಲ
ವ್ರೊಡೆಯನೆದೆಯ ಮೇ[೨೮][ಲೆ][೨೮] ಬ[೨೯][ಳೆ][೨೯]ದು
ನಿಡುಜವ್ವನ ಬರಲೊಡನಾ ಸಿರಿಯಿ
ರ್ಮಡಿಚಿಕ್ಕಭೂಪಗೊಲಿದಳು ॥೪೯॥

ಸಿರಿಯೊಲಿದಿರ್ಮಡಿಚಿಕ್ಕೇಂದ್ರನ ಕೂ
ಡಿರೆ ಹರಿ ವಿರಹಾಗ್ನಿಯಿಂದೆ
ಪರಿತಪಿಸಿದನಲ್ಲದಿರ್ದಡಂತವ ಹೋಗಿ
ಶರಧಿಗೆ ಮಗ್ಗುಲಿಕ್ಕುವನೆ ॥೫೦॥

ದಾನವಿನೋದಿಯಿರ್ಮಡಿಚಿಕ್ಕನೆಸಗುವ
ದಾನಕಳ್ಕುತೆ ಸುರಭೂಜ
ಆ ನಾಕಂಬೊಕ್ಕು ಮರವಟ್ಟುದೆಂದೊಡಿ
ನ್ನೇ[ವೇ]ಳ್ವೆನವನ ಚಾಗವನು ॥೫೧॥

ಆ ನರನಾಥನ ಕಳೆವೆಳಗಿಂ ದೆಶೆ
ಯಾನೆಗಳವು ಬಿಳಿದಾಗೆ
ಏನೆಂಬೆನಾಲ್ಪಲ್ಲನೊಂದು ಚಿಕ್ಕೇಂದ್ರ ತ
ನ್ನಾನೆಯೆಂದದನು ನಿಶ್ಚಯಿಪ ॥೫೨॥

೨೭-೨೭ ಂಥ (ತ,ಕ). ೨೮-೨೮ ರೆ (ತ,ಕ). ೨೯-೨೯ ಳಿ(ತ,ಕ).

ವಿನುತ ಚೋಳಂಭೇರಿ ಮಂಡಲಿಕರ ಗಂಡ
ನೆನಿಪ*[ಯಿ]*ಮ್ಮಡಿಚಿಕ್ಕನೃಪತಿ
ಘನತೇಜಕಳ್ಕಿ ಬಾಡಬ ಪೊಕ್ಕಡಗಿದ
ವನಧಿಯ ನೆಲೆಯನೇನೆಂಬೆ ||೫೩||

ನಡುನಾಡಗೂಳಿ ವೈರಿಗಳೆಂಬ ಪಕ್ಕಿಯ
ಗಡಣಕ್ಕೆ ಗಂಡುಸಾಳವನು
ಗಡಿಯಂಕಭೀಮನಿಮ್ಮಡಿಚಿಕ್ಕಭೂಪಗೆ
ಪಡಿಗಾಣೆನವನಿಪರೊಳಗೆ ||೫೪||

ಗಿರಿಗಳೊಳಮರಾದ್ರಿ ಕರಿಗಳೊಳ್ ಸುರಕರಿ
ಶರಧಿಗಳೊಳು ಪಾಲ್ಗಡಲು
ಸರಸಿಜಬಾಂಧವನಾ ಗ್ರಹತತಿಯೊಳೀ
ಶ್ವರನಲ್ಲದಿಲ್ಲ ದೇವರೊಳು ||೫೫||

ಮೃಗಮದಗಂಧಿ ಮೃಗೇಕ್ಷಣೆ ಸಂಪೂರ್ಣ
ಮೃಗಧರ ಸನ್ನಿಭವದನೆ
ಮೃಗರಾಜಮಧ್ಯೆ ಚೆನ್ನಾಜಮ್ಮನಾ ನೃಪ
ತಿಗೆ ಪಟ್ಟ ಮಹಿಷಿಯೆನಿಪಳು ||೫೬||

ಅತಿ ರೂಪದಿಂದತಿಲಕ್ಷಣ ಸದ್ಗುಣ
ತತಿಯಿಂದ ಲಾವಣ್ಯದಿಂದೆ
ಪತಿಭಕ್ತಿ [೩೦]ಚತುರತೆಯಿಂ ದೇವಲೋಕದ
ಸತಿಯರ ಗೆಲ್ದಿಪ್ಪಳಾಕೆ ||೫೭||

ಅಂಗನೆಯರ ತಲೆವಣಿಯೆನಲೆಸೆವ ಬೆ
ಡಂಗುವಡೆದು ರಾಜಿಪಳು
[೩೧][ಅಂಗಜಸ][೩೧]ಮನಿಮ್ಮಡಿಚಿಕ್ಕನೃಪನ ಮ
ನಂಗೊಂಬ ಚೆಲ್ವಿನೆಸಕದೆ ||೫೮||

– ನಿ(ತ,ಕ). ೩೦+ಯಿಂ (ತ,ಕ). ೩೧–೩೧ ಲಿಂಗಜಂಗ (ತ,ಕ).

ಆ ಸತಿಯೊಳು ಮೆಲ್ಮಾತಿನ ಸುರತ[೩೨][ವಾ][೩೨]
ರಾಸಿವರ್ಧನಚಂದ್ರನೆನಿಸಿ
ತಾ ಸುಖದಿರ್ದನಿರ್ಮಡಿಚಿಕ್ಕಭೂಪತಿ
ಲೇಸನೀವುತೆ ಕುವಲ[೩೩]ಯಕೆ[೩೩] ॥೫೯॥

ದೀಪದೊಳೊಗೆದಿಹ ದೀಪದಂದದಿ ಚಿಕ್ಕ
ಭೂಪನಾತ್ಮಜನು ತೋಟೇಂದ್ರ
ರೂಪನಿರ್ಜಿತಪುಷ್ಪಚಾಪನಧಿಕ ಸುಪ್ರ
ತಾಪನಾಗಿರ್ಪನೇಂ ಪೇಳ್ವೆ ॥೬೦॥

ಮಿತ್ರ ಸಹಾಯನೆನಿಸಿ ನಿಜತೇಜದಿ
ಮಿತ್ರನ ಜಯಸಿಹನವನು
ಗೋತ್ರವರ್ಧನನಾಗಿ ನಿರ್ಮಳಕೀರ್ತಿಯಿಂ
ಗೋತ್ರರಾಜನ ಜಯಸಿಹನು ॥೬೧॥

ಕಾಮನ ಚೆಲ್ವು ಸುತ್ರಾಮನ ವೈಭವ
ರಾಮಭದ್ರನ ವಿಖ್ಯಾತಿ
ಭೀಮನದಟು ಸೋಮನ ಶಾಂತಿಯಾ ಚಿಕ್ಕ
ಭೂಮಿಸುತನೊಳೊಪ್ಪಿಹವು ॥೬೨॥

ಸ್ಮರನಂಗಹೀನ ದೋಷಾಕರ ಶಶಿ ದಿನ
ಕರವುಷ್ಣಕರ ಗೋವಳನು
ಹರಿ ಸುರಪತಿಜಾರನಾರೆಣೆಯಾ ಚಿಕ್ಕ
ಧರಣೀಶನ ಕುವರಂಗೆ ॥೬೩॥

ಕಡೆವಗಲಲ್ಮೊಡರಡಸದಿರ್ದೊಡೆ ಕರ್ಣ
ನೊಡಲನಿದೋಡಲಾ ರನ್ನ
ಮಡದಿ ವಾರಿಜನಾನದಿರ್ದೊಡರ್ಜುನನೆಣೆ
ಪಡಿಪಾಟಿಯಾ ಕುವರಂಗೆ(?) ॥೬೪॥

೩೨–೩೨ ದಿ(ತ,ಕ). ೩೩–೩೩ ಯುತೆ (ಕ).

ಗುರುಭಕ್ತಿಯೊಳು ಕಾಮಿ ದುರಿತಾಳಿಯೊಳು ಕ್ರೋಧಿ
ಪರಸತಿಯರೊಳಂಧ[೩೪]ಕ[೩೪]ನು
ಪರನಿಂದೆಯಲಿ ಬಧಿರನು ಚಿಕ್ಕೇಂದ್ರನ
ವರ ಕುಮಾರಕ ತೋಟೇಂದ್ರ ॥೬೫॥

ಹರಭಕ್ತಿಯಿಂದೆ ವಿಬುಧಪಾಲನೆಯಿಂದೆ
ಪರರನಾಕ್ರಮಿಪ ವಿಕ್ರಮದಿ
ಸಿರಿಯ ಸಾಯಸಕದೆ* ಪುರುಷೋತ್ತಮ ಮುರ
ಹರನೆನಲೆಸೆವನಾ ಕುವರ(?) ॥೬೬॥

ಪಾಲೊಳು ಕಾಳ್ತಡವುತೆ ರಾಜಂಚೆಯ
ಕಾಲೊಳು ಸಂಜನಿಸಿದೊಡೆ(?)
ಶೀಲನಿರ್ಮಡಿಚಿಕ್ಕಭೂಮಿಪನಣುಗನ
ನಾಲಗೆಯೊಳು ಸವಡುಂಟೆ ॥೬೭॥

ಮನದೊಳು ಕವಡು ಮಾತಿನೊಳುರೆ [೩೬]ಸ[೩೬]ವಡು ಮ
ತ್ತನುವರದೆಡೆಯೊಳು ಬೆಡಗು
ಅನುಸರಿಸಿದ ದೊರೆಮಕ್ಕಳ ಗಂಡ ತಾ
ನೆನಿಸಿ ಮೆರೆವನು ತೋಟೇಂದ್ರ ॥೬೮॥

ಪರಬಲವನು ಕಂಡು ಮೈಗರೆವವನೀ
ಶ್ವರಸಮುದಾಯದ ಗಂಡ
ಪರವನಿತೆಯರ ಸಂಗಕೆ ಹೇಸದ ಭೂ
ವರರ ಗಂಡನು ತೋಟೇಂದ್ರ ॥೬೯॥

ಮನೆಮರೆಯಲಿ ಹೊಗಳಿಸಿಕೊಂಡು ಸಂಗರ
ವೆನಲಾಗಳಂಜಿದೆಗುಂದಿ
ಮನೆಮರೆಯೊಳಡ[೩೭][ಗು][೩೭]ವ ದೊರೆಗಳ ಮೂ
ಗಿನ ಕತ್ತಿಯೆನಿಪನಾ ಕುವರ ॥೭೦॥

೩೪–೩೪ ತ್ವವ(ಕ). ೩೫–೩೫ ಟದೇ(ಕ). *–*ಪಿರಿಯ ಸಾಯಕದಿ(ಕ). ೩೬–೩೬ ಸೆ (ಕ). ೩೭–೩೭X(ತ,ಕ).

ಕತ್ತಿಯನೆತ್ತಿ ಚಿಮ್ಮುತೆ ಕೊನೆ ಮೀಸೆಯ
ಮತ್ತತೆಯಿಂ ತಿದ್ದಿಕೊಳುತೆ
ಒತ್ತಿದ ಜಗಳದೊಳೋಡುವ ದೊರೆಗಳ
ನೆತ್ತಿಯ ಶೂಲವಾ ಕುವರ ॥೭೧॥

ಅಂಡಲೆವರಿಗಳ ಜಗಳವೆಂದರೆ ಬಿಡ
ದಂಡಿಸಿ ಮನೆಮರೆಯೊಳಗೆ
ಹೆಂಡಿರನಗಲಲಾರದ ಹೇಡಿಭೂಪರ
ಗಂಡನೆನಿಪನು ತೋಟೇಂದ್ರ ॥೭೨॥

ಮತ್ತಶಾತ್ರವಮಸ್ತಕಶೂಲ ಧೀರೋ
ದಾತ್ತನಾಹವಭೀಮಸೇನ
ಚಿತ್ತಜರೂಪನೊಪ್ಪುವ ರಾಜಪುತ್ರರ
ನೆತ್ತಿಯ ಮಣಿ ತೋಟೇಂದ್ರ ॥೭೩॥

ಗಾಡಿವಡೆದ ಗಂಡುವರಿಜಾಂತುದೋ ಶೌ
ರ್ಯಾಡಂಬರವೆನಲವನು
ರೂಢಿಸಿ[೩೮][ೀ][೩೮]ಪರಿವಡೆದಿಹನಾ ಕುವರಗೆ
ನಾಡಾಡಿ ಮಕ್ಕಳೇನೆಣೆಯೆ ॥೭೪॥

ನಿಡಿದೋಳ್ಗಳೋ ದಿಕ್ಕರಿಗಳ ಕರಗಳೋ
[೩೯][ಮು][೩೯]ಡುಹಂಗಳೋ ಜಯಲಕ್ಷ್ಮಿ
ಬಿಡದಾಡುವ [೪೦][ಆಡುವೆಟ್ಟ][೪೦]ವೆನಿಪುವಿ
ರ್ಮಡಿಚಿಕ್ಕಭೂಪನಂದನನ ॥೭೫॥

ದಿಟ್ಟಕುಮಾರ ತೋಟೇಂದ್ರನ ಕರ್ಣದೊ
ಳಿಟ್ಟ ಚೌಕುಳಿ ರಂಜಿಪುವು .
ನೆಟ್ಟನೆ ಮೊಗಶಶಿ[೪೧][ಗಿ][೪೧]ರ್ಕಿಲದೊಳಗಳ
ವಟ್ಟು ಸೇವಿಪ ತಾರೆಯೆನಿಸಿ ॥೭೬॥

೩೮–೩೮ X(ತ,ಕ). ೩೯–೩೯ ಮ(ತ,ಕ). ೪೦–೪೦ ಮಾಡುವೇಟ (ತ,ಕ). ೪೧–೪೧ ದಿ (ತ,ಕ).

ಭಟ್ಟಮುತ್ತಿನ ಸಿಂಹಮುಖದ ತುರಾಯಿ[೪೨][ಯ][೪೨]ಳ
ವಟ್ಟಿಹುದುರೆ ಚಿಂದಿಯೊಳು
ನೆಟ್ಟನೆ ಗೆಲವೆಣ್ಣ ಮದುವೆಗಾ ಕುವರನು
ಕಟ್ಟಿದ ಬಾಸಿಗವೆನಿಸಿ ॥೭೭॥

ಸ್ವಾಮಿದ್ರೋಹರ ಗಂಡನೆಂದೆಂ[೪೩][ಬುವ][೪೩] ಮ
ಹಾಮಣಿಮಯ ಪೆಂಡೆಯವ
ವಾಮಪಾದದೊಳಿಟ್ಟು ಮೆರೆಯುತಿರ್ಪನು ಸಂ
ಗ್ರಾಮಭೀಮನು ತೋಟೇಂದ್ರ ॥೭೮॥

ನೆರೆ ಗಂಡುಗಲಿ ತೋಟೇಂದ್ರನ ಕರದೊಳು
ಮಿರುಗುವ ಭೀಕರ ಖಡ್ಗ
ಎರಕದ ಗೆಲವೆಣ್ಣ ಮುಡಿ[೪೪][ಗೆಯ್ದಿ][೪೪] ಸೂಡುವ
ಗರಿ[೪೫]ವೂ[೪೫]ವಿದೆನೆ ರಂಜಿಪುದು ॥೭೯॥

ಚಾಪಖಡ್ಗಾದಿ ಸಕಲ ಶಸ್ತ್ರಾಸ್ತ್ರವಿ
ದ್ಯಾಪರಿಣತನು ಸತ್ಕೀರ್ತಿ
ವ್ಯಾಪಿತ ಸರ್ವದಿಗಂತನಖಿಳ ಕ
ಳಾಪನೆನಿಪನಾ ಕುವರ ॥೮೦॥

ವಾರಣಾರೋಹಣ ನಿಪುಣಜಯಂತನೊ
ವಾರುವಕನ ರೇವಂತ
ಸೂರಿಸಂದೋಹಮಂದಾರನೆನಿಪ ಸುಕು
ಮಾರ ತೋಟೇಂದ್ರನೊಪ್ಪುವನು ॥೮೧॥

ವೀರನಿಕರಕರಮುಕುರ ಕುಮಾರಶಿ
ರೋರತ್ನ ಭೂನುತಯತ್ನ
ಪಾರಾವಾರಗಂಭೀರ ಪವಿತ್ರ ಸು
ಚಾರನೊಪ್ಪಿಹನು ತೋಟೇಂದ್ರ ॥೮೨॥

೪೨–೪೨ ಗ(ತ,ಕ). ೪೩–೪೩ ಬ(ತ,ಕ). ೪೪–೪೪ ಗೊಯ್ದು(ತ,ಕ). ೪೫–೪೫ ಲಾ (ತ,ಕ).

ನಳಿತೋಳು ಶಾಖೆ ಸೆಳ್ಳುಗುರಲದೊರ್ಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೮೩॥

[೪೬]**ಚತುರ್ಥ ಸಂಧಿ ಸಂಪೂರ್ಣಂ**[೪೬]

❖❖

೪೬-೪೬ ಅಂತು ಸಂಧಿ ೪ಕ್ಕಂ ಪದನು ೩೦೦ಕ್ಕಂ ಮಂಗಳಮಹಾಶ್ರೀ. ಪಂಚವಣ್ಣಿಗೆ ಚನ್ನಮಲ್ಲಿಕಾರ್ಜುನದೇವರ ದಿವ್ಯ ಶ್ರೀಪಾದಪದ್ಮಂಗಳಿಗೆ ಶರಣು (ತ,ಕ).

ಸಂಧಿ : ೫

ಜಾಣ ತೋಟೇಂದ್ರನ ರಾಣಿಯ ಬಣ್ಣಿಸಲಳವೆ

ಶ್ರೀ ಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸನಿಜಾವಾಸ
ಸಾಗರಶಯಸಾರ್ಚಿತಪಾದ ಸಲಹು ಮ
ಹಾ ಗುರು ಚೆನ್ನಮಲ್ಲೇಶ ॥೧॥

ಆ ತೋಟೇಂದ್ರನರಸಿಯ ಲಾವಣ್ಯರೂ
ಪಾತಿಶಯವನೇನೆಂಬೆ
ನೂತನರತಿದೇವಿಯೆನಿಸಿ ವಿರಾಜಿಪ
ಳಾ ತರಳಾಯತನೇತ್ರೆ ॥೨॥

ಭಾವಸಂಭವನಿಕ್ಷುಚಾಪಕ್ಕೆ ತೊಟ್ಟಿಹ
ಹೂವಿನಂಬೆನಿಸಿ ಮೋಹಿಸುವ
ಆ ವನಿತೆ[೧][ಯ][೧] ಚೆಲ್ವವೆತ್ತವಯವವನ
ದಾವ ಕವೀಂದ್ರ ಬಣ್ಣಿಪನು ॥೩॥

ಚೆಂದಳಿರಲರ್ದ ಕೆಂದಾವರೆ ಸರಿಯಪ್ಪೆ
ವೆಂದಡಿಯೊಳು ಕಾದಿ ಮುರಿದು
ವಂದಿಸಿ ಮರನೇರಿ ನೀರ್ಪೊಕ್ಕವೆಂದೊಡೇ
ನೆಂದು ಬಣ್ಣಿಪೆನವಳಡಿಯ ॥೪॥

೧-೧ X (ತ,ಕ).

ವದನಪ್ರಸಾದದಿಂ ತಮ್ಮ ವಲ್ಲಭನಂ
ಗದ ಕಂದುಗಳೆಯೆಂದು ಬಂದು
ಪದಕೆರಗಿಪ್ಪ ತಾರಾಳಿಯೆನಿಸುವು[೨][ವು][೨]
ಸುದತಿಯಡಿಯ ಮಿರುಪುಗುರು ॥೫॥

ಲಲಿತಲಾವಣ್ಯಾಂಬು[೩]ಜ[೩] ರೂಪ ಜಲಚರ
ವಿಲಸಿತಪದಸರಸಿಯೊಳು
ನೆಲೆಗೊಂಡ ಕಮಠಮಿಥುನಮೆನಲೆಸೆದುವು
ಲಲನೆಯ ಮಿಸುಪ ಮೇಗಾಲು ॥೬॥

ಕಂತುರತಿಯರಾಡುತಿರ್ಪ ಮಾಣಿಕ್ಯದ
ಕಂತುಕವೆನಿಸಿ ಕಂಗೊಳಿಸಿ
ಕಾಂತೆಯ ಮೃದುಗತಿಯೊಡನೆ [೪][ಮಡ][೪]ಗಳು ಚೆ
ಲ್ವಾಂತು ರಯ್ಯಂ ಬಡೆದಿಹವು ॥೭॥

ಕುಸುಮಕೋದಂಡನೊಲಿದು ಪಿಡಿದಾಡುವ
ಮಿಸುನಿಯ[೫][ಲೌ][೫]ಡಿಗಳೆನಿಸಿ
ಸಸಿವದನೆಯ ಕಿರುದೊಡೆಗಳು ಪೊಂಬೊಗ
ರೆಸಕದಿಂದೆದೆಗೊಳಿಸಿಹವು ॥೮॥

ಕರಭ ಕನಿಷ್ಠಯುತಂ ಬಾಳೆ ಪೊರೆದ
ದುರ್ಗರ ವಿಭಕರವಿವೇನೆಣೆಯೆ(?)
ಸ್ಮರನೃಪತಿಯ ವಿಜಯಸ್ತಂಭವೆನಿಪ
ತರಣಿಯ ಬಟ್ಟ ನುಣ್ದೊಡೆಗೆ ॥೯॥

ನನೆಗೋಲನ ನವಿಲಾಡುವ ಬೆಟ್ಟವೊ
ಮನದನ್ನನೆದೆಯೆನಿಪಂಚೆ
[೬][ಬಿ][೬]ನದಿಪ ಪುಳಿನತಳಮೊಯೆನೆ ಬನಿತೆಯ
ಘನತರ ಜಘನ[೭][ಮೆಸೆವುವು][೭] ॥೧೦॥

೨-೨ X(ತ,ಕ), ೩-೩ ಜಲ(ತ,ಕ). ೪-೪ ಮಿಡಿ (ತ,ಕ) ೫-೫ ತಾ (ತ,ಕ) ೬-೬ ದಿ (ತ,ಕ). ೭-೭ ಮೊಗೆವುದು (ತ,ಕ).

ಮಡದಿಮಣಿಯ ನ೮[ಡೆ]೮ಯೆಂಬ ಸೊರ್ಕಾನೆಯ
ನಡುವೆಂಬ ಸಿಂಗವ ನಿಲಿಸಿ
ನಡುವೆಯುತ್ತುಂಗ ನಿತಂಬವನಿಟ್ಟ ಪೊಂ
ಬೊಡೆಯನ ಜಾಣ್ಮೆ ತಾನೆನಿತೊ ॥೧೧॥

ಮಾರಮದೇಭ ನೀರಾಟವಾಡುವ ಗಂ
ಭೀರ ಕಾಸಾರವಿದೆನಿಸಿ
ನಾರಿಯ ಸುಳಿಪೊಕ್ಕುಳೆಸೆದುದು ಲಾವಣ್ಯ
ವಾರಿ ಸಂಪೂರಿತಮಾಗಿ ॥೧೨॥

ಎಡವಿಡದಿಡಿಕಿರಿದಡರ್ದ ಪೆರ್ಮೊಲೆಗಳ
ಕಡುವಿಣ್ಪವೊರೆಯ ಪೊತ್ತಿರುತೆ
೯[ಬಡವಾದುದೊ ತನು]೯ಯೆನೆ ತನಿಯಳ ಬಡ
ನಡು ಬಗೆವಂದು ರಾಜಿಪುದು ॥೧೩॥

ನೆರೆಯೊಳು ಮೊಲೆ ಪೊರವಾರ್ಗಳು ಪೆಂಪುವೆ
ತ್ತಿರೆ ಕಂಡು ಕರುಬಿ ಸೈರಿಸದೆ
ಪರಿತಪಿಸುತೆ *[ಕಡು]* ಬಡವಾದುದೊಯೆನೆ
ಪರಿವಡೆದುದು ನಡುವವಳ ॥೧೪॥

ವಿಲಸಿತ ಲಾವಣ್ಯಜಲಧಿಯೊಳೊಗೆದ ನ
೧೦[ಲ್ವ]೧೦ಳಿಗಳೊಯೆನೆ ಕಂಗೊಳಿಸಿ
ಜಲಜಪತ್ರಾಯತನೇತ್ರೆಯ ತನುಮಧ್ಯ
ದೊಳು ತ್ರಿವಳಿಗಳು ರಂಜಿಪುವು ॥೧೫॥

ನಿಡುಜಡೆಯೆಂದೆನಿಸುವ ಕಾಳಸರ್ಪನ
ಪೊಡೆಯೊಳೊಗೆದು ಮೊಲೆವಾಲ
೧೧[ಕುಡಿದೆ]೧೧ಡೆಗೊಂಡುದೊ ನಾಭಿವಾಲ್ಮಿಕವನೆನೆ
ಬಡಬಾಸೆ ಭಾಮೆಗೊಪ್ಪುವುದು ॥೧೬॥

೮–೮ ಡಿ (ತ,ಕ). ೯–೯ ತನು ಬಡವಾದುದೊ (ತ,ಕ) *–* ಕಂಡು (ತ,ಕ). ೧೦–೧೦ ಲ್ಪ (ತ,ಕ). ೧೧–೧೧ ಎ (ತ,ಕ).

[೧೨][ಅಗಲದ][೧೨] ಚಕ್ರವಾಕಂಗಳೊ ಬಿರಿಯದೆ
ಸೊಗಯಿಪ ಕೆಂದಾವರೆಯ
ಮುಗುಳುಗಳೋಯೆನಲೆಸೆದವು ನೆರೆವೆರೆ
ಮೊಗದ ನೀರೆಯ ವಕ್ಷೋಜ ॥೧೭॥

ಮತ್ತೇಭಗಮನೆಯ ವೃತ್ತಕುಚಂಗಳು
ಮುತ್ತಿನೊಚ್ಚರಕೆಡೆಗೊಡವು
ಉತ್ತಮ ಸದ್ಗುಣಯುತರಿಗೆ ಕರ್ಕಶ
ವೃತ್ತರೊಲ್ದಿಂಬುಗೊಡುವರೆ ॥೧೮॥

ಸುದತಿಯ ಬಡಬಾಸೆಯೆಂಬ ಕಾಳಾಹಿಯ
ವದನವೆಂದೆಂಬ ಚಂದ್ರಮನ
ವಿದಿಸಿ ಪಯೋಧರದಿಂ ಮರೆಗೊಳಿಸಿದ
ಚದುರನಲ್ಲವೆ ಚತುರಾಸ್ಯ ॥೧೯॥

ತಳತಳಿಸುವ ಸೆಳ್ಳುಗುರಲರ್ದೊಂಬೆ ಚೆಂ
ದಳಮೆಳದಳಿರಾಗೆಸೆಯೆ
ನಳನಳಿಸುವ ನಳಿತೋಳೆಸೆದುವು ಕೋ
ಮಳ [೧೩]ಲ[೧೩]ತೆಯೆನಿಸಿ ಕೋಮಲೆಯ ॥೨೦॥

ಬೆಳುಪಲ್ಲದೆ ಬೆಟ್ಟಿತೆನಿಸದೆ ಲಾವಣ್ಯ
ಜಲದೊಳೊಗೆದು ಪೊಂ[೧೪]ಬೊಗರ[೧೪]
ತಳೆದು ಪಾಡುವ ನವಕಂಬುವಿದೆನೆ ಕಂ
ಗೊಳಿಪುದವಳ ನುಣ್ಗೊರಳು ॥೨೧॥

ಬಂದುಗೆ ಮೊಲ್ಲೆ ಸಂಪಗೆ ಬೆಳುನೆಯ್ದಿಲ
ನೊಂದುಗೊಂಡಲರಿರುತೆಸೆವ
ಪೊಂದಾವರೆಯೊಯಿದೆನೆ ವದನಂ ಬಗೆ
ವಂದುದು ನೀಲಕುಂತಳೆಯ ॥೨೨॥

೧೨-೧೨ ಅಂಗದ (ತ), ಅಗದ (ಕ). ೧೩-೧೩X (ಕ) ೧೪-೧೪ ಬಲ (ಕ),

ಪಗಲಿರುಳೆಸಕಂಬಡೆದೊಡೆ ಶಶಿ[೧೫][ತಾ][೧೫]ವ
ರೆಗಳೋರಗೆಯೆಂಬುದುಚಿತ
ಪಗಲಿರುಳೆಸಕಂಬಡೆದ ತನ್ವಿಯ ಮುದ್ದು
ಮೊಗಕೆನಲದನೇನನೆಂಬೆ (?) ॥೨೩॥

ಮನಸಿಜನಿನಿವಾತೆಂಬ ಮಂತ್ರಾಸ್ತ್ರವ
ನನುಗೊಳಿಸೆ[೧೬][ಸೆವೊ][೧೬]ಡೇರಿಸಿದ
ಯಿ[೧೭]ನಿ[೧೭]ದೊಂದಿದ ಬಂದುಗೆಯಲರ್ವಿಲ್ಲೆಂ
ದೆನಿಪುದು ಚೆಂದುಟಿಯವಳ ॥೨೪॥

ಅಂಬುಜಾಕ್ಷಿಯ ಬಾಯ್ದೆರೆಯ ಪೋಲುವೆನೆಂದು
ಬಿಂಬವು ಕಂಟಕಾಗ್ರದೊಳು
[೧೮][ಲ][೧೮]ಂಬಿಸಿ ತಪವಿರದಿರ್ದೊಡೇ[೧೯][ನ][೧೯]ದುವಾ
ಚೆಂಬಣ್ಣವೆತ್ತಣದದಕೆ ॥೨೫॥

ರಮಣಿಯ ರದನಾಳಿಗೆಣೆವಂದೆವೆಂದು ದಾ
ಡಿಮವತಿ ರಾಗಿಸುತ್ತಿರಲು
ಸುಮಶರ ಗಿಳಿಗಳಿಂ ದಸಿ[೨೦][ಯಿ][೨೦]ಪನೆನೆ ದಂ
ತಮನೇನ ಬಣ್ಣಿಪೆನವಳ ॥೨೬॥

ಲಲನೆಯ ಚೆಂದುಟಿಯನು ಪೋ[೨೧][ಲ್ವ][೨೧] ವರಬಿಂಬ
ಫಲದಾಹಾರವನುಂಡು
ಸಲೆಯರಗಿಳಿ ಸವಿವಾತುಗಲಿವುದೆನೆ
ವಿಲಸವೆಂತುಟೊ ನುಡಿಯವಳ ॥೨೭॥

ಮಿಸುಪ ಮುತ್ತಿನ ಲಿಂಗಕೆ ರತಿಯೊಲಿದು ಪೂ
ಜಿಸಿದ ಸಂಪಗೆಯೊಯಿದೆನಿಸಿ
ಅಸಿಯಳ ನಾಸಾಮಣಿ ಸಹ ನಾಸಿಕ
ವೆಸೆದುದಂಗಜನ ನ[೨೨][ಚ್ಚಿ][೨೨]ಸಲು ॥೨೮॥

೧೫–೧೫ ತ (ತ,ಕ). ೧೬–೧೬ ಸಿಪೊ (ತ,ಕ). ೧೭–೧೭ ನ(ಕ). ೧೮–೧೮ ತ (ತ,ಕ). ೧೯–೧೯ ನಿ (ತ,ಕ). ೨೦–೨೦ ಯ (ತ,ಕ). ೨೧–೨೧ ಲ (ತ,ಕ). ೨೨–೨೨ ನರ್ಚ (ತ,ಕ).

ಮದನರತಿಯರೀಕ್ಷಿಸಲೆಂದು ಚದುರಿಂದೆ
ಬಿದಿಯೆಂಬ ಸೊನ್ನಾರಗೈದು
ಎದೆವಂದ ರನ್ನಗನ್ನಡಿಗಳೊಯೆನೆ ನುಂ
ಗದಪೆಸೆದವು ಕುಂಭಕುಚೆಯ ॥೨೯॥

ಕಡುಗೊಬ್ಬಿ ಬೆಳೆದ ನೋಲೆಯ ದೂಸರಿಯಿಡ
ನಡುವಿನಿರವ ಕಾಣೆವೆಂದು(?)
ಕೊಡಕೆಯೊಳವರ ಪೆರ್ಚುಗೆವಚ್ಚುವಂತಿರೆ
ನಿಡಿಯಲರ್ಗಂಗಳೊಪ್ಪಿದವು ॥೩೦॥

ಎಡಗ[೨೩][ಣ್ಗೆ][೨೩] ಬಲಗಣ್ಣು ಬಲಗ[೨೪][ಣ್ಗೆ][೨೪] ಎಡಗಣ್ಣು
ಪಡಿಯೆನ್ನದೆ ಕುಮುದವನು
ಪಡಿಯೆಂಬುದನುಚಿತವೆನಿಸಿ ಲತಾಂಗಿಯ
ಕಡೆಗಣ್ಣುಗಳು ಸೊಗಯಿಪವು ॥೩೧॥

[೨೫][ಕು][೨೫]ಡುವಿಲ್ಲನೆಂಬ ಕಿರಾತ[೨೬][ವೀರಂಗೆ][೨೬] ಪೊಂ
ಬೊಡೆಯನು ನಿಲ್ಲದೆ ಸಮೆದ
ಬಡಿಗೋಲೆನಲೊಪ್ಪಿದುವೇಣನೇತ್ರೆಯ
ಕಡುವುರ್ವು ಬಿಗಿದ ಬಿಂಕದೊಳು ॥೩೨॥

ವದನವೆಂದೆಂಬ ಮದನಮುಖಶಾಲೆಯ
ಪುದಿಗಳ ಮೇಲುಭಾಗದೊಳು
ಎದೆಗೊಳಿಸುವ ದಂಡಾವಳಿ[೨೭][ಗಳೊ][೨೭]ಯೆನೆ
ಸುದತಿಯ ಕರ್ಣವೊಪ್ಪಿದುವು ॥೩೩॥

ಮಿಸುಪ ನಾಸಿಕ ಹೇಮದಂಡ ಬೈತಲೆವಣಿ
ಎಸೆವ ಕಳಸವಂಗನೆಯ
[೨೮][ನೊಸ][೨೮]ಲೆಸೆದತ್ತಂಗಜರಾಜಗೆತ್ತಿದ
ಮಿಸುನಿಯ ಛತ್ರವಿದೆನಿಸಿ ॥೩೪॥

೨೩–೨೩ ಣ್ಣೆ (ತ,ಕ). ೨೪–೨೪ ಣ್ಣೆ (ತ,ಕ). ೨೫–೨೫ ಕ (ತ,ಕ). ೨೬–೨೬ ಮಿರಂಗೆ (ತ,ಕ). ೨೭–೨೭ ಯೋ (ತ,ಕ). ೨೮–೨೮ ನೆಸೆ (ತ,ಕ).

ಮನದನ್ನನ ಮನದೊಳು ಪುಟ್ಟಿದ ನಸು
ಮುನಿಸೆಂಬ ಪಶುವಳಿವುದಕೆ(?)
ಜನಿಸಿದ ಸಾಲ ನಕ್ಷತ್ರವಿದೆನೆ ಮು
ತ್ತಿನ ಬೊಟ್ಟು ನೀರೆಗೊಪ್ಪುವುದು ॥೩೫॥

ಮೊಗವೆಂಬ ಚಂದ್ರನ ಹಿಂಗದೆವಿಡಿದು ನೆ
ಟ್ಟಗೆ ಬಾಲವನಿಳೆಗೂಡಿ
ನಿಗುರಿನಿಂದೆಸೆವ ಬಂಬಾವೆನೆ ನಿಡುಜಡೆ
ಸೊಗಯಿಪುದಬ್ಜಲೋಚನೆಯ ॥೩೬॥

ಸುರುಚಿರ ತನುರುಚಿಯಿಂ ಮಣಿಮಂಡನ
ಕರಮೊಪ್ಪಿ ರಂಜಿಪುದೆನಲು
ತರುಣಿಮಣಿಯಾಭರಣಕೆ ತಾನಾ
ಭರಣವೆನಿಸಿದಳೇನೆಂಬೆ ॥೩೭॥

ತೊಳಪ ಮಿಂಚೆಸೆವ ಪೆಣ್ಬರಿಜಾಂತುದೊ ಶಶಿ
ಕಳೆಯೆಯಂಗನೆಯೆನಿಸಿದುದೊ
ಎಳೆವಳ್ಳಿ ಮೊಲೆಮುಡಿಯಾಂತುದೊಯೆನೆ ಕಂ
ಗೊಳಿಪಳಾ ಕಮಲದಳಾಕ್ಷಿ ॥೩೮॥

ಶೃಂಗಾರರಸವೆ ಸಾಕಾರವನಾಂತೋ
ರ್ವಂಗನೆಯಾದುದೊ ಮೇಣಾ
ಅಂಗಜಮಂತ್ರಾಧಿದೇವಿಯೊಯೆನಿಪ ಬೆ
ಡಂಗುವೆತ್ತಿಹಳಾ ಬನಿತೆ ॥೩೯॥

ಮಾರನೃಪತಿಯೊರೆದೆಗೆದು ಜಡಿವ ಹೊಂಗ
ಠಾರಿಯೊ ಮದನಭೂಭುಜನ
ವೀರಲಕ್ಷ್ಮಿಯೊಯೆನೆ ಸೊಂಪುಪೆಂಪಿಂ ಮದ
ವಾರಣಗಮನೆ ರಾಜಿಪಳು ॥೪೦॥

ನೆನೆದ ಮಾತ್ರದೊಳೆ[೨೯][ಲೋ][೨೯]ಕಂಗಳ ಜಯಿಸುವ
ನನೆಗೋಲನ ಮೊನೆಯಂಬು
ವಿನುತ ಜಗತ್ರಯಲಾವಣ್ಯದೊಡಗೂಡಿ
ಬನಿತೆಯಾದುದೊಯೆನಿಸುವಳು ॥೪೧॥

ತೋರುವ ಲಾವಣ್ಯಶೋಭೆಯೊಡನೆ ಸೊ
ಕ್ಕೇರುವ ಜವ್ವನವದನು
ಮೀರುವ ಸೊಬಗು ಸೊಬಗು ವೈಯಾರವ
ಬೀರುತಿಹುದು ತನ್ವಿಯೊಳು ॥೪೨॥

ನಡೆಯೆಲ್ಲವತಿ ಮೃದು ಮೃದುವೆಲ್ಲ ಗಮಕವು
[೩೦][ಗ್ಗಡ][೩೦]ದ ಗಮಕವೆಲ್ಲ ಗಾಡಿ
ಕಡುಗಾಡಿಯೆಲ್ಲ ಕಂಗಳ ಹಬ್ಬ[೩೧]ವ[೩೧]ನೆ ಪರಿ
ವಡೆದುದು ಹಂಸಗಾಮಿನಿಯ ॥೪೩॥

ನುಡಿಯೆಲ್ಲ ಸವಿ ಸವಿಯೆಲ್ಲ ಸರಸ ಸೊಂ
ಪಿಡಿದ ಸರಸವೆಲ್ಲ ಜಾಣ್ಮೆ
ಕಡುಜಾಣ್ಮೆಯೆಲ್ಲ ಮದನಮಂತ್ರವಂತದೆ
ಕೊಡಕೆಗಮೃತವಿಂದುಮುಖಿಯ ॥೪೪॥

ಮೊಗವೆಲ್ಲ ನಗೆಗಣ್ಣು ಕಣ್ಣೆಲ್ಲ ಸವಿನೋಟ
ಸೊಗಯಿಪ ಸವಿನೋಟವೆಲ್ಲ
ಮುಗುಳಂಬನೆಸುವಲರಂಬಿನ ಬಿರುವಳೆ
ಮೃಗರಾಜ ಚಪಲಲೋಚನೆಯ ॥೪೫॥

ಆ ಸೊಬಗಾಚೆಲ್ವುಮಾಜಾಣ್ಮೆಯಾಸುವಿ
ಲಾಸವಿಭ್ರಮಹಾವಭಾವ
ಆ ಸುದತಿಯೊಳಲ್ಲದೆ ನೋಡೆ ಮಿಕ್ಕಿನ
[೩೨][ಸ್ತ್ರೀ][೩೨]ಸಮುದಾಯದೊಳುಂಟೆ ॥೪೬॥

೨೯–೨೯ ವು (ತ,ಕ). ೩೦–೩೦ ಗ (ತ,ಕ). ೩೧–೩೧ ವೆ (ಕ).೩೨–೩೨ ರೀ (ತ,ಕ).

ಆ ಸಲ್ಲಕ್ಷಣ[೩೩][ವಾ][೩೩] ಸದ್ಗುಣಗಣ
ವಾಸೌಂದರ್ಯಚಾತುರ್ಯ
ಯಾಸುಕುಮಾರತೆಯಾನಿಡುನೀರತೆ
ಯಾಸೊಬಗಿಯೊಳಲ್ಲದಿಲ್ಲ ॥೪೭॥

ಜಡಜಸಂಭವನತಿ ಛಾಂದಸನೆನಿಪ ಪೊಂ
[೩೪][ಬೊ][೩೪]ಡೆಯನ ಕೈಮಾಟದಳವ
ನುಡಿಯಲೇಕೆ ಪಂಕಜಭವನೀ ಪೆಣ್ಣ
ಪಡೆದನೆಂಬುದು ಸಟೆಯಲ್ಲೆ(?) ॥೪೮॥

ಅಲರ್ವಂಡಿನಿಂ ಪನಿನೀರಿಂದೆ ತನ್ನಯ
ಗೆಲವಾಗಿ ತಂಬೆಲರಿಂದೆ
ಜಲಜಕೋರಕಡಿಳಿಪ್ಪಾಗಸದಿಂ ಸ್ಮರ
ನೊಲಿದು ರಂಜಿಸಿದನೀ ಪೆಣ್ಣ(?) ॥೪೯॥

ಅಂಗಜನೆಂಬಭಿನವಬ್ರಹ್ಮ ಪುಟ್ಟಿಸಿ
ದಂಗನೆಯಲ್ಲದೊಡವಳ
ಅಂಗದ ಲಾವಣ್ಯಶೋಭೆ ಜಗತ್ರಯ
ದಂಗನೆಯರೊಳುಂಟೆ ನೋಡೆ ॥೫೦॥

ಕಿವಿಯಿಲ್ಲದಿಪ್ಪ [೩೫][ನಾಗಾಂಗ][೩೫]ನೆಯರು ತಮ
ಗೆವೆಯಿಲ್ಲಮ[೩೬][ರ][೩೬]ನಾರಿಯರು
ಯುವರಾಜ ಚೆನ್ನಿಗ ಚೆಲುವ ತೋಟೇಂದ್ರನ
ಯುವತಿಗೆ ಸರಿವಂದಪರೆ ॥೫೧॥

ಆ ಪೆಣ್ಮಣಿಯ ಚೆಲ್ವಿ[೩೭][ಕೆಯಿ][೩೭]ದೊರ್ಽ[೩೮][ಡಿ][೩೮]ಂದ್ರಾಣಿ
ಯಾ ಪದ್ಮಸದ್ಮೆಯರಲ್ಲಿ
ಪಾಪಕಂಜದೆ ಪಾದರವಾಡಿ ಗತಿಗೆಟ್ಟು
ಪೋಪರೆ ಜಿಷ್ಣುವಿಷ್ಣುಗಳು ॥೫೨॥

೩೩-೩೩ ಕಾ (ತ,ಕ), ೩೪-೩೪ ಬ (ತ,ಕ). ೩೫-೩೫ ನಾದಾ (ತ,ಕ). ೩೬-೩೬ ದ (ತ,ಕ), ೩೭-೩೭ ಕಿ (ತ,ಕ). ೩೮-೩೮ ಡೆಯಿ (ತ,ಕ).

ಆ ಮಾನಿನಿಯ ಜಾಣುವೆಯೊಳಗಣು ವಾ
ಗ್ಭಾಮೆಗೆ ದೊರೆಕೊಂಡೊಡವಳು
ಕಾಮಿಸಿ[೩೯][ಸ][೩೯]ತಿಯಪ್ಪಳೆ ಮೊರೆ ಧರ್ಮವ
ನೇ ಮೀರಿ ಪಡೆದ ಬೊಮ್ಮಗಗೆ ॥೫೩॥

ಪರಮಚಿದ್ರೂಪೆಯ ಗಿರಿಜೆಯಡಿಯ ಸಾರಿ
ಹರಭಾಳನಯನಾಗ್ನಿಯಿಂದೆ
ಉರಿದನಲ್ಲದೆ ಈ ಸತಿಯಿರ್ದಡಂದು ನಿಂ
ದುರಿಯ ಬಲ್ಲನೆ ಕಂದರ್ಪ ॥೫೪॥

ವಾರಿಜನೇತ್ರೆ ಕೋಮಲಗಾತ್ರೆ*[ಯಾ]* ಸ್ಮರ
ವಾರಣಯಾತ್ರೆ ಪವಿತ್ರೆ
ಚಾರುಚರಿತ್ರೆ ಸತ್ಕವಿನುತಪಾತ್ರೆ ಸ
ರೋರುಹರಿಪುಸಮವಕ್ತ್ರೆ ॥೫೫॥

ಪರಮಪತಿವ್ರತೆ ಪಾವನಚರಿತೆ ಭಾ
ಸುರತರ ಸದ್ಗುಣ$[ಭ]$ರಿತೆ
ಚರಕಲ್ಪಲತೆ ಸಜ್ಜನಜನಸನ್ನುತೆ
ಹರಭಕ್ತಿಯುತೆಯಾ ಬನಿತೆ ॥೫೬॥

ಆಣಿವಡೆದ ಕೀರವಾಣಿಯ ಮಧುಕರ
ವೇಣಿಯ ಸುತ್ರಾಣಿಯನು
ಜಾಣ ತೋಟೇಂದ್ರನ ರಾಣಿಯ ಪಲ್ಲವ
ಪಾಣಿಯ ಬಣ್ಣಿಸಲಳವೆ ॥೫೭॥

ಸೀಮಂತಿನಿಯರ ಸೀಮಂತಮಣಿಯೆನಿ
ಪಾ ಮೃಗಶಾಬಲೋಚನೆಗೆ
ತಾ ಮೆರೆವುದು ಚೆನ್ನಬಸವಮ್ಮನೆಂದೆಂಬ
ನಾಮಧೇಯವು ರೂಢಿವಡೆದು ॥೫೮॥

೩೯-೩೯ ಪ (ತ,ಕ). *-* ಯ (ತ,ಕ). $-$ ಚ(ತ,ಕ).

ಇಂತೊಪ್ಪುವ ಚೆನ್ನಬಸವಾಜಿಯೊಡನೆ ಲ
ತಾಂತಮಾರ್ಗಣಕೇಳಿಯಲಿ
ಸಂತಸ[೪೦]ಮುಣ್ಮಿ[೪೦] ಸಂತತಮಿರುತಿರ್ದನು
ಕಂತುಸಮಾನ ತೋಟೇಂದ್ರ ॥೫೯॥

ವರಮಣಿಯೊಳು ಹ[೪೧][ಜ್ಜೆ][೪೧]ಕರಿಯೊಳು ಮದರೇಖೆ
ಹರಿಣಾಂಕನಲ್ಲಿ ಚಂದ್ರಿಕೆಯು
ಕರಮೊಪ್ಪುವೊಲು ಯುವರಾಜ ತೋಟೇಂದ್ರ[೪೨][ನೊ][೪೨]
ಳಿರವಳಿದಿರ್ದಳಾ ಬನಿತೆ ॥೬೦॥

ರತಿಯೊಳು ರತಿಪತಿ[೪೩][ಯೊ][೪೩]ಲಿದಿ[೪೪][ರ್ಪೊ][೪೪]ಲಭಿನವ
ರತಿ ಚೆನ್ನಬಸವಾಜಿಯೊಡನೆ
ಕ್ಷಿತನುತ ಯುವರಾಜ ತೋಟೇಂದ್ರನಭಿನವ
ರತಿಪತಿಯೊಪ್ಪೆಸೆದಿರ್ದ ॥೬೧॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೬೨॥

[೪೫]**ಪಂಚಮ ಸಂಧಿ ಸಂಪೂರ್ಣಂ**[೪೫]

❖❖

೪೦-೪೦ ಮಾಣ್ಮು(ಕ). ೪೧-೪೧ ಬ್ಬೆ (ತ,ಕ). ೪೨-೪೨ ನ(ತ,ಕ). ೪೩-೪೩ ನೋ (ತ,ಕ). ೪೪-೪೪ ರ್ಪ ವೋ(ತ,ಕ), ೪೫-೪೫ ಅಂತು ಸಂಧಿ ೫ ಕ್ಕಂ ಪದನು ೩೬೨ ಕ್ಕಂ ಮಂಗಳ ಮಹಾಶ್ರೀ ಶ್ರೀ ಶಿವ ॥ ಪಂಚವಣ್ಣಿಗೆ ಚನ್ನಮಲ್ಲಿಕಾರ್ಜುನದೇವರ ದಿವ್ಯ ಶ್ರೀ ಪಾದಪದ್ಮಂಗಳೇ ಗತಿ ಮತಿ (ತ,ಕ).

ಸಂಧಿ : ೬

ತೋಟೇಂದ್ರ ನಡೆದ ಬೇಟೆಗೆಂದು

ಶ್ರೀಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸ ನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

[೧]ವ[೧]ರಭೂಪಾಲ ಶುಂಡಾಲಪಂಚಾನನ
ಧರಣೀಶ್ವರ ಚಿಕ್ಕನೃಪನ
ವರ ಸುಕುಮಾರ ಚೆನ್ನಿಗ ತೋಟೇಂದ್ರನ
ತ್ಯುರುತರ ವಿಭವದೊಳಿರುತೆ ॥೨॥

ಟಗರ ಕಾದಿಸುತೆ ಮಲ್ಲರ ಹೋರಿಸುತೆ ಕುಕ್ಕು
ಟಗಳ ಲಾವುಗೆ ಪಿಕಗಳನು
ಜಗಳವ ನೋಡಿ ಕೆಳೆಯರೊಳು ಚದುರಂಗ
ಪಗಡೆ ನೆತ್ತವನಾಡುತ್ತೈದೆ ॥೩॥

ನೆತ್ತ ಪಗಡೆ ಚದುರಂಗದಾಟಗಳೊಳು
ಹೊತ್ತುಗಳೆಯದೆಂದೆನುತೆ
ಚಿತ್ತವನಿಟ್ಟು ಬೇಂಟೆಗೆ ಬೇಂಟೆಕಾರರ
ಮೊತ್ತವ ಬರಿಸಿದನವನು ॥೪॥

೧–೧ ವ(ಕ)

ಸಂದಣಿಸುತೆ ಸಡಗರದಿಂದೆ ಬಿಯದರು
ಬಂದು ಕಾಣಿಸಿಕೊಳ್ಳಲೊಡನೆ
ಅಂದವಡೆದ ತೇಜಿಯನೇರಿ ಕುವರ ತೋ
ಟೇಂದ್ರ ನಡೆದ ಬೇಟೆಗೆಂದು ॥೫॥

ಕರಡಿ ಕೆಚ್ಚಿದ ಗಾಯ ಪುಲಿ ಸೀಳ್ದ ಗಾಯ ಸೂ
ಕರ ಹೊಯ್ದ ಗಾಯ ಕೋಡಿಂದೆ
ಕರಿಯೆತ್ತಿ ತಿವಿದ ಗಾಯ್ಗಳು ಮಾದ ಕಲೆಗಳ
ಬಿರುದಿನ ಭಿಲ್ಲರೈದಿದರು ॥೬॥

ಸಿಂಗ ಸಿರುಮ ಮಾಳ ಮಲೆಯ ಬುಸುವ ಚಿನ್ನ
ರಂಗ ರಟ್ಟಡಿ ಕೆಂಪ ದಿಮ್ಮ
ಕೆಂಗ ಕಸವ ಕಾಚ ಕಾಟ ಕದುರ ಗಿಡ್ಡ
ವೆಂಬ ಪೆದ್ದುಗರೊದಗಿದರು ॥೭॥

ಚಿಕ್ಕ ಕರಿಯ ಚಿನ್ನ ಚಿನ್ನೋಬ ಕೋಡಂಗಿ
ಲಕ್ಕ ಲಕುಮ ರೊಡ್ಡತಿಮ್ಮ
ಬೊಕ್ಕ ಬೋಳೇದಿಮ್ಮ ಮೊದಲಾದ ಬೇಡರು
ಹೆಕ್ಕಳವಡುತೊದಗಿದರು ॥೮॥

ಉಟ್ಟ ಪಟ್ಟೆಯ ಕಾಸೆ[೨] ದಟ್ಟಿಯ ಪಿಡಿದ ಹೊಂ
ಗಟ್ಟಿನ ಪಂದಿ ಪೋಟೇ[೩]ಪಿ[೩]
ಮೆಟ್ಟಿದೆಕ್ಕಡ ಕಂಕುಳಕಟ್ಟಿ *[ಗೆಗಳಳ]*
ವಟ್ಟಾಗ ಶಬರರೈದಿದರು ॥೯॥

ಬಡಿಗೋಲು ಹದವಿಲ್ಲು ಕೂರಂಬು ಹೇರೀಟಿ
ಕಡುಗ ಹಾಸದ ಸೊಣಕಗಳು
ಸಿಡಿಯುರುಳಂಟಿನ ಸೆಳೆಗಳಗಟ್ಟಿಗೆ
ಗಡಣವೆಸೆದುದವರೊಡನೆ ॥೧೦॥

೨+ಯ(ತ,ಕ), ೩–೩ ಟಿ(ಕ), *–* ಗಳ್ಗಳ (ತ,ಕ),

ತಲೆಯೊಳೆಸೆವ ಟೊಪ್ಪಿಗೆ ಎಡಗೈ ಬಂದಿ
ಹುಲಿ ದೀಹದ ಹುಲ್ಲೆಗಳು
ಬಲೆ ಬೆಳ್ಳಾರಂಗಳ ಹೊರೆಗಳು ಕಂ
ಗೊಳಿಸಿದುವವರೊ[೪][ಳಂ][೪]ದಾಗ ॥೧೧॥

ಮೊಲವಲೆಗಳ ಹುಲ್ಲೆವಲೆಗಳ ಸೊಕ್ಕಿದೆ
ಕ್ಕಲವಲೆಗಳ ಹೆಬ್ಬುಲಿಗಳ
ಬಲುವಲೆಗಳ ಹೊರೆಹೊರೆಗಟ್ಟಿ ಶಬರರು
ತಲೆಯೊಳು ಹೊತ್ತು ನಡೆದರು ॥೧೨॥

ಕಡುಗಲಿ ಕುವರ ತೋಟೇಂದ್ರನು ಬೇಡರ
ಪಡೆಯನೆಲ್ಲವ ಕೂಡಿಕೊಂಡು
ನಡೆತರುತಿರೆ ಮದ್ದಗಿರಿಯೆಸೆದುದು ಮುಂ
ಗಡೆಯೊಳಂತದನೇನನೆಂಬೆ ॥೧೩॥

ಮಿಸುಪ ಪೂರ್ವಾಪರ ಪರ್ವತಂಗ[೫][ಳ][೫] ಪೂರ್ಣ
ಶಶಿರವಿಯೊತ್ತುಗೊಂಡಿರಲು
ಎಸೆವುವಾ ಗಿರಿವರನಿರ್ಕೆಲದಲ್ಲಿ ಸೇ
ವಿಸುವ ದೀವಟಿಗರೆಂದೆನಿಸಿ ॥೧೪॥

ತುದಿಗೆರೆ ನಿಟ್ಟಿಸಲುನ್ನತ ಮಹಿಮಾ
ಸ್ಪದಮಾಗಿ ಪೆರ್ಮೆವೆತ್ತಿರ್ಪ
ತ್ರಿದಶಾಚಲ ಹೊನ್ನವೊಲು ತೋರ್ಪುದೆಂದೊಡಿ
ನ್ನದರ ಹೆಚ್ಚುಗೆಯನೇನೆಂಬೆ ॥೧೫॥

ಕಂಗೊಳಿಸುವ ಕೂಟಂಗಳಿಂ ಗವಿಗಳಿಂ
ದಿಂಗಡ ಶೈಲಂಗಳಿಂದೆ
ಡಂಗುರ ಬಿಲ ಕಮ್ಮರಿ ಜರಿ ಡೊಣೆಗಳಿಂ
ದಂ ಗಿಡಿ[೬][ಕಿ][೬]ರಿದೊಪ್ಪಿಹುದು ॥೧೬॥

೪–೪ ಳೊಂ (ತ,ಕ).೫–೫ ಳು (ತ,ಕ). ೬–೬ ಕ (ತ,ಕ).

ಪಿರಿದಾದ ಗುಂಡು ಹಾಸರೆಗಳಿಂ ಕುಂದದೆ
ಪರಿವ ಜಲದಿ ವನದಿಂದೆ
ವರಸಾನುವಿಕ್ಕೆಲವೆಟ್ಟುಗಳಿಂ ಮದ್ದ
ಗಿರಿ ಪೆಸರ್ವಡೆದೊಪ್ಪುತಿಹುದು ॥೧೭॥

ಆ ಮದ್ದಗಿರಿಯ ತಪ್ಪಲ ಹಿಂಗಡಿಯೊಳು
ತಾ ಮೆರೆದಿಹುದು ಕಾನನವು
ಭೂಮಿಗಚ್ಚರಿಯಾದ ಪಾದಪಗುಲ್ಮಲ
ತಾ ಮೃಗಖಗಪೂ*[ರ]*ದಿಂದೆ ॥೧೮॥

ಅನಿಲಘಾತಚಲಿತಸಂಗ[೭][ತ][೭]ವೇಣು
ಜ[೮]ನಿತೋನ್ನತ ರವದಿಂದೆ
ವನಕರಿಖಗಮೃಗನಿಚಯ ನಿಸ್ವನದಿ ಕಾ
ನನಮೆಸೆದಿಹುದು ಭೋರಿಡುತೆ ॥೧೯॥

ಹರಿ ಪುಂಡರೀಕ ವಿರಾಜಿತಮಾಗಿ ಸಾ
ಗರದಂತೆ ಕಾಸಾರದಂತೆ
ನಿರುತ ಸೋಮಾರ್ಕ ಕಲಿತಮಾಗಿ ಕಾನನಂ
ಬರದಂತೆ ಪರಿವಡೆದಿಹುದು ॥೨೦॥

ಸುರಪ[೯][ತಿಯಂ][೯] ತೆ ಸಂಗರದಂತೆ ಕೌಶಿಕ
ವರ ಕ[೧೦][ರಿ][೧೦] ಚಯ ಪರಿಶೋಭಿ
ಪರಿಕಿಸೆ ಮಖದಂತೆ ಶಿಖಿವಿಲಸಿತಮಾಗಿ
ಕರಮೆಸೆದಿಹುದಾ ಗಹನ ॥೨೧॥

ನಗಕುಲದಿಕ್ಕೆ ನಾನಾಮಿಗಗಳ ಹಕ್ಕೆ
ಖಗನಿಕರದ ನೆಲೆವೀಡು
ವಿಗ[೧೧][ಡ ಪು][೧೧]ಳಿಂದ[೧೨][ರಾ][೧೨]ಡುಂಬೊಲನೆನಲೊಪ್ಪಿ
ಬಗೆಗೊಳಿಸಿಹುದಾ ಗಹನ ॥೨೨॥

– ಗ(ತ,ಕ).೭–೭ ಮ(ತ,ಕ), ೮–೮ ಣೂಜ(ಕ), ಣೂಜ್ಜ(ತ).೯–೯ ದದಂ (ತ,ಕ). ೧೦–೧೦ ಡ (ತ,ಕ), ೧೧–೧೧ ಪಿಗ (ತ,ಕ), ೧೨–೧೨ ಕಾ (ಕ).

ಮರಗಿಡುಬಳ್ಳಿಹೊದರುಹೆಮ್ಮೆಳೆಹುತ್ತ
ಸರಿವು ಗುದ್ಗುರುಗಂಡಿಯಿರುಬು
ಮೊರಡಿ ಹೆಡ್ಡಿಟ್ಟು ಕಣಿವೆ ಕೊಳ್ಳದಿಂದೆ[೧೩][ಯ್ದ್][೧೩]
ಸರ[೧೪]ಣಿ[೧೪]ಗೊಂಡಿಹುದಾ ಗಹನ ॥೨೩॥

ಬದರಿ ಬಕುಳ ಮಾದ ಹೊನ್ನೆಯು ಸುರಹೊನ್ನೆ
ಕದಲಿ ಕಮ್ಮಾರಕ ನಿಕರ
ತ[೧೫]ದ[೧೫]ಕು ತಪಸಿ ತಗ್ಗಿ ತಾರೆ ತುಂಬರ ತೆಂಗು
ಕದಳಿ ಭೂತಾಳಂಗಳಿಹವು ॥೨೪॥

ತಾಳ ಹಿಂತಾಳ ಕಂದಾಳ ಕುದ್ದಾಳ ರ
ಸಾಳವಂಬಟೆ ಅರಿದಾಳ
ಬೆಳಲ ಬೊಬ್ಬುಲಿ ಬೇಲ ಅರಳಿ ಬಿಳಿಲು ಬಿಕ್ಕೆ
ಹಾಲೆ ಹಿಂಗಳಗಳಲ್ಲಿಹವು ॥೨೫॥

ತಿಲಕ ಬಂದೂಕಾಶೋಕ ಚಂಪಕ ಪಾ
ಟಲಕೃತಮಾಲಕುರಂಟ
ಮಲಯಜಾಗರು ಖರ್ಜೂರ ಸಜ್ಜಕ ಗು
ಗ್ಗುಳತರು ನಿಕರಮೊಪ್ಪಿಹವು ॥೨೬॥

ಮತ್ತಿ ಮೊಳಗು ಬನ್ನಿ ಬಸುರಿ ಬೇವಾಲ ಕ
ಲ್ಲತ್ತಿಯಿಂಗುಳ ದೇವದಾರು
ಅತ್ತಿ ಮುತ್ತುಗಲೊದ್ದ[೧೬] ಸಿರಸ ಪಲಸ ಬೆ
ಲ್ವತ್ತದ ಮರಗಳೊಪ್ಪಿಹವು ॥೨೭॥

ನೆಲ್ಲಿ ನೇರಿಲು ಸೋವೆ ನಗರೆ ತಂಡಸಲೋಕೀ
ಚಿಲ್ಲಗೇರಿಪ್ಪ ಮಂಜಾಡಿ
ಚಳ್ಳೆಕಡವ ಜೇನೆ ಚನ್ನಂಗಿ ತಡಸೀಗೆ
ಯೆಲ್ಲ ತರುಗಳಲ್ಲಿಹವು ॥೨೮॥

೧೩-೧೩ ದ್ದು (ತ,ಕ). ೧೪-೧೪ ಣಿಗೆ (ಕ). ೧೫-೧೫ ದು (ತ). ೧೬ + ಗ(ಕ).

ನಳನಳಿಸುತೆ ಸುತ್ತಿಡಿಕಿರಿದುದ್ದಕೆ
ಬೆಳೆದು ತಾಗುವ ಮುಗಿಲೊಡನೆ
ಹಳಚುತೆ ಮುತ್ತುಗರೆವ ಹೆಬ್ಬೆದಿರ ಹೆ
ಮ್ಮೆಳೆಗಳು ಕಂಗೊಳಿಸಿಹವು ॥೨೯॥

ಹುಲಿ ಹುಲ್ಲೆ ಕರಡಿ ಕಡವು ಕಾಡಕೋಣನೆ
ಕ್ಕಲಸಿಂಗನೆಂಪಡಿ ಚಮರಿ
ಮೊಲ ನರಿ ಮರೆ ತೋಳ ಕಿರುಬ ಕೋಡಗ ಮುಂ
ಗುಲಿಯೆ[೧೭]ಯ್ಯ[೧೭]ಮೃಗಗಳಲ್ಲಿಹವು ॥೩೦॥

ಹರಡೆ ಹಂಗನು ಗಿಡಗನು ಗೀಜಗ ಗೌಜು
ಬುರುಲೆ ಲಾವುಗೆ ಗುಮ್ಮವಕ್ಕಿ
ಗೊರವ ಪಾರಿವ ಬೋಗಾರ ಸಾರಸ ತಿ
ತ್ತಿರು ಮರಕುಟಿಗನೊಪ್ಪಿಹವು ॥೩೧॥

ಚಿಲಿಮಿಲಿಗನು ಟಿಟ್ಟಿಭ ಟೀವ ಚಂಬೋತು
ಬೆಳೆವ ಸಾಳುವ ಕೆಂದಲೆಗಾ
ವಲಿಯ ಬೋವುಲು ಪಿಂಗಲಿಕ ರೇವಕ್ಕಿ ಮೀ
ನ್ಬುಲಿಗ ಚಾದಗೆಗಳೊಪ್ಪಿಹವು ॥೩೨॥

ನಲಿದು ನರ್ತಿಸುವ ನವಿಲು ಗಿಲಿಬಿಲಿಯೆಂದು
ಕೆ[೧೮][ಲೆವರ][೧೮]ಗಿಳಿ ಸ್ವರವೆತ್ತಿ
ಉಲಿವ ಕೋಗಿಲೆ ತಿಳಿಗೊಳಗಳೊಳಾಡುವ
ಕಳಹಂಸೆಯಲ್ಲಿ ರಂಜಿಪುವು ॥೩೩॥

ಮುದದಿ ಮುಂ[೧೯][ಬ][೧೯]ರಿದೆರಗುವ ತುಂಬಿಗಳ[೨೦]ವಿಂಡ[೨೦]
.....ಂದೆ ಸೋವಿಕೊಳುತೆ
ತದಿಕಿನ ತಳಿರ ಕೊಂಬೆಗೆ ಕೈಯನೆತ್ತುತೆ
ಮದಗಜವಲ್ಲೆಸೆದಿಹವು ॥೩೪॥

೧೭-೧೭ ಂಬ(ಕ). ೧೮-೧೮ ಲವರೆ (ತ,ಕ). ೧೯-೧೯ ದ (ತ,ಕ)೨೦-೨೦ ಳಿಂದ (ಕ).

ಅಲ್ಲಲ್ಲಿಗೆ ಕಿರುಹೆಮ್ಮಡು ಹಳ್ಳೊಳ್ಳ
ವಲ್ಲಲ್ಲಿಗೆ ಬಾವಿ ಬಂಚೆ
ಅಲ್ಲಲ್ಲಿಗೆ ತುರುವಳ್ಳಿ ಚೆಲ್ಲರ ಪಳ್ಳಿ
ಯಲ್ಲೆಲ್ಲಿ ರಂಜಿಸುತಿಹವು ॥೩೫॥

ತೊಳಗುತಲೆಡೆಯಾಡುತಿಂದ್ರನೀಲದ ಪು
ತ್ತಳಿಗಳೊಯೆನಿಸಿ ಮೋಹಿಸುವ
ಎಳೆವರೆಯದ ಕಾಡ ಬೇಡಿತಿಯರು ಕಂ
ಗೊಳಿಪರು ಕಾದಲರೊಡನೆ ॥೩೬॥

ಹೀಲಿಯಯುಡಿಗೆ ಹೊಂಗಾರೆ ಹೂವಿನ ಬಿ
ಚ್ಚೋಲೆಯಭ್ರಕದ ಲಲಾಮ
ತೋಳಗುಂಜಿಯ ದಂಡೆಯಸೆಯಲೊಪ್ಪಿರುತಿಹ
ರಾ ಲುಬ್ಧಕವನಿತೆಯರು ॥೩೭॥

ತೊಳಪ ಕೋಮಳ ತನುರುಚಿಯಿಂದೆ ತನುಗೊಬ್ಬಿ
ಬಳದೆಸೆವಡವಿಗತ್ತಲೆಯ
ಬೆಳುದಿಂಗಳ ಮಾಳ್ಪರು ಬೆಳದಿಗೆಗಣ್ಣ
ಬೆಳಗಿನಿಂದಾ ಶಬರಿಯರು ॥೩೮॥

ಮೆ[೨೧][ಳೆ][೨೧]ವನೆಗಳೊಳೆಳದಳಿರ ಪಾಸಿನ ಮೇಲೆ
[೨೨]ತೊ[೨೨]ಳಪಗಂಗಳ ಶಬರಿಯರು
ನಳನಳಿಸುವ ನಳಿತೋಳುಗಳಿಂ ಬರ
ಸೆಳೆದಪ್ಪಿ ನಲ್ಲರೊಳಿಹರು ॥೩೯॥

ತೊಳಗಿ ಬೇರೊರ್ವಳನೊಂದಿ ಬಂದಿರೆಯುಗು
ರ್ಗಲೆ[೨೩][ಗ][೨೩]ಂಡು ಮುಳಿದ ಕಾದಲೆಗೆ
ಹುಲಿ ಹೆಗ್ಗುರುಗಳು ಜರ್ಕಿದು[೨೪][ವೆಂದು][೨೪]ಶಬರೇಂದ್ರ
ನಳುಕಿ ಬಯಾರಿದನವಲ(?) ॥೪೦॥

೨೧-೨೧ ಳ (ತ,ಕ). ೨೨-೨೨ ತ (ತ,ಕ). ೨೩-೨೩ ಗು (ತ,ಕ). ೨೪-೨೪ ದಿಂದ (ತ,ಕ).

ಪರಿಯರಿದನುಗೊಳಿಸುತೆ ತಂತಿಯ ಮಿಡಿ
ದುರದೊ[೨೫][ಳಪ್ಪಿರ್ದ][೨೫]ಕಿರಾತೆ
ಬೆರಲು ಕೊರಲುಗೂಡಿ ಬಾಜಿಸುತಿಹಳು ಕಿ
ನ್ನರಿಯೊಳು ಮೆಚ್ಚುಹಾಡುಗಳ ॥೪೧॥

ಮದಗಜಕುಂಭ ಮುಕ್ತಾಫಲ ವಿಳ[೨೬][ಸಿ][೨೬]ತ
ಸುದತಿಯರುಗ[೨೭][ಳೊಳಗೆ][೨೭]ಸೆವ
ಮದಗಜಕುಂಭ ಕುಚದ ಗುಂಜಿದೊಡವಿನ
ಚದುರೆ ಬೇಡಿತಿಯೊಪ್ಪು ಚಿತ್ರ ॥೪೨॥

ಪಳುಕಿನ ನು[೨೮][ಣ್ಣೊ][೨೮]ರಳೊಳು ಬಿದಿರಕ್ಕಿಯ
ಮಲಯಜದೊನಕೆಗಳಿಂದೆ
ನಳಿತೋಳನೆತ್ತಿ ಪಾಡುತೆ ಬೇಡಿತಿಯರು
ಚಳಿಪರು ಸುವ್ವಿಯೆಂದಲ್ಲಿ ॥೪೩॥

ನಲ್ಲನೆ ನ[೨೯][ಲ್ನ][೨೯]ಗೆಮೊಗದ ಚೆನ್ನಿಗ ಸುವ್ವಿ
ಬಲ್ಲಿದ ಬಿರುದಾಣ್ಮ ಸುವ್ವಿ
ಬಿಲ್ಲೆರೆಯನೆ ಸುವ್ವಿಯೆಂದು ಪುಳಿಂದಿಯ
ರಲ್ಲಿ ಪಾಡುವರು ಕಾದಲರ ॥೪೪॥

ಇಂತು ಮೆರೆವ ಕಾನನವನು ಭಿಲ್ಲರ
ತಿಂತಿಣಿಯನು ಕೂಡಿಕೊಂಡು
ತಾಂ ತವಕದೊಳೊಳಪೊಕ್ಕು ತೋಟೇಂದ್ರನು
ಸಂತಸದಿಂ ಬರುತಿರ್ದ ॥೪೫॥

ಬರೆವರೆ ಮುಂದೆ ಕಂಗೆಸೆದುದು ಕೊಳಲೂದಿ
ಮರಿಪಿ ಕರೆವ ತುರುವಳರ
ಸ್ವರದೀಲುಗೊಂಡ್ಯೆತಹ ತುರುವಿಂಡಿನ
ನೆರವಿಗಳಿಂ ತುರುವಳ್ಳಿ ॥೪೬॥

೨೫–೨೫ ಳೊಪ್ಪೊರ್ವ (ತ,ಕ). ೨೬–೨೬ ಜಿ (ತ,ಕ). ೨೭–೨೭ ಳ್ವಿಳದೆ (ತ,ಕ). ೨೮–೨೮ ಂಥಗ್ಗೆ (ತ,ಕ). ೨೯–೨೯ ಲ್ಲ (ತ,ಕ).

ಕೊ[೩೦][ಳ][೩೦]ಗಿನಿಂದಿಳೆಯನಗಿ[೩೧][ದು][೩೧]ಕೋಡಮೊನೆಯಿಂದೆ
ತಳ[೩೨][ಮೇಲು][೩೨]ಮಾಡಿ ಹುತ್ತಗಳ
ಮಲೆತು ರೆಂಕೆಯ[೩೩][ನೀಡುತಿ][೩೩]ದಿರಾದ ಗೂಳಿಗ
ಳೊಳು ಹೋರುತಿಹವು ಗೂಳಿಗಳು ॥೪೭॥

ನ[೩೪]ಸೆ[೩೪] ವೆಚ್ಚಿದ ಬೆದೆಯಾವಿನ ಮಡಿಲವ
ನಿಸಿ ಮುಖರದೊಳು ಪಲ್ಗಿರಿದು
ಮುಸುಡೆತ್ತಿನಿಂದು ನಿಲ್ಲದೆ [೩೫][ಪೇಚಕದೊಳೆ][೩೫]
ಳಸಿ[೩೬][ಹ][೩೬] ಹೋರಿಗಳೆಸೆದಿಹವು ॥೪೮॥

ಕರುವ ಕಾಣದೆ ಹೂಂಕೆಂದೊತ್ತಿಯರಚುತೆ
ಮರು[೩೭][ಕ][೩೭]ದಿಂ ಮುರಿದು ನೋಡುತ್ತೆ
ತೊರೆದ ಮೊಲೆಯ ಮಿಗೆ ಬಿಗಿದ ಪೆರ್ಗೆಚ್ಚಲ
ತುರುವಿಂಡು ತುರುಗಿಹುದಲ್ಲಿ ॥೪೯॥

ಕಂ[೩೮][ದ][೩೮]ಲ ಹೊನ್ನೆ ಬಾ ಕಾಮಧೇನುವೆ ಬಾ
ರೆಂದು ಕರೆದು ಗೋಪಿಯರು
ಕಂದಲುವಿಡಿದು ಕರುವನುಣಬಿಟ್ಟೆಳ
ಗಂದಿಯಾವುಗಳ ಕರೆವರು ॥೫೦॥

ಅಡಿಯನಿಳೆಯೊ[೩೯][ಳೂರಿ][೩೯]ಮಡದೊಳು ಕಟಿಯಾಂತು
ತೊಡೆಯೊಳು ಕಂದಲನಿರುಕಿ
ಬಿಡ[೪೦][ದಿ][೪೦]ಕೈಯಿಂದೆ ಕರೆವರು ತನು ಬೆಮ
ರಿಡೆ ಗೋಪಿಯರಾಕಳನು ॥೫೧॥

ಬಡನಡು ಬಳುಕೆ ಹೊಂಗೊಡ ಮೊಲೆಯಲುಗೆ ಸೋ
ಲ್ಮುಡಿ ಜಡಿಯಲು ನಳಿತೋಳು
ಯೆಡೆಯಾಡೆ ಕಂಕಣವುಲಿಯೆ ಗೋಪಿಯರಲ್ಲಿ
ಕಡೆವರು ಮೊಸರ ಬಿಂಕದೊಳು ॥೫೨॥

೩೦–೩೦ ಡ (ತ,ಕ). ೩೧–೩೧ ದ (ತ,ಕ). ೩೨–೩೨ ಮೆಳು (ತ,ಕ). ೩೩–೩೩ ನಿಡುಕಿ (ಕ), ನಿಡುತಿ (ತ). ೩೪–೩೪ ಸಿ (ತ). ೩೫–೩೫ ಪಂಚಕದೊಳ(ತ,ಕ), ೩೬–೩೬ ವ (ತ,ಕ), ೩೭–೩೭ X (ತ,ಕ). ೩೮–೩೮ ದಾ (ತ,ಕ). ೩೯–೩೯ ಳುರೆ (ತ,ಕ). ೪೦–೪೦ ಯಿ (ತ,ಕ).

ಆ ತುರುವಳ್ಳಿಯ ಮುಂಗೆಲದಲ್ಲಿ[೪೧][ಯ][೪೧]
ಚೂತವೃಕ್ಷದ ನೆರಲೊಳಗೆ
ತಾ ತುರಗವನಿಳಿದದಕೆ ಕಾಪಿಟ್ಟು ಕಿ
ರಾತರೆಲ್ಲರ ಕೂಡಿಕೊಂಡು ॥೫೩॥

ತೊಟ್ಟ ಚಲ್ಲಣದ ಮೇಲುಟ್ಟ ಪಟ್ಟಿಯ ದಟ್ಟಿ
ಕಟ್ಟಿದಂಕುಡಿದೆಶೆ ಮೆರೆಯೆ(?)
ಮೆಟ್ಟಿದೆಕ್ಕ[೪೨]ಡ[೪೨]ಪಂದಿ ಪೋಟೀಟಿವಿಡಿದಡಿ
ಯಿಟ್ಟನು ಬೇಂಟೆಗಾ ಕುವರ ॥೫೪॥

ಸಡಗರದಿಂದಲೊಗ್ಗಾಗುತ ಬೇಡ[೪೩][ರ][೪೩]
ವಡೆ ಕುವರನ ನಾಲ್ದೆಸೆಯ
ಬಿಡದೆ ಬೇಂಟೆಗೆ ಸನ್ನೆಗೈದು ನಡೆದರು ನ
ಟ್ಟಡವಿಯೊಳಾ ಲುಬ್ಧಕರು ॥೫೫॥

ಎಕ್ಕಲಗೂರಿದೆಡೆಯ ಸೈರಿಭ ಮಗ್ಗು
ಲಿಕ್ಕಿದ ಕದಡುವೆಂಚೆಯನು
ಸೊಕ್ಕಾನೆ ಕಲಕಿದ ಕೊಳನ ಕಿರಾತರು
ಹೊಕ್ಕು ಹೆಜ್ಜೆಗಳನೆತ್ತಿದರು ॥೫೬॥

ಮೊಲ ಮಲಗಿದ ತಾಣವಿದೆಯೆಂಬ ಹುಲ್ಲೆಯ
ಹುಲಿ ಮುರಿದೆಡೆಯಿದೆಯೆಂಬ
ಜಲವೀಂಟಿ ಮರಳಿದ ಪೆಜ್ಜೆಗಳಿವೆಯೆಂ
ಬುಲಿಹು ಬಿಲ್ಲರೊಳು ಪೊಣ್ಮಿದುದು ॥೫೭॥

ನಡೆ ಹೆಜ್ಜೆವಿಡಿ ಸರು[೪೪]ವಂ[೪೪] ಕಟ್ಟು ಬಳಸಿಯಾ
ರ್ಭಡಿಸಿ ಹೊಡೆದು ಸುನಿಗಳನು
ಬಿಡು ಬೆಂಬಟ್ಟಡ್ಡ ಬಂದಿರಿಯೆಂದೆಂಬ
ನುಡಿ ಗಡಣಿಸಿತು ಬಿಲ್ಲರೊಳು ॥೫೮॥

೪೧–೪೧ ಮರಗಳ (ತ,ಕ). ೪೨–೪೨ ಡ (ತ). ೪೩–೪೩ ರು (ತ,ಕ). ೪೪–೪೪ ಹಂ (ಕ).

ಹುಲಿಯ ಹೊಕ್ಕಿರಿ ಮರಿಗಳ ತಡೆಗಡಿ ಹಾಸ
ಕಳೆದು ಕುಕ್ಕರನನೆಕ್ಕಲಗೆ
ತೊಲಗದೆ ಬಿಡು ಸರಲಂ ತುಡು ಹುಲ್ಲೆಗೆಂ
ಬುಲಿ ಪುಬ್ಬರಿಸೆ ತಾವೈದಿದರು ॥೫೯॥

ಹಾಸ ಕಳೆದು ಸುನಿಯಂ ಬಿಡೆ ಪೊಡವಿಯ
ಮೂಸೆಡಬಲಕಡಿಯಿಡುತೆ
ಆ ಸೊಣಕನು ಬೆದಕುತೆ ಮೊಲವನು ಕಂಡು
ರೋಷದಿಂ ಬಿಡದಟ್ಟಿತದನು ॥೬೦॥

ಅಟ್ಟುವ ಸುನಿಗೆ ಸಿಕ್ಕದೆ ಮುರಿವುತ ಮುಂಚೆ
ನಿಟ್ಟೋಟದಿಂದೋಡುತಿರಲು
ಕಟ್ಟುಬ್ಬಟೆವೆತ್ತ ಬಿಯದರು ಬಡಿಕೋಲೊ
ಳಿಟ್ಟು ಕೆಡಪಿದರಾ ಮೊಲನ ॥೬೧॥

ಬಲೆ ಬೆಳ್ಳಾರ ದೀಹದ ಹಕ್ಕಿಯಂಟಿನ
ಸೆಳೆಯುರುಲಿಂದೆ ಲುಬ್ಧಕರು
ಹಲವು ಹಕ್ಕಿಗಳ ಹಿಡಿದುಕೊಂಡು ಕಾವಡಿ
ಗಳೊಳು ಕಟ್ಟಿದರಿಡಿಕಿರಿದು ॥೬೨॥

ಕಳೆದು ಟೊಪ್ಪಿಗೆಯ ಬಿಡದ ಮುನ್ನ ಡೇಗೆಯ
ಗ್ಗಳಿಕೆಯಿಂದಾಗಸಕಡರಿ
ಬಳಸಿ ಭೋರೆಂಬ ರಭಸದಿಂದೆ ಪಕ್ಕಿಯ
ಮಳೆಗರೆವುತ್ತಗಲದೊಳು ॥೬೩॥

ಹರಿಣನ ಕಂಡು ದೂರದೊಳೊರ್ವ ಶಬರನು
ಶರವ ತೊಟ್ಟೆಸೆ[೪೫][ದಾಗ][೪೫]ಲೊಡನೆ
ಸರಳಿಸುತದು ತತ್ತರಿಸಿ ಬಿದ್ದುದ ನಟ್ಟ
ಸರಲಿಮೃಗಂಡಿಯಿರಲು ॥೬೪॥

೪೫-೪೫ ಕಾದ (ತ,ಕ).

ಹುಲ್ಲೆಗಂಬನು ತೊಡುತಿರೆ ಕಾಣುತೆ ಪೆ
ಣ್ಪುಲ್ಲೆಯ ಸವನಿಸಲೊಡನೆ
ನಿಲ್ಲದೆ ಹುಲ್ಲೆಯಳಿಯೆ ಕಂಡು ಪೊಗಳಿದ
೪೬[ಭಿ]೪೬ಲ್ಲನಂಗಜನೆಸುಗೆಯನು ||೬೫||

ತಂಡತಂಡದಿ ಹಸಲೆಯೊಳು ಮೇದೆರಲೆಯ
ಹಿಂಡಿರಲೊರ್ವ ಕಿರಾತ
ಕಂಡು ಬಂದಲ್ಲಿ ತಂದಿಟ್ಟು ತೋ೪೭[ರೆ]೪೭ಬ್ಬಿಟ್ಟ
ಬಂಡಿಯ ದೀಹದ ಪುಲಿಯ ||೬೬||

ಅದು೪೮[ಮಿಗ]೪೮ವಿಂಡ ಕಾಣುತೆ ಹೊಂಚಿ ನಿಮಿರುತೆ
ಹುದುಗಿ ನೆಲದೊಳು ಹಿಂಗಾಲ
ಮುದುಡಿ ಮುಂಗಾಲ ನುಗುಚಿ ನಟ್ಟದಿಟ್ಟಿಯಿಂ
ದೆಡೆಯೊಳಿರ್ದಂತೆ ತೆವಳುತೆ ||೬೭||

ನಿಬ್ಬರದಿಂದೆರಗುತೆ ಬರಸಿಡಿಲವೊ
ಲಾರ್ಭಟಿಸುತ್ತೆರಲೆಗಳ
ತಬ್ಬಿಯಡಸಿ ನೆತ್ತರ ಹೀರುತುಳಿದುವ
ನಾರ್ಭಟೆಯಿಂ ಕೆಡಪಿದುದು ||೬೮||

ಬೊಬ್ಬೆಗೊಡುತೆ ಲುಬ್ಧಕರು೪೯[ಪೂ]೪೯ಬೆಟ್ಟದ
ಹಬ್ಬುಗೆಗೊಂಡು ತಪ್ಪಲೊಳು
ಒಬ್ಬೊಬ್ಬ೫೦[ರೆ]೫೦ಹರಿಹರಿದು ಪೆರ್ಗವಿಯೊಳು
ಹೆಬ್ಬುಲಿಗಳ ಹೊಕ್ಕಿರಿದರು ||೬೯||

ನಿಶಿತೋನ್ನತದಶನೋಚ್ಚ೫೧[ದೃಗ]೫೧ಂಗಳಿಂ
ದೆಸೆವ ಕರಾಳವದನದ
ಅಸಮಸಾಹಸವುಳ್ಳ ಹುಲಿ ಹುಲಿರೂಪಿನ
ಹೊಸಮಿತ್ತುವೆನಲಿದ್ದುದಲ್ಲಿ ||೭೦||

೪೬–೪೬ ಬಿ (ತ,ಕ). ೪೭–೪೭ರ (ತ,ಕ). ೪೮–೪೮ ಮೀರ (ತ,ಕ). ೪೯–೪೯ ಪು (ತ,ಕ). ೫೦–೫೦ ನೆ (ತ,ಕ).೫೧–೫೧ ದನ (ತ,ಕ).

ಅಡಿಯೊಳು ಮುಸುಡು ಕಡಿವುತಡಿಯನು ನೆಕ್ಕು
ತೊ[೫೨][ಡಲ][೫೨]ನೇಗುಳಿಸಿ ಲುಬ್ಧಕರ
ನಿಡುಬೊಬ್ಬೆಯ ಭರವನು ಕೇಳಿ ಹುಲಿ ಘುಡು
ಘುಡಿಸಿ ಘೂರ್ಣಿಸಿ ಗರ್ಜಿಸಲು ॥೭೧॥

ಕಂಡಾಗಲೆ ಹಾಸ ಕಳೆದರು ಮುತ್ತಿನ
ಚೆಂಡು ಸಿಂಗಾಡಿ ಬಿಳಿಗನ
ಚಂಡ ಕರಾಳನೆಂದೆಂಬರೆಬಿರು[೫೩][ದಿ][೫೩]ನು
ದ್ದಂಡ ಶುನಿಗಳ ಲುಬ್ಧಕರು ॥೭೨॥

ಕವಿದು ಗಳ್ಳಿಡುತೆ ಮೇಲಿ[೫೪][ರ][೫೪]ಕಿ ಲಾಟಿಸಿ ತುಡು
ಕುವ ಬಿರುದಿನ ಸುನಿಗಳನು
ಅವಗವಿಸುತ್ತಡಸುತೆ ಪೊಯಿದು ಸೀಳುತ್ತೆ
ಜವ[೫೫][ನೂರಿಗ][೫೫]ವನ[೫೬][ಟ್ಟು][೫೬]ತೈದೆ ॥೭೩॥

ಕೊಂದುದೆ ಪುಲಿ [೫೭][ಬಿರು][೫೭]ದಿನ ಸುನಿಗಳ ತಾ
ನೆಂದಾಗಳೊಬ್ಬ ಪುಳಿಂದ
ಇಂದೀಗಳಿದಕೆನ್ನ ಹರಣವೇಚಿಸಿ ಕೊಲ್ವೆ
ನೆಂದವ ಸನ್ನದ್ಧನಾಗಿ ॥೭೪॥

ಒಳಪೊಗಲವನ ತಲೆಯವಿಡಿದೌಕೆ ಕಿ
ತ್ತಲಗು ಕೈಗತ್ತಿಯಿಂದದನು
ಚಲದೊಳಿರಿದು ಕೊಂದು ಶಬರ ತನ್ನಯ ತನು
ಗಳೆದನು ಕುಪಿತವೃತ್ತಿಯೊಳು ॥೭೫॥

ಹೊಕ್ಕಲ್ಲಿ ಹೊಕ್ಕು ಮೇಲಿಕ್ಕಿ ಹಿಡಿವ ಬಲು
ಕುಕ್ಕುರಂಗಳ ನೆರವಿಯನು
ಇಕ್ಕಡಿಮಾಡುವೆಕ್ಕಲಗಳನಿರಿದಿರಿ
ದಿಕ್ಕಿದರಲ್ಲಿ ಲುಬ್ಧಕರು ॥೭೬॥

೫೨–೫೨ ಡೆಯ (ತ,ಕ). ೫೩–೫೩ ದ (ತ,ಕ) ೫೪–೫೪ X(ತ,ಕ). ೫೫–೫೫ ವುರಕ(ತ,ಕ), ೫೬–೫೬ ಟ್ಟಂ (ತ,ಕ), ೫೭–೫೭ ಯರಿ (ತ,ಕ).

ಮಲೆ[೫೮][ತೊ][೫೮]ಂದು ಸೊಕ್ಕಿದೆಕ್ಕಲ ತೊಲಗದೆ[೫೯][ಹೆಂ][೫೯]
ಮೆಳೆಯ ಹೊ[೬೦][ಕ್ಕುದನಂದು ಕಂ][೬೦]ಡು
ಒಳಪೊಕ್ಕು ಕವಿದು ಸೆಳೆವ ಬಿರುದಿನ ಸುನಿ
ಗಳ ತುಂಡಿ[೬೧][ಸಿತತು][೬೧]ಳ ಮಸಗಿ ॥೭೭॥

ಬಿಡದೆ ಹೊಕ್ಕಿರಿವ ಕಿರಾತರ ತಂಡವ
ನೊಡನೆ ಕಿಗ್ಗಣ್ಣಿಕ್ಕಿ ನೋಡಿ
ಕಡುರೋಷದಿಂ ನಿಡುದಾ[೬೨][ಡೆ][೬೨]ಗುಟ್ಟುತೆ [೬೩]ಕ[೬೩]
ಕ್ಕಡವಂ[೬೪][ದಿ][೬೪] ಹೊಯಿದು ಹರಹಿತು ॥೭೮॥

ತೊಡೆಯ ತುಂಡಿಸಿ ಕಿರುದೊಡೆಯನಿಕ್ಕಡಿಗೈದು
ನಡುವ ಕತ್ತರಿಸಿ ತೋಳುಗಳ
ವಿಡಿಕಿಸಿಬ್ಬರಿಯೊಳು ಕರುಳನೊಗ್ಗಿಸಿ ಬೇಡ
ಪಡೆಯ ಕೊಂದಿಕ್ಕಿತಾ ಪಂದಿ ॥೭೯॥

ಉಡುಪತಿಬಿಂಬವನಡಿಸಿ[೬೫][ಮೊಗೆದು ತಿಂ][೬೫]ಬು
ತಡವಿಯ ನಡೆಗೊಂಡು ಬಿಡದೆ
ಘುಡುಘುಡಿಸುವ ರಾಹುವೆಂದೆನೆ ನಿಡುದಾಡೆ
ಗಡಿವುತಾ ಪಂದಿ ಘೂರ್ಣಿಪುದು ॥೮೦॥

ದುರುಳ ರಕ್ಕಸನ ಸಂಹರಿಸುವ ನೆವದಿಂದೆ
ಹರಿ ಮುನ್ನಾದ ಸೂಕರ[೬೬][ಗೆ][೬೬]
[೬೭]ಸರಿ[೬೭] ಮಿಗಿಲಾದೆಕ್ಕಲನಲ್ಲದದು ಮಿಕ್ಕ
ಕಿರಿ ಮಾತ್ರವೆ ಪೇಳ್ವೆನೇನ ॥೮೧॥

ಭೀಕರದಿಂದೆ ಭಿಲ್ಲರನೆಲ್ಲ ಕೊಲುತು
ದ್ರೇಕದಿಂದುರುವಣೆ ತೋರ್ಪ
ಸೂಕರನಿರವ ಕಾಣುತ್ತದ ಕೊಲ್ವೆನೆಂ
ದಾ ಕುಮಾರಕನಡಿಯಿಟ್ಟ ॥೮೨॥

೫೮–೫೮ ನೊಂ (ತ,ಕ). ೫೯–೫೯ ವೆಂ (ತ,ಕ). ೬೦–೬೦ ದನಂಡು ಗಂ (ತ,ಕ).೬೧–೬೧ ನಿತುಲ(ತ,ಕ). ೬೨–೬೨ ದೆ (ತ,ಕ). ೬೩–೬೩ ತ (ಕ), ೬೪–೬೪ ಡಿ (ತ,ಕ).೬೫–೬೫ ದೊಗೆದುರೆಂ (ತ,ಕ). ೬೬–೬೬ ವು (ತ,ಕ).೬೭–೬೭ ಪ (ಕ).

ಆದಿವರಾಹನ ೬೮ಕೊಲಲೆಂದು೬೮ ತಾರಕ
ಸೂದನನಡಿಯಿಡುವಂತೆ
ಆ ದುಷ್ಟಕಿ೬೯[ಟಿ]೬೯ಯ ವಧಿಪೆನೆಂದು ಕುವರ ವಿ
ನೋದದಿನೈತಂದನೊಲಿದು ॥೮೩॥

ಕುಕ್ಕುರಗಳನಿಕ್ಕಡಿಗೈದು ಬಿಯದರ
ನೊಕ್ಕಲಿಕ್ಕುತ್ತುರವಣಿಪ
ಸೊಕ್ಕಿದೆಕ್ಕಿಲನ ಲೆಕ್ಕಿ೭೦[ಸ]೭೦ದೆ ಕುವರನೊಳ
ಪೊಕ್ಕನು ಕಲಿಗಳ ದೇವ ॥೮೪॥

ಬರುತಿರೆ ದಾಡೆಗಡಿದು ಘೂರ್ಣಿಸುತು
ಬ್ಬರಿಪ ಸೂಕರನ ಮುಂಬದಿಗೆ
ಪಿರಿಯೀಟಿಯಿಂದಿಕ್ಕೈಗಳಿಂದಿರಿದೊತ್ತಿ
ಧರೆಗುರುಳಿಸಿದನಾ ಕುವರ ॥೮೫॥

ಈ ತೆರದಿಂದ ಬೇಂಟೆಯನಾಡಿಯತುಳ ಕಿ
ರಾತರೆಲ್ಲರ ಕೂಡಿಕೊಂಡು
ತಾ ತಿರುಗಿದ ನಿಜಪುರಿಗಭಿಮುಖನಾಗು
ತಾ ತುರಗವನೇರಿ ಕುವರ ॥೮೬॥

ಮೊಲನ ಕಾವಡಿ ಮ೭೧[ರಿ]೭೧ಗಳ ಹುಲ್ಲೆಗಳನೆ
ಕ್ಕಲಗಳ ಹುಲಿಯ ಹೆಬ್ಬುಲಿಯ
ಬಲಿದು ಚಿಕ್ಕಿಡುವಲೆಗಳ ಹೊ೭೨[ತ್ತು]೭೨ ಶಬರ ಸಂ
ಕುಲದೊಳು ಬಂದನಾ ಕುವರ ॥೮೭॥

ಪೊಳಲ ಬಂದುರೆ ಸಡಗರದಿಂದೆ ಪೊಕ್ಕುಯೆ
ಕ್ಕಳರಹ ಶಬರನಾಯಕರ
ಕಳುಹಿ ಕುಮಾರ ತೋಟೇಂದ್ರ ತನ್ನಯ ರಾಜ
ನಿಳಯದೊಳಿರ್ದ ಸಂತಸದಿ ॥೮೮॥

೬೮-೬೮ ಕುಲವೆಂ (ಕ). ೬೯-೬೯ ರಿ (ತ,ಕ), ೭೦-೭೦ ಪ (ತ,ಕ). ೭೧-೭೧ ರೆ (ತ,ಕ). ೭೨-೭೨ ತ್ತು (ತ,ಕ).

ನಳಿತೋಳು ಶಾಖೆ ಸೆಳ್ಳುಗುರಲದೊರ್ಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದಮಗೀಗೆ ರಾಗವನು ॥೮೯॥

[೭೩]ಷಷ್ಠಮ ಸಂಧಿ ಸಂಪೂರ್ಣಂ[೭೩]

❖❖

೭೩–೭೩ ಅಂತು ಸಂಧಿ ೬ ಕ್ಕಂ ಪದನು ೪೫೧ಕ್ಕಂ ಮಂಗಳಮಹಾಶ್ರೀ ಶ್ರೀ ಪಂಚವಣ್ಣಿಗೆ ಚನ್ನಮಲ್ಲಿಕಾರ್ಜುನದೇವರೇ ಗತಿ (ತ,ಕ).

ಸಂಧಿ : ೭

ಸದ್ಗುರುರಾಯ ಪರಮಾನಂದದಿ ಕುವರಗಿಂತೆಂದ

ಶ್ರೀ ಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ಆ ಮರುದಿವಸ ಕುಮಾರ ತೋಟೇಂದ್ರನು
ಸೋಮಧರನ ನೆರೆ ಭಜಿಸಿ
ಪ್ರೇಮದಿ ಗುರುಪದದರ್ಶನಕೆಂದು ಮ
ನೋಮುದದಿಂದಡಿಯಿಟ್ಟ ॥೨॥

ಅಡಿಯಿಡುತ್ತೈದೆ ಶ್ರೀಗುರು[೧]ಪಾದ[೧]ವನು ಕಂ
ಡೊಡನೆ ಪಾದುಕೆಗಳ ಕಳೆದು
ನಡೆದೊಡನೆಯ್ತರ್ಪರೆಲ್ಲರ ಪೊರಚಾ
ವಡಿಯೊಳಿರಿಸುತೊಳಪೊಕ್ಕ ॥೩॥

ಮಣಿಮಂಟಪದ ಸುಖಾಸನದೊಳು ಶಿವ
ಗಣ ತಿಂತಿಣಿಯ ಮೇಳದೊಳು
ಗುಣಮಣಿಭೂಷಣ ಗುರುಸಿದ್ಧಮಲ್ಲೇಶ
ನಣಿಯರಮಾಗಿ ರಾಜಿಸುತೆ ॥೪॥

೧–೧ X (ಕ).

ವೇದವೇದಾಂತ ಪರಮಶಿವಸಿದ್ಧಾಂ
ತಾದಿ ರಹಸ್ಯಾನುಮತದೆ
ಸಾದರರದಿಂ ಬಸವಾದಿ ಶರಣ[೨][ರುದಿ][೨]
ತೋದಿತ ಸೂಕ್ತಿಮಾರ್ಗದೊಳು ॥೫॥

ಪರಮಲಿಂಗಾಂಗಸಂಗಾನುಭಾವವ ಶಿವ
ಶರಣರೊಳನುಭಾವಿಸುತೆ
ಗುರುಸಿದ್ಧ ಮಲ್ಲಿಕಾರ್ಜುನನೊಪ್ಪಿ ತಾನಿರು
ತಿರೆ ಬಂದು ಕಂಡನಾ ಕುವರ ॥೬॥

ಕಂಡು ಸಾಷ್ಟಾಂಗಪ್ರಣುತನಾಗಿ ಬಳಿಕೆದ್ದು
ಮಂಡೆಗೆ ಕೈಗಳನಿಳುಹಿ
ಕೋಂಡಾಡುತೆ ಭಯಭಕ್ತಿಯಿಂದ[೩][ಲಿ][೩] ಕರ
ಮಂಡನಗೈದನಂಘ್ರಿಯೊಳು ॥೭॥

ಶಿರವಿಡಿದೆತ್ತುತೇನೆಲೆ ಕುವರ ನಿನ್ನ
ಪರಿವರ್ತನೆ ವಿಕರಿಸಿತು
ದುರುಳರೊಡನೆ ಕೂಡಿ ಬೇಂಟೆಗೆ ಮನವಿಟ್ಟು
ಚರಿಪುದು ಸುಜನರ ಮತವೇ ॥೮॥

ರಾಜಕುಲಶೇಖರನಡಿಗಳನೊಲ್ದು
ಪೂಜಿಪರನುಮತದಲ್ಲಿ
ಜೂಜು ಬೇಂಟೆಗಳಾದಿಯಾದ ದುರ್ವ್ಯಸನ ಸ
ಮೂಹಮುಚಿತವೆ ಭಾವಿಸಲು ॥೯॥

ಕ್ಷಿತಿಯೊಳು ಪಾಂಡುಭೂಪಾಲಕ ಬೇಂಟೆಯಾ
ಡುತ ಮೃಗರೂಪಿನೊಳಿಪ್ಪ
ಯತಿಸತಿಪತಿಗಳ ಹ[೪][ತಿ][೪]ಸಿದ ಕತದಿ ದು
ರ್ಗತಿಗಿಳಿದನು ಧರೆಯರಿಯೆ ॥೧೦॥

೨-೨ ರದ (ತ,ಕ). ೩-೩ ಳಿ (ತ,ಕ)೪-೪ ರಿ (ತ,ಕ)

ದಶರಥನೆಂಬ ಧರಾಧಿಪ ಬೇಂಟೆಯ
ಬೆಸನದೆ ಚೌಡಲಾತ್ಮಜನ
ವಿಸಸನಗೈದು ತನ್ನಣುಗರ ಮೊಗವ ನಿ
ಟ್ಟಿಸದೆ ಸತ್ತನು ಧರೆಯರಿಯೆ ॥೧೧॥

ಮುನ್ನ ಪರೀಕ್ಷಿತನಹಿಭಯದಿಂ ಕೊಲ್ವ
ಜನ್ನಮನೆಸಗಿ ಸರ್ಪಗಳ
ಅನ್ಯಾಯದಿಂ ಕೊಂದ ಕತದಿಂದೆ ಮೆಕ್ಕೆಯ
ಹಣ್ಣ ಮುಟ್ಟುತೆ ಗತವಾದ ॥೧೨॥

ವಿನುತ ಮಾಂಡವ್ಯನೆಂದೆಂಬ ತಪಸಿ ತನ್ನ
ತನುವನಂಡಲೆವುತಲಿರ್ಪ
ತೊನಸೆಯ ಮುಳ್ಳಿನ ಸೂಲದೊಳಿ[೫][ಡೆ][೫]ಮರು
ದಿನವಾತಗಾಗದೆ ಶೂಲ ॥೧೩॥

ಭೃಗುಮುನಿವರಸತಿಯ ಕೊಂದ ದೋಷದೊ
ಳಗಧರನಾ ಮುನಿ[ಗಿ]ತ್ತ
ವಿಗಡಶಾಪವ ಪೊ[೬][ತ್ತು ಪತ್ತ][೬]ವತಾರದೊ
ಳೊಗೆಯನೆ ಮೂಜಗವರಿಯೆ ॥೧೪॥

ವಾಲಿಯ ಮೋಸದಿ ಕೊಂದು[೭][ದ][೭]ರಿಂದಂ
ಗಾಲನು ಹುಲಿಬೇಡನಂಬು
ಕೀಲಿಸಿ ಕೃಷ್ಣನ ಹರಣವ ಕೊಂಡನು
ಹೇಳಲಿನ್ನೇನುಳಿದವರ ॥೧೫॥

ಕೊಂದಡೆ ಕೊಲೆ ಬಿಡದೆಂಬುದರಿಯದಾ
ನಂದದಿ ಯಾಗಕೆ ಹೋತು
ತಂದ ದಕ್ಷನ ತಲೆ ಹೋಗಿಯಂದಾತಗೆ
ಬಂದೊಂದಿತು ಕುರಿದಲೆಯು ॥೧೬॥

೫–೫ ದೆ (ತ,ಕ).೬–೬ ತ್ತ (ತ,ಕ). ೭–೭ ವ (ತ,ಕ).

ನೋವು ಸಮಾನವಖಿಲಜೀವ⁸[ಜಾಲ]⁸ಕೆ
ಸಾವು ಸಮಾನವೆಂಬುದನು
ಭಾವಿಸಿಯವನು ತನ್ನಂತೆ ಕಾಣದೆ ಕಂಡ
⁹ತಾ⁹ವರದಿಂ ಕೊಲಬಹುದೆ ॥೧೭॥

ಕರವೆತ್ತಿ ಪೇಳವಾತು ಸಾರಿತಹಿಂಸಾ
ಪರಮಧರ್ಮವೆನುತ್ತೆ
ಪರಮಧರ್ಮವೆ ಶಿವಧರ್ಮ ತದ್ಧರ್ಮಮ¹⁰[ದಂ]¹⁰
ಟಿರಬೇಕು ಶಿವಭಕ್ತರಲ್ಲಿ ॥೧೮॥

ಎಲ್ಲ ಪುರಾತನ ವಚನ ಸಾರುತ್ತಿದೆ
ಕೊಲ್ಲದಿರ್ಪುದೆ ಧರ್ಮವೆಂದು
ಕುಲ್ಲತನದಿ ಜೀವಕ್ಕೆ ಮುನಿವುದು ಭಕ್ತ
ರಲ್ಲದವರ ದುರ್ಮಾರ್ಗ ॥೧೯॥

ಎಂದಿವು ಮೊದಲಾದತಿಹಿತವಚನಗ
ಳಿಂದೆ ಸದ್ಗುರು ಕುವರಂಗೆ
ಸಂದೆಗಮಿಲ್ಲದೆ ಹಿಂಸಾನಿರಸನ
ಮಂ ದಾಯದಿಂ ನಿರ¹¹[ವಿ]¹¹ಸಲು ॥೨೦॥

ದೇವ ಬಿನ್ನಪವ ಲಾಲಿಸುತೆ ನಿಮ್ಮಯ ಕರು
ಣಾವಲೋಕನದಿಂದೆ ನೋಡಿ
ನೀವೊಲಿದೊಲಿದು ಬೋಧಿಸಿ ಕೈವಿಡಿದೆನ್ನ
ಕಾವುದೆನುತ್ತಿಂತೆಂದ ॥೨೧॥

ಬಿಡಬೇಕಾದುದಾವುದನದ ಬಿಡಿಸುತೆ
ಪಿಡಿಯಬೇಕಾದುದ ಪಿಡಿಸಿ
ನಡೆಯಬೇಕಾದ ಧರ್ಮದೊಳೆನ್ನನು
ನಡಿಸಿ ಪಾಲಿಪುದು ನೀವೆನಲು ॥೨೨॥

೮–೮ ಜಂತ (ಕ), ಜಾತ (ತ), ೯–೯ ಕಾ (ತ). ೧೦–೧೦ ದಾಂ (ತ,ಕ). ೧೧–೧೧ ಪಿ (ತ,ಕ).

ಬಿಡುವುದದರ್ಮವಂತದ ಬಿಡು ಧರ್ಮವೆ
ಪಿಡಿಯಬೇಕಾದುದಂತದನೆ
ಪಿಡಿ ಶಿವಭಕ್ತಿಮಾರ್ಗದೊಳಡಿಯಿಡು ನೀನು
ತಡೆಯದಂತದೆ ಸನ್ಮಾರ್ಗ ॥೨೩॥

ಎನಲಿದಧರ್ಮವಿಂತಿದು ಧರ್ಮವೆಂಬುದಾ
ಘನತರ ಶಿವಭಕ್ತಿಮಾರ್ಗ
ವೆನುತಂತವರ ಭೇದಂಗಳೆಲ್ಲವನೊಲಿ
ದೆನಗೆ ಪೇಳಯ್ಯ ದಮ್ಮಯ್ಯ ॥೨೪॥

ಎಂದಡಿಗೆರಗಿ ಬಿನ್ನೈಸುತೆ ಭಯಭಕ್ತಿ
ಯಿಂದೆ ನುತಿಸಿ ಕೇಳಲೊಡನೆ
ಕಂದ ಕೇಳೆಂದು ಸದ್ಗುರುರಾಯ ಪರಮಾ
ನಂದದಿಂ ಕುವರಗಿಂತೆಂದ ॥೨೫॥

ಹುಸಿಕೊಲೆಗಳವತಿಕಾಂಕ್ಷೆ ಪಾದರಕೆ ಮೋ
ಹಿಸುವಾಟವೆಂಬಿವೀಯೈದು
ರಸೆಯೊಳು ಮಹಾಪಾತಕವಿಂತಿವನು ವ
ರ್ಜಿಸುವುದುತ್ತಮರನುಮತವು ॥೨೬॥

ಹುಸಿಯನಾಡುವನವನೇ ಶುದ್ಧಹೊಲೆಯನು
ಹುಸಿಯೆಂಬುದದು ತಾನೆ ಹೊಲೆಯು
ರಸೆಯೊಳು ಹುಸಿಯನುಳಿದು ಹೊಲೆಯಿಲ್ಲೆಂ
ದುಸುರುತಿರ್ಪವು ನಿಗಮಗಳು ॥೨೭॥

ಹರನ ಮುಡಿಯನಂಬುಜಭವ ಕಾಣದೆ
ಹರಿಯೊಳು ತಾ ಕಂಡೆನೆಂದು
ಧರೆಯೊಳಪೂಜ್ಯನಾದನು ಹುಸಿಮಾತಿನಿಂ
ದುರುಳುಗೆಡದ ನರರುಂಟೆ ॥೨೮॥

ಹೊಲೆಯರ ಬಾವಿಯೊಳೆಲುವು ನೆಟ್ಟಿರಲದ
ಹೊಲೆಯೆಂದು ನುಡಿವುದು ಲೋಕ

ಹಲವೆಲುವಿಹ[೧೨][ಬಾಯಿ][೧೨]ಯೊಳು*[ವೊ]*ಲವರವಿರೆ
ಹೊಲೆಯಲ್ಲವೆ ಭಾವಿಸಲು ॥೨೯॥

ನ್ಯಾಯದೊಳಾರ್ಜಿಸಬೇಕೊಡವೆಯನ
ನ್ಯಾಯದ್ಧೊಳಾರ್ಜಿಪುದೆಲ್ಲ
ಮಾಯಕವಾದ ಕಳವುವಾ ಕಳವಿಂ
ದಾಯಾಸವೆಡೆಗೊಂಡಿಹುದು ॥೩೦॥

ದಕ್ಷನ ಜನ್ನದೊ$[ಳನಲೇ]$ಂದು ರವಿ ಕಮ
ಲಾಕ್ಷ ಸುರೇಂದ್ರಾಮರರು
ತ್ರ್ಯಕ್ಷನ ವಂಚಿಸಿ ಕದ್ದುಣಬಂದಲ್ಲಿ
ಶಿಕ್ಷೆವಡೆದರೊಗ್ಗಾಗಿ ॥೩೧॥

ಅತಿಕಾಂಕ್ಷೆಯ ರತನಾಗಿ ಕೌರವ ಮಾ
ರುತಿಯ ಗದೆಯ ಪೆಟ್ಟಿನಿಂದೆ
ಹತವಾಗನೆ ನಾಗಾರ್ಜುನ ಚಕ್ರಕಾ
ಹುತಿಯ ಮಾಡನೆ ತನ್ನ ತಲೆಯ ॥೩೨॥

ಪರವಧುವಿನ ಸಂಗಕೆಳಸಿ ಕೀಚಕ ದಶ
ಶಿರರಳಿದರು ಭಿನ್ನವಡೆದು
ಸುರಪತಿ ಮೆಯ್ಗೆಟ್ಟನೆನೆ ನರರೊಳು ಪಾ
ದರದಿಂದೆ ಕೆಡದವರುಂಟೆ ॥೩೩॥

ಪುರುಷ ಕಂಡೊಡೆ ಹರಣದ ಕೇಡು ಭೂಮೀ
ಶ್ವರನರಿದೊಡೆ ದಂಡವಹುದು
ಪರಿಕಿಸೆ ಜನವೊಳಕೊಳ್ಳದು ರೌರವ
ನರಕ ತಪ್ಪದು ಜಾರರಿಗೆ ॥೩೪॥

ಉಗು[೧೩][ಳ್ದ][೧೩] ತಂಬುಲವುಂಡುಳಿದೆಂಜಲ ಪೊದೆ
ದೊಗಡಿಸಿ ಬಿಟ್ಟ ಮೈಲಿಗೆಯ

೧೨-೧೨ ಭಾವಿ (ತ,ಕ) *-* ವ (ತ,ಕ).$-$ ಳೆನಲೆ (ತ,ಕ). ೧೩-೧೩ ಳ(ತ,ಕ),

ಬಗೆದು ತಿಂದುಂಡು ಪೊದೆ[೧೪]ದ[೧೪]ವ ಕಡು ಹೇಸಿಗೆ
ಮಿಗಲನ್ಯವಧುವನಾಳುವನು ॥೩೫॥

ಗರುವಿಕೆ ಸರಿವುದು ಬಲ್ವುಡುಗುವುದೋ
ಸರಪವು ಪುಣ್ಯಕೀರ್ತಿಗಳು
ಸಿರಿ ತೊಲಗುವುದು ಕುಂದುವುದಾಯು ವಿಷಯಾ
ತುರನಾಗಿ ವರ್ತಿಸುವವಗೆ ॥೩೬॥

ಕೊಲೆ ಹೊಲೆ ಹುಸಿ ತನ್ನ ದೆಸೆ ಕೆಡಿಸುವ ಕೇಡ
ಕಳವು ತನ್ನಯ ಹಗೆಯಾಸೆ
ಬಳಲಿಪ ದುಗುಡ ಪಾದರ ನರಕದ ಕುಳಿ
ಗಿಳಿವ ಹೆದ್ದಾರಿ ಕೇಳ್ಕುವರ ॥೩೭॥

ಕ್ರೂರನಾದವನುಪಕಾರವ ಮರೆದಪ
ಕಾರವ ಬಿಡದೆಸಗುವನು
ಆರ್ಯೆ[೧೫]ಯೆ[೧೫] ಹಲವು ದೈವವನರ್ಚಿಪನವ
ಜಾರೆಯ ಗರ್ಭಸಂಭವನು ॥೩೮॥

ಹುಸಿವವನೇ ಹೊಲೆಯನು ಕೊಲ್ವಾತನೆ
ಹಸಿಯ ಮಾದಿಗನೆನಿಸುವನು
ಹಿಸುಣನಾದವನತಿಗುಪ್ತ ಪಾಪಿಯೆ
ನಿಸುವನಾದ್ಯರ ಮತದಿಂದೆ ॥೩೯॥

ಆರವೆ ತುರುಗಾಣಗಳೊಳು ದೇವಾ
ಗಾರದ ಹೊರವಳಯದೊಳು
ದಾರಿಗಳೊ[೧೬][ಳ್ವಿ][೧೬]ಣ್ಮೂತ್ರವ ಬಿಡುವವ
ರೌರವನರಕಕಿಳಿವನು ॥೪೦॥

ಪಿತ ಮುಂತಾದವರಿತ್ತವನಿಯನಾ
ಹುತಿಗೊಂಬುವನಾವನವನೆ

೧೪-೧೪ ವ (ತ,ಕ). ೧೫-೧೫ ದು (ಕ). ೧೬-೧೬ ವ (ತ,ಕ).

ರತಿಪಕೇಳಿಯನಗ್ರಜೆಯೊಳು ಮಾಡಿದಾ
ಪತಿತನೆಂದುದು ಶ್ರುತಿವಚನ ॥೪೧॥

ಲಿಂಗಮುದ್ರೆಯ ಮರಗಳ ತರಿದವ ಪು
ಣ್ಯಂಗಳ ಕೋಟಿಕೋಟಿಯನು
ಹಿಂಗಿಯಿಪ್ಪತ್ತೆಂಟು ಕೋಟಿ ಮಹಾನರ
ಕಂಗಳನನುಭವಿಸುವನು ॥೪೨॥

ಪಂತಿಯೊಳೇಕವಲ್ಲದ ಪಾಕ ಭೇದಂಗ
ಳಿಂ ತಿಂಬ ಕಡುಪಾತಕನು
ಮುಂತೆ ನಾಯಕನರಕವನನುಭವಿಸುವ
ನಂತಕದೂತರಾಜ್ಞೆಯೊಳು ॥೪೩॥

ಗುಣದೋಷವನಾರೈಯದೆ ಲಿಂಗವ
ಬಣಗುತನದಿ ಭವಿಗಳಿಗೆ
ಹಣವಿನಾಸೆಗೆ ಕಟ್ಟಿ ಗುರುವೆನಿಸುವನವ
ನುಣುತಿಹನಖಿಳ ನರಕವ ॥೪೪॥

ಗುರುಮಾರ್ಗಾಚಾರವ ಮೀರಿ ಮನಬಂದ
ಪರಿಯೊಳು ನಡೆವ ಪಾತಕನು
ತರಣಿಶಶಾಂಕರುಳ್ಳನ್ನೆವರಂ ಬಿಡ
ದುರಿವ ನರಕದೊಳಗಿಹನು ॥೪೫॥

ನಂಬದೆ ಪರಮಸದ್ಗುರುವಚನಾಮೃತ
ಮಂ ಬಿಟ್ಟನ್ಯತಂತ್ರಗಳ
ಬೆಂಬಳಿಗೊಂಡು ದುರ್ಮಾರ್ಗದೊಳಾಚರಿ
ಪಂ ಬೀಳುವ ನರಕದೊಳು ॥೪೬॥

ಮಾನ್ಯರಿಗವಮಾನವ ಮಾಳ್ಪುತೆ ಸಾ
ಮಾನ್ಯರ ಬಹುಮಾನದಿಂದೆ
ಮಾನ್ಯರೆನುತ ಭಜಿಸುವತಿಮರುಳಗೆ
ಹೂನ್ಯ ಜಸಂಗೆಡದಿಹುದೆ ॥೪೭॥

ಬಿಡದೆ ಕೈವಿಡಿದೋದ ಕಲಿಸಿದ ಗುರುವಿನೊ
ಳೊಡನಹಂಕರಿಸಿ ಕೈತವದೆ
ನಡೆದ ಪಾಪಿಗೆ ಯಮದೂತರ ದಾಳಿ ಬೊ
ಬ್ಬಿಡುತೆ ಚೆಚ್ಚರಮೊದವಿಹುದು ॥೪೮॥

ಸುರೆಗುಡಿವಗೆ ಮಾಂಸವ ತಿಂಬವಗೆ ಪಾ
ದರಿಗಗೆ ನುಡಿದು ತಪ್ಪುವಗೆ
ಗುರುವಿನಿದಿರಿನೊಳುನ್ನತಾಸನದೊಳು ಕು
ಕ್ಕರಿಸುವಗಿಹಪರವಿಲ್ಲ ॥೪೯॥

ಮೋಸಗಾರಗೆ ಲೇಸ ಮಾಡಿ ಮರುಗುವಗೆ
ಭಾಷೆಹೀನಗೆ ಬಣಗನಿಗೆ
ಆಶೆಯಿಂ ಪರರನೊಗ್ಗಿಸುವ ಬರಿಯ ಪೊರ
ವೇಷಧಾರಿಗೆ ಗತಿಯಿಲ್ಲ ॥೫೦॥

ಮಚ್ಚಿಸುತಲಿ ಮರುಳರ ಚಿತ್ತವನವ
ರಿಚ್ಛೆಗೆ ಬಚ್ಚಿವಾಕುಗಳ
ವೆಚ್ಚಿಸಿ ತನ್ನ ಒಡಲ ಪೊರೆವುತ್ತಿಹ
ತುಚ್ಛರಿಗಿಹಪರವಿಲ್ಲ ॥೫೧॥

ಹಿಸುಣಗೆ ಹಿಂಸಾಪರಗೆ ಪರರ ಪೀ
ಡಿಸುತೆ ತನ್ನೊಡಲ ಪೊರೆವಗೆ
ಹುಸಿಕಗೆ ಬೇಟೆಕಾರಗೆ ಧೂರ್ತಗೆ ದು
ರ್ವ್ಯಸನಿಗೆ ಪರಲೋಕವಿಲ್ಲ ॥೫೨॥

ಒಲವರಕಾರಗೆ ಲಂಚಗುಳಿಗೆ ನೆಲ
ಕಲ[೧೭][ನಿ][೧೭]ಗೆ ಗುರುತಲ್ಪಕಗೆ
ಕುಲಗೇಡಿಗೆ ಕೂಟಸಾಕ್ಷಿಗೆ ಕಪಟಿಗೆ
ಚಲಚಿತ್ತಗಿಹಪರವಿಲ್ಲ ॥೫೩॥

೧೭-೧೭ ವಿ (ತ,ಕ).

ಪರರ ವರ್ಮವನೆತ್ತಿ ನುಡಿವ ಪಾಪಿಗೆ ನಿ
ಷ್ಠುರಗೆ ಲೋಭಿಗೆ ನಿಂದಕಗೆ
ಧುರದೊಳಗೊಡೆಯನ ಬಗೆಯದೆ ಬಿಟ್ಟೋಳ
ಸರಿವವಗಿಹಪರವಿಲ್ಲ ॥೫೪॥

ಹೆರರ ಸಿರಿಯ ಕಂಡು ಸೈರಿಸಲಾರದೆ
ಕರುಬತನದಿ ಕುದಿವವಗೆ
ದುರುದುಂಬಿತನದಿಂದ ಮೊರೆ ಧರ್ಮವೆಂಬುದ
ತೊರೆದವಗಿಹಪರವಿಲ್ಲ ॥೫೫॥

ದೃಢವಿಲ್ಲದೆ ಸತ್ಯವ ಕೊಡುವವಗೆ ತ
ನ್ನೊಡೆಯಗೆರಡನೆಣಿಸುವಗೆ
ಪಡೆದ ಮಕ್ಕಳನಾಸೆಯಿಂದನ್ಯರ ಪೆಸ
ರಿಡುವವಗಿಹಪರವಿಲ್ಲ ॥೫೬॥

[೧೮]ತೊ[೧೮]ಂಡ [೧೯][ತೊ][೧೯]ಳಸುಗಾರಗೆ *[ತೊ]*ೀಟಿಗೆಳಸುವ
ಲಂಡಗೆ ಕಡು ಬಡವರನು
ಅಂಡಲೆವಗೆ ಸುಜನರನು ದಂಡಿಪ
ದಿಂಡೆಯಗಿಹಪರವಿಲ್ಲ ॥೫೭॥

ತಂಡುಕತನವ ಬಿಡದೆ ನಡೆವಗೆ ಲಜ್ಜೆ
ಭಂಡಗೆ ಬಹುಭಾಷಿಕಗೆ
ದಂಡುಳಿಗಗೆ ಧುರದೊಳು ಹಿಮ್ಮೆಟ್ಟುವ
ಲಂಡಗೆ ಪರಲೋಕವಿಲ್ಲ ॥೫೮॥

ಕ್ರೂರಕರ್ಮಿಗೆ ಕಾಮುಕಗೆ ಮದಾಂಧಗಾ
ಚಾರರಹಿತಗೆ ನಿಂದಕಗೆ
ಚೋರಗೆ ತನ್ನ ತಾನರಿಯದ ದುರಹಂ
ಕಾರಿಗೆ ಪರಲೋಕವಿಲ್ಲ ॥೫೯॥

೧೮-೧೮ ಕೊಂ (ಕ). ೧೯-೧೯ ತೊಂ (ತ,ಕ). *-* ಕೊ (ತ,ಕ).

ವ್ರತವ ಬಿಟ್ಟವಗೆ ರಾಗದ್ವೇಷಿಗೆ ಗುರು
ಮತವನಳಿದು ನಡೆವವಗೆ
ಪತಿತಗೆ ಪಾಷಂಡಿಗೆ ಶಿವಧರ್ಮವ
ರ್ಜಿತಗಿಹಪರವೆಂಬುದಿಲ್ಲ ॥೬೦॥

ಖಳರ ನಿಂದಕರ ಕೃತಘ್ನರ ಪರಸತಿ
ಗೆಳಸುವ ಕಡುಪಾತಕರ
ಒಲವರದಿಂ ಕೂಟಸಾಕ್ಷಿಯ ನುಡಿವರ
ಕೆಳೆಕೊಂಬಗಿಹಪರವಿಲ್ಲ ॥೬೧॥

ಸಾವು ಸಾಮಾನ್ಯವಲ್ಲದೆ ಪಿರಿದಲ್ತು ದೇ
ಹಾವಲಂಬಿಗಳೆನಿಪರೊಳು
ಸಾವಿನಿಂದಳಿಜಸವೆ ಕಷ್ಟವೆಂದುದು
ಕೋವಿದ[೨೦] ಸೂಕ್ತಿಮಾರ್ಗದೊಳು ॥೬೨॥

ಕಡುರಾಗಕೆ ಬೇಗುದಿ ಹರಯಕೆ ಮು
ಪ್ಪೆಡರೊದವಿದ ಸಂಪದಕೆ
ಎಡೆಗೊಂಡ ಕೂಟಕಗ[೨೧][ಲಿಕೆ][೨೧]ಯಳಿವು ಬಿಡ
ದೊಡಲ[೨೨][ಪ][೨೨]ಡೆದು ಪುಟ್ಟಿದಗೆ ॥೬೩॥

ಎಲುತೊಗಲಿಂ ಮಲಮೂತ್ರದುರ್ಗಂಥದಿ
ಕೊಳಕಿನಿಂದಪವಿತ್ರವೆಯ್ದೆ
ಪಲವು ಕುತ್ತದ ನೆಲೆ ಕೆಡಲುಳ್ಳ ತನುವಿದ
ನೊಲಿದು ನಚ್ಚಿಹನೆ ಗಾವಿಲನು ॥೬೪॥

ತನುವಿಂದ್ರಧನು ಸಿರಿ [೨೩][ಸೀ][೨೩]ರ್ಪನಿ ಹೆಂಡತಿ
ಮನೆಮಕ್ಕಳು ಸಂಜೆಗೆಂಪು
ಇನಿತಿದು ನಿಸದವೆಂದಿದರೊಳು ಕಡುರಾಗ
ವನು ಬಿಡದವನೆ ಗಾವಿಲನು ॥೬೫॥

೨೦+ನ (ತ,ಕ). ೨೧–೨೧ ಳ್ಕೆ (ತ,ಕ), ೨೨–೨೨ ತ (ತ,ಕ).೨೩–೨೩ ಸೂ (ತ,ಕ).

ಹೋಗದು ಸರಿಹೋಗುವ ದಿನಕಲ್ಲ[೨೪][ದ][೨೪]
ದೇಗೆಯ್ದಿದರದೆಡರಡಸೆ
ತ್ಯಾಗಭೋಗವನುಳಿದಿರ್ದ ದಿನಂ ಮೋಸ
ಹೋಗಲಾತನೆ ಗಾವಿಲನು ॥೬೬॥

ಬಪ್ಪುದೇನದು ಬಾರದೆ ಹೋಗದು ಬಾರ
ದಿಪ್ಪುದು ಬಾರದಂತಾಗಿ
ತಪ್ಪಿದೆ ಸ್ಥಿತಿಗತಿಗಿಂತೆಂದು ಚಿಂತಿಸು
ತಿರ್ಪ ಮಾನವನೆ ಗಾವಿಲನು ॥೬೭॥

ಒಲ್ಲದ ವಿಭುವನೊಲ್ಲದ ಕೆಳೆಯನ ತನ್ನ
ನೊಲ್ಲದಂಗನೆಯ ನಚ್ಚಿಹನು
ಇಲ್ಲದ ವಿದ್ಯವ ಬಲ್ಲ ಹಮ್ಮಿನೊಳಿರ್ಪ
ನಲ್ಲದರುಂಟು ಗಾವಿಲರು ॥೬೮॥

ಧನದಳಿವನು ವಿತ್ತ[೨೫][ದ][೨೫]ರ್ಜನೆಯನು ತನ್ನ
....
ಮನದ ದುಮ್ಮಾನದಿ ಪ್ರಕಟಿಸುತಿರಲಾ
ತನನುಳಿದುಂಟೆ ಗಾವಿಲರು ॥೬೯॥

ವಿನ[೨೬][ಯ][೨೬]ವಿದ್ಯಾಗಮವಿಲ್ಲದಿರ್ಪೆಡೆಯೊಳು
ಧನವೆಯ್ದದ ಠಾವಿನಲ್ಲಿ
ಅನುನಯದಿಂ ಸುಖವಿಲ್ಲದೆಡೆಯಲ್ಲಿ
ದಿನಗಳೆವವನೆ ಗಾವಿಲನು ॥೭೦॥

ಸರಸ ಸತ್ಕವಿಗಳನಾದರದಿಂ ಸ
ತ್ಕರಿಸದೆ ಖಳರ ಮನ್ನಿಸುವ
ದುರುಳರೊಡನೆ ಕೂಡಿ ಬಿಡದೆ ವರ್ತಿಪ ಭೂ
ವರನೆ ಗಾವಿಲರಾಣ್ಮನೆನಿಪ ॥೭೧॥

೨೪–೨೪ ದೆ (ತ,ಕ). ೨೫–೨೫ ಗ (ತ,ಕ). ೨೬–೨೬ X (ತ,ಕ).

ದುಷ್ಟರ ಪಿಡಿದು ನಿಗ್ರಹಿಸದೆ ಪರಮವಿ
ಶಿಷ್ಟರ ಪರಿಪಾಲಿಸದೆ
ಇಷ್ಟರ ನುಡಿಗೇಳಿ ನಡೆಯದ ಭೂಪಗೆ
ನಷ್ಟವಹುದು ಪುಣ್ಯಕೀರ್ತಿ ॥೭೨॥

ಪರಬಲದುರು೨೭ಬೆ೨೭ಯನಾನಲಾರದೆ ಸಂ
ಗರದೊಳು ಮುರಿದು ಬೆಂಗೊಟ್ಟು
ಹರಣವನುಳುಹಿಕೊಂಡೊಡಲ ಹೊರೆವ ನೃಪ
ಬಿರುದಾಯತನೆನಿಸುವನೆ ॥೭೩॥

ತಂಡುಕ ೨೮ತಾ೨೮ಟಕರಿಗೆ ನಡತೆಯನಿತ್ತು
ಕೊಂಡೆಯರಿಗೆ ಕಿವಿಗೊಡುತೆ
ಬಂಡಣವೆನಲೆದೆಗೆಡು*[ವ]* ನೃಪತಿ ಲಜ್ಜೆ
ಭಂಡನೆನಿಪನವನಿಯೊಳು ॥೭೪॥

ಮರೆಹೊಕ್ಕವರ ಮನ್ನಿಸಿ ಮಾರಾಂತ ಭೂ
ವರರ ಮದವನಡಗಿಸುವ
ಧರೆಯ ಧರ್ಮದೊಳಾಳುತೆ ಕೀರ್ತಿಯನು
ದ್ಧರಿಸಬಲ್ಲಡೆ ನೃಪನೆನಿಪ ॥೭೫॥

ಧನಧಾನ್ಯವಸ್ತ್ರವಾಹನ ಪುತ್ರಸನ್ಮಿತ್ರ
ರನುಚರದಾಸಿಯರೆಂಬ
ಘನತರದಷ್ಟವಿಭೂತಿಯೊಳಿರ್ಪಾ
ತನೆ ಮನುಜೇಂದ್ರನೆನಿಪನು ॥೭೬॥

ಅನುಕೂಲಸತಿಯ ಸಂಯೋಗ ಮಜ್ಜನ ಭೋ
ಜನ ಗಂಧ ಕುಸುಮ ತಾಂಬೂಲ
ವಿನುತಭೂಷಣತಲ್ಪವೆನಿಪಷ್ಟಭೋಗದೊ
ಳನುವರ್ತಿಪನೆ ಭೂವರನು ॥೭೭॥

೨೭–೨೭ ಚಿ (ಕ). ೨೮–೨೮ ಕಾ (ಕ). *–* X (ತ,ಕ).

ಧನನಿಕ್ಷೇಪ ತಟಾಕ ದೇವಾಲಯ
ವನ ವಿಪ್ರ ಸಂಸ್ಥಾಪನವು
ತನಯ ಸತ್ಕೃತಿಯೆಂಬ ಸಪ್ತಸಂತಾನಗ
ಳನು ಪಡೆವವನೆ ಭೂವರನು ॥೭೮॥

ಅನುಗೊಳಿಸಿದ ಸಂಧಿವಿಗ್ರಹಯಾನಾ
ಸನದ್ವೈದಾಶ್ರಯವೆಂಬ
ವಿನುತ ಷಡ್ಗುಣಯುತನಾಗಿ ವರ್ತಿಪುದಿದು
ಜನಪತಿಗಳಿಗೆ ಜೀವಾಳ ॥೭೯॥

ನಿಯತೋಪಾಯಚತುಷ್ಟಯ ಶಕ್ತಿ
ತ್ರಯ ತಂತ್ರಪಂಚಕವೆಂಬ
ಜಯವೊದವಿದ ವರ್ಗತ್ರಯದಿಂದೆ ನಿ
ರ್ಭಯನಾಗಿರಬೇಕು ನೃಪನು ॥೮೦॥

ಚತುರಂಗಬಲ ಸಪ್ತಾಂಗ ಸಭಾವಿ
ಶ್ರುತರಾಜ್ಯಸಪ್ತಾಂಗವೆರಸಿ
ಕ್ಷಿತಿಯನಾಳುತೆ ಪುಣ್ಯಕೀರ್ತಿಯ ಪಡೆ[೨೯][ವ][೨೯] ನೃ
ಪತಿ ನೃಪಚೂಡಾರತ್ನ ॥೮೧॥

ವರ ಧರ್ಮಶಾಸ್ತ್ರ ಪುರಾಣವಿದ್ಯಾಗಮ
ಸರಸಸತ್ಕಾವ್ಯ ಮುಂತಾದ
ಉರುತರಮಪ್ಪ ವಿದ್ಯಾಕಲೆಗಳನರಿ
ದಿರಬೇಕು ನೃಪನೆನಿಸುವನು ॥೮೨॥

ಸುತ್ತಣ ದೊರೆಗಳು ಜನ್ಮವೈರಿಗಳವ
ರೊತ್ತಿನ ನೃಪರಾಪ್ತರೆಂದು
ಚಿತ್ತದೊಳಿಟ್ಟವರಿವರಿಗುಚಿತವಾಗಿ
ವರ್ತಿಪುದಿದು ರಾಜಧರ್ಮ ॥೮೩॥

೨೯–೨೯ X(ತ,ಕ).

ತಡೆಯದೆ ಮಂದಿಗೆ ಮಾಡಿದ ಪಡಿಜೀತ
ನಡೆವುದನಾರೈಯಬೇಕು
ಗಡಿದುರ್ಗಂಗಳ ಬಲಿದಾಪ್ತರನಲ್ಲಿ
ಗಿಡಬೇಕು ಮೊನೆಯ ನಾಯಕರ ॥೮೪॥

ಬಳಸಿಹ ನೃಪರೊಳು ನಂಟು ನಂಬಿಗೆಗಳ
ನುಳಿದು ಪರಾಕ್ರಮದಿಂದೆ
ಬಲವಂತನಾಗಿ ತಾನಿರಬಲ್ಲ ಭೂಪತಿ
[೩೦][ಗಿಳೆಯೊಲ್ದ][೩೦] ಹೆಣ್ಣಿನಂತಿಹುದು ॥೮೫॥

ಹೇಳಿ ಕೇಳುತೆ ಬರ್ಪುದೆ ಕೆಲಬಲದ ನೃ
ಪಾಲಕರೊಳಗತಿ ಕದನ
ಆಳುಕುದುರೆ ಹವಣಿಲ್ಲದೊಡೊಲ್ಲದ
ಸೂಳೆಯಂತಾಗಿಹುದವನಿ ॥೮೬॥

ಅರಸೆಂಬ ತರಸಿಗೆ ರಾಜ್ಯಬಲಗಳೆಂ
ಬೆರಡು ಬಟ್ಟಲು ಸಮನಾಗಿ
ಯಿರದವರೊಳಗೊಂಡು ಹೆಚ್ಚು ಕುಂದಾದೊಡೆ
ದೊರೆತನ ನೆಲೆದಪ್ಪುವುದು ॥೮೭॥

ತನುಜನುಜರನಾಳ್ವನ ಸೇವೆಯ ಬಿಟ್ಟು
ಮನಕೆ ನಂಬುಗೆಯಾಗಿ ನಡೆವ
ಮೊನೆಗಾರಿಕೆಯುಳ್ಳನ ಗಡಿದುರ್ಗದೊ
ಳನುಗೊಳಿಪುದು ನೃಪನೀತಿ ॥೮೮॥

ವೀತಕಿಲ್ಬಿಷನ ವಿಖ್ಯಾತನ ಸಧುರನಿ
ರ್ಭೀತನ ವಿಜಯವಿಶ್ರುತನ
ನೀತಿ ತಪ್ಪದೆ ನಡೆವನ ಪುಣ್ಯವಂತನ
ನೋತು ಮಾಳ್ಪುದು ದಳಪತಿಯ ॥೮೯॥

೩೦-೩೦ ನಿಳೆಯಲ್ದು (ತ,ಕ).

ಕುಲದೊಳುತ್ತಮನ ಪೌರುಷದೊಳಧಿಕನ ನಿ
ಶ್ಚಲಚಿತ್ತನ ನೀತಿಯುತನ
ಕಲೆಯ ಬಲ್ಲನ ಪತಿಕಾರ್ಯನಿಷ್ಠನ ಮನ
ವೊಲಿದು ಮಂತ್ರಿಯ ಮಾಳ್ಪುದುಚಿತ ॥೯೦॥

ಸಕಲಜನಕೆ ಹಿತನೆನಿಪನ ನಿರ್ವಾ
ಹಕದೂರ ನಿ[೩೧][ರ್ವ][೩೧]ಂಚಕನ
ಅಕಲಂಕನ ವಿಶ್ವಾಸಿಯ ಪಾರುಪ
ತ್ಯಕೆ ನಿಲಿಪುದು ನೃಪನೀತಿ ॥೯೧॥

ಬುಧಗುರುಶನಿವಾರಂಗಳೊಳೆಯ್ದೆಯೊ
ಲಿದು ನೂತನವಸ್ತುಗಳ
ಪೊದೆದುಡುವುದು ಚಂದಿರಸರದಿಂ ಕೋ
ವಿದರೆನಿಸುವ ನೀತಿಯುತರು(?) ॥೯೨॥

ಪಗಲುತ್ತರಮುಖನಾಗಿಯಿರುಳು ತೆಂಕ
ಮೊಗನಾಗಿ ಪೊರಕಡೆಗೈದು
ಮಿಗೆ ಶೌಚಮನೊಲಿದಿರದಾಚರಿಪ
ನ್ನೆಗ ಮೌನದೊಳಿರಬೇಕು ॥೯೩॥

ಇನಮಂಗಳಗುರುಭಾರ್ಗವವಾಸರ
ಜನನವಾರವನುಳಿದಿರ್ದ
ದಿನದೊಳು ಪೂರ್ವೋತ್ತರಮುಖನಾಗಿ ಮ
ಜ್ಜನವ[೩೨][ಸನ][೩೨]ಂಗೊಳಬೇಕು ॥೯೪॥

ತ್ರಿಣಯನ ಯಜನಪೂರ್ವಕವಾಗಿ ಪೂರ್ವದ
ಕ್ಷಿಣ ಪಶ್ಚಿಮಮುಖವಾಗಿ
ಅಣಿಯರಮಾದಾಪ್ತರ ಕೂಡಿಕೊಂಡು ತಾ
ನುಣಬೇಕು ನೇಸರ ಸರದೆ ॥೯೫॥

೩೧–೩೧ X (ತ,ಕ). ೩೨–೩೨ ಪನ್ನ (ತ,ಕ).

ಮಲಗಿ ನಿದ್ರಿಸಲಾಗದು ಮೂಡಬಡಗಲು
ತಲೆಗಿಂಬನು ಮಾಡಿಕೊಂಡು
ಸಲೆ ತೆಂಕಪಡುವ ದೆಶೆಯೊಳು ಮಂಡೆಯನಿ
ಟ್ಟೊಲಿದು ಮಾಡುವುದು ನಿದ್ರೆಯನು ॥೯೬॥

ಶಿವರಾತ್ರಿ ಮುಂತಾದ ಪುಣ್ಯ*[ತಿಥಿ]*ಗಳೊಳು
ವಿವರಿಸುವಡೆ ಪಗಲಲ್ಲಿ
ತವೆ ಬ್ರಹ್ಮಚರ್ಯಾಚರಣೆಯಿಲ್ಲದೊಡೆ ಸಂ
ಭವಿಸದಿರದು ಪ್ರತ್ಯವಾಯ ॥೯೭॥

ಎಲ್ಲವು ದೈವಾಧೀನವೆಂದು ಜಗ
ದಲ್ಲಿ ಮೈಮರೆದು ವರ್ತಿಸದೆ
ನಿಲ್ಲದೆ ಪುರುಷಪ್ರಯತ್ನವೇನುಂಟದ
ನೆಲ್ಲವನನುಗೆಯ್ವುತಿಹುದು ॥೯೮॥

ತುರಿಹಮನುಳಿದು ಕಜ್ಜಂಗಳನೆಡೆಗೊಂಡು
ತರಹರದಿಂ ಮಾಡುವಲ್ಲಿ
ನಿರುತ ಜನಾಪವಾದಕೆ ಭೀತಿಯುತನಾ
ಗಿರಬಲ್ಲಡಾತ ಬಲ್ಲವನು ॥೯೯॥

ಅಡುವಳನೊಳು ಕಬ್ಬಿಗನೊಳು೩೩[ಬೆ]೩೩ಜ್ಜನೊ
ಳೊಡನಿರ್ದ ಮರ್ಮಜ್ಞರೊಳು
ಕೊಡುಕೊಂಬೆಡೆಯೊಳು ಕಂದುಗಾಣಿಸಿಕೊಂಡು
ನಡೆಯಲಾಗದು ಬಲ್ಲವನು ॥೧೦೦॥

ವನಿತೆಯಣುಗರೊಳು ನಯಭಯವನು ಬಂಧು
ಜನದೊಳಾಪ್ತರೊಳು ಮಾನ್ಯರೊಳು
ವಿನಯೋಪಚಾರವ ಪೇಳಲವನು ದು
ರ್ಜನರೊಳು ಮಾಳ್ಪುದಾ ನೀತಿ(?) ॥೧೦೧॥

– ತತಿ (ತ,ಕ). ೩೩–೩೩ ಜ (ತ,ಕ).

ಮಾನಿತ ಶೀಲತಪೋವಿಲಸಿತ ಸು
ಜ್ಞಾನಿಗಳಿರದೆಯ್ತರಲು
ಆನತನಾಗುತವರನರ್ಚಿಸುವುದನ್ನ
ಪಾನವಸ್ತ್ರಾದಿಗಳಿಂದೆ ॥೧೦೨॥

ಅರಿಯದ ಜಾರ ಶೀಲವನುಳ್ಳವ ನನ್ನ
ದರಕೆ ಕೊಡೆಯೇರೆ ಗೃಹಕೆ(?)
ಬರಿಯ ವೇಷಕೆ ತಕ್ಕು[೩೪][ಚಿ][೩೪]ತದಿನಾತನ
ತೆರನನರಿದು ಸತ್ಕರಿಪುದು ॥೧೦೩॥

ಜಡಭಾವ ದೋಷ ನಿಟ್ಟಿರ್ದ ಕರ್ಮಾಲಸ್ಯ
ವೆಡೆಗೊಂಡ ದೇಹಾಭಿಮಾನ(?)
ಬಿಡದೆ ನಿದ್ರಾಚಪಲತೆ ಮಂದಮತಿ ಸಂ
ಗಡಿಸಿರಲಾತ ತಾಮಸನು ॥೧೦೪॥

ಮದಮಾನಮಾತ್ಸರ್ಯನಿಷ್ಠುರನಿರ್ದಯ
ಕದನಕರ್ಕಶಕಾಮಕಪಟ
ಒದವಿದ ಕೋಪಲೋಭಾದಿಗುಣಂಗಳ
[೩೫][ನೆ][೩೫]ದೆಗೊಂಡಿರೆ ರಾಜಸನು ॥೧೦೫॥

ವಿರತಿ ವಿವೇಕ ವಿನಯ ವಿತರಣ ದಮೆ
ವರಧೈರ್ಯ ಧರ್ಮಕಾರುಣ್ಯ
ನಿರಭಿಮಾನಾತಿನಿರ್ಧಾರಣಸದ್ಗುಣ
ವಿರಲವ ಸಾತ್ವಿಕನೆನಿಪ ॥೧೦೬॥

ಮುನಿಸುವನಿಷ್ಟಚಿಂತನೆ ಪರಸತಿಯನ್ಯ
ಧನದಾಸೆ ಸುಜನವಿರೋಧ
ಇನಿತಿವು ಮಾನಸದೋಷವಿಂತಿದನೊಮ್ಮೆ
ನೆನೆಯದೊಡಾತನುತ್ತಮನು ॥೧೦೭॥

೩೪–೩೪ ಜ(ತ,ಕ). ೩೫–೩೫ ವೆ (ತ,ಕ).

ಅನುಚಿತ್ಯೈ ಶೂನ್ಯಾನೃತ ನಿಷ್ಠುರ
ಜನವಿರೋಧ ಗ್ರಾಹ್ಯಗಳು
ಇನಿತಿವು ವಾಚಿಕದೋಷಂಗಳಿವು ಮಾ
ತಿನೊಳಿಲ್ಲದಾತನುತ್ತಮನು ॥೧೦೮॥

ಪರದಾರ ಗಮನ ಪರವಿತ್ತಾಪ
ಹರಣ[೩೬][ನ][೩೬]ಭಕ್ಷ್ಯ ಭಕ್ಷಣ[೩೭][ವು][೩೭]
ನಿರುತ ಕಾಯಿಕದೋಷವಿಂತಿದನೆಸಗದ
ಪುರುಷನು ಪರಮಪುಣ್ಯಾತ್ಮ ॥೧೦೯॥

ಪರರೊಳು ಗುಣವೊಂದು ಪರಮಾಣುವಿನನಿ
ತಿರಲದನೊಲಿದು ಬಣ್ಣಿಸುತೆ
ವರ ನಿಜಗುಣಗಣವಿರಲದ ನೆನಪಿಗೆ
ಬರಿಸದೊಡಾತನುತ್ತಮನು ॥೧೧೦॥

ಸಿರಿಯೊದವಿದ ಕಾಲದೊಳುಕ್ಕಿ ಸೊಕ್ಕಿ ದು
ಶ್ಚರಿತನೆನಿಸದೆ ಸರ್ವರೊಳು
ಸರಸ ವಿನಯ ವಿತರಣದಿಂ ಸೈರಿಸು
ತಿರಬಲ್ಲಡಾತನುತ್ತಮನು ॥೧೧೧॥

ಎಡರಡಸಿದೆಡೆಯಲ್ಲೆದೆಗೆಡದೆ ಬಾ
ಯ್ಬಿಡದೆ ಲೋಗರಿಗೆ ಧೈರ್ಯವನು
ವಿಡಿದು ನಿಶ್ಚಲನಾಗಿರ್ದುದರೊಳೆ ತುಷ್ಟಿ
ವಡೆಯಬಲ್ಲವನೆ ಬಲ್ಲವನು ॥೧೧೨॥

ಬಡಬಾಗ್ನಿ ಪೀರೆ ಪೊಚ್ಚಗಳೊಂದ[೩೮][ಲುಡುಗದ][೩೮]
ತಡಿಯ[೩೯][ನೊತ್ತ][೩೯]ದ ಕಡಲಂತೆ
ಎಡರಡಸಿರೆ ಸಿರಿಯೊದವಿರುತಿರಲೆದೆ
ಗೆಡ[೪೦][ದೋತ][೪೦]ದವನೆ ದಿ[೪೧][ಮ್ಮಿ][೪೧]ದನು ॥೧೧೩॥

೩೬-೩೬ ವ (ತ,ಕ). ೩೭-೩೭ ನು (ತ,ಕ).೩೮-೩೮ ಲೊಡಗದೆ (ತ,ಕ), ೩೯-೩೯ ನೋತ (ತ,ಕ). ೪೦-೪೦ ದುಂಕ (ತ), ದೊಕ (ಕ). ೪೧-೪೧ ಮ್ಮ (ತ,ಕ).

ದೇಹವಳಿದು ಪೋಪನ್ನೆವರಂ ಕುಗ್ಗಿ
ದೇಹಿಯೆನ್ನದೆ ದೈನ್ಯದೊಳು
ದೇಹಿಯೆಂದಾತಗಿರೆನ್ನದೊಡಾತನೆ
ದೇಹಿಗಳೊಳು ದೇವನೆನಿಪ ॥೧೧೪॥

ಪರವನಿತಾ ತರಳಾಕ್ಷಂ ಚಿತಸಿವ
ಶರಜಾಲನಿದ್ದೆದೆಗೆಡದೆ
[೪೨]ತ[೪೨]ರದಟ್ಟುಳಿಯ ಸಂಗ್ರಹಿಪ ಸಾಹಸವುಳ್ಳ
ಪುರುಷನೆ ಪುರುಷಪುಂಗವನು(?) ॥೧೧೫॥

ಕುಲಗುರುವಿಷ್ಟದೇವಾರ್ಚನೆಯೊಳು ನಿ
ಶ್ಚಲ ಸದ್ಭಕ್ತಿಭಾವದೊಳು
ಒಲಿದು ಜನಕಜನನಿಯರ ಸೇವೆಗಳೊಳ
ಗಲಸದಿರ್ಪಾತನುತ್ತಮನು ॥೧೧೬॥

ಗುರುವಚನವ ತಂದೆತಾಯ ಮಾತನು ಕಿಂ
ಕರವೃತ್ತಿಯಿಂ ಕೇಳು[೪೩][ತ][೪೩]ದನು
ಶಿರದೊಳು ತಳೆದು ಬಿಡದೆ ಸೇವಿಪಗಿಹ
ಪರವೆಂಬುದೇನರಿದಲ್ತು ॥೧೧೭॥

ಮಾನಸ ವಾಚಕ ಕಾಯಿಕಂಗಳೊಳನು
ಮಾನವಿಲ್ಲದೆ ಗುರುವರನ
ಸಾನುರಾಗದಿ ಶಿವನೆಂದರ್ಚಿಪ ಸು
ಜ್ಞಾನನಿಧಿಯೆ ಗುರುಭಕ್ತ ॥೧೧೮॥

ವ್ಯವಹರಿಸದೆ ಹೊರವಳಕೆಯೊಳಾಚಾ
ರವನುಳಿದದ್ವೈತವನು
ತವೆ ಭಾವದ್ವೈತವನಾಚರಿಪುದು
ಶಿವಭಕ್ತರ ಘನಮಾರ್ಗ ॥೧೧೯॥

೪೨-೪೨ ಕ (ಕ). ೪೩-೪೩ ತೆ (ತ,ಕ).

ದಯವೆ ಧರ್ಮದಮೊತ್ತಮೊದಲಿಂದ್ರಿಯಂಗಳ
ಜಯವೆ ಪರಮ ನಿಜಸುಖವು
ನಯವೆ ಸಂಪತ್ತು ವಿವೇಕವೆ ಕೇಳು ನಿ
ರ್ಭಯವೆ ವಿಖ್ಯಾತಸಾಹಸವು ॥೧೨೦॥

ಸತ್ಯವೆ ಜಪ ಶಾಂತಿಯೆ ತಪ ಪರ[೪೪][ಮ][೪೪]ವಿ
ರಕ್ತಿಯೆ ನಿಜನಿರ್ವಾಣ
ಚಿತ್ತಶುದ್ಧವೆ ನಿರ್ಮಳಭಾವ ಶಿವಸಾ
ಹಿತ್ಯವೆ ನಿಶ್ಚಲಯೋಗ ॥೧೨೧॥

ಚಾರುಸದ್ಗುಣಗಣವೇ ರನ್ನದೊಡವು ವಿ
ಚಾರವೆ ಪರಮಸಹಾಯ
ಸಾರಸಜ್ಜನಸಂಗವೆ ಕೈವಲ್ಯದ
ದಾರಿ ಕೇಳೊಲಿದು ಕುಮಾರ ॥೧೨೨॥

ಎಂದಿವು ಮೊದಲಾದತುಳನೀತಿಯನಾ
ನಂದದಿ ಸದ್ಗುರುರಾಯ
ಕಂದ ಕುಮಾರ ತೋಟೇಂದ್ರಗೆ ಕಾರುಣ್ಯ
ದಿಂದೊಸೆದೊಲಿದು ಬೋಧಿಸಲು ॥೧೨೩॥

ಆಗಮರೂಪ ಚಿದ್ರೂಪ ದಯಾಮೃತ
ಸಾಗರಸೌಖ್ಯಾಕರನೆ
ಭೋಗಮೋಕ್ಷದ ಮಾರ್ಗವ ತೋ[೪೫][ರು][೪೫] ತೋಟಮ
ಹಾ ಗುರುರಾಯನೆ ಶರಣು ॥೧೨೪॥

ಎಂದು ಪೊಗಳಿ ಪೊಡಮ[೪೬][ಟ್ಟ][೪೬]ಭಯಂಬಡೆ
ದಂದವರಿಂ ಬಿಳ್ಕೊಂಡು
ಬಂದು ಕುಮಾರ ತೋಟೇಂದ್ರನು ತನ್ನಯ
ಮಂದಿರದೊಳು ಸುಖಮಿರ್ದ ॥೧೨೫॥

೪೪-೪೪ ಕು (ತ,ಕ). ೪೫-೪೫ ರಿ (ತ,ಕ). ೪೬-೪೬ ಟ್ಟು (ತ,ಕ).

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೧೨೬॥

[೪೭]ಸಪ್ತಮಸಂಧಿ ಸಂಪೂರ್ಣಂ[೪೭]

❖❖

೪೭–೪೭ ಅಂತು ಸಂಧಿ ೭ಕ್ಕಂ ಪದನು ೫೭೭ ಕ್ಕಂ ಮಂಗಳ ಮಹಾಶ್ರೀ ಶ್ರೀ (ತ,ಕ).

ಸಂಧಿ : ೮

ಎಳಸಿ ಬಸಂತನೆಯ್ತಂದ

ಶ್ರೀಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ನವಕಂದರ್ಪ ಕುಮಾರ ತೋಟೇಂದ್ರನು
ಯುವ[೧][ರಾ][೧]ಜಲೀಲೆಯೊಳಿರಲು
ಅವನಿಪನಿರ್ಮಡಿಚಿಕ್ಕನೃಪತಿಯೊ
ಪ್ಪುವ ರಾಜವೈಭವದಿಂದೆ ॥೨॥

ಇರುತಿರಲಿಳೆಗೆ ಸೂಚಿಸಿತು ವಸಂತನ
ಬರ[೨][ವ][೨]ರಲಂಬಿನ ನೆರಲು(?)
ಸರಿದುದೊಯ್ಯನೆ ಶಿಶಿರನ ಸೊಕ್ಕು ಪಣ್ಣೆಲೆ
ಮರಗಳಿಂದಿರದುದುರಿದುವು ॥೩॥

ಜನಿಸಿತು ತೆಂಕಣೆಲರು ಮಾಮರದೊಳು
ಮೊನ[೩][ಚಿ][೩]ತ್ತು ಕುಡಿ ಸುಮೌನ
[೪]ಜಿ[೪]ನುಗಿತು ಕೋಗಿಲೆ ಕೊರಲೊಳು ಮಾಧವಿ
ನನೆದೊಂಗಲ ಕಾಣಿಸಿತು ॥೪॥

೧–೧ ನ (ತ,ಕ). ೨–೨ ಲ(ತ,ಕ) ೩–೩ ಸಿ (ತ,ಕ). ೪–೪ ಜಿ(ಕ).

ನಸಿದುದು ಕುಳಿರ[೫][ತಣ್ಪಿ][೫]ಸಿಲೊಳಾಗಳೆ ನಸು
ಬಿಸುಪೇರಿತಂಗಸಂಭವನು
ಕುಸುಮಚಾಪಕೆ ಕೈದುಡುಕಿದ ವಿರಹಿಗ
ಳಸು ಕುಣಿದುವು ಕಂಠದೊಳಗೆ ॥೫॥

ಮಾವಂಕುರಿಸದ ಮುನ್ನ ಕೋಗಿಲೆಗಳ
ಗಾವರವಾಗದ ಮುನ್ನ
ತಾವರೆ [೬][ತ][೬]ಲೆದೋರದ ಮುನ್ನ ಮಾಧವಿ
ಹೂವಾದುದೇನ ಬಣ್ಣಿಪೆನು ॥೬॥

ಬನಬನಿತೆಗೆ ಮಧುರಾಜನ ಬರವನು
ಮನವೊಲಿದುಸುರುತಿರ್ದಪುದೊ
ಯೆನಲರೆ[೭][ವಿ][೭]ರಿದಲರೆದೆಗೊಳಿಸಿದವು ಸೊಂ
ಪಿನ ಮಾಧವಿಯ ಲತೆಯೊಳು ॥೭॥

ನಳನಳಿಸುವ ನವಕಳಿಕೆಯನರೆಗಚ್ಚು
ತಿಳಿವ ಸೋನೆಯ [೮]ನ[ಲಿ][೮]ದೀಂಟಿ
ನಲಿದು ಪುಗಿಲ್ಪುಗಿಲೆಂದಾಗ ಮಾವಿನೊ
ಳುಲಿದುದು ಮತ್ತಕೋಕಿಲನು ॥೮॥

ಬಿಸುಪೇರಿತು ನೇಸರ ಹಬೆಯೊಳು ಬೇ
ವಸದೋರಿತು [೯][ಪೊಡ][೯]ಕರಿಸಿ
ಕುಸುಮಕೋದಂಡವನೊ[೧೦][ದೆ][೧೦]ದಂಗಭವನೇ
ರಿಸಿದನು ಮರಿದುಂಬಿವೆ[೧೧][ದೆ][೧೧]ಯ ॥೯॥

ಅಂಕುರಿಸಿತು[೧೨][ಭೋ][೧೨]ಗಿಗಳೊಳೊಗೆದ[೧೩][ರಾ][೧೩]
ಗಾಂಕು[೧೪][ರ][೧೪]ವೆನಲು ರಸಾಲ
ಬಿಂಕವೇರಿತು ತಾವರೆಗೆ ಕಾದಲರ[೧೫][ಮೊ][೧೫]
ಗಂ ಕೂಡೆ ಕಳೆವೆಚ್ಚುತಿರಲು ॥೧೦॥

೫-೫ ತಲ್ಪಿ (ತ), ಕಲ್ಪಿ(ಕ). ೬-೬ ಕೊ(ಕ). ೭-೭ ವ (ತ,ಕ). ೮-೮ ಳಿ (ತ,ಕ). ೯-೯ ಪದಿ (ತ), ಪಡಿ (ಕ). ೧೦-೧೦ ಡೆ, (ತ,ಕ). ೧೧-೧೧ ಡೆ (ತ,ಕ). ೧೨-೧೨ ಬಾಗಿ (ತ,ಕ). ೧೩-೧೩ ರ (ತ,ಕ). ೧೪-೧೪ ಲ (ತ,ಕ). ೧೫-೧೫ ನೊ (ತ,ಕ).

ವಿರಹಿಜನದ ಮೊಗದೊಡನೆ ಕಪ್ಪಡರುತೆ
ಕೊರಗಿತು ಜಾಜಿ ಸೊಂಪಳಿದು
ಅರಳಂಬನ ಜಸದೊಡನೆ[೧೬][ಮ][೧೬]ಲ್ಲಿಗೆಯರ
ಲರಲಿ ಕಂಗೊಳಿಸಿತಂತಾಗ ॥೧೧॥

ಅಡಿಯಿಟ್ಟುದೊಯ್ಯನೊಯ್ಯನೆ ತೆಂಬಲ[೧೭][ರಿ][೧೭]ರು
ಖೊಡೆಯ ಜಲಕ್ಕನೊಪ್ಪಿದನು
ಕುಡುವಿಲ್ಲ ಹೆದೆಗಂಬ ತೊಟ್ಟನು ಬಿರಯಿವಂ
ಗಡಕೆತ್ತಣ ಬದುಕೆನಲು ॥೧೨॥

ಎಳ[೧೮][ವಳ್ಳಿ][೧೮]ಮೆಯ್ನಳನಳಿಸಿ ತಾವರೆಮೊಗ
ಕಳೆಯೇರಿ ತೆಂಗಾಯಿಮೊಲೆಯು
ನೆಲೆಗೊಂಡ ವನವನಿತೆಗೆ ಯೌವನ ಬರ
ಲೆಳಸಿ ಬಸಂತನೆಯ್ತಂದ ॥೧೩॥

ಅಳಿಕುಂತಳಮನೊ[೧೯][ಲ್ದೋ][೧೯]ವುತ್ತಂಕುರ
ಪುಳಕಮನೆಬ್ಬಿಸುತಪ್ಪಿ
ಗಿಳಿಯುಲುಪಿನ ಗಳ ರವದಿಂದೆ ಮಧು ವನ
ಲಲನೆಯೊಳೊಂದಿರುತಿರ್ದ ॥೧೪॥

ಇಂತೆಸೆದಿರ್ಪ ವಸಂತಕಾಲದೊಳು ಭೂ
ಕಾಂತ[೨೦][ನಿ][೨೦]ರ್ಮಡಿಚಿಕ್ಕೇಂದ್ರ
ಅಂತಃಪುರದೊ[೨೧][ಳ][೨೧]ಂಗನೆಯರೋಲಗದೊಳು
ಕಂತುಸಮಾನನೊಪ್ಪಿರಲು ॥೧೫॥

ಬನವ ಸಿಂಗರಿಸಿ ಕಮ್ಮಲ[೨೨][ರಲೊ][೨೨]ಡಂ [೨೩][ತಿರಿ
ದಿ][೨೩]ನಿವ[೨೪][ಣ್ಗ][೨೪]ಳ ಬಿಣ್ಗೊನೆಯ
ವನಪಾಲಕ ತಂದು ಕೈಗಾಣಿಕೆಯಿತ್ತು
ಜನಪತಿಗವನಿಂತೆಂದ ॥೧೬॥

೧೬–೧೬X (ತ,ಕ). ೧೭–೧೭ ಗಿ (ತ,ಕ). ೧೮–೧೮ ವಳಿ (ತ), ದಳ(ಕ). ೧೯–೧೯ ಲ್ದು (ತ,ಕ). ೨೦–೨೦ ಗಿ (ತ,ಕ). ೨೧–೨೧ ಲ (ತ,ಕ). ೨೨–೨೨ ರರೊ (ತ), ರೊ(ಕ). ೨೩–೨೩ ಬೆರುಗಿ (ತ,ಕ). ೨೪–೨೪ ಣ್ಣ (ತ,ಕ).

ಪೋದುದು ಮಾಗಿ ಬಂದುದು ಸಮಸಮಯ ತಾ
ನಾದುದು ಜನಕನುರಾಗ
ಮೇದಿನಿಯಾಣ್ಮ ಚಿತ್ತೈಸುದ್ಯಾನವಿ
ನೋದಕ್ಕೆ ಮನವೀವುದೊಲಿದು ॥೧೭॥

ಎನಲುಡುಗೊರೆ ರನ್ನದೊಡವುಗಳಿಂದಾ
ವನಪಾಲಕನ ಮನ್ನಿಸುತೆ
ಮನದನ್ನಳೆನಿಪ ಪಟ್ಟದರಾಣಿ ಸಹಭೋ
ಗಿನಿಯರೆಲ್ಲರ ಬರಹೇಳಿ ॥೧೮॥

ರಂಗು[೨೫]ಗ[೨೫]ರೆವ ರತ್ನಗಂಬಳಿ ದನಿಗೆಯ್ವ
ಹೊಂಗ[೨೬][ರಿ][೨೬]ಹೊರಜೆಗಳಿಂದೆ
ಸಿಂಗರಿಸಿದ ಪಟ್ಟದಾನೆಯನೇರಿದ
ನಂಗಜರೂಪ ಚಿಕ್ಕೇಂದ್ರ ॥೧೯॥

ಅರಸಿಯರಂದಣಗಳನೇರಲು ಸಡ
ಗರಿಸುತೆ ಸಖಿಯರ ತಂಡ
ಪರಿಪರಿಯೊಳಿಗಗೆಯ್ವೆಳವೆಂಗಳ
ನೆರವಿ ಕಂಗೊಳಿಸಿತಂತಾಗ ॥೨೦॥

ಪಿಡಿದ ಬೆತ್ತಮನೆತ್ತಿ ಕಂಚುಕಿಯರು ಮುಂ
ಗಡೆಯೊಳಿಟ್ಟಣಿಪ ಮಂದಿಯನು
ಗಡಬಡಿಸುತ ತೊಲಗಿಸಲರಸಿಯರ ವಂ
ಗಡದೊಳರಸ ತೆರಳಿದನು ॥೨೧॥

ಅರಸಿಯರಂದಣಗಳ ಸುತ್ತಿ ಮುತ್ತಿ ಪಂ
ಕರುಹದಳಾಯತಾಕ್ಷಿಯರು
ಚರಿಸುವ ಹೊನ್ನಪುತ್ಥಳಿಗಳೊಯೆನೆ ನಡೆ
ತರುತಿರ್ದರೇನ ಬಣ್ಣಿಪೆನು ॥೨೨॥

೨೫–೨೫ ವ (ಕ), ೨೬–೨೬ ರೆ (ತ,ಕ).

ವೃತ್ತಪಯೋಧರಬಿಂಬಾಧರ ಸೊಂಪು
ವೆತ್ತಿಹ ಕಂಬುಕಂಧರರದ
ಚಿತ್ತಜನಂ[೨೭][ಕ][೨೭]ದಾನೆಗಳೆನಿಸುವ ಗಾಡಿ
ಕಾರ್ತಿಯರಡಿಯಿಟ್ಟರೊಲಿದು ॥೨೩॥

ನೋಟಕರೆದೆಗಂ[೨೮][ಗ][೨೮]ಜನ ಹೂಗಣೆಗಳ
ನಾಟಿಪ ನಟನೆದೋರಿಸುತೆ
ತಾಟಂಕ ಗಂಡಮಂಡಲವನಂಡಲೆಯಲು
ಮೀಟು ಜವ್ವನೆಯರೆಯ್ದಿದರು ॥೨೪॥

ವಿಳಸಿತ ಪದತಳ ರುಚಿಯಿಂದೆ ಬದಿ ಕೆಂ
ಬೆಳಗುವಡೆಯೆ ಗಮಿಸುವರು
ತಳಿರಡಿಗಳ ಕೆಂದಾವರೆಯಡಿಗಳ
ತೊಳಪ ಕೇಸ[೨೯][ಡಿ][೨೯]ಯ ತನ್ವಿಯರು ॥೨೫॥

ಅಡಿಗಡಿಗಿಂಚರಗುಡೆ ಮಣಿನೂಪುರ
ವೊಡನೆ ಪೊಂದೊಡರುಲಿಪೆಸೆಯೆ
ನಡೆತರುತಿಹರು ಮೆಲ್ನಡೆಯಾನೆನಡೆಯಂಚೆ
ನಡೆಯ ಕಟ್ಟಾಣಿವೆಣ್ಣುಗಳು ॥೨೬॥

ಇಡುವಣೆಯಿಂದೆ ರಂಜಿಪ[೩೦][ನಿ][೩೦]ರಿವಿಡಿದೊ
[೩೧][ಳ್ಳು][೩೧]ಡೆಯೊಪ್ಪಲೆ[೩೨]ಯ್ತರು[೩೨]ತಿಹರು
ಕಡುಗಾಡಿವಡೆದು ಕಂಗೊಳಿಪ ನುಣ್ದೊಡೆ ಬಾಳೆ
ದೊಡೆ ಬಟ್ಟದೊಡೆಯ ಬಾಲೆಯರು ॥೨೭॥

ಮಿಡಿ[೩೩][ದೊಡೊಡೆವ][೩೩]ವೋಲು[೩೪][ಪೊಂಗಿ][೩೪] ಮಿರುಪ ಪೊಂ
ಗೊಡ ಮೊಲೆಗಳ ಬಿಣ್ಪಿಗೊಲೆವ
ಬಡನಡುವಿನ ಸೆಳೆನಡುವಿನುಂಗರವಿಡಿ
ನಡುವಿನಬಲೆಯರೆಯ್ತಹರು ॥೨೮॥

೨೭–೨೭ ತ (ತ,ಕ). ೨೮–೨೮ ಗೆ (ತ,ಕ). ೨೯–೨೯ ರಿ (ತ,ಕ). ೩೦–೩೦ ಗಿ (ತ,ಕ). ೩೧–೩೧ ಳು (ತ,ಕ). ೩೨–೩೨ ಯರೂ(ಕ) ೩೩–೩೩ ದದೊಡೆದ (ತ,ಕ). ೩೪–೩೪ ಪೋಗಿ (ತ,ಕ).

ಬಗೆದು ನಿಟ್ಟಿ[೩೫][ಸಿ][೩೫] ನಿ[೩೬][ಲ್ತ][೩೬]ರ ಕಣ್ಮನಗಳ
ಮಿಗೆ ಬಂದಿಗೊಳಿಸುತೆಯ್ತಹರು
ಸೊಗಯಿಪ ಬಟ್ಟಮೊಲೆಯ ನೆಲೆಮೊಲೆಯ ಪೊಂ
ಬೊಗರಿಮೊಲೆಯ ಲಲನೆಯರು ॥೨೯॥

ಕಿರುನಗೆಯೊಳು ಸುಲಿಪಲ್ಲಮಿರುಪುಗೂಡಿ
ಪೊರಸೂಸಲೆಯ್ತರುತಿಹರು
ಮಿರುಗುವ ಮುದ್ದುಮೊಗದ ನಗೆಮೊಗದ
ನೆರೆವೆರೆಮೊಗದ ನೀರೆಯರು ॥೩೦॥

ಬೆರಗುವಡೆದು ನೋಳ್ಪರೆದೆಗಲರಂಬಿನ
ಬಿರು[೩೭][ಬ][೩೭]ಗರೆವುತೆಯ್ತಹರು
ತುರುಗೆವೆಗಣ್ಣ ತಾವರೆಗಣ್ಣ ಬೆದರಿದ
ಮರಿವುಲ್ಲೆಗಣ್ಣ ಪೆಣ್ಣುಗಳು ॥೩೧॥

ನಾರಿಜವ್ವನಸೊಕ್ಕುಗಂಪಿಗೆ ಗಡಣಿಸಿ
ಪರಮೆಯ್ಯೆತರಲೆಯ್ತಹರು
ನಿರಿಗುರುಳಿನ ನಿಡಿಗುರುಳಿನ ಸೊಗಯಿಪ
ಮರಿದುಂಬಿಗುರುಳ ನಾರಿಯರು ॥೩೨॥

ಮುತ್ತಿನ ಬಟ್ಟ ಮೂಗುತಿ ತೊಳಗುವ ಬಟ್ಟ
ಮುತ್ತಿನ ಹತ್ತೆಗಟ್ಟೆಸೆವ
ವೃತ್ತಕುಚದ ನೀಲಕಚದ ಮೋಹಿನಿಯರ
ಮೊತ್ತ ನಡೆದುದು ಮೋಹರಿಸಿ ॥೩೩॥

ತೋರಹಾರ ಬಾಹುಪೂರದ ಮಣಿಮಂ
ಜೀರದ ರತ್ನಮೇಖಲೆಯ
ಹೀರಮುದ್ರಿಕೆ ಹೀರಾವಳಿ ಕಡಗದ
ನಾರಿಯರಡಿಯಿಟ್ಟರೊಲಿದು ॥೩೪॥

೩೫–೩೫ ಪ (ತ,ಕ). ೩೬–೩೬ ಲ (ತ,ಕ). ೩೭–೩೭ ವ (ತ,ಕ).

ತೊಳಗುವ ಮುತ್ತಿನೋಲೆಯ ಮಣಿಗೊಪ್ಪಿನ
ವಿಳಸಿತಕಂಠಭೂಷಣದ
ತೊಳಪ ರನ್ನದ ತೋಳಬಳೆ ಹೊನ್ನಬಳೆಗಳ
ಲಲನೆಯರಡಿಯಿಟ್ಟರೊಲಿದು ॥೩೫॥

ಕತ್ತುರಿ ತಿಲಕದ ಕುಂಕುಮದಂಪಿನ
ಮೆತ್ತಿದ ಯಕ್ಷಕರ್ದಮದ
ಬಿತ್ತರಿಸಿದ ಚೆಲ್ವ ಮಕರಿಕಾ ಪತ್ರದ
ವೃತ್ತಕುಚೆಯರು ನಡೆದರು ॥೩೬॥

[೩೮]ಪ[೩೮]ಳಿಯ ಪಟ್ಟೆಯ ಚೀನಿಯ ಚಂದ್ರಗಾವಿಯ
ತೊಳಪ ಜೀಬಿಯ ಬಣ್ಣ ಬಗೆಯ
ನಿಲುವು ಬೊಂಬೆಯ ಬರಹದ ಸೀರೆಯನುಟ್ಟು
ಲಲನೆಯರಡಿಯಿಟ್ಟರೊಲಿದು ॥೩೭॥

ಸುರಪತಿ ಸುರಸತಿಯರ ನೆರವಿಯೊಳು ಭಾ
ಸುರತರ ವನಕೇಳಿಗೊಲಿದು
ಹರುಷದೊಳಾನೆಯನೇರಡಿಯಿಡುವಂ
ತಿರೆ ಚಿಕ್ಕೇಂದ್ರನೆಯ್ತಂದ ॥೩೮॥

ಬಂದು ವನೋಪ[೩೯][ಸ][೩೯]ರದೊಳರಸಾನೆಯ
ನಂದಣನರಸಿಯರೆಲ್ಲ
ಅಂದದಿಂದಿಳಿದು ಮೆಲ್ಲಡಿಯಿಟ್ಟು ಸಡಗರ
ದಿಂದೆ ಬನವನೊಳಪೊಗಲು ॥೩೯॥

ತಳಿರೆ ತೋರಣ ಪಿಕರವ ಕಹಳಾರವ
ಗಿಳಿಯ ನಲ್ನುಡಿ ನುತಿಯಾಗೆ
ನಲಿದು ವಸಂತ[೪೦][ನಿ][೪೦]ದಿರುಗೊಳುತಿರೆ ನೃಪ
ನೊಲಿದಡಿಯಿಟ್ಟ ಬನದೊಳು ॥೪೦॥

೩೮–೩೮ ವಿ (ಕ). ೩೯–೩೯ ಕಾ (ತ,ಕ).೪೦–೪೦ ಗಿ (ತ,ಕ).

ಎಲರ ತಿಟ್ಟಕೆ ನೃಪತಿಯ ಮೇಲೆ ಬೀಳ್ವ ಕ
ಮ್ಮಲರು ಚೆಲ್ವೊಡಲಾಂತೆಸೆವ
ಅಲರಂಬನಿವನೆಂದು ಬನದೇವಿ ಕುಸುಮಾಂ
ಜಲಿಗೈವಳೆನಲೊಪ್ಪಿಹವು ॥೪೧॥

ಅರಸಿಯರೊಡನೆ ಚಿಕ್ಕೇಂದ್ರನೆಯ್ತರಲಲ್ಲಿ
ಪರಿಪಕ್ವಫಲದಿ ಕಂಗೊಳಿಪ
ಪರಿಮಳಿಸುವ ನವಕುಸುಮದಿಂದೆಸೆದಿಹ
ಮರಗಿಡಬಳ್ಳಿ ರಂಜಿಪವು ॥೪೨॥

ನಿಂಬೆ[೪೧][ಹೇರಿ][೪೧]ಳೆ ಕಿತ್ತೀಳೆಯುತ್ತತ್ತೆ ದಾ
ಳಿಂಬ ಪಲಸು ಸುರಹೊನ್ನೆ
ಜಂಬೀರ ಸಾಲತಮಾಲ ತಿಲಕವಕು
ಳಂ ಬಾಳೆ ಪೂಗ[೪೨][ವೊ][೪೨]ಪ್ಪಿಹವು ॥೪೩॥

ಸುರಗಿ ಸಂಪಗೆಯಿರುವಂತಿಗೆಯಸುಗೆ ಪಾ
ದರಿ ಪಡ್ಡಳಿ ಪಚ್ಚೆ ದವನ
ಮರುಗ ಮಲ್ಲಿಗೆ ಮೊಲ್ಲೆ ಗ[೪೩][ರಿವೂ][೪೩] ಗೋರಂಟೆ
ಇರುತಿಹವೇನ ಬಣ್ಣಿಪೆನು ॥೪೪॥

ಪಸುರ್ಗಾಯಿಂದೆ ಕವುಂಗು ಚೆಂಗಾಯಿಂ
ದೆಸೆದಿಹ ತೆಂಗು ಖರ್ಜೂರ
ನಸುದೋ[೪೪][ರೆ][೪೪]ಯಿಂ ತನಿವಣ್ಣಿಂದೆ ಮಾವು ರಂ
ಜಿಸುವವು ಬನದೊಳೆಲ್ಲೆಡೆಯು ॥೪೫॥

ಜಲಕೇಳಿಯನಾಡುವ[೪೫] ಜವ್ವನೆಯರ
ಮೊಲೆಗೆ ಮೆತ್ತಿದ ಕುಂಕುಮವ
ಕಲಸಿ ಪರಿವ ನೀರುಂಡು ತೆಂಗಲ್ಲಿ ಕಂ
ಗೊಳಿಪುವು ಚೆಂದೆಂಗೆನಿಸಿ ॥೪೬॥

೪೧-೪೧ ಯೆರು (ತ,ಕ), ೪೨-೪೨ ಚೊ(ತ,ಕ). ೪೩-೪೩ ರೆವು (ತ,ಕ). ೪೪-೪೪ X (ತ,ಕ). ೪೫+ರ(ತ).

ಅಂಬುವನೆರೆದಂಬುದಕಿನಿರಸವನು
ತುಂಬಿ ಪೊಂಗೊಡ ಗಡಣದೊಳು
ತಾಂ ಬಹುಕರವೆತ್ತಿ ನೆಲವೆಣ್ಣೆತ್ತಪ
ಳೆಂಬಂತೆ ತೆಂಗೆಸೆದಿಹವು ॥೪೭॥

ತನಿಗಂಪ ಸೂಸುವ ಪೊಂಬಾಳೆ ಪಸುರ್ಗಾಯ
ಗೊನೆಯಿಂದೆ[೪೬][ಪೂ][೪೬]ಗಾಗಮವು
ಇನಿರಸವಾಂತಿಡಿಕಿರಿದಿಹ ಪಣ್ಣ ಬಿ
ಣ್ಗೊನೆಯಿಂದೆ ಬಾಳೆ ರಂಜಿಪವು ॥೪೮॥

ವನವಧು ಮಧುವ ಸುಧಾರಮಣನ ಸೇ
ಚನಕೆಂದು ಸುರಭಿವಾರಿಯನು
ಕನಕಕಳಶತತಿಯೊಳು ತುಂಬಿಕೊಂಡಿಹ
ಳೆನೆ ಮಾದಳವೆಸೆದಿಹವು ॥೪೯॥

ತಿಳಿವೊಡ[೪೭][ಶೋ][೪೭]ಕಾಗಮ ಗಡ ತಳಿರಲ
ರ್ದಳೆದುದರಿಂ ಫಲವೇನು
ಪಳಿದದ ನಗುವವೋಲರೆವಿರಿದೆಸೆದು
ಕಂಗೊಳಿಪುವು ರಸದಾಳಿಂಬ ॥೫೦॥

ತರುಣಿಯ ಪದತಳ ಸೋಂಕಲು ಪುಳಕಾಂ
ಕುರಮ[೪೮][ನಾ][೪೮]ನದ ಪಾಮರನು
ಮರದಿಂದೆ ಕಡೆಯೆಂದು ತೋರ್ಪವೋಲಸುಗೆಯಂ
ಕುರಿಪುವಂಗನೆಯರೊ[೪೯][ದೆ][೪೯]ಯಲು ॥೫೧॥

ಗಿಳಿದೇರನಾಣತಿಯಿಂದೆ ಬಸಂತನು
ಮುಳಿದಗಲಿದ ಕಾದಲರ
ತಳುವದೆ ಚುರ್ಚುವ ಕೆಚ್ಚನೆಯಸುಗೆ ಕಂ
ಗೊಳಿಪುವು ಚಂದಳಿರಿಂದೆ ॥೫೨॥

೪೬–೪೬ ಮ (ತ,ಕ).೪೭–೪೭ ರೋ (ತ,ಕ). ೪೮–೪೮ ಮವ (ತ,ಕ). ೪೯–೪೯ ಡೆ (ತ,ಕ).

ಮುಗುಳಂಬನೆಂಬ ಪೆಬ್ಬುಲಿ ವಿರಹಿಗಳೆಂಬ
ಮಿಗವ ಪೊಯ್ದು ಸೀಳಲೊಡನೆ
ಉಗುವ ರಕ್ತದೊಳೆಸೆವುಗುರ್ಗಳೊಯೆನಿಪುವು
ಮುಗುಳ ತೊಡಂಬೆ ಮೊತ್ತದೊಳು ॥೫೩॥

ತರುವೆರಿಂಬ ಪಚ್ಚೆಯ ಪಾತ್ರೆಯೊಳಗೆ ವನ
ತರುಣಿ ಲತಾಂತದೀಪವನು
ಇರಿಸಿಯಂಗಜಗೆತ್ತುವಾರತಿಯೋಯೆನೆ
ಪರಿವಡೆದುದು ಚಂಪಕವು ॥೫೪॥

ಮೊನಸಿಯಂಕುರಿಸಿ ತಳಿರ್ತು ಪೊಂದಳಿರಾಗಿ
ನನೆವೆತ್ತು ಹೂತು ಕಾತೆಯ್ದೆ
ತನಿವಣ್ಣ ಬಿಣ್ಪೊಗ್ಗನೆಯಿಂದೆಸೆವಿಮ್ಮಾ
ವಿನ ಮರನೆದೆಗೊಳಿಸಿದುವು ॥೫೫॥

ಅಳಿಗಳೆನಿಪ ಗಾಯಕರಿಂದೆ ಮತ್ತಕೋ
ಕಿಳನೆಂಬ ಪ[೫೦][ಡಿ][೫೦]ಯ[೫೧][ರ][೫೧]ರಿಂದೆ
ಗಿಳಿಗಳೆಂಬೋದುಗಾರರಿನಂಗಜಾಸ್ಥಾನ
[೫೨][ನಿಳ][೫೨]ಯಮೆನಿಪುದ ಮಾಮರನು ॥೫೬॥

ಅಲರ್ವಂತಿ [೫೩]ಬಿ[೫೩]ಲು ಭವರಂ ತಿರು ಸೊವಡಂಬು
ಗಿಳಿ ದಳಮೊಪ್ಪಿ ಪರ್ಬಿರ್ಪ
ಎಳೆವಳ್ಳಿ ತಾ[೫೪]ನಿಚ್ಚೆ[೫೪]ಗಾರ್ತಿಯಾಗಿರೆ ಸುಗ್ಗಿ
ಗೆಳೆಯನೆನಿಪುದು ಮಾಮರನು ॥೫೭॥

ಕಳಕಂಠದಿಕ್ಕೆ ತುಂಬಿಗಳಿಂಬರಗಿಳಿ
ಗಳ ದೊಂಬಿವನೆಯೆನಲೆಸೆದು
ನಳನಳಿಪೆಳದಳಿರಿಂದಲರಿಂ ಪಕ್ವ
ಫಲದಿಂದೆ ನಿರಿಗವೊಪ್ಪಿಹುದು ॥೫೮॥

೫೦–೫೦ ದಿ (ತ,ಕ). ೫೧–೫೧ ಳ (ತ,ಕ). ೫೨–೫೨ ಗಿಳಿ (ತ,ಕ). ೫೩–೫೩ ಬ (ಕ). ೫೪–೫೪ ದ (ಕ).

ನೆಳಲಿದೆ ಪರಿಪಕ್ವಫಲಮಿದೆ ಬಾರೆಂದು
ಗಿಳಿನುಡಿಯಿಂದೆ ದಾರಿಗರ
ತಳಿರ ಕೈಸನ್ನೆಯಿಂ ಕರೆವಂತೆ ಮಾವು ಕಂ
ಗೊಳಿಸಿದವಾ ಬನದೊಳಗೆ ॥೫೯॥

ಕುಸುಮಜಾತಿಯೊಳೆಲ್ಲ ಜಾತಿಯೆನಿಸಿ ರಂ
ಜಿಸುವ ಕುಸುಮಸಮಯದೊಳು
ನಸಿದು ವಿಜಾತಿಯಾಯ್ತೆಂ[೫೫]ದದ[೫೫] ನಗುವಂ
ತೆಸೆದು ಮಲ್ಲಿಗೆಯಲರಿಹವು ॥೬೦॥

ನಿಲ್ಲದೆ ದುರುದಿಂಬಿತನದಿಂದಳಿಯಾಸೆ
ಯಲ್ಲಿ ತಿರುಗುವಳಿಗಳನು
ಮಲ್ಲಿಗೆ ಕಂಪ ಬೀರುತೆ ಬಿರಿವುವು ತ
ಮ್ಮಲ್ಲಿಗೊಸೆದು ಕರೆವಂತೆ ॥೬೧॥

[೫೬][ನಸುಬಿರಿದಿಹ][೫೬]ಮಲ್ಲಿಗೆಯಲರೊಳು ಮೋ
ಹಿ[೫೭][ಸಿ][೫೭]ಮಧುಕರನೆರಗಿರಲು
ಎಸೆದುದು ಬಿರಯಿಗಳಸುಗೊಂಬ ಮದನನ
ಕುಸುಮಶಿಳೀಮುಖಮೆನಲು ॥೬೨॥

ಮುಗುಳ ಮೇಲಾಡಿ ಬಲ್ಮುಗುಳ ಮುದ್ದಿಸಿ ಬಿರಿ
ಮುಗುಳ ಬಂದಪ್ಪಿ ಚುಂಬಿಸುತೆ
ಬಗೆವೆಚ್ಚಿ ಜಿನುಗಿ ಝೇಂಕಾರವ ಮಾಡಿ ಮ
ಲ್ಲಿಗೆಯೊಳೊಪ್ಪಿದುದು ಮದಾಳಿ ॥೬೩॥

ತಿಳಿನೀರಿಂದೆ ತಾವರೆಯಿಂದೆ ಕುಮುದದಿ
ನಳಿಗಳಿಂದೆಣೆವಕ್ಕಿಯಿಂದೆ
ಕಳಹಂಸೆಮಿಥುನಂಗಳಿಂದೆ[೫೮][ರ್ದೆ][೫೮]ವೆತ್ತು ಕಂ
ಗೊಳಿ[೫೯][ಸಿತಾ ತಿಳಿ][೫೯]ಕಾಸಾರ ॥೬೪॥

೫೫–೫೫ ದು (ತ,ಕ), ೫೬–೫೬ ನಸದು ಬಿದ್ದಿಹ (ತ,ಕ), ೫೭–೫೭ ಸು (ತ,ಕ).೫೮–೫೮ ಳ್ದು (ತ,ಕ).
೫೯–೫೯ ಪತಂತಳಿ (ತ,ಕ).

ಅಳಿಕುಂತಳವಂಭೋರುಹವಾನನ
ವೆಳೆವಾಳೆಗಣ್ಣೆಣೆವಕ್ಕಿ
ಮೊಲೆವಳ್ಳಿ ತ್ರಿವಳಿ ಸುಳಿಯೆ ಪೊಕ್ಕುಳಾಗೆ ಕಂ
ಗೊಳಿಸಿತಂಗನೆಯಂತಾ ಕೊಳನು ॥೬೫॥

ದಳಿತಾಂಭೋರುಹದೊಳು ತಮ್ಮ ಮ[೬೦][ರಿ][೬೦]ಗಳ
ಮಲಗಿಸಿ ಪುಳಿನತಳದೊಳು
ಸುಳಿದಾಡಿ[೬೧][ಬಿ][೬೧]ನದದೆ ಸುಸಿಲೆ[೬೨][ಸ][೬೨]ಗುತ್ತಿಹ
ಕಳಹಂಸಮಿಥುನವಲ್ಲಿಹವು ॥೬೬॥

ಕೊಳದೊಳು ನೀರಾಟಮನಾಡಿ ತಾವರೆ
ಯಲರ್ವುಡಿಯಂ ಚೆಲ್ಲಿಕೊಳುತೆ
ನಳಿನಸಂಕುಲವನು ಸೆಳೆವುತೆ ಮಾರುತ
ಸುಳಿದುದಂಗಜ[೬೩][ಗಜ][೬೩]ಮೆನಲು ॥೬೭॥

ಕಳ[೬೪][ರವದಿ][೬೪]ಂದಳಿಕುಳವಳಿಕುಳದಿಂದೆ
ದಳಿತಾಂಬುಜವಂಬುಜದಿ
ತಿಳಿಗೊಳವಾ ತಿಳಿಗೊಳದತ್ತ[೬೫][ಣಿಂದೆದಂ][೬೫]
ಬೆಲರೆದೆಗೊಂಡುದು ನೃಪನ ॥೬೮॥

ಕರ್ಪೂರ ಕುಂಕುಮ ಕತ್ತುರಿ ಕದಡು ತೀ
ವಿಪ್ಪ ಪೊಂಗೊಪ್ಪರಿಗೆಗಳು
ಒಪ್ಪುವ ತಾವರೆಗೊಳನ ತಡಿಯೊಳೆಸೆ
ದಿರ್ಪುವು ಮಿಗೆ ಬಗೆವಂದು ॥೬೯॥

ಇಂತೆದೆಗೊಳಿಸುವ ಶೀತಳತಳದೊಳ
ತ್ಯಂತ ವಿಚಿತ್ರರಚನೆಯ
ಅಂತು ವಿಲಾಸಮಂಟಪವೆಸೆದುದು ಶಶಿ
ಕಾಂತದ ವೇದಿಕಾಗ್ರದೊಳು ॥೭೦॥

೬೦–೬೦ ರ (ತ,ಕ). ೬೧–೬೧ ಬ (ತ,ಕ). ೬೨–೬೨ ಸಾ (ತ,ಕ). ೬೩–೬೩ X (ತ,ಕ). ೬೪–೬೪ ದುವೆಯಿಂ (ತ,ಕ). ೬೫–೬೫ ಏಂತಿದು (ತ,ಕ).

ಸೊಗಸುವಡೆದ ನ[೬೬][ಳಿನ][೬೬]ದ [೬೭]ಕೇ[೬೭]ರುಹೊಂಗೇ
ದಗೆ ಹೂವಿನೆಸಳ [೬೮][ಮೇ][೬೮]ಲ್ಪೊದಕೆ
ಮಗಮಗಿಸುವ ಪಚ್ಚದೆನೆ ಲೋವೆಯೊಪ್ಪಿರೆ
ಬಗೆವಂದುದಾ ಮಂಟಪವು ॥೭೧॥

ಮುಡಿವಾಳದ ನಿಡುಜಲ್ಲಿ ಹೊಂಬಾಳೆಗ
ಳಿಡಿಕಿರಿದೆಸೆವ ಸರೋಜ
ಕಡುಗಂಪನೀವ ಸಂಪಗೆ ಮಲ್ಲಿಗೆಯ ಕು
ಚ್ಚಿಡವಿಡದಲ್ಲಿ ರಂಜಿಪುವು ॥೭೨॥

ಸಂದಣಿಗೊಳುತೆ ಜಿನುಗುವಳಿಯಿಂಚರ
ದಿಂದೆ ಮೋಹಿಸುವ ಮಂಟಪವು
ಕಂದರ್ಪದೇವನ ಪುಷ್ಪಕವೆನೆ ಬಗೆ
ವಂದು ಕಂಗೊಳಿಸಿತು ನೃಪಗೆ ॥೭೩॥

ಆ ಮಂಟಪದೊಳಲರಪಾಸಿನ ಮೇಲೆ
ಭೂಮಿಪನೊಲಿದು ಮಂಡಿಸಲು
ಪ್ರೇಮದಿ ಪೂದಿರಿವುದಕಡಿಯಿಟ್ಟರು
ತಾಮರಸಾಕ್ಷಿಯರೊಲಿದು ॥೭೪॥

[೬೯][ಮೊ][೬೯]ಲೆ ಕದಕದಿಸೆ ಮಂ[೭೦][ಜೀ][೭೦]ರವಿಂಚರವೀಯೆ
[೭೧][ಕ][೭೧]ಲಕಾಂಚಿಯ ದಾಮವುಲಿಯೆ
ಸೆಳೆನಡು ಸೆಳೆಯೆ ಹೂವಿನ ತರುಲತೆಯೊಳು
ಲಲನೆಯರಡಿಯಿಟ್ಟರೊಲಿದು ॥೭೫॥

ವಿಲಸಿತ ತನುವೆಳವಳ್ಳಿ ಪಯೋಧರ
ವಲರತೊಡಂಬೆಯಾಗೆಸೆಯೆ
ಸುಳಿವ ನೂತನಲತೆಗಳೊಯೆನೆ ವನದೊಳು
ಸುಳಿದರಂಬುಜನಯನೆಯರು ॥೭೬॥

೬೬–೬೬ ಳದ (ತ,ಕ). ೬೭–೬೭ ತೆ (ಕ). ೬೮–೬೮ ಮೊ (ತ,ಕ). ೬೯–೬೯ ಮೆ (ತ,ಕ). ೭೦–೭೦ ಜ (ತ,ಕ), ೭೧–೭೧ ತ (ತ,ಕ).

ಇಳೆಯೊಳುಂಗುಟವೂರಿ ವಳಿಗಳಳಿಯೆ ನೇ[೨೨][ಲ್ವ][೨೨]
ಸೆಳೆಗೊಂಬ ನೆಟ್ಟಿಸಿ ಪಿಡಿದು
ತೊಳಲುತ ತೋಳಮೊದಲು ತಿರಿದಳು ಕೋ
ಮಳೆ ಕೋಮಳ ಚಂಪಕವ ॥೭೭॥

ಸುದತಿಯೊರ್ವಳು ಬಿಂಕದೊಳಸುಗೆಯ ತನ್ನ
ಮೃದುತರ[೨೩][ಪ][೨೩]ದತಳದಿಂದೆ
ಒದೆಯಲಂಕುರಿಪ ನವಾಂಕುರಮಂ ನೋಡಿ
ಒದೆದು ತಿರಿದಳೊಲವಿಂದೆ ॥೭೮॥

ಅರಸು ಚಿಕ್ಕೇಂದ್ರನುದ್ಧತನಾದ ಪುನ್ನಾಗ
ನಿರೆ ನೀನು ನಡತೆವಡೆಯದೆ
ಮರವಟ್ಟು ಪುನ್ನಾಗವೆಂತಾದೆಯೆಂದದ
ಇರಲು ತಿರಿದಳೊರ್ವ ಬನಿತೆ ॥೭೯॥

ಪಾದರಮಿಲ್ಲದೆ ಪಾದರಿಯೆಂದೆಂಬು
ದಾದುದು ಶಾಬ್ದಿಕರಿಂದೆ
ಆದೊಡೂಣಯವಿಲ್ಲವೆಂದೆನುತೊರ್ವ ತ
ಳೋದರಿ ತಿರಿದಳಾಯಲರ ॥೮೦॥

ಕಿರುದಾದಡೂಣಯವಲ್ತು ಸದ್ಗುಣವಿರ
ಲರಿವವರಿಂ ಸೇವ್ಯಮೆಂದು
ನೆರೆವೆರೆಮೊಗದ ನಿತಂಬಿನಿ ಮರನೇರಿ
ತಿರಿದಳು ಹೊಂಗೇದಗೆಯ ॥೮೧॥

ರಾಜತೇಜದೊಳಿಪ್ಪರಸಿಯ ಪದನಾಂ
ಭೋಜಕೆಣೆಯೆ ನೀವೆನುತೆ
ರಾಜವದನೆ ಷಂಡಮನುಡು[೨೪][ಗ][೨೪]ಸುತೆ ಸ
ರೋಜವ ಪಿಡಿದೆತ್ತಿದಳು ॥೮೨॥

೨೨-೨೨ ಳ್ವ (ತ,ಕ) ೨೩-೨೩ ಪಿ (ತ,ಕ). ೨೪-೨೪ ನಿ (ತ,ಕ).

ಕುವಲಯಹಿತನಾದುದರಿಂದೆ ಸಕಳಂಕ
ಗವತರಿಸಿತು ರಾಜತ್ವ
ಕುವಲಯಕೆಣೆಯಹ ಕುಸುಮ[೭೫][ವಿ][೭೫]ಲ್ಲೆನುತೊರ್ವ
ಯುವತಿಯಲರನೆತ್ತಿದಳು ॥೮೩॥

ಕುಂದದ ಕುಸುಮಕ್ಕೆ ಮೊ[೭೬][ಲ್ಲೆ][೭೬]ಯೆನಿಪ ಪೆಸ
ರೊಂದಿದುದಚ್ಚರಿಯೆನುತೆ
ಕುಂದಕುಟ್ಮಳ ದಂತೆ ತಿರಿದಳು ಮಿಗೆ ಬಗೆ
ವಂದ ಕುಂದದ ಕುಸುಮವನು ॥೮೪॥

ಮಲ್ಲಿಗೆಯನು ತಿರಿವೆಡೆಯೊಳು ಚೆಂದಳ
ದಲ್ಲಿ ಕೆಂಬೆಳಗುವಡೆಯಲು
ಪಲ್ಲವಾಧರೆ ನಗಿಸಿದಳಿದು [೭೭][ಮಾಯದ][೭೭]
ಮಲ್ಲಿಗೆಯೆಂದು ಜಾಣೆಯರ ॥೮೫॥

ನೆಲದೊಳೊಡವೆಯ ಮಡಗಿಕೊಂಡಿಹ ನೆಲ
ಕಲನ ಬಾಳುವೆಗೆ [೭೮][ಹಾ][೭೮]ರೆನು
ಕೊಳುವುದು ವಿಧಿಯೆಂದು ಮುಡಿವಾಳವನೊಬ್ಬ
ಲಲನೆ ತಾನಗಿದೆತ್ತಿದಳು ॥೮೬॥

ದವನವ ಕೊಯಿದು ಪಚ್ಚೆಯನುಡಿವುತೆ ಮರು
ಗವನುರೆ ಚಿವುಡುತಂತದನು
ನವಕದಳೀದಳದೊಳು ಪೊಟ್ಟ[೭೯][ಣ][೭೯]ಂಗಟ್ಟಿ
ಯುವತಿ ತಂದಿತ್ತಳು ನೃಪಗೆ ॥೮೭॥

ಬಿರಯಿಗಳಳ್ಳೆದೆಗಳನುರೆ ಬಿಕ್ಕನೆ
ಬಿರಿಯಿಪ ಕಂಪ ಬೀರುತ್ತೆ
ಅರೆವಿರಿದಚ್ಚಮಲ್ಲಿಗೆಯನೊರ್ವಳು ತಂ
ದರಸಗೆ ಕೈಗೊಳಿಸಿದಳು ॥೮೮॥

೭೫–೭೫ ದಿ (ಕ). ೭೬–೭೬ ಲೇ (ತ,ಕ). ೭೭–೭೭ ಮಯದೆ (ತ,ಕ). ೭೮–೭೮ ಹೋ (ಕ). ೭೯–೭೯ X(ತ,ಕ).

ಲೀಲೆಯಿಂ ಚಂದದೊಳನುಗೆಯ್ದು ಚಂಪಕ
ಮಾಲೆಯ ಚಿಕ್ಕಭೂಪತಿಗೆ
ನೀಲಕುಂತಳೆ ತಂದಿತ್ತಳು ಮಾತಿನ
ಮಾಲೆಯ ಕವಿಯನೇಳಿಸುತೆ ॥೮೯॥

ಮುಗುಳಂಬಗೆ ರತಿ ಕಣೆದೀವಿದ ಮೂ
ಡಿಗೆಯನೊಲಿದು ಕೊಡುವಂತೆ
ಮೃಗಮದಗಂಧಿ ತಂದಿತ್ತಳು ಹೊಂಗೇ
ದಗೆಯ ಚಿಕ್ಕೇಂದ್ರಗ್ರರ್ತಿಯಲಿ ॥೯೦॥

ರಾಜವದನೆ ತಂದಿತ್ತ ಮುಗಿದ ಸ
ರೋಜವನಲರ್ದ ಕೈರವವ
ಸೋಜಿಗವೆನೆ ಪಗಲೊಳು ವ{ಸುಧಾ]ರತಿ
ರಾಜ ಚಿಕ್ಕೇಂದ್ರ ಚಂದ್ರಮಗೆ ॥೯೧॥

ಅಲರ ತಂದಿತ್ತ ಲತಾಂಗಿಯರನು ನೃಪ
ತಿಲಕನೋಕುಳಿಯನಾಡೆನಲು
ಲಳಿಯೇರಿ ಲಗುಬಗೆಯಿಂದೆ ಬಸಂತಕೆ
ಜಲಜಾಕ್ಷಿಯರೆಯ್ದಿದರು ॥೯೨॥

ಉಟ್ಟು ಕಾಸೆಯ [೮೦][ನೆ][೮೦]ರೆ ಬಿಗಿದು ಕಟ್ಟಿದ ಮೊಲೆ
ಗಟ್ಟು [೮೧][ಮು][೮೧]ಡಿದ ರನ್ನದಂಡೆ
ದಿಟ್ಟಿಗೊಳಿಸುತಿರಲೋಕುಳಿಯಾಟಕೆ
ಕಟ್ಟಾಣಿವೆಂಗಳೆಯ್ದಿದರು ॥೯೩॥

ಎಣ್ಣೆಗಂಟಿನ ನಿಡುಜಡೆಯ ತೊಳಪ ತೊಂಡೆ
ವಣ್ಣನೇಳಿಪ ಚೆಂದುಟಿಯ
ಹೆಣ್ಣುಗಳಂಬುಕೇಳಿಗೆ ನಡೆದರು [೮೨][ಚೆಲ್ಲ][೮೨]
ಗಣ್ಣ ಬೆಳಗು ಬೀದಿವರಿಯೆ ॥೯೪॥

೮೦–೮೦ ನಿ (ತ,ಕ). ೮೧–೮೧ ವಿ (ತ,ಕ). ೮೨–೮೨ ಲ್ವೆ (ತ,ಕ).

ಬಡನಡುವಿನ ಬಟ್ಟಮೊಲೆಯ [೮೩][ತ್ರೆ][೮೩]ಳ್ಗದಪಿನ
ಕುಡಿತೆಗಂಗಳ ಪೆರೆನೊಸಲ
ಮಡದಿಯರೋಕುಳಿಯಾಟಕೆ ನಡೆದರು
ಪಿಡಿದ ಜೀರ್ಕೊಳವಿಗಳೆಸೆಯೆ ॥೯೫॥

ಸನ್ನೆಗೆಯ್ವುತೆ ಸಯ್ಯಾಟದ ಸರಸದ
ಪನ್ನತಿಕೆಯ ರವಳಿಯೊಳು
ಚೆನ್ನಪೊಂಗದ ಚೆಲ್ವಿನೊಲಪಿನೊಯ್ಯಾರದ
ಚೆನ್ನೆಯರಡಿಯಿಡುತಾಗ ॥೯೬॥

ಪಿಡಿದಂಡೆಯೊಳೋಕುಳಿಯ ತುಂಬುತೆ ತಮ್ಮ
ನಿಡಿದೋಳನೆತ್ತಿ ಬಿಂಕದೊಳು
ಒಡನೊರ್ವಳ ಮೇಲೊರ್ವಳು ಚೆಲ್ಲಿದ
ರುಡುಪತಿನಿಭ ವದನೆಯರು ॥೯೭॥

ಹೊನ್ನ ಕೊಪ್ಪರಿಗೆಯ ಕುಂಕುಮಗದಡನು
ರನ್ನದ ಜೀರ್ಕೊಳವಿಯೊಳು
ಬಿನ್ನಾಣದಿಂ ತುಂಬಿ ತೆಗೆದೊರ್ವಳ ಮೇಲೆ
ಬೆನ್ನಟ್ಟಿ ಬಿಡದೆ ಚಿಮ್ಮಿದಳು ॥೯೮॥

[೮೪][ತೊ][೮೪]ಳಗುವ ಫಣಿವೇಣಿಯ ಸೋಗೆದುರುಬಿನ
ಲಲನೆಯಂಬುಜವದನೆಯ[೮೫][ನು][೮೫]
ವಿಳಸಿತ ಚಂದ್ರವದನೆ ಜೀರ್ಕೊಳವಿಯೋ
ಕುಳಿಯಾಟದೊಳು ಗೆಲಿದಳು ॥೯೯॥

ಕರಿಗಮನೆಯ[೮೬][ನು][೮೬] ಕೇಸರಿ ಮಧ್ಯೆ ಬಿಂಬಾ
ಧರೆಯ ಮಂಜುಳ ಶುಕವಾಣಿ
ಕರದ ಪೊನ್ನಂಡೆಯ ಯಕ್ಷಕರ್ದಮದಿಂದೆ
ತೆರಳಿಸಿದರು ಬಿಂಕವನು ॥೧೦೦॥

೮೩–೮೩ ತೊ (ತ,ಕ). ೮೪–೮೪ ಮೊ (ತ,ಕ). ೮೫–೮೫ ರು (ತ,ಕ).೮೬–೮೬ ರು (ತ,ಕ).

ಕತ್ತುರಿಗದಡನು ಕನ್ನೈದಿಲೆಸಳೊಳು
ಮತ್ತ[೮೭][ಕಾ][೮೭]ಸಿನಿ ಪಿಡಿತಂದು
ಚಿತ್ತವಲ್ಲಭನ ಮೈಯೊಳು ಸೂಸಲು ಪುರು
ಷೋತ್ತಮನೆನಿಸಿದ ನೃಪತಿ ॥೧೦೧॥

ಮಮತೆಯೊಳರಸ ರಾಗಾಂಬುಜದಳದೆ ಕುಂ
ಕುಮರಸವನು ತುಂಬಿ ತಂದು
ಕಮಲವದನೆಯಂಗದೊಳು ಮಿಗೆ ಸೂಸಲು
[೮೮][ರ][೮೮]ಮೆಯೆನಲೆಸೆದಳಾ ರಾಣಿ ॥೧೦೨॥

ನಳಿನದಳಾಕ್ಷಿಯರೀ ತೆರದಿಂದೋ
ಕುಳಿಯನಾಡುತೆ ನಡೆತಂದು
ದಳಿತ ಕಮಳ ಶೀತಳಜಲದಿಂದೆದೆ
ಗೊಳಿಪ ಕೊಳನ ಸಾರಿದರು ॥೧೦೩॥

ಪಳುಕಿನ ಸೋಪಾನವನಿಳಿದೊಯ್ಯನೆ
ಜಲದೊಳಗಡಿಮಿಡಿಜಾನು
ತೊಳಗುವ ತೊಡೆ ಕಟಿ ನಟಿದು ಮುಳುಗೆ ತಿಳಿ
ಗೊಳನ ಪೊಕ್ಕರು ಲಲನೆಯರು ॥೧೦೪॥

ಅಳಕ[೮೯][ವಾರ][೮೯]ಡಿ ಮೊಗವಂಬುಜ ಕುಚಚಕ್ರ
ವಳಿ ತೆರೆ ಗಂಭೀರನಾಭಿ
ಸುಳಿಯೆನಲೆಸೆಯೆ ಪೊಕ್ಕರು ಸುದತಿಯರಾ
ಕೊಳದೊಳು ಕೊಳ ಪೊಗುವಂತೆ ॥೧೦೫॥

ಗಡಣಿಸಿ ಕೊಳದೊಳು ವಿಸಟಂಬರಿವು
ತೊಡನೆ ಮುಳುಗುತೇಳುತಲಿ
ದುಡುಮಿರಿವುತೆ ನೀರಾಟಮನಾಡಿದ
ರುಡುಪತಿನಿಭ ವದನೆಯರು ॥೧೦೬॥

೮೭–೮೭ ರಾ (ಕ).೮೮–೮೮ ದ (ತ,ಕ). ೮೯–೮೯ ಹಾಳ (ತ,ಕ)

ಜಲಕೇಳಿಯೊಳರಸಿಯರ ಕುಚಾಸ್ಯದ್ರು
ಗಳಕಕೆ ಕೋಕಸರೋಜ
ಜಲಚರಾಳಿಗಳೆಣೆವಡೆಯದತ್ತಿತ್ತಲು
ಚರಿಸಿದವೆನಲೇನನೆಂಬೆ ॥೧೦೭॥

ತಳಿರ್ದುಟಿಯೊಳು ಬೆಳ್ಪು ಕಣ್ಣೊಳು ಕೆಂಪು ಪೊಂ
[೯೦][ಪು][೯೦]ಳಿಮ್ಮೈಯೊಳೊಪ್ಪಿ ತೋರ್ಪನ್ನ
ಜಲಕೇಳಿಯನಾಡುತೆ ಸು[೯೧][ರ][೯೧]ತಾಂತ್ಯದ
ಲಲನೆಯರೆನಿಸಿದರವರು ॥೧೦೮॥

ನೀರಾಟದೊಳು ತಣಿದು ಸತಿಯರು ಕಾ
ಸಾರದೆ ಪೊರಮಡಲೊಗುವ
ವಾರಿ[೯೨][ಮದಾ][೯೨]ಂಬುವೊಲಿರೆ ಮದನನ ಮದ
ವಾರಣವೆನಲೊಪ್ಪಿದರು ॥೧೦೯॥

ಅಂಬುಕೇಳಿಯನುಳಿದಂಗನೆ ಹಿಣಿಲನು
ಹಿಂಬಾಗಿ ಹಿಳಿಯೆ ಮೊಲೆಗಳು
[೯೩][ಕುಂ][೯೩]ಬಿ ತೆಗೆದ ಕವಲಂಬಿನಂತಿರೆ ಚಾ
ಪಂಬೊಲೆಸೆದಳು ಮನ್ಮಥನ ॥೧೧೦॥

ಮೆಳೆಮನೆಯೊಳು ದಳಿಬಮ್[೯೪][ನು][೯೪]ಟ್ಟು ಮೃಗಮದ
ತಿಲಕಮನಿಟ್ಟೆಯ್ತರುವ
ಲಲನೆ ಮುಗಿಲ ಮರೆಗ[ಳೆ]ದೆಸೆವಿಂದುಮಂ
ಡಲವೆನಲೆದೆಗೊಳಿಸಿದಳು ॥೧೧೧॥

ವರತನುವಾಂತಲರಂಬಗೆ ರತಿಯೊಲಿ
ದರಳಮಾಲೆಯ ಸೂಡುವಂತೆ
ಅರಸ ಚಿಕ್ಕೇಂದ್ರನ ಸಿರಿಮುಡಿಯೊಳು ಕಮ್ಮ
ಲರಮಾಲೆಯ ಸೂಡಿದಳು ॥೧೧೨॥

೯೦-೯೦ ಪ (ತ,ಕ). ೯೧-೯೧ X(ತ,ಕ). ೯೨-೯೨ ಯದಾ (ತ), ಯ ದ (ಕ).೯೩-೯೩ ತುಂ (ತ,ಕ).
೯೪-೯೪ ನಿ (ತ,ಕ).

ಮೂಜಗವನು ಜಯಿಸಿದ ಹೂಗಣೆಗೆ ಮ
ನೋಜನಲರಮಾಲೆಯಿಂದೆ
ಪೂಜಿಪಂದದೊಳರಸಿಯ ಮುಡಿಗಲರನೊ
ಲ್ದಾ ಜನಪತಿ ಸೂಡಿದನು ॥೧೧೩॥

ಸರಸಿಜವದನದ ಕುಮುದನೇತ್ರದ ಭಾ
ಸುರ ಚಂಪಕನಾಸಿಕದ
ವರಕುಂದದಂತದ [೯೫][ಬಂದುಗೆಯಧರದ][೯೫]
ತರುಣಿಯರಲರ ಸೂಡಿದರು ॥೧೧೪॥

ಹೂವಿನ ಕಟಕ ಹೂವಿನ ಕರ್ಣಭೂಷಣ
ಹೂವಿನ ಕಂಠಮಾಲೆಯನು
ಹೂವಿನ ಸೂಡಂಗ ಮೊದಲಾದ ತೊಡಿಗೆಯ
ಭೂವರನಿಗೆ ತೊಡಿಸಿದರು ॥೧೧೫॥

ಅಲರ ಕಠಾರವ ಕೈಗೊಳಿಸುತೆ ಕ
ಮ್ಮಲರ ಚಾಮರವ ಢಾಳಿಸುತೆ
ಅಲರ ಸತ್ತಿಗೆಯನೆತ್ತಿದರು ಚಿಕ್ಕೇಂದ್ರಗೆ
ಲಲಿತಲತಾಂಗಿಯರೊಲಿದು ॥೧೧೬॥

ಇಂತು ವಸಂತಕೇಳಿಯೊಳು ವಿನೋದಿಸಿ
ಕಾಂತೆಯರೊಡನೆ ಚಿಕ್ಕೇಂದ್ರ
ಸಂತಸದಿಂ ಪೊತ್ತುಗಳೆದೊಯ್ಯನೆ ಬನ
ದಿಂ ತೆರಳಿದನೆಸಕದೊಳು ॥೧೧೭॥

ಮನಸಿಜರೂಪನಿಮ್ಮಡಿ ಚಿಕ್ಕಭೂಪತಿ
ಘನ ವಿಭವದೊಳೆಯ್ತಂದು
ಅನುನಯದಿಂದರಮನೆಯನೆಯ್ದಿದನಂ
ಗನೆಯರ ವಂಗಡವೆರಸಿ ॥೧೧೮॥

೯೫-೯೫ ಬಂಧುರಗಯಧರ (ತ,ಕ).

ನಳಿತೋಳು ಶಾಖೆ ಸೆಳ್ಳುಗುರಲದೊರ್ಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೧೧೯॥

[೯೬]**ಅಷ್ಟಮ ಸಂಧಿ ಸಂಪೂರ್ಣಂ**[೯೬]

❖❖

೯೬-೯೬ ಅಂತು ಸಂಧಿ ೮ ಕ್ಕಂ ಪದನು ೬೯೬ಕ್ಕಂ ಮಂಗಳ ಮಹಾಶ್ರೀ ಶ್ರೀ (ತ,ಕ).

ಸಂಧಿ : ೯

ಬೆಳುದಿಂಗಳು ನಾಡೆ ರಂಜಿಪುದು

ಶ್ರೀ ಗಿರಿಜಾಕುಚಕುಂಕಮಾಂಕಿತವಕ್ಷ
ಯೋಗಿಮಾನಸನಿಜಾವಾಸಾ
ಸಾಗರಶಯನಾರ್ಚಿತಪಾದ ಸಲಹು ಮ
ಹಾ ಗುರು ಚೆನ್ನಮಲ್ಲೇಶ ॥೧॥

ಅರಸು ಚಿಕ್ಕೇಂದ್ರ ಬಂದರಮನೆಯೊಳು ಪೊಕ್ಕು
ಪರಮಸಂತೋಷದಿಂದಿರಲು
ತರಣಿಯ ತೇರ ಕುದುರೆ ಸಾರಿದವಸ್ತ
ಗಿರಿಯ ಕೂಟಮ[೧][ನಾ][೧]ಗಳಿರದೆ ॥೨॥

ವರುಣದಿಗ್ವನಿತೆಯ ನಿಟಿಲದೊಳೊಪ್ಪುವ
ವರಸಿಂಧೂರಮೆಂದೆನಲು
ಪರಿವಡೆದುದು ಕೆಂಬೆಳಗ ತಳೆದು ದಿನ
ಕರಬಿಂಬವುಳಿ[೨][ದು][೨]ಮ್ಮೆಯನು ॥೩॥

ಬಿಸುಗದಿರನು ತೇಜಂಗೆಡಲೆಣೆವಕ್ಕಿ
ಬಿಸುಸುಯ್ದವು ದುಗುಡದೊಳು
ದೆಸೆಗೆಟ್ಟ ಮಿತ್ರನೆಸಕವಳಿಯಲು ಬೇ
ವಸದೊಳಿ[೩][ದ್ದವರು ಕೂಡಿದರು][೩] ॥೪॥

೧–೧ ನ (ತ,ಕ). ೨–೨ ದೊ(ತ,ಕ). ೩–೩ ದಜ್‌ ಕೂಡಿದವರು (ತ,ಕ).

ಇನಬಿಂಬವಳಿದು೪[ದು]೪ ಚಿಕ್ಕೇಂದ್ರ೫[ನ]೫ ಜಯ
ವನಿತೆಗೆ ತೊಡಿಗೆಗೆಯ್ದುದಕೆ
ಕನಕ೬[ಘ]೬ಟ್ಟಿಯ ಕಾಸಿ ೭[ಕ]೭ಲಾದನು
ವನಧಿಯೊಳದ್ದಿದನೆನಲು ॥೫॥

ಅಂಬರಪ೮[ದ]೮ದೋ೯[ಳ]೯ರ್ಯಮ೧೦[ನಂ ತಮ]೧೦ಕಾಲ
ವೆಂಬ ಕುಂಜರ ಸೊಕ್ಕಿ ಕೆಡಪಿ
ತಾಂ ಬಿಡದೊಡೆದುಳಿಯಲು ೧೧[ಪೊ]೧೧ಯ್ದ ರಕ್ತವಿ
ದೆಂಬಂತೆ ಸಂಜೆಗೆಂಪೆಸೆಗು೧೨[೦]೧೨ ॥೬॥

ಆಗಸದೊಳು ಮೀರಿದ ಕತ್ತಲೆಯೆಂಬ
ಡೇಗೆಗೆ ಕಾಲ ಕಿರಾತ
ರಾಗದೊಳಿ೧೩[ಟ್ಟ]೧೩ ಡೇಗೆನಲೆಸೆದುದಾ ತಾ
ವಾಗ ತೋರಿದ ಸಂಜೆಗೆಂಪು ॥೭॥

ಮೂಡುವ ನಸುಗತ್ತಲೆ ಮೆಲ್ಲಮೆಲ್ಲನೆ
ತೀಡುವೆಲರು ಮೊಗಜೋಲ್ದು
ಬಾಡುವ ತಾವತೆ ತಣ್ಣ ತಣ್ಣನೆಯಂಟಿ
ಕೋಡುವ ತಂಪುಗಾಣಿಸಿತು ॥೮॥

ಅಗಲುವ ಜಕ್ಕವಕ್ಕಿಗಳನು ಬಗೆಗುಂದಿ
ಮುಗಿವ ಸರೋಜ ಸಂತತಿಯ
ನಗುವಂತೆ ನೆಯ್ದಿಲು ನಸುವಿರಿದಾಗಳೆ
ಸೊಗಸುವಡೆದು ರಾಜಿಪುವು ॥೯॥

ಗೂಡುಗುಹೆಗಳನೆಯ್ದುವ ಪಕ್ಕಿಮಿಗಗಳ
ಜೋಡು ಬಾನೊಳು ಮಿನಿಮಿನಿಸಿ
ಮೂಡು೧೪[ವೊಂ]೧೪ದೊಂದು ತಾಗೆ ಬಗೆವೆಚ್ಚುವ
ಜೋಡೆಯರಾಗಲೊಪ್ಪಿದರು ॥೧೦॥

೪-೪ (ತ,ಕ). ೫-೫ ನೆಂ (ತ,ಕ). ೬-೬ ಮ (ತ,ಕ), ೭-೭ ಕಂ (ತ), ಕ (ಕ), ೮-೮ ಥ (ಕ). ೯-೯ ಳಾ (ತ,ಕ). ೧೦-೧೦ ಯಂ ತುವ (ತ,ಕ), ೧೧-೧೧ ಪಾ (ತ,ಕ). ೧೨-೧೨X (ತ,ಕ), ೧೩-೧೩ ವ (ತ,ಕ). ೧೪-೧೪ ವಂ (ತ,ಕ).

ಮುಗಿದವಂಬುಜವಲರ್ದವು ಕುಮುದಂಗಳು
ಬಗೆಗುಂದಿ ಜಕ್ಕವಕ್ಕಿಗಳು
ಅಗಲ್ದವಂಬರತಳದೊಳು ತಳತಳಿಸಿ ತಾ
ರಗೆಗಳೆಸೆದವೆಸಕದೊಳು ॥೧೧॥

ಒತ್ತರಿಸುತ್ತೆ ವಿಯತ್ತಳವನು ಸುತ್ತ
ಮುತ್ತಿ ಕೊರ್ವುತೆಯುರ್ವಿ ಬೆಳೆದ
ಕತ್ತಲೆಯೆಂಬ ಕದ್ದಾಲ ಹೂತಿತೊಯೆನಿ
ಸುತ್ತೆಸೆದವು ತಾರೆಗಳು ॥೧೨॥

ಈ ವಿಶ್ವವನೆಲ್ಲವನಂಜನದಿಂ
ದೆ ವಿಧಿ ರಚಿಸಿದನೆನಲು
ಭೂವಿಯತ್ತಳವನು ಕತ್ತಲೆ ತೆಕ್ಕನೆ
ತೀವಿಕೊಂಡಿದುದೇನನೆಂಬೆ ॥೧೩॥

ಅನಿತರೊಳಾ ಕತ್ತಲೆಯ ನೆ[೧೫][ಬ್ಬ][೧೫]ಟ್ಟುತೆ
ಜನಿಸಿತಿಂದ್ರನ ದಿಕ್ಕಿನೊಳು
ಮನಸಿಜ ಮಾಳ್ಪ ಹೋಮಾಗ್ನಿಯ ದಳ್ಳುರಿ
ಯೆನೆ ಚಂದ್ರಕರದ ಕೆಂಬೆಳಗು ॥೧೪॥

ವಿರಹಿಜನಮನೆದೆಗೆಡಿಸುತಂಬುಜವನು
ಕೊರಗಿಸುತೊಲಿದು ಕೈರವಕೆ
ಹರಿಸಮನೀವುತೆ ತಂಗದಿರ್ವಕ್ಕಿಯ
ಪೊರೆವುತೊಗೆದುದಬ್ಜಬಿಂಬ ॥೧೫॥

ಸ್ಮರಚಕ್ರವರ್ತಿ ಕೋಪದೊಳಿಡೆ ಬಿರಯಿಗ
ಳು[೧೬][ರ][೧೬]ವ [೧೭][ಸೋ][೧೭]ವುತ [೧೮][ಚ][೧೮]ರಿಪ
ಅರುಣಾಂಬು ಕಲಿತ ಚಕ್ರವೊಯೆನಿಸಿತು ಕೆಂಪು
ವೆರಸಿ ಮೂಡಿದ ಚಂದ್ರಬಿಂಬ ॥೧೬॥

೧೫–೧೫ ಬ್ಬೆ (ತ,ಕ). ೧೬–೧೬ ರು (ತ,ಕ). ೧೭–೧೭ ಸಾ (ತ,ಕ). ೧೮–೧೮ ಚ್ಚ (ತ,ಕ),

ಕಡುಗಲಿ ಚಿಕ್ಕನೃಪಾಲನ ನಿಡುದೋಳ
ನೆಡೆಗೊಂಡ ಗೆಲವೆಣ್ಣಿಗಳರಿ
ಉಡುಪತಿ ಮೂಡುತೆ ತಳೆದಿ[೧೯][ದ್ದ][೧೯]ರಾಗಮ
ನುಡುಗಿ ಜಲಕ್ಕನೊಪ್ಪಿದನು ॥೧೭॥

ಅಂಬರ ವಿರಹಿತೆಯಾಗಿ ತಾಮಸಿ ನಿ
ತಂಬಿನಿ ನೆರೆವ ಭರದೊಳು
ಅಂಬುಜ ವೈರಿಯನೊಲಿದಮರ್ದಪ್ಪಿದ
ಳೆಂಬಂತೆ ಕರೆ ರಂಜಿಸಿತು ॥೧೮॥

ಬೆಳದಿಂಗಡಲೊಳು ಶಶಿಮಂಡಲವೆಂಬ
ವಿಲಸಿತ ಶೇಷ[೨೦][ತ][೨೦]ಲ್ಪದೊಳು
ಮಲಗಿರುತಿಹ ಕೃಷ್ಣನೋಯೆಂಬಂತೆ ಕಂ
ಗೊಳಿಸಿತು ಚಂದ್ರನೊಳಂಕ ॥೧೯॥

ಇಂಗಡಲೊಳು ಪುಟ್ಟಿದ ಶಶಿ ಪೊಸವೆಳು
ದಿಂಗಳೆನಿಸಿ ಕಂಗೊಳಿಪ
ಇಂಗಡಲನು ಪಡೆದನೊ[೨೧][ಎ][೨೧]ನಿಸುತೆ ಬೆಳು
ದಿಂಗಳು ನಾಡೆ ರಂಜಿಪುದು ॥೨೦॥

ವಿರಹಿ ಸಂಚ[೨೨][ಯ][೨೨]ಕುರವಣಿಪ ದಳ್ಳುರಿಯಾಗಿ
ಸುರತಸುಖದೊಳಿಪ್ಪವರ್ಗೆ
ಸಿರಿಕಂಡಮಾಗಂಚೆವಿಂಡಿಗೆ ಪಾಲಾ
ಗಿರುತಿರ್ದುದಾ ಪೊಸಜೊನ್ನ ॥೨೧॥

ಪಕ್ಕವ ನಸುವಿಚ್ಚಲುಗುತೆ ಕೊರಲೆತ್ತಿ
ಯಕ್ಕರಿಂ ಚಂದ್ರದೀಧಿತಿಯ
ಚಕ್ಕನೆ ಚಂಚುವಿನಿಂದೀಂಟುತೆ ಜೊನ್ನ
ವಕ್ಕಿ ದೊಬ್ಬಿ[೨೩][ದು][೨೩]ವು ಡಾವರವ ॥೨೨॥

೧೯–೧೯ ದೊ (ತ,ಕ). ೨೦–೨೦ ಕ (ಕ). ೨೧–೨೧ ರ (ತ,ಕ). ೨೨–೨೨ ರ (ತ,ಕ). ೨೩–೨೩ ಡು (ತ,ಕ).

ಮದವೇರಿ ಮನ್ಮಥನುಬ್ಬೆದ್ದು ಮರಿದುಂಬಿ
ವೆದೆಯನೇಜಿಸಿ ಕಬ್ಬುವಿಲ್ಗೆ
ಮುದದಿಂದೆ ಕಮ್ಮ[೨೪][೦][೨೪]ಗಣೆಗಳನು ವಿರಹಿಗ
ಳೆದೆ ಬಿರ್ಚುವಂ[೨೫][ತೆಸು][೨೫]ತಿರ್ದ ॥೨೩॥

ತಳಿರ ಹಾಸಿಗೆ ತಣ್ಣತಣ್ಣನೆ ಚರಿಪ [೨೬][ತೆಂ][೨೬]
ಬೆಲರ ತಿಟ್ಟಕೆ ಮೆಯ್ಯನಿತ್ತು
ಅಲರಂಬನಂಬಿಗೀಡಾಗಿ ವಿಯೋಗಿ ಸಂ
ಕುಳವಿರ್ದುದತಿ ತಾಪದೊಳು ॥೨೪॥

ಆ ಸಮಯದೊಳಿರ್ಮಡಿಚಿಕ್ಕೇಂದ್ರನು
ಮೇಶನನೊಲಿದರ್ಚಿಸುತೆ
ಲೇಸೆನಿಸುವ ಶಿವಲಿಂಗಪ್ರಸಾದವ
ನೇ ಸೇವಿಸಿ ತುಷ್ಟಿವಡೆದು ॥೨೫॥

ಕತ್ತುರಿ[೨೭][ಯಣ್ಪೆ][೨೭]ಟ್ಟು ಕಿವಿಗೆ ಜವ್ವಾದಿಯ
ಮೆತ್ತಿ ಶಿರಕೆ ಪೂಸರವ
ಸುತ್ತಿ ವೀಳೆಯವನು ಕೈಕೊಳುತಾಗ ನೃ
ಪೋತ್ತಮ ಪೊರಮಡಲೊಡನೆ ॥೨೬॥

ಕರವ ಮುಗಿದು ವಿಟ[೨೮][ಪೀಠಮರ್ದ][೨೮]ನ ನಾ
ಗರಿಕ ವಿದೂಷಕರಾಗ
ಅರಸ ಚಿತ್ತೈಸಚ್ಚವೆಳದಿಂಗಳೊಳಗೆ ನ
ಗರ ಶೋಧನೆಗೆಯ್ವುದುಚಿತ ॥೨೭॥

ಎನೆ ಸಂತಸವೆಚ್ಚಿ ಮಾನವಮನುಮಥ
ನೆನಿಪಿರ್ಮಡಿಚಿಕ್ಕೇಂದ್ರ
ಅನುನಯದಿಂದವರೊಡನೆಯ್ತರುತಿರೆ
ಬಿನದದೆ ರಾಜಬೀದಿಯೊಳು ॥೨೮॥

೨೪–೨೪ X(ತ,ಕ). ೨೫–೨೫ X (ತ,ಕ). ೨೬–೨೬ ೦ತೆ (ತ,ಕ). ೨೭–೨೭ ಯಂ ವಿ (ತ,ಕ). ೨೮–೨೮ ಪಟವರ್ಧ(ತ,ಕ).

ಬರುತಿರೆ ಕಮ್ಮಕಮ್ಮನೆ ಮಗಮಗಿಸುವ
ಪಱಿಪಱಿಯೊ[೨೯][ಳ್ಳ][೨೯]ಲರುಗಳ
ಬೆರೆತಗಂಪನು ಬೀರುವ ಹೂವ[೩೦][ಪ][೩೦]ಸರಗ
ಳರಸನ ಬಗೆಗೊಪ್ಪಿದುವು ॥೨೯॥

ಅಱಿವಿಱಿದಚ್ಚಮಲ್ಲಿಗೆಯ ಮೊಲ್ಲೆಯ ಪಾ
ದಱಿಯ ಮಿಸುಪ ಸಂಪಗೆಯ
ಅರಲಸಂತೆಯೊಳಂಗನೆಯರು ಮಾಲೆಯ
ವಿರಚಿಸುತೆದೆಗೊಳಿಸಿದರು ॥೩೦॥

ಜಲಜವದನ ಕುಮುದಾಂಬಕ ಕುಂದಕು
ಟ್ಮಳದಂತ ಚಂಪಕನಾಸಾ
ಲಲಿತಬಂಧೂಕಾಧರದೆಳೆವೆಣ್ಣುಗ
ಳಲರಮಾಲೆಯ ಪಿಡಿದಿಹರು ॥೩೧॥

ಪಿಡಿದೆತ್ತಿದ ಹೂವಿನ ಮಾಲೆ ಪೂವಿಲ್ಲು
ಕಡೆದಿ[೩೧][ಟ್ಟಿ][೩೧]ನೆಯ್ದಿಲಂಬಾಗೆ
ಕುಡುವಿಲ್ಲನ ಬಿಲ್ಲುಗಾರ್ತಿಯಱಿಸೆ ಘುಲ್ಲ
ವಡಿ ನೀರೆಯದು ಸೊಗಯಿಪರು ॥೩೨॥

ಅಲರದ ಹೊಂದಾವರೆಗಿನಿರಸವನು
ತಳೆದ ಬಂದುಗೆಗೆ ಜವ್ವನ[೩೨][ದಿಂ][೩೨]
ಬೆ[೩೩][ಲೆ][೩೩]ಯ ಪೇಳೆನಲಾ ಸುಮನಕೆ ಸುಮನವೆ
ಬೆಲೆಯೆಂದು ಬೆವಹರಿಸಿದಳು ॥೩೩॥

ಇಂತೆದೆಗೊಳಿಪ ಹೂವಿನ ಹಸರಂಗಳ
ಸಂತಸದಿಂ ನೋಡುತರಸ
ಮುಂತಡಿಯಿಡಲೆಸೆದುದು ಸೂಳೆಗೇಱಿ ಲ
ತಾಂತಶರನ ಬೀಡೆನಲು ॥೩೪॥

೨೯-೨೯ ಳ (ತ,ಕ), ೩೦-೩೦X(ತ,ಕ), ೩೧-೩೧ ಟ್ಟ (ಕ). ೩೨-೩೨ ದಾ (ತ). ೩೩-೩೩ ಳೆ(ತ).

ಪರಿಮಳದಿಕ್ಕೆ ಶೃಂಗಾರದ ಹಕ್ಕೆ ಕಾ
ತುರದೆಡೆ ಹುರುಡಿ[೩೪][ನ][೩೪] ಗರುಡಿ
ಸರಸಭುಜಂಗರ ಸೊಗದಾಣಮೆನಿಸುತೆ
ಕರಮೆಸೆದುದು ಸೂಳೆಗೇಜಿ ॥೩೫॥

ಶೃಂಗಾರತೋಟ [೩೫][ಕ್ರೀಡಾ][೩೫]ಕುಳಿ ಮಾಡವೆ
ಟ್ಟಂಗಳೊಪ್ಪುವ ನೆಲೆವಾಡ
ಕಂಗೊಳಿಸುವ ಸೆಜ್ಜೆವನೆ ಚಂದ್ರಸಾಲೆಗ
ಳುಂ [೩೬][ಗಾಡಿವ][೩೬]ಡೆದು ರಾಜಿಪುವು ॥೩೬॥

ಒಪ್ಪವಡೆದ ಸೆಳೆಮಂಚ ಶಕುನಿಮಂಚ
ಚಪ್ಪರಮಂಚ ಕಂಗೊಳಿಪ
ತಪ್ಪದೆ ಸೆಜ್ಜೆವನೆಗಳೊಳಗಂಚೆಯ
ತುಪ್ಪು[೩೭][ಳ][೩೭]ವಾಸಿನಿಂದಿಹವು ॥೩೭॥

ನಿಗರಗತ್ತುಜೆಯ ಜವಾದಿಯ ಪುಣುಗಿನ
ಸೊಗಯಿಪ ಪಚ್ಚೆಗಪ್ಪುರದ
ಬಗೆವಂದ ಕೈರಗುಳಿಗೆಯ ಸೊಂಪಿ[೩೮][ನ][೩೮] ಭರ
ಣಿಗಳು ಕೆಲದೊಳೆಸೆದಿಹವು ॥೩೮॥

ನಿಲುವುಗನ್ನಡಿ ಪನ್ನೀರ ಕುಚಾಯಿ ಕಂ
ಗೊಳಿಪ ಬಿಜ್ಜಣಿಗೆಲೆದಟ್ಟಿ
ಪಳುಕಿನ ಪಡುಗ ರನ್ನದ ಹಾವುಗೆ ಮುಂ
ಗೆಲದೊಳು ಸಾಲ್ಗೊಳಿಸಿಹವು ॥೩೯॥

ಪೊರ ಜಗುಲಿಯ ಮೇಲೊರಗು ಸುಪ್ಪತ್ತಿಗೆ
ಮಿರುಪ ಮುತ್ತಿನ ಮೇಲುಕಟ್ಟು
ಕಿರಿದೆಡೆಯೊಳಗಿಟ್ಟ ಹೊಂಗಾಲಮಣಿ ಕಣ್ಣ
ಸೆರೆವಿಡಿದೊಪ್ಪಿ ರಂಜಿಪುವು ॥೪೦॥

೩೪–೩೪ ಗನ(ಕ). ೩೫–೩೫ ಕೇಡಾ (ತ,ಕ). ೩೬–೩೬ ಗಡಿದ (ತ,ಕ). ೩೭–೩೭ ಮ (ತ,ಕ). ೩೮–೩೮ ಡ (ತ,ಕ).

ಭಾವಸಂಭವ [೩೯][ಭು][೩೯]ಜವಿಜಯಾಂ[೪೦][ಕ][೪೦]ಪ್ರ
ಭಾವಿತ[೪೧][ಕೇ][೪೧]ತನದಿಂದೆ
ಕೋವಿದ ವಿಟತಾಟಿತ ಘಂಟೆಯಿಂ ಪೊರ
ಚಾವಡಿಯಲ್ಲಿ ಒಪ್ಪಿಹವು ॥೪೧॥

ಕಳೆ ಕರ್ಪೂರದ [೪೨][ಕ][೪೨]ಸವನಂಗಣದೊಳು
ಚಳಯಂಗುಡು ಪನಿನೀರ
ತೊಳಪ ಮುತ್ತಿನ ರಂಗವಲ್ಲಿಯನಿಕ್ಕಿಂ
[೪೩][ಬು][೪೩]ಲಿ[೪೪][ಪಿ][೪೪]ಹುದೆಲ್ಲ ಗೇಹದೊಳು ॥೪೨॥

ಮದನ[೪೫][ನ][೪೫]ದ್ವೈತಸಿದ್ಧಾಂತಸೂತ್ರಾರ್ಥದ
ಮಧುರವಚನ ಸಾರದಿಂದೆ
ಒದವಿದ ಸೊಗದ ಲಹರಿಯ ಶಬ್ದವನನು
ವದಿಪರಗಿಳಿಗಳಲ್ಲಿಹವು ॥೪೩॥

ಇಂತು ರಂಜಿಪ ಸೂಳೆಗೇಜಿಯನವನೀ
ಕಾಂತನೀಕ್ಷಿಸುತೊಳಪೊಗಲು
ಕಂತುನೃಪಾಲನ ಮೋಹನಶರವೆಂ
ಬಂತೆಸೆದರು ನೀರೆಯರು ॥೪೪॥

ಮನೆಮನೆಯೊಳು ಮನಸಿಜನ ಬಿಲ್ಲಂಬನ
ಚ[೪೬][೯][೪೬]ನೆಗೆಯ್ಯುತಿಚ್ಚೆಗಾತಿಯನು
ಅನುನಯದಿಂ ನೋನುವ ಪೊಚ್ಚಪೊಸ ಜ
ವ್ವನೆಯರೊಪ್ಪಿದಱೀನನೆಂಬೆ ॥೪೫॥

ಮುಗುಳೊತ್ತಿ[೪೭][ಮೂ][೪೭]ಡಿ ಕಂಗೊಳಿಪ ಮೊಲೆಯ ನಸು
ನಗೆಗೂಡಿದ ಮುದ್ದುಮೊಗದ
ಹೊಗಱೇರುವ ತನುಲತೆಯ ಮುಂಬಱೆಯದ
ಮೃಗನೇತ್ರೆಯರೊಪ್ಪಿದರು ॥೪೬॥

೩೯–೩೯ ಭೂ (ತ,ಕ). ೪೦–೪೦ ತ (ಕ). ೪೧–೪೧ ಕ (ತ,ಕ). ೪೨–೪೨X(ತ,ಕ).೪೩–೪೩ ಪು (ತ,ಕ). ೪೪–೪೪ ಪ (ತ,ಕ). ೪೫–೪೫ X(ತ,ಕ). ೪೬–೪೬X (ತ,ಕ). ೪೭–೪೭ ಮು(ತ,ಕ).

ಹುಣ್ಣಿವೆದಿಂಗಳ ಪೋಲ್ವ ಮೊಗದ ಹುಲ್ಲೆ
ಗಣ್ಣ ತಾವಱಿಮೊಗ್ಗೆ ಮೊಲೆಯ
ಸಣ್ಣನಡುವಿನೇರುಂಜವ್ವನದ ಬೆಲೆ
ವೆಣ್ಣುಗಳೆಸೆದಿರ್ದರಲ್ಲಿ ॥೪೭॥

[೪೮][ತೊ][೪೮]ಳಗುವ ಸೋಗೆಗ[೪೯][ಣ್ಮೆ][೪೯]ರು[೫೦][ಪ][೫೦] ಕದಪು ಚೆಂ
ದಳಿದಿರ್ದುಟಿ ನೆಲೆಮೊಲೆಯೆಸೆವ
ಸೆಳೆನಡುವಿನ ನಿತಂಬಮೊಪ್ಪಿರೆ ಕಂ
ಗೊಳಿಪರು ನರುಜವ್ವನೆಯರು ॥೪೮॥

ವೃತ್ತಕುಚಂಗಳು ದಂತಂಗ[೫೧]ಳಾ[೫೧]ಗೆಸೆ
ವೃತ್ತಿಱಿ ಮಂದಯಾನೆಯರು
ಕಿತ್ತಡಿಯೆದೆದಿಳಿಗೊಳನ ಕಲಂಕುವ
ಚಿತ್ತಜನಾನೆಯಂತಿಹರು ॥೪೯॥

ವಿಳಸಿತ ತನುಲತೆ ಮೊಲೆಯಲದೊರ್ಂಬೆ ಚೆಂ
ದಳವೆಳದಳಿಱಿಂದೆನಿಸಿ
ಬೆಲೆವೆಂಗಳೆಸೆದರಲರಲತೆಯಂತೆ ಕಾ
ದಲಱಿಂಬ ತುಂಬಿಗಿಂಬಾಗಿ ॥೫೦॥

ನುಡಿಗಿಳಿ ನಡೆಯಂಚೆ ಕುರುಳಾರಡಿ ಮೊಲೆ
[೫೨]ಗೆ[೫೨]ಡೆವಕ್ಕಿ ಕಣ್ಣಲರಂಬು
ಕುಡುವುರ್ವು ಕುಡುವಿಲ್ಲಾಗಿಱಿ ಮದನನ
ಪಡೆಯೆನಿಸಿಹಱಬಲೆಯರು ॥೫೧॥

ಪಗಲೆಲ್ಲ ಮಲಗಿ ಹೂವಿನ ಹೊತ್ತಿನಲೆದ್ದು
ದುಗುಲಮನುಟ್ಟು ಸಿಂಗರಿಸಿ
ಮೃಗಮದದಂಪಿಕ್ಕಿ ಸೊಗಸ ಸೈಗಱಿವು[೫೩][ತೊ
ತ್ತೆ][೫೩]ಗೆ ಬಂದು ನಿಂದಿಹರಲ್ಲಿ ॥೫೨॥

೪೮–೪೮ ಮೊ(ತ,ಕ). ೪೯–೪೯ ಣ್ಮೆ (ತ,ಕ). ೫೦–೫೦ ವ (ತ,ಕ). ೫೧–೫೧ ಳಿಂ (ಕ).೫೨–೫೨ ಕೆ (ಕ). ೫೩–೫೩ ತೋತೆ (ತ,ಕ).

[೫೪][ತೊ][೫೪]ಳಪ ನಿ[೫೫]ಟ್ಟೆಸಳಗಂಗಳ ಕುಡುವುರ್ವಿನ
ಲಲಿತ ಚಂಪಕದ ನಾಸಿಕದ
ತೊಳಪಗನ್ನಡಿ ಕದಪಿನ ಪೆಱನೊಸಲ ಕೋ
ಮಲೆಯರೊತ್ತೆಗೆ ನಿಂದಿಹರು ॥೫೩॥

ಸೆಳೆನಡುವಿನ ಬಟ್ಟಮೊಲೆಯ ಸೆಳ್ಳುಗುರ್ಗಳ
ನಳನಳಿಸುವ ನಳಿತೋಳ
ಬಳಲುಮುಡಿಯ ಬಣ್ಣದುಟಿಯ ಲತಾಂಗದ
ಬೆಲೆವೆಂಗಳೊತ್ತೆಗಲ್ಲಿಹರು ॥೫೪॥

ನೋಟದಿಂ ವಿಟರನೊಳಗುಮಾಡಿಕೊಂಡು ನ
ಲ್ವೇಟದಿಂ ಸಂಗಸಣ್ಣವನ
ತೋಟಿಯ ತೊಡಕಿಗಿಕ್ಕುವ ಚೆಲ್ವ ವಾರವ
ಧೂಟಿಯರೊಪ್ಪಿಹರಲ್ಲಿ ॥೫೫॥

ನಿಜೆಯ [೫೬][ಓ][೫೬]ಸಜಿಸುತೊಯ್ಯಾರದ ನಟನೆಯ
ಮುರುಕದ ನಸುನಗೆಯಿಂದೆ
ಮಿರುಪ ಕಂಗಳ ಕೊಯ್ಲು ನೋಟದಿಂ ಬೊಜಗರ
ಸೆಱಗೆಯ್ವರಾ ಲಲನೆಯರು ॥೫೬॥

ಓರ್ವನೊಡನೆ ಸವಿಮಾತನಾಡುತೆ ಮ
ತ್ತೋರ್ವಗೆ ಹುಬ್ಬನಾಡಿಸುತೆ
ಓರ್ವಗೆ ಕಣ್ಸನ್ನೆಗೆಯ್ವುತೆ ಚದುಱಂ
ದೋರ್ವನ ಮಚ್ಚಿಕೊಂಡಿಹರು ॥೫೭॥

ಜಲಜದಳಾಕ್ಷಿಯೊರ್ವಳು ಹಾರೈಸಿ ಕ
ಣ್ಣಲರಲರ್ದೆದೆವೆಚ್ಚಿ ಮಚ್ಚಿ
ಲಲಿತ ಲಾವಣ್ಯ ಶೋಭಿತವಪ್ಪ ತನ್ನ ಕಾ
ದಲನ ನಿಟ್ಟಿಸಿದಳೇನೆಂಬೆ ॥೫೮॥

೫೪–೫೪ ಕ(ತ,ಕ). ೫೫–೫೫ ಟ್ಟಿಸಲ (ಕ). ೫೬–೫೬ ವ (ತ,ಕ).

ಅಡಿ ನಡುಕಂಗೊಳೆ ನಾಣೆಡೆಯೊಸಱಿಯಿ
ಟ್ಟೆ[೫೭]ಡೆ[೫೭]ಯಿಂದೆ ಮೊಲೆ ಬೆಮರುಣ್ಮೆ
ಮಡದಿ ಕಾತರದೆ ನಿಟ್ಟಿಸಿದಳಂಬಕ ರೋಚಿ
ಕಡೆಗೋಡಿವರಿಯೆ ಕಾದಲನ ॥೫೯॥

ಸನ್ನೆಯಱಿಯದ ಸರಸವಱಿಯದ ವಿ
ತ್ಪನ್ನತೆವಱಿಯದ ಸುಖವೆ
ಚೆನ್ನವಡೆದ ಚೆಲ್ವು ಪೆಣ್ಣಾದುದೆನಿಸುವ
ಕನ್ನೆಯಱಿದ್ದರೊಲ್ದೆಸೆಯೆ ॥೬೦॥

ಎಳಸಿ ನೋಡಿದಡೆ ಲಜ್ಜಿಸುವ ಬಳಿಕ ನುಡಿ
ಸಲು ಸುಮ್ಮನಿಪ್ಪ ಕರೆದೊಡೆ
ಸಲಿಸದಿರುವ ಪೊರ್ದಿದೊಡೆ ಪೊರೆಗುಂದುತಿ
ರ್ಪೆಳವೆಂಗಳೊಪ್ಪಿರುತಿರಲು ॥೬೧॥

ತೊಡೆಯ ಮೇಲಿಟ್ಟು ಕುರುಳ ತಿದ್ದಿ ರನ್ನದ
ಕಡಗದ ಕೀಲು ತಿರುಪುತೆ
ಪಿಡಿದುಗಲ್ಲವನಲುಗಿಸಿ ಮುದ್ದಿಸಿ ಸವಿ
ನುಡಿಗಳಿಂ ಭೀತಿಯ ಬಿಡಿಸಿ ॥೬೨॥

ಪಸಯಿಸೆ ಸೋಂಕಿ ಮೈ[೫೮][ಗೊ][೫೮]ಡಲಪ್ಪಿ ಮೊಗವಿದಿ
ಱಿಸೆ ಚುಂಬಿಸಿ ನಾಣಳಿಯೆ
ಸುಸಿಲೆಸಗುವ ಜಾಣ ಬೊಜಗರಿದ್ದರು ಪೊಚ್ಚ
ಪೊಸ ಹರೆಯದ ಹೆಂಗಳೊಡನೆ ॥೬೩॥

ತೊಳಪ ರಸಾಲವ ಪೊಸಮಲ್ಲಿಗೆ ಕೋ
ಮಳಲತೆಯಪ್ಪೆಸೆವಂತೆ
ಎಳೆವಱಿಯದ ಕಾದಲನ ಮುಂಬಱಿಯದ
ಲಲಿತಾಂಗಿಯಪ್ಪಿಯೊಪ್ಪಿದಳು ॥೬೪॥

೫೭–೫೭ ದೆ (ಕ). ೫೮–೫೮ ದೊ (ತ,ಕ).

ಗಳರವ ಚುಂಬನ ಕಾತರ ದೈನ್ಯ ಸಂ
ಕಲಿತ ಸೀತ್ಕಾರಂಗಳಿಂದೆ
ಲಳಿಯೆದ್ದು ಸುರತವನೆಸಗುವ ಜಾಣ ಕಾ
ದಲಜೆಹರಲ್ಲಿ ಸಂತಸದಿ ॥೬೫॥

ಜಡಿಯೆ ಸೋರ್ಮುಡಿ ಮೊಲೆ*[ಯೊಲೆಯೆ]* ನಾಣೆಡೆ ತುಳ್ಕೆ
ನಡು ಬಳ್ಕೆ ಕಣ್ಣ ಬೆಳ್ವೆಳಗು
ಕಡು ಚೆಲ್ಲವಜೆಯೆ ನೇವುರವಿಂಚರಗುಡೆ
ಮಡದಿ ಮೇಲ್ಸುಸಿಲೆಸಗಿದಳು ॥೬೬॥

ಚಲಿಸಿದ ಕುರುಳು ಕೆಂಪಡರ್ದ ಕಂಗಳು ಬೆಪ್ಪು
ದಳೆದ ಬಾಯ್ವೇಜಿ ನಿಟ್ಟುಸಿರು
ತಳಿತ ಪುಳಿಕಮೆಸೆದಿಜಿ ಸುಸಿಲೆಸಗಿದ
ಲಲನೆ [೫೯][ತ][೫೯]ಣ್ಣೆಲರ[೬೦][ನ][೬೦]ಪ್ಪಿದಳು ॥೬೭॥

ತುಂಗ ಸಸ್ವೇದ ಕುಚಂಗಳ ಸೋಂಕುತೆ
ಮುಂಗುರುಳನು ನೇವಜೆಸುತೆ
ತೆಂಗಾಳಿ ವಿಟನವೋಲಂಬುಜಗಂಧಿಯ
ರಂಗವನಪ್ಪಿ ತೀಡಿದುದು ॥೬೮॥

ಮದಧಿಪನೇಕೆ ತಡೆ[೬೧][ದ][೬೧] ಬಾರನೊಯೆ
ನ್ನದೆ ದಿಗುಲಿಡುತಿದೆಯೀಗ
ಮದನನೆಸುಗೆಗೀಡಾದೆನೆನುತಲೊರ್ವ
ಸುದತಿ ಸುಯ್ದಳು ವಿರಹದೊಳು ॥೬೯॥

ಕೆಳೆಯರ ಸಂಗಸುಖದೊಳೆನ್ನ ಮರೆದನೊ
ಲಲಿತಾಂಗನಾವ ಮೋಹಿನಿಯ
[೬೨][ತೊ][೬೨]ಳಪ ಕಣ್ಬಲೆಗೊಳಗಾದನೊಯೆಂದವ
ಳಳವಳಿವಳು ನಲ್ಲನಗಲೆ ॥೭೦॥

– ಮೊಲೆಯ (ತ,ಕ). ೫೯–೫೯ ಕ (ತ,ಕ).೬೦–೬೦ ನೆ (ತ,ಕ). ೬೧–೬೧ ದು (ತ,ಕ).೬೨–೬೨ ತ (ತ,ಕ).

ಅಳಿಗೆ ಮಲ್ಲಳಿಗೊಳುತರಗಿಳಿಯೆನೆ ಧರೆ
ಗಿಳಿವುತೆ ಸೊಕ್ಕುಗೋಗಿಲೆಯ
ಕಳರುತಿಗಳ್ಕಿಬಳ್ಕುತೆ ಕಮಲಾಕ್ಷಿ ತಾ
ನಳುತಿರ್ದಳು ನಲ್ಲನಗಲೆ ॥೭೧॥

ಸ್ಮರನುಱಿದೆದ್ದನನಲಬಂ[೬೩][ಧು][೬೩] ವಾಯು ಚಂ
ದಿರನು ದೋಷಕರಜೀವರು
ಪರರ ನೋಯಿಸುವುದ[೬೪][ಕ][೬೪]ಲಸ[೬೫]ರೆಂ[೬೫]ದಾಗಳು
ವಿರಹಿಣಿ ದೂಱಿದಳವರ ॥೭೨॥

ಹಱಿಸಮನಿತ್ತು ಕುಜಾತಿಗೆ ಜಾತಿಯ
ಕೊರಗಿಸಿ ಮಧುಪ ಸಂತತಿಯ
ಪೊಱೆವ ಬಸಂತನೇನೊಳ್ಪಿದನೋಯೆಂದು
ವಿರಹಿಣಿಯವನ ದೂರಿದಳು ॥೭೩॥

ಇಚ್ಛೆಯ ಸಲಿಸುತಿಂಗಿತವನಱಿದು ಬಿಡ
ದೊಚ್ಚ[೬೬][ತವೋಗಿ ರಾಗಿ][೬೬]ಸುತೆ
ಮಚ್ಚಿದ ನಲ್ಲ ತಡದು ಬಂದಿಱೆ ಬಗೆ
ವೆಚ್ಚಿ ಹಿಗ್ಗುತೆ ಹೊಱೆಯೇಱಿ ॥೭೪॥

ನಸುಮುನಿಸೆಂಬ ತೆಱೆಯ ಮಱೆಗೊಂಡು ನಿ
ಟ್ಟಿಸದಿರ್ಪನೆನಲು ಕಂಗಳಿಗೆ
ಒಸೆದೊದವಿದ ಸೋಲವಗಲಿರ್ಪನೆನಲು [೬೭][ಬೇ][೬೭]
ವ[೬೮][ಸ][೬೮]ಗೊಳಿಸುವ [೬೯][ತಳ್ಳಂಕ][೬೯] ॥೭೫॥

ಮೈಯನೊಲ್ದೀಯದಿರ್ದಪೆನೆನೆ ಕಾವನ
ಹುಯ್ಯಲಿಂದೊದವಿದ ತವಕ
ಬೈ[೭೦][ಯ್ದೊಡ][೭೦]ನೆಯ್ದೆ ಮನ್ನಿಪ ದೈನ್ಯ[೭೧][ದ][೭೧] ನುಡಿ
ಪೊ[೭೨][ಯ್ದೊಡನು][೭೨]ಣ್ಮುವ ಪುಳಕ ॥೭೬॥

೬೩–೬೩ ದು (ತ,ಕ).೬೪–೬೪ ಕೆ (ತ,ಕ). ೬೫–೬೫ ವೆ (ಕ). ೬೬–೬೬ ವೋ ನೀರಾನಿ (ತ,ಕ). ೬೭–೬೭ ಚೇ (ತ,ಕ). ೬೮–೬೮ ಸೆ (ತ,ಕ). ೬೯–೬೯ ತಾಳಾಂಕ (ತ,ಕ). ೭೦–೭೦ ಯೆಡೆ (ತ,ಕ). ೭೧–೭೧ ವ (ತ,ಕ). ೭೨–೭೨ ಯ್ಯೋಡನೂ (ತ,ಕ).

ಜನಿಸುತಿರಲು ಕೂಡೆ ತನಿನೇಹವೆಂಬ ಸೂ
ರ್ಯ[೭೩][ನು][೭೩] ಮುಂದೆ ಮುನಿಸುಗತ್ತಲೆ[೭೪][ಯು][೭೪]
ಇನಿತಿಲ್ಲದಿಱ್ ಕಾತರದಿಂ[೭೫][ದಲಾ][೭೫]ಟಿಸು
ತಿನಿಯನ ಬಿಗಿಬಿಗಿದಪ್ಪಿ ॥೭೭॥

[೭೬][ಅರತ][೭೬] ಚಕೋರಿಯಿಂಗದಿರ್ಗಳ ಕವರುವ
ತೆರದಿನಧರವ ಚುಂಬಿಸುತೆ
ನೆಱೆವೆಱೆಗಂಡ ಪಾಲ್ಗಡಲಂತೆ ನೆಲೆವೆಚ್ಚು
ತೆರಕದೊಳೊಂದುತಂದವಳು ॥೭೮॥

ಇನನುದಯದ ಜಕ್ಕವಕ್ಕಿಯಂದದೊಳಿಂ
ಪಿನ ಲಲ್ಲೆಗಱೆದು ಮುದ್ದಿಸುತೆ
ಬನಿತೆ ಕರ್ಪುರದಂಬುಲ ರಸ ಕುಟುಕನಿ
ಟ್ಟನಿಯಗೂಡುವಳಿಂದುಟಿಯ ॥೭೯॥

ಪಱಿಕಿಸೆ ಮೋಹಕ್ಕೆ ಮೊಲೆಮುಡಿಗಳು ಕಾ
ತರಕೆ ಕೈಕಾಲೊಗೆದಂತೆ
ಸುರತ [೭೭][ಮ][೭೭]ನೋರಥವಂಗವಾಂತುದೊಯೆಂಬ
ಪಱಿಯೊಳಿರ್ದಳು ನಲ್ಲನೊಡನೆ ॥೮೦॥

ಇಱುಳರಿಯದೆ ಪಗಲಱಿಯದೆ ಮಿಕ್ಕಿನ
ಪಱಿಯಱಿಯ[೭೮][ದೆ][೭೮] ನಲ್ಲನೊಡನೆ
ಎರವುದೋರದೆ ಹೊಱೆಯಳಿದಕ್ಕರಿಂ ಕೂ
ಡಿರುತಿರ್ದಳವಳು ಸಂತಸದಿ ॥೮೧॥

ಒಲಿದೋಪನೊಡನೆರವಳಿದೊಡಗೂಡಿಯ
ಗಲಲಾರದಿಪ್ಪ ಕಾಮಿನಿಯ
ಒಲವ ಕಂಡಬ್ಬೆ ಮಂತಣಗೈದು ಮಗಳಿಗೆ
ನೆಲೆಗೇಳಿಸಿದಳು ಬುದ್ಧಿಯನು ॥೮೨॥

೭೩–೭೩ ನ (ತ,ಕ). ೭೪–೭೪ ಯ(ತ,ಕ). ೭೫–೭೫ ದೆಲೂ(ತ,), ದೆಲಾ (ಕ). ೭೬–೭೬ ಅಱಿನ (ತ,ಕ). ೭೭–೭೭ ರು (ತ,ಕ). ೭೮–೭೮ ದ (ತ,ಕ).

ಒಲಿಸುವೆನೆಂದು ತಾನೊಲಿದು ಬೊಜಗನೊಳು
ನೆಲೆಗೊಂಡ ಬೆಲೆವೆಣ್ಣಿನಿರವು
ಲಲುಗಿ ಕೀಲ್ಗಳೆದ ಕಪಿಯ ತೆರನೆಂದಬ್ಬೆ
ಹಲುಬಿ ಬೋಧಿಸಿದಳಾತ್ಮಜೆಯ ॥೮೩॥

ತುಂಬಿದ ತೋಱೆಯವೋಲನುಕೂಲದೊಳಿ
ರ್ದಿಂಬಿ[೭೯][ನಿಂ][೭೯]ದೊಳಗ ಕೊರೆವುತೆ
ಅಂಬುರುಹಾಂಬುಯೋಗದವೋಲು ಪ[೮೦][ಲ][೮೦]ವ
ರಂ ಬೆರಸಿರಬೇಕು ಚದುರೆ ॥೮೪॥

ನೀಲಿಗಾಱಿನ ವೋಲು ಪುಸಿಯ ಸೋಲಿಸುತಿಂದ್ರ
ಜಾಲಕನಂತೊಡ್ಡಣೆಯ
ಲೀಲೆಯಿಂದೋಡಿನೊಳ್ಗಾಣಿಸದೆ ವಿಟ
ಜಾಳವನಾಳಬೇಕಮ್ಮಿ ॥೮೫॥

ಕಾರಕನಂತೆ ತೆಗೆಮ ಸಱಿದೋರುತೆ
ಚೋರನಂತಾಳಂಗವನು
ಆರೈವುತಿರೆ ಬರಂತಿವನನಱಸುತೆ
ವಾರನಾರಿಯರಿರಬೇಕು(?) ॥೮೬॥

ಮಗಳೆ ಕೇಳೆ ಹರದನ ತೆರದೊಳು ತನ್ನ
ಮಿಗುತೆಯನಱಿದಿರಬೇಕು
ಬಗೆಯೊಳು ಭಾವವನಱಿದಿರಬೇಕು ಚಿ
ತ್ರಿಗನಂತೆ ಗಳಿಸಾಳಿವೆಣ್ಣು ॥೮೭॥

[೮೧]ಹಾ[೮೧]ಸತನದೊಳು ಹೋರೆದೋಱದೆ ಧನ
ದಾಸೆಯೆಂಬುದನು ಕಾಣಿಸದೆ
ಮೋಸವೋಗದೆ ಧನಮಂ ಬರಸೆಳೆವುದು
ವೇಸಿಯರಿಗೆ ಗುಣವಮ್ಮಿ ॥೮೮॥

೭೯–೭೯ ನೆಂ (ತ,ಕ). ೮೦–೮೦ ಲ್ಲ (ತ,ಕ). ೮೧–೮೧ ಹೂ (ಕ).

ಸೋಲದವನ ಸುತ್ತುಂಗಾರನ ಗೆಲ್ವ
ಡಾಳಕನಂ ಡಂಬುಗಳನ
ಕಾಲವ ಕಳೆದು ವಂಚಿಪ ವಂಚಕನ ಗಳಿ
ಸಾಳಿವೆಂಗಳು ಬಯಸುವರೆ ॥೮೯॥

ಎಲೆಯುದುಜಿದ ಮರನಂ ಕಂಡು ಪಥಿಕರು
ತೊಲಗುವವೋಲ್ಬೆಲೆವೆಣ್ಗೆ
ನೆಲೆಮೊಲೆ ನೆಲೆದಪ್ಪಿದ ಮೇಲೆ ವಿಟರೊಂದು
ಹುಲು ಸಹ ಕೊಡರು ಕೇಳಮ್ಮಿ ॥೯೦॥

ಮೊಲೆಮುಗುಳೊತ್ತದ ಮುನ್ನ ರೋಮಾವಳಿ
ತಲೆದೋರದ ಮುನ್ನಲಾನು
ಗಳಿಸಾಳಿತನದೊಳಗ್ಗಳಿಕೆ[೮೨][ಯಿಂ][೮೨]ದೊಡವೆಯ
ಗಳಿಸಿದುದನು ಕೇಳರಿಯ ॥೯೧॥

ಉಟ್ಟ ಸೀರೆಯ ದಾಂಟಿ ನಲದು ಸಗ್ಗಿಗ
ವೆಟ್ಟವೆ [೮೩]ಕಾ[೮೩]ಯ ಮುಟ್ಟೆನಲು
ಮುಟ್ಟಲೊಡನೆ ನಾನಳಿವೆನೆ ನಂಬುಗೆ
ಗೊಟ್ಟು ವಿಟರನಾಳಬೇಕು(?) ॥೯೨॥

ನಂಬುಗೆಗೊಟ್ಟೊಳಗಾಗಿ ನಡೆದು ಧನ
ಮಂ ಬರಸೆಳೆದಂತವನ
ಹಂಬಲ ಹರಿದೆಣ್ಣೆಯಂ[೮೪]ಬಿ[೮೪]ಲದಂತೆ ಪೊ
ಸಂಬನೊಳಿರಬೇಕು ಚದುರೆ ॥೯೩॥

ಗುಣರೂಪನಣುಗಿ ಕೇಳೊಲಿದ ಬುಜಂಗನೊ
ಳೆಣಿಪುದು ಗಾಣಿಕ್ಯಮತವೆ
ಹಣವನೀವವನಾವವನವನಧಿಕ ಸ
ದ್ಗುಣಿಯವನಭಿನವಮದನ ॥೯೪॥

೮೨-೮೨ ಯಿಂ (ತ,ಕ). ೮೩-೮೩ ತಾ (ಕ).೮೪-೮೪ ಬ (ಕ).

ವ್ಯಾಳ ಶುಂಡಾಲ ಶಾರ್ದೂಲ ಸಂತತಿಯೊಳು
ಬಾಳುವೆಯುಂಟು ಭಾವಿಸಲು
ಬಾಳಬಾರದು ಮುದಿಸೂಳೆಯ ಸೋಂಕಿದ
ಗಾ[೮೫][ಳೆ][೮೫]ಯೊಳೆಂದನಲ್ಲೋರ್ವ ॥೯೫॥

ಇಚ್ಛೆಯಜೆದು ಬಗೆವೆಚ್ಚಿಯೊಚ್ಚತವೋಗಿ
ಬೆಚ್ಚಂತೆ ಕೂಡಿದ ಒಲಿದು
ಮಚ್ಚಿದ ಮಾನಿನಿ ದೊರೆಕೊಳೆ ಸಗ್ಗ[೮೬][ವ][೮೬]
ಕಿಚ್ಚಿನೊಳಿಕ್ಕೆಂದನೊರ್ವ ॥೯೬॥

ಜಲಜ ಬೊಬ್ಬುಳಿ ನೀರಕ್ಕರವೆಳವೆಱ್
ತೊಳಪ ಮಿಂಚಿಂದರವಿಲ್ಲ
ಜಲಧರದೊಡ್ಡಣೆಯೆಂತಂತೆ ಸೂಳೆಯ
ರೊಲವೆಂದ ಮತ್ತೊರ್ವ ಜಾಣ ॥೯೭॥

ಕೂರ್ತಡೆ ಕೂರ[೮೭][ನಿತ್ತು][೮೭]ದ[೮೮][ನಾ][೮೮]ಡಿಕೊಳುತಿಹ
ಧೂರ್ತತೆಯಿಂ ಗಡಬಡಿಪ
ಎಳ್ತುವೊಜಂಗನೊಳಲಸಿ ಕಂದುತೆ ಕಣ್ಗೆ
ನೀರ್ತಂದಳೊರ್ವ ಲತಾಂಗಿ ॥೯೮॥

ಪೋಗೆನೆ ಪೋಗನಿರ್ದೊಡೆ ಸಸಿನಿರನೆನ್ನ
ಬೇಗುದಿಗೊಳಿಸುವನಿವನ
ನೀಗುವ ತೆರನ ನಾ ಕಾಣೆನೀ ಪಾಪಿ[೮೯][ಗಿಂ][೮೯]
ನೇಗೈವೆನೆಂದಳಲಿದಳು ॥೯೯॥

ಮತ್ತೊಂದು ಮಣಿಮಾಡದೊಳು ಕಾದಲರಲ್ಲಿ
ಚಿತ್ತಜಕೇಳಿಯೊಳಿರ್ದು
ನೆತ್ತ ಪಗಡೆ ಚದುರಂಗವನಾಡುತೆ
ಪೊತ್ತಗಳೆದರು ಲೀಲೆಯೊಳು ॥೧೦೦॥

೮೫–೮೫ ಳ (ತ,ಕ). ೮೬–೮೬ ದ (ತ,ಕ).೮೭–೮೭ ತ್ತ (ತ,ಕ), ೮೮–೮೮ ನೋ (ತ,ಕ). ೮೯–೮೯ ನಿಂ (ತ,ಕ).

ವೀಣೆದಂಡಿಗೆ ಸ್ವರಮಂಡಲಗಳನಾಂ
ತಾಣಿವಡೆದು ಬಾಜಿಸುತೆ
ಕೇಣಿಗೊಂಬರು ವಿಟರೆದೆಯ ಗಂಧ[೯೦][ರ್ವ][೯೦] ಸರಿ
ಗಾಣೆಯರೊಂದೆಸೆಯಲ್ಲಿ ॥೧೦೧॥

ಚತುರಾಸ್ಯನ ನಿಜಸುತೆಯೊಳು ಕೂಡಿಸಿ
ದತಿಶಯಮಹಿಮನೆಂದೆನಿಪ
ರತಿಪನ ಕುಸುಮಕೋದಂಡದ ಬಲ್ಪು ಶಾ
ಶ್ವತವಿರ್ಕೆಯೆಂದು ಪಾಡುವರು ॥೧೦೨॥

ಎಲ್ಲರಜೆಯೆ ಕೃಷ್ಣನ ಜೋಡನ ಮಾಡಿ
ಗೊಲ್ಲತಿಯರೊಳೊಂದಿಸಿದ
ಮಲ್ಲಿಗೆಗೋಲನ ಜಯವನಿತೆಯ ಪೆಂಪಿ
ನುಲ್ಲಾಸವನುದಿನವಿರ್ಕೆ ॥೧೦೩॥

ಸಿತಗನ ಮಾಡಿ ಸು[೯೧][ರೇ][೯೧]ಂದ್ರನ ಕಾಯದು
ನ್ನತವ ಬಿಡಿಸಿ ಬನ್ನವಿಟ್ಟ
ಅತನುವಿನಗ್ಗಳವತನುವಾಗಿರಲೆಂ
ದತಿಮುದದಿಂದೆ ಪಾಡುವರು ॥೧೦೪॥

ಕೂಡುವ ವಿಟರೊಳು ಗಂಡುವೆಡಂಗಿಂದೆ
ಕೂಡುವಂದವ ತೋರುವಂತೆ
ಗಾಡಿವಡೆದ ಕಿರುವಜೆಯದ ಹೆಂಗಳ
[೯೨][ಲ್ಲಾ][೯೨]ಡುತಿಹರು ಪುಮ್ಮೆಯನು ॥೧೦೫॥

ಮಣಿಯೆ ಹೊಂಜೆಳೆ ನಡುಮೊಲೆ ಕದಕದಿಸೆ ಕಂ
ಕಣರವಮುಣ್ಮೆ ಮುಂಗುರುಳು
ಕುಣಿಯೆ ಸೋರ್ಮುಡಿ ಜಡಿಯಲು ಹಾರವಲುಗೆ ಪೆ
ಣ್ಮಣಿ ಪೊಡೆಸೆಂಡನಾಡಿದಳು ॥೧೦೬॥

೯೦-೯೦ ರ (ತ,ಕ). ೯೧-೯೧ ತಿ (ತ,ಕ). ೯೨-೯೨ ಲಾ (ತ,ಕ).

ನಿನ್ನಯ ನಲ್ಲಡಿಗಳ ಶೋಭೆಯನಿ
ತ್ತೆನ್ನ ಪಾಲಿಪುದೆಂದು ಮೊಗಕೆ
ಬಿನ್ನವಿಸುತೆ ಪಾದಕೆರಗುವಂತೆಸೆದುದು
ಚೆನ್ನೆ ಪೊಡೆವ ಮಣಿಸೆಂಡು ॥೧೦೭॥

ತ್ರಿದಿವ ಸುಖಾಸ್ವೇದಮಾಗೆವೆಯಿಲ್ಲ[೯೩][ದ][೯೩]
ತ್ರಿದಶನಾರಿಯರು ಮೇಲೆನಿಸಿ
ಅದಿರದಿರುತ್ತಿಜೆ ಕೋಪದೊಳಂಗನೆ
ಒದೆವವೋಲುಯ್ಯಲಾಡಿದಳು ॥೧೦೮॥

ಇಂತು ವಿಲಾಸದೊಳಿಹ ಬೆಲೆವೆಣ್ಣಳ
ತಿಂತಿಣಿಯನು ನೋಡುತರಸ
ಮುಂತೊಡವಂದರ ಕಳುಪಿ ತಾನೆಯ್ತಂ
ದಂತವುರವನೊಳಪೊಗುತೆ ॥೧೦೯॥

ಮಣಿಭವನದೊಳಂಚೆದುಪ್ಪಳವಾಸಿನ
ಮಣಿಮಂಚದೊಳು ಚಿಕ್ಕೇಂದ್ರ
ತ್ರಿಣಯನ ಚರಣಮನೆದೆಗೊಂಡು ಮಲಗಿದ
ನಣಿಯರಮಾದ ಸಂತಸದಿ ॥೧೧೦॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೧೧೧॥

[೯೪]ನವಮ ಸಂಧಿ ಸಂಪೂರ್ಣಂ[೯೪]

❖❖

೯೩–೯೩ ದಂ (ತ,ಕ). ೯೪–೯೪ ಅಂತು ಸಂಧಿ ೯ಕ್ಕಂ ಪದನು ೮೦೭ ಕ್ಕಂ ಮಂಗಳ ಮಹಾಶ್ರೀ ಶ್ರೀ (ತ,ಕ).

ಸಂಧಿ : ೧೦

ಜಯಜಯ ಶಂಕರ ದುರಿತ ಭಯಂಕರ

ಶ್ರೀಗಿರಿಜಾಕುಚಕುಂಕುಮಾಂಕಿತ ವಕ್ಷ
ಯೋಗಿಮಾನಸನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾ ಗುರು ಚೆನ್ನಮಲ್ಲೇಶ ॥೧॥

ಧರಣೀಶ್ವರ ಚಿಕ್ಕೇಂದ್ರನು ನಿದ್ರೆಯೊ
ಳಿರಲು ಚಂದ್ರಗೆ ದಿನಪತಿಯ
ಬರವ ಕಾಣುತೆ ಬಂದರು[೧][ಹು][೧]ವ ಬೇಹಿನ
ಚರನೆನೆ ಶುಕ್ರನೊಗೆದನು ॥೨॥

ಕಡೆಗಂಡುದಿರುಳರುಣೋದಯ ಸೂಚಿಸ
ಲೊಡನೆ ಹಜ್ಜಳಿಸುಹಬೆಯ
ವುಡುಯುಡುಪ ಸೂಡು ಸಂಕುಳ ಸಹವಾಗಿ
ಪಡುಗಡೆ[೨][ಗಿ][೨]ರದೆಯ್ದಿದನು ॥೩॥

ನಸುವಿರಿದವು ಕಮಲಂಗಳು ಕುಮುದಂಗ
ಳೆಸೆಕ[೩][ದಿ][೩]ಳಿಧವು ಚಕೋರ
ಬಿಸುಸುಯ್ದವು ಚಕ್ರವಾಕಂಗಳು ಸಂ
ತಸದಿಂದೆ ಬಗೆವೆಚ್ಚಿದವು ॥೪॥

೧–೧ ಹೂ (ತ,ಕ). ೨–೨ ನಿ (ತ,ಕ).೩–೩ ವಿ (ತ).

ತಿಳಿದುದಿರ್ಮಡಿ ಚಿಕ್ಕೇಂದ್ರಗೆ ನಿದ್ರೆ ನಿ
ರ್ಮಳಹೃದಯಾಂಬುಜದೊಳಗೆ
ನೆಲೆಗೊಂಡಿರುತಿಹ ಶಿವಮಂತ್ರವನವ
ನೊಲಿದುಚ್ಚರಿಸುತೆಚ್ಚರುತೆ ॥೫॥

ಶ್ರೀಗುರು ಪಾದಪದ್ಮಂಗಳನೊಲಿದನು
ರಾಗದಿಂ ಧ್ಯಾನಿಸುತಿರಲು
ಅಗಳೆ ಗಂಧರ್ವಗಾನವನುಳ್ಳತಿ
ರಾ[೪][ಗಾ][೪]ಧರೆಯರೊಗ್ಗಾಗಿ ॥೬॥

ಬಂದು ದಂ[೫][ಡಿ][೫]ಗೆ ದಾಮಣಿವುಡಿಗಳ
ನೊಂದಿ ಕುಳ್ಳಿರುತೆಸಕದೊಳು
ಅಂದವರಿದು ತಮ್ಮ ಸರಕೆ [೬][ಶ್ರು][೬]ತಿಯ ಸಜಿ
ದಂದು ಮೇಲಾಳಾಪಿಸುತೆ ॥೭॥

ಎಸೆವ ಮಂದ್ರದೊಳು ಗಂಭೀರವನುಜಿ ಕಾ
ಣಿಸಿ ಮಧ್ಯದೊಳು ಸವಿದೋಜಿ
ಎಸಕವಡೆದ ತಾರಕದೊಳು ಗಚ್ಚಮ
ನೆಸಗುತೆ ರಂಗುರಕ್ತಿಯೊಳು ॥೮॥

ಸ್ಥಾಯಿದಪ್ಪದೆ ಸ್ವರದೋಷಮಿಲ್ಲದೆ ಅನು
ಜಾಯಿ ಬಾಯಿಗಳೆಂದೆಂಬ
ಆಯತ ಗಣನೆಯ ನೆಲೆದಪ್ಪದೆಯೋ[೭][ಜೆ][೭]
ಯೊಯ್ಯಾರದಿಂಪು ಸೊಂಪಿಂದೆ ॥೯॥

ಇಂಗಡಲೊಳು ತೋರುವ ತೆಜಿಮಾಲೆಯ
ವಂಗಡದಂತೆ ರಾಜಿಸುತೆ
ಪೊಂ[೮]ಗು[೮]ವತೇನತೇನಂಬಪ್ಪ ಸವಿಯ ತಾ
ನಂಗಳ ಸವಿಯ ಕೇಳಿಸುತೆ ॥೧೦॥

೪–೪ ಗ (ತ,ಕ). ೫–೫ ದಿ (ತ,ಕ). ೬–೬ ಕೃ(ತ,ಕ).೭–೭ ಚೆ (ತ,ಕ). ೮–೮ ಗುತಿ (ಕ),

ಬಂದ ಮಾರ್ಗಂ ಬಾರದ ಗಮಕದ ಗಾಡಿ
ತಾಂದಪ್ಪದೆ ಪರಿಪರಿಯ
ಚಂದದಿ ತಿರುಪಂಗಳ ತೋಱಿ ವಹಣಿಗ
ಳಂದಮನೆದೆಗೊಳಿಸುತ್ತೆ ॥೧೧॥

ತ[೯]ವತಾ[೯]ಳು ಮೊದಲಾದ ಠಾಯಿಗಳಿಂದೆ
ರವಣೆಗೊಳಿಸಿ [೧೦]ತ್ರ[೧೦]ತ್ತರದ
ಸವಿಗಾಣಿಸಿ ಕಂಠವಳಿಯೊಳು ನುಣ್ಪಿನಿಂ
ದವೆ ಇಂಪನುಱೆಗಾಣಿಸುತೆ ॥೧೨॥

ಕಂಪಿತದಿಂದಿಂಪುಗೊಳಿಸುತೆ ರಸವೃತ್ತಿ
ಯಂ ಪೆರ್ಚಿಸುತೆ ಕಳೆಯಿಂದೆ
ಸೊಂಪಿನ ಬಗೆ ಮಾನವೆಸೆಯೆ ಬಜಾವಣೆ'
ಯಂ ಪಸಱಿಸೆ ಜಾಣ್ಮೆಯಿಂದೆ ॥೧೩॥

ದೇಶಾಕ್ಷಿ ಧನ್ಯಾಸಿ ಭೂಪಾಳಿ ಮೊದಲಾದ
ಲೇಸೆನಿಸುವ ರಾಗದಿಂದೆ
ಶ್ರೀ ಸಿದ್ಧಲಿಂಗೇಶನಂಕಮಾಲೆಯನೊಲಿ
ದಾ ಸುದತಿಯರು ಪಾಡುತ್ತೆ ॥೧೪॥

ಬಳಿಕ ಚಿಕ್ಕೇಂದ್ರನಮಳಗುಣಗಣವನು
ವಿಳಸಿತ ಮಧುರವಚನದೆ
ಕಳಕಂಠನಾದೆಯರುಪ್ಪವಡವನಾಗ
ಳೊಲಿದು ಪಾಡಿದರೆಂತೆನಲು ॥೧೫॥

ಸುರುಚಿರಾಕಾರ ನಿರ್ಜಿತಮಾರ ಪರಭೂ
ವರಬಲಮೇಘಸಮೀರ
ಸರಸಕವೀಂದ್ರಮಂದಾರ ಮಂದಾಕಿನಿ
ಧರಪಾದಭಕ್ತಿವಿಸ್ತಾರ ॥೧೬॥

೯-೯ ವೆಥಾ(ಕ), ೧೦-೧೦ ಕ (ಕ).

ಸಾರಸಜ್ಜನಸಜನಕೀರನಿಚಯಸಹ
ಕಾರ ಕಾರಣಶಾರೀರ
ಪಾರಾವಾರಗಂಭೀರ ಸನ್ಮಾರ್ಗವಿ
ಹಾರ ಸಂತತಸದ್ವಿಚಾರ ॥೧೭॥

ಪರಮಪವಿತ್ರಚರಿತ್ರ ಪಾವನಗಾತ್ರ
ಪರನೃಪರತಿಪ ತ್ರಿಣೇತ್ರ
ಸರಸಕೋವಿದನುತಿಪಾತ್ರ ಶಾತ್ರವ[೧೧]ನ[೧೧]ತ
ಚರಣ ಕೋಮಲಶತಪತ್ರ ॥೧೮॥

ಚರಲಿಂಗಪದಸಪರ್ಯತೃಣೀಕೃತಯಜ್ಞ
ಹರಮಂತ್ರಕಲಿತರಸಜ್ಞ
ಸರಸಕಲಾಭಿಜ್ಞ ಸಂತತಪೂಜಾ
ಪರಿತೋಷಕ ಸರ್ವಜ್ಞ ॥೧೯॥

ಶ್ರೀಲಸತ್ಕೀರ್ತಿವಿಶಾಲ ಶಾತ್ರವಭೂ
ಪಾಲಮಸ್ತಕಸಿತಶೂಲ
ಬಾಲೇಂದುಧರಭಕ್ತಿಪಾಲ ವಿಶಿಷ್ಟಾನು
ಕೂಲ ವಿಮಲಗುಣಜಾಲ ॥೨೦॥

ಆಡಿ ತಪ್ಪುವ ದೊರೆಗಳ ಗಂಡ ರಣದೊಳ
ಗೋಡುವ ಭೂಪರಗಂಡ
ಬೇಡಿದವರಿಗೀಯದೆ ಪೊಗಳಿಸಿಕೊಂಬ
ಮೂಢನೃಪಾಲರ ಗಂಡ ॥೨೧॥

ಸೂಳೆಯರೋಲಗದೊಳು ಪೊಗಳಿಸಿಕೊಂಡು
ಕಾಳಗವೆನಲೆದೆಗುಂದಿ
ಕಾಲವ ಕಳೆವ ಭೂಪಾಲಕರೆದೆಗಳ
ಶೂಲ ವಿಜಯವಧುಲೋಲ ॥೨೨॥

೧೧-೧೧ ನು (ಕ).

ಅಮಿತಪ್ರತಾಪ ಸತ್ಕುಲದೀಪ ಮಾನವ
ಸಮಚಾಪ ಪಾಪವಿಲೋಪ
ಶಮಿತಶಾತ್ರವಭೂಪ ಭುಜಬಲ ವಸುಧಾ
ರಮಣ ಚಿಕ್ಕೇಂದ್ರ ಚಿತ್ತೈಸು ॥೨೩॥

ಬೆಳಗಾಯ್ತುಪ್ಪವಡಕೆ ಮನವಿಡು ಕೆಂ
ಬೆಳಗು ಮೂಡಲು ಪರಸರಿಸಿತು
ತೊಳಪ ತಾರೆಗಳಡಗಿದುವು ತಾರಾಪತಿ
ಕಳೆಗುಂದಿ ಪಡುಗಡೆಗಿಳಿದ ॥೨೪॥

ಉದಯಾಚಲದಗ್ರಕೆ ತರಣಿಯ ತೇರ
ಕುದುರೆಗಳಿರದಡರಿದವು
ಮುದವೀವುತೆ ತಾವರೆಗೆ ತಂಗಾಳಿ ತೀ
ಡಿದುದೊಯ್ಯನೆ ತಂಪಿನಿಂದ ॥೨೫॥

ಅಱಿವಿಜಿದವು ತಾವರೆ ಕುಮುದಂಗಳು
ಪರಿಹರಿಸಿದವು [೧೨]ಮು[೧೨]ದವನು
ಪರಿತೋಷದಿಂದೊಂದಿದವೆಣೆವಕ್ಕಿವಿಂ
ಚರವೆಸೆದುದು ತುಂಬಿಯೊಳು ॥೨೬॥

ಅಗಲಲಾರದ ಕಾದಲರೆದೆಗೆಡಿಸುತೆ
ಮುಗುಳಂಬನ ಮುಂಬಿನೊಳು
ಸೊಗಯಿಪ ಕಾಳೆಯ ದನಿಯೆಂಬವೊಲು ಕೋ
ಳಿಗಳುಲಿವೆಸೆದುದಲ್ಲಲ್ಲಿ ॥೨೭॥

ಕಪ್ಪ ಕಾಣಿಕೆಗಳ ದೊರೆದೊರೆಗಳು ನಿನ
ಗೊಪ್ಪಿಸಬೇಕೆಂದೆನುತ
ಒಪ್ಪುವ ಪೊರ ಚಾವಡಿಯನೆಯ್ದಿದರೊಲಿ
ದುಪ್ಪವಡಿಸು ಚಿಕ್ಕಭೂಪ ॥೨೮॥

೧೨-೧೨ ಕುಮು (ತ,ಕ).

ನಡುನ[೧೩][ಡುವಿಹ][೧೩] ಚಾವಡಿಯೊಳು ಬಿಜ್ಜಗ
ಗಡಣ ಪೌರಾಣಿಕರೊಗ್ಗು
ಕಡು ಜಾಣರ ತಿಂತಿಣಿಯ[೧೪][ದು][೧೪] ಬಂದುದಿ
ರ್ಮಡಿ ಚಿಕ್ಕಭೂಪಯೇಳೊಲಿದು ॥೨೯॥

ಹೊನ್ನ ಕೊಪ್ಪರಿಗೆಗೆಳೊಳು ಪರಿಮಳ ಜಳ
ವನ್ನೀರೆಯರು ಬೆರಸಿದರು
ರನ್ನಗನ್ನಡಿ ಮಣಿಪಾವುಗೆಗಳನಾಂತು
ಚೆನ್ನೆಯರೆಯ್ತಂದರೊಲಿದು ॥೩೦॥

ಮನಸಿಜಹರನನ[೧೫][ರ್ಚಿಪ][೧೫] ವೇಳೆಯಿದು ಮ
ಜ್ಜನಕೆ ಮನಂಗೊಡು ಜೀಯ
ಮನವೊಲಿದೀಗಲುಪ್ಪವಡಿಸಿರ್ಮ್ಮಡಿ ಚಿಕ್ಕ
ಜನಪಾಲ ಕಾರುಣ್ಯಶೀಲ ॥೩೧॥

ಉಪ್ಪವಡಿಸು ಶಿವಮಂತ್ರಶೋಭಿತ ಜಿಹ್ವ
ಉಪ್ಪವಡಿಸು ರಾಜಸಿಂಹ
ಉಪ್ಪವಡಿಸು ಮೋಹನರೂಪ ನೀನೊಲಿ
ದುಪ್ಪವಡಿಸು ಚಿಕ್ಕಭೂಪ ॥೩೨॥

ಎಂದು ಮಧುರಮೃದುವಚನರಚನೆಯಿಂದೆ
ಗಂಧರ್ವ ಸಮಗಾನೆಯರು
ಚಂದದಿಂದುಪ್ಪವಡವ ಪಾಡುತಿರಲಾ
ನಂದದಿಂ ಕೇಳಿ ಮೆಚ್ಚುತ್ತೆ ॥೩೩॥

ಪಂಚಾಕ್ಷರಿಯ ಮಂತ್ರವನುಚ್ಚರಿಸುತೆ
ಚಾಂಚಲ್ಯರಹಿತ ಮಾನಸನು
ಅಂಚೆದುಪ್ಪಳವಾಸಿನಿಂದೊಪ್ಪುವ ಮಣಿ
ಮಂಚವನಿಳಿದು ಚಿಕ್ಕೇಂದ್ರ ॥೩೪॥

೧೩-೧೩ ಡೆವಿಯ (ತ,ಕ). ೧೪-೧೪ ರು (ತ,ಕ). ೧೫-೧೫ ರ್ಪಿಸ (ತ,ಕ).

ಜಲಜದಳಾಯತಲೋಚನೆ ತಂದಿಟ್ಟ
ತೊಳಗುವ ಮಣಿಪಾವುಗೆಯ
ಘಳಿಲನೆ ಮೆಟ್ಟುತಡಿಯಿಟ್ಟನೊಲವಿಂದೆ
ಜಳಕದ ಸದನಕಾ ನೃಪತಿ ॥೩೫॥

ಸ್ನಾನವ ಮಾಡಿ ದುಕೂಲವ ಪೊದೆದುಟ್ಟು
ಮಾನಿತ ಗುರುದರುಶನಕೆ
ತಾನೊಲಿದೆಯ್ದಿದನಾ ಗುರುಮೂರ್ತಿಯೆ
ಧ್ಯಾನಕ್ಕೆ ಮೊದಲೆಂದೆನುತೆ ॥೩೬॥

ಗುರುಪಾದಪದ್ಮವೆ ಪೂಜೆಗೆ ಮೊದಲಾ
ಗುರುವಾಕ್ಯವದು ಮಂತ್ರಮೂಲ
ಗುರುಕರುಣವೆ ಮೋಕ್ಷಕೆ ಮೊತ್ತಮೊದಲಾ
ಗುರುವೆ ತಾಯ್ತಂದೆ ಬಂಧುಗಳು ॥೩೭॥

ಗುರುವೆ ಪರಮಶಿವನಾ ಪರಶಿವ ತಾನೆ
ಗುರುವಾದ ಕಾರುಣ್ಯದಿಂದೆ
ಗುರುವಿಂದಧಿಕವಿಲ್ಲಿಲ್ಲಿಲ್ಲೆಂದು
ಹರವಚನವು ಸಾರುತಿದೆ ಕೋ ॥೩೮॥

ಶ್ರುತಿ ನಾಸ್ತಿತತ್ವಮೆನುತೆ ಗುರೋಃಪರಮೆಂ
ದತಿ ರವದಿಂ ಸಾರುತಿವೆಕೋ
ಅತಿಶಯ ಮಹಿಮ ಸದ್ಗುರುವಿನ ಕರುಣದು
ನ್ನುತಿಯನುಚ್ಚರಿಸಲೆನ್ನಳವೆ ॥೩೯॥

ಶ್ರುತಿತತಿಯರಸಿ ಕಾಣದೆ ಕಣುಗೆಟ್ಟು ಚ
ಕಿತಮಭಿಧತ್ತೇಯೆಂದೆನುತೆ
ಅತಿ ರವದಿಂದೆ ಯತೋವಾಚೋಯೆಂದೆ
ನುತೆ ಸಾರುತಿದೆ ತದ್ವಚನ ॥೪೦॥

ವ್ಯಕ್ತಮಾಗಿಯೆ ಬಿಡದುಲಿವುದನಂತಮ
ವ್ಯಕ್ತಮಚಿಂತ್ಯಮೆಂದೆನುತೆ

ಉಕ್ತಿಗಳೆಯ್ದದ ಬಗೆಗೊಳಗಾಗದ
ವ್ಯಕ್ತಪರಮಕಾರಣನ ॥೪೧॥

ವಿತತ ಪುರಾಣಾಗಮ ತರ್ಕತಂತ್ರೋ
ನ್ನತ ಶಬ್ದಜಾಲವಱಿಯದ
ಪ್ರತಿಯಿಲ್ಲದಪ್ರತಿಮಾಕಾರನೆನಿಪ ಶಾ
ಶ್ವತಮೂರ್ತಿಯೆನಿಪ ಲಿಂಗವನು ॥೪೨॥

ಸನಕಾದಿ ಸಕಲಸನ್ಮುನಿ ಸಮುದಾಯದ
ಮನದ ಬ೧೬[ಲ್ಮೆ]೧೬ಗೆ ಮೈಗೊಡದ
ವಿನುತ ಷಟ್ಸ್ಥಲಬ್ರಹ್ಮಿಗಳ ನಿಜವೆನಿಪ ಚಿ
ದ್ಘನತರ ಪರಮಲಿಂಗವನು ॥೪೩॥

ಹರಿಯಜರರಸಿ ಕಾಣದ ಲಿಂಗವನೆನ್ನ
ಕರ ಮನೋಭಾವದೊಳಿರಿಸಿ
ಪರಿಭವಮಂ ಪರಿಹರಿಸಿ ಲಿಂಗಾಂಗದ
ಪರಿಯನೆನಗೆ [೧೭ಬೋ]೧೭ಧಿಸುತೆ ॥೪೪॥

ತನುಕರಣೇಂದ್ರಿಯಂಗಳನೆಲ್ಲ ಪರಿಪೂರ್ಣ
ಘನಲಿಂಗವೆನಿಸಿ ತಾನೆನ್ನ
ಅನುಪಮ ಷಟ್ಸ್ಥಲಬ್ರಹ್ಮಾನುಸಂಧಾನಿ
ಯೆನಿಸಿ ಕೈಹಿಡಿದು ರಕ್ಷಿಸಿದ ॥೪೫॥

ಅನಿಮಿತ್ತ ಬಂಧು ದಯಾಸಿಂಧು ತಾನೆಂ
ದೆನಿಸಿದ ಗುರುವರನಡಿಗೆ
ವಿನುತ ದೇಹಾರ್ಥಪ್ರಾಣಂಗಳುಚಿತಮೆಂ
ದೆನುತೀಡಾಡಿದನೊಡಲ ॥೪೬॥

ಬಳಿಕೆದ್ದು ಕೈಮುಗಿದತಿ ಭಯಭಕ್ತಿಯಿಂ
ದೊಲಿದು ಕೀರ್ತಿಸುತೆಯ್ತಂದು

೧೬–೧೬ ಲ್ಮಿ (ತ,ಕ), ೧೭–೧೭ ಬ (ತ,ಕ).

ಪುಳಕಾಂಚಿತ ವಿಗ್ರಹನಾಗಿ ಶ್ರೀಪದ
ನಳಿನದೊಳ[೧೮][ಳ][೧೮]ಕಮನಿಡುತೆ ॥೪೭॥

ಗುರುಕರುಣಾಭಯಮಮಂ ನೆಱೆ ಪಡೆದು ಭೂ
ವರ ಚಿಕ್ಕನೆಯ್ತರುತಿರಲು
ಪರಮಲಿಂಗಾರ್ಚನ ಸದನವೆಸೆದುದದ
ಱಿರವನದೇನ ಬಣ್ಣಿಪೆನು ॥೪೮॥

ಎಸಕವಡೆದ ರನ್ನಗಳ ಬಿ[೧೯][ನ್ನ][೧೯]ಣದೆ ಕೀ
ಲಿಸಿ ಸೊಂಪುದೋರಿ ಚಿತ್ರಿಸಿದ
ಕುಸುಱಿಗೆಲಸದ ಬಾಗಿಲ್ವಾಡದಿಂದೆ ರಂ
ಜಿಸುತಿರ್ದುದಾ ದಿವ್ಯಭವನ ॥೪೯॥

ಪವಳದ ಕಂಬ ಪಚ್ಚೆಯ ತೊಲೆ ನೀಲದ
ಜವಳಿ ಬೋದಿಗೆ ಮರಕತದೆ
ಸವೆದ ಮೇಲ್ವಲಗೆಯಿಂ ಜಗಜಗಿಸುತೆ ಮಣಿ
ಭವನಮೊಪ್ಪುವುದೇನನೆಂಬೆ ॥೫೦॥

[೨೦][ಅಗ][೨೦]ರುಗತ್ತುರಿಯ ಸಾರಣೆಯ ಕುಂಕುಮದ ಚೆಂ
ಬೊಗರ ಸೂಸುವ ಕಾರಣೆಯ
ಮಗಮಗಿಸುವ ಧೂಪದ ಕಂಪಿನಿಂಪಿನಿಂ
ಸೊಗಯಿಪ ಭವನಮೊಪ್ಪುವುದು ॥೫೧॥

ಬಸವಾದಿ ಸಕಲಪುರಾತನ ಕಥನದಿಂ
ದೆಸೆದಿಹ ಶಾಸ್ತ್ರ[೨೧][ಪ][೨೧]ಟಗ[೨೨][ಳಿಂ][೨೨]
ಶಶಿಕಾಂತದ ಭಿತ್ತಿಗಳ[೨೩][ನ][೨೩]ನುಗೊಳಿಸಿ ಕಂ
ಗೆಸೆದುದಾ ದಿವ್ಯಮಂದಿರವು ॥೫೨॥

[೨೪][ಒ][೨೪]ಟ್ಟಿಯ ಬಟ್ಟಮುತ್ತಿನ ಜೂಳೆಯವಿಳಿ
ವಿಟ್ಟ ಮುತ್ತಿನ ಕುಚ್ಚುಗಳು

೧೮–೧೮ ಳ (ತ,ಕ). ೧೯–೧೯ ನ್ನಾ (ತ,ಕ). ೨೦–೨೦ ನಿಗು (ತ,ಕ). ೨೧–೨೧ ಪಾ (ತ,ಕ). ೨೨–೨೨ ಳು (ತ,ಕ). ೨೩–೨೩X(ತ,ಕ). ೨೪–೨೪ ವ (ತ,ಕ).

ಕಟ್ಟಿ ನೇಲುವ ಪೂಮಾಲೆಗಳಿಹ ಮೇ
ಲ್ಕಟ್ಟಿನಿಂದೆಸೆದುದಾ ಸದನ ॥೫೩॥

ಕಂಗೊಳಿಸುವ ಮೃದುಗದ್ದುಗೆಯಿಂ ಲೇಪ
ನಂಗೈದು ವಿರಚಿಸಲೆಸೆವ
ರಂಗವಲ್ಲಿಯ ರಚನೆಯೊಳಲ್ಲಿ ವೇದಿಕೆ
ತಾಂ ಗಾಡಿವಡೆದು ರಂಜಿಪುದು ॥೫೪॥

ತೊಳಗುವ ಮಣಿ ಮಜ್ಜನಶಾಲೆ ನಿರ್ಮಳ
ಜಲಪೂರಿತ ಕಲಶಗಳು
ಪೊಳೆವಡ್ಡಣಿಗ ಪೊಂಬಜೆವಾಣವೆಸೆದು
ಜ್ವಳಿವ ರತ್ನದ ಜಷಕಗಳು ॥೫೫॥

ಭಸಿತಕರಂಡ ಗಂಧಾಕ್ಷತೆಗಳ ಪಾತ್ರೆ
ಕುಸುಮಭಾಜನ ಸಮುದಾಯ
ಎಸೆವ ಸತ್ಫಲವೀಟಿಕೆಗಳಿಂ ಕಣ್ಗೆ ಶೋ
ಭಿಸುವ ಮಿಸುನಿಯ ಪಾತ್ರೆಗಳು ॥೫೬॥

ಸುರುಚಿರ ಮಣಿದರ್ಪಣ ಗಂಟೆಗಳು ಭಾ
ಸುರತರ ಛತ್ರಚಾಮರವು
ವರ ಪದ್ಮರಾಗರಚಿತ ಕರಕಮಲಮೊ
ಪ್ಪಿರುತಿರ್ಪುವು ಥಳಥಳಿಸಿ ॥೫೭॥

ತರತರದಿಂ ಸಾಲ್ಗೊಳಿಸಿ ಮುಂದೆಸೆಯೊಳು
ವರರತ್ನರಚಿತ ರಚನೆಯ
ಪರಿಪರಿಯತಿಕುಶಲತೆಯ ಲ[೨೫]ತಾ[೨೫]ರತಿ
ಪರಿವಡೆದೆಯ್ದೆ ರಂಜಿಪುವು ॥೫೮॥

ಕೆಲಬಲದೊಳು ಕಂಗೊಳಿಸುವ ವರರತ್ನ
ಕಲಿತ ದೀಪಸ್ತಂಭಗಳು

೨೫-೨೫ X (ಕ).

ಥಳಥಳಿಸುತೆ ಬೆಳಗುತ್ತಿರಲೆಸೆವಾ
ನಿಳಯಕೆಯ್ತಂದು ಚಿಕ್ಕೇಂದ್ರ ॥೫೯॥

ಮದನಾಂತಕ ತೋಂಟದ ಸಿದ್ಧೇಶನ
ಪದಪದ್ಮಕೆ ಶರಣೆನುತೆ
ಮೃದುತರವಾದ ಗದ್ದುಗೆಯೊಳು ನಿರ್ಮಳ
ಹೃದಯನೊಲಿದು ಮಂಡಿಸುತೆ ॥೬೦॥

ಮಾನಸ್ತೋ[೨೬]ಕ[೨೬] ಮಂತ್ರದೆ ಸಿತಭಸಿತವ
ಸಾನುರಾಗದಿ ಪಿಡಿದದನು
ಭೂನಾಥ ಮೂಲಮಂತ್ರದಲಭಿಮಂತ್ರಿಸಿ
ತಾನೊಲಿದಾ ಭಸಿತಕ್ಕೆ ॥೬೧॥

[೨೭][ಓಂ ಪುನಾತೀತಿ][೨೭] ಮಂತ್ರದಿ ನಮಿಸುತ್ತ[೨೮][ಫ][೨೮]
ಲುಂಪತಿಯೆಂಬ ಮಂತ್ರದೊಳು
[೨೯][ಪೆಂ][೨೯]ಪುವೆತ್ತಾ [೩೦][ತ್ರಿಯಾಯುಷ][೩೦] ಮಂತ್ರದಿಂದ
ದಂ ಪಣೆಯೊಳು ಧರಿಸುತ್ತೆ ॥೬೨॥

ಎಸೆವ ಶಿವಾಗಮೋದಿತ ತಾಣಗಳೊಳು
ಭಸಿತವ ಧರಿಸಿ ಸಂತಸದಿ
ಮಿಸುಪ ರುದ್ರಾಕ್ಷಮಾಲೆಗಳನರ್ಚಿಸುತೆ ನ
ಮಿಸುತಾ ರುದ್ರಾಕ್ಷಿಗಳ ॥೬೩॥

ಶಿರದೊಳು ಶಿಖಿಯೊಳು ಕರ್ಣಯುಗಳದೊಳು
[೩೧]ಕೊರಲೊಳು[೩೧] ಬಾಹುದ್ವಯದೊಳು
ವರಮಣಿಬಂಧದೊಳುರದಲ್ಲಿಯುಂ ತವೆ
ಧಜಿಸಿದನಭವ ಮಂತ್ರದಲಿ ॥೬೪॥

೨೬-೨೬ ತ(ಕ). ೨೭-೨೭ ಒಂಪುನಾತಿತಿ (ತ,ಕ). ೨೮-೨೮ ದ (ತ,ಕ). ೨೯-೨೯ ಪೊಂ (ತ,ಕ) ೩೦-೩೦ ಕ್ರಿಯಾಯುಪ (ತ,ಕ).೩೧-೩೧ ಕರದೊಳು (ಕ).

ಭಾಸುರತರ ಮೂಲಮಂತ್ರದಿಂದಂಗ
ನ್ಯಾಸ ಕರನ್ಯಾಸವನು
ಲೇಸಾಗಿ ರಚಿಸಿದ ಪ್ರಾಣಾಯಾಮವನು ವಿ
ಲಾಸದಿಂದನುಗೆಯ್ದು ಬಳಿಕ ॥೬೫॥

ಮಂಗಳಪ್ರದ ಜಪಮಾಲೆಯನೊಲಿದು ಮ
ನಂಗೊಳುತರ್ಚಿಸುತದನು
ಅಂಗುಷ್ಠಮಧ್ಯಮನಾಮಿಕಯೆನಿಪ ಮೂ
ರಂಗುಲಿಯಿಂದೆಯ್ದೆ ಪಿಡಿದು ॥೬೬॥

ಅಯ್ದು ಮೊಗದ ಮೂರೈದು ಕಣ್ಣುಗಳೀ
ರೈಯ್ದು ತೋಳ್ಗಳ ಶ್ರುತಿತತಿಗೆ
ಮೆಯ್ದೋರದ ಭಕ್ತದೇಹಿಕದೇವನ
ನೆಯ್ದೆ ಜಾನಿಸುತೆ ಚಿತ್ತದೊಳು ॥೬೭॥

ಸಲೆ ವಾಚಕವಾಚ್ಯಭೇದವನರಿದು ಸ
ದ್ವಿಲಸಿತ ಮೂಲಮಂತ್ರವನು
ಲಲಿತ ಸದ್ವರ್ಣದಿಂದು ವರ್ಣವನನು
ಗೊಳಿಸುತೆ ಪದದಿ ಪದವನು ॥೬೮॥

ಪಟಿವಿಡಿಯಿಂ ತತ್ವಾರ್ಥಚಿಂತನೆ ಸಹ
ಪಟಿಗಣನೆಯೊಳೊಂದೊಂದು
ವರಮಣಿಗೊಮ್ಮೊಮ್ಮೆ ಜಪಿಸಿದ ಜಪವನೀ
ಶ್ವರನಡಿಗಳಿಗರ್ಪಿಸುತೆ ॥೬೯॥

ಆ ಮಂತ್ರವಾ ಮೂರುತಿಯಾದ ಗೋಳ[೩೨]ಕ[೩೨]
ಗೋಮುಖ ವೃತ್ತತೆಯಿಂದೆ
ಪ್ರೇಮದಿ ಮೈದೋರುವಿಷ್ಟಲಿಂಗ[೩೩][ವ][೩೩] ಕರ
ತಾಮರಸದೊಳಿಂಬಿಡುತೆ ॥೭೦॥

೩೨–೩೨ ತ(ಕ). ೩೩–೩೩ ದಿ (ತ,ಕ).

ನಲಿವುತ್ತೆ ಲಯ[೩೪][ಮೇ][೩೪]ತಿಯೆಂಬ ಮಂತ್ರದಿ ಕರ
ತಳದಿಂದೆ ಮುಟ್ಟಿ ಮುದ್ದಿಸುತೆ
ಒಲಿದು ನಿಟ್ಟಿಸಲೊಡನಾನಂದಾಶ್ರುಗ
ಳಿೞಿದವು ಕಡೆಗೋಡಿವಱಿದು ॥೭೧॥

ಇಡಿಕಿಱಿ[೩೫][ದುಣ್ಮಿ][೩೫]ತು ಪೊಂಪುೞಿ ಬೆಮರ್ವನಿ
ಒಡನೆ ತೊಳಪ ತನುವಿನೊಳು
ಬಿಡದೆ[೩೬][ಸೆರೆ][೩೬]ಗಳುಬ್ಬಿ ಬಿಗಿವುತೆ ಗದುಗದ
ವೆಡೆಗೊಂಡುದವನ ಮುಂಗೊರಲ ॥೭೨॥

ನೋಡುವ ನೋಟಮದೊಲ್ಮೆವಡೆದು ಬಗೆ
ಗೂಡಿ ಮುಂಬಱಿದು ಕಾತಱಿಸಿ
ನೋಡದೆ ಕೊಂಕದೆ ನಿಲ್ಲದೆ ಲಿಂಗದ
ಗಾಡಿಗೆ ಸೋಲ್ತುದೇನೆಂಬೆ ॥೭೩॥

ಹೊಳೆಯದೆ ಹಿಮ್ಮೆಟ್ಟದೆ ರೂಪಾಂತರ
ಕೊಲೆಯದೆ ಕೆಲಬಲದೆಡೆಗೆ
ಚಲಿ[೩೭]ಸದ[೩೭]ಲಸದೆ ಲಿಂಗವನೆಯ್ದೆ ಬೆಳಪ ಬೆ
ಳ್ವೆಳಗ ಬೀರುತೆ ಮುಸುಱಿದುದು ॥೭೪॥

ತೊಳಗುತೀಶನ ಸಿಱಿಮುಡಿಗಿಂದುಕಳೆ ಬಾಂ
ಬೊಳೆಗಳಂಗಕೆ ಸಿತಭಸಿತ
ತಳ[೩೮]ಕ್ಕೆ[೩೮] ತಾರಾದ್ರಿಯಾದುದು ಚಿಕ್ಕಭೂಪನ
ವಿಳಸಿತ ನೇತ್ರಮಱೀಚಿ ॥೭೫॥

ಕ್ಷೀರಧಾರಾಭಿಷೇಕಂ ಗಂಧಾಕ್ಷತೆ
ಚಾರು ಸುಮೋ[೩೯]ಪಾ[೩೯]ಹಾರ
ಭೂರಮಣನ ದೃಷ್ಟಿವೆಳಗು ಲಿಂಗಕೆ ಕ
ರ್ಪೂರ ವೀಟಿಕೆಯಾಗಲಾಗ ॥೭೬॥

೩೪–೩೪ ಮಿ (ತ,ಕ). ೩೫–೩೫ ದೂಣಿ (ತ,ಕ). ೩೬–೩೬ ಸಿಲೆ (ತ,ಕ).೩೭–೩೭ ಸಿವ (ತ).೩೮–೩೮ ರೆ (ಕ), ೩೯–೩೯ ಪ (ಕ).

ನಡೆ ನೋಡುತಿಂತು ಕೊಂಡಾಡುತೆಯಮರ್ದಪ್ಪಿ
ಬಿಡದೆ ಮುಂಡಾ[೪೦][ಡಿ][೪೦] ಮುದ್ದಿಸುತೆ
ಒಡನೆ ಸುಖಾಂಬುನಿಧಿಯೊಳೋಲಾಡುತೆ
ಕಡು ಹೆಚ್ಚೆ ಹಿಗ್ಗಿ ಹೆಕ್ಕಳಿಸಿ ॥೭೭॥

ಪರ್ವುತೆ ಪರಕಲಿಸುತೆ ಪೊಂಗಿ ಪುಟವೇರಿ
ಯುರ್ವುತೆ[೪೧][ಯುಣ್ಮಿ][೪೧] ಪೊಣ್ಮುತ್ತೆ
ಕೊರ್ವುತೆ ಕರೆಗಣ್ಮುತೆ ನಲವೇರು[೪೨][ತ][೪೨]
ಗುರ್ವಿಸಿ ಕೂಗಿ ಬೀಗುತ್ತೆ ॥೭೮॥

ಉಮ್ಮಾಯ[೪೩]ಗೋತು[೪೩]ರ್ಕುತೆ ಸೊರ್ಕುತೆ ಕಡು
ಪೆರ್ಮೆಗೊಳ್ಳುತೆ ಹಿಗ್ಗುತೆಯ್ದೆ
ಹಮ್ಮಿನಿಂದಂ ತನ್ನಂ ಮಱೆವುತ್ತಾಗ
ಹಮ್ಮದಗೊಳುತೆಚ್ಚರುತೆ ॥೭೯॥

ಒಡನಳ್ಕುತೆ ನಸುನಗುತೆಯ್ದೆ ನಾಣ್ಚುತೆ
ಬಿಡದೆ ಸ್ವೈರಗಾಗುತ್ತೆ
ಮೃಡಮೂರ್ತಿಯ ನೋಡುತೆ ಲಲ್ಲೆಗಱೆವುತೆ
ಕಡು ದೈನ್ಯೋಕ್ತಿಗಳಿಂದೆ ॥೮೦॥

ಎನ್ನ ಕುಲವೆ ಎನ್ನ ಛಲವೆ ಪೆಂಪುವಡೆ
ದೆನ್ನ ಗೆಲವೆ ಎನ್ನ ನಿಲವೆ
ಎನ್ನ ಪುಣ್ಯಫಲವೆ ಎನ್ನೊಲವೆ ಕೇ
ಳೆನ್ನ ನಲವೆ ಎನ್ನ ನಿಲವೆ ॥೮೧॥

ಎನ್ನ ಮತಿಯೆ ಎನ್ನ ಪರಮಸದ್ಗತಿಯೆ
ಎನ್ನಯ ಚಿದಲಂಕೃತಿಯೆ
ಎನ್ನ ಪತಿಯೆ ಬಲ್ಪುವೆತ್ತು ರಾರಾಜಿಸು
ಎನ್ನ ಧೃತಿಯೆ ಎನ್ನ[೪೪][ಗತಿ][೪೪]ಯೆ ॥೮೨॥

೪೦–೪೦ ದಿ (ತ,ಕ). ೪೧–೪೧ ಯೂಣ್ಮು (ತ,ಕ). ೪೨–೪೨ ತೆ (ತ,ಕ).೪೩–೪೩ ಗೊತ್ತು (ಕ). ೪೪–೪೪ ನತಿ (ತ), ನರಿ (ಕ).

ಎಂದಿಂಪು ಸೊಂಪುವಡೆದ ಮೃದುವಚನಂಗ
ಳಿಂದೊಲ್ದು ಜಿನಗುತಲಾಗ
ಅಂದವಡೆದ ಕಂಪಿನ ನವಕುಸುಮವ
ನಿಂದುಕಲಾಧರಗಿತ್ತು ॥೮೩॥

ಪಜಿತೋಷದಿಂದೆ ಪಂಚಬ್ರಹ್ಮವನನು
ಚ್ಚಜಿಸುತೆ ಪಾದ್ಯಾದಿಗಳ
ಸುರುಚಿರ ಸಕಲೋಪಚಾರದಿಂ ಕರುಣಾ
ಕರಗೆ ಕೋವರಿಗೊಳುತಿತ್ತು ॥೮೪॥

ಎಸೆವ ಶ್ರೀರುದ್ರ ಪುರುಷಸೂಕ್ತ ಮಂತ್ರವ
ನುಸುರುತಲಭಿಷೇಕವನು
ಕುಸುಮಶರಾರಿಗೆ ಮಾಡಿ ಬಳಿಕ ಸಿತ
ಭಸಿತವನಳವಡಿಸಿಟ್ಟು ॥೮೫॥

ಗಂಧಾಕ್ಷತೆಗಳನಿಟ್ಟು [೪೫]ತಾ[೪೫] ತನ್ಮಂತ್ರ
ದಿಂದ ಸಹಸ್ರನಾಮವನು
ಚಂದದೊಳುಚ್ಚರಿಸುತ ಕುಸುಮಂಗಳ
ಇಂದುಶೇಖರಗರ್ಪಿಸಿದ ॥೮೬॥

ಅರಳದೆ ಅ[೪೬][ತ್ರಿ][೪೬]ಬಳಲದೆ ತೀಡುವೆಲಜಿಂದೆ
ಪರಿಮಳವಿನಿತು ತೊಲಗದೆ
ಮುರುಟದೆ ನನೆಯಲ್ಲದೆ [೪೭]ನ[೪೭]ಳನಳಿಪ[೪೮][ರೆ][೪೮]
[೪೯]ವಿ[೪೯]ಜಿದ ಕಮ್ಮಲರನರ್ಪಿಸಿದ ॥೮೭॥

ಮಿಸುಪ ಕೆಂದಾವರೆ [೫೦]ಗರಿ[೫೦]ಹೂವಿನ ಕಜೆ
ಯೆಸಳು ಗೋರಟಿ ಬಕುಳಗಳ
ಮಿಸುಪ ನಂದ್ಯಾವರ್ತ ಮೊದಲಾದ ಕಂಪಿನ
ಕುಸುಮವನೀಶಗರ್ಪಿಸಿದ ॥೮೮॥

೪೫-೪೫ X(ಕ). ೪೬-೪೬ ಳಿ (ತ,ಕ). ೪೭-೪೭ X(ತ,). ೪೮-೪೮ ಡೆ (ತ,ಕ). ೪೯-೪೯ ವ(ಕ). ೫೦-೫೦ (ಕ).

ಮಲ್ಲಿಗೆ ಜಾಜಿ ಶಾವಂತಿಗೆ ಸಂಪಿಗೆ
ಮೊಲ್ಲೆ ಪಾದರಿ ಪಚ್ಚೆ ದವನ
ಉಲ್ಲಾಸದಿಂ ಕೇತಕಿಯುಮ್ಮತುಗಳ
ಫುಲ್ಲಶರಾರಿಗರ್ಪಿಸಿದ ॥೮೯॥

ನಳನಳಿಸುತೆ ಕೊಬ್ಬಿ ಬೆಳೆದ ಪಚ್ಚೆಯ ತೆನೆ
ತುಳಸಿಯ ದಳ ದವನಗಳ
ಲಲಿತ ಕೋಮಲ ಬಿಲ್ವದಳ ಮರುವಕಗಳ
ನಿಳೆಯಾಣ್ಮನೀಶಗರ್ಪಿಸಿದ ॥೯೦॥

ಕಂಗಳ ರೋಚಿ ಕದಂಪಿನ ರುಚಿ ಹಾ
ರುಗಳ ಚಾರು ಮರೀಚಿ
ಸಂಗೊಳಿಸೆಸೆವ ಲತಾಂಗಿಯರೊಲಿದೀವ
ಮಂಗಳಾರತಿಯನೆತ್ತಿದನು ॥೯೧॥

ಮಂಗಳವೆಳದಿಂಗಳ ಸೂಡಿದಭವಗೆ
ಮಂಗಳವಂಗಜಹರಗೆ
ಮಂಗಳವಗಜಾರ್ಧಂಗಗೆ ಮಹಿಮೋ
ತ್ತುಂಗಗೆ ಮಂಗಳವೆನುತೆ ॥೯೨॥

ಅತಿರತಿಯಿಂ ರವಿಕೋಟಿಪ್ರಕಾಶಗಾ
ರತಿಯ ಬೆಳಗಿ ಭಕ್ತಿಯಿಂದೆ
ಶ್ರುತಿಗಳ ಜತಿಗಳ ಮತಿಗೆ ಮೈದೋರದು
ನ್ನತನ ನುತಿಸಿದನಿಂತೆಂದು ॥೯೩॥

ಜಯಜಯ ಲೋಕತ್ರಯನತಪಾದ
ದ್ವಯ ನಿರ್ಭಯ ಚಿನ್ಮಯನೆ
ಜಯಜಯ ಮೃತ್ಯುಂಜಯ ವಿಶ್ವಮಯದೇವ
[೫೧][ಭ][೫೧]ಯಭಕ್ತಹೃದಯಾಶ್ರಯನೆ ॥೯೪॥

೫೧–೫೧ ಹ(ತ,ಕ).

ಜಯಜಯ ಶಂಕರ ದುರಿತಭಯಂಕರ
ಜಯಜಯ ಕರುಣಾಕರನೆ
ಜಯಜಯ ತರುಣಸುಧಾಕರಶೇಖರ
ಜಯಜಯ ವರದಯಾಕರನೆ ॥೯೫॥

ವಾರಣಮುಖಸುಖಕಾರಣವೀಕ್ಷಣ
ವಾರಣದನುಜದಾರಣನೆ
ದಾರುಣ ಜನನಮರಣಮೇಘಚಂಡಸ
ಮೀರಣ ಕಾಲಸಂಹರಣ ॥೯೬॥

ಪುಂಗವರಾಜತುರಂಗ ನಿರಸ್ತಾ
ನಂಗ ದುರ್ಗಾವಾಮಾಂಗ
ಗಂಗಾಭಂಗವಿರಾಜಿತವಿಪುಳೋತ್ತ
ಮಾಂಗ ಸದ್ಭಕ್ತಾಂತರಂಗ ॥೯೭॥

ಕರತಲಕಲಿತ ಶೈಲಾಗ್ರವಿಲಂಬಿತ
ಮುರಹರಸಖಿ ವಿ[೫೨][ಧಿ][೫೨]ಮಸ್ತ(?)
ಪಟಿಶೋಭಿತವಾಮಹಸ್ತ ವಿರಾಜಿತ
ನರಹರ್ಯಕ್ಷ ಭಾಳಾಕ್ಷ ॥೯೮॥

ಕಾಲಕಂಧರ ಜಿತಮತ್ತಜಲಂಧರ
ನೀಲಲೋಹಿತ ಭ[೫೩][ಕ್ತಾಧೀನ][೫೩]
ಭಾಳಲೋಚನ ಭವಮೋಚನ ಕರುಣಾ
ಶೀಲ ಶರಣಗಣಪಾಲ ॥೯೯॥

ಅಂಬುಜನೇತ್ರ ನೇತ್ರಾಂಬುಜಾರ್ಚಿತಪಾ
ದಾಂಬುಜಂಭೋರುಹವೈರಿ
ಶಂಬರಜಾಪ್ತ ಮಾರುತಮಿತ್ರನೇತ್ರ ಕೃ
ಪಾಂಬುಧಿ ಸಕಲಭೂತೇಶ ॥೧೦೦॥

೫೨–೫೨ ಧು (ತ,ಕ). ೫೩–೫೩ ಕ್ತಹಿನೆ (ತ,ಕ).

ಶರಣಯ್ಯ ಶರಣಾಗತವಜ್ರಪಂಜರ
ಶರಣು ಭವಾಬ್ಜಕುಂಜರನೆ
ಶರಣಯ್ಯ ಘೋರದುರಿತವನದಾವನ
ಶರಣಯ್ಯ ಶರಣಸಂಜೀವ ॥೧೦೧॥

ಎಂದು ನುತಿಸಿ [೫೪]ಶ್ರೀಯಂಕ[೫೪]ವೆಂಬುವ ಮಂತ್ರ
ದಿಂದೆ ಪುಷ್ಪಾಂಜಲಿಗೈದು
ಅಂದವಡೆದ ಭೂತಮಿತಿಯೆಂಬುವ ಮಂತ್ರ
ದಿಂದೆ ವಂದನೆಗೆಯ್ವುತಾಗ ॥೧೦೨॥

ಹರ ನಿರ್ಮಾಲ್ಯವ ಶಿರದೊಳೊಲಿದು ಸೂಡಿ
ಪರಮಸದ್ಭಕ್ತಿಯ ಬೇಡಿ
ಸುರಚಿತ ಸಮರಸ ಶಿವಯೋಗಾನಂದ
ಶರಧಿಯೊಳೋಲಾಡುತೆಯ್ದೆ ॥೧೦೩॥

ಎರವಿಲ್ಲದೆವೆ ಹಳಚದೆ[೫೫][ಕರ][೫೫]ಲಿಂಗವ
ಭರದೊಳೊಲಿದು ದಿಟ್ಟಿಸುತೆ
ಇರ[೫೬][ದೆ][೫೬] ದಿಟ್ಟಿಯೊಳು ಬಗೆಯೊಳು ಭಾವ[೫೭][ದೊಳು][೫೭] ಪೊ
ಕ್ಕುರವಣಿಸುತೆ ಲಿಂಗದೊಳು ॥೧೦೪॥

ಬೆರಸಿ ನಿರ್ಭಾವನಾಗುತೆ ತಾನೆಂದೆಂಬ
ಪರಿದೋರದೆ ಕರಣಗಳು
ಪರಶಿವಲಿಂಗದ ಕಿರ[೫೮][ಣ][೫೮]ಂಗಳೆಯಾ
ಗಿರುತಿರಲೇನೆಂದಪೆನು ॥೧೦೫॥

ಮನಮನಿರ್ಕುಳಿಗೊಳ್ವ ದನಿ ಪರುಸನ ರೂ
ಪಿನಿರಸ ತನಿಗಂ[೫೯][ಪೆಲ್ಲ][೫೯]
ಘನಲಿಂಗವಾಗಿ ತೋಜಿದುವಿರ್ಮಡಿಚಿಕ್ಕ
ಜನನಾಥನ್ಯೆದಚ್ಚುಗಳಿಗೆ ॥೧೦೬॥

೫೪–೫೪ ತ್ರಿಯಂಬ (ಕ). ೫೫–೫೫ ಶಿವ (ತ), ಶಿರ(ಕ). ೫೬–೫೬ X (ತ,ಕ). ೫೭–೫೭X (ತ,ಕ). ೫೮–೫೮ X (ತ,ಕ). ೫೯–೫೯ ಪಲಾ (ತ), ಪಲ(ಕ).

ಆನು ತನೆಂಬೆರಡಿಲ್ಲದ ನಿಜಲಿಂ
ಗಾನುಭಾವದ ನಿರುಗೆಯೊಳು
ಮಾನಿತ ಪರಮಸುಜ್ಞಾನಿ ಚಿಕ್ಕೇಂದ್ರನು
ತಾನಿರ್ದನತಿ ಮುದದಿಂದೆ ॥೧೦೭॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳದಳಿರಾಗೆ ಪಾರ್ವತಿಯ
ಲಲಿತಯೌವನಚೈತ್ರವೆನಿಪ ಶಿವ
ನೊಲಿದೆಮಗೀಗೆ ರಾಗವನು ॥೧೦೮॥

[೬೦]**ದಶಮ ಸಂಧಿ ಸಂಪೂರ್ಣಂ**[೬೦]

❖❖

೬೦-೬೦ ಅಂತು ಸಂಧಿ ೧೦ಕ್ಕಂ ಪದನು ೯೦೫ಕ್ಕಂ ಮಂಗಳ ಮಹಾಶ್ರೀ (ತ,ಕ).

ಸಂಧಿ : ೧೧

ಪರತತ್ತ್ವವೆನಿಸಿತು ಜಂಗಮವು

ದುರ್ಜನಲೋಕವಿಸರ್ಜನ ಕುಸುಮಶ
ರಾರ್ಜುನಕಾನನದಹನ
ಅರ್ಜುನ ಶರದ [೧][ಶಂಕರ][೧] ಶ್ರೀಗಿರಿಮಲ್ಲಿ
ಕಾರ್ಜುನ ಶರಣಾಗೆಮಗೆ ॥೧॥

ಅವನೀಶ್ವರ ಚಿಕ್ಕೇಂದ್ರನೀ ತೆರದೊಳು
ಶಿವಪೂಜೆಯ ಮಾಡುತಿರಲು
ಕುವರ ತೋಟೇಂದ್ರನುತ್ಸವದಿ ಜಂಗಮ[೨]ದ[೨]ನು
ಭವಮಂಟಪಕೊಲ್ದು ಬಂದ ॥೨॥

ಮಿಸುಪ ಹೊಂಗಳಸವುಪ್ಪರಗುಡಿ ನಿ[೩]ಲ್ವ[೩] ಬಿ
ಯಸದೊಳು ಬಸವನ ಟೆಕ್ಕೆ
ಎಸೆದಿರ್ದುದಂತಪ್ಪ ಮಠದೊಳು ಜಂಗಮ
ವಿಸರವೊಪ್ಪಿಹುದೇನನೆಂಬೆ ॥೩॥

ಕಮನೀಯ ಶಿವಲಾವಣ್ಯದಿಂದೊಪ್ಪುವ
ವಿಮಳಕಾಯದ ರುಚಿಯಿಂದೆ
ಅಮರಿದ ಕಂತೆಕಮಂಡಲ ದಂಡದಿ
ರಮಣೀಯ[೪]ಮಾ[೪]ಗಿ ರಂಜಿಪರು ॥೪॥

೧–೧ ತಂತರ (ತ,ಕ). ೨–೨ ವ (ತ). ೩–೩ ಯ್ವ(ಕ). ೪–೪ ರಾ (ಕ).

ಸಮತೆಯೆ ಕಂತೆ ಸುಜ್ಞಾನವೆ ಶಿವದಂಡ
ವಮಿತ ದಯವೆ ಕಮಂಡಲವು
ವಿಮಲವೈರಾಗ್ಯವೆ ಭಿಕ್ಷೆಯ ಪಾತ್ರೆಯಾ
ಕ್ಷಮೆ ಭಸ್ಮಘ೫[ಟ್ಟಿ]೫ಕೆಯವರ್ಗೆ ॥೫॥

ಎಸೆವ ಕೆಂಜಡೆಮುಡಿ ಕರ್ಣಕುಂಡಲವಿಟ್ಟು
ಭಸಿತರುದ್ರಾಕ್ಷಿಯ ತೊಡಿಗೆ
ಮಿಸುಗುವ ಶಿವಲಿಂಗಸೆಜ್ಜೆಯೊಪ್ಪಿರೆ ರಂ
ಜಿಸುತಿರ್ಪುದಲ್ಲಿ ಜಂಗಮವು ॥೬॥

ಕರಕಮಲದೊಳೆಸಕಂ೬[ಬೆ]೬ತ್ತು ಮೂರ್ತಿಗೊಂ
ಡಿರುತಿಹ ಶಿವಲಿಂಗವನು
ಹರುಷಾಶ್ರುಗಳಿಳಿವುತ್ತಿರೆ ನಿಟ್ಟಿಪ
ಪರಮಪುರುಷರೊಪ್ಪಿಹರು ॥೭॥

ಏಳುಕೋಟಿಗಳೆನಿಸುವ ಮ೭[ಹಿಮರ]೭ ಸಂ
ಜಾಲವ ಪಡೆದು ರಾಜಿಸುವ
ಮೂಲಮಂತ್ರವನುಚ್ಚರಿಸುತಲಿಹರಲ್ಲಿ
ಕಾಲನ ಗೆಲಿದ ಜಂಗಮರು ॥೮॥

ಕರಣಹಸಿಗೆ ಮಿಶ್ರಾರ್ಪಣ ಪಂಚೀ
ಕರಣ ಸೃಷ್ಟಿಯ ಭೇದಗಳ
ವರಮಂತ್ರಗೋಪ್ಯಾರ್ಥಗಳನೊಲ್ದಲ್ಲಲ್ಲಿ
೮[ಇರುತಿಹಾ]೮ಚಾರ್ಯರೊಪ್ಪಿಹರು ॥೯॥

ಪರಮಪಿಂಡಾದಿ ಶೂನ್ಯಾಂತವಾದೇಕೋ
ತ್ತರಶತ೯[ದಾ]೯ಸ್ಥಲಗಳನು
ನಿಱುಪಮವಹ ಬ್ರಹ್ಮಾದ್ವೈತಾರ್ಥ೧೦[ವ]೧೦
ವರ ಮಂತ್ರಗೋಪ್ಯವೃತ್ತಿಗಳ ॥೧೦॥

೫-೫ ೦ಟಿ(ತ,ಕ). ೬-೬ ಚಿ(ತ,ಕ). ೭-೭ ಹಮನ(ತ,ಕ).೮-೮ ನಿರವಿಹ (ತ,ಕ). ೯-೯ ವಾ (ತ,ಕ).
೧೦-೧೦ ಮ (ತ,ಕ).

ಅವಧೂತ[೧೧][ಗೀ][೧೧]ತೆ ವಿವೇಕಚಿಂತಾಮಣಿ
ಶಿವತತ್ತ್ವಚಿಂತಾಮಣಿಯ
ಪ್ರವರ ಸಾನಂದಚರಿತವನೆಸೆವನು
ಭವಸೂತ್ರಾರ್ಥಂಗಳನು ॥೧೧॥

ಸಾರತ್ರಯ ಶತಕತ್ರಯ ಶತರತ್ನ
ವೀರಮಹೇಶ್ವರಾಚಾರ
ಸಾರಸಂಗ್ರಹ ಶೈವರತ್ನಾಕರ ವರ
ವೀರಶೈವಾಮೃತಂಗಳನು ॥೧೨॥

ಲಿಂಗಲೀಲಾವಿಲಾಸವನಾ ಪ್ರಭು
ಲಿಂಗಲೀಲಾಕಥನವನು
ಸಿಂಗಿರಾಜಾಹ್ವಯ ಕೃತಿಗಳರ್ಥವನು ಮ
ನಂಗೊಂಡು ನಿರವಿಸುತಿಹರು ॥೧೩॥

ಕೆಲರು ಸಿದ್ಧಾಂತಶಿಖಾಮಣಿಯನು ಮತ್ತೆ
ಕೆಲರು ದೀಕ್ಷಾಬೋಧೆಯನು
ಕೆಲಬರು ಸೋಮನಾಥಾಹ್ವಯ ಭಾಷ್ಯವ
ಕೆಲರು ತಾತ್ಪರ್ಯಸಂಗ್ರಹವನು ॥೧೪॥

ಕೆಲಬರು ಮ[೧೨]ಹಿಮಾಲಾಸ್ತ[೧೨]ವವನು ಕೆಲ
ಕೆಲಬರು ಪಂಚಸ್ತವವನು
ಕೆಲಬರು ವೇದಪಾದಸ್ತವವನು ಕೆಲ
ಕೆಲರು ಶಿವಾಗಮಂಗಳನು ॥೧೫॥

ಕೆಲರನ್ಯವಾದಕೋಳಾಹಳವನು ಕೆಲ
ರೊಲವಿಂದೆ ಗಣಭಾಷ್ಯವನು
ಕೆಲರು ಪುರಾತನಸೂಕ್ತಿಸನ್ಮಾರ್ಗ ಸು
ಸ್ಥಲಭೇದವನೋದುತಿಹರು ॥೧೬॥

೧೧-೧೧ ನೀ (ತ,ಕ). ೧೨-೧೨ ಣಿಮಾಲಾಸ್ತಿ (ತ).

ಪರಮಪುರಾತನ ಶಿವಶರಣರ ಭಾ
ಸುರ ದಿವ್ಯಚಾರಿತ್ರಗಳ
ಹರಲೀಲಾಕಥನಂಗಳನೋದುವ
ಪರಮಪುರುಷರೊಪ್ಪಿಹರು ॥೧೭॥

ಶ್ರೀರುದ್ರ ಶಿವಸಂಕಲ್ಪ ಪುರುಷಸೂ
ಕ್ತಾರುಣಗರ್ಭ ಕೈವಲ್ಯ
ನಾರಯಣ ಕಾಲಾಗ್ನಿರುದ್ರ ಬೃಹ
ದಾರಣ್ಯ ಜಾಬಾಲಾದಿ ॥೧೮॥

ವಿತತ ವಿದ್ಯೆ[೧೩][ಯೆ][೧೩] ಸತಿ ಸಂತಸವೇ ನಿಜ
ಸುತನು ವಿರಾಗವೇ ಬಂಧು
ಅತಿಶಯವಾದ ಸ್ಯೆರಣೆ ಪರಿಚಾರರು
ನ್ನತ ಶಾಂತಿಯೆ ಮಿತ್ರವರ್ಗ ॥೧೯॥

ಶಿವಭಕ್ತಿಮಾತೆಯಾಚಾರವೇ ಪಿತನಾ
ಪ್ರವರಸಮ್ಯಗ್ವಾಣಿ ತನುಜೆ
ಸವಿನಯಗುಣವೆ ಪೌತ್ರರು ಶ್ರದ್ಧೆಯೆಯೊ
ಪ್ಪುವ ಸೊಸೆಯೆನಿಸಿ ರಂಜಿಪರು ॥೨೦॥

ಜ್ಞಾನವೆ ದೇಹ ವಿಚಾರವೆ ತಾಣ ಹಿಂ
ಸಾನಿರಸನವದೆ ದಾಸಿ
ಏನೆಂಬೆನಸ್ತೇಯವೇ ದಾಸನೆನಿಪುದು
ಮಾನಿತ ಧರ್ಮವಾಹನವು ॥೨೧॥

ದಮೆಯೆಯಾಚಾರ್ಯ ಮುಕ್ತಿಯೆ ರಾಜ್ಯವಾಗಿರೆ
ರಮಣೀಯ ಪರಮಾರ್ಥವಾದ
ಅಮಿತ ವೈರಾಗ್ಯ ಸೌಭಾಗ್ಯ ಕುಟುಂಬದಿ
ನಮಲಯೋಗಿಗಳೆಸೆದಿಹರು ॥೨೨॥

೧೩–೧೩ ಲಾ (ತ,ಕ).

ತನುವಿನೊಳಿಟ್ಟ ವೈರಾಗ್ಯವೆ ಯಮವಾ
ತ್ಮನೊಳಭಿರತಿಯದು ನಿಯಮ
ವನಿತಾದ್ಯಖಿಳವಸ್ತುಗಳನಂಟದೆ ನಿಂದ
ಮನದ ಬಲ್ಮೆಯೆಯಾಸನವು ॥೨೩॥

ಕವಿವಿಂದ್ರಿಯನಿಗ್ರಹವೆ ಪ್ರಾಣಾಯಾ
ಮ ವಿಷಯವಿಮುಖತ್ವವೆಯ್ದೆ
ತವೆ ಪ್ರತ್ಯಾಹಾರವೆನಿಪುದು ಧಾರಣ
ವವಿರಳ ಶಿವಲಿಂಗನಿಷ್ಠೆ ॥೨೪॥

ಕುರುಹಿಡಬಾರದ ಬೊಮ್ಮವೆ ತಾವೆಂಬ
ನಿರುಗೆಯೆ ಧ್ಯಾನವೆನಿಪುದು
ಅಱಿವು ಮಱಿ[೧೪][ವು][೧೪]ಗೆ ತೆರಪುಗೊಡದಿಹ ಬಚ್ಚ
ಬಱಿಯ ಸೈವೆರಗೆ ಸಮಾಧಿ ॥೨೫॥

ಈ ತೆರನಾದಷ್ಟಾಂಗಯೋಗದೊಳುವಿ
ಖ್ಯಾತ ಷಡ್ಬ್ರಹ್ಮಯೋಗದೊಳು
ಸಾತಿಶಯಾನುಭಾವಿಗಳೆಂದೆನಿಸುವ
ಪೂತಾತ್ಮರಿದ್ದರೇನೆಂಬೆ ॥೨೬॥

ಹೇಮವ ಹಂಚಿಗೆ ಸರಿಯೆಂದು ಕುಣಪಕೆ
ಕಾಮಿನಿಯರನೆಣೆಯೆಂದು
ಭೂಮಿಯನಣುವೆಂದು ಮಾಯೆ ಪುಸಿಯೆಂ
ದಾ ಮಹಿಮರು ಕಂಡಿಹರು ॥೨೭॥

ಸ್ತುತಿನಿಂದೆಗಳು ಸುಖದುಃಖಗಳು [೧೫]ಶತ್ರು[೧೫]
ಹಿತರು ಕಾನನ ನಗರಿಗಳು
ಕೃತವಕೃತಂಗಳು ಸರಿಯೆಂದು ಕಂಡ ಶಾ
ಶ್ವತ ಪರಮಾನಂದರವರು ॥೨೮॥

೧೪–೧೪ ಪ(ತ.ಕ). ೧೫–೧೫ ತತ್ವ (ಕ).

ನೋಡಿ ಕೊಂಡಾಡಿ ಸೇವೆಯ ಮಾಡಿ ನಿತ್ಯವ
ಬೇಡುವನೆಂದಿಂದ್ರನಜನು
ಗಾಡಿವಡೆದ ಹರಿಬಯಸಿರ್ಪರಾ*ಯ*ಣಿ
ಮಾಡಂ[೧೬]ಬ[೧೬]ರರಡಿಗಳನು ॥೨೯॥

ತಿರುಗುವ ಮೂರೊಡಲೆಂಬ ಮುಪ್ಪೊಳ*[ಲ]*ನು
ನಿರುತ ಕಾಡುವ ಕಾಮವೆಂಬ
ಅಲರಂಬನನಂತವೆಂಬರನಂ ಬಿಡ
ದುರುಪಿದ ಭಾಳಲೋಚನದೆ ॥೩೦॥

ಮಿಸುಪ ಕೆಂಜೆಡೆ ಚೆಂಗುಡಿಯಿಟ್ಟ ಭೂತಿ ರಂ
ಜಿಸುತಿರ್ಪ *[ನೊರೆ]*ಶಾಂತಿ ಸಲಿಲ
ಮಿಸುಪ ವಚೋರತ್ನವಾಗೆಯಾ ಜಂಗಮ
ವೆಸೆದುದು ಕರುಣಾಬ್ದಿಯೆನಿಸಿ ॥೩೧॥

ಕ್ರೋಧವೆನಿಪ ನರಸಿಂಹನ ಮುರಿದು ವಿ
ರೋಧಿ ಲೋಭತ್ರಿವಿಕ್ರಮನ
ಸಾಧಿಸಿ ಮೋಹಜಲಂಧರದೈತ್ಯನು
ನ್ಮಾದದೊಳಿರೆ ಸಂಹರಿಸಿ ॥೩೨॥

ಹುಚ್ಚುಗೊಳಿಪ ಮದವೆಂಬಿಭದೈತ್ಯನ
ಕೊಚ್ಚುಗಡಿದು ನಲವಿಂದ
ಮಚ್ಚರವೆನಿಪ ಮೃಗಾದನ ದನುಜನ
[೧೭]ನೆ[೧೭]ಚ್ಚುಕೆಡಪಿ ಶಾಂತಿಶರದೆ ॥೩೩॥

ಮ[೧೮]ಸಗು[೧೮]ವಜ್ಞಾನವೆನಿಪಂ[೧೯]ಧ[೧೯] ದೈತ್ಯನ
ನೆಸೆವ ಸುಜ್ಞಾನಮೆಂದೆಂಬ
ತ್ರಿಶೂಲದೊಳಿ[೨೦]ರಿ[೨೦]ದು ಕೆಡಪಿ ಜಡಕರ್ಮವೆ
ನಿಸುವ ಕ್ರತುವ ಹಾನಿಗೈದು ॥೩೪॥

– ಮ (ತ,ಕ). ೧೬–೧೬ ಬಿ (ಕ). *–* X (ತ,ಕ). *–* ವೆ(ತ,ಕ). ೧೭–೧೭ ನ (ಕ). ೧೮–೧೮ ಸು (ಕ). ೧೯–೧೯ ಢ(ಕ). ೨೦–೨೦ ೦(ಕ).

ತನುವೆನಿಪೆಲುದೊವಲಾಂತು ವಿದ್ಯಾಂಗನೆ
ಯೆನಿಸಿರ್ಪಾದಿಶಕ್ತಿಯನು
ಇನಿತಗಲಿಕೆಯಿಲ್ಲದೆರ[ಡ]ಳಿದೊಡಗೂಡಿ
ಘನತರ ಸುಖಮಯರೆನಿಸಿ ॥೩೫॥

ನಿಂದುದೆ ರಜತಾಚಳ ನಿಜದೊಳು ಬಿಡ
ದೊಂದಿರ್ಪ [೨೧]ಚಿತ್ಕರಣೌಘ[೨೧]
ನಂದಿನಾಥಾದಿ ಸತ್ರಮಥರಾಗಿರೆ ಲೀಲೆ
ಯಿಂದೆ ಪಲವು ದೇಹವಾಂತು ॥೩೬॥

ಪರಮಭಕ್ತರ್ಗೆ ಪ್ರತ್ಯಕ್ಷಮಾಗಿರುತಿರ್ದ
ಪರಮೇಶ್ವರರೆನಲೆಸೆದು
ಚರಿಯಿಸುತಿರಲಾ ಮಹಿಮರಿಗಾದುದು
ಚರಲಿಂಗವೆನಿಪಭಿಧಾನ ॥೩೭॥

[೨೨]ಜ[೨೨]ತ್ವವೆ ಜನನರಹಿತವೆನಿಪುದು ಮಧ್ಯ
ಗತ್ವವೆ ಗಮನವರ್ಜಿತವು
ಮತ್ವವೆ ಮರಣಾಭಾವವಾಗಿರೆ ಪರ
ತತ್ವವೆನಿಸಿತು ಜಂಗಮವು ॥೩೮॥

ಇಂತು ವಿರಾಜಿಸುತಿಹ ಜಂಗಮಲಿಂಗ
ಸಂತತಿಯನು ನೋಡಿ ಕುವರ
ಸಂತಸದಿಂದವರಡಿಗೆ ವಂದಿಸುತೋ
ರಂತೆ ಭಸಿತವ ಮುಂದಿಟ್ಟು ॥೩೯॥

ಕರುಣದಿಂದೊಲಿದು ಭಕ್ಷಕೆ ಬಿಜಯಂಗೆಯ್ವು
ದರಮನೆಗೆಂದು ಬಿನ್ನಯಿಸಿ
ಪರಮವೈರಾಗ್ಯ ಸಂಪನ್ನ ಜಂಗವನು
ಹರುಷದೊಳನುಮತಿಗೊಳಿಸಿ ॥೪೦॥

೨೧–೨೧ ಚಿಕ್ಕರಣಾಪು (ಕ). ೨೨–೨೨ ಜಿ (ಕ).

ಸರಸವಿನಯ ಮೃದುಮಾಧುರ್ಯತರ ಭಕ್ತಿ
ಭರಿತ ವಿಜ್ಞಾಪನದಿಂದೆ
ಕರಿ ತುರಂಗಮ ರಥ ಅಂದಳಗಳನೆಲ್ಲ
ಚರಲಿಂಗವನೇರಿಸಲು ॥೪೧॥

ಪೊಡೆವ ನಾನಾ ವಾದ್ಯವು ಧ್ವನಿ ನೆಲನನು
ಗ್ಗಡಿಪ ಮಾಮು[೨೩][ದ್ಗ][೨೩]ರ ನಿರ್ಘೋಷ
ಹಿಡಿವ ಕಾಳೆಗಳ ಪೊರ್ಮೆಪ ಶಂಖಧ್ವಾನ
ವಡಸಿತಜಾಂಡಮಂಡಲವ ॥೪೨॥

ಎತ್ತಿದವಾಗಳೆ ಜಗಜಗಿಸುತೆ ಸೊಂಪು
ವೆತ್ತಿಹ ಹೊಂಗಳಸಗಳ
ಮುತ್ತಿನ ಸತ್ತಿಗೆ ಕೆಲಬಲದೊಳು ಬೀ
ಸುತ್ತಿಹ ಚಾಮರವೆಸೆಯೆ ॥೪೩॥

ದೊರೆಮಕ್ಕಳಳಿಯಂದಿರು ರಾಯ ರಾವುತ
ರರಿಬಿರಿದಿನ ಪಟುಭಟರು
ಸರದಾರರು ಬಲುಮನೆಯ ನಾಯಕರಿದಿ
ರ್ವರುತೆ ವಂದಿಪರು ಸಂದಣಿಸಿ ॥೪೪॥

ಹಿಂದುಮುಂದೆಡಬಲದೊಳು ಸಂದಣಿಸುವ
ಮಂದಿಯೊಡನೆ ತೋಟೇಂದ್ರ
ನಿಂದಲ್ಲಿಗೆವೋಲೈಸುತೆ ವೈಭವ
ದಿಂದೆ ಪೊಳಲನೊಳಪೊಗುತೆ ॥೪೫॥

ಒಡಗೊಂಡೈತರುತಿರೆ ರಾಜವೀಥಿಯೊ
ಳೆಡದೆರಪಿಲ್ಲದೈತಂದು
ಸಡಗರಿಸುತೆ ಪುರಜನವಲ್ಲಲ್ಲಿಗೆ
ಪೊಡಮಡುತಿಹರುತ್ಸವದೆ ॥೪೬॥

ಅಲ್ಲಲ್ಲಿಗೆ ಸಂಗೀತವ ಕೇಳಿಪ
ರಲ್ಲಿ ನೋಡಿಪರು ನರ್ತನವ

೨೩-೨೩ ದ (ತ,ಕ).

ಫುಲ್ಲಸರೋಜನೇತ್ರೆಯರು ಕೋಲಾಟವ
ನಲ್ಲಿಗಲ್ಲಿಗೆ ಕೇಳಿಪರು ॥೪೭॥

ಅಲ್ಲಿಗಲ್ಲಿಗೆ ಪುಷ್ಪಾಂಜಲಿಗೆಯ್ಯುವ
ರಲ್ಲಲ್ಲಿ ಬಂದು ಕೀರ್ತಿಪರು
ಸಲ್ಲೀಲೆಯಿಂ ಹಗರಣಿಗರಾಟಂಗಳ
ನಲ್ಲಿಗಲ್ಲಿಗೆ ತೋರುತಿಹರು ॥೪೮॥

ಎಡಬಲದುಪ್ಪರಿಗೆಗಳ[೨೪]ನಡರಿ[೨೪] ನಿಟ್ಟಿ
ಪುಡುಪತಿನಿಭವದನೆಯರ
ನಿಡಿಯಲರ್ಗಣ್ಣ ಬೆಳ್ವೆಳಗೆಸೆದುದು ದಾಂ
ಗುಡಿಯಿ[೨೫][ಟ್ಟ][೨೫] ಬಾಂಬೊಳೆಯೆನಲು ॥೪೯॥

ಬಡನಡುವಿನ ಬಟ್ಟಮೊಲೆಯ ತೆಳ್ಗದಪಿನ
ಕುಡುಪುರ್ವಿನ ಕೊಂಕುಗುರುಳ
ಕಡುಗಾಡಿವಡೆದು ಕಂಗೊಳಿಪ ಮುಂಬರೆಯದ
ನಿಡಿಯಲರ್ಗಣ್ಣ ನೀರೆಯರು ॥೫೦॥

ಎಡಬಲದಲ್ಲಿಡಿಕಿರಿದು ಸಂದಣಿಸುತೆ
ವಿಡಿದ ಪೊಂಬರಿವಾಣಗಳ
ಗಡಣದೊಳೆತ್ತುವ ಮುತ್ತಿನಾರತಿಯ ವಂ
ಗಡವೆಸೆದುದು ಬರಲೊಡನೆ ॥೫೧॥

ಇಂತೊಪ್ಪುವ ವೈಭವದಿಂದೆ ಶಿ
ತಿಂತಿಣಿಯನು ತೋಟೇಂದ್ರ
ಸಂತಸದಿಂ ಬಿಜಯಂಗೈಸುತ ನಡೆತಂದ
ನಂತವುರಕೆ ಸಂಭ್ರಮದೆ ॥೫೨॥

[೨೬]ಕರಿ[೨೬]ತುರಗಾಂ[೨೭]ದೊಳಂಘಳನೀವುತೆ
ಚರಲಿಂಗ ಸಮುದಾಯವಾಗ
ಹರುಷದಿ ರಾಜಾಂಗಣಕೆ ಬರಲು ಪಟ್ಟ
ದರಸಿವೆರಸಿ ಚಿಕ್ಕೇಂದ್ರ ॥೫೩॥

೨೪–೨೪ X(ಕ). ೨೫–೨೫ ದ್ದ (ತ,ಕ).೨೬–೨೬ ತ (ಕ). ೨೭–೨೭ ದ(ಕ)

ಬಂದು ಬಂದು ಸಾಷ್ಟಾಂಗವೆರಗುತೆದ್ದು ಭಯಭಕ್ತಿ
ಯಿಂದೆ ಸಾತ್ವಿಕಭಾವನೆದೊಳು
ಮುಂದುವರಿದು ಜಂಗಮದಡಿದಾವರೆ
ಗೊಂದಿಸುತಳಕವನವನು ॥೫೪॥

ಬಳಿಕ ನಿರ್ಮಲ ಸೀತಳತರ ಪರಿಮಳ
ಜಳದೆ ಜಂಗಮದಡಿಗಳನು
ತೊಳೆದೊಡಗೊಂಡೆಯ್ತಂದು ಭೋಜನಶಾಲೆ
ಯೊಳು ಮೂರ್ತಿಗೊಳಿಸಲಂತಾಗ ॥೫೫॥

ತೊಳಪ ನಿಟ್ಟೆಸಳು ಕಂಗಳ ಬೆಳ್ವೆಳಗನಿ
ಕ್ಕೆಲಕೆ ಸೂಸುವ ನೀರೆಯರು
ಘಳಿಲನೆ ನಡೆಪಾಡುತೆ ಜಂಗಮ ಸಂ
ಕುಳಕೆ[೨೮]ಡೆ[೨೮]ಮಾಡಿದರೆಯ್ದೆ ॥೫೬॥

ಜಲಗಂಧಾಕ್ಷತೆ ಧೂಪದೀಪಾರತಿ
ಗಳು ಮುಂತಾದುವರಿಂದೆ
ಸುಲಭ ಜಂಗಮಕೆ ಲಿಂಗಾರ್ಚನೆಯನು ಹೆ
ಕ್ಕಳವಡುತಗೆಯ್ಯಲವರು ॥೫೭॥

ಉಸುರುತೆ ಪ್ರಣವ ಪಂಚಾಕ್ಷರವನು ಶ್ರೀ
ಭಸಿತವನ[೨೯][ಳ][೨೯]ಕದೊಳಿಡುತೆ
ಮಿಸುಪ ಸರ್ವಾಂಗಕುದ್ಧೂಳನಗೆಯ್ಯುತೆ
ಬಸವಸ್ತುತಿಯನೋದುತ್ತೆ ॥೫೮॥

ಶಿವಸಂಕಲ್ಪ ಶ್ರೀರುದ್ರ ಪಂಚಬ್ರ
ಹ್ಮವ ನಾಮಪುರುಷಸೂಕ್ತವನು
ಪ್ರವರ ಪುರಾತನ [೩೦]ಸೂಕ್ತ[೩೦] ವನೋದುತೆ
ಶಿವಪೂಜೆಯ ಮಾಡುತಿಹರು ॥೫೯॥

ಮಾರಹರನೆ ವಿಶ್ವಕಾಧಾರವೆಂದೆಂಬ
ಸಾರವಿವೇಕವಾಸನವು

೨೮-೨೮X(ಕ) ೨೯-೨೯ ಳಿ(ತ,ಕ)೩೦-೩೦ ಸೀತ(ತ)

ಓರಂತೆ ಪರಿಪೂರ್ಣ ಪರಮಾತ್ಮನೆಂಬ ವಿ
ಚಾರವಾಹ್ವಾನವೆನಿಪುದು ॥೬೦॥

ಜಗವೆಲ್ಲವು ಶಿವನಡಿದಾವರೆಯೆಂದು
ಬಗೆವು[೩೧]ದೆ[೩೧] ಪಾದ್ಯ ಶಂಕರನು
ಸೊಗಯಿಸುವಾನಂದ ಶರನಿಧಿಯೆಂದೆ[೩೨]ಂಬ[೩೨]
ಬಗೆಯೆ ತಾನರ್ಘ್ಯವೆನಿಸಿತು ॥೬೧॥

ಪರಮಪವಿತ್ರಸ್ವರೂಪನಭವನೆಂಬ
ಪರಿಯೆ ತಾನಾಚಮನೀಯ
ನಿರುತ ನಿರ್ಮಲನೀಶ್ವರನೆಂಬ ಭಾವನೆ
ಪರಿಕಿಪೊಡದು ಮಜ್ಜನವು ॥೬೨॥

ಜಗವನತಿಕ್ರಮಿಸಿದ ಶುದ್ಧವಿದ್ಯೆಯೆ
ಬಗೆವೊಡಂತದು ನವ್ಯವಸ್ತ್ರ
ತ್ರಿಗುಣಾತೀತಮಾದರಿವು ಭಾವಿಪೊಡದು
ಸೊಗಸುವಡೆದ ಯಜ್ಞಸೂತ್ರ ॥೬೩॥

ಪರಮಚೈತನ್ಯಾತ್ಮಕನೀಶನೆಂದೆಂಬ
ಪರಿಯೆ ಸದ್ರತ್ನಭೂಷಣವು
ಪರತರ ಚಿನ್ಮಯ ಶಿವನೆಂಬರಿವದು
ಪರಿಮಳಿಪನುಲೇಪನವು ॥೬೪॥

ಜಿತರತಿಪತಿ ಶಾಶ್ವತನೆಂಬ ತಿಳಿವಾ
ಕ್ಷತೆಯೋಂಕಾರಸ್ವರೂಪ
ಸಿತಿಕಂಠನೆಂಬ ತಿಳಿವೆ ನವ್ಯಕುಸುಮ ಸಂ
ತತಿಯಾಗಿ ಪರಿವಡೆದಿಹುದು ॥೬೫॥

ಪರಿಕಿಸೆ ವಿಷಯವಿಲಯವೆ ಧೂಪಾರತಿ
ಪರಮಸುಜ್ಞಾನಪ್ರಕಾಶ
ಪರಶಿವನೆಂಬ ಬುದ್ಧಿಯೆ ಭಾವಿಸೆ ಭಾ
ಸುರತರ ದೀಪಾರತಿಯು ॥೬೬॥

೩೧-೩೧ ದು (ಕ). ೩೨-೩೨ X(ಕ).

ನಿತ್ಯತೃಪ್ತನು ಪರಮೇಶ್ವರನೆಂಬ ಸಂ
ವಿತ್ತೆ ನೈವೇದ್ಯವಾಗಿಹುದು
ಮೃತ್ಯುಂಜಯ ಗುಣಾತೀತನೆಂಬ ಸು
ಚಿತ್ತೆ ತಾ[೩೩][ನ][೩೩]ದು ತಾಂಬೂಲ ॥೬೭॥

ಹೊರೆದೋರದ ಸೋಹಂ ಭಾವವೆ ಸ[೩೪][ಡ][೩೪]
ಗರದಿಂದೆ ಬಲಗೊಂಬುತಿಹುದು
ಪರಶಿವ ಸಕಲತತ್ವಾತೀತನೆಂಬ ಸು
ಸ್ಥಿರ ಬುದ್ಧಿಯೆ ಪೊಡಮಡಿಕೆ ॥೬೮॥

ಅರಿವರಿವವನರುಹಿಸಿಕೊಂಬ ಕುರುಪಿನ
ತೆರ ತೆರಹುಗೊಡದಿರ್ಪ
ನಿರುಗೆಯ ನಿಜದ ನಿರಾಳದಿ ನಿಂದ ನಿ
ಬ್ಬೆರ[೩೫]ಗೆ[೩೫]ಯಂತದು ವಿಸರ್ಜನವು ॥೬೯॥

ಇಂತೀ ತೆರದೊಳೊಪ್ಪುವ ನಿಜಭಾವದಿ
ದಂತರಂಗದ ಪೂಜೆಯನು
ಕಂತುಮರ್ದನನೆಂದೆನಿಸುವ ಚರಲಿಂಗ
ಸಂತತಿಯನುಗೊಳಿಸಿರಲು ॥೭೦॥

ಮೇದಿನಿಪತಿ ಚಿಕ್ಕೇಂದ್ರನು ಚರಲಿಂಗ
ಪಾದಪೂಜೆಯನನುಗೆ*ಯ್ದು*
ವೇದವಿಧಾನದಿಂದಾ ಜಂಗಮ ಶ್ರೀ
ಪಾದತೀರ್ಥವು ಸಲಲೊಡನೆ ॥೭೧॥

ಕಳಸಕುಚದ ಭಾರಕಲುಗುವ ಸಣ್ಣ ಹೊಂ
[೩೬][ಜೆ][೩೬]ಳೆ ನಡುವಿನ ನೀರೆಯರು
ತೊಳಗುವಡ್ಡಣಿಗೆ ಪೊಂಬರಿವಾಣಂಗಳ
ಘಳಿಲನೆ ತಂದು ಮುಂದಿಳುಹಿ ॥೭೨॥

ಆಗ ಸೌಸವದೆ ಸವಿಯ ಸಾಲಿಡುತಿಹ
ಹಾಗಲ ಪಡಲ ಬದನೆಯ

೩೩–೩೩ ನಾ (ತ, ಕ). ೩೪–೩೪ ದಾ (ತ, ಕ). ೩೫–೩೫X(ಕ). *–* ಯ್ದು (ತ,ಕ). ೩೬–೩೬ ಚೆ (ತ,ಕ).

ತೊಗರಿ ಚಂ[೩೭][ಚಿ][೩೭]ಯವರೆ ಹೀರೆಯ ಮೇ
ಲೋಗರಗಳ ನೀಡಿದರು ॥೭೩॥

ಹಲವು ಪರಿಯ ಕಲಪುಗಳ ಕಚ್ಚರಿಗಳ
ಹಲವು ಪರಿಯ ಪಚ್ಚರಿಗಳ
ಹಲವು ಪರಿಯ ಸಿಹಿಕರಣೆ ರಸಾಯನ
ಗಳನು ತಂತಂದು ನೀಡಿದರು ॥೭೪॥

ಒಪ್ಪುವ ಶಾಲ್ಯನ್ನವ ಸೊಗಯಿಪ ತೊವ್ವೆ
ತುಪ್ಪ ಪಳಿದ್ಯ ಕಂಗೊಳಿಪ
ಹಪ್ಪಳ ಸಂಡಿಗೆಗಳನು ಪಲವು ಪರಿ
ವುಪ್ಪುಗಾಯಿಗಳ ನೀಡುವರು ॥೭೫॥

ಪರಡಿ ಗವುಲೆ ಸಜ್ಜಿಗೆಯೊಪ್ಪೆಯ ಸಣ್ಣ
ಸರಳಿಗೆಗಳ ಕಳವೆಯ
ಪರಿವಡೆದೊಪ್ಪುವ ಪಾಯಸಂಗಳ ಸಡ
ಗರಗೊಳುತೆಡೆಮಾಡುವರು ॥೭೬॥

ಹೂರಿಗೆಗಡಬು ಸೂಸಲುಗಡುಜಾಗು ಬಿ
ಚ್ಚೂರಿಗೆ ಬೀಸೂರಿಗೆಯ
ಗಾರಿಗೆಯೆಳ್ಳಗಾರಿಗೆಯೆಣ್ಣೆ ಬೆಣ್ಣೆಯ
ಗಾರಿಗೆಗಳ ನೀಡುವರು ॥೭೭॥

ಅಂಗರವಳಿಗೆ ಬಿಚ್ಚಂಗರವಳಿಗೆ ಹೊ
ಲಂಗರವಳಿಗೆ ಸಜ್ಜಿಗೆಯ
ಅಂಗರವಳಿಗೆ ಸುಖಿಯನುಂಡೆ ಫೇಣಿತಾ
ರಂಗಫೇಣಿಯ ನೀಡುವರು ॥೭೮॥

ಲಡ್ಡಿಗೆ ಚಿಲಿಪಾಲಲಡ್ಡುಗೆ ತೆಂಗಾಯ
ಲಡ್ಡುಗೆಯೆಳ್ಳಲಡ್ಡುಗೆಯ
ಎಡ್ಡ ಮಾದೆಣ್ಣೆಲಡ್ಡುಗೆ ಮಣಿಲಡ್ಡುಗೆ
ಇಡ್ಡಲಿಗೆಗಳ ನೀಡುವರು ॥೭೯॥

೩೭–೩೭ ಬೆ (ತ,ಕ).

ಸಾರಮಾಗೆಸೆವ ಖರ್ಜೂರ ಚಕ್ಕುಲಿ ಸಂ
ಬಾರ ಜಕ್ಕುಲಿ ನೆಯ್ಯಪಗಳ
ನಾರಿಕೇಳಾಮೃತ ಘೃತಪೂರಸಾರ ಕ
ರ್ಪೂರಾಮೃತವ ನೀಡುವರು ॥೮೦॥

ಬಗೆಗೊಳಿಪೆಳ್ಳಮಂಡಿಗೆ ಸಕ್ಕರೆಯ ಮಂ
ಡಿಗೆ ಬೆಲ್ಲಮಂಡಿಗೆಗಳನು
ಸೊಗಯಿಪ ಹಾಲಮಂಡಿಗೆ ಹಾಲೌಗು ಹೋ
ಳಿಗೆಗಳ ತಂದು ನೀಡುವರು ॥೮೧॥

ಕರಜಿಯಕಾಯಿ ಸುಧಾಸುಮಮಂಜರಿ
ಎರೆಯಪ್ಪ [೩೮]ಜೋ[೩೮]ಗೊಡಗಳನು
ಸುರಚಿತಮಾದತಿರಸಗಳ ಬಿಂಬಾ
ಧರೆಯರು ತಂದು ನೀಡುವರು ॥೮೨॥

ಪನಸಫಲಾಮೃತ ಚೂತಫಲಾಮೃತ
ಎನುತ ರಂಭಾಮೃತಗಳನು
ಅನುನಯದಿಂ ದ್ರಾಕ್ಷಾಮೃತ ರೊಟ್ಟಿಗ
ಳನು ತಂತಂದು ನೀಡುವರು ॥೮೩॥

ಸೀ[೩೯]ಮಂ[೩೯]ತಿನಿಯರ ಸಿಖಾಮಣಿಯೆನಿಸುವ
ತಾಮರಸಾಕ್ಷಿ ಚೆನ್ನಮ್ಮ
ಭಾಮೆಯರೊಡಗೂಡಿ ಚರಲಿಂಗಕಿಂತು ಮ
ನೋಮುದದಿಂ ನೀಡಲೊಡನೆ ॥೮೪॥

ಚನ್ನಯ್ಯನವರ ತೊತ್ತಿನ ಮಗನೆಂದೆನ್ನ
ಮನ್ನಿಸೆನುತ ಚಿಕ್ಕಭೂಪ
ಬಿನ್ನೈಸುತಿರೆ ಲಿಂಗಾರ್ಪಣೆಗೆಯ್ದುದು
ಚಿನ್ನಿಧಿಯೆನಿಪ ಜಂಗಮವು ॥೮೫॥

ಆವವರೂಪಟ್ಟಿಯ ರುಚಿ ತೃಪ್ತಿಯ
ಸಾವಧಾನದಿ ಲಿಂಗತ್ರಯದ

೩೮–೩೮ ಜೇ (ಕ).೩೯–೩೯ ಮಾ (ಕ).

ಆವ ದಾನವನರಿದಂಗ ಕಾರಣ ಸ
ದ್ಭಾವಾರ್ಪಣಮನೆಸಗುತ್ತೆ(?) ॥೮೬॥

ಸಲಿಸುತ್ತಿರಲು ಸಡಗರದಿಂದೆ ಸತಿಯರ
ತಲೆವಣಿಯರಸನ ರಾಣಿ
ಲಲನೆಯರೊಡಗೂಡಿ ನೀಡಿದಳತಿಭಕ್ತಿ
ಬಲಿದ ಭಾವದೊಳೇನನೆಂಬೆ ॥೮೭॥

ಚಿಲಿಪಾಲು ಸಕ್ಕರೆಯನು ನಿಮ್ಮ ಲಿಂಗಕ್ಕೆ
ಸಲಿಸಿರೆ ದಮ್ಮಯ್ಯಯೆನುತೆ
ಕಲಹಂಸಗಾಮಿನಿಯರು[೪೦][ಪೀ][೪೦]ಡಿಸಿ ಬೇಡಿ
ಕೊಳುತೆ ತಂತಂದು ನೀಡುವರು ॥೮೮॥

ಕೆಂಡದರೊಟ್ಟಿ ಸಕ್ಕರೆ ತಿಳಿದುಪ್ಪ ಹಾ
ಲುಂಡೆಯ ನಿಮ್ಮ ಲಿಂಗಕ್ಕೆ
ಮಂಡಿಗೆಯನು ಸಲಿಸೆನುತೆ ನೀಡುವರಾ
ಪುಂಡರೀಕಾಯತಾಕ್ಷಿಯರು ॥೮೯॥

ಹೆಡಿಗೆಗಳೊಳು ಕಜ್ಜಾಯವ ತುಪ್ಪದ
ಕೊಡಗಳ ಪಂತಿಪಂತಿಯೊಳು
ಪಿಡಿದೆಡೆಯಾಡುತೆ ರಾಣಿಯರೊಲವಿಂ
ದೆಡೆಮಾಡುವರು ಭಕ್ತಿಯಿಂದೆ ॥೯೦॥

ಇಮ್ಮಾವಿನ ತನಿವಣ್ಣ ರಸಾಯನ
ಮಂ ಮನವೊಲಿದಿನಿತಿದನು
ದಮ್ಮಯ್ಯ ನಿಮ್ಮ ಲಿಂಗಕೆ ಸಲಿಸೆಂದೆನು
ತುಮ್ಮಾಯಗೊಳುತೆ ನೀಡಿದರು ॥೯೧॥

ಮನಸಿಜಹರಮೂರುತಿ ದಯದಿಂ [೪೧]ಹಾ[೪೧]ಲ
[೪೨]ಕೆ[೪೨]ನೆಯನೊಂದಿನಿತ ಕೈಕೊಂಡು
ಅನುನಯದಿಂ ನಿಮ್ಮ ಲಿಂಗಕ್ಕೆ ಸಲಿಸೆಂ
ದೆನುತೆ ನೀಡುವರು ರಾಣಿಯರು ॥೯೨॥

೪೦–೪೦ ಪಾ (ತ,ಕ). ೪೧–೪೧ ಹ(ಕ).೪೨–೪೨ ತೆ (ಕ).

ನಲಿನಲಿದರಸಿಯರೀ ತೆರದಿಂ ಬೇಡಿ
ಕೊಳುತೆ [೪೩][ಪೀಡಿಸಿ][೪೩] ನೀಡುತಿರಲು
ಸಲಿಸಿ ತಣಿದು ಡರ್ರನೆ ತೇಗುತೆ ಕೈ
ದೊಳೆಯಲು ಜಂಗಮಲಿಂಗ ||೯೩||

ಬಗೆಗೊಳಿಸುವ ಕರ್ಪುರದ ವೀಳೆಯವನು
ಮಿಗೆ ಕೈಗೊಳಿಸಿ ಜಂಗಮಕೆ
ಮೃಗಮದ ಕುಂಕುಮದಂಪಿಟ್ಟು ಮುಡಿಗೆ ಮ
ಮಲ್ಲಿಗೆಯ ಸರವನುರೆ ಸೂಡಿ ||೯೪||

ಎಸೆವ ಪಟ್ಟಾವಳಿ ನವ್ಯದುಕೂಲ ರಂ
ಜಿಸುವ ದಿವ್ಯಾಂಬರದಿಂದೆ
ಮಿಸುಪ ರನ್ನದ ತೊಡವುಗಳಿಂದೆ ಜಂಗಮ
ವಿಸರಮನೊಲ್ದು ಸಿಂಗರಿಸಿ ||೯೫||

ನೋಡಿ ಹಾರೈಸಿ ಕಂಗಳ ಹಬ್ಬವ ನೆರೆ
ಮಾಡುತೆ ನಲಿನಲಿದೊಲಿದು
ಕೂಡೆ ಜಂಗಮದ ದಯಾಂಬುನಿಧಿಯೊಳೋ
ಲಾಡುತೆ ಪರಮಸುಖದೊಳು ||೯೬||

ಹರಲೀಲಾ ದಿವ್ಯಕಥನ ಪುರಾತನ
ಶರಣ ಪವಿತ್ರ ಚಾರಿತ್ರ
ಪರಶಿವತತ್ವಪ್ರಸಂಗಗೋಷ್ಠಿಯೊಳಾ
ದರದಿನಿರ್ಮಡಿಚಿಕ್ಕನೃಪತಿ* ||೯೭||

ಇರುತಿರಲಾ ಜಂಗಮಲಿಂಗವರಸನ
ಶಿರಕೆ ಕೈಯಿಡುತೊಡನೆದ್ದು
ಹರುಷದಿ ಬೀಳ್ಕೊಳಲಾ ಚಿಕ್ಕಭೂಮೀ
ಶಗ್ವರನತಿಭಕ್ತಿಭಾವದೊಳು ||೯೮||

೪೩-೪೩ ಪಾಡಿ (ತ,ಕ). *ಕೆ. ಪ್ರತಿಯಲ್ಲಿ ಈ ಪದ್ಯದ ಮಗ್ಗಲು ಕತ್ತರಿ (X) ಗುರುತು ಹಾಕಲಾಗಿದೆ.

ಕರುಣಿಸೆನುತೆ ಸಾಷ್ಟಾಂಗಪ್ರಣತನಾಗಿ
ಶರಣಾರ್ಥಿ ಶರಣಾಗೆನುತೆ
ಚರಣದೊಳಗೆ ಪಣೆಯಿ[೪೪]ಟ್ಟ[೪೪] ಭಯಂಬಡೆ
ದುರುತರ ವೈಭವದಿಂದೆ ॥೯೯॥

ಚರಲಿಂಗವನೀ ತೆರೆದೊಳರ್ಚಿಸುತೆ ತ
ತ್ಕರುಣ ಪ್ರಸಾದ ಸೇವನೆಯ
ನಿರುಪಮ ನಿಜನಿತ್ಯಾನಂದಮಯನಾ
ಗಿರುತಿರ್ದನಾ ಚಿಕ್ಕನೃಪತಿ ॥೧೦೦॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೧೦೧॥

[೪೫]ಏಕಾದಶ ಸಂಧಿ ಸಂಪೂರ್ಣಂ[೪೫]

❖❖

೪೪–೪೪ ಟ್ಟು (ಕ). ೪೫ ಅಂತು ಸಂಧಿ ೧೧ಕ್ಕಂ ಪದನು ೧೦೧೬ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ (ತ,ಕ).

ಸಂಧಿ : ೧೨

ಜಯವನಿತೆಯನು ಮೆಚ್ಚಿಸಿಕೊಂಬುದೆಂದಾದಪುದೊ

ಶ್ರೀ ಗಿರಿಜಾಕುಚಕುಂಕುಮಾಂಕಿತ ವಕ್ಷ
ಯೋಗಿಮಾನಸನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ಅರಿಬಿರುದಾಂಕ ಕುಮಾರ ತೋಟೇಂದ್ರನು
ಸರಸಸತ್ಕಾವ್ಯಗೋಷ್ಠಿಯೊಳು
ಇರುತಿರಲೊರ್ವ ಪಾಠಕ[೧][ನು][೧] ಬಂದಾತನ
ನಿರದೆ ಕೊಂಡಾಡುತಿಂತೆಂದ* ॥೨॥

ಪರವನಿತಾರತಿಗೆಳಸುವ ಧರಣೀ
ಶ್ವರರಿಗೆ ಗಂಡ ತೋಟೇಂದ್ರ
ಪರನಾರಿಯರ ಸೋದರ ರಾಮನಾಥನ
ಚರಿತೆಯನಾಲಿಸೆಂದೆನಲು ॥೩॥

ಆದರಣೆಯೊಳಾಲಿಸು ಪರವೆಂಗಳ
ಸೋದರ ರಾಮನ ಚರಿತೆ
ವೇದಸಮಾನವೆಂದೆನುತವನೊಲಿದದ
ನೋದಿದನಿಂಪುಸೊಂಪಿನೊಳು ॥೪॥

೧-೧ ರು (ತ,ಕ), *-* ಕ ಪ್ರತಿಯಲ್ಲಿ ಈ ಪದ್ಯದ ಮಗ್ಗಲು ಕತ್ತರಿ (X) ಗುರುತು ಹಾಕಲಾಗಿದೆ.

ಆ ಕಥೆ ಕೇಳ್ದಾತಂಗುಚಿತ[1][ಮ][1]ನಿ
[2][ತ್ರೀ][2] ಕುಮಾರಕನಿಂತೆಂದ
ಲೋಕೈಕವೀರ ರಾಮುಗನ ಬಿರುದಿನು
ದ್ರೇಕವನೇನೆನಬಹುದು ॥೫॥

ಪರಸತಿಗಾಸೆಗೆಯ್ವರ ಗಂಡನೆಂದೆಂಬ
ಬಿರುದೆನಗವಗೆ ಸಮಾನ
ಪರಿಕಿಪೊಡದು ಜನಕನುಮತವದನು
ದ್ಧರಿಸಿ ಮೆರೆವುದೀಶನೊಲವು ॥೬॥

ಅವನಿಯೊಳಗೆ ತೋಳ ಬೀಸಿ ನಡೆವ ರಾಯ
ಕುವರರ ಗಂಡನೆಂದೆಂಬ
ಅವಗಡೆಯಾದ ಬಿರುದನೋದಿಸಿಕೊಂ
ಡವ ಪೋದ ಪೋಗಲಾ ಮಾತು ॥೭॥

ಕೂಸ ಪಡೆದು ಬಾಳುವ ಸುವರ[4]ರ[4] ಗಂಡ
ಮೀಸರ ಗಂಡನೆಂದೆಂಬ
ಯೀ ಸೊಲ್ಲ ಕೇಳಿ ಬಾಳುವೆನೆಂಬುದು ಕಡು
ಹೇಸಿಕೆ ಬಿರುದಾಯತಗೆ ॥೮॥

ಬಿಲ್ಲು ಬೆಳ[5]ವ[5]ಲಕಾಯ ಪಿಡಿವಂದದೆ ನೀರ
ಗುಳ್ಳೆಯಂತಿಹ ದೇಹವನು
ಖುಲ್ಲತನದೆ ಪೊರೆದಪೆನೆಂಬ ಜೀವ
ಗಳ್ಳಗೆ ಬಿರುದೆಂಬುದುಂಟೆ ॥೯॥

ಮುಕ್ಕಣ್ಣ ಬಲ್ಲೆಹವೇಕೆ ಪಂತವ ಕಡೆ
ಗಿಕ್ಕಿಯೊಡಲನಾಸೆಗೆಯ್ದು
ಕಕ್ಕುಲತೆಯೊಳು ಬಾಳುವೆನೆ [6][ಈ][6] ಬಿರುದದು
ಮಕ್ಕಳು ಕಟ್ಟಿದ ಕೆರೆಯೆ ॥೧೦॥

೧–೧ ಮಾ (ತ,ಕ). ೨–೨ ತೀ(ತ,ಕ).೪–೪ X(ಕ).೫–೫ X(ಕ). ೬–೬ ನೀ (ತ,ಕ).

ಮುಂದಲೆಯೊಳು ಸಿಂಹಮುಖದ ತುರಾಯವ
ನಂದಗೊಂಡಿಟ್ಟಿರಲೇಕೆ
ಗೊಂದೆ ಬಿರುದು ಹಳದಿಯ ಹಳಯಿಗೆಯೇ
ಕಿಂದಿದ ಕಿವುಡುಗೇಳಿದೊಡೆ ॥೧೧॥

ಕಡುಗಲಿಗಳ ದೇವ ಚಿಕ್ಕಭೂಪಾಲನ
ಪೊಡೆಯೊಳೊಗೆದು ಫಲವೇನು
ನಡೆನುಡಿಯೊಳು ಪಂತ ಪಾಡಿನ ಹಿಡಿಕೆಯ
ಬಿಡಿ[೭][ಕೆ][೭]ಯನರಿಯದ ಮೇಲೆ ॥೧೨॥

ತೊಡಗಿದ ರಣದೊಳು ಮೀಸೆ ಮೂಡದ ಮುನ್ನ
ಕಡಿದಾಡುತೊಡಲನೀಡಾಡಿ
ಮೃಡನ ಮೆಚ್ಚಿಪೆನಲ್ಲದಿರ್ದೊಡೆ ರಾಮನ
ಮಡದಿತನವನಾಂತವನು ॥೧೩॥

ಇದು ಸತ್ಯವಾಕ್ಯವೆಂದೆನುತೆದ್ದು ತನ್ನಯ
ಸದನಕ್ಕೆ ಚಕ್ಕನೆಯ್ತಂದು
ಒದವಿದ ಭಕ್ತಿಭಾವದೊಳಿಷ್ಟಲಿಂಗವ
ನೆದೆಯಲರಿಂದರ್ಚಿಸುತೆ ॥೧೪॥

ನೆವನಿಟ್ಟು ಸತಿಯ ಕಡೆಗೆ ಕಳುಪುತ್ತಂಗ
ಭವಹರ ಶರ್ವಸರ್ವಜ್ಞ
ಶಿವನೆ ಪುರತ್ರಯದಹನಯೆನ್ನಯ ಬಿನ್ನ
ಪವನವಧರಿಸೊಲವಿಂದೆ ॥೧೫॥

ಬೇಡದ ಮುನ್ನ ಭಜಕರಭಿಮತವನೀ
ಡಾಡದ ದೈವದ ಗಂಡ
ನಾಡೆ ನೆನೆವರ ತನ್ನೊಳಗೇಕತ್ವವ
ಮಾಡದ ದೇವರ ಗಂಡ ॥೧೬॥

೭–೭ ತೆ (ತ,ಕ).

ಆಳಿನ ಹಾನಿಯಾಳ್ದನದೈಸೆ ಪರಿಕಿಪೊ
ಡಾಳಿಗೆ ಕರ್ತವ್ಯಮುಂಟೆ
ಶೂಲಿ ನಿನ್ನಯ ಬಂಟನಾದೆನ್ನ ಮಾತಿ*[ನ
ಮಾಲಿನ್ಯ]* ಪಳಿ ನಿನ್ನ ಬಿಡದು ॥೧೭॥

ಮೀಸರಗಂಡನೆನಿಸಿಕೊಂಡ ರಾಮನು
ಮೀಸೆಮೂಡದ ಮುನ್ನಲೆನ್ನ
ಆಸುರ ರಣಮುಖದಿಂದೆ ನಿನ್ನಂಘ್ರಿನಿ
ವಾಸದೊಳಗೆ ಸೈವೆರಸು ॥೧೮॥

ಕಾಯವು ನೀರಬೊಬ್ಬುಳಿ ಭೂವನಿತೆ ವಿ
ಡಾಯದ ಜೋಡೆಯೆಂದರಿದು
ವಾಯದ ಬದುಕ ನಚ್ಚಿದೊ೮[ಡ]೮ಳಿ ಜಸ ಬಂ
ದಾಯತಗೊಂಡು ನಿಂದಿರದೆ ॥೧೯॥

ಹೃದಯದೊಡೆಯ ನಿನಗುಸುರಲೇನುಂಟೆ
ನ್ನೆದೆಗೊಂಡಿರ್ಪಭಿಮತವ
ಮುದದಿಂದೆ ಕೊಡುಕೊಡದಿರ್ದೊಡೆ ಪ್ರಮಥರ
ಪದಪಂಕೇರುಹದಾಣೆ ॥೨೦॥

ಎಂದು ಕುಮಾರ ತೋಟೇಂದ್ರನೀಶಂಗಭಿ
ವಂದನೆಗೆಯ್ದು ಭಕ್ತಿಯೊಳು
ಎಂದಿನವೊಲು ಶರಣರ ಸೇವಿಸುತಾ
ನಂದದೊಳಿರಲೇನನೆಂಬೆ ॥೨೧॥

ಮನಸಿಜಹರತಂತ್ರ್[ದೆ]೯ ಹಾವಳೀಂದ್ರನ
ಮನವೆನಿಪುರ್ವರೆಯಲ್ಲಿ
ಪೆನುಗೊಂಡೆ೧೦[ಯ ಗೆಲ]೧೦ಬೇಕೆಂಬ ವಿ೧೧[ಷ]೧೧ಲತೆ
ಮೊನ೧೨[ಚಿ]೧೨ ಮೊಳೆತು ಪರ್ಬಲೊಡನೆ ॥೨೨॥

– ಗೆ ಮಾಲೆಯ (ತ,ಕ). ೮–೮ ಡೆ (ತ,ಕ). ೯–೯ ದೇ (ತ,ಕ). ೧೦–೧೦ ಯಾಗ (ತ,ಕ). ೧೧–೧೧ ಷಾ (ತ,ಕ). ೧೨–೧೨ ಸಿ (ತ,ಕ).

ತಡೆಯದೆ ಪೆನುಗೊಂಡೆಯ ತೆಗೆದುಕೊಂ
ಡೊಡನೆ ರಾಯರ ಮನುಜರನು
ಪಿಡಿತಂದು ಬಾಧಿಸಿ ಬಂದಿಖಾನಕೆ ಹಾಕಿ
ಕಡುಗಲಿ ಭೈರೇಂದ್ರನಿರಲು ॥೨೩॥

ಇತ್ತ ತೋಟೇಂದ್ರಕುಮಾರನು ಖಡ್ಗವ
ಚಿಮ್ಮುತೆ ನೋಡುತ[೧೩][ಲ][೧೩]ದಕೆ
ಮತ್ತಗಜಾಶ್ವಪದಾತಿಯ ನೆತ್ತಿಯ
ನೆತ್ತರನೆಂದುಣಿಸುವೆನು ॥೨೪॥

ಹಬ್ಬಿದ ವೈರಿಯ ಹೆಬ್ಬಲವನು ಕಂ
ಡುಬ್ಬಿ ಬೊಬ್ಬಿಡುತೊಳಪೊಕ್ಕು
ನಿಬ್ಬರದೊಳು ಬಪ್ಪ ರಾಯರಾವುತರೊಳ
ಗೊಬ್ಬನೆ ಕಾದುವುದೆಂದು ॥೨೫॥

ಇದಿರಿಸಿ ಘುಡಿಘುಡಿಸುತೆ ನೂಂಕಿ ಬರುತಿರ್ಪ
ಮದಕರಿಗಳನಿರಿದಿರಿದು
ಚದರಿಸಿ ಚೆಕ್ಕನಿಕ್ಕೆಲ[೧೪][ದೆಕ್ಕ][೧೪]ಟಿಗರ
ನುದರ[೧೫]ಲಿ[೧೫]ರಿವುದಾನೆಂದು ॥೨೬॥

ಬಲವಂತ ಹೊಂತಕಾರರು ಕವಿದಿರಿಯೆ ಮೆ
ಯ್ವಳಿಯೊಳು ಪೊರ[೧೬][ಗ][೧೬]ಟ್ಟುತೊಡನೆ
ಬಲುಗೈಯರಹುದೆಂದವರೊಳೆನ್ನಯ ಕೈ
ಚಳಕವನೆಂದು ತೋರುವೆನು ॥೨೭॥

ಅಂಬರತಳದೊಳು ನಾರದ ಕ[೧೭][ಡ][೧೭]ವಸ
ವಂ ಬಿಟ್ಟು ಜಡೆದಲೆಗೆದರಿ
ತಾಂ ಬಗೆವೆಚ್ಚಿ ರಿಂಗಣಗುಣಿವುತೆ
[೧೮][ನ್ನಂ ಬಿಡದೀ][೧೮]ಕ್ಷಿಪುದೆಂದು ॥೨೮॥

೧೩–೧೩ X(ತ,ಕ). ೧೪–೧೪ ದಕ್ಕು ಕ (ತ,ಕ). ೧೫–೧೫ ದಲಿ (ಕ). ೧೬–೧೬ ತ (ತ,ಕ). ೧೭–೧೭ ಡು (ತ,ಕ).
೧೮–೧೮ ನಂಬಿನೀ(ತ), ನಂಬಿದೀ(ಕ).

ಆಹವದೊಳಗೆನ್ನಯ ತೇಜೋಹವ್ಯ
ವಾಹನನಿದಿರೊಳತ್ಯಧಿಕ
ಸಾಹಸಿಗಳಿಗಚ್ಚರಸಿಯರನೊಲಿದು ವಿ
ವಾಹವನೆಂದು ಮಾಡುವೆನೊ ॥೨೯॥

ಮುಸುರಿಯೊತ್ತರಿಪರಿಬಲದೊಳು ಲಳಿಯೇರಿ
ಮುಸುಗುವ ಪಟುಭಟರೊಡನೆ
ಅಸಹಾಯದಿಂ ಕಾದಿ ಜಯವನಿತೆಯನು ಮ
ಚ್ಚಿಸಿಕೊಂಬುದೆಂದಾದಪುದೊ ॥೩೦॥

ಕ[೧೯][ಡಿ][೧೯]ವಡೆವುತೆ ಬಲ್ವುಡುಗದವ್ವಳಿಸಿ [೨೦][ಮಾ][೨೦]
ರ್ಪಡೆಯೊಳು ಬಿರಿದಿನಗ್ಗಳದ
ಕಡುಗಲಿಗಳ ತಕ್ಕೆಗೆಯ್ದು ಮುಂದಲೆ
ವಿಡಿದಿರಿದಾಡುವುದೆಂದೊ ॥೩೧॥

ರಣದೊಳು ಕಾದಿಯೊಡಲನೀಡಾಡುತೆ
ಪಣೆಗಣ್ಣನ ದಿವ್ಯಸಭೆಯ
ಅಣಿಯರದಿಂ ಪೊಕ್ಕು ಗಣಸಮುದಾಯಕೆ
ಮಣಿಮಣಿದೆರಗುವುದೆಂದೊ ॥೩೨॥

ಎಂದು ತನ್ನಯ ಮನದೊಳು ತಳುವೇತಕೆ
ತಂದೊದಗಿಸು ಕಾಳಗವ
ಒಂದು ನಿಮಿಷ ಯುಗವಾಗಿ ತೋರುತ್ತಿದೆ
ಯಿಂದುಕಲಾಧರಯೆನುತೆ ॥೩೩॥

ಪರಸತಿಯ[೨೧][ರಿ][೨೧]ಗೆಳಸುವ ದೊರೆಗಳ ಗಂಡ
ಪರಬಲತಿಮಿರಮಾರ್ತಂಡ
ಅರವಕ್ಕಳ ತಲೆವಣಿ ತೋಟೇಂದ್ರ ಸಂ
ಗರವ ಬಯಸುತಿರಲೊಡನೆ ॥೩೪॥

೧೯-೧೯ ಡೆ (ತ,ಕ). ೨೦-೨೦ ಮ (ತ,ಕ).೨೧-೨೧ ರ (ತ,ಕ).

ಬಲದ ಕಣ್ಣಲುಗೆ ಬಲದ ತೋಳು ಕೆತ್ತೆ ಹೆ
ಕ್ಕಳಿಸಿ ಹೆಚ್ಚುತೆ ಹೆಮ್ಮೆಗೊಳುತೆ
ನಲಿದು ಸಿಂಗರವಾಗಿಯೋಲಗಕೆಯ್ತಂದ
ನಲಘುವಿಕ್ರಮ ತೋಟೇಂದ್ರ ॥೩೫॥

ಆ ಕುಮಾರಕನೊಡವೆರಸಿಯಿರ್ಮಡಿ
ಚಿಕ್ಕಭೂಕಾಂತವಲ್ಲಭನು
ಶ್ರೀಕರಮಾದ ಪೇರೋಲಗ ಶಾಲೆಗೆ
ತಾ ಕೂರ್ಪಿನಿಂದೈತಂದ ॥೩೬॥

ಎಡಬಲದೊಳು ಕುವರರ್ಕಳೊಪ್ಪಿರುತಿರೆ
ಕಡುಗಲಿ ಚಿಕ್ಕಭೂವರನು
ಸಡಗರದೊಳು ಪಟ್ಟವಣೆಯನೆಸೆದು ತಾ
ಗಡಣದಿಂದೆಸೆದನಾ ನೃಪತಿ ॥೩೭॥

ಕವಿಗಮಕಿಗಳು ವಾದಿಗಳು ವಾಗ್ಮಿಗಳು ಸು
ಪ್ರವರ ವೇದಾಗಮವಿದರು
ವಿವಿಧ ವಿದ್ಯಾಕೋವಿದರೊಪ್ಪಿದರಾ
ಯವನಿಪನಾಸ್ಥಾನದೊಳು ॥೩೮॥

ಸಕಲ ಪುರಾಣ ನಿಪುಣರು ಶಾಬ್ದಿಕರು ಭಾ
ವಕರು ರಸಿಕರು ನರ್ತಕರು
ಪ್ರಕಟಿತ ಗಂಧರ್ವಗಾನಮನುಳ್ಳ ಗಾ
ಯಕರೋಲಗದೊಳೊಪ್ಪಿದರು ॥೩೯॥

ಅತಿಹಿತರಾದಾಪ್ತರು ಗುಪ್ತಕಾರ್ಯ
ಸ್ಥಿತಿಗಳ ಬಲ್ಲ ಮಂತ್ರಿಗಳು
ಮತಿವಂತರಪ್ಪ ಪುರೋಹಿತರಾ ಭೂ
ಪತಿಯ ಸಭೆಯೊಳೆಸೆದಿಹರು ॥೪೦॥

ರಾಯಸದವರವಸರದವರಾ [೨೨][ಸೂ][೨೨]
ಳಾಯತರು ಮಾಗಧರು
ರಾಯಭಾರಿಗಳು ಮಂತಣಗಾರದೊಪ್ಪಿದ
ರಾಯವನಿಪನನೋಲೈಸಿ ॥೪೧॥

ಸರದಾರರು ವಜೀರರೆ[೨೩]ಕ್ಕಟಿಗರು[೨೩]
ಬಿರುದಿನ ಖಾನಮಾಲುಕರು
ದೊರೆಗಳದೇವನಿರ್ಮಡಿಚಿಕ್ಕಭೂಮೀ
ಶ್ವರನನೋಲೈಸುತೊಪ್ಪಿದರು ॥೪೨॥

ಎಡವಂಕದ ಬಲವಂಕದ ಭಟರವ
ಗಡೆಯದ ಮೊನೆಯ ನಾಯಕರು
ಗಡಿದುರ್ಗದ ದೊರೆಮಕ್ಕಳೊಪ್ಪಿದರಿ
ಮ್ಮಡಿಚಿಕ್ಕನಡಿಯ ಸೇವಿಸುತೆ ॥೪೩॥

ಹೊಣಕೆಯ ಹೊಂತಕಾರರು ಬಲುವಿರುದಿನ
ಮಣಿದೊಡವುಗಳ ತೊಟ್ಟವರು
ರಣಕೋವಿದರೆನಿಸುವ ಪಟುಭಟರ ತಿಂ
ತಿಣಿಯೋಲೈಸಿಕೊಂಡಿಹರು ॥೪೪॥

ದಿನರೋಜು ಮಾಲೆಯುಚಿತಗೊಂಬ ಕಡುಗಲಿ
ತನದ ಹೆಚ್ಚಿನ ತುಳಿಲಾಳು
ಘನ ಬಿರುದಾಂಕ ಹಮ್ಮೀರ ಹಮ್ಮೀರರು
ಜನಪನ ಸೇವಿಸುತಿಹರು ॥೪೫॥

ಕಾಲ ತೊಡರ ಹೊಕ್ಕುಳ ಘಂಟೆಯ ಹುಲಿ
ವಾಲದ ಹರಿಬಿಯ ಗರಿಯ
ಮೇಲೆನಿಸುವ ಹೊನ್ನ ಗರಿಯ ಬಾಸಿಗಗಳ
ಗೋಳಾಯಿಲರೊಪ್ಪಿದರು ॥೪೬॥

೨೨–೨೨ ಸು (ತ,ಕ). ೨೩–೨೩X(ಕ).

ಕಳುಹಿಸಿಕೊಂಬ ಕಾಣಿಸಿಕೊಂಬ ಕಾಣಿಕೆ
ಯಿಳುಪಿ ಮೈಯಿಕ್ಕಿ ತೊಲಗುವ
ಬಳಸಿದ ದೊರೆಗಳ ಹೇಜಿಬರ
ಕಳಕಳವೆಸೆದುದೋಲಗದಿ ॥೪೭॥

ಇಂತಪ್ಪ ಪೇರೋಲಗದೊಳು ಚಿಕ್ಕಭೂ
ಕಾಂತ ಕುವರನೊಡಗೂಡಿ
ಸಂತಸದಿಂದೆ ದಿಮ್ಮಿ[೨೪][ದೆ][೨೪]ನಿಪ ಹರಕೆಗ
ಳಾಂತು ವೈಭವದೊಳೊಪ್ಪೆಸೆದು ॥೪೮॥

ಇರುತಿರಲಾ ಭೂವರನೋಲಗದೊಳು
ಹರಿಕಾರರಿರದೆಯ್ತಂದು
ಕರವ ಮುಗಿದು ಹಾವಳಿಂದ್ರ ತಾನೆಸಗಿದ
ಪರಿಯನಿಂತೆಂದುಸುರಿದರು ॥೪೯॥

ಕೂಟಿವ ಕೂಡಿ ಮೋಸದಿ ಪೆನುಗೊಂಡೆಯ
ಕೋಟೆಯ ಸೇರೊಳಪೊಕ್ಕು
ಲೂಟಿವಿಡಿವುತಲ್ಲಿಯ ಸಂಪದವನು
ಮೀಟಗೆಡಿಸಿದನಾ ಪೊಳಲ ॥೫೦॥

ಮನೆಮನೆಯೊಳು ತಪ್ಪದೆ ಹೊಕ್ಕು ಧನಧಾನ್ಯ
ವಿನುತರತ್ನಾಭರಣಗಳ
ಘನ ಸುಖಿಗಳ ಬಾಧಿಸಿ ಕೊಳ್ಳೆಗೊಂಡರು
ಜನಪ ಭೈರೇಂದ್ರನ ಭಟರು ॥೫೧॥

ಸ್ವಾಮಿ ಚಿತ್ತೈಸು ಪರಮಪತಿವ್ರತೆಯರ
ಕೈಮೈವಿಡಿದು ಲೂಟಿಸುತೆ
ರಾಮಣೀಯಕವಾದ ರತ್ನಭೂಷಣವ[೨೫][ನ][೨೫]
ನಾಮಿಕರಿರಿದೆ ಸುಲಿದರು ॥೫೨॥

೨೪-೨೪ ದ (ತ,ಕ). ೨೫-೨೫ ನು (ತ,ಕ).

ಧನದಂಗೆ ಸರಿಮಿಗಿಲಾಗಿ ಬಾಳುತಲಿರ್ದ
ಧನವಂತರ ತಲೆಯೊಳಗೆ
ಮೊನೆಯಂಬ ಹೊಸೆದು ಬಾಧಿಸಿಯವರಲ್ಲಿರ್ದ
ಧನವನಿರ್ಕುಳಿಗೊಂಡರವರು ॥೫೩॥

ಸಾಲು ಮಳಿಗೆಯ ಸಕಲ ಸಂಪದವೆಲ್ಲ
ಕಾಲಾಳ ಕಾಲಾಟದೊಳು
ಹೇಳಲು ಹೆಸರಿಲ್ಲವೆನಿಸಿತಾ ನಗರಿಯ
ಗೋಳನಿನ್ನೇನನೆಂದಪೆನು ॥೫೪॥

ಪಟ್ಟೆ ಪಟ್ಟಾವಳಿ ಚೀನಿ ಚೀನಾಂಬರ
ವೊಟ್ಟಿದ ಸಣ್ಣಬಣ್ಣಗಳ
ಪೆಟ್ಟಿಗೆಗಳ ಸೂ[೨೬][ಡು][೨೬] ಸಕಲಾತಿಯ ದಿಂಡ
ದಿಟ್ಟರುಗೊಳ್ಳೆವಿಡಿದರು ॥೫೫॥

ನಿದ್ದೆಗೆ ಹಿಡಿಹೊನ್ನನೊಲ್ಲದ ಸೂಳೆಯ
ರ್ಗಿರ್ದ ಸಂಪದವನೆಲ್ಲವನು
ಗದ್ದಳದೊಳು ಲೂಟಿಸುತಾ ನಗರಿಯ
ಹದ್ದನಾಡಿಸಿದರೇವೇಳ್ವೆ ॥೫೬॥

ಸನ್ಯಾಸಿಗಳಾಚಾರ್ಯ ವಿದ್ವಾಂಸರ
ಮಾನ್ಯರ ಮಠಮನೆಗಳನು
ಅನ್ಯಾಯದೊಳಗೊಳಪೊಕ್ಕಂತವರನು
ಬನ್ನಬಡಿಸುತೆ ಸುಲಿದರು ॥೫೭॥

ದೇವಮಂದಿರದ ಹೆಬ್ಬಾಗಿಲ ನೂಂಕಿಸಿ
ಕಾವರದೊಳಗಾಮೊರಸ(?)
ತೀವಿದ ಭಂಡಾರವ ಕೊಳ್ಳೆಗೊಂಡನಿ
ನ್ನೇವೇಳ್ವೆನವ ಸೊಕ್ಕಿದಿರವ ॥೫೮॥

೨೬–೨೬ ಪು (ತ,ಕ).

ರಾಯಸದವರ ಮಂತ್ರಿಗಳತ್ಯಾಪ್ತರ
ರಾಯಭಾರಿಗಳ ಸದನವ
ಆಯವಸರದೊಳು ಪೊಕ್ಕು ಸುಲಿದರವ
ರಾಯತಾಕ್ಷಿಯರ ಮೈಮುಟ್ಟಿ ॥೫೯॥

ಬಂದಿವಿಡಿದು ರಾಯರೂಳಿಗದವರನು
ನಂದನ ಸಹಿತ ಸತಿಯ
ಒಂದುಳಿಯದೆಯವರೊಡವೆ ವಸ್ತುಗಳನೇ
ನೆಂದುಸುರುವೆ ಗ್ರಹಿಸಿದರು ॥೬೦॥

ರಾಯ ಮನ್ನಣೆವೆತ್ತ ಸೊಕ್ಕಿದಾನೆಗಳನು
ಲಾಯದೊಳಿದ್ದು ರಾಜಿಸುವ
ವಾಯುವೇಗದ ಜಾತಿತುರಗವೆಲ್ಲವನು ವಿ
ಡಾಯದೊಳವಗಡಿಸಿದನು ॥೬೧॥

ರಾಯರ ಹಿರಿಯ ದಿವಾಣವನೊಳಪೊಕ್ಕು
ರಾಯಭಂಡಾರವ ತೆಗಿಸಿ
ರಾಯಭೂಷಣ ಮೊದಲಾದ ವಸ್ತುಗಳನ
ನ್ಯಾಯದೊಳವಗವಿಸಿದನು ॥೬೨॥

ಹಿಮಕರ ಬಿಂಬವನಗಿದು ಚಪ್ಪರಿಪಂತೆ
ತಮವೆಯ್ದಿ ಹಾವಳಿ ಭೈರ
ಕಮನೀಯ ಘನಗಿರಿಯ ಸಿರಿಯ ಸಂ
ಭ್ರಮವನಳಿದನೇನೆಂಬೆ ॥೬೩॥

ಹದಿನೆಂಟು ಲಕ್ಷ ವಿತ್ತವ ಹೇರಿಕೊಂಡು ದು
ರ್ಗದೊಳಿಟ್ಟು ತನ್ನ ಠಾಣ್ಯಯವ
ಮದಮುಖಹಾವಳಿ ಭೈರನೃಪತಿ ಪೋದ
ಹದನಿದ ಚಿತ್ತೈಸರಸ ॥೬೪॥

ಎಂದು ಪೇಳುವ ಮಾತ ಕೇಳುತಿರ್ಮಡಿಚಿಕ್ಕ
ನಂದಿನ ಕಾಲಭೈರವನ

ಅಂದವಡೆದ ಭೀಕರರೂಪ ತಾಳ್ದ ನೆಂ
ಬಂದದೊಳೆಸೆದನೇವೇಳ್ವೆ ॥೬೫॥

ಹೃದಯದೊಳೊಗೆದ ಕೋಪಾನಳ ತೋರಿತು
ವದನದ್ಘೊಳಂಬ[೨೭]ಕ[೨೭]ದೊಳಗೆ
ಒದವಿ ಕೆಂಗರಿಸಿತು ಮೂಗಿನೊಳ್ಪೊಗೆವೆಸ
ಗಿದುದಿರ್ಮಡಿಚಿಕ್ಕನೃಪನ ॥೬೬॥

ಪೆಂಪುವಡೆದ ರಾಯಕಾರ್ಯವಿಂತಿದು ನೋಡೆ
ಕೇಂಪೇಂದ್ರ ಕೈವಿಡಿಯದೊಡೆ
ಸೊಂಪುಗಾಣಿಸದೆಂದಾತಗುತ್ತರವನ
ಲಂಪಿನಿಂ ಬ[೨೮][ರೆ][೨೮]ಸಿ ಕಳುಪಿದ ॥೬೭॥

ಸುತ್ತಣ ದೊರೆದೊರೆಗಳಿಗೀ ಹದನೆಂ
ದುತ್ತರಗಳನೆಯ್ದೆ ಕಳುಪಿ
ಚಿತ್ತಶುದ್ಧಿಯೊಳೊಗ್ಗೊರಲಾಗಲವರನು
ತೆತ್ತಿಗರನು ಮಾಡಿಕೊಂಡು ॥೬೮॥

ಬಿಡದೆಲ್ಲರು ನಿಮ್ಮಯ ಸರಹದಿಗಳ
ಗಡಿಗಳನುದುರಿಪುದೆನುತ
ಗಡಿಯಂಕಭೀಮನಿರ್ಮಡಿಚಿಕ್ಕಭೂಪತಿ
ನಡೆಸಿದ ರಾಯಕಾರ್ಯವನು ॥೬೯॥

ಧುರಧೀರ ಕೆಂಪಭೂವರ ತಿಮ್ಮಿನಾಯಕ
ಹರತೀಶ್ವರ ಮೊದಲಾದ
ಸರಿದೊರೆಗಳು ರಾಯಕಾರ್ಯಕೆಮ್ಮೊ[೨೯][ಳ][೨೯]ಗೊ
ಗ್ಗೊರಲಾದರೆಂದಿಂತೆಂದ ॥೭೦॥

ಒಳ್ಳಿತಾಯಿತು ನಾಗಲೋಕವನುರೆ ಸೊರ್ಕಿ
ದೊಳ್ಳೆಯಾಳುವೆನೆಂಬ ತೆರದೆ

೨೭–೨೭ X(ಕ). ೨೮–೨೮ ರ (ತ,ಕ). ೨೯–೨೯ ಳು (ತ,ಕ).

ಕಳ್ಳತನದೆ ಪೆನುಗೊಂಡೆಯ ಕಾರೆಯ
ಹಳ್ಳಿಯ ಗೌಡನಾಳುವನೆ ॥೭೧॥

ರಾಯಸಿಂಹಾಸನಕೆರಡೆಣಿಪುದು ಹೆತ್ತ
ತಾಯ ತಬ್ಬಿದ ತೆರನಂತೆ
ನ್ಯಾಯವನಳಿದ ಹಾವಳಿ ಭೈರಭೂಪಗ
ಪಾಯಮೊದವಿ ಬಾರದಿಹುದೆ ॥೭೨॥

ರಾಯಸಿಂಹಾಸನವನು ಕಟ್ಟಿಕೊಂಡು
ವಿಡಾಯದೊಳೆಲ್ಲ ದೊರೆಗಳ
ನೋಯಿಸಿ ಕಪ್ಪವ ಕೊಂಡಾಳ್ವೆನೆಂಬಭಿ
ಪ್ರಾಯಕ್ಕೆ ಮನವಿಕ್ಕಿದನೆ ॥೭೩॥

ಮರೆದನೆ ತನ್ನ ಜನಕ ಹೆರೆ ಹಿಂಗದ
ಕರೆಯೊಂದಿ ಕಟ್ಟಿಸಿಕೊಂಡು
ಎರೆಯಗೆರಡುಬಗೆದುದರಿಂದೆ ಹಬ್ಬದ
ಕುರಿಯಂತೆ ಹೊಯಿಸಿಕೊಂಡುದನು ॥೭೪॥

ಹಾವಿನ ಮರಿಗೆ ಹಾಲೆರೆದಂದದಿ ರಾಯ
[೩೦][ರೋ][೩೦]ವಿದರಾದಿಯೊಳವನ
ಬೇವು ಬೆಲ್ಲದ ಕಟ್ಟೆಗಟ್ಟಿ ಜೇನೆರದೊಡ
ದು ವಿಷಮಂ ಬಿಡದಿಹುದೆ ॥೭೫॥

ಮಂದಿ ಕುದುರೆಯಾನೆ ಬಹುರಾಜ್ಯವೊದವಿದು
ದೆಂದು ಗರ್ವಿಸಿ ಭೈರಭೂಪ
ಮುಂದುಗಾಣದೆ ರಾಯಸಿಂಹಾಸನ ತನ್ನ
ದೆಂದು ಬಗೆದನದಕೇನು ॥೭೬॥

ಉಳಿವುದೆ ಕೀರ್ತಿ ತಾನಳಿವುದೊಡಲು ತಾ
ನಳುಕಲೇತಕೆ ಬಲ್ಲವರು

೩೦-೩೦ ಕೋ (ತ,ಕ).

ಕೊಳಗುಳದೊಳು ಕಾದಿ ತನುಗಳೆವುದು ಜಾ
ವಳರಿಗೆ ದೊರೆಕೊಂಡಪುದೆ ॥೭೭॥

ಇರ್ದನೆ ಭೀಮ ತಾನಿರ್ದನೆ ಅರ್ಜುನ
ಇರ್ದರೆ ಕರ್ಣ ಕೌರವರು
ನಿರ್ಧರದಿಂ ಕಾದಿ ಕೀರ್ತಿಯ ಲೋಕದೊ
ಳುದ್ಧರಿಸರೆ ಧರೆಯರಿಯೆ ॥೭೮॥

ನಳ ಭಗೀರಥ ಮಾಂಧಾತ ಹರಿಶ್ಚಂದ್ರ
ರೊಳಗಾದ ಮುನ್ನಿನ ನೃಪರು
ಉಳಿದರೆ ಅಳಿಯದುಳಿ*[ವ]* ನಿಜಕೀರ್ತಿಯ
ನುಳುಹಿಕೊಳ್ಳರೆ ಜಗವರಿಯೆ ॥೭೯॥

೩೧[ಎಂ]೩೧ದು ಕುಮಾರಕುಂಜರನೊಳುಸುರಲಾ
ನಂದದಿಂದಲಿ ತೋಟೇಂದ್ರ
ತಂದೆಯ ನುಡಿಗೆ ಹಸಾದವೆನುತ್ತಿಂ
ತೆಂದನು ಕಲಿಗಳ ದೇವ ॥೮೦॥

ಇದು ನಮ್ಮೊಳಗಾದ ಒಳತೋಟಿಯಲ್ಲ ತಾ
ನಿದು ರಾಯಕಾರ್ಯವಿಂತಿದಕೆ
ಅದಿರದೆ ಕದನದೊಳಸುವಿತ್ತು ಕೀರ್ತಿಯ
ನೊದವಿಸಬೇಕು ಬಲ್ಲವರು ॥೮೧॥

ಬಿಡಿಸಬೇಕಾ ಪೆನುಗೊಂಡೆಯ೩೨[ನಿ]೩೨ಲ್ಲವೆ
ಬಿಡಬೇಕೊಡಲನಾಜಿಯೊಳು
ಪಡಿನುಡಿಯ೩೩[ದಕಿ]೩೩ಲ್ಲವೆನುತೆ ರಾಜರ ತಲೆ
ದೊಡವಣಿ ಕುವರನಿಂತೆಂದ ॥೮೨॥

ಸಾವು ಸಮಾನ ತಪ್ಪದು ದೇಹಿಗಳಿಗೆ
ರಾವಣ ಕೀಚಕರಂತೆ

– ದ (ತ,ಕ). ೩೧–೩೧ ಬಂ (ತ,ಕ). ೩೨–೩೨ ನ (ತ,ಕ).೩೩–೩೩ X (ತ,ಕ).

ಸಾವು ಪಡೆಯದಭಿಮನ್ಯು ಸತ್ತಂದದ
ಸಾವು ಸಾಮಾನ್ಯರಿಗಹುದೆ ॥೮೩॥

ಎಳವೆರೆ ನೀರಕ್ಕರವಿಂದ್ರಚಾಪ ಸಂ
ಚಲಿಪ ಮುಗಿಲಬಣ್ಣ ಮಿಂಚು
ಜಲದ ಬೊಬ್ಬುಳಿಕೆಗಳನು ಪೋಲ್ತೊಡಲಿದ
ನುಳುಹಿ ಬಾಳುವೆನೆಂಬನೆಗ್ಗ ॥೮೪॥

ಕೆಡುವೊಡಲಿದ ನಚ್ಚಿ ಮಡಗಿಕೊಂಡಿದ್ದೊಡೆ
ಕೆಡದಿರದಿದರಾಸೆಯನು
ಕೆಡಿಸಿ ಕೆಡದ ನಿಜಕೀರ್ತಿಯನಾವನು
ಪಡೆಯಬಲ್ಲಿವನೆ ಬಲ್ಲವನು ॥೮೫॥

ರಾಯಸಿಂಹಾಸನವನು ಭೈರ ಸೊಕ್ಕಿಯ
ನ್ಯಾಯದೊಳಾಳ್ವುದ ನೋಡಿ
ಕಾಯವ[೩೪][ನಪ್ಪಿ][೩೪] ಹೊರೆವುತೆ ಬಾಳುವುದ
ನ್ಯಾಯವಲ್ಲವೆ ಸುತ್ತಣವರ್ಗೆ ॥೮೬॥

ಹಲವು ಮಾತುಗಳನಾಡಿದ[೩೫][ಡೇ][೩೫]ನು ಬಂದಿದೆ
ತಲೆ ತುಂಬಿ[೩೬]ದ[೩೬] ರಾಜ್ಯಕಾರ್ಯ
ಛಲವನಿಕ್ಕೀಗಳೆನುತೆ ರಾಜಪುತ್ರರ
ತಲೆವಣಿ ತನಗೇನುಯೆಂದ ॥೮೭॥

ಸ್ವಾಮಿದ್ರೋಹಿ ಹಾವಳಿ ಭೈರೇಂದ್ರನ
ಭೂಮಿಯನಿರಿವೆನಪ್ಪಣೆಯ
ನೇಮಿಸೆನಗೆ ತಳುವೇಕೆಂಬ ಕುವರನ
ಭೂಮಿಪ ನೋಡುತಿಂತೆಂದ ॥೮೮॥

ಪೆನುಗೊಂಡೆಯ ಕೊಂಡು ರಾಯರಿಗೀವುದೆ
ಘನಕಾರ್ಯವೆಮಗಂತದಕೆ

೩೪–೩೪ ನೊಪಿ (ತ), ನೊಪ್ಪಿ (ಕ). ೩೫–೩೫ ದೆ (ತ,ಕ). ೩೬–೩೬ ದೆ (ಕ).

ಅನುಕೂಲ ಹರಿವೆಯ ಮುಂದಿಳುಕೊಳಬೇ
ಕೆನುತೆ ಕಾರ್ಯವನೂಹಿಸಿದ ॥೮೯॥

ಕರೆದು ಕುಮಾರ ತೋಟೇಂದ್ರನನಾತಂ
ಗುರುತರ್ಥವಾದ ಬುದ್ಧಿಯನು
ನಿರವಿಸಿ ಧುರಕಾನೈದುವೆ ನೀನಿ
ಲ್ಲಿರು ಪುತ್ರಯೆನಲವನೆಂದ ॥೯೦॥

ಹೆತ್ತವರೊಳು ಗುರುವಿನೊಳೊಡೆಯನೊಳಿದಿ
ರುತ್ತರವುಂಟೆ ಬಿನ್ನಪವ
ಚಿತ್ತೈಸುವೆನೆಂದೊಡೆ ಬಿನ್ನವಿಪೆನೆಂ
ದುತ್ತಮ ಸುತನಿಂತೆಂದ ॥೯೧॥

ಪತಿಗುರುಮಾತಾಪಿತೃಸೇವೆಯಿಲ್ಲದ
ಸುತಶಿಷ್ಯಭೃತ್ಯರೆಂಬರಿಗೆ
ಅತಿಶಯವಾದ ದುರ್ಗತಿಯೆಂದು ಶಾಸ್ತ್ರ ಸಂ
ತತಿ ಸಾರುತಿವೆ ಕೋ ಡಂಗುರಿಸಿ ॥೯೨॥

ಅದರಿಂದೆ ನಿನ್ನೂಳಿಗಕೆ ರಾಯರ ಕಾಯ
ಕೊದಗದೊಡಲಹೊರೆವುತ್ತ
ಕುದುಬನಂದದೊಳಿರ್ಪುದರಿಂದಲಿ ದೇ
ಹದ ಹಂಗ ಹರಿವುದೆ ಲೇಸು ॥೯೩॥

ನಿಡಿದೋಳ್ಗಳೇಕೆ [೩೭][ಈ][೩೭] ದೊಡ[೩೮][ವೇ][೩೮]ಕೆ ಕೈಯೊಳು
ಹಿಡಿಯಲೇತಕೆ ಕೂರಲಗ
ಇಡುಕುರಿಸಿದ ಜಗಳಕೆ ಹೊರಗಾಗಿಯು
ಗ್ಗಡದ ಬಿರುದನಾನಲೇಕೆ ॥೯೪॥

ಇರಿಯದೀಯದೆ ಬಲು ಬಿರಿದನೋದಿಸಿಕೊಂಡು
ನೆರೆಗಲಿಗಳ ಕವಳಿಗೆಗೆ

೩೭–೩೭ ನಿ (ತ,ಕ). ೩೮–೩೮ ಲೇ (ತ,ಕ).

ತರಿಸಲ್ವುದೆಂತು ತೊಲಗದಪಕೀರ್ತಿಗೆ
ಗುರಿಯಾದಮೇಲೆ ಭೂಮಿಯೊಳು ॥೯೫॥

ತಂದೆಯನಿರದಾಹವಕಟ್ಟಿ ಮನೆಯೊಳು
ನಿಂದಡೆ ಲೋಕ ಮೆಚ್ಚುವುದೆ
ಎಂದೆಂದಿಗೆ ಹೆರೆ ಹಿಂಗದಿಪ್ಪಪಕೀರ್ತಿ
ಬಂದಲ್ಲದೆ ಬಿಡ*[ದ]*ಯ್ಯ ॥೯೬॥

ಕಡುಗಲಿಗಳ ದೇವನೆನಿಸಿ ಮೆರೆವ ನಿನ್ನ
ಪೊಡೆಯೊಳೊಗೆದು ಫಲವೇನು
ತೊಡಗಿದ ಸಮರಕ್ಕೆ ಸಲ್ಲದೆ ಮನೆಯೊಳು
ಮುಡುಬನಂದದಲಿರ್ದ ಮೇಲೆ ॥೯೭॥

ಧನವಂತನಣುಗ ದರಿದ್ರನಾಗಿಪ್ಪಂತೆ
ಮೊನೆಗಾರರ ದೇವ ನಿನ್ನ
ತನುಜನಾಗಿರುತಾನು ಕಾಳಗಕೊದಗದೆ
ಮನೆಯೊಳಿಹುದು ಮತವಹುದೆ ॥೯೮॥

ಇರ್ಮಡಿ ಚಿಕ್ಕಭೂಪಾಲನ ಕುವರನು
ಮಾರ್ಮಲೆವರಿಬಲದೊಳಗೆ
ವರ್ಮವರಿದು ಕಾದಿದನೆಂಬ ವಾರ್ತೆಯ
ಪೆರ್ಮೆಯದಾರದು ಹೇಳಿ ॥೯೯॥

ಮುತ್ತಯ್ಯ ಮುಮ್ಮಡಿ ಕರಿತಿಮ್ಮಚಿಕ್ಕಭೂ
ಪೋತ್ತಮರಾದಿಯಾದವರು
ಚಿತ್ತವ ಪಡೆದು ರಾಯರುಗಳ ಮನ್ನಣೆ
ವೆತ್ತರಿಬಿರುದ ತಾಳಿದರು ॥೧೦೦॥

ಕರಿತಿಮ್ಮಚಿಕ್ಕೇಂದ್ರ ಸಾಹಸದೆಸಕ[೩೯][ದೊ][೩೯]
[೪೦][ಳಿರದೆ][೪೦]ಮ್ಮ ರಾಯರೊಲ್ಮೆಯನು

- ವ (ತ,ಕ). ೩೯-೩೯ ದೆ (ತ,ಕ). ೪೦-೪೦ ಳೆರೆದಿ (ತ,ಕ).

ಭರದಿಂದೆ ಪಡೆದು ಸಂತಸವೆತ್ತುದನೀ
ಧರೆ ಬಣ್ಣಿಸುತಿದೆ ಬಿಡದೆ ॥೧೦೧॥

ಕಿರುವರೆಯದೊಳೆ ವೆಂಕಟಪತಿರಾಯರಿ
ಗರಿಕೆಯ್ಯಾದಿರಿ ಶೌರ್ಯದಲಿ
ನೆರೆ ರಾಯರೂಳಿಗಕಾನೆಯ್ದುತಿರೆ ಮನೆ
ಮರೆಯೊಳಿರೆಂಬುದುಚಿತವೆ ॥೧೦೨॥

ತಂದೆಯ ಸಮರಕೆ ಕಳುಹಿ ತಂಗಿಯ ಕೊಂಡು
ಬಂದು ದೇಸಿಗನಾಗಿ ತೊಳಲಿ
ಅಂದು ಖಚರನಾದ ಬಾಳ ಬಾಳಿದ ಪೇ
ಳೆಂದು ಮರಳಿ ಮಾರ್ನುಡಿದ? ॥೧೦೩॥

ಕೊಳಗುಳಕೆನ್ನ ಕಳುಹು ಕಳುಹದೊಡಾ
ನಳಿದವನೆಂದೆ ನಿಶ್ಚಯಿಸು
ಅಳಿಯದುಳಿ[೪೧]ದೆ[೪೧]ನಾದೊಡೆ ನಿಮ್ಮಯ ಗರ್ಭ
ದೊಳು ಬಂದ ಕುವರ ನಾನಲ್ಲ ॥೧೦೪॥

ಎಂದು ಬಿನ್ನವಿಪ ಕುಮಾರನ ನುಡಿಗಾ
ನಂದದೊಳಾ ಚಿಕ್ಕಭೂಪ
ಮುಂದಿರ್ದ ದೊರೆಮಕ್ಕ[೪೨][ಳ][೪೨] ಮೊಗನೋ[೪೩][ಡೆ][೪೩]ಯಿಂ
ತೆಂದರವರು ನೃಪನೊಡನೆ ॥೧೦೫॥

ಮೆರೆದ ಶೌರ್ಯಾತಿಶಯವು ನೋಡೆ ಸಿಂಹದ
ಮರಿಗೇನೆರವಲ್ಲದಂತೆ
ಎರೆಯ ಚಿಕ್ಕೇಂದ್ರ ನಿಮ್ಮಣುಗ ತೋಟೇಂದ್ರಗೆ
ನಿರಿಗೆಯ ಬ[೪೪][ಲ್ಪದು][೪೪] ಸಹಜ ॥೧೦೬॥

ಹುಲಿಯ ಮರಿಯು ಹುಲ್ಲ ಮೇವುದೆ ಮರುಗದ
ಮೊಳಕೆ ಸಾಗಿವವಿಲ್ಲಡಿಹುದೆ?

೪೧–೪೧ ಯ (ಕ). ೪೨–೪೨ ಳು(ತ). (ಕ). ೪೩–೪೩ ಡಿ (ತ,ಕ). ೪೪–೪೪ ಲ್ಪುಮೆ (ತ,ಕ).

ಎಳೆವರೆಯದೊಳು ತೋಟೇಂದ್ರನು ಶೌರ್ಯವ
ಗ್ಗಳಿಕೆಯ ಕಲಿತು ಬಂದಪನೆ ॥೧೦೭॥

ಎನೆ ಕೇಳಿ ಚಿಕ್ಕಭೂಪತಿ ಸಂತಸದಿಂದೆ
ತನುಜನ ಬರಸೆಳೆದಪ್ಪಿ
ಅನುನಯದಿಂ ಪೇಳಿ ಬೀಳ್ಕೊಂಡು ಬಾ ನಿನ್ನ
ಜನನಿಯರ್ಗೆನಲಾ ಕುವರ ॥೧೦೮॥

ನಲಿದುಬ್ಬಿ ಸಂತಸದಿಂದೆದ್ದು ತಂದೆಗೆ
ತಲೆವಾಗಿ ಬಂದರಮನೆಯ
ಒಳಪೊಕ್ಕು ಜನನಿಯರಡಿದಾವರೆಗಳೊ
ಳಿಳುಪಿದ ವಿಮಳ ಭಾ[೪೫][ಳ][೪೫]ವನು ॥೧೦೯॥

ಇಷ್ಟಾರ್ಥಸಿದ್ಧಿರಸ್ತೆನುತಲಿ ಕಾರುಣ್ಯ
ದೃಷ್ಟಿಯೊಳೊಲಿ[೪೬][ದು ನಿ][೪೬]ಟ್ಟಿಸುತೆ
ಶಿಷ್ಟತೆಯಿಂ ಪಿಡಿದೆತ್ತಿ ಮಾತೆಯರು ಸಂ
ತುಷ್ಟಿಗೊಳಿಸಿ ನುಡಿಸಿದರು ॥೧೧೦॥

ಪಯಣವಿದೆಲ್ಲಿಗೇತಕೆ ಸಿಂಗರ ನಿ
ನ್ನಯ ದೆಸೆ ಪೊಸತಾಗಿದೇಕೋ
ನಯವಿದ ಪೇಳು ಕುಮಾರ ತೋಟೇಂದ್ರ ನಿ
ಶ್ಚಯವಾಗೆನಲಿಂತೆಂದ ॥೧೧೧॥

ರಾಯರು ಮ[೪೭][ಲೆ][೪೭]ತರ ಮರ್ದಿಸ ಹೋಗಿರ
ಲಾಯವಸರದೆ ಭೈರೇಂದ್ರ
ನೋ[೪೮][ಯಿ][೪೮]ಸುತಾ ಪೆನುಗೊಂಡೆಯ ಶೌರ್ಯೋ
ಪಾಯದಿಂದವಗವಿಸಿದನು ॥೧೧೨॥

ತೊಡಗಿತು ಹಾವಳಿ ಭೈರವಭೂಮೀಶ್ವರ
ನೊಡನಯ್ಯಗೆ ರಾಜಕಾರ್ಯ

೪೫–೪೫ ವ (ತ,ಕ). ೪೬–೪೬ ದಿ (ತ,ಕ). ೪೭–೪೭ ಲ (ತ,ಕ). ೪೮–೪೮ ಯು (ತ,ಕ).

ಕಡುತವಕದೊಳೆನ್ನ ಬೀಳ್ಕೊಡಿ ಸಮರಕ್ಕೆ
ನಡೆಯಬೇಕೆನಲು ತೋಟೇಂದ್ರ ॥೧೧೩॥

ತಗರ ಕಾದಿಸಿ ಮಲ್ಲರ ಹೋರಿಸಿ ಕೋ
ಳಿಗಳ ಕಾಳಗವ ನೋಡುತಲಿ
ಬಗೆವೆಚ್ಚಿ ಹೊತ್ತುಗಳೆಯದೆ ಹಸುಳೆ ಬಲು
ಜಗಳಕ್ಕೆ ಮನವನಿಕ್ಕುವರೆ ॥೧೧೪॥

ಸಂಗೀತಸಾಹಿತ್ಯಂಗಳ ಕೇಳ್ದು ನೃ
ತ್ಯಂಗಳನಾಡಿಸಿ ನೋಡು
ಹಿಂಗದೆ ಪಾಠಕಜನರ ಮನ್ನಿಸು ರಣ
ರಂಗ ಸದರವಲ್ಲ ಕಂದ ॥೧೧೫॥

ತರುವಲಿ ನಿನಗೆ ಸಂಗರದ ಗೊಡವೆಯಾಕೆ
ದುರಳತನವು ಬೇಡವಯ್ಯ
ಉರವಣಿಸದಿರಾಹವಕೆ ನಿಮ್ಮಯ್ಯನು
ಬರಹೇಳಿದನೆ ಕಂದ ನಿನ್ನ ॥೧೧೬॥

ಎನೆ ಬರಹೇಳಿದನಯ್ಯನಾಹವಕೆ ಯೋ
ಚನೆ ಬೇಡ ಸಂತಸದಿಂದೆ
ಮನವೊಲಿದೆನ್ನ ಬೀಳ್ಕೊಡಿಯೆಂಬ ಕುವರನ
ದನಿಯ ಕೇಳುತ್ತಳವಳಿದು ॥೧೧೭॥

ಬಗಸೆಗಂಗಳೊಳು ಬಟ್ಟಾಡುವ ಕಂಬನಿ
ಯೊಗುತಿರೆ ಜನನಿ ಲಿಂಗಮ್ಮ
ಮಿಗೆ ಹೆಚ್ಚಿದ ಪುತ್ರಮೋಹದಿಂ ಕುವರನ
ತೆಗೆದಮರ್ದಪ್ಪಿ ಮುಂಡಾಡಿ ॥೧೧೮॥

ತನಯನ ಮುತ್ತಿನ ಹಸೆಯೊಳು ತಂದಿಟ್ಟು
ತನಿ ನೇಹದಿಂ ಹರಸುತೆ
ಅನುನಯದಿಂದೆ ಸೇಸೆಯನಿಕ್ಕಿ ವಿಜಯಾಂ
ಗನೆಯ ನೀನಾಳೊ ಕಂದಯ್ಯ ॥೧೧೯॥

ತರುಣನ ಹರಸಿ ಮುತ್ತಿನ ಬಾಸಿಗ ಕಟ್ಟಿ
ಸ್ಥಿರವಾಗಿ ಬಾಳು ಕಂದಯ್ಯ
ಪರಬಲವ ಗೆದ್ದು ಹರುಷದಿ ಬಾಳೆಂದು
ಹರಸಿದರಾ ಜನನಿಯರು ॥೧೨೦॥

ಆರತಿಯೆತ್ತಿದರಾ ರತಿರಾಜನ
ಸೂರೆಗೊಂಬುವ ಚದುರೆಯರು
ಮೀರಿದ ಶತ್ರುಸಂಹಾರವ ಮಾಡು ಹ
ಮ್ಮೀರನಾಗೆಂದು ಹರಸಿದರು ॥೧೨೧॥

ಜಯತು ಚಿಕ್ಕೇಂದ್ರನ ಮೋಹದ ಕುವರಗೆ
ಜಯತು ಜಂಗಮನ ಪ್ರಿಯನಿಗೆ
ಜಯತು ಹಳದಿಬಿರುದಾಂಕನಿಶ್ಶಂಕಗೆ
ಜಯತೆಂದಾರತಿಯನೆತ್ತಿದರು ॥೧೨೨॥

ಜಯಜಯ ಬಂಧುಚಿಂತಾಮಣಿಯೆನಿಪನೆ
ಜಯಜಯ ಭಾಗ್ಯದ ಕಣಿಯೆ
ಜಯಜಯ ಭಾಳಲೋಚನನ ಪದಾಬ್ಜನೆ
ಜಯತೆಂದಾರತಿಯನೆತ್ತಿದರು ॥೧೨೩॥

ಮಾತೆಯರೆಲ್ಲ ಹರಸಿ ಆರತಿಯೆತ್ತಿ
ನೀತಿಕೋವಿದ ಚಂದ್ರಮಗೆ
ಭೀತಿರಹಿತನಾಗೆಂದು ಕಂದನ ಸಂ
ಪ್ರೀತಿಯಿಂದಲಿ ಹರಸಿದರು ॥೧೨೪॥

ಕಂದನ ಹರಸಿ ಜನನಿ ಲಿಂಗಮ್ಮನು
ತಂದು ಆರತಿಯನೆತ್ತಿದ[೪೯][ಳು][೪೯]
ತಂದೆ ಮಕ್ಕಳು ಸಮರಾಂಗಣ ಜಯಿಸೆಂದು
ಕಂದನ ಹರಸಿ ಬೀಳ್ಕೊಡಲು ॥೧೨೫॥

೪೯–೪೯ ರು (ತ,ಕ).

ವಂದನೆಗೆಯ್ದು ಜನನಿಯರಿಗತಿಮುದ
ದಿಂದೆ ಖಡ್ಗಗ ಝಳಪಿಸುತೆ
ಬಂದನು ವೀರಾಧಿವೀರ ತೋಟೇಂದ್ರನು
ತಂದೆಯ ಸಮ್ಮುಖದೆಡೆಗೆ ॥೧೨೬॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳದಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೧೨೭॥

[೫೦]ದ್ವಾದಶ ಸಂಧಿ ಸಂಪೂರ್ಣಂ[೫೦]

❖❖

೫೦-೫೦ ಅಂತು ಸಂಧಿ ೧೨ಕ್ಕಂ ಪದನು ೧೧೪೩ಕ್ಕಂ ಮಂಗಳ ಮಹಾಶ್ರೀ (ತ,ಕ).

ಸಂಧಿ : ೧೩

ಅದೆ ಬಂದುದು ದಾಳಿ

ಶ್ರೀಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸ ನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ಬಂದ ಕುಮಾರ ತೋಟೇಂದ್ರನ ಕಾಣುತಾ
ನಂದದಿ ಚಿಕ್ಕ ಭೂವರನು
ಮಂದಿ ಕುದುರೆಯಾಯತವಾಗಿ ಬರಹೇ
ಳೆಂದನು ದಳಪತಿಯೊಡನೆ ॥೨॥

ಹೇಳದ ಮುನ್ನ ಬಂದಿಟ್ಟಣಿಸಿತು ಕಾ
ಲಾಳು ಮೇಲಾಳು ಸೇರುವೆಯ
ವಾಲೆಯಕಾರರೆಕ್ಕಟಿಗರು ಭಟೆಯ ಬಿ
ಲ್ಲಾಳುಗಳ್ ಪೈಕ ಪೈಕದಲಿ ॥೩॥

ಹಲ್ಲಣಿಸಿತು ಲಾಯದ ತೇಜಿರದೆ *[ತೆ]*ರ
ಪಿಲ್ಲದೆ ಮಂದಿ ಸಂದಣಿಸಿ
ಬಲ್ಲಿದ ರಾಯರಾವುತರಾಯತವಾಗಿ
ನಿಲ್ಲದೆ ಬಂದರೊಗ್ಗಿನಲಿ ॥೪॥

– ದೆ(ತ,ಕ).

ತಾಳಿ ಚವುಕುಳಿ ಪಟ್ಟೆಯ ದಟ್ಟಿ ಲುಳಿ ಕಂಠ
ಮಾಲೇಭಾಪುರಿ ಕಾಲಕಡಗ
ವೀಳೆಯ ಮುಂತಾಗಿ ಮಂದಿಗುಚಿತವ ನೃ
ಪಾಲನಿರ್ಮಡಿ ಚಿಕ್ಕನಿತ್ತ ॥೫॥

ತಳುವದೆ ಮಂದಿ ಕುದುರೆ ಹೇರಳವಾಗಿ
ಕಳುಹ ಹೇಳೆಂದು ಚಿಕ್ಕೇಂದ್ರ
ಕಳುಹಿದನುತ್ತರಂಗಳ ತಿಮ್ಮಿನಾಯಕ
ಬಲಯುತ ರಂಗಭೂತಿಗೆ ॥೬॥

ತೊಡಗಿದ ರಾಯಕಾರ್ಯಕೆ ನೀನಿಲ್ಲದೆ
ಬಿಡದೆ ನಿರ್ವಹಿಸುವರಿಲ್ಲ
ನುಡಿದೊಡಿದುಪಚಾರವೆನ್ನದೀ ಕಾರ್ಯವ
ತಡಿಗೆಯ್ದಿಪುದು ನಿನ್ನ ಭಾರ ॥೭॥

ಎಂದಿವು ಮೊದಲಾದ ಕಾರ್ಯ ಕಥನ ನಿನ್ನ
ದೆಂದು ವಿನಯಪೂರ್ವಕದಿ
ಮುಂದನಾರೈದು ನಿಶ್ಚಯಿಸಿ ಚಿಕ್ಕೇಂದ್ರ ಕೆಂ
ಪೇಂದ್ರ ಗುತ್ತರವನಟ್ಟಿದನು ॥೮॥

ಎಟ್ಟಣಿಸುವ ಮಂದಿ ಕುದುರೆಯ ನಡುವಳ
ವಟ್ಟ ಹೊನ್ನಂದಳವೇರಿ
ದಿಟ್ಟಕುವರ ತೋಟೇಂದ್ರ ಸಹಿತಡಿ
ಯಿಟ್ಟನಗ್ಗಳಿಸಿ ಚಿಕ್ಕೇಂದ್ರ ॥೯॥

ರಾಜಿಪ ರನ್ನವಲ್ಲಣ ಮಣಿಮೊಗರಂಬ
ತೇಜದೊಳೆಸೆವ ಬಾಸಿಗದ
ರಾಜಹಂಸೆಯನೇರಿ ರಾಜಿಸುತೆಯ್ದಿದ
ರಾಜಕುಮಾರ ತೋಟೇಂದ್ರ ॥೧೦॥

ಗಗನದೊಳವನ ಜಸಂ ತುರು[೧][ಗಿ][೧]ರೆ ಶಶಿ
ಪುಗಲೆಡೆಗಾಣದೆ ಬಂದು
ಮಿಗೆ ಸೇವಿಸುತಿರ್ದಪುದೆನೆ ಬಿಳಿಯ ಸ
ತ್ತಿಗೆ ತೋಟೇಂದ್ರಗೊಪ್ಪಿದುವು ॥೧೧॥

ಝುಗಝುಗಿಸುವ ಜಗಜಂಪಿನ ಸತ್ತಿಗೆ
ನೆಗಪಿರೆ ನಿಜಬಿರುದುಗಳ
ಹೊಗಳಿಸಿಕೊಳುತೆ ಕೆನ್ನೀಲನ ಕುಣಿಸುತೆ
ಜಗಳಕ್ಕೆ ಬಸವೇಂದ್ರ ನಡೆದ ॥೧೨॥

ಎಡಬಲದೊಳು ಹಳದಿಯ ಢಾಳೊಪ್ಪಿರೆ
ಪಿಡಿದ ಬೆಳ್ಗೊಡೆಯ ನೆಳಲೊಳು
ನಿಡಿದೋಳ[೨][ಬಾ][೨]ಳ ಚಿಮ್ಮುತೆ ಸಾರಂಗಿಯ
ನಡ*[ರ್ದು]* ಶೇಖೇಂದ್ರನೆಯ್ದಿದನು ॥೧೩॥

ತೊಳಗುವ ಹೊನ್ನಹಲ್ಲಣ ಮೊಗರಂಬ ಕಂ
ಗೊಳಿಸುವ ಸಮಕಟ್ಟೆಸೆಯೆ
ಲಳಿಮಸಗುವ ರಾಯ[೩][ರತ್ನಿ][೩]ಯ ಕುಣಿಸು
ತ್ತಳಿಯ ಸೋಮೇಂದ್ರನೆಯ್ದಿದನು ॥೧೪॥

ನೇಲುವ ಸಮಕಟ್ಟಿನ ಜಲ್ಲಿ ಪೊಗರ ಥ
ಡಾಳಿಪ ರನ್ನವಲ್ಲಣದ
ಸಾಳುವನೆಂಬ ತುರಗವೇರಿ ನಡೆದನು
ಬೋಳವೀರೇಂದ್ರನಾಹವಕೆ ॥೧೫॥

ಹಲವು ಮುಖದೊಳೆಯ್ತಹ ಶತ್ರುಸೇನೆಯ
ತುಳಿಸುವ *ಹಲ್ಲಣೆಕಾರ*
ದಳದೊಳುಬ್ಬೆದ್ದು ತೇಜಿಯನೇರುತೆಯ್ದಿದ
ನಳಿಯ ಸೋಮೇಂದ್ರನಾಹವಕೆ ॥೧೬॥

೧–೧ ನಿ(ತ,ಕ) ೨–೨ ಭಾ(ತ,ಕ) *–* ದು (ತ,ಕ), ೩–೩ ಕತ್ತಿ(ಕ) *–* ಹೆಲ್ಲಣಿಕಾರ(ತ,ಕ).

ಇಕ್ಕಿದ ಮೊಗರಂಬ ಹೊನ್ನಹಲ್ಲಣದ ಬ
ಲಕ್ಕನೆಂದೆಂಬ ಕುದುರೆಯ(?)
ಮಿ[೪][ಕ್ಕಿ][೪] ಮೀರೇ[೫]ರಿ[೫] ದುವ್ವಾಳಿಸುತಳಿಯ
ಲಕ್ಕಣ್ಣನೆಯ್ತಂದನೊಲಿದು ॥೧೭॥

ಮುತ್ತಿನ ಬಾಸಿಗ ಸೂಡಿ ಕಟ್ಟಿದ ಜಲ್ಲಿ
ವೆತ್ತು ಮೋಹಿಪ [೬]ಕ[೬]ತ್ತಳ*[ವ]*
ಹತ್ತರಿಸುತೆಯ್ತಂದನು ಬೊಬ್ಬೆಗೊ
ಡುತ್ತಳಿಯ ಕಲ್ಲೇಂದ್ರ ॥೧೮॥

[೭][ಹೆಣೆದಿಹ ಬೊ][೭]ಲ್ಲನನೇರಿ ನಲಿದುಬ್ಬಿ
ಕುಣಿಸುತೆ ಹೊಗಳಿಸಿಕೊಳುತೆ
ಮಣಿದೊಡವಿನ ಮೈಯೊಗ್ಗಿನೊಳೆಯ್ದಿದ
ರಣಧೀರನಳಿಯ ವೀರೇಂದ್ರ ॥೧೯॥

ರನ್ನವಕ್ಕರಿಕೆಯ ನಾಗರಮರಿಯೆಂಬ
ಸನ್ನುತ ವಾಜಿರತ್ನವನು
ಚೆನ್ನಾಗಿ ಜೋಡಣೆಗೊಳಿಸುತೆ ನಡೆದನು
ಚೆನ್ನಿಗನಳಿಯ ಮುದ್ದೇಂದ್ರ ॥೨೦॥

ಚೆಂಬೊಗರ್ಗರೆವ ಹಲ್ಲಣ ಹೊಸ ಮಣಿಮೊಗ
ರಂಬದಿಂದೆಸೆದು ಮೋಹಿಸುವ
ಜಂಬನವೇರಿ ನೇಜಯವಾಂತು ನಡೆದನು
ಮುಂಬರಿದಳಿಯ ಲಿಂಗೇಂದ್ರ ॥೨೧॥

ಶಿಲೆಯ ಹಜಾರಮೇಕಂಗ ರೇಖೆಯ ಬಿರಿ
ತಲೆಯ ಕಾಳಿಯ ರಾವುತರು(?)
ಬಲುಗುದುರೆಯನೇರಿ ನೇಜಯವಿಡಿದು ಕಂ
ಗೊಳಿಸಿ ನಡೆದರಾಹವಕೆ ॥೨೨॥

೪–೪ ಕ್ಕ(ತ,ಕ). ೫–೫ರೆ(ಕ). ೬–೬ ತ(ಕ) *–*ದ (ತ,ಕ) ೭–೭ ಹೆಣದಿ ಹೆಬ್ಬೊ(ತ,ಕ)

ಮಿಸುಪ ಕೆಂಗಣ್ಣು ಕುರುಳು ಮೀಸೆ [೮][ಹೇ][೮]ರೊಡ
ಲೆಸೆದಿರೆ ಪಟ್ಟಿಹವಾಂತು
ಎಸಕವಡೆದ ಕಡುಗುದುರೆಯನೇರಿ ಹ
ಬ್ಬಿಸಿ ರಾವುತರೆಯ್ದಿದರು ॥೨೩॥

ಎಡಬಲದೊಳು [೯]ರ್[೯]ರಗಸದಂಬಿನ ಹೊಡೆ
ಹಿ*ಡಿ*ದ ಸಿಂಗಾಡಿ ರಂಜಿಸಲು
ಕಡುಗಲಿ ಕನ್ನೋಜಿ ರಾವುತರಶ್ವವ
ನಡರಿ ಹಾರಿಸುತೆಯ್ದಿದರು ॥೨೪॥

[೧೦]ತ್ರ[೧೦]ತ್ತಳ ಕೆನ್ನೀರನ ಚಾರು ಬೋರನ
ಚಿತ್ರಾಂಗಿಯ ಗರುಡನನು
ಬಿತ್ತರದೊಳು ದುವ್ವಾಳಿಯಿಡುವ ರಾ
ವುತರೆಯ್ದಿದರಾಹವಕೆ ॥೨೫॥

ಕೆಂಚ ನೀಲಿಯ ಹರಿಣಿಯ ಜೀವರತ್ನಿಯ
ಪಂಚಕಲ್ಯಾಣಿಯಿಟ್ಟಂಬ
ಮುಂಚುವ ಮೇದಿನಿಯೆಂಬ ನೇಜಯ ಪಿಡಿ
ದುಂ ಚರರಾಗಳೈದಿದರು ॥೨೬॥

ಮಿಡಿಗೇಶಿಯ ಚಿನ್ನಪ್ಪನಾಯಕನು
ಗ್ಗಡದ ಸಾಹಸಿ ದಿವ್ಯಲಿಂಗ
ಕೊಡಗಿಯಹಳ್ಳಿಯ ಬಸವ ದೊಡ್ಡೇರಿಯ
ಕಡುಗಲಿ ಕೆಂಪನೊದಗಿದ ॥೨೭॥

ಧುರಧೀರ ಬುಕ್ಕಪಟ್ಟಣದ ಕೆಂಪಣಗೌಡ
ತೆರೆಯೂರ ನಂಜನೆಂಬವನು
ಗರುಣಿಯ ತೋಟಿ ಮಣೂರ ಮಲ್ಲನು ತಮ್ಮ
ಪರಿವಾರವೆರಸಿ ನಡೆದರು ॥೨೮॥

೮–೮ x (ತ,ಕ) ೯–೯ ತ(ಕ) *–* ಡಿಸಿ(ತ) ೧೦–೧೦ಕ(ಕ)

ಧಾಳಿವಾಟದ ಸಿದ್ಧನು ಮೋದೇದ ಹೆ
ದ್ದಾಳುತನದ ತಿಮ್ಮಣ್ಣ
ಬೇಲೇದ ಹೊನ್ನಗಿರಿಯ ಬಂದರು ತ
ಮ್ಮೋಲೆಯಕಾರರೊಗ್ಗಾಗಿ ॥೨೯॥

ಸೂರೇನಹಳ್ಳಿಯ ಪಟುಭಟನೆನಿಪ ಕೊ
ಟ್ಟೂರ ಮುದ್ದೆನಹಳ್ಳಿ ತಮ್ಮ
ಧೀರನು ತೋವಿನಕೆರೆ ತೋಟದಳವಾಯಿ
ವೀರನೆಂಬವರೊದಗಿದರು ॥೩೦॥

ನಾಗಿನಾಯಕ ತಾರಿಗೆರೆಯ ಪೆನ್ನನು ಮಲ್ಲಿ
ನಾಗನು ಅಸಗರ ಬಸವ
ಬೇಗದೊಳಾ ಸೇರುವೆಗಾರರೆಲ್ಲರೊ
ಗ್ಗಾಗಿ ನಡೆದರು ಮೋಹರಿಸಿ ॥೩೧॥

ವೀರದಿಮ್ಮನು ಸೆಟ್ಟಿಪೋತುದಿಮ್ಮನು ತಳ
ವಾರ ಗಜ್ಜಿಗನು ಕಾಮಣ್ಣ
ಧೀರ ಕೊತ್ತಳದಯ್ಯ ಮೊದಲಾದೊಂಟರಿಗಾರ
ರೋರಂತೆ ನಡೆದರವರು(?) ॥೩೨॥

ಹರಿಗೆಕಾರರ ತಿಂತಿಣಿ ಬಿಲುಗಾರರ
ನೆರವಿ ತುಪಾ[೧೧]ಕದ[೧೧]ರೊಡ್ಡು
ಪರಿಯಿೀಟಿಕಾರ[೧೨][ರ][೧೨] ಗಡಣದಿರ್ಮಡಿಚಿಕ್ಕ
ಧರಣೀಶನೊಡನೆಯ್ದಿದರು ॥೩೩॥

[೧೩]ತ್ರ[೧೩]ಡಕಿನ ಝಲ್ಲಿ ಹುಲಿಯಬಾಲ [೧೪]ಚೆ[೧೪]ನ್ನಕ
ನ್ನಡಿಯ ಹಗಲುದೀವಿಗೆಯ
ಎಡಗಾಲಬಿರುದಿನ ತೊಡರಿನೆಕ್ಕಟಿಗರಿ
ರ್ಮಡಿಚಿಕ್ಕನೊಡನೆಯ್ದಿದರು ॥೩೪॥

೧೧-೧೧ ತಕ(ಕ)೧೨-೧೨ರ (ತ,ಕ), ೧೩-೧೩ಸೆ(ಕ)೧೪-೧೪ ಬೆ(ಕ)

ಒಡೆಯನೊಡವೆಯ [೧೫]ಹೊ[೧೫]ಳ್ಳಿಸಿ ತಿಂದು ರಣದೊಳು
ಕಡಿಕಡಿದಿರಿದು ಮೆರೆಯದೆ
ಒಡಲ ಹೊರೆವರಲ್ಲದ ತುಳಿಲಾಳವಂ
ಗಡವೆಯ್ದಿದುದುರವಣಿಸಿ ॥೩೫॥

ಉಟ್ಟ ಪಟ್ಟೆಯ ದಟ್ಟಿ ಕಟ್ಟಿದ ಸುರಗಿ ಹೊಂ
ಗಟ್ಟಿನ ಬಿಲುಮೊನೆಯಂಬು
ತೊಟ್ಟ ಪಸುರುಗುಪ್ಪಸವೊಪ್ಪುತಿರಲಳ
ವಟ್ಟು ಬಿಲ್ಗಾರರೆಯಿದಿದರು ॥೩೬॥

ಇಡಿಕಿರಿದೊಟ್ಟಿದ ಬಾಣದ ಬಂಡಿಯ
ಗಡಣ ಬೊಕ್ಕಸದೆತ್ತುಗಳ
ಎಡವಿಡದೆಯ್ದುವ [೧೬]ತೊ[೧೬]ಟ್ಟಿಗೆ ಕೊಲ್ಲಾರಿ
ನಡೆದುದಿರ್ಮಡಿಚಿಕ್ಕನೊಡನೆ ॥೩೭॥

ಎಡಬಲ ಹಿಂದುಮುಂಗಡೆಯೊಳು ಮನ್ನಣೆ
ವಡೆದರಸುಗಳ ಕುವರರು
ಗಡಣೆಯೊಳೋಲೈಸುತ ನಡೆತರುತಲಿ
ರ್ಮಡಿಚಿಕ್ಕಭೂಪನೆಯ್ದಿದನು ॥೩೮॥

ಎಸೆವ ಬೆಳ್ಗೊಡೆ ಸೂಳರಿದಿಕ್ಕೆಲದಿ ಥಾ
ಳಿಸುವ ಚಮರ ಮುಂಗೆಲದೊಳು
ಬಸವನ ಬಿರುದು ಹಳದಿಯ ಬಿರುದಿನ ಥಾ
ಳಿಸೆಯಲೈದಿದ ಚಿಕ್ಕನೃಪನು ॥೩೯॥

ಗದ್ಯಪ[೧೭][ದ್ಯೋ][೧೭]ದಾಹರಣೆ ದುಪಾದನ
ವದ್ಯ ಬಿರುದನಂಕಿಸುತೆ (?)
ಹೃದ್ಯಮೆನಿಸಿ ಪಾಠಕರು ಕೀರ್ತಿಸಲತಿ
ಚೋದ್ಯವೆನಿಸುತಲೆಯ್ದಿದರು ॥೪೦॥

೧೫–೧೫ಹೆ(ಕ) ೧೬–೧೬ಕೂ(ಕ) ೧೭–೧೭ದ್ಯ(ತ,ಕ)

ಅಡರ್ದವಂಬರಕುಡುಕೇತನ ಪೊತದೆ
ಕಡೆದೆಸೆವಕ್ಕಲಿಂಬಿತ್ತು
ನಡೆಯೆ ದಿಕ್ಕರಿಗಳು ಚಿಕ್ಕಭೂಪನ ಪಡೆ
ಪೆಡೆಯುಡುಗಿದನಂದಹಿಪ ॥೪೧॥

ಕಡೆಗಾಲದ ಕಾಲರುದ್ರನ ಕೈಯೊಳಾ
ರ್ಭಟಿಸುವ ಢಕ್ಕಾ ದನಿಗೆ
ಪಡಿಯೆನಿಸಿತು ದಾಂಥಳಥಳಮೆಂದಾಗ
ಹೊಡೆವ ಭೇರಿಯ ಘನನಿನದ ॥೪೨॥

ತುಡಮು ಢಮಾನ ಬೊಂಬುಳಿ ವೀರ ೧೮[ರ]೧೮ಣವಾದ್ಯ
ಹಿಡಿವ ಪೆರ್ಗಾಳೆ ಕೊಂಬುಗಳ
ಕಡುರವವಹಿತರನೆ೧೯[ದೆ]೧೯ಗೆಡಿಸುತಿರೆ
ನಡೆದ ಚಿಕ್ಕೇಂದ್ರ ಧಾಳಿಯನು ॥೪೩॥

ನಡುನಾಡಗೂಳಿಯಿರ್ಮಡಿಚಿಕ್ಕಭೂಪತಿ
ಗಡಿಯ ಕೋಟೆಯ ಲಗ್ಗೆಗೊಂಡು
ಬಿಡದೆ ತನ್ನಯ ಠಾಣೆಯವಿಟ್ಟು ಮುಂದಕ್ಕೆ
ನಡೆದನುಬ್ಬೆದ್ದು ಬೊಬ್ಬಿಡುತೆ ॥೪೪॥

ಒಕ್ಕಲಿಕ್ಕುತೆ ಸುಟ್ಟು ಸೂರೆಯಾಡುತ್ತೊಳ
ಪೊಕ್ಕು ವೈರಿಯ ರಾಜ್ಯವನು
ಮುಕ್ಕಣ್ಣ ಬಲ್ಲೆಹ ಬಿರುದಾಂಕನಿರ್ಮಡಿ
ಚಿಕ್ಕಭೂಪಾಲಕನಿರಿದ ॥೪೫॥

ದಾಳಿಟ್ಟು ಚಿಕ್ಕಭೂಪಾಲ ವೈರಿಯ ನಾಡ
ಧೂಳಿಪಟಲಮನೆಸಗೆ
ಗಾಳಿಗೊಡ್ಡಿದ ಸೊಡರಾದುದು ಜನದ ವಿ
ಶಾಲ ಸಂಪದವೆಂಬುದಂದು ॥೪೬॥

೧೮–೧೮x(ತ,ಕ) ೧೯–೧೯ಡೆ(ತ,ಕ)

ನಡುನಾಡಗೂಳಿಯಿರ್ಮಡಿಚಿಕ್ಕ ದಾಳಿಯ
ನಿಡೆ ಪಗೆವನ ನಾಡೆಲ್ಲ
ಒಡೆದು ತಾಯಿಗೆ ಮಕ್ಕಳಿಲ್ಲದೆ ಗೂಳೆಯ
ನಡೆದುದನದನೇನೆಂಬೆ ॥೪೭॥

ನಡುಗುವ ಕೈಕಾಲೊಣಗುವ ನಾಲಗೆ
ದಡದಡಿಪೆದೆ ಬೆಮರ್ವಂಗ
ಅಡಗಿದ ದನಿ ತೊಟ್ಟಿಡುವ ಕಂಬನಿದೋರೆ
ನಡೆದುದು ನಾಡ ಗೂಳೆಯವು ॥೪೮॥

ಮುಡಿಯಿಂದೆ ಮಗಮಗಿಪಲರೊಗುತಿರೆ ತಳಿ
ರಡಿಗಳು ಪರತ್ತಲೊಡದು(?)
ಬಿಡದೆ ಸೂಸುತ್ತಿರೆ ನೆತ್ತರಂಗನೆಯರು
ನಡೆದರು ಗೂಳೆಯದೊಳಗೆ ॥೪೯॥

ಬಿಸಲ ಹಬ್ಬೆಯನರಿಯದ ಕೋಮಲಾಂಗಿಯ
ರೆಸಕವಳಿದು ಬಳಲುತ್ತೆ
ದೆಸೆಗೆಟ್ಟು ತಾವೊಂದೆಸೆಯಾಗಿ ಪತಿಯೊಂ
ದೆಸೆಯಾಗುತಡವಿಗೆಯ್ದಿದರು ॥೫೦॥

ಅಂಗಡಿ ಮನೆಗಿದಿರಾಗಿ ಬಡಿದುಕೊಂ
ಡಂಗನೆಯರ ಕೈವಿಡಿದು(?)
ಮುಂ ಗಳಿಸಿದುದ ಕಾಣಿಸದೆ ಕೋಮಟಿಗರು
ಮುಂಗಡೆಯೊಳು ತೆರಳಿದರು ॥೫೧॥

ಕೊಟ್ಟವನಂದೆ ಕೆಟ್ಟನು ಸತಿಪುತ್ರರು
ಕೆಟ್ಟರೆನುತೆ ನೊರೆಯಿಡುತೆ
ಬಿಟ್ಟಮಂಡೆಯ ಪಾಗ ತಪ್ಪ ಸುತ್ತುತ್ತಡಿ
ಯಿಟ್ಟನಲ್ಲೊಬ್ಬ ಕೋಮಟಿಗ ॥೫೨॥

ಅಡಕೆ ಮೆಣಸಿನರಳೆಯ ಬೀಡಿಕೆಗಳ
ಗಡಿ ಸರಕಿನ ಮಳಿಗೆಗಳ
ಕಡು ಜವಳಿಯ ತಡಗವ ಬಿಟ್ಟು ಹರದರು
ನಡೆದರಳಲುತೆ ಗೂಯಳೆವ ॥೫೩॥

ಅಂತಣ್ಣ ಬಂದೆಬಂದೆನು ಸಾಯಣ ಜಿನ್ನ
ಣ್ಣಂ ತಳುವಿದನು ಬೊಮ್ಮಣ್ಣ
ತಾಂ ತಪ್ಪಿ ಪೋ[೨೦][ದ][೨೦]ನೆನುತೆ ಜೈನರಳಲು
ತ್ತುಂ ತೆರಳಿದರು ಗೂಳೆಯವ ॥೫೪॥

ಕಟ್ಟಿ[೨೧][ದ][೨೧] ಬಂಡಿಯ [೨೨]ಕ[೨೨]ರವೆಮ್ಮೆಗೆಯ್ವೆ
ತ್ತೊಟ್ಟಿದ ಮೂಡೆ ಮುಟ್ಟುಗಳ
ಬಿಟ್ಟು ಮಡದಿ ಮಕ್ಕಳನೆ ಸಾಗಿಸುತಡಿ
ಯಿಟ್ಟರೊಕ್ಕಲಿಗರೊಂದೆಸೆಯ ॥೫೫॥

ಪುಟ್ಟಿ ಭಟ್ಟರೆ ಕಂಡಿರೆ ಕೊಂಡಿಭಟ್ಟನು
ಬಿಟ್ಟು ಸಾಗಿದನೆಮ್ಮುವನು
ಪಟ್ಟವರ್ಧನ ಪೆದ್ದಿಭಟ್ಟ ತಡೆದನೆಂದು
ಮಟ್ಟಿಯ ಮರುಳರೆಯ್ದಿದರು ॥೫೬॥

ಹೊತ್ತಿಗೆಗಳ [೨೩]ಹೂ[೨೩]ಡಿ ದೇವಪೂಜೆಯ ಮು[೨೪]ಟ್ಟು[೨೪]
ಭತ್ತದ ಮೂಡೆ ಜೀಕಿಡಲು
ನೆತ್ತಿವಾಲದ ಪಶುವಿವನೆನೆ [೨೫][ಪೆ][೨೫]ಗಲೊಳು
ಪೊತ್ತೊರ್ವ ಪಾರ್ವನೈದಿದನು ॥೫೭॥

ಗಂಧದ ಕಲ್ಲ ನಾಲಗೆ ನಿನ್ನನಾ ಕಾ
ಯೆಂದೆನೆಂಬಾಣ್ಮಗೆ ನೀನೆ
ತಂದೆಯೆನುತೆ ಬಂದೆನೆಂದೊಬ್ಬ ಸತಿ [೨೬][ಗೊ
ಳ್ಳೆಂ][೨೬]ದು ನಗಿಸಿದಳು ಕೆಲರ ॥೫೮॥

೨೦-೨೦ ದೆ(ತ,ಕ) ೨೧-೨೧ನ (ತ,ಕ)೨೨-೨೨ ತ(ಕ) ೨೩-೨೩ ಹೇ(ಕ) ೨೪-೨೪ ಟ್ಟೆ(ಕ)೨೫-೨೫ ಪ(ತ,ಕ)
೨೬-೨೬ಗೋಳೆಂ(ತ,ಕ)

ಕುಲಜ ನಿಪುಣ ಧನಿಕರನೆನ್ನಯ ಮನೆ
ಗೆಲಸದವರ ಮಾಳ್ಪ ವಶ್ಯ
ತಿಲಕದ ಭರಣಿಯ ಮರೆದೆನಯ್ಯೋಯೆಂದು
ಬೆಲೆವೆಣ್ಣು ನಡೆದಳೊಂದೆಸೆಯ ॥೫೯॥

ತೊಟ್ಟಿಲ ಶಿಶುಗಳ ಹೊತ್ತು ಬಾಣಂತಿಯ
ರೊಟ್ಟೋದರುವ ಬಾಲರಿಗೆ
ತೊಟ್ಟಿಡುತಿಹ ಮೊಲೆವಾಲ[೨೭][ನೂ][೨೭]ಡದೆ ಕಾ
ಲಿಟ್ಟರು ಕಂಬನಿ ಸುರಿಯೆ ॥೬೦॥

ಅದೆ ಬಂದುದು ದಾಳಿಯೆಂಬ ಮಾತಿಗೆ ಬೇ
ಗುದಿಗೊಳುತಿಹ ಬಸುರಿಯರ
ಉದರದ ಪಿಂಡ[೨೮]ಗಳು[೨೮]ಚ್ಚಿದವೆನಲದೆ
ಗುದಿಹವೆಂತುಟೊ [೨೯]ಮಿ[೨೯]ಕ್ಕ ಜನರ ॥೬೧॥

ಹೊ[೩೦]ತ್ತ[೩೦] ಹೊರೆಯನೀಡಾಡುತೆ ಕೌಂಕುಳೊ
ಳೆತ್ತಿದ ಶಿಶುಗಳ ಬಿಸುಟು
ಚಿತ್ತವಲ್ಲಭೆಯರ ನೆನೆಯದೆ ತಾಮಸ
ವೃತ್ತಿಯಿಂದಡವಿಗೆಯ್ದಿದರು ॥೬೨॥

ಈ ತೆರದಿಂದೆಯರಾತಿಯ ಜನಪದ
ಭೀತಿಗೊಂಡಿರದೆ ಬಿಟ್ಟೋಡೆ
ಭೂತಳದೊಳಗಿದು ಪೊಸತೆನಿಸುವ ವಿಕ್ರ
ಮಾತಿರೇಕವ ಕಾಣಿಸುತೆ ॥೬೩॥

ಧಳಧುಳಿಗೆಯ್ದು ವೈರಿಯ ರಾಜ್ಯವನೆಲ್ಲ
ಹಳುವ ಹೊಗಿಸಿ ಬೊಬ್ಬಿಡುತೆ
ಹಲವು ಮುಖದೊಳು ಹರಿದು ತುರುವಿನ ಹಿಂಡು
ಗಳ ಪಿಡಿದವ ತೆರಳಿಸುತೆ ॥೬೪॥

೨೭–೨೭ ನೋ(ತ,ಕ) ೨೮–೨೮ ಗು(ಕ) ೨೯–೨೯ಮ(ಕ)

ಕಡಿದನಹಿತನ ರಾಜ್ಯವನೆಲ್ಲ ಕೊಳ್ಳೆಯ
ಹಿಡಿಸಿ ಹಾಳ್ಮಾಡಿ ಬೊಬ್ಬಿಡುತೆ
ನಡೆತಂದು ಹರುವೆಯ ಕೋಟೆಯ ನೋಡಿಯಿ
ರ್ಮಡಿಚಿಕ್ಕನಣುಗ[೩೧][ಗಿ][೩೧]ಂತೆಂದ ॥೬೫॥

ಕೂಗಿದೊಡುಬ್ಬೆದ್ದು ಹೆಚ್ಚುವೀ ಕೋಟೆಯ
ನೀಗ ನಿಲ್ಲದೆ ಮಾಡೆನುತೆ
ತಾಗುವ ಮೊರಸವಡೆಯನಾಂಪೆ ನಾನೆಂ
ದಾಗಳಾತ್ಮಜಗೆ ನೇಮಿಸಿದ ॥೬೬॥

ಎಂದ ಮಾತನು ಕೇಳುತ ಕುಮಾರನಿಂ
ತೆಂದನಿಂತಪ್ಪ ಕೋಟೆಯನು
ಇಂದೀಗಳೆ ಲಗ್ಗೆ ಮಾಡಿ ತೋರುವೆನಿದ
ನೆಂದೊಡೇನಹುದೆಂದು ನಡೆದ ॥೬೭॥

ಇದಿರಿಸಿ ಬಂದು ತಾಗುವ ಪಟುಭಟರನು
ಕದುಬಿ ಮೇಲ್ವರಿದೂರ ಪೊಗಿಸಿ
ಕದಲದೆ ಪುಲಿಮೊಗದೊಳು ನಿಂದು ಕಾದಿದ
ಕದನವಿಕ್ರಮನು ತೋಟೇಂದ್ರ ॥೬೮॥

ಕಗ್ಗೊಲೆಯನು ಬಿದ್ದು ಕಡಿಯಬೇಕೆನುತವ
ರೊಗ್ಗಾಗಿಯೈನೂರುಮಂದಿ
ಮೊಗ್ಗರಿಸುವ ಪಟುಭಟರ ಮೋಹರದೊಳು
ಮುಗ್ಗಿ [೩೨]ಮುರಿ[೩೨]ದರಿರಿದಾಡಿ ॥೬೯॥

ಉರವಣೆಯಂ ಕೋಂಟೆಯ ಬಳಸುತೆ ತನ್ನ
ಪರಿವಾರಕೆ ಕೈಯ ಬೀಸಿ
ಭರದಿಂದೆ ಲಗ್ಗೆ ಮಾಡೆಂದು ಕುಮಾರ ಮುಂ
ಬರಿದು ಕೋಂಟೆಯ ಸಾರಿದನು ॥೭೦॥

೩೦–೩೦ ತತ್ತಿ(ತ,ಕ) ೩೧–೩೧ನಿ(ತ,ಕ) ೩೨–೩೨ ಮಡಿ(ತ)

ತಳಿಮೆರುವೆಗಳೆಂಬವರ ಹಂಗಿಲ್ಲದೆ
ತಲೆವರಿಗೆಯ ಪಟುಭಟರು
ತುಳಿವುತೆ ಬಿದ್ದ ಹೆಣನ ಸಡ್ಡೆ ಮಾಡದೆ
ಬಳಸಿ ಕೋಟೆಯ ಮುತ್ತಿದರು ॥೭೧॥

ಶೂಲಿಯಂಬಕ ಪಾವಕಕಣ ತ್ರಿಪುರದ
ಮೇಲೆ ಮುಸುಕಿ ಮುತ್ತಿದಂತೆ
ಕೋಲಾಹಲ ರವದಿಂದೆ ಕುಮಾರನ
ಕಾಲಾಳು ಕವಿದರೊಗ್ಗಿನಲಿ ॥೭೨॥

ಬಿದ್ದ ಹೆಣನ ಮೆಟ್ಟಿ ನಡೆವುತೆ ಕೋಟೆಯ
ಹೊದ್ದಲು ಪಟುಭಟರತ್ತ
ಗದ್ದಳಗೊಳುತಾಳುವೇರಿಯ[೩೩][ನೇ][೩೩]ರೊಳ
ಗಿದ್ದವರೆಲ್ಲಡಗಿದರು ॥೭೩॥

ಮಳಲ ಹುರಿದು ಕೊಡೆಣ್ಣೆಯ ಕಾಸು ಕೋಟೆಯ
ನಣೆವ[೩೪][ರೆ][೩೪] ದಸಿಗೊರಡಿಂದೆ
ಹಣಿ ಮದ್ದು ಹಂಚು ಹೊಯಿ [೩೫][ತಿ][೩೫]ವಿಯಿರಿಯೆಂಬುಲಿ
[೩೬]ಪೆಣೆದು[೩೬]ದಾಕಾಶಮಂಡಲವ ॥೭೪॥

ಮುಗಿಲಟ್ಟಣೆಗಳನೇರಿ ಕೊತ್ತಳಗಳ
ನಗಲದೆ ತೆನೆಯೆತ್ತುಗುಂಡು
ನೆಗೆಪಿಡು ಹುಲಿಮೊಗವನು ಹತ್ತಿ ಗುಂಡುಗೋ
ವಿಗಳ ಜೋಡಿಸಿದರಂದವರು ॥೭೫॥*

ಮಸೆದ ಕೂರೀಟಿಯಿಂದಿರಿವ ಕೂರಾಳಿಂ
ದೆಸೆವ ಬಿಲ್ಗಾರರ್ಕಳಿಂದೆ
ಪಸರಿಸಿ ನಿಂದ ಹರಿಗೆಕಾರರ ಮಾ
ಮಸಕದಿಂ ಮಲೆತುದಾ ಕೋಟೆ ॥೭೬॥

೩೩–೩೩ ನೂ(ತ,ಕ) ೩೪–೩೪ರ(ತ,ಕ) ೩೫–೩೫ಕಿ(ತ,ಕ) ೩೬–೩೬ಪೊಣ(ಕ) * 'ತ' ಪ್ರತಿಯಲ್ಲಿ ಮಾತ್ರ ಇದೆ.

ಇಡುವ ತುಪಾಕಿ ಪೆಟಲು ಗುಂಡುಗೋವಿ ಸಂ
ಗಡಿಸಿದ ಕವಣೆಗಲ್ಲುಗಳು
ಬಡಿಗೆಗಳೆತ್ತುಗಲ್ಲಿಡುಗಲ್ಲು ದಸಿಯ ಕೊ
ರಡುಗಳಿಂ ಮಲೆತುದಾ ಕೋಟೆ ॥೭೭॥

ಹುರಿದ ಮಣಲು ಕಾದಂಬಲಿ ಮದ್ದಿನ
ಹಿರಿಯ ತಿತ್ತಿಗಳು ಕಾದೆಣ್ಣೆ
ಹರವಿಗಳಲ್ಲಲ್ಲಿ ಮೆರೆವ ಡೆಂಕಣೆಗಳ
ಹೊರಳಿಲಿಂ ಮಲೆತುದಾ ಕೋಟೆ ॥೭೮॥

ಮುತ್ತಿಯೊತ್ತರಿಸಿ ಕೋಟೆಗೆ ಸೇರಿಯೇಣಿಯ
ಹತ್ತಿಯಗ್ಗಳಿಪಳವಿಯೊಳು
ಕಿತ್ತ ಕಠಾರಿಯೊಳಿರಿದಾಡಿದರು ಬಲ್ಪು
ವೆತ್ತು ಮೆರೆವ ಪಟುಭಟರು ॥೭೯॥

[೩೭]ಹೊ[೩೭]ಣಕೆಯ ಹೊಂತಕಾರರು ಹ[೩೮][ಲ][೩೮]ವಾರು [೩೯][ನಿ][೩೯]
ಚ್ಚಣಿಕೆಯ ಕೋಟೆಗಿಡುತಲಿ
ಹೆಣಗಳ ಮೆಟ್ಟಿದರು ಕೆತೆನೆಮಟ್ಟದೊ
ಳಣೆದು ಕಾದಿದರವರೊಡನೆ (?) ॥೮೦॥

ಒತ್ತರಿಸೇರುವಿವರ ಮೇಲೆ ಮದ್ದಿನ
ತಿತ್ತಿಯ ಸುಟ್ಟು ಹಾಕುತ್ತೆ
ಎತ್ತುಗಲ್ಬಡಿಗೆ ಬಲ್ದೊಡ್ಡೆ ದಸಿಗೊರಡ ತಂ
ದೆತ್ತಿ ಹಾಕುವರೊಳಗಿರ್ದು ॥೮೧॥

ಹತ್ತುವರಿವ ತಿವಿದೊತ್ತುವರವರಿರಿ
ವುತ್ತೇರುವರಿದರವರು
ಒತ್ತುಗೊಡದೆ ಕಡಿದಾಡುವರಿವರವ
ವಿತ್ತಂಡದವರು ಮತ್ಸರಿಸಿ ॥೮೨॥

೩೭–೩೭ ಹೂ(ಕ) ೩೮–೩೮ ತ(ತ,ಕ) ೩೯–೩೯ ತಿ(ತ,ಕ)

ಮಲೆತೇ*[ಳೆಂ]*ಟು ಗಳಿಗೆ ಸರಿಮಿಗಿಲಾಗಿ
ಹಳಚುವ ತೆನೆಯ ಮಟ್ಟದೊಳು
ತೊಲಗದೆ ಕಾದುತಿರಲು ತೋಟೇಂದ್ರನು
ಛಲದಂಕಕಾರನೇರಿದನು ॥೮೩॥

ಹತ್ತಿ ಮೇಲ್ವರಿದು ಬೊಬ್ಬಿಟ್ಟು ಲಗ್ಗೆಯ ಮಾಡಿ
[೪೦][ಒ][೪೦] ತ್ತರಿಸುತ್ತರಿಭಟರ
ಕುತ್ತಿ ಕೆಡಪಿ ಕೊರಳ್ಗಳ ಕೊಯ್ದು ತಲೆಗಳ
ನೆತ್ತಿದನಾ ತೋಟೇಂದ್ರ ॥೮೪॥

ಹೇಳಲಿನ್ನೇನು ಕೋಟೆಯನೇರಿಕೊಂಡಿ
ದ್ದಾಳೊಳಗಣ್ಗೆ [೪೧][ಧುಮುಕಿ][೪೧]
ಆಳುವೇರಿಯ ಮೇಲಿದ್ದ ಭಟರನೆಲ್ಲ
ಬೀಳಲಿರಿದು ಕೆಡಪಿದರು ॥೮೫॥

ಕೊತ್ತಳ ಕೊತ್ತಳ ಮುಗಿ[೪೨]ಲ[೪೨]ಟ್ಟಣೆಗಳ
ನೊತ್ತುಗೊಂಡಿಹ ಪಟುಭಟರ
ಅತ್ತಿತ್ತ ಕದಲಗೊಡದೆ ತಲೆಗಳ ಕಡಿ
ದೆತ್ತಿ ಬಿಸುಟ[೪೩]ರಗಳೊ[೪೩]ಳಗೆ ॥೮೬॥

ಹುಲಿ ಮೊಗದ ನಿಡುಗೊತ್ತಳದೊಳಗಿಹ
ಬಲುಗೈಯ ಹೊಂತಕಾರಿಗಳ
ತಲೆಗಳ ಕಡಿದು ಬೊಬ್ಬಿಡುತುಬ್ಬಿ ಹೆಬ್ಬಾ
ಗಿಲ ತೆಗೆಸಿದನಾ ಕುವರ ॥೮೭॥

ಹೋದುದು ಹೊರಕೋಟೆ ಕೆಟ್ಟೆವಿನ್ನೇತಕೆ
ಬೀದಿಯ ಹೆಣನಾಗಬೇಕು
ಆದುದಾಗಲಿಯೆಂದೊಳಕೋಟೆಯ ಹೊಕ್ಕು
ಕಾದಲಿಚ್ಛೈಸಿದರವರು ॥೮೮॥

– ಳುಂ(ತ,ಕ) ೪೦–೪೦ ದೂ(ತ,ಕ)೪೧–೪೧ ದ್ದು ಮುಕ್ಕಿ(ಕ),ದ್ದು ಮುಕಿ(ತ) ೪೨–೪೨ ಲಿ(ಕ) ೪೩–೪೩ ರೊಳಗೊ(ಕ)

ಚಂಡವಿಕ್ರಮಕುವರನು ಹೊರಕೋಟೆಯ
ಕೊಂಡುದನಾ ಚಿಕ್ಕಭೂಪ
ಕಂಡುಬಂ[೪೪][ದು][೪೪]ರೆ ಸಂತಸ ಕೈಮಿಗೆಯಪ್ಪಿ
ಕೊಂಡು ಕೊಂಡಾಡುತಿಂತೆಂದ ॥೮೯॥

ಅಲ[೪೫]ಸಿ[೪೫]ದೆ ಹೊರಕೋಟೆಯ ಜಗಳದೊಳಾಳು
ಬಳಸೊಳಕೋಟೆಯನಿಂದು
ತೊಲಗದಿರೆಂದು ಕುಮಾರಗರುಪಿ ಪೊರ
ವಳೆಯದೊಳಿಳಿದ ಪಾಳೆಯವ ॥೯೦॥

ಆ ಸಮಯಕೆ ಬಂದೊದಗಿಕೊಂಡರು ಹರ
ತೀಶನ ತಿಮ್ಮಿನಾಯಕರು
ಸಾಸಿರ ದಳಪತಿಗಳು ದಳವೆರಸಿ ವಿ
ಲಾಸದೆ ಚಿಕ್ಕಭೂವರನ ॥೯೧॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೯೨॥

[೪೬]ತ್ರಯೋದಶ ಸಂಧಿ ಸಂಪೂರ್ಣಂ[೪೬]

❖❖

೪೪–೪೪ ದ(ತ,ಕ)೪೫–೪೫ ಸ(ತ) ೪೬–೪೬ ಅಂತು ಸಂಧಿ ೧೩ಕ್ಕಂ ಪದನು ೧೨೩೫ಕ್ಕಂ ಮಂಗಳ ಮಹಾಶ್ರೀ(ತ,ಕ)

ಸಂಧಿ : ೧೪

ಹಿಡಿದರು ಸೊಕ್ಕಿದಾನೆಯನು

ಶ್ರೀ ಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ಪೊಳಲ ಪೊರಗಣುಪವನದೊಳು ಚಿಕ್ಕಭೂ
ತಳನಾಥನಿಳಿಯೆ ಪಾಳೆಯವ
ಥಳಥಳಿಸುವ ಕೆಂಬೆಳಗಿನಿಂದಪರಾ
ಚಳದೊಳೆಸೆದುದಿನಬಿಂಬ ॥೨॥

ಸಮರನಿಶ್ಶಂಕನೆನಿಪ ತೋಟೇಂದ್ರನ
ವಿಮಳವಿಜಯವಧುವಿಟ್ಟ
ಕಮನೀಯರತ್ನಕಂತುಕವೊಯಿದೆನಲಾ
ದ್ಯುಮಣಿಯೆಸೆದುದಾಸ್ಥಾನದೊಳು ॥೩॥

ಹಳದಿಯ ಬಿರುದಿನಗ್ಗಳ ತೋಟೇಂದ್ರನು
ಜ್ವಳತೇಜಕಾದಿತ್ಯನಳುಕಿ
ಜಲವ ಹೊಕ್ಕಡಗುವೆನೆಂದೆಂಬವೊಲು ತಾ
ನಿಳಿದನು ಪಡುಗಡಲೊಳಗೆ ॥೪॥

ಮುಗಿದವಂಬುಜವಲರ್ದವು ಕುಮುದಂಗಳು
ಬಗೆಗುಂದಿ ಜಕ್ಕವಕ್ಕಿಗಳು

ಅಗಲ್ದವಂಬರತಳದೊಳು ಥಳಥಳಿಸಿ ತಾ
ರಗೆಗಳೊಪ್ಪಗೊಳಿಸಿದವು ॥೫॥

ಕಲಿ ತೋಟೇಂದ್ರನ ಪಗೆವರೆದೆಯೊಳು
ನೆಲೆಗೊಂಡ ದುಗುಡಗತ್ತಲೆಗೆ
ಬಲಿದೆಣೆಯೆನಿಸಿತುರ್ವಿಯ ಪರ್ವಿಕೊಂಡ ಕ
ತ್ತಲೆ ದಟ್ಟವಾಗಿಟ್ಟಣಿಸಿ ॥೬॥

ಧುರಧೀರ ಕುವರ ತೋಟೇಂದ್ರನ ಜಯವಧು
ಹರುಷದೊಳೊಲಿದು ನಿಟ್ಟಿಸುವ
ವರಮಣಿದರ್ಪಣವಿದೆನೆ ಮೂಡಲು ಚೆಂ
ದಿರವಟ್ಟು ಮೂಡಿ ರಾಜಿಸಿತು ॥೭॥

ಅಂದಿನಿರುಳು ಪೇರೋಲಗದೊಳು ಮುದ
ದಿಂದ ಚಿಕ್ಕೇಂದ್ರನೊಪ್ಪಿರಲು
ಬಂದು ಭೈರೇಂದ್ರನ ಹೇಜಿಪ ಭರವಸ
ದಿಂದೆ ಕಂಡನು ಕೈಮುಗಿದು ॥೮॥

ಏನು ಕಾರಣ ಬಂದೆ ಹೇಳು ಭೈರೇಂದ್ರನಿ
ದೇನನೆಸಗಿದ ನೀವಿ[೧]ದುರ್ಗ[೧]
ಹೀನವ ತಂದಿರಿ ನಿಮ್ಮೊಡೆಯನಿಗೆಂ
ದಾ ನರನಾಥನಿಂತೆಂದ ॥೯॥

ಕೊರಲ ಸತ್ವಕೆ ತಕ್ಕ ಪೊರೆಯ ಪೊರುವರೈಸೆ
ಗಿರಿಯನಾನುವರೆ ಲೋಕದೊಳು
ಧರೆಯಾಸೆಯಾದೊಡೊಂದೆರಡು ಮೂರಾರು ರಾ
ಯರ ಸಿಂಗವಣೆಗೆಳಸುವರೆ ॥೧೦॥

ಅರಿಯನೆ ರಾಯರ ಮೇಲೆ ಪುರುಷಯೆಂದು
ಮೆರೆದ ಸುನೀತಿಸೂಕ್ತಿಯನು(?)
ಬರಿಯ ಗರ್ವದಿ ರಾಯರೂಳಿಗದವರನು
ಸೆರೆಗೆಯ್ವುದಿದ್ದು ಗುಣವಹುದೆ ॥೧೧॥

೧-೧ ಲಿ (ಕ).

ತಂದೆಯ ಹೋಲದ ಕಂದನೇತಕ್ಕವ
ನೆಂದು ನುಡಿವ ನಾಡನುಡಿಗೆ
ಬಂದನು ಹಾವಳಿ ಭೈರೇಂದ್ರ ತನ್ನಯ
ತಂದೆಯ ಜಸವ ಪೆಚ್ಚಿಸುತೆ ॥೧೨॥

ಹೋಗಲಾ ಮಾತಿನ್ನೇತಕೆ ನೀನಿಲ್ಲಿ
ಗೀಗಳೆಯ್ದಿದ ಹದನೇನು
ಮೂಗುವಟ್ಟಿರದುಸುರೆಂಬ ಚಿಕ್ಕೇಂದ್ರನೊ
ಳಾಗಳಾ ಮಂತ್ರಿಯಿಂತೆಂದ ॥೧೩॥

ನಿನ್ನೊಡಹುಟ್ಟಿದ ಹಾವಳೀಂದ್ರನ ನೀನು
ಭಿನ್ನವಿಲ್ಲದೆ ಕೈವಿಡಿದು
ಮುನ್ನೇಕಮಾಗಿ ನಡೆಸಿಕೊಂಡೆ ನಿನಗೆ ನಾ
ನಿನ್ನುಸುರುವುದೇನುಂಟು ॥೧೪॥

ಒಂದು ಕೈಯಿಂ ನಟ್ಟೆರಡು ಕೈಯಿಂ ಕೀಳು
ವಂದವ ನೀನೆಸಗುವರೆ
ಹಿಂದಕ್ಕೆ ನೀ ಮಾಡಿದ ಲೇಸ ಪೇಳುವೆ
ನೆಂದೊಡೆ ಮೊಗದಿಚ್ಚೆಯಹುದು ॥೧೫॥

ಯಾತಕೆ ಬಯಲ ಬನ್ನಣೆವಾತು ನಿನ್ನಯ
ಚಾತುರ್ಯವೆ? ಎನ್ನೊಡನೆ
ಈ ತೆರನಂ ಬಿಟ್ಟು ಬಂದುದನುಸುರೆನ
ಲಾತ ಮೌನದೊಳಿಂತೆಂದ ॥೧೬॥

ವಿನಯವನೊಲ್ಲನಿವನೊಳು ಭೇದೋಪಾಯ
ದನು[೨][ವು][೨] ಸಲ್ಲ[೩]ದು[೩] ಭೂವರನ
ಮನವ ದಾನೋಪಾಯದಿಂ ತಿರುಹುವೆನೆಂ
ದೆನುತಾಗಳವನಿಂತೆಂದ ॥೧೭॥

೨-೨ (ತ,ಕ). ೩-೩ ದೆ (ತ,ಕ).

ಎರಬೊಮ್ಮನಹಳ್ಳಿ ಹರಿಯಸಮುದ್ರವೀ
ಹರುವೆಯಗ್ರಹಾರವನು
ಹಿರಿಯ ಪಿರಂಗೆರಡಾನೆ ಈರೈದುಸಾ
ಸಿರ ಹೊನ್ನ ನಿನಗೀವೆನೆಂದ ॥೧೮॥

ಆ ಪೆನುಗೊಂಡೆಯನೆನ್ನನಾಳಿಸಿದೊಡೆ
ತಾ ಪೇಳಿದಂತೆ ನಡೆವೆನು
ಈ ಪರಿಗಾನು ತಪ್ಪಿದೆನಾದೊಡೆ ತಂದೆ
ಯೋಪಳಿಗಳುಪಿದನಹೆನು ॥೧೯॥

ಎಂದಾಣೆಯನಿಟ್ಟುಕೊಂಡು ಹಾವಳಿ ಭೈ
ರೇಂದ್ರನು ನಿಮ್ಮ ಸಮ್ಮುಖಕೆ
ಇಂದೆನ್ನನಟ್ಟಿದನಿದು ಹದನೆನಲಿಂ
ತೆಂದನಾ ಚಿಕ್ಕಭೂವರನು ॥೨೦॥

ಕೆರೆಯ ನೀರನು ಕೆರೆಗಿತ್ತಪೆನೆಂದೆಂಬ
ತೆರನನಿದೆಲ್ಲಿ ಕಲಿತನು
ಹೆರೆಹಿಂಗದಿವು ಎನ್ನ ಕೈವಶವೆಂಬುದ
ನರಿಯನೆ ಭೈರಭೂವರನು ॥೨೧॥

ಕಟ್ಟಿಕೊಂಡಾಳುತಿರ್ದಾ ಮಿಡಿಗೇಶಿಯ
ಕೊಟ್ಟನೆ ಭೈರೇಂದ್ರನೆನಗೆ
ನಿಟ್ಟಿಸು ಮೊಗವಿದೆ ಕನ್ನಡಿಯಿದೆಯೆನ
ಗೆಟ್ಟದ ಕಜ್ಜವೇನುಂಟು ॥೨೨॥

ಹುಲಿಯ ಮೀಸೆಯ ಹುಲ್ಲೆಯ ೪[ಮ]೪ರಿ ಸಿಂಹದ
ಮೊಲೆಯನಾ ಕಳಭನುಂಬುದಕೆ
ಎಳಸಿದವೋಲ್ ರಾಯಸಿಂಗವಣೆಗೆ ಮನ
ವೆಳಸಿದನೆ ಭೈರಭೂಪ ॥೨೩॥

೪–೪ ಕ(ತ,ಕ).

ಟಿಟ್ಟಿಭನುರೆ ಸೊಕ್ಕಿ ಗಂಡಭೇರುಂಡನ
ಪಟ್ಟಕ್ಕೆ ಮನವಿಡುವಂತೆ
ನೆಟ್ಟನೆ ಭೈರಭೂಪತಿರಾಯರೇರುವ
ಪಟ್ಟವಣೆಯ ಬಯಸಿದನೆ ॥೨೪॥

ಭೂನಾಗನಹಿಪನ ಭೋಗಾವತಿಯನು
ತಾನಾಳ್ವೆನೆಂಬಂದದೊಳು
ಏನೆಂಬೆ ಭೈರನೃಪತಿ ರಾಯರ ರಾಜ
ಧಾನಿಯನಾಳ್ವೆನೆಂದಪನೆ ॥೨೫॥

ಇದಕೆ ನಾನ ನುಕೂಲವಾದೊಡೆ ನಾನು ಪೇ
ಳಿದ ಪರಿಯಲಿ ವರ್ತಿಪನೆ
ಅದಕೆ ತಪ್ಪಿದೊಡೆ ತನ್ನಯ ಜನನಿಗೆ ತ
ಪ್ಪಿದ ಪಾಪಿ ತಾನಾದಪನೆ ॥೨೬॥

ತಾಯಲ್ಲವೆ ಭಾವಿಸಿ ನೋಡು ಚೆನ್ನಾಗಿ
ರಾಯಸಿಂಹಾಸನ ತನಗೆ
ನ್ಯಾಯವನಳಿದಂತದಕೆಳಸಿದ ಮೇಲೆ
ತಾಯುಂಟೆ ಬೇರೆಯಂತವಗೆ ॥೨೭॥

ಯುಕ್ತಿಯಿಲ್ಲದ ವಸುಧಾಪತಿ ಸರ್ವವಿ
ಮುಕ್ತನಲ್ಲದ ಮುನಿ ಮಂತ್ರ
ಶಕ್ತಿಯಿಲ್ಲದ ಮಂತ್ರಿಗಳು ನೆಗಳರು ಚತು
ರೋಕ್ತಿಯಿಲ್ಲದ ಕವಿಯಂತೆ ॥೨೮॥

ಪೆನುಗೊಂಡೆಯನಲ್ಲಿರ್ದಾನೆ ಕುದುರೆಗ
ಳನು ರಾಯಭಂಡಾರವನು
ಇನಿತುಳಿಯದೆ ಕೊಟ್ಟು ರಾಯರೂಳಿಗದವ
ರನು ಬಿಟ್ಟು ಕಳುಹ ಹೇಳೆಂದ ॥೨೯॥

ಇವು ಹೊರತಾಗಿನ್ನಾವ ಮಾತುಗಳೆನ್ನ
ಕಿವಿಗಳ ಪೊಗವಿಂತಿದಕೆ
ಶಿವನಡಿದಾವರೆಗಳ ಸಾಕ್ಷಿಯೆನುತಾಗ
ಳವನಿಪ ಚಿಕ್ಕೇಂದ್ರ ನುಡಿಯೆ ॥೩೦॥

ಎಲ್ಲಿಯ ರಾಯರೆತ್ತಣ ಸುದ್ದಿ ಕಲಿಯುಗ
ದಲ್ಲಿ ನೀತಿಯನರಸುವರೆ
ಬಲ್ಲಿದ ಹಾವಳಿ ಭೈರೇಂದ್ರನೊಡನೆರ
ವಿಲ್ಲದಿಹುದು ಲೇಸೆನಲು ॥೩೧॥

ನೀತಿಯ ಬಿಟ್ಟು ದುರ್ನೀತೀ[೫][ಲೆ][೫] ನಡೆವುದಿ
ದೇತರ ರಾಜಕಾರಿಯವು
ಈ ತ[೬][ನು][೬]ವಳಿಯ[೭][ಲಿ][೭] ಮೇಣುಳಿಯ[೮]ಲಿ[೮] ದು
ರ್ನೀತಿಯನನುಸರಿಸುವೆನೆ ॥೩೨॥

ಮಿತ್ತುವೆಂಜಲಿಸಿದ ಈ ಒಡಲಿದ
ಹೊತ್ತು ವಿಚಾರವನುಳಿದು
ಕತ್ತಲಿಪಪಕೀರ್ತಿಗೆ ಭಾಜನನಹು
ದುತ್ತಮರಿಗೆ ಗುಣವಹುದೆ ॥೩೩॥

ಅತಿಕಾಂಕ್ಷಾರತನಾಗಿ ಕೌರವನೀ
ಕ್ಷಿತಿಯೊಳೇನಾದನೆಂಬುದನು
ಮತಿವಂತರಿಂ ಕೇಳ್ದರಿಯನೆ ಭೈರಭೂ
ಪತಿ ನೀತಿಯನೇತಕಳಿದ ॥೩೪॥

ಮೇಲನರಿಯದ ನೃಪಾಲನ ಬಾಳುವ
ಗಾಳಿಗೊಡ್ಡಿದ ಸೊಡರೆಂದು
ಹೇಳುವ ಭಾರತವಚನವ ಬುಧರಿಂದೆ
ಕೇಳರಿಯನೆ ಭೈರೇಂದ್ರ ॥೩೫॥

ಅಳಿವಂತಿರ್ದನೆ ರಾವಣ ನೀತಿಯ
ನಳಿದು ಕಡೆಯೊಳೇನಾದ
ಅಳಿಜಸವೊಂದಿ ಬಾಳುವ ಬಾಳುವೆಗಿಂ
ದಳಿವುದೆ ಲೇಸು ಬಲ್ಲವಗೆ ॥೩೬॥

೫–೫ ನೆ (ಕ), ವೃತ್ತಿನೀ(ತ). ೬–೬ ನ(ತ,ಕ). ೭–೭ ಲ್ಲಿ (ತ,ಕ). ೮–೮ ವಿ (ಕ).

ಪಳಿಗಂಜದೆ ಪಲವುಂ ದಿನವೆಲ್ಲ
ಇಳೆಯನಾಳಿದೊಡೇನಹುದು
ಸಲೆ ರಾಜ್ಯಾಂತೇ ಎನ್ನುತ್ತೆ ನರಕವೆಂ
ದುಲಿವ ಸೂಕ್ತಿಯ ಕೇಳೆನಲು ॥೩೭॥

ಹಿಡಿದ ಛಲವ ಬಿಡೆನೆಂದೆಂಬ ಪಂಥವ
ನಡೆಸುವರೆ ನೃಪ ನಿನ್ನ
ಒಡಹುಟ್ಟಿದ ಭೈರೆಂದ್ರನೊಡನೆ ಕೂಡಿ
ನಡೆದೊಡೆ ನಿನಗೆ ಲೇಸೆನಲು ॥೩೮॥

ಯಾತರ ಮಾತು ತಾನೇತರ ಕಾರ್ಯವಿ
ದೇತರ ಸಂಧಾನ ನಿನ್ನ
ಮಾತು ಮನಂಬೊಗದೆಂದು ಚಿಕ್ಕೇಂದ್ರನು
ಪ್ರೀತಿಯೊಳವ[ನ]ನಟ್ಟಿದನು ॥೩೯॥

ಘೋರತಟ್ಟಿನೊಳುಕ್ಕಡದ ಕುದುರೆಯೆ
ಚ್ಚರಿಕೆಯೆನುತೆ ಪಾಳೆಯವ
ಮರೆದೊರಗಿಸದಿರ್ಮಡಿಚಿಕ್ಕಭೂಪನೀ
ತೆರದೊಳಿರುಳ ನೂಕಿದನು ॥೪೦॥

ತಲೆಯೆತ್ತಿ ನೋಡಿದೊಟ್ಟಿಟ್ಟು ಕೆಡಪುತೆ
ತೊಲಗದೆ ಒಳಕೋಟೆಯನು(?)
ಬಲಿದು ಬಂಧಿಸಿ ಕುವರನಿರೆ ಕುಕ್ಕುಟ
ನುಲಿದು ಬೆಳಗ ಸೂಚಿಸಿತು ॥೪೧॥

ಪಕ್ಕವನಲುಗಿ ಜಾಡಿಸಿ ಕೇಸರಂಗಳ
ಇಕ್ಕಿ ಕೊರಲ ನಿಮಿರ್ದೆತ್ತಿ
ಕುಕ್ಕುಟಂಗಳು ಕೂಗಿದುವು ಕಾದಲರೆದೆ
ಬಿಕ್ಕನೆ ಬಿರಿವಂದದೊಳು ॥೪೨॥

೯-೯ ರ (ತ,ಕ).

ಅಲರ್ದವು ತಾವರೆ ಮುಗಿದವು ನೈದಿಲು
ನಲಿದವು ಜಕ್ಕವಕ್ಕಿಗಳು
ತೊಲಗಿತು ತಮವಡಗಿತು ತಾರಾಗಣ
ವೆಳನೇಸರಾಗ ಕಾಣಿಸಿತು ॥೪೩॥

ಕಡುಗಲಿ ತೋಟೇಂದ್ರನ ವಿಜಯಾಂಗನೆ
ಸಡಗರದಿಂದೆ ಸಿಂಗರಿಸಿ
ಪಿಡಿದು ನೋಡುವ ಮಣಿಮುಕರವೊ ಎನೆ ಪಗ
ಲೊಡೆಯ ಮುಂದೆಸೆಯೊಳೊಪ್ಪಿದನು ॥೪೪॥

ಭಾಸುರಕೋಟಿಭಾಸ್ಕರಸಂಕಾಶ ಗಿ
ರೀಶ ಶಿವನ ಶಂಕರನ
ಆ ಸಮಯದೊಳಿರ್ಮಡಿಚಿಕ್ಕಭೂಪ ಸಂ
ತೋಷದಿನರ್ಚಿಸುತಿರ್ದ ॥೪೫॥

ಇರಲಿತ್ತ ಹಾವಳಿಭೈರ[10][ನಿ][10]ಂತಿದನೆಲ್ಲ
ಚರರಿಂದೆ ಕೇಳ್ದಾಗಳಂತೆ
ನೆರೆದ ತನ್ನಯ ಸೇನೆಯನೆಲ್ಲ ಕೂಡಿ ಸಂ
ಗರಕಟ್ಟಿದನು ಪಡೆವಳನ ॥೪೬॥

ದಳಪತಿಯಳಿಯ ಬೈಚೇಂದ್ರನೊಡನೆ ತನ್ನ
ಬಲವನೆಲ್ಲವ ಕೂಡಿಕೊಟ್ಟು
ಘಳಿಲನೆ ಹೋಗಿ ಕಾದವುದೆಂದು ಕಳುಹಿದ
ನಿಳೆಯಾಣ್ಮ ಚಿಕ್ಕೇಂದ್ರನೊಡನೆ ॥೪೭॥

ಕಡುಗಲಿ ಇರ್ಮಡಿಚಿಕ್ಕಭೂಮೀಶ್ವರ
ನೊಡನೆ ಕಾಳಗಕಳ್ಕಿ ತನ್ನ
ಪಡೆಯನೆಲ್ಲವ ಕೂಡಿಕೊಟ್ಟು ತಾನುಳಿದನು
ಪೊಡವಿಗೆ ಪೊರೆಯೆನಲವನು ॥೪೮॥

೧೦–೧೦ ಗಿ (ತ,ಕ).

ಬಂದುದು ಹಾವಳಿಭೈರಭೂಪಾಲನ
ಮಂದಿ ಕುದುರೆ ಸೊಕ್ಕಿದಾನೆ
ಸಂದಣಿಸುತೆ ನೆಲ[೧೧]ನೀ[೧೧]ದವೋಲುರವಣೆ
ಯಿಂದ ಚಿಕ್ಕೇಂದ್ರನ ಮೇಲೆ ॥೪೯॥

ಕಾಣಿಸಿಕೊಂಡುದು ಮೊರಸುವಡೆ[೧೨][ಯು][೧೨] ಮುಂ
ಚೂಣಿಯ ಕುದುರೆ ಬೊಬ್ಬಿಡುತೆ
ಹಾಣಾಹಣಿಯೊಳುಕ್ಕುಡದ ಕುದುರೆ ಬಿ
ನ್ನಾಣಿಗರೊಡನೆ ಗಂಟಿಕ್ಕಿ ॥೫೦॥

ಹಲ್ಲಣಿಸಿದ ಲಾಯದ ಕುದುರೆಯನೇರಿ
ಬಲ್ಲೆಹವಿಡಿದು ರಾವುತರು
ಬಿಲ್ಲು ಹರಿಗೆ ಕತ್ತಿ ಹೇರೀಟಿ ಸಬಳದೊ
ಳೆಲ್ಲರು ನಿಂದು ಕಾದಿದರು ॥೫೧॥

ಧುರಧೀರ ತಿಮ್ಮಿನಾಯಕನ ಕುದುರೆಮಂದಿ
ಭರದಿಂದೆ ತಾಗುತೆ ಬಲವ
ಸರಿಮಿಗಿಲಾಗಿರಿದಾಡಿದರಾ ಸಂ
ಗರರಂಗದೊಳಗವರೊಡನೆ ॥೫೨॥

ಮದಕರಿ ಮದಕರಿಯೊಡನೆ ಗಂಟಿಕ್ಕಿ ಕು
ದುರೆ ಕುದುರೆಯೊಳು ಹಳಚಿ
ಇದಿರಿಸಿ ಕಾಲಬಲವು ಕಾಲಬಲದೊಳಂ
[೧೩][ದ][೧೩] ದಿರದೆ ಕಡಿದಾಡಿದರು ॥೫೩॥

ಒಕ್ಕಲಿಕ್ಕುತೆ ಹೊಕ್ಕು ಹೊಗವರಿಯೊಳು ಕಡಿ
ದಿಕ್ಕುವ ಹರಿಗೆಕಾರರನು
ಲೆಕ್ಕಿಸದಿರಿದರಾ ತೆರೆಯೂರ ಭೂಪನ
ಸೊಕ್ಕಿದೆಕ್ಕಟಿಗರಿಟ್ಟಿಯೊಳು ॥೫೪॥

೧೧-೧೧ ಸಿ(ಕ). ೧೨-೧೨ ಯ (ತ,ಕ). ೧೩-೧೩ ಗ (ತ,ಕ).

ಬಿಲ್ಲಂಬ ತೊಟ್ಟು ಕೆನ್ನೆಗೆ ಸೇದೆ ಸೇದಿಯಿ
ದಲ್ಲಿರಿ ತಟ್ಟುಚ್ಚಿ ಪಾಯೆ(?)
ಭಲ್ಲೆಯವಡೆದ ಭ[೧೪]ಟ[೧೪]ರ ಬಾಯೊಳು ಬಂ
ಬಲ್ಗರುಳುಚ್ಚಿ ಸೂಸಿದುವು ॥೫೫॥

ಆ ಸಮಯದೊಳೊದಗಿತು ಬಲು ಸಿಡಿಲ ನಿ
ರ್ಘೋಷದವೋಲ್ ಬೊಬ್ಬೆಗೊಡುತೆ
ಸಾಸಿರ ಹರತೀಂದ್ರನ ಸೇನೆ ವೀರಾ
ವೇಶದೊಳದನೇನನೆಂಬೆ ॥೫೬॥

ರಣಸರಜಾಂಕ ರಂಗೇಂದ್ರನ ರಾಜಾ
ಗ್ರಣಿಯ ಮನ್ನಣೆವ[೧೫][ತ್ತ][೧೫] ಭಟರು
ರಣದೊಳು ಮೋಹರಿಸುವ ಶತ್ರುಸೇನೆಯ
ನೆಣಕೆಗೊಳ್ಳದೆ ಹೊಕ್ಕರವರು ॥೫೭॥

ಹೊಕ್ಕು ಈಟಿಯೊಳಿರಿದರು ಕಾಲಾಳನು
ಮುಕ್ಕರಿಸುವ ರಾವುತರ
ಚಕ್ಕನೆ ಕಡಿದು ಹಿಮ್ಮೆಟ್ಟಿಸಿ ಹಿಡಿದರು
ಸೊಕ್ಕಿದಾನೆಯನಂದವರು ॥೫೮॥

ಹಲವುದೆಸೆಗೆ ಚದರುತೆ ಹಾವಳೀಂದ್ರ[೧೬][ನ][೧೬]
ಬಲವಾನೆಯ ಕೊಟ್ಟು ಬರಲು
ಅಳಿಯ ಬೈಚೇಂದ್ರ ತನ್ನಯ ಪಡೆಗಾಣುತು
ಮ್ಮಳಿಸಿ ಕನಲುತಿಂತೆಂದ ॥೫೯॥

ಹಿಡಿದರೆ ಹರತಿಯವರು ಹಾವಳೀಂದ್ರನ
ಕಡು ಸೊಕ್ಕಿದಾನೆಯನಿಂದು
ಬಿಡದದ ತಾರದಿರ್ದೊಡೆ ತನ್ನ ತಂದೆಯ
ಪೊಡೆಯೊಳೊಗೆದವ ತಾನಲ್ಲ ॥೬೦॥

೧೪–೧೪ ವ(ಕ). ೧೫–೧೫ ತ್ತು (ತ,ಕ). ೧೬–೧೬ ನು (ತ,ಕ).

ಧುರದೊಳು ಹರತಿಯ ಭಟರೊಯ್ದು ಗಂಧಸಿಂ
ಧುರವನೀಗ[೧೭]ಳೆ[೧೭] ತಾರದೊಡೆ
ಕರದೊಳು ಕರವಾಳನಾಂತು ಸುಭಟರ ಕಿಂ
ಕರ ಕಿಂಕರನು ತಾನಹೆನು ॥೬೧॥

ಮೂವರುರಾಯರ ಮೆಚ್ಚಿನಾನೆಯ ಕೊ
ಟ್ಟಾವ ಮೊಗವ ಮುಂಬಿಟ್ಟು
ಹಾವಳಿ ಭೈರೇಂದರರನ ಕಾಬೆನೆಂದು ಸೇ
ನಾವಿಭುವಾ ಬೈಚೇಂದ್ರ ॥೬೨॥

ಎಂದೆನುತಾಗ ತನ್ನಯ ಸೇನೆಯನೆಲ್ಲ
ಒಂದುಗೊಳಿಸಿ ಸಂತೈಸಿ
ಮುಂದುವರಿದು ಬೊಬ್ಬೆಗೊಡುತವನುರವಣಿ
ಯಿಂದುರುಬಿದನು ಹೆಬ್ಬಲವ ॥೬೩॥

ದೊರೆಮಕ್ಕಳು ರಾಯರಾವುತರೆಲ್ಲರು
ಪರಬಲ ಬೇಗ[೧೮][ವ][೧೮]ತ್ರಿತ್ತ
ಸರಿಯೆ ಮೇಲ್ವರಿದು ಚಿಕ್ಕೇಂದ್ರ ಹರಸುವಡೆ
ಉರವಣೆಯನು ನಿಲಿಸಿದನು ॥೬೪॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೬೫॥

[೧೯]ಚತುರ್ದಶ ಸಂಧಿ ಸಂಪೂರ್ಣಂ[೧೯]

❖❖

೧೭-೧೭ ಣಿಗಳೆ (ತ). ಣಿಗಳ (ಕ). ೧೮-೧೮ (ತ,ಕ). ೧೯-೧೯ ಅಂತು ಸಂಧಿ ೧೪ಕ್ಕಂ ಪದನು ೧೩೦೦ ಕ್ಕಂ ಮಂಗಳ ಮಹಾಶ್ರೀ (ತ,ಕ).

ಸಂಧಿ : ೧೫

ಶಿವನೊಳೊಂದಿದನಾ ಕುವರ

ಶ್ರೀಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ಇತ್ತ ಚಿಕ್ಕೇಂದ್ರನಾರಾತಿಯ ಸೇನೆಯ
ನೊತ್ತರಿಸಿದಿರಿದಾಡುತಿರಲು
ಅತ್ತಲು ಹರತಿಯವರು ಮುಂ ಪಿಡಿದಿಹ
ಮತ್ತಗಜವನೊಯ್ದರಾಗ ॥೨॥

ಮದಕರಿ ಪೋದುದು ಮಾಜದ *[ಅ]*ಳಿತನ
೧[ವೊ]೧ದವಿ೨[ತೆ]೨ನುತೆ ಬೈಚೇಂದ್ರ
ಕದನವಿಕ್ರಮ ಚಿಕ್ಕಭೂಪನ ಮೇಲೆ ನೂಂ
ಕಿದನುಬ್ಬಿ ತನ್ನ ಹೆಬ್ಬಲವ ॥೩॥

ಹತ್ತುಸಾವಿರ ಬಾಣವನೊಮ್ಮೊಗವಾಗಿ
ಹತ್ತಿಸಿ ಹಾಕಿ ಬೊಬ್ಬಿಡುತೆ
ಮತ್ತಗಜಾಶ್ವಪದಾತಿ ನಾಲ್ದೆಸೆಯೊಳ
ಗೊತ್ತರಿಸಿತು ಚಿಕ್ಕನೃಪನ ॥೪॥

– ವ (ತ,ಕ). ೧–೧ ಗೊ (ತ,ಕ). ೨–೨ ರೆ (ತ,ಕ).

ತಂದೆಯ ಮೇಲೆ ಮೋಹರಿಸಿ ಮಾರ್ಬಲವೆ
ಯ್ದಂದು ಕವಿಯೆ ತೋಟೇಂದ್ರ
ಇಂದು ತನುವ*[ನಿ]*ತ್ತೆನಯ್ಯನೂಳಿಗಕಿದ
ಕಿಂದುಧರನೆ ಸಾಕ್ಷಿಯೆನುತೆ ॥೫॥

ಗುರುಸಿದ್ಧಮಲ್ಲಿಕಾರ್ಜುನದೇವ ನಿನ್ನ ಶ್ರೀ
ಚರಣದೊಳಿಂಬುಗೊಡೆನುತೆ
ಉರದ ಲಿಂಗವ ಕಣ್ಣಾರೆ ದಿಟ್ಟಿಸಿ ಮುಖ
ಸರಸಿಜದೊಳಗವಧರಿಸಿ ॥೬॥

ಪಣೆಯೊಳಗಣೆವ ತುರಾಯದೊಚ್ಚರವನು
ರಣಧೀರ ಹಳದಿಯ ಬಿರುದ
ತ್ರಿಣಯನಿಗರ್ಪಿಸುತದರ ಸೆರಗ ತ
ನ್ನಣಿಲೊಳಿಡುತೆ ತೋಟೇಂದ್ರ ॥೭॥

ಕತ್ತುರಿಯನು ಲೇಪಿಸಿದ ತನ್ನಂಗಕ್ಕೆ
ಸುತ್ತಿದ ಶಿರಕೆ ಪೂಸರವ
ಉತ್ತಮವಾಜಿಯ ತರಿಸಿದ ಧೀರೋ
$[ದಾತ್ತ]$ನಾಹವಭೀಮಸೇನ ॥೮॥

ಲಂಬಿಪ ಸಮಕಟ್ಟಿನ ಝುಲ್ಲಿ ಮಣಿಮೊಗ
ರಂಬ ಮುತ್ತಿನ ಬಾಸಿಗದೆ
ಚೆಂಬೊಗರ್ಗರೆವ ಹಲ್ಲಣದಿನೆಸೆವ ತೇಜಿ
ಯಂ ಬೆಂಗೆವಾಯ್ದನಾ ಕುವರ ॥೯॥

ಜೋಡನೆ ಸರ ದಾಂಟಿಂದೆ ಧೀಂಕಿಡಿಸು
ತಾಡಂಬರದೊಳು ಕುವರ (?)
೩ರೂಢಿ೩ಸಿದಶ್ವಾರೂಢ ರೇವಂತನ
ಗಾಡಿವೆತ್ತಾಜಿಗೆಯ್ದಿದನು ॥೧೦॥

– ನೆ (ತ,ಕ). $–$ ದ್ಧಾತ (ತ,ಕ).೩–೩ ಝೂಡಿ (ತ,ಕ).

ರಾಜವಾಜಿಯನೀ ತೆರದೊಳೇರುತೆ ಸರ
ನೇಜುಯವನು ತಿರುಪುತ್ತೆ
ಆಜಿರಂಗದೊಳರಿಭೂಪಂಕವಣೆಯ
ಪೌಜಪೌಜ[೪][ವ][೪]ನೊಡೆದುಳಿಸಿ ॥೧೧॥

ಕಲಿಗಳದೇವ ಕುಮಾರ ತೋಟೇಂದ್ರನು
ಲಳಿ ಮಸಗುತೆ ವೈರಿಗಳ
ಬಲದೊಳು ಹೊಗವರಿಯಿಂದೊಳಪೊಗುತಿರ
ಲಳಿಯ ಮುದ್ದೇಂದ್ರನಿಂತೆಂದ ॥೧೨॥

ತಿರುತಿರುಗೆಲೆ ಕುಮಾರ ತೋಟೇಂದ್ರ ಮೇ
ಲ್ವರಿವುತಲಿದೆ ರಿಪುಬಲವು
ಹರತಿಯವರು ಹಿಮ್ಮೆಟ್ಟಿದರಿರದೊಳು
ಸರಿದರು ತೆರೆಯೂರವರು ॥೧೩॥

ಚೆದರಿತು ಮಿಕ್ಕ ಬಲವು ಕಂಡ ಕಡೆಯೊಳು
ಮೆದೆಗೆಡೆದರು ಪಟುಭಟರು
ಹೊದರೊಡೆದರು ಹೊಂತಕಾರಿಗಳಾನಲಾ
ರದೆ ರಿಪುಬಲದುರುಬೆಯನು ॥೧೪॥

ಹಲವು ದೆಸೆಯೊಳು ಹಿಮ್ಮೆಟ್ಟುವ ಬಲವನು
ನಿಲಿಸಿಯೊಬ್ಬುಳಿಮಾಡಿಕೊಂಡು
ಕೆಲಬಲದೊಳು ಕೂಡಿಯೊಗ್ಗಾಗಿ ನಡೆಯೆನೆ
ಛಲದಂಕಕಾರನಿಂತೆಂದ ॥೧೫॥

ಪರವನಿತೆಯನು ಬಯಸಿ ಬಲದೊಡೆಯನು
ಪರಬಲದುರುಬೆಗೆ ಬೆನ್ನ
ಹರಭಕ್ತರಡಿಗಲ್ಲದೆ ಪಣೆಯನು ಕೊಡ
ದಿರುತಿರ್ಪುದೆನ್ನಭಿಮತವು ॥೧೬॥

೪–೪ X (ತ,ಕ).

ಓಡಿದೊಡಟ್ಟಿಯಟ್ಟಿದೊಡೋಡುವುದು ನಾ
ಡಾಡಿಗರಿಗೆ ಸಾಜವ್ಯೆಸೆ
ರೂಢಿಸಿದ[೫][ರಿ][೫] ಬಿರುದಾಂಕರು ಬೆಂಗೊ
ಟ್ಟೋ[೬][ಡಬಲ್ಲ][೬]ರೆ ರಿಪುಬಲಕೆ ॥೧೭॥

ಮೊನೆಗಾರ ದೇವ ಕುವರ ಕಂಠೀರವ
ಘನಬಿರುದಾಂಕ ತೋಟೇಂದ್ರ
ಎನುತೆ ಮೋಹರಿಪರಿಬಲವನು ಬಗೆಯದೆ
ಬಿನದಿಂದೆಯ್ದಲೇನೆಂಬೆ ॥೧೮॥

ಇದೆ ಬಂದನಿದೆ ಬಂದ ಹಳದಿಯ ಬಿರುದಾಂಕ
ನಿದೆ ಬಂದ ಸಮರನಿಶ್ಶಂಕ
ಇದೆ ಬಂದ ಕುವರ ತೋಟೇಂದ್ರನೆಂದೆನುತೆ ಮುಂ
ದೊದರುತಿರ್ದವು ಕಾಳೆಗಳು ॥೧೯॥

ಇದೆ ಬಂದನಿದೆ ಬಂದ ಕದನಚೌಪಟಮಲ್ಲ
ನಿದೆ ಬಂದ ಗೆಲವೆಣ್ಣನಲ್ಲ
ಇದೆ ಬಂದನು ತೋಟೇಂದ್ರನೆಂದರಿಗಳ
ನೆದೆಗೆಡಿಸಿದುವು ಕಾಳೆಗಳು ॥೨೦॥

ಮನೆ ಮರೆಯೊಳು ಬಲು ಬಿರುದನೋದಿಸಿಕೊಳು
ತನುವರವೆಂದೊಡಡಗುವ
ಜನಪತಿಗಳ ಗಂಡ ತೋಟೇಂದ್ರ ಬಂದನೆಂ
ದೆನುತೊದರಿದುವು ಕಾಳೆಗಳು ॥೨೧॥

ಪರವನಿತೆಯರ ಸಂಗಕೆ ಹೇಸದ ಭೂ
ವರರಿಗೆ ಗಂಡ ತೋಟೇಂದ್ರ
ಧುರಕಿದೆ ಬಂದನೆಂದೆನುತೆ ಮುಂಗಡೆಯೊಳು
ಬಿರುದಿನ ಕಾಳೆಯುಲಿದುವು ॥೨೨॥

೫–೫ ರ (ತ,ಕ). ೬–೬ ಡೆ ಭಲ (ತ,ಕ).

ಸ್ವಾಮಿದ್ರೋಹರ ಗಂಡ ಬಂದನು ರಣರಂಗ
ಭೀಮ ಬಂದನು ತೋಟೇಂದ್ರ
ಈ ಮಹಿಯೊಳು ರಿಪುಬಲವ ಕಂಡಡಗುವ
ಭೂಮಿಪಾಲರ ಗಂಡ ಬಂದ ॥೨೩॥

ಅಂಡಲೆವರಿಗಳ ಜಗಳವೆಂದೊಡೆ ಬಿಡ
ದಂಡಿಸಿ ಮನೆ ಮರೆಯೊಳಗೆ
ಹೆಂಡಿರನಗಲಲಾರದ ಹೇಡಿ ಭೂಪರ
ಗಂಡ ಬಂದನು ತೋಟೇಂದ್ರ ॥೨೪॥

ಸರಸಸತ್ಕವಿಗಳಿಗೊಲಿದವರಿಚ್ಛೆಯೊ
ಳಿರದವನೀಶರ ಗಂಡ
ಎರೆಬರೆಡರ ಕೆಡಸಿದ ದೊರೆಗಳ ಗಂಡ
ಧುರಧೀರ ತೋಟೇಂದ್ರ ಬಂದ ॥೨೫॥

ಕೂಸ ಮುದ್ದಾಡಿಯೊಡಲ ಹೊರೆವುತಿ
ಪ್ಪಾಸಕ ಕುವರರ ಗಂಡ
ಮೀಸರ ಗಂಡನೆಂದೆನಿಸುವ ಬಿರುದುಳ್ಳ
ಸಾಸಿಗ ತೋಟೇಂದ್ರ ಬಂದ ॥೨೬॥

ಎಂದು ಮುಂದೊದರುವ ಬಿರುದಿನ ಹೆಗ್ಗಾಳೆ
ಗೊಂದೆ ಬಿರುದ ವೈಜಯಂತಿ
ಅಂದವೆತ್ತಯ್ತುರುತಿರಲತಿ ವೇಗದೆ
ಬಂದನದೇನ ಬಣ್ಣಿಸುವೆ ॥೨೭॥

ಹಕ್ಕಿಯ ಹಿಂಡಿನೊಳಗೆ ಗಂಡು ಸಾಳುವ
ಹೊಕ್ಕಂತೆ ರಿಪುನೃಪಬಲವ
ಮುಕ್ಕಣ್ಣ ಬಲ್ಲೆಹ ಬಿರುದಿನ ತೋಟೇಂದ್ರ
ಹೊಕ್ಕನು ರಣಭೀಮಸೇನ ॥೨೮॥

ಹಕ್ಕಿಗಳಾಣ್ಮ ನಾಗ[೭][ರ ಗೊಂ][೭]ದಣವನು
ಹೊಕ್ಕಂತೆ ಕಡುವೇಗದಿಂದ
ಹೊಕ್ಕನು ವೈರಿವಾಹಿನಿಯ ಮೋಹರವನು
ಲೆಕ್ಕಿಸದಾ ತೋಟೇಂದ್ರ ॥೨೯॥

ಹುಲಿ ಹುಲ್ಲೆಯ ಹಿಂಡ ಹೊಗುವಂತೆ ಝುಂಝಾ
ನಿಲ ಮುಗಿಲೊಳು ಹೊಗುವಂತೆ
ಅಲಘುವಿಕ್ರಮ ತೋಟೇಂದ್ರನಾರಾತಿಯ
ಬಲವ ಹೊಕ್ಕನು ಲಳಿಯೆದ್ದು ॥೩೦॥

ಉರೆ ತಮದೊಳು ರವಿ ಹೊಗುವಂತೆ ಸಿಂಹದ
ಮರಿಯಾನೆವಿಂಡ ಹೊಕ್ಕಂತೆ
ನೆರೆ ಕಲಿಗಳ ತಲೆದೊಡವಣಿ ತೋಟೇಂದ್ರ
ನುರುಬಿ ಹೊಕ್ಕನು ರಿಪುಬಲವ ॥೩೧॥

ಅಡವಿಯೊಳಡವಿಗಿಚ್ಚಡಿಯಿಡುವೋಲ್ ಬರ
ಸಿಡಿಲಂಚೆವಿಂಡು ಪೊಕ್ಕಂತೆ
ಕಡುಗಲಿಗಳ ದೇವ ತೋಟೇಂದ್ರ ವೈರಿಯ
ಪಡೆಯ ಹೊಕ್ಕನು ಬೊಬ್ಬಿಡುತೆ ॥೩೨॥

ಶರನಿಧಿಯೊಳು ಮಂದರಗಿರಿ ತಿರ್ರನೆ
ತಿರುಗುವವೋಲ್ ಸೊಕ್ಕಿದಾನೆ
ಸರಸಿಯ ಹೊಕ್ಕು ಕಲಕುವಂತೆ ತೋಟೇಂದ್ರ
ಪರಬಲವನು ಹೊಕ್ಕಿರಿದ ॥೩೩॥

ಕಣಿಲೆಂಬ ಕಟಿಲೆಂಬ ನೆಳಿಲು ನೆಟಿಲೆಂಬ
ಛಿಣಿಲು ಛಿಟಿಲು ಫಳಿರೆಂಬ
ಅಣಿಯರದಬ್ಬರದುಬ್ಬರದೋರಿ ಸು
ತ್ತಣಿದು ಕಾದಿದರವನೊಡನೆ ॥೩೪॥

೭-೭ ರಿಗಂ (ಕ), ರಗಂ (ತ).

ಅಂಬುವಿನಾದ ಭೀಂಕೃತನಾದ ಪರಿ⁸[ವ]⁸ ರ
ಕ್ತಾಂಬುಪ್ರವಾಹದ ನಾದ
ಮುಂಬರಿದುರುಬುವ ಭಟರ ಕಾಹಳನಾದ
ಚುಂಬಿಸಿತಾಶಾಂತವನು ॥೩೫॥

ತುರಗಕುಲದ ಹೇಷಾರವದಿಂ ಮದ
ಕರಿಗಳ ಗರ್ಜನೆಯಿಂದೆ
ಉರುತರ ಪಟುಭಟ ಕಿಲಿಕಿಲಿ ರವದೆ ಬ
ಧಿರನಾದನಂದಹಿರಾಜ ॥೩೬॥

ಎಂಬ ಸಂಭ್ರಮಕಿಂಬಾದಾಹವದೊಳೇ
ನೆಂಬೆನು ಕಲಿ ತೋಟೇಂದ್ರ
ಮುಂಬರಿದಿದಿರಾಗಿರಿವ ರಾಯರಾವುತ
ರಂ ಬೆನ್ನ ಮಾಡಿಸುತಿರಿದ ॥೩೭॥

ಆವುದೊ ನೆಲನಾವುದೊ ದೆಸೆಯಾಗಸ
ವಾವುದೊಯೆನಿಸಿ ಮೋಹರಿಸಿ
ತೀವಿದ ಮಾರ್ಬಲವಾಗಳಾ ಕಲಿಗಳ
ದೇವನ ಮೇಲೆಯೊತ್ತರಿಸಿ ॥೩೮॥

ಮುತ್ತಿ ಮೇಲ್ವರಿದೆಡಬಲ ಹಿಂದು ಮುಂದೆ ಬಂ
ದೊತ್ತರಿಪರಿಬಲವೆಂಬ
ವೊತ್ತನೊತ್ತರಿಸಿದ ಕಡಲೊಳು ನೀರಳ್ಕೆ
ವೆತ್ತ ನೀರ್ಗಿಚ್ಚೆನಿಸಿದ⁹[ನು]⁹ ॥೩೯॥

ಹೊಕ್ಕು ಮೇಲ್ವರಿದು ಲೂಟಿಸಿ ತೆಕ್ಕೆಗೆ ಹಾಯ್ವ
ಕುಕ್ಕುಟಿಗರನಾ ಕುವರ
ಚಕ್ಕನೆ ಪಿಡಿದ ಕೂರಸಿಯಿಂದ ಸಗ್ಗ
ದೊಕ್ಕಲ ಮಾಡಿ ಕಳುಹಿದ ॥೪೦॥

೮–೮ ವಾ(ತ,ಕ). ೯–೯ ರು(ತ,ಕ).

ಕಾಲಬಲವ ನೋಡಿ ತುಳಿಸಿದ ಕುದುರೆಯ
ಕಾಲಾಟದಿಂದಿದಿರಾಗಿ
ಮೇಲೆ ಮುಕ್ಕುರುಸುವ ರಾಯರಾವುತರನು
ಕಾಲನೂರಿಗೆ ಕಳುಹಿದನು ॥೪೧॥

ಕದನವಿಕ್ರಮ ತೋಟೇಂದ್ರನಾಹವದೊಳು
ಕದುಬಿ ಮೇಲ್ವರಿವ ರಾಹುತರ
ಉದಿರವಿರಿದು ತದ್ವಾಜಿತತಿಯ ಕಳು
ಪಿದನು ತಂದೆಯ ಸಮ್ಮುಖಕೆ ॥೪೨॥

ಲೋಹವಕ್ಕರಿಕೆಯ ಕುದುರೆಯನೇರಿದ
ಸಾಹಸವಂತ ರಾಹುತರ
ಆಹವದೊಳಗವವೆಟ್ಟಾರು ತುಂಡಾಗಿ
ಬಾಹುಬಲದಿ ತುಂಡಿಸಿದ(?) ॥೪೩॥

ಹೊಕ್ಕು ಚೂಟಿಯೊಳೇರುತೆ ಶತ್ರುಸೇನೆಯ
ನೊಕ್ಕಲಿಕ್ಕಿದನು ಬೊಬ್ಬಿಡುತೆ
ಎಕ್ಕತುಳದೊಳೇರಿದ [ಕ[೧೦]ರಿ][೧೦]ಗಳ ಕಡಿ
ದಿಕ್ಕಿದನಾಹವಭೀಮ ॥೪೪॥

ಶ್ಯಾಮವಾರಿದದೊಳು ತೋರಡಗುವ ಸೌ
ದಾಮಿನಿಯಂತೆ ಶೋಭಿಸಿತು
ಆ ಮದಕರಿಗಳ ಮಸ್ತಕದೊಳಗೀ
ಭೂಮಿಪನಣುಗನ ಖಡುಗ ॥೪೫॥

ಕಡಿದನು ಕದನದೊಳಿದಿರಿಸಿ ನೂಂಕಿ ಕಂ
ಗೆಡಿಸುವ ಮದಕರಿಗಳನು
ಪಿಡಿಸಿದ ನಿಜಖಡ್ಗರಾಹುವಿನಿಂದವ
ಕಡುಗಲಿಗಳ ಮೊಗಸಸಿಯ ॥೪೬॥

೧೦-೧೦ ಕಂ (ತ,ಕ)

ಸೊಕ್ಕಾನೆಯ ಸೊಂಡಿಲ್ಗಳ ಖಡುಗದಿಂ
ದಿರ್ಕಡಿ ಮಾಡಲಾ ಕುವರ
ರಕ್ಕಸಪಗೆಯ ನಾದಾಡಿಕೊಲದ ಕುಲ
ದಿಕ್ಕೆಲನೆನಲೊಪ್ಪಿದರು(?) ॥೪೭॥

ಒಲಿದೊಪ್ಪಳಾಗಿಹ ಗೆಲವೆಣ್ಣಿನ ಮೊಲೆ
ಗೆಲಕೆ ಮುತ್ತಾಗಬೇಕೆಂದು
ಕಲಿತ ಮುಕ್ತಾಫಲ ವಿಲಸಿತ ಕ[೧೧][ರಿ][೧೧]ಗಳ
ತಲೆಗಳವೋಳ್ವನಾ ಕುವರ ॥೪೮॥

ಸುರಪತಿ ವಜ್ರದಿ ಗಿರಿಗಳ ಹೊಯ್ದು ಕ
ತ್ತರಿಸುವಂತಾ ತೋಟೇಂದ್ರ
ಕರತಳ ಕಲಿತ ನಿಶಿತಖಡ್ಗದಿಂ ಮದ
ಕರಿಗಳ ಶಿರವ ತುಂಡಿಸಿದ ॥೪೯॥

ಶರನಿಧಿಯೊಳು ಗಡಣಂಗೊಂಡು ತೋರುವ
ತೆರೆಗಳನಾ ಮಂದರಾದ್ರಿ
ಭರದಿಂದೆ ತಿವಿದು ಕೆಡಪುವಂತೆ ತೋಟೇಂದ್ರ
ತುರಗ ಸಂದೋಹವನಿರಿದ ॥೫೦॥

ಪ್ರಳಯಕಾಲದ ಭೈರವನೆನೆ ವೈರಿಯ
ಬಲದೊಳುಬ್ಬೆದ್ದಿದಿರಿಸುವ
ಕಲಿ ಪಟುಭಟರ ತೊತ್ತಳದುಳಿದಿಕ್ಕಿದ
ಛಲದಂಕಕಾರ ತೋಟೇಂದ್ರ ॥೫೧॥

ಒಂದು ಕುದುರೆ ಸಾವಿರವಾದುದೊ ತಾ
ನೆಂದೆನಿಸುತೆ ರಣದೊಳಗೆ
ಮುಂದುವರಿದು ಬಪ್ಪ ವೀರಾಧಿವೀರರ
ಕೊಂದನಾಹವಭೀಮಸೇನ ॥೫೨॥

೧೧-೧೧ ಲಿ (ತ,ಕ).

ಎಲ್ಲಿ ನೋಡಿದಲ್ಲಿ ಕುವರನ ಕುದುರೆಯ
ಚೆಲ್ಲಾಟವೆಲ್ಲಿ ನೋಡಿದಡೆ
ಅಲ್ಲಿ ಬಿದ್ದಿಹರಂತಾತನ ನಿಡುದೋಳ
ಭಲ್ಲೆಹದೇರ ರಾಹುತರು ॥೫೩॥

ಬೆದರಿತು ಮಾರ್ಬಲವದರಿತು ಪಗೆಯೆದೆ
[೧೨][ಚೆ][೧೨]ದರಿತು ಪಟುಭಟರೊಡ್ಡು
ಕದನವಿಕ್ರಮನೆನಿಸುವ ತೋಟೇಂದ್ರನ
ಕುದುರೆಯ ಖುರಪುಟಹತಿಗೆ ॥೫೪॥

ಕಡಿವಡೆದೊಡಲ ಸಿಡಿ[೧೩][ದ][೧೩] ತಲೆವೋಡಿನ
ಉಡಿದ ತೋಳಿನ ನರ ಹರಿದ
ತೊಡೆಯ ಸೂಸಿದ ತೊಂಬೆಗರುಳ ಭಟರ ವಂ
ಗಡವೊಪ್ಪಿತಾಜಿರಂಗದೊಳು ॥೫೫॥

ನರಳುತೆ ನಾಲಗೆಯೊಣಗಿ ಹೊಮ್ಮಿರುವುತೆ
ಹೊರಳುತೆ ಹೊದಕುಳಿಗೊಳುತೆ
ಸುರುಳಿ ಚೈತನ್ಯಮುಸುರುನಿಂದು ಜವನೂರ್ಗೆ
ತೆರಳಿದ[೧೪][ರೇ][೧೪]ರ್ವಡೆದವರು ॥೫೬॥

ಸುರಿದ ಕರುಳು ಸೂಸಿದ ಕಂಡ ಕಾಳಿಜ
ಪರಿದ ನೆತ್ತರ ಜೊಂಡುವ[೧೫][ಳ್ಳ][೧೫]
ಪರಪಿದ ತೋಳ್ತೊಡೆ ರುಂಡಮುಂಡಗಳು ಸಂ
ಗರದೊಳೊ[೧೬]ಟ್ಟಿಡ[೧೬]ಸಿಯೊಪ್ಪಿದುವು ॥೫೭॥

ಜವನ ಬಾಣಸಿನ ಹೆಮ್ಮನೆಯೊ ಪಸಿದು ಮಸ
ಗುವ ಮಾರಿ ಮಿತ್ತುದೇವಿಯರ
ಅವುತಣದೆಡೆಯೆನೆ ತೋಟೇಂದ್ರನಿರಿದಾ
ಹವರಂಗಮೆಸೆದುದೇನೆಂಬೆ ॥೫೮॥

೧೨-೧೨ ಬೆ (ತ,ಕ). ೧೩-೧೩ ವ (ತ,ಕ). ೧೪-೧೪ ತೆ (ತ,ಕ). ೧೫-೧೫ ಳ(ತ,ಕ). ೧೬-೧೬ ಟ್ಟಿಡಿ (ಕ).

ಉಲಿವ ಹೆಬ್ಬದ್ದು ನಲಿವ ಭೂತತತಿ ಮೈಯ
ನೊಲಿವ ಶಾಕಿನಿಯರೊಪ್ಪಿದರು
ಪಲಲವ ಸವಿದು ಮಿದುಳು ತಿಂದು ರಗುತವ
ನಲವಿಂದೆ ಪೀರ್ದುವಂತಲ್ಲಿ ॥೫೯॥

ಮಡಿದಾನೆದೊವಲ ಪೊದೆದು ತಲೆಮಾಲೆಯ
ನೊಡನಿಟ್ಟು ಪೆರ್ಮರುಳಿರ[೧೭][ಲು][೧೭]
ಮೃಡನೆಂದುಳಿದ ಮರುಳತಂಡ ಮಣಿದುದು
ಕಡುಗಲಿ ತೋಟನಾಜಿಯೊಳು ॥೬೦॥

ದುಡುಮಿಸಿ ಪರಿವ ಕೆನ್ನೀರ ಪೆಚ್ಚದೊಳಾನೆ
ಯೊಡಲದೊ[೧೮][ಗಲ][೧೮] ನಾವೆಯನು
ಅಡರಿಸಿ ತಮ್ಮ ಶಿಶುಗಳನಂಬಿಗರಂತೆ
ನಡೆಯಿಸಿದುವು ಮರುಳುಗಳು ॥೬೧॥

ರಣಧೀರ ತೋಟೇಂದ್ರನು ಕಡಿದೊಟ್ಟಿದ
ಪೆಣದೊಟ್ಟಿಲೊಳಗೆ ಪೆಚ್ಚಿರ್ದ
ನೆಣವಸೆಯನು ತಿಂದು ಡರ‍್ರೆಂದು ತೇಗಿ ರಿಂ
ಗಣಗುಣಿದವು ಮರುಳುಗಳು ॥೬೨॥

ಗಜವಾಜಿಮನುಜಯಜ್ಞವನಗಣಿತವಾಗಿ
ನಿಜ ಸುಪ್ರತಾಪಾಗ್ನಿಯಿಂದೆ
ಭಜಿಸಿದವಗೆ ಶಕ್ರಪದ ತೃಣವೆಂದು ದಿ
ವಿಜರು ಕೊಂಡಾಡಿದರವನ ॥೬೩॥

ಅಚ್ಚ[೧೯][ರಸಿಯರಂಬರತ][೧೯]ಳದೊಳು ಬಂ
ದಚ್ಚರಿವಟ್ಟು ದಿಟ್ಟಿಸುತೆ
ಹೆಚ್ಚಿನ ಬಿರುದಿನ ಬಂಟ ತೋಟೇಂದ್ರನಿ
ದಿರ್ಚುವರಾರೆಂದರವರು ॥೬೪॥

೧೭–೧೭ (ತ.ಕ). ೧೮–೧೮ ಗೆಯ (ತ,ಕ) ೧೯–೧೯ ರಾಸೆಯಡಂಬೆರ(ತ,ಕ).

ಅಂದಿನ ಪಾರ್ಥ[೨೦][ನೆಂ][೨೦]ಬೆವೆ ಕಪಿಕೇತನ
ಮುಂದಿ[೨೧][ವೆ][೨೧] ವೃಷಭಪತಾಕೆ
ಸಂದಿ[೨೨][ದ][೨೨] ತುರಗವಾಹನಮುಳ್ಳ ಹರನಿವ
ನೆಂದು ಕೀರ್ತಿಸಿದರಂದವನ ॥೬೫॥

ಮುನ್ನ ಕಂಡರಿಯೆವೆ ರಣದೊಳು ಕಾದಿದ
ಕರ್ಣನ ಕೈಯ ಮಾಟವನು
ಚೆನ್ನಿಗ ತೋಟೇಂದ್ರನ ಕೈ ಪೊಸತೆಂದು
ವರ್ಣಿಸಿತನಿಮಿಷನಿಕರ ॥೬೬॥

ಜಡೆದಲೆಗೆದರಿ ವೀಣೆಯನೆತ್ತಿ ಕಂಕುಳ
ಕಡವಸ ಬೀಳ್ವುದರಿಯದೆ
ಕಡುಹಿಗ್ಗಿ ಹೆಚ್ಚುತಾಗಸದೊಳು ನಾರದ
ಬಿಡದೆ ಕುಣಿವುತಿರಲಿತ್ತ ॥೬೭॥

ತುರುಗಿಯೊಡಲೊಳು ಕಿಕ್ಕಿರಿವ ಕೂರಂಬಿನ
ಬಿರುವಳೆಯನು ಸಡ್ಡೆಗೊಳದೆ
ನೆರೆ ಗಂಡುಗಲಿ ತೋಟೇಂದ್ರನಾಹವದೊಳು
ಕುರಿದರಿದನು ಪಟುಭಟರ ॥೬೮॥

ಆ ತೋಟೇಂದ್ರನುತ್ತಮ ವಾಜಿಯನೇರಿ
ಭೀತಿರಹಿತನೇರ್ವಡೆದು
ಪೂತ ಮುತ್ತ[೨೩][ಲವಾ][೨೩]ಗಸದೊಳಿರ್ಪಂತೆ ವಿ
ಖ್ಯಾತನೊಪ್ಪಿದನಾಜಿಯೊಳು ॥೬೯॥

ಪೇಳಲೆನ್ನಳವೆ ತೋಟೇಂದ್ರನೊಳೆಸೆವ ಕ
ಟ್ಟಾಳುತನದ ಬಲುಮೆಯನು
ಬೋಳೆಗವಲು ಮೊನೆಯಂಬುಗಳಂಗವ
ಕೀಲಿಸಲವ ಸಡ್ಡೆಗೊಳನು ॥೭೦॥

೨೦-೨೦ ಮಂ (ತ.ಕ) ೨೧-೨೧ ವು (ತ,ಕ). ೨೨-೨೨ ದೆ (ತ,ಕ). ೨೩-೨೩ ಮದನಾ(ತ,ಕ).

ಗಣಿಸಲಳವೆ ನಿನ್ನಯ ಸಾಹಸವನು
ರಣಕೋವಿದ ತೋಟೇಂದ್ರ
ಗುಣಕೆ ಮತ್ಸರವುಂಟೆಯೆನುತೆ ವೈರಿಯ ಸೇನೆ
ಧಣುರೆಯೆಂದವನ ಕೀರ್ತಿಸಲು ॥೭೧॥

ಅಂಜಲೇತಕೆ ಹುಲ್ಲುಹುತ್ತುಮರಗಳಿಂದೆ
ಬಂಜೆಯೆ ನೆಲನು ಕೈವೆರಳು
ನಂಜೆಯೆನುತ್ತಾ ಕುವರನೊಳರಿಬಲ
ಹಿಂಜಾಹವಕೊದಗುವುದು(?) ॥೭೨॥

ಮಡಿದುದು ಪಲವೇರ್ವಡೆದು ತನ್ನಯ ಬಟ್ಟ
ದೊಡೆಯೊಳೊಪ್ಪುವ ವಾಜಿರತ್ನ
ಕಡುಗಲಿಗಳ ದೇವ ತೋಟೇಂದ್ರನಾಗ ಬೊ
ಬ್ಬಿಡುತಿರ್ದುಬ್ಬಿ ಲಳಿಯೆದ್ದು ॥೭೩॥

ಭೀಮನ ಬಲ್ಪರ್ಜುನನ ಪರಾಕ್ರಮ
ರಾಮಚಂದ್ರನ ಪನ್ನತಿಕೆ
ತಾಮರಸಾಕ್ಷನ ಶೌರ್ಯಮೊಪ್ಪಿದುದಾಗ
ಳಾಮಹಿಪಾತ್ಮಜನಲ್ಲಿ ॥೭೪॥

ಹುಲಿಯಂತೆ ಧೀಂಕಿಟ್ಟು ಹಳಚುವ ಕುದುರೆಯ
ದಳವ ತುಂಡಿಸಿ ಕಾಲಬಲವ
ತುಳಿದೊರಸುತೆ ಮೇಲೆ ನೂಂಕುವಾನೆಯ ಕರ
ತಳದಲಗಿಂದೆ ತುಂಡಿಸಿದ ॥೭೫॥

ತಾಗುವ ಶರಜಾಲಕೆ ತೋಟೇಂದ್ರ ಮ
ಹಾಗಿರಿಯಂತೆ ಚಲಿಸದೆ
ಬೀಗುತೆ ಬಿಂಕದ ಮಾತ ಮೂದಲಿಸುತೆ
ತಾಗುವ ಭಟರ ತುಂಡಿಸಿದ ॥೭೬॥

ಕಳ್ಳತನದಿ ರಾಯಭಂಡಾರವನೆಲ್ಲ
ಕೊಳ್ಳೆವಿಡಿದು [೨೪][ತಂ][೨೪]ದುಕೊಂಡು
ಹೊಳ್ಳಿಸಿ ತಿಂದು ಹೆಚ್ಚಿದ ನೆಣವಸೆಯನು
ಬಳ್ಳಿನ ಬಳಗಕುಣಿಸಿದ ॥೭೭॥

ನೆರೆ ಗಂಡುಗಲಿ ತೋಟೇಂದ್ರನಾಹವದೊಳು
ಗುರಿಯಾದ ಪಟುಭಟತತಿಯ
ಪರಿಮರಿಯಾಡುವ ತೆರದಿಂದೆ ಕೋಪದಿ
ಕುರಿದರಿದನು ಮುಂದುವರಿದು ॥೭೮॥

ಹತ್ತಿಸಿ ಹತ್ತಿಸಿ ಫೌಜುಫೌಜುಗಳಂ[೨೫][ಜೆ][೨೫]
ಬತ್ತಿ ಕಾಲಾಳು ಮೇಲಾಳು
ಅತ್ತಿತ್ತ ಮಾಡಿ ವೈರಿಯ ಸೇನೆಯ ಸವಿ
ದುತ್ತಮಾಡಿದನಂತಕಗೆ ॥೭೯॥

ಕವಿವ ಕಾಲಾಳ ಕಡಿದು ಕಡಿದೊಟ್ಟುತೆ
ತಿವಿವ ರಾವುತರ ತುಂಡಿಸುತೆ
ಬವರಿಪ ಸೊಕ್ಕಿದಾನೆಯನಿರಿದೊಟ್ಟುತೆ
ಶಿವನೊಳೊಂದಿದನಾ ಕುವರ ॥೮೦॥

ದಡದಡಿಸದೆ ಮೈಮರೆಯದೆ ಧೈರ್ಯವ
[೨೬]ಕೆ[೨೬]ಡಲರಿಯದೆ ಕಣ್ಗೆಡದೆ
ಒಡಲಾಸೆದೋರ[೨೭][ದ][೨೭] ಅನುದಪ್ಪದೀಶ್ವರ
ನಡಿಯ ಸಾರಿದನಾ ಕುವರ ॥೮೧॥

ನಿಜದ ನಿರುಗೆಯನುಸಂಧಾನಮೆಂತುಂಟೊ
ಮರುಭಾಪುವಾತನ ಹರಣ
ಅಜಸುರೇಂದ್ರ[೨೮][ರ][೨೮]ನುಚ್ಚಳಿಸೆದ್ದು ಬೆಳಗುತೆ
ಭುಜಗಕಟಕನ ಸಾರಿದುದು ॥೮೨॥

೨೪-೨೪ ತಿಂ (ತ,ಕ). ೨೫-೨೫ ಚೆ (ತ). ತೆ(ಕ). ೨೬-೨೬ ಕ (ಕ). ೨೭-೨೭ ದ (ತ,ಕ).೨೮-೨೮ ವ (ತ,ಕ).

ನಾಕದ ಹೆಂಗಳ ಕಂಗೊಂಬನೆ ಜಗ
ದೇಕವೀರನು ತೋಟೇಂದ್ರ
ಏಕಪ[29][ತ್ನೀ][29] ವ್ರತದಿಂ[30][ದ][30] ಚರಿಸಿ ಪಿ
ನಾಕಿಯ ಪದವ ಸಾರಿದನು ॥೮೩॥

ಸುರರುಘೆ ಎನೆ ಕಿನ್ನರರು ಕೀರ್ತಿಸೆ ಸಿ
ದ್ಧರು ಜಯನಿನದಮನೀಯೆ
ಹರಗಣ ನಲಿಯೆ ತುಂಬುರನೊಲ್ದು ಪಾಡಲೀ
ಶ್ವರನನೆಯ್ದಿದನು ತೋಟೇಂದ್ರ ॥೮೪॥

ಆ ತೋಟೇಂದ್ರನ ಬರಸೆಳೆದಮರ್ದಪ್ಪಿ
ಓತು ಮುಂಡಾಡಿ ಕೊಂಡಾಡಿ
ಪ್ರೀತಿಯಿಂ ತನ್ನ ತೊಡೆಯೊಳಿಟ್ಟುಕೊಂಡನು
ಭೂತೇಶ ಚೆನ್ನಮಲ್ಲೇಶ ॥೮೫॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳದಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೮೬॥

[31]**ಪಂಚದಶ ಸಂಧಿ ಸಂಪೂರ್ಣಂ**[31]

❖❖

೨೯–೨೯ ತಿ (ತ.ಕ). ೩೦–೩೦ ದಾ(ತ.ಕ). ೩೧–೩೧ ಅಂತು ಸಂಧಿ ೧೫ಕ್ಕಂ ಪದನು ೧೩೮೬ಕ್ಕಂ ಮಂಗಳಮಹಾಶ್ರೀ (ತ.ಕ).

ಸಂಧಿ : ೧೬

ಕುಮಾರ ಮಾತಾಡೊ ಎನ್ನೊಡನೆ

ಶ್ರೀಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸ ನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ಇತ್ತಲಾಹವದೊಳು ತೋಟೇಂದ್ರನಿರಿವಾ
ಯೊತ್ತಂಬರ ನಿಲಲೊಡನೆ
ವೊತ್ತಗೊಂಡರಿಬಲಧೊಳಗಿರ್ದ ಪಟುಭಟ
ರೊತ್ತರಿಸುವೆ[೧][ವೆ][೧]ಂದು ಬರಲು ॥೨॥

[೨][ತೊ][೨]ಳಪ ಕಂಗಳ ಹೊಗರೊಗುವ ಕದಪಿನ
[೩][ತಳತ][೩]ಳಿಸುವ ಮೊದಿಂದೆ
ತುಳುಕುವ ವೀರರಸದ ತಲೆಯನು ಕಂ
ಡಳುಕುತೆ [೪][ಹೆ][೪]ರಸಾರಿದರು ॥೩॥

ಎಲರ ತಿಟ್ಟಕ್ಕೊರೆ ಚಿಂದಿಯ [೫][ಚುಂ][೫]ಗಿರ
ದಲುಗಲು ಕಂಡರಿಭಟತು
ಅಳವಳಿವುತೆ ಹಿಮ್ಮೆಟ್ಟಿದರಾತನ
ಬಲುಮೆಯೆಂತುಟೊ ಬವರದೊಳು ॥೪॥

೧–೧ ನೆ (ತ,ಕ). ೨–೨ ತ(ತ,ಕ). ೩–೩ ಕಳಕ(ತ,ಕ). ೪–೪ ಹೊ (ತ,ಕ).೫–೫ ಚೂ(ತ,ಕ).

ಅರವೆಯಾದುದೊ ಮಿತ್ತುದೇವಿಗೆ ಜವಗೆ ಕ
ಟ್ಟರೆಯಾಯಿತೊ ಈ ಕುವರ
ಮರಣವಾದನೊ ಅಲ್ಲದಿರ್ದ[೬][ರೆ][೬] ಬಲವ ಸಂ
ಹರಿಸದೆ ಸುಮ್ಮನಿರ್ದಪನೆ ॥೫॥

ಎಂದರಿಭಟರು ನಿಶ್ಚೈಸಿ ತೋಟೇಂದ್ರನು
ಸಂದುದು ಸಟೆಯಲ್ಲವೆಂದು
ಮುಂದುಮುಂದಕೆ ಮೆಲ್ಲನೆಯ್ತಂದು ನಿರ್ಭಯ
ದಿಂದೆ ಸಾರಿದರವನೊಡಲ ॥೬॥

ಖಂಡೆಯವನು ನೆಲಕೂರಿ ಕಂಗೊಳಿಸುವ
ಮಂಡಿಯನಿಟ್ಟಂಗವಿರಲು
ಅಂಡಿಸುತೆಯ್ತಂದಾತನ ಶಿರವನು
ತುಂಡಿಸಿದರು ಪಗೆಯವರು ॥೭॥

ಅಳಿಯ ಮುದ್ದೇಂದ್ರನಳಿಯ ಲಿಂಗೇಂದ್ರ ಹೆ
ಕ್ಕಳದ ಹೆಮ್ಮೆಯೊಳೆಯ್ತಂದು
ಕೊಳಗುಳದೊಳು ಕಿತ್ತಲಗುವಿಡಿದು ತೊ
ತ್ತಳದುಳಿದಿರಿದಾಡಿದರು ॥೮॥

ಯುವರಾಜನ ಸಂಗವ ಹಿಂಗದೆ ಪಗೆ
ಯವರೊಳು ಮಿಗೆ ಕಡಿದಾಡಿ
ಬವರದೊಳಗೆ ತಮ್ಮ ತಲೆಗಳನಿತ್ತಾ
ಕುವರನ ಬಳಿ ಸಂದರವರು ॥೯॥

ಏಳಿಗೆಯಿಂದಿರಿದಾಡಿ ಕುಮಾರಕ
ನೂಳಿಗದ ಚಿನನಾಗ
ಅಳಿದೊಡೆಯನಡಿಗಳ ಮುಂದೆ ತಲೆಯಿತ್ತು
ಮೇಳಿಸಿದನು ಸಗ್ಗವೆಣ್ಣ ॥೧೦॥

೬-೬ ರಿ(ತ,ಕ).

ಕೊಳಗುಳದಲ್ಲಿ ಕುಮಾರನಳಿದನೆಂಬ
ಕಳಕಳವೆಸಗಲಂತ[೭][ದ][೭]ನು
ಹಳದಿಯ ಬಿರುದಾಂಕನಿರ್ಮ್ಮಡಿಚಿಕ್ಕ
ಭೂತಳನಾಥನಾಗಲಾಲಿಸುತೆ ॥೧೧॥

ಘುಡಿಘುಡಿಸುತೆ ಪೊಡವಿಯ ಪೊಡೆದೇಳುತೆ
ಪಡೆದ ಕುಮಾರನಾಜಿಯೊಳು
ಮಡಿದನೆ ಶಿವಶಿವಯೆಂದುತ್ತಮಾಶ್ವವ
ನಡರ್ದನಿರ್ಮ್ಮಡಿಚಿಕ್ಕನೃಪತಿ ॥೧೨॥

ಕಡೆಗಂಗಳ ಕೆಂಪು ಕುಣಿವ ಮೀಸೆಯ ಪೆಂಪು
ಕಡುರೋಷದ ಬಲು ಬಿಣ್ಪು
ಒಡವೆರಸಿದ ಧೈರ್ಯದ ಗುಣ್ಪು ಮೆರೆಯೆಯಿ
ಮ್ಮಡಿಚಿಕ್ಕ ಪೊಗುತಾಹವವ ॥೧೩॥

ತನ್ನೊಡಲೆರಡು ಮೂ[೮][ರಾರನೊಯ್ಯನೆ][೮] ಪಡೆ
ವನ್ನೆಗವಹಿತ ಭೂಭುಜರು
ಬೆನ್ನಕೊಟ್ಟಿರದೆ ಕೆಟ್ಟೋಡಿ ಮುರಿದು ಪೋ
ಪನ್ನ ಪೊಕ್ಕಿರಿದನೇನೆಂಬೆ ॥೧೪॥

ಅಬ್ಬರಿಸುತೆ ಕೆಲಕೆಲರನಾಹವದೊಳು
ಬೊಬ್ಬೆಗೊಡುತ ಕೆಲಕೆಲರ
ಬೆಬ್ಬಳಿಗೊಳಿಸುತೆ ಕೆಡಪಿದ ಕಡುಗಬ್ಬಿ
ಹೆಬ್ಬುಲಿಯಂತೆಯಾ ನೃಪನು ॥೧೫॥

ಕೋಲಾಹಲದಬ್ಬರದುಬ್ಬರದಿಂದೆ
ನೀಳದೋಳಿನ [೯][ಕರವಾ][೯]ಳ
ಜಾಳಿಸುತಿರ್ಮ್ಮಡಿಚಿಕ್ಕನೆಸೆದನು ಕ
ರಾಳ ಭೈರವನೆನಲಲ್ಲಿ ॥೧೬॥

೭–೭ ವ (ತ,ಕ). ೮–೮ ರರನೆಯ್ದದೆ (ಕ). ರರರೆಯ್ದದೆ (ತ). ೯–೯ ಕುರ್ವಾ(ತ). ಕರ್ವಾ(ಕ).

ಮೆದೆಗೆಡೆದರು ಮದವಳಿದರು ಕಾಣುತ್ತೆ
ದೆಗೆಟ್ಟರವನುರವಣೆಗೆ
ಅದಿರಿದರಳಿಬಳಿದರೋಡಿದರಲ್ಲಿ
ಮದಿಸಿದ ಮೊನೆಯ ನಾಯಕರು ॥೧೭॥

ಕೆಲಬರು ಹೆದರಿ ಬೆರಳ ಕಚ್ಚಿದರು ಕೆಲ
ಕೆಲಬರು ಹುಲ್ಲ ಕಚ್ಚಿದರು
ಕೆಲಬರು ಹುತ್ತ ಮರಗಳನಡರಿದರು
ಕೆಲರು ಹೊಕ್ಕರು ನೀರನವರು ॥೧೮॥

ನಿಲ್ವರಿಲ್ಲೆನಲವನಿದಿರಾಂತದಿರದೆ
ಮೇಲ್ವರಿವವನಾವನ[ವ]ನ
ಗೆಲ್ವೆನೆಂಬನ ತಾಯಿ ಬಂಜೆ ಗಾಂಗೇಯನ
ಪೋಲ್ವನಿರ್ಮಡಿ ಚಿಕ್ಕ ನೃಪನ ॥೧೯॥

ನೆಲ್ಲಿಯ ಕಾಯಿ[ಗೆ] ಕಲ್ಲಕೊಂಡಂದದೆ
ಚಲ್ಲವರಿದುದರಿ ಕಟಕ
ಹೆಲ್ಲಣೆಕಾರನ ಕಾ[೧೧][ಳಗ][೧೧] ಚೌಪಟ
ಮಲ್ಲ ಚಿಕ್ಕೇಂದ್ರನುಬ್ಬಟಿಗೆ ॥೨೦॥

ಚಂಡವಿಕ್ರಮ ಚಿಕ್ಕಭೂವರನಾ ರಣ
ಮಂಡಲದೊಳು ಕಂಗೊಳಿಪ
ಗಂಡರಗಂಡ ತೋಟೇಂದ್ರನ ತಲೆಯನು
ಕಂಡನು ಕಟ್ಟಿದಿರಿನೊಳು ॥೨೧॥

ಬಿಟ್ಟ ಕಣ್ಬಿಗಿದಡರಿದ ಹುಬ್ಬು ಪಣೆಯೊಳ
ಗಿಟ್ಟ ಭಸಿತದ ತ್ರಿರೇಖೆ
ಬಟ್ಟಗದುಪು ಸುಲಿಪಲ್ಗಳ [೧೨][ತೊ][೧೨]ಳಪಳ
ವಟ್ಟು ಕಂಗೊಳಿಸಿತಾ ಶಿರವು ॥೨೨॥

೧೦-೧೦ ರ (ತ,ಕ). ೧೧-೧೧ ಳೆ(ತ,ಕ). ೧೨-೧೨ ತ (ತ,ಕ).

ಕಳಕಳಿಸುತೆ ಕಂಗೊಳಿಸುವ ಕುವರನ
ತಲೆಯ ಕಾಣುತೆ ಚಿಕ್ಕಭೂಪ
ಅಳವಳಿವುತೆ ಧರೆಗಿಳಿದಂತೆ ಕುದುರೆಯ
ನಿಳಿದು ಪಿಡಿದನಾ ಶಿರವ ॥೨೩॥

ತನ್ನ ಹೃತ್ಕಮಲಕರ್ಣಿಕೆಯ ಮಧ್ಯದೊಳಿಹ
ಸನ್ನುತ ಜೀವರತ್ನವನು
ಪನ್ನಗಕಟಕನಿದ್ದೊಡೆ ಪಿಡಿ[೧೩]ದೊ[೧೩]ಪ್ಪಲು
ಚೆನ್ನನ ತಲೆಯಾಂತನವನು ॥೨೪॥

ಮುದ್ದಿಸುತೆಯ್ದೆ ಮುಂಡಾಡುತೆ ಪಣೆಯೊಳು
ಪೊದ್ದಿಸಿ ತನ್ನ ಪಣೆಯನು
ಮರ್ದಿಸಿ ರಿಪುಗಳ ಬಂದಪೆ[೧೪][ಯೆಂ][೧೪]ದು ನಾ
ನಿರ್ದೆನು ಕಂದ ಹಾಯೆನುತೆ ॥೨೫॥

ಗಲ್ಲವ ಪಿಡಿದು ಮುದ್ದಿಪನೊಮ್ಮೆ ಚು[೧೫][ಬುಕ][೧೫]ವ
ಮೆಲ್ಲನೆ ತುದಿವೆರಲಿಂದೆ
ಲಲ್ಲೆಯಗೆಯ್ದಲುಗುತೆ ಕಂದ ಬಾ ಎಂದು ಬಾ
ಯಲ್ಲಿ ಬಾಯಿಟ್ಟು ಚುಂಬಿಸುವ ॥೨೬॥

ಧುರಧೀರ ವೀರನ ಶಿರವ ತನ್ನಯ ಪೇ
ರುರದೊಳಗಮರ್ದಪ್ಪಿಕೊಳುತೆ
ಹರನುರದೊಳು ರಂಜಿಸುವ ಜಲಂಧರ
ಶಿರವೆನಲೆದೆಗೊಳಿಸಿ[೧೬][ದನು][೧೬] ॥೨೭॥

ಆತನ[೧೭][ವೊ][೧೭]ಡಲನಂದಣದೊಳಗಿಟ್ಟು ಸಂ
ಪ್ರೀತಿಯಿಂದೋಲಗಗೊಡುತೆ
ಭೂತಳಾಧಿಪನಿರ್ಮಡಿಚಿಕ್ಕ ಬಂದನ
ತ್ಯಾತುರದಿಂ ನಿಜಪುರಕೆ ॥೨೮॥

೧೩-೧೩ ದಿ (ಕ).೧೪-೧೪ ನೆ(ತ,ಕ).೧೫-೧೫ ೦ಬುಳ(ತ,ಕ). ೧೬-೧೬ ದುದು (ತ,ಕ). ೧೭-೧೭ ನೊ (ತ,ಕ).

ಬಂದು ಪೊಗುತೆ ನಿಜಮಂದಿರದೊಳಗಾ
ನಂದನನೊಪ್ಪುವಂಗವನು
ಚಂದದಿ ಮೂರ್ತಿಗೊಳಿಸಿ ಚಿಕ್ಕಭೂವರ
ನಂದಗೊಳಿಸಿದನಾ ಶಿರವ ॥೨೯॥

ಕಂಗೊಳಿಸುವ ಚಿಮ್ಮುರಿಯ ಚೆಲ್ವಣಿಯ ಬೆ
ಡಂಗಿಸಮುರಿಮಾನದಿಂದೆ
ಚುಂಗಿನಿಂದೆಸೆವೊರೆ ಚಿಂದಿಯನವನುತ್ತ
ಮಾಂಗದೊಳಳವಡಿಸಿದನು(?) ॥೩೦॥

ವಾರೆ ಚಿಂದಿಯೊಳು ತುರಾಯವನಿಕ್ಕಿ ಕ
ಸ್ತುರಿಯ ತಿಲಕವ ತಿದ್ದಿ
ಚಾರು ರತ್ನಾಭರಣಗಳಿಂದವನ ಶ
ರೀರವನೊಲಿದು ಸಿಂಗರಿಸಿ ॥೩೧॥

ಕಡೆಸಾರ್ದು ನಡೆನೋಡಿ ಮುಂಗಡೆಯೊಳು ಸೈ
ಗೆಡದೆದ್ದು ಮತ್ತೆ ನೋಡುತ್ತೆ
ಬಿಡದೆ ಬಂದಪ್ಪಿ ಮುಂಡಾಡಿ ಮುದ್ದಿಸಿ ಗಲ್ಲ
ವಿಡಿದು ಕಂದಯ್ಯ ಹಾಯೆಂದು ॥೩೨॥

ಅವನೀಶ್ವರನಿರ್ಮಡಿಚಿಕ್ಕೇಂದ್ರನು
ಕುವರನ ವಿಮಲ ಸದ್ಗುಣವ
ನಿವಹಗೊಳಿಸಿ ಬಣ್ಣಿಸಿ ಬಣ್ಣಿಸಿ ಶೋ
ಕವನೆನಸಗಿದನಿಂತೆಂದು ॥೩೩॥

ವೀರನೆ ಅಸಹಾಯಶೂರನೆ ರಣರಂಗ
ಧೀರನೆ ಚೆನ್ನೊಡಲಾಂತ
ಮಾರನೆ ವರ ಸುಕುಮಾರಶರೀರ ಕು
ಮಾರ ಮಾತಾಡೊ ಎನ್ನೊಡನೆ ॥೩೪॥

ಸೂನುವೆ ಧೃತಿರತ್ನ ಸಾನುವೆ ಕಲಿಕಾಮ
ಧೇನುವೆ ಸುಜನಹೃತ್ಕಮಲ
ಭಾನುವೆ ವೈರಿಸೇನಾವನವಿಪಿಸೆಕೃ
ಶಾನುವೆ ಮುನಿಸೆ ಎನ್ನೊಡನೆ ॥೩೫॥

ಪುತ್ರನೆ ಸುಜನಸನ್ಮಿತ್ರನೆ ಕೀರ್ತಿಕ
ಲತ್ರನೆ ಶಾತ್ರವನಾಶ
ಪಾತ್ರನೆ ಪರಮಪವಿತ್ರನೆ ವಿಮಳಚಾ
ರಿತ್ರನೆ ಮೌನವಿದೇಕೊ ॥೩೬॥

ಸತ್ಯನೆ ಸೂರಿಸಂಸ್ತುತ್ಯನೆ ಗುರುಪದ
ಭೃತ್ಯನೆ ಸಜ್ಜನವಿನುತ
ಕೃತ್ಯನೆ ಪರಮಕೃತಾರ್ಥನೆ ಎನ್ನಯ
ಪುತ್ರನೆ ಮಾತಾಡಯ್ಯ ॥೩೭॥

ಮಾನ್ಯನೆ ರಿಪುಭಯಶೂನ್ಯನೆ ಜಿತಶತ್ರು
ಸೈನ್ಯನೆ ಬಾಂಧವನನ್ಯ
ಧನ್ಯನೆ ಪರಮವದನ್ಯನೆ ಸುಜನಸೌ
ಜನ್ಯನೆ ಮೌನವಿದೇಕೆ ॥೩೮॥

ಕಂದನೆ ಆನಂದಕಂದನೆ ಕಂದು ಕುಂ
ದೊಂದದ ಚಂದ್ರನೆ ಎನ್ನ
ತಂದೆ ಎನ್ನೊಡನೇಕೆ ಮಾತನುಳಿದೆ ಎ
ನ್ನಿಂದಾದ ತಪ್ಪಾವುದಯ್ಯ ॥೩೯॥

ಮಗನೆ ಬಾ ಮುದ್ದುಮಗನೆ ಬಂದಪ್ಪೊ ಚೆ
ನ್ನಿಗನೆ ನೀನೋತು ಮಾತಾಡೊ
ಅಗಜಯಣುಗನ ದಯಿಗನೆ ವೀರರ ಮೊದ
ಲಿಗನೆ ಎನ್ನೊಡನೇಕೆ ಮುನಿಸು ॥೪೦॥

ಸುತನೆ ಹಾ ಸೂರಿಸನ್ನುತನೆ ಹಾಗುರು ಭಕ್ತಿ
ಯುತನೆ ಹಾ ವಿಜಯವಿಶ್ರುತನೆ
೧೮[ಸು]೧೮ತನೆ ಹಾ ಸತ್ಯಸಲ್ಲಾಪಿತನೆ ಹಾ ಜನ
ಹಿತನೆ ಹಾ ಎನುತಳವಳಿದ ॥೪೧॥

ನುಡಿಯೊ ನಲ್ನುಡಿಗಾ*[ರ]* ಶತ್ರುವ ಸಂಹಾರ
ಕಡುಗಲಿಗಳ ಗಳಹಾರ
ನುಡಿವೆಣ್ಣನೊಲಿಸಿದ ಚತುರಾಸ್ಯ ನೀನೆ
ನ್ನೊಡನೇಕೆ ಮುನಿದೆ ಕಂದಯ್ಯ ॥೪೨॥

ಮುಳಿಸರಿಯದ ಮುದ್ದುಮೊಗದ ಚೆಲ್ವರದೇವ
ತಿಳಿಪಿದೊಡೆಂತು ತಿಳಿಯದ
ಮುಳಿಸ ಮುಂಕೊಂಡು ನೀನಿಂತಿರ್ದಡಾನೆಂ
ತುಳಿವೆನಳಿಯದೆ ಕಂದಯ್ಯ ॥೪೩॥

ಮುಕ್ಕಣ್ಣ ಬಲ್ಲೆಹ ಬಸವನ ಬಿರುದಿಗೆ
ತಕ್ಕ ಕುಮಾರ ನೀನೆಂದು
ಹೆಕ್ಕಳವಿಕ್ಕುತಿರ್ದಿದದನುಳಿದು ಪೋಗಿ
ಮುಕ್ಕಣ್ಣನೂರನೆಯ್ದಿದೆಯಾ ॥೪೪॥

ಕೂಸ ಮುದ್ದಾಡಿಕೊಂಡೊಡಲ ಹೊರೆವೆನೆಂ
ಬಾಸಕ ಕುವರರಗಂಡ
ಮೀಸರಗಂಡನೆನಿಪ ಬಲುಬಿರುದುಳ್ಳ
ಸಾಸಿಗ ಮಗನೆ ಮಾತಾಡೊ ॥೪೫॥

ಧರೆಯ ಭಾರವ ನಿನಗಾನು ವಹಿಸಿ ಶಿವ
ಶರಣರ ಸಲೆ ಭಜಿಸುತ್ತೆ
ಹರಿಸದೊಳಿರ್ದಪೆನೆಂಬನ್ನೆಗ ಹರ
ಚರಣವನೊಡವೆರಸಿದೆಯಾ ॥೪೬॥

೧೮–೧೮ ಪಿ (ತ,ಕ). *–* ಯೆ (ತ,ಕ).

ತಮ್ಮ ಸರ್ಪೇಂದ್ರನಿಲ್ಲದೆ ರಾಜ್ಯಭಾರಕೆ
ನೆಮ್ಮುಗೆಯಾಗಿರುತಿಹುದು
ದಿಮ್ಮಿತಲ್ಲೆನುತಪವರ್ಗಸಾಮ್ರಾಜ್ಯಕೆ
ನೆಮ್ಮುಗೆಯಾದೆಯಾ ಕಂದ ॥೪೭॥

ನಿನ್ನ ಮುಖೇಂದುಜನಿತಮಪ್ಪ ನಸುನಗೆ
ಚೊನ್ನವನೀಂಟಿ ತಣಿಯದ
ಎನ್ನ ನಯನಚಕೋರ ನೀನಿಂತಾಗ
ಲಿನ್ನು ಬಾಳುವ ಪರಿಯೆಂತೊ ॥೪೮॥

ನಿನ್ನೊಳು ನಲಿದು ಮಾತಾಡುತೆ ನಳನಳಿ
ಪೆನ್ನ ನಾಲಗೆಯೆಂಬ ತಳಿರು
ನಿನ್ನ ವಿಯೋಗಜನಿತಸಂತಾಪಾಗ್ನಿ
ಇನ್ನಾಡೆ ಮುರುಟದೆಂತಿಹುದೊ ॥೪೯॥

ಎಂತು ಸೈರಿಪೆ ನಿನ್ನನೆಂತು ನಿತ್ತರಿಪೆನಾ
ನೆಂತು ಪಿಡಿವೆನೀಯೊಡಲ
ಕಂತುಸಮಾನ ಚೆನ್ನಿಗ ತೋಟೇಂದ್ರ ನೀ
ನಿಂತಾಗಲೇಗೆಯ್ವೆ ಕಂದ ॥೫೦॥

ಒಲಿದವರನು ಕೊಲ್ವಡಲಗೇತಕ್ಕವರನು
ತೊಲಗಿದಾಗಳೆ ಕೊಂದುದಲ್ತೆ
ಅಲಘು ಪರಾಕ್ರಮಿ ನೀನೆನ್ನನುಳಿದಿಂತು
ಕೊಲುವರೆ ಕಂದ ಕಾರುಣಿಕ ॥೫೧॥

ಅಳಲದಿರಯ್ಯ ಬಾಯಳಿದಳದಿರು ಬೊಪ್ಪ
ಕಳಲಿ ಕಂಗೆಡದಿರು ತಂದೆ
ಬಳಲದಿರೆಂದು ಬಂದಪ್ಪಿಕೊಂಡೀಗೆನ್ನ
ನುಳುಹಿಕೋ ಕಂದ ಸಾರಿದೆನೊ ॥೫೨॥

ಪ್ರಾಣದ ಮೇಲೆ ಸರಸವಾಡುವುದು ನೆರೆ
ಜಾಣತನವೆ ಬಲ್ಲವಗೆ
ಜಾಣರದೇವ ನಿನ್ನಯ ಸೊಲ್ಲು ನಿಲೆಯೆನ್ನ
ಪ್ರಾಣದ ಹೋಕು ಕಂದಯ್ಯ ॥೫೩॥

ನಿನ್ನಯ ಖಡ್ಗವರಾತಿ ಭೂಪಾಲರ
ಸೈನ್ಯವ ಕೊಲುವುದೆ ಸಹಜ
ನಿನ್ನ ಸದ್ಗುಣಗಣವಿಂತಾಗಿ ನೀನಿರ
ಲೆನ್ನ ಕೊಲ್ವುದು ಚಿತ್ರವಯ್ಯ ॥೫೪॥

ನಿನ್ನ ಸಾಹಸವನಾಕರ್ಣಿಸಿ ರಾಯರು
ಸನ್ನುತ ಗಜವಾಜಿಗಳ
ರನ್ನವ[೧೯]ಚ್ಚ[೧೯]ಂಗಳ ಕಳುವಿದರವನೊಮ್ಮೆ
ಚೆನ್ನಿಗ ನೋಡು ಕಂದೆರೆದು ॥೫೫॥

ಎಂದು ತನ್ನೊಳು ಪರಿಪರಿಯಲ್ಲಿ ಹಲುಬುತೆ
ಅಂದವಳಿದು ನೃಪನಿರಲು
ಅಂದಾ ಕುವರನ ಜನನಿಯ[೨೦][ರ][೨೦]ಳಲುತಿಂ
ತೆಂದೊರಲಿದರೇನನೆಂಬೆ ॥೫೬॥

ನಿನ್ನಿರುಳೆನ್ನ ಕನಸಿನೊಳು ರನ್ನದ
ಕನ್ನಡಿಯೊಡೆದು ಬೀಳುವುದು
ಎನ್ನ ಕಂದಗೆ ತೋರಿತೆ ಕೆಟ್ಟೆನೆಂದಾಗ
ಚೆನ್ನಮ್ಮನುರೆ ಮರುಗಿದಳು ॥೫೭॥

ಹಿಂಗದೆ ನಿನ್ನ ನಿಟ್ಟಿಸಿ ಹೊ[೨೧][ಂ][೨೧]ಗುವೆನ್ನಯ
ಕಂಗಳೊ[೨೨]ಳ್ಗಿ[೨೨]ಡಿ[೨೩][ದೆ][೨೩] ಸುಣ್ಣವನು
ತುಂಗವಿಕ್ರಮ ತೋಟೇಂದ್ರ ಕೆಟ್ಟೆನೊ ಎಂದು
ಲಿಂಗಮ್ಮನತ್ತಳೇನೆಂಬೆ ॥೫೮॥

೧೯–೧೯ ಚ(ಕ). ೨೦–೨೦ X(ತ,ಕ). ೨೧–೨೧ X(ತ,ಕ). ೨೨–೨೨ ಳಿ(ಕ). ೨೩–೨೩ ದ (ತ,ಕ).

ರನ್ನವಚ್ಚಂಗಳನುರೆ ತೊಟ್ಟಲಸುವ
ನಿನ್ನಯ ಸುಕುಮಾರ ದೇಹ
ಉನ್ನತವಾದಂಬಿನ ಬಿರುಮಳೆಯೊಳು
ಚೆನ್ನಿಗ ಸೈರಿಪುದೆಂತೊ ॥೫೯॥

ವಿಳಸಿತ ಮಣಿಮಯ ಮಂಚದೊಳು ಕೋ
ಮಳ ಹಂಸತೂಳ ಕಲ್ಪದೊಳು
ಮಲಗಲಲಸಿ ನೆಣನೆತ್ತರ ಹೊನಲೊಳು
ಮಲಗಲು ಮನವನಿಕ್ಕಿದೆಯಾ ॥೬೦॥

ನವರಸಭಾವಾಲಂಕೃತಿವೆತ್ತಿಹ
ಶಿವಕಾವ್ಯಗಳನಾಲಿಸುವ
ಕಿವಿಗಳಿಗಾ ರಣಭೂತ ಬೊಬ್ಬಿಡುತಿರ್ಪ
ರವವಿನಿದಾದುದೆ ಕಂದ ॥೬೧॥

ಲಲಿತಾಂಗಿಯರ ನೃತ್ಯವನೀಕ್ಷಿಪ ಕ
ಣ್ಣಲರಾಹವರಂಗದೊಳಗೆ
ಒಲಿದು ರಿಂಗಣಗುಣಿವಾ ಮರುಳಾಟ
ಕ್ಕೊಲಿದವೆ ನಿನಗೆ ಕಂದಯ್ಯ ॥೬೨॥

ಹುಣ್ಣಿಮೆ ಚಂದ್ರನ ಹೋಲುವ ಮೊಗದೆಳೆ
ವೆಣ್ಣುಗಳರಮನೆಯೊಳಗೆ
ಕಣ್ಣ ನೀರೊಳು ತೊಪ್ಪನೆ ತೋಯುತಾತನ
ಬಣ್ಣಿಸಿಕೊಂಡೊರಲಿದರು ॥೬೩॥

ಎಡಬಲದೊಳು ಸಿದ್ಧಾಜಿ ಸಪ್ಪೆಕ್ಕನೆಂ
ಬೊಡಹುಟ್ಟಿದರು ಕಣ್ಣನೀರ
ಕಡೆಗೋಡಿವರಿಸುತೆ ಬಾಯಳಿದತ್ತುದ
ನುಡಿ[೨೪][ಯಲ][೨೪]ಳವೆ ನುಡಿವೆಣ್ಗೆ ॥೬೪॥

೨೪-೨೪ ಯಾ (ತ,ಕ).

ತನುಜ ಕೆಟ್ಟೆನು ಎನ್ನ ಬಿ[೨೫][ಟ್ಟು ಈ][೨೫]ಶ್ವರಪಾದ
ವನಜವನೊಂದಿದೆಯೆಂದು
ಮನುಜಾಧಿನಾಥನಿಮ್ಮಡಿಚಿಕ್ಕಭೂವರ
ನನುಜ ಸಿದ್ಧೇಂದ್ರನಳಲಿದ ॥೬೫॥

ಸಣ್ಣವಂದಿರನೆಮ್ಮ ಸಲಹಲೊಲ್ಲದೆ ಮು
ಕ್ಕಣ್ಣನಡಿಯ ಬೆರಸಿದೆಯ
ಅಣ್ಣಯ್ಯ ಕೆಟ್ಟೆನೆನುತೆ ತಮ್ಮ ಬಸವಯ್ಯ
ಬಣ್ಣಿಸಿ ಬಾಯಳಿದತ್ತ ॥೬೬॥

ಹೆಮ್ಮೆವಡೆದ ಧೀರೋದಾತ್ತ ತೋಟೇಂದ್ರ
ನಮ್ಮನೊಲ್ಲದೆ ಪೋದನೆನುತ
ದುಮ್ಮಾನದಿಂದೊರಲುತ್ತಳವಳಿದನು
ತಮ್ಮ ಶಾಖೇಂದ್ರನೊಂದೆಸೆಯ ॥೬೭॥

ತೊರೆದು ನಮ್ಮೆಲ್ಲರನೊಲ್ಲದೆ ಪಾರ್ವತಿ
ಯೆರೆಯನಡಿಯ ಸೇರಿದನು
ನೆರೆಗಲಿಗಳದೇವ ತೋಟೇಂದ್ರನೆಂದೆನು
ತೊರಲಿದನುರೆಯಲ್ಲಮೇಂದ್ರ ॥೬೮॥

ಕಡಿವಡೆದುದೆ ನಡೆದಾಡುವ ಸುರಭೂಜ
ಮಡಿಯಿತೆ ಕಲಿಕಾಮಧೇನು
ಅಡಗಿತೆ ಚಿಂತಾಮಣಿಯೆಂದಾತನ
ಒಡನಾಡಿಗರು ಮರುಗಿದರು ॥೬೯॥

ಆ ಕುಮಾರನ ರಾಣಿ ಚನ್ನಬಸವಮ್ಮ
ತಾ ಕಲಿಯಾಗಿ ಸಿಂಗರಿಸಿ
ಶ್ರೀ ಕೈಲಾಸಕೆಯ್ದಿದ ತನ್ನ ಗಂಡನೆಂ
ದಾ ಕಮಲಾಯತನೇತ್ರೆ ॥೭೦॥

೨೫–೨೫ ಟ್ಟೀ (ತ,ಕ).

ಎಡಗೈಯ ಮಣಿಗನ್ನಡಿ ಬಲಗೈಯೊಳು
ಪಿಡಿದಲಗುವ ಜಮದಾಡೆ
ಮುಡಿದ ಗರಿಯ ಬಾಸಿಗವಮರಿದ ರನ್ನ
ದೊಡವೊಪ್ಪಲೈತಂದಾಗ ॥೭೧॥

ಬಾಳು ಸದ್ಗು[೨೬]ಣೇ[೨೬]ಶ ಬಾಳು ಮತ್ಪ್ರಾಣೇಶ
ಬಾಳು ಬಾಳೆನ್ನೆದೆಯಾಣ್ಮ
ಬಾಳು ನಿನ್ನೊಡನೆನಗೆಂದು ನಿಜೇಶನ
ಬಾಳಾಂತು ಮೆರೆವುತರ್ತಿಯಲಿ ॥೭೨॥

ಛಲದಂಕಮಲ್ಲ ನಲ್ಲನ ತಲೆವಿಡಿದು ಹೆ
ಕ್ಕಳವಿಕ್ಕಿ ಹೆಚ್ಚಿಯುಬ್ಬೆದ್ದು
ಕಳಕಳಿಸುತೆ ಕು[೨೭][ಕಿ][೨೭]ಲೆಂದಾರ್ದು ಸತಿಯರ
ತಲೆವಣಿ ನಗೆಮೊಗವೆರಸಿ ॥೭೩॥

ಅಲ್ದು ಬೊಬ್ಬಿಟ್ಟಳಲ್ಲದೆ ಅಳವಳಿದಳೆ
ಜೋಲ್ದಳೆ ಒಡಲಾಸೆಯಿಂದೆ
ಗೆ[೨೮][ಲ್ದ][೨೮]ನೆಂದುಬ್ಬೆದ್ದಳಲ್ಲದೆಯಳಿಯಾಸೆ
ಗೊಲ್ದಳೆ ಪೇಳುವೆನೇನ ॥೭೪॥

ನರ್ತಿಸಿದಳು ನಲಿದಳು ಮನದನ್ನನ
ಮೂರ್ತಿಯ ವಿಮಲಸದ್ಗುಣವ
ಕೀರ್ತಿಸುತಾ ಸತಿ ಮಾಸತಿಯಾಗಿ ಪ್ರ
ವರ್ತಿಸಿದುದನೇನೆಂಬೆ ॥೭೫॥

ನಿಡು ಸೋಗೆಗಂಗಳ ಬೆಳಪು ತೊಳಪ ರನ್ನ
ದೊಡವಿನೊಳ್ವೆಳಗಂಗರುಚಿಯ
ಒಡವೆರಸಿರಲೊಲೆದಾಡಿದಳಾಡುವ
ಕುಡಿಮಿಂಚೆನಲಾ ಬನಿತೆ ॥೭೬॥

೨೬–೨೬ ಣಕೇ(ತ). ೨೭–೨೭ ಲಿ (ತ,ಕ). ೨೮–೨೮ ಲ್ದ (ತ,ಕ).

ಹಸನಾದುದು ನಿನ್ನಡಿಗಳ ಬಳಿವಿಡಿ
ದೆಸೆದಿಹಳಲ್ಲಾನೆನ್ನ
ಅಸು ನಿನ್ನಡಿಗಳಾಗಿರ್ಪೆನ್ನನುಳಿದು ಮೋ
ಹಿಸಿದೆಯ ಸುರನಾರಿಯರ ॥೭೭॥

ನುಡಿಯಿಂದೆ ನುಡಿವೆಣ್ಣ ಲಂಚ[೨೯][ದೆ][೨೯] ಜಸವೆಣ್ಣ
ನಿಡುದೋಳ್ಗಳಿಂ ಗೆಲವೆಣ್ಣ
ಬಿಡದಾ[೩೦][ಳ್ವು][೩೦]ದು ದಕ್ಕಿತೆಂದಚ್ಚರಸಿಯರ್ಕ
ಳೊಡಗೂಟಕೆಳಸೆಯ್ದಿದೆಯಾ ॥೭೮॥

ನೋಡಲೀವೆನೆ ನಿನ್ನ ಮೊಗವನವರಿಗೊಮ್ಮೆ
ನೋಡೆನ್ನ ಪಂಥವನಾಣ್ಮ
ಆಡಿದೊಡೇನಹುದೀಗಳೆ ನಿನ್ನೊಡ
ಗೂಡಿ ನಿನ್ನನೆ ಮೆಚ್ಚಿಸುವೆನು ॥೭೯॥

ಎಂದೆನುತಲಿ ನಲಿದೊಲಿದು ಮೆರೆವುತಾ
ನಂದದಿಂದಾಣ್ಮನ ತಲೆಯ
ಅಂದಗೊಳಿಸಿ ಮುನ್ನಿನಂದದಿ ನಿಡುರವ
ದಿಂದಾರ್ದು ನಗುತ ಬೊಬ್ಬಿಡಲು ॥೮೦॥

ಗೋಳಿಟ್ಟರಾಗ ಗೋಣೊಡೆವಂತೆ ತನ್ನ ಸ
ಮ್ಮೇಳದ ಸಖಿಯರ ತಂಡ
ಕೇಳುತಲವರ ಬೊಬ್ಬೆಯ ಕೈಸನ್ನೆಯಿಂ
ನೀಲಕುಂತಳೆ ನಿಲಿಸಿದಳು ॥೮೧॥

ಪಂಚಾಸ್ಯನ ಪದಪದ್ಮವ ನೆನೆವುತೆ
ಪಂಚಾಕ್ಷರಿಯ ಜಪಿಸುತ್ತೆ
ಪಂಚಬಾಣನರೂಪ ತೋಟೇಂದ್ರನೆದೆಗೊಳ
ದಂಚೆ ಸ[೩೧][ಭ][೩೧]ಯ ಭಕ್ತಿಯಿಂದೆ ॥೮೨॥

೨೯–೨೯ ನೆ (ತ,ಕ). ೩೦–೩೦ ಳ್ದು (ತ,ಕ). ೩೧–೩೧ ಭೆ(ತ,ಕ).

ಅತ್ತೆಮಾವಂದಿರ ಪಾದಕೆರಗಿ ತನ್ನ
ಚಿತ್ತವಲ್ಲಭನ ಮೂರ್ತಿಯನು
ಚಿತ್ತದೊಳಿಟ್ಟು ಜಾನಿಸುತೆ ಶ್ರೀಗುರುರಾಯ
ನಿತ್ತ ಲಿಂಗಕೆ ಪೊಡಮಡುತೆ ॥೮೩॥

ಚರಲಿಂಗಚರಣೋದಕವಿ[೩೨][ಕ್ಕಿ][೩೨] ತನ್ನಯ
ಪುರುಷನ ಮೂರ್ತಿಯೊತ್ತಿನಲಿ
ತರುಣಿ ಶಿರೋಮಣಿಯಾ ಚೆನ್ನಬಸವಮ್ಮ
ಹರುಷದೊಳಮರ್ದು ಮಂಡಿಸುತೆ ॥೮೪॥

ಪರಮಪಂಚಾಕ್ಷರಿಯನು ಜಪಿಸುತೆ ಶ್ರೀ
ಗುರುಸಿದ್ಧಮಲ್ಲಿಕಾರ್ಜುನನ
ಚರಣವ ಮಂಡೆಯೊಳಿಟ್ಟು ಲಿಂಗವನೋಡಿ
ವೆರಸಿದಳಾತ್ಮವಲ್ಲಭನ ॥೮೫॥

ಕಂಡಚ್ಚರಿಗೊಂಬಂತೆ ಶಿವಭಕ್ತರ
ತಂಡವುಘೇವುಘೇಯೆನಲು
ಖಂಡೇಂದುಧರನ ತೊಡೆಯೊಳಿಪ್ಪ ತನ್ನಯ
ಗಂಡನನಮರ್ದಪ್ಪಿದಳು ॥೮೬॥

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳ ತಳಿರಾಗೆ ಪಾರ್ವತಿಯ
ಲಲಿತ ಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೮೭॥

[೩೩]ಷೋಡಶ ಸಂಧಿ ಸಂಪೂರ್ಣಂ[೩೩]

❖❖

೩೨-೩೨ ಕ್ಷಿ (ತ,ಕ). ೩೩-೩೩ ಅಂತು ಸಂಧಿ ೧೬ಕ್ಕಂ ಪದನು೧೪೭೩ಕ್ಕಂ ಮಂಗಳ ಮಹಾಶ್ರೀ (ತ,ಕ).

ಸಂಧಿ : ೧೭

ಬೋಳೇಶ್ವರ ಹರಸಿ ಸೇಸೆಯನಿಟ್ಟನೊಸೆದು

ಶ್ರೀಗಿರಿಜಾಕುಚಕುಂಕುಮಾಂಕಿತವಕ್ಷ
ಯೋಗಿಮಾನಸನಿಜಾವಾಸ
ಸಾಗರಶಯನಾರ್ಚಿತಪಾದ ಸಲಹು ಮ
ಹಾಗುರು ಚೆನ್ನಮಲ್ಲೇಶ ॥೧॥

ಧುರಧೀರ ಕುವರನೊಡನೆ ಸೊಸೆಯ್ಯೆದಿದ
ಪರಿಯ ನೋಡುತೆ ಚಿಕ್ಕಭೂಪ
ಹರಹರ ಗುರುವೆ ಸಿದ್ಧೇಶಯೆನುತೆ ನಿಜ
ಕರದ ಲಿಂಗವನು ನಿಟ್ಟಿಸುತೆ ॥೨॥

ಜಯಜಯ ಸಕಲಭಕ್ತಾಶ್ರಯ ನಿರ್ಭಯ
ಜಯಜಯ ಮೃತ್ಯುಂಜಯನೆ
ಜಯಜಯ ಲೋಕತ್ರಯನತಪಾದ
ದ್ವಯ ನಿರುಪಮ ನಿರ್ದ್ವಯನೆ ॥೩॥

ಪುರಹರ ಶಂಕರ ದುರಿತಭಯಂಕರ
ಕರುಣಾಕರ ಶುಭಕರನೆ
ತರುಣಸುಧಾಕರಶೇಖರ ಗಿರಿಜಾ
ವರನೆ ಮದ್ವರ ಶರಣಾಗು ॥೪॥

ಮಾರಮದಾಪಹರನೆ ಘೋರತರ ಸಂ
ಸಾರವಿದೂರ ಸರ್ವಜ್ಞ
ಮಾರುತಮಿತ್ರ ಮಿತ್ರಾಬ್ಜಲೋಚನ ಮಾ
ಯಾರಹಿತನೆ ಶರಣಾಗು ॥೫॥

ಎವೆಯಾಟದಿಂ ಮಾಧವಮುಖ್ಯಾಮರ
ನಿವಹವ ಸೃಜಿಸಿ ರಕ್ಷಿಸುತೆ
ಪ್ರವಿಲಯಮಂ ಮಾಡಿ ನೋಡಿ ವಿನೋದಿಪ
ಭವಹರ ಮೃಡ ಶರಣಾಗು ॥೬॥

ಸಗುಣನಿರ್ಗುಣನೆ ಸಕಲನಿಷ್ಕಲಮೂರ್ತಿ
ನಿಗಮದುರ್ಲಭನೆ ಸುಲಭನೆ
ಜಗದಾನಂದರೂಪನೆ ಜಗದಾಧಾರ
ಜಗದಂತರಾತ್ಮಕ ಶರಣು ॥೭॥

ವಿಶ್ವಸಖನೆ ವಿಶ್ವಮುಖನೆ ವಿಶ್ವಾಂಬಕ
ವಿಶ್ವಾತ್ಮಕ ವಿಶ್ವಮಯನೆ
ವಿಶ್ವಕರ್ತನೆ ವಿಶ್ವಭರ್ತನೆ [1][ತೋರುವೀ][1]
ವಿಶ್ವಹರ್ತನೆ ಶರಣಾಗು ॥೮॥

ಅತ್ಯತಿಷ್ಠದ್ದಶಾಂಗುಲನಪ್ರತಿಮನೆ
ಕೃತ್ಯಾಕೃತ್ಯ ವರ್ಜಿತನೆ
ಸತ್ಯನೆ ನಿರ್ವಿಕಲ್ಪನೆ ನಿಜ ಸಂವಿದಾ
ದಿತ್ಯನೆ ಶರಣಾಗೆನಗೆ ॥೯॥

ಪರತರತತ್ವಪರಾತ್ಮನೆ ಪರಬ್ರಹ್ಮ
ಪರಮಪುರುಷ ಪರಶಿವನೆ
ಪರಮಾನಂದಸ್ವರೂಪ ನಿರೂಪನೆ
ಪರಮೇಶ್ವರ ಶರಣಾಗು ॥೧೦॥

೧-೧ ತೊರವಿ (ತ,ಕ).

ವರದಭಯಂಕರ ಕಮಲಲಕ್ಷ್ಮೀವರ
ಸರಸಿಜಭವನತಪಾದ
ದರಹಸಿತಾನನ ನಗಜಾಪ ಪರಮೇ
ಶ್ವರ ರವಿಕೋಟಿಪ್ರಕಾಶ ॥೧೧॥

ಇಂದಿಗೆ ನಿನ್ನ ನಿರೂಪದ ಮಣಿಹವು
ಸಂದುದೆನಗೆ ಮರ್ತ್ಯದಾಟ
ಒಂದಿನಿಸಿಲ್ಲ ಮರಳಿ ಮರ್ತ್ಯಕೆ ನಾನು
ಬಂದೊಡೆ ನಿಮ್ಮಾಣೆಯೆಂದು ॥೧೨॥

ಎಂದೆನುತಿರ್ಮಡಿ ಚಿಕ್ಕಭೂಪತಿ ತಾ
ನಿಂದು ಶೇಖರ ಶರಣೆನುತೆ
ಅಂದಾಗಳೆ ನಿಜಲಿಂಗದ ಕಳೆಯೊಳ
ಗೊಂದಿದನಿಳೆ ಬೆರಗಾಗೆ ॥೧೩॥

ಹಿರಿಯ ಚೆನ್ನಮ್ಮ ಲಿಂಗಾಜಮ್ಮ ಮೊದಲಾ
ದರಸಿಯರಾಗಳೆಯ್ತಂದು
ಗುರುಭಕ್ತನಿರ್ಮಡಿ ಚಿಕ್ಕಭೂಪಾಲನ
ಚರಣವ ಪಿಡಿದೆರಗುತಲಿ ॥೧೪॥

ಸಾಕಾದುದೆ ಗುರುಲಿಂಗಜಂಗಮಭಕ್ತಿ
ಸಾಕಾರವ ಸಟೆಮಾಡಿ
ಸ್ವೀಕರಿಸಿದಿರೆ ನಿರಾಕಾರವ ಚಿಕ್ಕ
ಭೂಕಾಂತ ಮತ್ಪ್ರಾಣಕಾಂತ ॥೧೫॥

ಘನ ಗುರುಲಿಂಗಜಂಗಮಕೆ ಸಂತಸದೆ ವಂ
ಚನೆಯನಳಿದ ಭಕ್ತಿಯಿಂದೆ
ತನುಮನಧನವನರ್ಪಿಸಿ ಸತ್ಪ್ರಸಾದ ಸೇ
ವನೆಯೊಳು ಕಣುಪುದೋರಿದುದೆ ॥೧೬॥

ಘನಲಿಂಗ ಸಂಗಸುಖಾನುಭಾವಿಗಳಪ್ಪ
ವಿನುತ ಷಟ್‌ಸ್ಥಲಬ್ರಹ್ಮಿಗಳ
ಅನುವರಿದತಿರತಿಯಿಂದೆ ಪೂಜಿಸುವ ವ
ರ್ತನೆ ಕಡೆಗಂಡುದೆ ನಿಮಗೆ ॥೧೭॥

ಇಸಿರೆಯ್ದ ಘನಪದದೊಳು ನಿಂದುದೇ
ನುಸಿರದೆ ಮೌನವನಾಂತು
ಇಸಿರುವ ಪರಿಯೊ ನೀನುಸಿರದಿಪ್ಪನುವೆ
ಮ್ಮಸುವಿನೊಡೆಯ ಚಿಕ್ಕಭೂಪ (?) ॥೧೮॥

ನಿರುಪಮ ಗುರುಲಿಂಗಜಂಗಮ ಪಾದಪಂ
ಕರುಹಭಕ್ತಿಗೆ ತಕ್ಕ ಭೂಪ
ಉರಿಕರ್ಪೂರದು[1][ಳಿ][1]ಮೆ ಎಂದವನನು
ಕರಿಸಿದೆಯಾ ಚಿಕ್ಕಭೂಪ ॥೧೯॥

ಮಂಗಳಾತ್ಮಕ ಚಿಕ್ಕಭೂವರ ಮತ್ಪ್ರಾಣ
ಲಿಂಗವೆ ನಿನ್ನ ಮೆಲ್ಲಡಿಯ
ಸಂಗಸುಖಾನುಭಾವದ ಘನಪದವನು
ಹಿಂಗಿರಲಾರ್ಪೆವೆ ನಿಮಿಷ ॥೨೦॥

ಗುರುಲಿಂಗಜಂಗಮವೊಂದೆಂದು ಭಾವಿಸಿ
ಶರಣು ಹೊಕ್ಕವರಂಘ್ರಿಗಳ
ಕರುಣವಡೆದು ಕೈಲಾಸಕೆಮ್ಮುವನಿಲ್ಲಿ
ರಿಸಿ ಪೋಪುದು ಗುಣವಹುದೆ ॥೨೧॥

ನಂಬಿರ್ದೆವು ನಿನ್ನಯ ಪದಪದ್ಮವ
ಮುಂಬರಿದಾತ್ಮಜವೆರಸಿ
ಅಂಬಿಕೆಯರಸನ ಪುರಿಗೆ ತವಕದೊಳೆ
ಮ್ಮಂ ಬಿಟ್ಟು ಪೋಪುದು ಗುಣವೆ ॥೨೨॥

೨-೨ ಳು (ತ,ಕ).

ಎನುತೆ ಲಿಂಗವನೀಕ್ಷಿಸುತೆ ಪಂಚಾಕ್ಷರಿ
ಯನು ಜಪಿಸುತೆ ವಲ್ಲಭನ
ಅನುವಿಡಿದಾ ರಾಣಿಯರೆಲ್ಲ ಲಿಂಗದ
ಘನತೇಜದೊಳೊಂದಿದರು ॥೨೩॥

ಪರಮಶೈವಾಗಮೋ[೩][ಕ್ತಿಯೊಳಿವ][೩]ರಂಗಕೆ
ಗುರುಸಿದ್ಧಮಲ್ಲಿಕಾರ್ಜುನನು
ಶರಣಸಂತತಿಯೊಡಗೂಡಿ ಸಮಾಧಿಯ
ವಿರಚಿಸಲಿತ್ತಲಂತವರು ॥೨೪॥

ಕರತಳದಿಷ್ಟಲಿಂಗದ ಚಿತ್ಕಳೆಯೊಳೂ
ಬೆರಸೆರಡಳಿದೇಕಮಾಗಿ
ಧರೆ ಮೊದಲಾಗಿರ್ಪ ಜಡತತ್ತ್ವಗಳನುಳಿ
ದಿರುತಿರ್ದರಮಳ ತೇಜದೊಳು ॥೨೫॥

ಪರಮತೇಜದೊಳೀಶ್ವರರೂಪಿನಿಂದ ಭೂ
ವರ ಚಿಕ್ಕನಿರಲಾತನೊಡನೆ
ಅರಸಿಯರಮಳ ಸುಜ್ಞಾನಶಕ್ತಿಯರಾ
ಗಿರುತಿರಲಾಗಲೇವೇಳ್ವೆ ॥೨೬॥

ಕುವರ ತೋಟೇಂದ್ರನಾತನ ಸತಿ ಸಹವಾಗಿ
ಶಿವೆಯೊಡವೆರಸಿ ಶಂಕರನು
ತವೆಯೊಸೆದಾ ಚಿಕ್ಕೇಂದ್ರಗೆ ಕರುಣಾ
ರ್ಣವ ತೋರಿಸಿದ ತನ್ನವರ ॥೨೭॥

ಸುರನದಿಯಿಂದೆ ಸುಧಾಕರಕಲೆಯಿಂದೆ
ಪರಿವಡೆದೊಪ್ಪುವ ಮಕುಟ
ಉರಗಕುಂಡಲವಳಿತಾಂಬಕದಿಂದೊ
ಪ್ಪಿರುತಿಹ ದರಹಸಿತಾಸ್ಯ ॥೨೮॥

೩-೩ ಕ್ತ ರಚಳಿಹ (ತ,ಕ).

ವರದಾಭಯ ಖಂಡಪರಶುತ್ರಿಶೂಲಸಿಂ
ಧುರದೈತ್ಯಚರ್ಮಾಂಬರವು
ಹರಿನಯನಾರ್ಚಿತಪದಪದ್ಮವೆಸೆಯಲೀ
ಶ್ವರ ನಿಜರೂಪ ತೋರಿದನು ॥೨೯॥

ನಂದೀಶ್ವರ ಭೃಂಗಿ ವೀರಭದ್ರಾದಿ ಗ
ಣೇಂದ್ರ[೪][ರ][೪] ತಂತಿಣಿಯೊಳಗೆ
ಕಂದರ್ಪಹರ ಶಂಕರ ಕರುಣದೊಳಿಂ
ತೆಂದನು ಚಿಕ್ಕೇಂದ್ರನೊಡನೆ ॥೩೦॥

ಗುರುಲಿಂಗಜಂಗಮಾರ್ಚನೆಯ ನೀ ಮಾಡಿದ
ಪರಿಯೋಳೀ ವರ್ತಮಾನದೊಳು
ನಿರುತನಿರ್ವಂಚನೆಯಿಂದ ಮಾಡುವ ಭ
ಕ್ತರ ಕಾಣೆವೀ ಧರಣಿಯೊಳು ॥೩೧॥

ನೋಡುವೊಡಿಂದ್ರನಿಗಳವಲ್ಲ ಬಿಡದೆ ಕೊಂ
ಡಾಡುವೊಡುರಗವಲ್ಲಭಗೆ
ಕೂಡದೆನುತೆ ಜಗವುಲಿದುದು ಚಿಕ್ಕ ನೀ
ಮಾಡಿದ ಜಂಗಮಾರ್ಚನೆಯು ॥೩೨॥

ಧರೆಯೊಳಚ್ಚರಿಯೆನಿಸುವ ಬ್ರಹ್ಮರಥವನು
ವಿರಚಿಸಿ ಪರಮೋತ್ಸವದೆ
ಚರಲಿಂಗಕೆ ಮಾಡುವರುಂಟೆ ನಿನ್ನವೊ
ಲುರುತರ ಮಹಿಮ ಚಿಕ್ಕೇಂದ್ರ ॥೩೩॥

ಲಿಂಗಭಕ್ತರು ಕೋಟಿಗೊರ್ವನುಂಟವರೊಳು
ಜಂಗಮಭಕ್ತರಪೂರ್ವ
ಜಂಗಮಮುಖ್ಯ ಭಕ್ತಿತ್ರಯವನು ಭಕ್ತ
ಪುಂಗವ ನೀನನುಗೆಯ್ದೆ ॥೩೪॥

೪–೪ **X(ತ,ಕ).**

ನಿನಗೆ ಮೆಚ್ಚಿದೆವು *[ಎ]*ನ್ನಾಣೆ ಕೇಳ್ಕೆ ನಿನ್ನ
ಮನದಭಿಮತವನೆಲ್ಲವನು
ವಿನಯದಿಂದೀಗಳಿತ್ತಪೆನೆಂಬಭವಗೆ
ಜನಪತಿ ೫[ಚಿಕ್ಕ]೫ನಿಂತೆಂದ ॥೩೫॥

ಪುರಹರ ನಿನ್ನ ಪೂಜಿಪ ಭಕ್ತರ ಕಿಂ
ಕರ ಕಿಂಕರ ನಾನೆಂದು
ಹುರುಳಿಲ್ಲದುದನರಿದ೬ದ೬ರೊಳು ಹುರುಡಿಸಿ
ಕರೆಗಣ್ಮಿ ನುಡಿವುದುಚಿತವೆ ॥೩೬॥

ನೀನಾಡಿಪ ಲೀಲಾಸೂತ್ರದ ಬೊಂಬೆಯಾ
ನೆನಗುಳಿದ ಮಾತೇಕೆ
ಅನಾದಿಯೊಳು ತೋರಿದ ಸರ್ಪನ ನದಿ
ಗೇನರ್ಚನೆಯನು ಮಾಡುವೆವೆ(?) ॥೩೭॥

ಏನೆಂದುಸುರಬಾರದ ಪರತರ ಸಚ್ಚಿ
ದಾನಂದಮಯ ನಿನ್ನೊಳೊಂದಿ
ನಾನೆಂಬುದಳಿದು ನೀನಾದ ಬಳಿಕ ಮ
ತ್ತೇನುಂಟು ಬಯಸುವ ಪದವು ॥೩೮॥

ಬೇಡುವುದದು ಶಿವಭಕ್ತರ ಮತವಲ್ಲ
ಬೇಡಿಸಿಕೊಂಡು ಕೊಡುವುದು
ಆಡಲೇನದು ನಿಮಗುಚಿತವಲ್ಲೆಂದುದು
ನಾಡೆ ಪುರಾತನ ವಚನ ॥೩೯॥

ಬೇಡುವುದಾವುದು ತನಗಿಲ್ಲದುನದ
ಬೇಡಿದೊಡಿಲ್ಲದುದಿಲ್ಲ
ಬೇಡುವುದದು ಕಾಮ ಕಾಮವುಳ್ಳವ ಭವ
ಕೀಡಾಗದತ್ತ ಸಾರುವನು ॥೪೦॥

– ನಿ (ತ,ಕ). ೫–೫ ಚಿಕ್ಕೇಂದ್ರ (ತ,ಕ). ೬–೬ ವ (ತ).

ಎನಲು ನಿಜಾನಂದಮಯನಿರ್ಮಡಿಚಿಕ್ಕ
ನನುವ ಕಂಡಚ್ಚರಿವಡುತೆ
ಮನಸಿಜಹರನು ನಂದೀಶಮುಖ್ಯರೊಳಾ
ತನ ಕೊಂಡಾಡುತಿಂತೆಂದ ॥೪೧॥

ನಿರಹಂಕಾರ ಗುಣಾಂಬುನಿಧಾನ೭[ನು]೭
ನಿರುಪಮ ನಿರ್ಮಲಾತ್ಮಕ೮[ನು]೮
ನಿರತಿಶಯಾನಂದಮಯನೆನಿಸುವ ನಮ್ಮ
ಶರಣನಿರ್ಮಡಿಚಿಕ್ಕನಿರವ ॥೪೨॥

ಗುರುವನರ್ಚಿಸಿ ಗುರುರೂಪಾದ ಲಿಂಗವ
ನಿರದೆ ಭಜಿಸಿ ಲಿಂಗವಾದ
ಪರಮಜಂಗಮವನಾರಾಧಿಸಿ ಪರತತ್ವ
ದಿರವಾದ ಚಿಕ್ಕೇಂದ್ರನಿರವ ॥೪೩॥

ಜಲಜಪತ್ರೋದಕದಂತೆ ಕರ್ದಮ ಕುಂ
ಡಲಿಯಂತೆ ನೆಯ್ ನಾಲಗೆಯ
ವೊಲು ಸಂಸಾರದೊಳ್೯[ದಿ]೯ಲ್ಲದ ನಿ
ರ್ಮಳ ಚಿಕ್ಕೇಂದ್ರನ ನಿಜವ ॥೪೪॥

ಕಂಡಿರೆ ನಂದೀಶ್ವರ ಭೃಂಗಿನಾಥರೆ
ಕಂಡಿರೆ ವೀರಭದ್ರೇಶ
ಕಂಡಿರೆ ನಮ್ಮನಿರ್ಮಡಿಯೆನಿಸಿದ೧೦[ನ]೧೦
ಖಂಡ ಚಿಕ್ಕೇಂದ್ರನ ನಿಜವ ॥೪೫॥

ಎಮ್ಮಿರವಲ್ಲದುಳಿದ ಫಲಪದಗಳ
೧೧[ನೆ]೧೧ಮ್ಮುಗೆಗೊಳನೀ ಮಹಿಮ
ಗಮ್ಮನೆ ದಿವ್ಯಪುಷ್ಪಕಗಳ ಬರಿಸೆನು
ತುಮ್ಮಾಯಗೊಳುತೀಶನೆನಲು ॥೪೬॥

೭-೭ ವ (ತ,ಕ). ೮-೮ ನ (ತ,ಕ). ೯-೯ ದ (ತ,ಕ). ೧೦-೧೦ ದಾ (ತ,ಕ). ೧೧-೧೧ ನ (ತ,ಕ).

ಬಂದಾಗಳೆ ಹೂಮಳೆ ಗರೆವುತೆ ಸುರ
ದುಂದುಭಿಯನು ಮೊಳಗಿಸುತೆ
ಸಂದಣಿಸುತೆ ರುದ್ರಗಣವರರವ[೧೨][ನಿ][೧೨]ಗೆ
ತಂದಿಳುಪಿದರು ಪುಷ್ಪಕವ ॥೪೭॥

ಅಂದವಡೆದು ಮಗಮಗಿಸುತೆ ಗಿರಿರಾಜ
ನಂದನೆಯಡಿಯನೋಲೈಪ
ಇಂದುವದನೆಯರು ಬಂದರು ಭರವಸ
ದಿಂದರಸಿಯರ ಸೇವಿಸಲು ॥೪೮॥

ಬಂದು ದಿವ್ಯಾಂಬರ ನವಮಣಿಭೂಷಣ
ಗಂಧಮಾಲ್ಯಾದಿಗಳಿಂದೆ
ಅಂದಗೊಳಿಸಿ ನಿಜಮಾಡಗಳೊಳು ಮುದ
ದಿಂದಿಡುವರೆಲ್ಲರನು ॥೪೯॥

ನಡೆನೋಡುತೆ ಬಣ್ಣಿಸಿ ಕೊಂಡಾಡುತೆ
ಬಿಡದೆ ಜಯಧ್ವನಿಗೊಡುತೆ
ಸಡಗರಿಸುತೆ ರಂಭೆ[೧೩][ಯೂರ್ವಸಿ][೧೩] ನೃತ್ಯ[೧೪]
ಮುಂಗಡೆಯೊಳಾಡಿಸುತುಘೇಯೆನುತೆ ॥೫೦॥

ಗಿರಿಜೆ ಸಹಿತ ವೃಷಭನನೇರಿ ನಂದೀ
ಶ್ವರ ಮುಖ್ಯಗಣವರರೊಡನೆ
ಹರನವ[೧೫][ರೇ][೧೫]ರಿದ ಪುಷ್ಪಕ ಸಹವಾಗಿ
ತೆರಳಿದನಾಗಳೇನೆಂಬೆ ॥೫೧॥

ಮೊಳಗುವ ದೇವದುಂದುಭಿ ಪೂರೈಸುವ
ವಿಳಸಿತ ಶಂಖ ಸೂಳೈಸಿ
ಉಲಿವ ಕಾಳೆಗಳ ಹೆಕ್ಕಳಿಪ ಗಣಂಗಳ
ಕಳಕಳ ನಿನದವೊಪ್ಪೆಸೆಯೆ ॥೫೨॥

೧೨–೧೨ ರಿ (ತ,ಕ). ೧೩–೧೩ X(ತ,ಕ). ೧೪–೧೪ Xವ (ತ,ಕ). ೧೫–೧೫ ನೇ (ತ,ಕ).

ಸುರರು ಹೂಮಳೆಗರೆಯಲು ಚಾಮರವ ಕಿ
ನ್ನರರಿಕ್ಕೆಲದೊಳಿಕ್ಕುತಿರಲು
ನೆರೆದ ಗಣಂಗಳು ಸಡಗರಗೊಳೆ ಮುನಿ
ವರರು ಜಯಧ್ವನಿಗೂಡಲು ॥೫೩॥

ಅಡರ್ದುವಂಬರಮಾರ್ಗದೊಳಿವರೇರಿದ
ನಡೆಮಾಡಗಳು ರಾಜಿಸುತೆ
ಅ[೧೬][ಡಕಿಲಡಕಿ][೧೬]ಲುಗೊಂಡಿರ್ಪ ಲೋಕಂಗಳ
ಗಡಣದೊಳತಿ ವಿಭವದೊಳು ॥೫೪॥

ಆ ಸತ್ಯಲೋಕವ ದಾಂಟಿ ಸೇರಿದುವು ವಿ
ಳಾಸದೊಳಾ ಪುಷ್ಪಕಗಳು
ಶ್ರೀ ಶಿವಲೋಕದೊಳೆಸೆವ ಪರಮ ಕೈ
ಲಾಸಪರ್ವತದಗ್ರವನು ॥೫೫॥

ಜಗಜಗಿಸುತ ಕೋಟಿದಿನಪರ ಶತಕೋಟಿ
ಮೃಗಲಕ್ಷ್ಮರ ಕೋಟಿಕೋಟಿ
ಸೊಗಯಿಪ ಮಿಂಚಿನಗೊಂಚಲ ಬೆಳಗಿಗೆ
ಮಿಗಿಲೆನೆ ಮೆರೆವುದು ಶೈಲ ॥೫೬॥

ಪರಿವ ಸೊದೆಯ ಬಿಡದುಂಡು ಬೆಳೆವ ಕಲ್ಪ
ತರುಗಳ ಮಕರಂದವೊಸರಿ
ಹರಿವ ಹೊನಲ ತಡಿಗಳೊಳು ರುದ್ರಾಕ್ಷಿಯ
ಮರಗಳೊಪ್ಪಿಹವಂತಲ್ಲಿ ॥೫೭॥

ವೇದಪುರಾಣಾಗಮಶಾಸ್ತ್ರಂಗಳ
ನೋದಿ ಬಿಡಲ[೧೭][ವು][೧೭]ಗಳನು
ಬೋಧಿಪ ಪಂಡಿತವಕ್ಕಿಗಳಲ್ಲಿ ವಿ
ನೋದಿಪವೆನಲೇನನೆಂಬೆ ॥೫೮॥

೧೬–೧೬ ಡೀಕಿಲುಕೀ(ತ,ಕ). ೧೭–೧೭ X(ತ,ಕ).

ಆ ನಗದಗ್ರದೊಳೆಸೆವ ಕೈಲಾಸ ಮ
ಹಾನಗವನತಿಮುದದಿ
ಆ ನಡೆಮಾಡಂಗಳನೊಡಗೊಂಡು ಭ
ವಾನಿಯರಸನೊಳಪೊಕ್ಕ ॥೫೯॥

ಪರಮವೈಭವದೊಳಖಿಳಗಣವರರೊಡ
ವೆರಸಿಯೋಲಗಶಾಲೆಗೆಯ್ದಿ
ವರವೃಷಭೇಂದ್ರನಿಳಿದು ಮೃಗೇಂದ್ರ ವಿ
ಷ್ಟರದಗ್ರದೊಳು ಮಂಡಿಸುತೆ ॥೬೦॥

ಕುವರ ತೋಟೇಂದ್ರನಿರ್ಮಡಿಚಿಕ್ಕಭೂವರ
ಗವರ ರಾಣಿಯರೆಲ್ಲರಿಗೆ
ತವದಿರ್ಪ ಸಾಮೀಪ್ಯಪದವನಿತ್ತನು ಪರ
ಶಿವ ಚೆನ್ನಮಲ್ಲಿಕಾರ್ಜುನನು ॥೬೧॥

ಕುವರ[೧೮][ನು][೧೮] ಕುವರನರಸಿ ಚೆನ್ನಬಸವಮ್ಮ
ನವನಿಪನಿರ್ಮಡಿಚಿಕ್ಕ
ಯುವತಿಯರೊಡಗೂಡಿ ಕೈಲಾಸಪುರದೊಳು
ಶಿವನ ಸನ್ನಿಧಿಯೊಳೊಪ್ಪಿದರು ॥೬೨॥

ಶ್ರೀಮದಗೇಂದ್ರಕನ್ಯಾರತ್ನವಿಳಸಿತ
ವಾಮಶರೀರಾಭಿರಾಮ
ಕಾಮವಿರೋಧಿ ಕೈಲಾಸದೊಳೆಸೆದನು
ಶ್ರೀಮಲ್ಲಿಕಾರ್ಜುನನಿತ್ತ ॥೬೩॥

ಒಂದು ನೆವದೆ ಪರದೇಶವನೈದಿದ
ನಂದನಾಗ್ರಣಿ ಸರ್ಪೇಂದ್ರ
ಬಂದನೀ ವಾರ್ತೆಯ ಕೇಳದ ಮುನ್ನವಾ
ನಂದವ ಜನಕೊದಗಿಸುತೆ ॥೬೪॥

೧೮–೧೮ (ತ,ಕ).

ಪರಶಿವಮೂರ್ತಿ ಬೋಳೇಶ್ವರನಾತನ
ಕರೆಸಲಾ ಕುವರ ಸಪ್ಪೆಂದ್ರ
ಭರವಸದೊಳೆ ಸಾಷ್ಟಾಂಗವೆರಗುತೆದ್ದು
ಕರಕಮಲಂಗಳ ಮುಗಿದು ॥೧೫॥

ವರಗುಣಭೂಷಣ ಸೂನೃತಭಾಷಣ
ದುರಿತಕರ್ದಮಶೋಷಣನೆ
ಕರುಣಾಕರ ಸಲಹೆಂದು ಬೋಳೇಶನ
ಚರಣಕ್ಕೆ ಪಣೆಯ ಚಾಚಿದನು ॥೧೬॥

ಭಯಭಕ್ತಿಯೊಳೆರಗಿರ್ಪ ಸಪ್ಪೇಂದ್ರಗ
ಭಯಹಸ್ತವಿಟ್ಟು ಮಂಡೆಯೊಳು
ಜಯಜಯವೆಂದೆತ್ತಿಯಪ್ಪಿ ಬೋಳೇಶನು
ದಯದೊಳಾತನ ನಿಟ್ಟಿಸುತೆ ॥೧೭॥

ಸಿರಿನೊಸಲೊಳು ಭಸಿತವನಿಟ್ಟು ಪಟ್ಟವ
ಹರುಷದಿ ಕಟ್ಟಿ ಸಪ್ಪೇಂದ್ರ
ಸ್ಥಿರರಾಜ್ಯವನಾಳೆಂದು ಬೋಳೇಶ್ವರ
ಹರಸಿ ಶಾಸೆಯನಿಟ್ಟನೊಲಿದು ॥೧೮॥

ಕಾಣಿಸಿಕೊಂಡುದಾತನ ಚೆನ್ನಡಿಗಳ
ರಾಣುವೆ ಹೆಚ್ಚಿ ಹೆಕ್ಕಳಿಸಿ
ಪ್ರಾಣಬಂದಂತೆ ಸಂತಸದೊಳೋಲೈಸಿತು
ಕ್ಷೋಣಿಪ ಸಪ್ಪೇಂದ್ರನನು ॥೧೯॥

ಸುತ್ತಣ ದೊರೆದೊರೆಗಳು ಬಂದುಡುಗೊರೆ
ಯಿತ್ತು ವಿನಯಪೂರ್ವಕದಿ
ಉತ್ತಮಗುಣನಿಧಿ ಸಪ್ಪೇಂದ್ರನ ಕಂ
ಡತ್ತಿಗೊಳುತಲೈದಿದರು ॥೨೦॥

ಒಡಗೆರೆಮಲ್ಲನಿರ್ಮಡಿಚಿಕ್ಕಭೂವರ
ನಡಸುವ ರಾಯಕಾರ್ಯವನು
ಬಿಡದೆ ನಿರ್ವಹಿಸಿ ವಿಖ್ಯಾತಿವಡೆದು ಮು
ಮ್ಮಡಿ ಚಿಕ್ಕೇಂದ್ರನೆನಿಸಿದ ॥೭೧॥

ಅರಿಯದ ಕಲೆ ನುತಿಸ[೧೯][ದ][೧೯] ಕ[೨೦][ವಿ][೨೦] ರಾಜ್ಯವ
ತೊರೆಯದ ರಿಪು ಪೊಡಮಡದ
ನೆರೆಗಲಿ ಪೆಚ್ಚದಿಪ್ಪೆರೆಬರು ಬೆಳ್ಚಸ
ತುರುಗದೆ ತೋರ್ಪ ದಿಕ್ಕುಗ[೨೧][ಳು][೨೧] ॥೭೨॥

ಅವನೊಳು ಮೆರೆಯದ ನಯನೀತಿ ಸದ್ಧರ್ಮ
ಭುವನೊಳಿಲ್ಲವೆಂದೆನಲು
ಅವನೀಶ್ವರ ಸಪ್ಪೇಂದ್ರನ ಸದ್ಗುಣ
ನಿವಹವನೆಂತು ಬಣ್ಣಿಸುವೆ ॥೭೩॥

ಎಂ[೨೨][ದ][೨೨]ನೆ ಈವುದನದು ತಾನಾಗಳೆ
ಬಂದುದು ಕಾವೆನಂಜದಿರು
ಎಂದನೆ ಅದು ಪಣೆಯಕ್ಕರ ಸಪ್ಪೇಂದ್ರ
ನೆಂದ ಸೊಲ್ಲಿನೊಳುಂಟೆ ಸವಡು ॥೭೪॥

ಚಿನ್ನದೊಳಗೆ ಬಣ್ಣ ಹಜ್ಜಳಿಸುವ ಹಚೆ
ರನ್ನದೊಳೆದೆಗೊಳಿಪಂತೆ
ಚೆನ್ನಿಗ ಸಪ್ಪೇಂದ್ರನ ನುಡಿಗಳೊಳೆಲ್ಲ
ನನ್ನಿಯೆ ನೆಲಸಿ ರಂಜಿಪುದು ॥೭೫॥

ಶ್ರುತಿ ವಿರಹಿತನಹಿಪತಿ ಪಯೋವಾ[೨೩][ರಿ][೨೩]ಧಿ
ಸತತಸಭಂಗ ಚಂದ್ರಮನು
ವಿತತ ಕಳಂಕಿಯೆಂದಿವನು ಸಪ್ಪೇಂದ್ರನು
ನ್ನತ ಕೀರ್ತಿ ನಗುತೆ ರಾಜಿಪುದು ॥೭೬॥

೧೯-೧೯ ರ (ತ,ಕ). ೨೦-೨೦ ಲಿ (ತ,ಕ). ೨೧-೨೧ ಳ (ತ,ಕ).೨೨-೨೨ ದೆ (ತ,ಕ). ೨೩-೨೩ ನಿ (ತ,ಕ).

ಕ[೨೪][ರೆ][೨೪]ದೀವ ದಾನಿಯೆನಿಪ ಸಪ್ಪೇಂದ್ರನ
ಕರಕೆಣೆಯೆಂ[೨೫][ದೆ][೨೫]ನಬಹುದೆ
ಪರಿಕಿ[೨೬][ಸೆ][೨೬] ತ್ರಿವಿಧ ಸಂಪದವಾದ ಸುರರತ್ನ
ಸುರತರುವೆನಿಪ ಕಲ್ಮುಮರನ ॥೭೭॥

ಶರಣುಹೊಕ್ಕರ ಸಡ್ಡೆ ಮಾಡದು ಮಲೆತಮ
ತ್ಸರಿಪರಿಗಳಿಗಿಂದ್ರಪದವ
ಅರಿದೆನೆ ಬೀಡದೀವುದು ಸಪ್ಪೇಂದ್ರನ
ಕರಖಡ್ಗದ ಧಾರಾಶಕ್ತಿ ॥೭೮॥

ಸಮರನಿಶ್ಶಂಕ ಸಪ್ಪೇಂದ್ರನ ತೇಜೋ
ದ್ಯುಮಣಿಯೊಗೆಯೆ ರಿಪು[೨೭][ವ][೨೭]ದನ
ಕಮಲಗಳುಡುಗಿದವವರ ದುಗುಡವೆಂಬ
ತಿಮಿರಮುಬ್ಬರಿಸಿತು ಚಿತ್ರ ॥೭೯॥

ಅಳಿಯನೆಂದರಿಗಳು ಸಪ್ಪೇಂದ್ರಗೆ ಜಯ
ಲಲನೆಯನಾಜಿಯೊಳಿತ್ತು
ಬಳುವಳಿಗಾನೆಕುದುರೆಗಳ ಕೊಟ್ಟು ತಾ
ವಳುಕಿ ಬೆಂಗೊಡುತೆ ನಡೆದರು ॥೮೦॥

ಉರುತರವಾದ ನಿಜಾನ್ವಯಮೆಂಬ ನಿ
ರ್ಜರಗಿರಿಯಗ್ರದೊಳೆಸೆವ
ವರರತ್ನಕಲಶವೆನಲು ರಾಜಿಪ ಭಾ
ಸುರತೇಜದೊಳು ಸಪ್ಪೇಂದ್ರ ॥೮೧॥

ತಂಡತಂಡದ ದೊರೆಗಳೊಳು ಚೋಳಂ ಭೇರಿ
ಮಂಡಲಿಕರ ಗಂಡನೆನಿಸಿ
ಚಂಡಪರಾಕ್ರಮಿ ಸಪ್ಪೇಂದ್ರನಧಿಕೋ
ದ್ದಂಡನೊಪ್ಪಿದನಿಳೆ ಪೊಗಳೆ ॥೮೨॥

೨೪–೨೪ ರ (ತ,ಕ). ೨೫–೨೫ ತೆ(ತ,ಕ). ೨೬–೨೬ ಸಿ (ತ,ಕ). ೨೭–೨೭ ದ(ತ,ಕ).

ನಡುನಾಡಗೂಳಿ ವಂಕುಡಿ ನಾರಾಯಣ
ಒಡಗೆರೆಮಲ್ಲ ವೈರಿಗಳ
ಗಡಣವೆನಿಪ ಬಿಂಕದಂಚೆವಿಂಡಿಗೆ ಬರ
ಸಿಡಿಲೆನಿಸಿದನು ಸಪ್ಪೇಂದ್ರ ॥೮೩॥

ಗಡಿಯಂಕಭೀಮ ಸಪ್ಪೇಂದ್ರ ತಂದೆಗೈ
ಮಡಿಯಾಗಿ ನಿಜರಾಜ್ಯವನು
ಮೃಡಮೂರ್ತಿ ಬೋಳೇಶ್ವರನ ಕಾರುಣ್ಯವ
ಪಡೆದು ಪಾಲಿಸುತೊಪ್ಪಿದನು ॥೮೪॥

ಕಲಿಕಾಲದ ವರ್ತನೆಯನು ಕಡೆಗೊತ್ತಿ
ವಿಲಸಿತ ಸದ್ಧರ್ಮದಿಂದೆ
ಅಲಘು ಪರಾಕ್ರಮಗುಣದಿ ಸಪ್ಪೇಂದ್ರನು
ಗೆಲವೆಣ್ಣನೊಲಿಸಿಕೊಂಡಿಹನು ॥೮೫॥

ಕಾರುಣ್ಯವೆ ಕಡೆಗಂಗಳು ಸೊಬಗು ಶ
ರೀರವೆಸೆವ ಸತ್ಯರಸನೆ
ಪಾರಿಜಾತವೆ ಕರವಾದುವೊಯೆನಿಸಿಯು
ದಾರಿ ಸಪ್ಪೇಂದ್ರಗೊಪ್ಪುವವು ॥೮೬॥

ಗುರುಚರಣಾಂಬುಜಭಕ್ತಿ ಲಿಂಗಾರ್ಚನೆ
ಪರಮಜಂಗಮಪೂಜೆಯನು
ಹರಭಕ್ತರಿಗೆ ಸತ್ಕಾರಮನೆಸಗುತೆ
ಹರುಷದೊಳಿಹನು ಸಪ್ಪೇಂದ್ರ ॥೮೭॥

ಕನಕದೊಳಗೆ ಪರಿಮಳ ರಸದಾಳಿಯ
ತನಿಗರ್ವಿನೊಳಗೆದೆಗೊಳಿಪ
ಇನಿವಣ್ಣಾದವೊಲಾದುದು ಶಿವಭಕ್ತಿ
ಜನಪತಿ ಸಪ್ಪೇಂದ್ರನೊಳು ॥೮೮॥

ಧರೆಯೊಳುನ್ನತವೆನಿಪಾ ಶ್ರೀಗಿರಿ ಕಕೋ
ದ್ಗಿರಿಯ ಸುಕ್ಷೇತ್ರಂಗಳಿಗೆ
ಸರಿಯೆನಲುದ್ಧರಿಸಿದನಾ ನೃಪ ಮದ್ದ
ಗಿರಿಯ ಮಲ್ಲೇಶ ಮಂದಿರವ ||೮೯||

ಪರಭೂಪಾಲರ ಮದವನಡಗಿಸುತೆ
ಧರೆಯ ಧರ್ಮದಲಿ ಪಾಲಿಸುತೆ
ಸರಸ ಸತ್ಕವಿಗಳ ಮನ್ನಿಸುತೆ ಭೂ
ವರ ಸರ್ಪೇಂದ್ರನೊಪ್ಪಿದನು ||೯೦||

ವಾರಿಜಭವ ಮಾಧವಪೂಜಿತ ಪಾದ
ವಾರಿಜ ಶಿವನೊಸೆದೀಗೆ
ಕಾರುಣ್ಯದಿಂ ಸರ್ಪೇಂದ್ರಗೆ ದೀರ್ಘಾಯು
ರಾರೋಗ್ಯೈಶ್ವರ್ಯಗಳ ||೯೧||

ಧರಣಿ ಶಶಾಂಕ ದಿವಾಕರ ನಿರ್ಜರ
ಗಿರಿಯಿರ್ಪನ್ನೆಗವಿರಲಿ
ವರ ಮದ್ದಗಿರಿ ಶಾಸನಾಂಕನನ್ವಯ ಭಾ
ಸುರರಾಜ್ಯ ವೈಭವದಿಂದೆ ||೯೨||

ಮಳೆಗಳಾಗಲಿ ಇಳೆ ಬೆಳೆಯಲಿ ಹೈನು ವೆ
ಗ್ಗಳಿಸಿ ಕರೆಯಲಿ ಸಜ್ಜನರು
ತಳೆಯಲಿ ಸಂತೋಷವ ಶಿವಧರ್ಮವ
ಗ್ಗಳಿಸ[೨೮][ಲೀ][೨೮] ಕೃತಿಯಾದ ಮೇಲೆ ||೯೩||

ಗಿರಿಜೆಯ ಕೊರಲೊಳೆಸೆವ ಮಂಗಳಸೂತ್ರ
ವಿರುತಿಹನ್ನೆಗಮಿರುತಿರ[೨೯][ಲಿ][೨೯]
ಸುರುಚಿರ ಕರ್ಣರಸಾಯನವೆನಿಸೀ
ವರಕೃತಿ ಮಿಗೆ ರಾಜಿಸುತೆ ||೯೪||

೨೮-೨೮ ವಿ (ತ,ಕ). ೨೯-೨೯ ಲು (ತ,ಕ).

ನುತ ಜಾತಿ ನೀತಿ ಲಕ್ಷಣ ಗುಣರಸವಲಂ
ಕೃತಿ ಸರಸೋಕ್ತಿ ಸದ್ವೃತ್ತಿ
ಕೃತಿ[೩೦][ಕನ್ನೆ][೩೦] ಯ ಸಿದ್ಧಮಲ್ಲೇಶ ಚಿಕ್ಕಭೂ
ಪತಿಗೆ ಮಾಡಿ*[ದ]*ನು ಮದುವೆಯ ॥೯೫॥

ಇದು ಬಿಜ್ಜವರದಿರ್ಮಡಿಚಿಕ್ಕಭೂಪನ
ಸದಮಳ ಚಾರುಚಾರಿತ್ರ
ಇದನೋದಿ ಲಾಲಿಪ ಸಜ್ಜನಜನ
ಕೊದವಿಪನೀಶ ಸಂಪದವ ॥೯೬॥

ಕ್ಷಿತಿಪತಿಯಿರ್ಮಡಿಚಿಕ್ಕಭೂಪಾಲನ
ಕೃತಿಯನುನ್ನತ ನಿಜಕೀರ್ತಿಯ
ಜಿತಮಲ್ಲಿಕಾರ್ಜು[೩೧][ನ][೩೧]ನುರೆ ಪೇಳ್ದ ನೆರೆ ಲೋಕ
ನುತ ಚೆನ್ನಮಲ್ಲಿಕಾರ್ಜುನನು ॥೯೭॥*

ನಳಿತೋಳು ಶಾಖೆ ಸೆಳ್ಳುಗುರಲರ್ದೊಂಬೆ ಚೆಂ
ದಳದಳಿರಾಗೆ ಪಾರ್ವತಿಯ
ಲಲಿತಯೌವನವನಚೈತ್ರನೆನಿಪ ಶಿವ
ನೊಲಿದೆಮಗೀಗೆ ರಾಗವನು ॥೯೮॥

ಅರ್ಣವಮುದ್ರಿತ ವಸುಧಾತಳದೊಳು
ವರ್ಣಮಾಗಿಂಪುದೋರ್ಪ
ಕರ್ಣರಸಾಯನಮೆನಿ[೩೨][ಪ][೩೨] ಈ ಕಾವ್ಯ ಸಂ
ಪೂರ್ಣ ಮಂಗಳಮಹಾ ಜಯ[೩೩]ತು[೩೩] ॥೯೯॥

[೩೪]**ಸಪ್ತದಶ ಸಂಧಿ ಸಂಪೂರ್ಣಂ**[೩೪]

❖❖

೩೦-೩೦ ತನ್ನ (ತ,ಕ). *-* ದೆ (ತ,ಕ). ೩೧-೩೧ ನಾ (ತ). ನನಾ (ಕ). * ಈ ಪದ್ಯವು ಕ ಪ್ರತಿಯ ೧೭ನೆಯ ಸಂಧಿಯ ಮುಕ್ತಾಯದ ನಂತರವಿದೆ. ೩೨-೩೨ ಸಿ (ತ,ಕ). ೩೩-೩೩ ವು (ಕ). ೩೪-೩೪ ಅಂತು ಸಂಧಿ ೧೭ಕ್ಕಂ ಪದನು ೧೫೬೦ಕ್ಕಂ ಮಂಗಳ ಮಹಾಶ್ರೀ (ತ,ಕ).

ಅನುಬಂಧ

❖

೧. ಪದ್ಯಗಳ ಅಕಾರಾದಿ

ಥ

ದ

❖❖

೨. ಕಠಿಣ ಪದಕೋಶ

ಅ

ಅಂಕ–ಕಪ್ಪು, ಗುರುತು
ಅಂಕದಾನೆ–ಪಟ್ಟದ ಆನೆ(?)
ಅಂಕಮಾಲೆ–ನಾಮಾವಳಿ
ಅಂಗಜ–ಕಾಮ
ಅಂಗಜಹರ–ಶಿವ
ಅಂಗಸಂಭವ–ಕಾಮ
ಅಂಗಜಮಂತ್ರಾಧಿದೇವಿ–ರತಿ
ಅಂಗುಷ್ಠ–ಹೆಬ್ಬೆರಳು
ಅಂಘ್ರಿ–ಪಾದ
ಅಂಜನ–ಕಾಡಿಗೆ
ಅಂಡಲೆ–ಕಾಡು
ಅಂಡಿಸು–ಸಮೀಪಿಸು
ಅಂಡುಗೊಳ್ಳು–ಹತ್ತಿಕೊಳ್ಳು
ಅಂಡೆ–ಜೀಕಳಿ
ಅಂತಕ–ಯಮ
ಅಂತಃಪುರ–ರಾಣೀವಾಸ
ಅಂದಣ–ಪಲ್ಲಕ್ಕಿ
ಅಂದವಳಿ–ರೂಪುಗೆಡು
ಅಂಬಕ–ಕಣ್ಣು
ಅಂಬರ–ಆಕಾಶ
ಅಂಬಿಕೆ–ಪಾರ್ವತಿ
ಅಂಬು–ನೀರು
ಅಂಬುಧಿ–ಸಮುದ್ರ
ಅಂಬುಕೇಳಿ–ನೀರಾಟ
ಅಂಬುರುಹಾಂಬುಯೋಗ–ಕಮಲ ಮತ್ತು ನೀರಿನ ಸಂಯೋಗ
ಅಂಬೋರುಹ–ಕಮಲ
ಅಕಲಂಕ–ಕಲಂಕರಹಿತ
ಅರ್ಕ–ಸೂರ್ಯ
ಅಗಜೆ–ಪಾರ್ವತಿ
ಅಗಧರ–ವಿಷ್ಣು
ಅಗರು–ಸುಗಂಧದ್ರುವ್ಯ
ಅಗಳ–ಕೋಟೆಯ ಹೊರಗೆ ಸುತ್ತಲಿರುವ ತಗ್ಗು
ಅಗುರ್ವಿಸು–ಭಯಂಕರವಾಗಿರು
ಅಗೇಂದ್ರ–ಪರ್ವತಗಳ ಒಡೆಯ
ಅಗ್ಗಳಿಕೆ–ಶ್ರೇಷ್ಠತೆ
ಅಗ್ಗಳಿಪ–ಹೆಚ್ಚಾಗುವ
ಅಗ್ರಹಾರ–ಬ್ರಾಹ್ಮಣರಿಗೆ ದತ್ತಿಯಾಗಿ ನೀಡಿದ ಗ್ರಾಮ
ಅರ್ಘ್ಯ–ಪೂಜಾಜಲ
ಅಚ್ಚರಿಸಿ(ಧ್ಸ)–ಅಪ್ಸರಸ್ತ್ರೀ
ಅಚಿಂತ್ಯ–ಮನಸ್ಸಿಗೆ ನಿಲುಕದ
ಅಚ್ಚು–ಇಂದ್ರಿಯ(?)
ಅಜಾಂಡ–ಭೂಮಿ, ವಿಶ್ವ
ಅರ್ಜುನಶರದ–ಅರ್ಜುನನಿಗೆ ಪಾಶುಪತಾಸ್ತ್ರವನ್ನು ನೀಡಿದವ, ಶಿವ
ಅಟಮಟ–ಮೋಸ
ಅಟ್ಟಣೆ–ಎತ್ತರವಾದ ಗೋಪುರ
ಅಟ್ಟು–ಕಳಿಸು
ಅಡಸು–ಉಂಟಾಗು
ಅಡುವಳ–ಅಡಿಗೆಯವ
ಅಣಿಯರ–ಅತಿಶಯ, ನಯ

ಅಣುಗ–ಮಗ
ಅಣೆ–ಅಪ್ಪಳಿಸು, ಹೊಂದಿಕೊಳ್ಳು
ಅಣೆವರೆ–ಆವರಿಸು
ಅರ್ಣವ–ಸಮುದ್ರ
ಅಣ್ಪು–ಅಂಟುವಿಕೆ, ಲೇಪನ
ಅಣ್ಮು–ಪರಾಕ್ರಮ, ಶೌರ್ಯ
ಅತುಳ–ಅಧಿಕ
ಅತ್ಯತಿಷ್ಠದ್ದಶಾಂಗುಲ–(ಪರಮಾತ್ಮನು ಬ್ರಹ್ಮಾಂಡವನ್ನೆಲ್ಲ ತುಂಬಿಕೊಂಡು) ದಶಾಂಗುಲವನ್ನು ಮೀರಿ ಇರುತ್ತಾನೆ.
ಅಧರ–ಕೆಳದುಟಿ
ಅಧ್ವಗ–ದಾರಿಕಾರ
ಅನಲ–ಅಗ್ನಿ
ಅನವರತ–ಯಾವಾಗಲೂ
ಅನಾಮಿಕ–ಅಪ್ರಸಿದ್ಧ, ನಾಮವಿಲ್ಲದ
ಅನಿಮಿಷ–ದೇವತೆ
ಅನಿಮಿಷವಾಸ–ದೇವಲೋಕ
ಅನುಗೊಳಿಸು–ಸಜ್ಜುಗೊಳಿಸು
ಅನುಚರ–ಸೇವಕ
ಅನುದಪ್ಪು–ಕ್ರಮತಪ್ಪು
ಅನುನಯ–ಪ್ರೀತಿ
ಅನುವರ–ಯುದ್ಧ
ಅನುವರ್ತಿಸು–ತೊಡಗು
ಅನ್ನೆಗ–ಅಲ್ಲಿಯ ವರೆಗೆ
ಅನೃತ–ಸುಳ್ಳು
ಅನ್ವಯ–ವಂಶ
ಅಪರಾಚಳ–ಪಶ್ಚಿಮಪರ್ವತ
ಅಪವರ್ಗ–ಮೋಕ್ಷ
ಅಪಹೃತ–ಅಪಹರಿಸಲ್ಪಟ್ಟ
ಅಪ್ಸರಾ–ದೇವತೆ
ಅಪಾಂಗ–ಕಡೆಗಣ್ಣು, ನೋಟ
ಅಬ್ಬೆ–ತಾಯಿ
ಅಭಯ–ರಕ್ಷಾರೂಪದ ಆಶೀರ್ವಾದ
ಅಭವ–ಶಿವ
ಅಭಿಧಾನ–ಹೆಸರು
ಅಭಿಮತ–ಇಚ್ಛೆ, ಆಶೆ
ಅಭಿರತಿ–ಪ್ರೀತಿ
ಅಭ್ರಕ–ಅಬರಂಗ,ಹೊಳೆಯುವ ಧಾತು
ಅಮರ್ದು–ಅಪ್ಪಿಕೊಂಡು
ಅಮರಾದ್ರಿ–ಮೇರುಪರ್ವತ
ಅಮರೇಂದ್ರ–ದೇವೇಂದ್ರ
ಅರ್ಥಿ–ಬೇಡುವವ
ಅರವಕ್ಕಳು–ರಾಜಕುಮಾರರು
ಅರವೆ–ಅರಕಳಿ
ಅರಳ್–ಹೂವು
ಅರಾತಿ–ವೈರಿ
ಅರಿದಾಳ(ಧ)–ಹರಿತಾಳ, ಹಳದಿಬಣ್ಣದ ಧಾತು
ಅರುಣಾಂಬು–ರಕ್ತ
ಅರುಮೊಗ–ಷಣ್ಮುಖ
ಅರ್ಯಮ–ಸೂರ್ಯ
ಅಲಗು–ಖಡ್ಗ
ಅಲುಪು–ಸಂತೋಷ, ಸುಖ
ಅಲರು–ಹೂವು
ಅಲರಂಬ–ಕಾಮ, ಮನ್ಮಥ
ಅಲರ್ವೊಡೆಯ–ವಿಷ್ಣು
ಅಲಸು–ಆಯಾಸಗೊಳ್ಳು, ಬೇಸರಪಡು, ಆಲಸ್ಯಪಡು
ಅವಗಡೆ–ಸಾಹಸ
ಅವಗವಿಸು–ಪಡೆ, ಹೊಂದು
ಅವಧರಿಸು–ಕೇಳು
ಅವನಿ–ಭೂಮಿ
ಅವಸರದವರು–ಸಮಯೋಚಿತ ಸೇವೆ ಮಾಡುವವರು
ಅವ್ವಳಿಸು–ಜಿಗಿ, ಪುಟಿ
ಅಶ್ರು–ಕಣ್ಣೀರು
ಅಷ್ಟಭೋಗ–ಎಂಟುತೆರನಾದ ಭೋಗಗಳು
ಅಷ್ಟಾದಶ ವಿದ್ಯೆ–೧೮ ಬಗೆಯ ವಿದ್ಯೆಗಳು: ೧೪ ವಿದ್ಯೆಗಳು(=೪ ವೇದ, ೬ ವೇದಾಂಗ ಮೀಮಾಂಸೆ, ನ್ಯಾಯ, ಪುರಾಣ, ಧರ್ಮಶಾಸ್ತ್ರ),ಉಪವೇದಗಳು(=ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಅರ್ಥಶಾಸ್ತ್ರ)

ಅಷ್ಟಾಂಗಯೋಗ–೮ ತೆರನಾದ ಯೋಗಗಳು:
(ಯಮ, ನಿಯಮ, ಆಸನ,
ಪ್ರಾಣಾಯಮ, ಪ್ರತ್ಯಾಹಾರ, ಧ್ಯಾನ,
ಧಾರಣ, ಸಮಾಧಿ)
ಅಷ್ಟವಿಭೂತಿ–೮ ತೆರನಾದ ವೈಭವಗಳು
ಅಸಮಾಕ್ಷ–ಶಿವ
ಅಸಿಯಳು–ಕೋಮಲೆ
ಅಸು–ಪ್ರಾಣ
ಅಸುಗೆ–ಅಶೋಕವೃಕ್ಷ
ಅಸ್ತು–ಆಗಲಿ
ಅಸ್ತಗಿರಿ–ಪಶ್ಚಿಮ ಪರ್ವತ
ಅಸ್ತೇಯ–ಕಳುವು ಮಾಡದಿರುವುದು
ಅಹಿ–ಸರ್ಪ, ಹಾವು
ಅಳಕ–ಕೂದಲು, ಮುಂಗುರುಳು
ಅಳವಳಿ–ಶಕ್ತಿಗುಂದು
ಅಳವು–ಸಾಮರ್ಥ್ಯ
ಅಳಿ–ನಾಶ
ಅಳಿಜಸ–ಅಪಕೀರ್ತಿ
ಅಳ್ಕಿರಿ–ಅಂಜಿಸು
ಅಳುಪು–ದುರಾಶೆಪಡು

ಆ

ಆಂತ–ಧರಿಸಿದ
ಆಕರ್ಣಿಸು–ಕೇಳು
ಆಕಲಿತ–ಕೂಡಿದ
ಆಗಮವಿದ–ಆಗಮಬಲ್ಲವ
ಆಗರ–ನೆಲೆ, ವಾಸಸ್ಥಳ
ಆಚಮನ–ಅಂಗೈಯಲ್ಲಿಯ
ನೀರನ್ನುಮಂತ್ರಪೂರ್ವಕವಾಗಿ
ಸೇವಿಸುವುದು
ಆಜಿ–ಯುದ್ಧ
ಆರ್ಜಿಸು–ಗಳಿಸು
ಆಟಿಸು–ಆರ್ಭಟಿಸಿ ಮೇಲೆ ಬೀಳು, ಬಯಸು
ಆಡುಂಬೊಲ–ಆಟದ ಬಯಲು
ಆಣ್ಮ–ಒಡೆಯ, ಗಂಡ
ಆತ್ಮಜ–ಮಗ
ಆನತನಾಗು–ನಮಸ್ಕರಿಸು
ಆನಲಾರದೆ–ಎದುರಿಸದೆ
ಆನು–ಹೊರು, ಹೊಂದು
ಆಯತ–ಬಂದುದು
ಆಯು–ಆಯುಷ್ಯ
ಆರಡಿ–ದುಂಬಿ, ತೊಂದರೆ
ಆರವೆ–ಉದ್ಯಾನ, ತೋಟ
ಆರಾಮ–ಉಪವನ
ಆರೈ–ವಿಚಾರಿಸು
ಆಲ್–ಗಟ್ಟಿಯಾಗಿ ಕೂಗು
ಆಶಾಂತ–ದಿಕ್ಕಿನ ತುದಿಯವರೆಗೆ
ಆಸಕ–ಆಸಕ್ತ
ಆಸ್ಯ–ಮುಖ
ಆಹವ–ಯುದ್ಧ
ಆಹ್ವಯ–ಹೆಸರು
ಆಳಿ–ಸಮೂಹ
ಆಳ್ವೇರಿ–ಕೋಟೆಯ ಎತ್ತರ ಗೋಡೆ

ಇ

ಇಂಗಡ–ವಿಂಗಡ
ಇಂಗಡಲು–ಹಾಲ್ಗಡಲು, ಕ್ಷೀರಸಾಗರ
ಇಂಗದಿರ–ಚಂದ್ರ
ಇಂಚರ–ಸವಿಯಾದ ಸ್ವರ
ಇಂದಿರೆ–ಲಕ್ಷ್ಮಿ
ಇಂದೀವರ–ನೀಲಕಮಲ
ಇಂದುಕಲಾಧರ–ಶಿವ
ಇಂದುಕಳೆ–ಚಂದ್ರಕಲೆ
ಇಂದುಮಂಡಲ–ಚಂದ್ರಮಂಡಲ
ಇಂದುಶೇಖರ–ಶಿವ
ಇಂದ್ರಚಾಪ–ಕಾಮನಬಿಲ್ಲು
ಇಂದ್ರಜಾಲಕ–ಮಾಟಮಾಡುವವ
ಇಂದ್ರಧನು–ಕಾಮನಬಿಲ್ಲು
ಇಂದ್ರನ ದಿಕ್ಕು–ಪೂರ್ವದಿಕ್ಕು
ಇಂದ್ರನೀಲ–ನೀಲಿಬಣ್ಣದ ರತ್ನ
ಇಂಬು–ಸ್ಥಲ
ಇಂಬುಗೊಡು–ಆಶ್ರಯಕೊಡು

ಇಕ್ಕಡಿಗೆಯ್–ಎರಡು ತುಂಡುಮಾಡು
ಇಕ್ಕೆ–ವಾಸಸ್ಥಳ
ಇಕ್ಷುಚಾಪ–ಕಾಮ
ಇಕ್ಷುವಾಟಿ–ಕಬ್ಬಿನ ತೋಟ
ಇಚ್ಚೆಗಾರ್ತಿ–ರತಿ
ಇಟ್ಟಣಿಸು–ನಿಬಿಡವಾಗು, ಮುತ್ತು, ಆಕ್ರಮಿಸು
ಇಟ್ಟಳ–ಮನೋಹರ
ಇಟ್ಟಿ–ಈಟಿ, ಖಡ್ಗ
ಇಡಿಕಿಜಿ–ದಟ್ಟವಾಗು
ಇನ–ರವಿ, ಸೂರ್ಯ
ಇನಿಯ–ನಲ್ಲ, ಗಂಡ
ಇಬ್ಬರಿ–ಎರಡು ಪಕ್ಕೆ
ಇಭದೈತ್ಯ–ಗಜಾಸುರ
ಇಮ್ಮಾವು–ಸವಿಯಾದ ಮಾವು
ಇಮ್ಮೈ–ಎರಡು ಮೆಯ್
ಇರಕು–ಸಂದು
ಇರುಬು–ತಗ್ಗು
ಇರ್ಕುಳಿಗೊಳ್–ಸೆಳೆದುಕೊಳ್ಳು
ಇಳೆ–ಭೂಮಿ

ಈ

ಈರೈದು–ಹತ್ತು

ಉ

ಉಕ್ಕಡ–ಉತ್ಕಟ
ಉಗು–ಉಕ್ಕು, ಚೆಲ್ಲು
ಉಗ್ಗಡ–ಅತಿಶಯವಾದ
ಉಗ್ಗಡದ–ಸಾರಿಹೇಳುವ
ಉಗ್ಘಡಿಸು–ಜಯಘೋಷಿಸು
ಉಗ್ರಾಣ–ಧ್ಯಾನ ಸಂಗ್ರಹಮನೆ
ಉಚ್ಚಳಿಸು–ಮೇಲೆದ್ದು ಹೋಗು
ಉಡಿ–ಮುರಿ
ಉಡು–ನಕ್ಷತ್ರ
ಉಡುಗಿಸು–ಸಂಕೋಚಗೊಳಿಸು
ಉಡುಪತಿ–ಚಂದ್ರ
ಉಣ್ಮು–ಹೊರಹೊಮ್ಮು
ಉದಯಾಚಲ–ಪೂರ್ವದಿಕ್ಕಿನ ಪರ್ವತ
ಉದಿತೋದಿತ–ಅಭಿವೃದ್ಧಿಗೊಂಡ
ಉದ್ದಂಡ–ಧೈರ್ಯ, ಬಲವುಳ್ಳ
ಉದ್ಧೂಳನಗೆಯ್–ಲೇಪಿಸಿಕೊಳ್ಳು
ಉಪಸರ–ಸಾಮೀಪ್ಯ
ಉಪಾಯಚತುಷ್ಟಯ–ಸಾಮ, ದಾನ, ಭೇದ, ದಂಡ
ಉಪ್ಪರಗುಡಿ–ಧ್ವಜ
ಉಪ್ಪವಡ–ಏಳುವಿಕೆ
ಉಬ್ಬಟ–ಪರಾಕ್ರಮ, ಶೌರ್ಯ
ಉಬ್ಬಟೆ–ಆರ್ಭಟೆ
ಉಮ್ಮತ್ತ–ಮದ್ದುಗುಣಿಕೆ
ಉಮ್ಮಳಿಸು–ತಳಮಳಿಸು
ಉಮ್ಮೆಯ–ಉಷ್ಣ
ಉರಗ–ಸರ್ಪ
ಉರತ್ರಾಣ–ಎದೆಯನ್ನು ರಕ್ಷಿಸುವ ಸಾಧನ
ಉರವಣೆ–ವೇಗ, ರಭಸ
ಉರುತರ–ಶ್ರೇಷ್ಠವಾದ
ಉರುಪು–ಸುಡು
ಉರುಬೆ–ಭೀಕರತೆ
ಉರೆ–ಚೆನ್ನಾಗಿ
ಉರ್ವರೆ–ಭೂಮಿ
ಉರ್ವಿ–ಭೂಮಿ
ಉರ್ವು–ಹೆಚ್ಚಾಗು
ಉಲಿಪು–ಉಲುಹು, ಧ್ವನಿ

ಊ

ಊಡಿಸು–ಉಣಿಸು, ಕುಡಿಸು
ಊಡು–ಉಣ್ಣಿಸು
ಊಣಯ–ಊನ, ಚ್ಯುತಿ
ಊಳಿಗ–ಸೇವೆ, ಕೆಲಸ

ಎ

ಎಕ್ಕಡ–ಪಾದರಕ್ಷೆ
ಎಕ್ಕಡಿಗ–ಘನವಂತ
ಎಕ್ಕಳ–ಕೊಬ್ಬಿದುದು

ಎಕ್ಕಲ–ಹಂದಿ
ಎಗ್ಗ–ದಡ್ಡ, ಮೂರ್ಖ
ಎಟ್ಟದ–ಕೈಗೆ ನಿಲುಕದ
ಎಡವಂಕ–ಎಡಬದಿ
ಎಡ್ಡ–ಸುಂದರ
ಎಣೆವಕ್ಕಿ–ಚಕ್ರವಾಕಪಕ್ಷಿ
ಎಣೆವಡೆ–ಹೋಲಿಕೆಗೆ ಬರು
ಎಣ್ಣೆಯಂಬಿಲದಂತೆ–ಎಣ್ಣೆ ಮತ್ತು ಅಂಬಿಲಗಳ ಹಾಗೆ(ಕೂಡಿಕೊಳ್ಳದೆ)
ಎದೆಗೆಡು–ಅಂಜು
ಎದೆಗೊಳಿಸು–ಶೋಭಿಸು
ಎದೆಗೊಳ್ಳು–ಹೃತ್ಪೂರ್ವಕ ಸ್ವೀಕರಿಸು
ಎಬ್ಬಟ್ಟಿ–ಎಬ್ಬಿಸಿ
ಎಬ್ಬಟ್ಟು–ಎಬ್ಬಿಸಿ ಓಡಿಸು
ಎಮ್ಮುವನ್–ನಮ್ಮನ್ನು
ಎಯ್ತರ್ಪ–ನಡೆದುಬರುವ
ಎರಕ–ಪ್ರೀತಿ
ಎರಡಳಿ–ಭೇದವಳಿ
ಎರಲೆ–ಜಿಂಕೆ
ಎರವು–ತಿರಸ್ಕಾರ, ಭೇದಭಾವ
ಎರೆಬ–ಯಾಚಕ
ಎರೆಯ–ರಾಜ, ಒಡೆಯ
ಎಲರು–ಗಾಳಿ
ಎಸಕ–ಚೆಲುವಿಕೆ, ಬೆಡಗು
ಎಸುಗೆ–ಬಾಣಪ್ರಯೋಗಿಸುವಿಕೆ
ಎಳಗಂದಿ–ಎಳೆಯ ಕರುವಿರುವ ಪ್ರಾಣಿ
ಎಳಸಿ–ಬಯಸಿ
ಎಳಸು–ಬಯಸು
ಎಳವೆರೆ –ಬಾಲಚಂದ್ರ
ಎಳೆವಾಳೆ–ಎಳೆಯ ಮೀನು
ಎಳ್ತುವೊಜಂಗ–ಗೂಳಿಯಂತಹ ವಿಟ

ಏ

ಏಕ ಏವ ರುದ್ರೋ–ಅದ್ವಿತೀಯ ರುದ್ರ
ಏಕೋತ್ತರಶತಸ್ಥಲ–ನೂರೊಂದುಸ್ಥಲ
ಏಣ–ಜಿಂಕೆ
ಏರ್–ಗಾಯ
ಏರುಂಜವ್ವನ–ಏರಿಕೆಯ ವಯಸ್ಸು
ಏಳಿಪ–ಹೀಯಾಳಿಸು
ಏಳಿಸು–ತಿರಸ್ಕರಿಸು

ಐ

ಐದು–ಹೋಗಿ
ಐದೆ–ಚೆನ್ನಾಗಿ

ಒ

ಒಂದು–ಸೇರು, ಕೂಡು
ಒಕ್ಕಲ–ಕುಟುಂಬ, ಬಳಗ
ಒಕ್ಕಲಿಕ್ಕು–ಹಾಳುಮಾಡು, ನಾಶಮಾಡು
ಒಗಡಿಸು–ತ್ಯಜಿಸು
ಒಗ್ಗಾಗು–ಒಂದಾಗು, ಒಟ್ಟುಗೂಡು
ಒಗ್ಗಿಸು–ಒಂದುಗೂಡಿಸು
ಒಚ್ಚತ–ಸಂತೋಷ
ಒಚ್ಚರ–ಒಂದುಸರ(?)
ಒಟ್ಟಿಲ–ಗುಂಪು,ರಾಶಿ
ಒಡವೆರಸು–ಕೂಡಿಕೊಳ್ಳು
ಒಡ್ಡಣೆ–ರಾಶಿ, ಗುಂಪು
ಒಡ್ಡು–ಸಮೂಹ
ಒತ್ತಂಬರ–ಬಲಾತ್ಕಾರ
ಒತ್ತು–ಸಮೀಪ
ಒತ್ತೆ–ಸಮೀಪ
ಒಪ್ಪುಳಾಗು–ಒಪ್ಪುವಂಥವಳಾಗು
ಒಬ್ಬುಳಿ–ಗುಂಪು
ಒಯ್ಯನೆ–ಮೆಲ್ಲನೆ
ಒರಲು–ಗೋಳಿಡು
ಒಲವರ–ಪಕ್ಷಪಾತ
ಒಸೆದು–ಪ್ರೀತಿಯಿಂದ
ಒಳತೋಟಿ–ಒಳಜಗಳ
ಒಳ್ಳುಡೆ–ಒಳ್ಳೆಯ ಉಡುಗೆ
ಒಳ್ಳೆ–ನೀರಹಾವು

ಓ

ಓಘ–ಗುಂಪು
ಓಜೆ–ಕ್ರಮ
ಓಡ–ತಲೆಬುರುಡೆ
ಓತದವ–ಸಂತೋಷಿಸದವ
ಓತು–ಪ್ರೀತಿಯಿಂದ
ಓಪ–ಪ್ರಿಯ,ನಲ್ಲ
ಓಪಳ್–ಹೆಂಡತಿ
ಓಲಾಡು–ಸಂತೋಷಪಡು
ಓಲೈಸು–ಸೇವೆಮಾಡು
ಓವು–ಪ್ರೀತಿಸು, ಕಾಪಾಡು
ಓಸರಿಸು–ದೂರಸರಿಸು, ಬದಿಗೆ ಸರಿಸು

ಕ

ಕಂಕಾಲ–ತಲೆಬುರುಡೆ
ಕಂಕುಳ–ಬಗಲು
ಕಂಚುಕಿ–ರಾಣಿವಾಸದ ಸೇವಿಕೆ
ಕಂಠೀರವ–ಸಿಂಹ
ಕಂತು–ಕಾಮ
ಕಂತುಕ(ಧ್ಭ)–ಕಂದುಕ, ಆಟದ ಚೆಂಡು
ಕಂತುಮರ್ದನ–ಶಿವ
ಕಂತೆ–ಸನ್ಯಾಸಿಗಳ ಬಟ್ಟೆ
ಕಂದರ್ಪ–ಕಾಮ
ಕಂಬಿಸು–ಓಡಿಸು(?)
ಕಂಬು–ಶಂಖ
ಕಂಬುಕಂಧರ–ಶಂಖದಂಥ ಕೊರಳು
ಕಾಂಕ್ಷೆ–ಆಸೆ, ಇಚ್ಛೆ
ಕಾಂಚಿ–ಟೊಂಕಪಟ್ಟಿ
ಕಿಂಕರ–ಸೇವಕ
ಕುಂಜರ–ಆನೆ
ಕುಂಡ–ಹಾದರದಿಂದ ಹುಟ್ಟಿದವ
ಕುಂತಳ–ತಲೆಗೂದಲು
ಕುಂದ–ಮೊಲ್ಲೆ, ಮಲ್ಲಿಗೆ
ಕುಂಬಿ–ಬಾಗಿ
ಕುಂಬಿಡು–ನಮಸ್ಕರಿಸು
ಕುಂಭಿನಿಪ–ಅರಸ
ಕೆಂಬರಲ್–ಕೆಂಪುಹರಳು
ಕೊಂಬು–ಊದುವ ವಾದ್ಯ
ಕೌಂಕುಳ–ಬಗಲು
ಕಚ–ತಲೆಗೂದಲು
ಕಜ್ಜಾಯ–ರೊಟ್ಟಿ
ಕಟಕ–ಕಡಗ,ಸೈನ್ಯ
ಕಟ್ಟಳೆಗವಡೆ–ಬೆಳ್ಳಿಬಂಗಾರ ತೂಗುವ ಕವಡೆ
ಕಟಿ–ಸೊಂಟ
ಕಟ್ಟಿದಿರು–ಅತಿ ಸಮ್ಮುಖದಲ್ಲಿ
ಕಠಾರ–ಖಡ್ಗ
ಕಡವಸ–ಹಾಸಿಕೊಳ್ಳುವ ಚರ್ಮ
ಕಡವು–ಒಂದು ಜಾತಿಯ ಜಿಂಕೆ
ಕಡುವಿಣ್ಣ–ಗಟ್ಟಿಯಾದ
ಕಡೆಗಾಲ–ಪ್ರಳಯಕಾಲ
ಕಡೆಸಾರು–ದೂರಸರಿ
ಕತ–ಕಾರಣ
ಕತ್ತಲಿಪ–ಕತ್ತಲವನ್ನುಂಟುಮಾಡುವ,ಕುಂದುತರುವ
ಕದಕದಿಸು–ಕಂಪಿಸು
ಕದಡು–ಮಿಶ್ರಿತದ್ರವ
ಕದಪು–ಗಲ್ಲ, ಕೆನ್ನೆ
ಕದಲಿ–ಕದಳಿ, ಬಾಳೆ
ಕದಂಬಿನಿ–ಸ್ತ್ರೀ
ಕದುಬು–ಮುತ್ತು
ಕದ್ದಾಳ–ವೃಕ್ಷವಿಶೇಷ
ಕನಕಾದ್ರಿ–ಮೇರುಪರ್ವತ
ಕನಲು–ಕೋಪಗೊಳ್ಳು
ಕಪಿಕೇತನ–ಅರ್ಜುನ
ಕಬ್ಬುವಿಲ್ಲ–ಕಾಮ
ಕಮಠ–ಆಮೆ
ಕಮನೀಯ–ಮನೋಹರವಾದ
ಕಮ್ಮಂಗಣೆ–ಹೂಬಾಣ
ಕಮ್ಮರಿ–ಕಡಿದಾದ ಬೆಟ್ಟದ ಪಕ್ಕ
ಕರ–ಅತಿಶಯ
ಕರಣ–ಇಂದ್ರಿಯ
ಕರಂ–ಚೆನ್ನಾಗಿ
ಕರಂಡ–ವಿಭೂತಿ ಇಡುವ ಪಾತ್ರೆ ಅಥವಾ ಬುಟ್ಟಿ
ಕರ್ದಮ–ಸುಗಂಧ ಬೆರಸಿದ ನೀರು

ಕರಭ–ಆನೆಯ ಮರಿ
ಕರವಾಳ–ಖಡ್ಗ
ಕರುಬು–ಹೊಟ್ಟೆಕಿಚ್ಚುಪಡು
ಕರುಮಾಡ–ಉಪ್ಪರಿಗೆ
ಕರೆಗಣ್ಮು–ತುಂಬಿಸೂಸು
ಕಲಕಾಂಚಿಯದಾಮ–ಬಂಗಾರದ ನಡುಪಟ್ಟಿ
ಕಲ್ಪತರು–ಕಲ್ಪವೃಕ್ಷ
ಕಲಾದ–ಅಕ್ಕಸಾಲಿಗ
ಕಲಿತ–ಕೂಡಿದ
ಕವಡು(ದ್ಭ)–ಕಪಟ, ಮೋಸ
ಕವರು–ಅಪಹರಿಸು
ಕವುಂಗು–ಅಡಕೆ
ಕಸವರವೆಟ್ಟ–ಬಂಗಾರದ ಬೆಟ್ಟ(ಕೈಲಾಸ ಪರ್ವತ)
ಕಹಳಾರವ–ಕಹಳೆಯ ಧ್ವನಿ
ಕಳತ್ರ–ಹೆಂಡತಿ
ಕಳಭ–ಆನೆಮರಿ
ಕಳರವ–ಮಧುರ ಧ್ವನಿ
ಕಳರುತಿ–ಕೋಗಿಲೆಯ ಕೂಗು
ಕಳಲು–ಜಾರು, ಬೀಳು
ಕಳವೆ–ಭತ್ತ
ಕಳಹಂಸಗಮನೆ–ರಾಜಹಂಸದ ನಡಿಗೆಯುಳ್ಳವಳು
ಕಳಿಕೆ–ಚಿಗುರು
ಕಾತು–ಕಾಯಿಬಿಟ್ಟು
ಕಾದಲ–ನಲ್ಲ, ಗಂಡ
ಕಾರ್–ಮಳೆ
ಕಾರ್ಗಾಲ್–ಮಳೆಗಾಲ
ಕಾರಣೆ–ಬಣ್ಣದ ಗೆರೆ
ಕಾರೊಡಲ–ವಿಷ್ಣು
ಕಾಲಕಂಧರ–ಕಪ್ಪುಕೊರಳುಳ್ಳವ(ಶಿವ)
ಕಾಲ್ಗೆಡವು–ಬೀಳು
ಕಾವಡಿ–ಎರಡೂ ತುದಿಗಳಲ್ಲಿ ಭಾರವನ್ನು ಇಳಿಬಿಟ್ಟು
ನಡುವೆ ಹೆಗಲು ಕೊಡಲು ಅನುಕೂಲವಾದ ಕೋಲು
ಕಾಸಾರ–ಸರೋವರ
ಕಾಸೆ–ಚಡ್ಡಿ
ಕಾಹಳನಾದ–ಕಹಳೆಯ ಧ್ವನಿ
ಕಾಳ್ಕಬ್ಬ–ಕೀಳುಕಾವ್ಯ

ಕಾಳಾಹಿ–ಕಾಳಸರ್ಪ
ಕಾಳಿಜ–ಹೃದಯ
ಕಾಳೋರಗ–ಕಾಳಸರ್ಪ
ಕಿಟಿ–ಹಂದಿ
ಕಿತ್ತಡಿ–ಸನ್ಯಾಸಿ
ಕಿವುಡುಗೇಳು–ಅಲಕ್ಷ್ಯಮಾಡು,
ಕೇಳಿಯೂ ಕೇಳದಂತಿರು
ಕೀರ–ಗಿಳಿ
ಕೀಲಾರ(ದ್ಭ)–ಕ್ಷೀರಾಗಾರ, ಹಾಲಿನ ಸಂಚಯ
ಕೀಲಿಸು–ನಾಟಿಸು
ಕುಕ್ಕುರ–ನಾಯಿ
ಕುಕಿಲ್–ಕೂಗು
ಕುಚ್ಚು–ಗುಚ್ಛ, ಗೊಂಚಲ
ಕುಕ್ಕುಟ–ಕೋಳಿ
ಕುಟ್ಟಿಮ–ನೆಲಗಟ್ಟು
ಕುಡಿತೆ–ಅಂಗೈ, ಸೆರೆ
ಕುಡುವಿಲ್ಲ–ಕಾಮ
ಕುಣಪ–ಹೆಣ
ಕುತ್ತಿ–ಗುದ್ದಿ, ತಿವಿದು
ಕುಪ್ಪಸ–ಕವಚ
ಕುಮಾರಕ–ಷಣ್ಮುಖ
ಕುರಂಟ–ಗೊರಟೆ
ಕುರಿದರಿ–ಕುರಿ ಕೊಯ್ದಂತೆ ಕತ್ತರಿಸು
ಕುರುಳು–ಕೂದಲು
ಕುಲ್ಲತನ–ಖುಲ್ಲತನ, ದುಷ್ಟತನ
ಕುವಲಯ–ನೀಲಿಕಮಲ
ಕುಸುಮಕೋದಂಡ–ಕಾಮ
ಕುಸುಮಚಾಪ–ಕಾಮನಬಿಲ್ಲು
ಕುಸುಮಶರ–ಕಾಮ, ಮನ್ಮಥ
ಕುಸುಮಶರಾರ್ಜುನ–ಕಾಮನೆಂಬ ಬಲಾಢ್ಯ
ಕುಸುಮಾಂಜಲಿ–ಬೊಗಸೆಯಲ್ಲಿ ಹೂ
ತುಂಬಿಕೊಂಡು ತೂರುವ ಬಗೆ
ಕುಳಿರ್–ಹಿಮ
ಕುಳಿವಾತ–ಕೆಟ್ಟಮಾತು
ಕೂಟ–ಮೇಳ, ಸಮೂಹ
ಕೂಟಸಾಕ್ಷಿ–ಸುಳ್ಳುಸಾಕ್ಷಿ

ಕೂರ್–ಪ್ರೀತಿಸು
ಕೂರ್ತು–ಪ್ರೀತಿಸಿ
ಕೂರ್ಮೆ–ಪ್ರೀತಿ
ಕೂರಂಬು–ಹರಿತವಾದ ಬಾಣ
ಕೂರಸಿ–ಹರಿತವಾದ ಬಾಣ
ಕೂರಸಿ–ಹರಿತವಾದ ಖಡ್ಗ
ಕೂಸು–ಹೆಣ್ಣು
ಕೃಶಾನು–ಅಗ್ನಿ, ಬೆಂಕಿ
ಕೆತ್ತು–ಕಂಪಿಸು, ನಡುಗು
ಕೆಯ್–ಹೊಲ
ಕೇಕಿ–ನವಿಲು
ಕೇಣಗೊಳ್ಳು–ಒಟ್ಟಾಗು
ಕೇತನ–ಧ್ವಜ
ಕೇರು–ಗೋಡೆ
ಕೇಸಡಿ–ಕೆಂಪುಪಾದ
ಕೈಗೊಳಿಸು–ಕೈಗೆಕೊಡು
ಕೈತವ–ಮೋಸ
ಕೈದುಡುಕು–ಕೈಹಾಕು
ಕೈಮಿಗು–ಅತಿಶಯವಾಗು
ಕೈರವ–ಕಪ್ಪುಕಮಲ
ಕೊಚ್ಚುಗಡಿ–ತುಂಡರಿಸು
ಕೊಡಕೆ–ಕಿವಿ
ಕೊಡನೊಳಗೊಗೆದವ–ಅಗಸ್ತ್ಯ
ಕೊತ್ತಳ–ಕೋಟೆಯ ಮೇಲಿನ ಬುರುಜು
ಕೊಯ್ಲ್ಲ–ಕೊಯ್ಯುವ
ಕೊರ್ವು–ಸೊಕ್ಕಿಗೆ ಬರು
ಕೊಲ್ಲಾರಿ–ಮೇಲುಹೊದಿಕೆಯುಳ್ಳ ಬಂಡಿ
ಕೊಳಗುಳ–ರಣಾಂಗಣ
ಕೋಕ–ಚಕ್ರವಾಕ
ಕೋಡಿವರಿ–ಅಧಿಕವಾಗಿ ಹರಿ
ಕೋಡು–ತಂಪುಮಾಡು
ಕೋಮಟಿಗ–ವೈಶ್ಯವ್ಯಾಪಾರಿ
ಕೋವರಿ–ಸಂಭ್ರಮ
ಕೋವಿದ–ವಿದ್ವಾಂಸ
ಕೋಳಗೊಳ್–ಸೆರೆಹಿಡಿ
ಕೌಶಿಕ–೧. ಇಂದ್ರ ೨. ಗೂಗೆ

ಕೌಸ್ತುಭ–ವಿಷ್ಣುವಿನ ಕೊರಲರತ್ನ
ಕ್ರತು–ಯಜ್ಞ
ಕ್ಷೀರವಾರಿಧಿ–ಹಾಲ್ಗಡಲು
ಕ್ಷೋಣಿ–ಭೂಮಿ

ಖ

ಖಂಡೆಯ–ಖಡ್ಗ
ಖಂಡೇಂದುಧರ–ಶಿವ
ಖಗ–ಪಕ್ಷಿ
ಖಚರ–ಹಕ್ಕಿ

ಗ, ಘ

ಗಂಡ–ನಲ್ಲ
ಗಂದಿಗ–ಸುಗಂಧದ್ರವ್ಯ ಮಾರುವವ
ಗಂಧಸಿಂಧೂರ–ಮದವೇರಿದ ಆನೆ
ಗಾಂಗೇಯ–ಭೀಷ್ಮ
ಗುಂಜಿ–ಗುಲಗಂಜಿಯ ತೊಡಿಗೆ
ಗೊಂದಣ–ಸಮೂಹ
ಗೊಂದೆ–ನಂದಿ, ವೃಷಭ
ಗಡಿದುರ್ಗ–ರಾಜ್ಯದ ಗಡಿಯಲ್ಲಿರುವ ಕೋಟೆಗಳು
ಗಣಿಕಾಲಯ–ವೇಶ್ಯಾಗೃಹ
ಗಮ್ಮನೆ–ಒಮ್ಮೆಲೆ, ಕೂಡಲೆ
ಗರಿವೂ–ಕೇದಗೆ
ಗಹನ–ಅರಣ್ಯ
ಗಳ–ಕಂಠ
ಗಳಹಾರ–ಕೊರಳಹಾರ
ಗಳಿಸಾಳಿವೆಣ್ಣು–ಗಣಿಕಾಸ್ತ್ರೀ
ಗಾಡಿ–ಸೌಂದರ್ಯ
ಗಾಡಿಕಾತಿ–ಚೆಲುವೆ
ಗಾಣಿಕ್ಯ–ವೇಶ್ಯಾವೃಂದ
ಗಾಯತ್ರಿ–೨೪ ಅಕ್ಷರದ ಮಂತ್ರ
ಗಾವರ–ಆರ್ಭಟೆ
ಗಾವಿಲ–ಮೂರ್ಖ
ಗೀರ್ವಾಣಾಹಾರ–ಅಮೃತ
ಗಿಳಿದೇರ–ಕಾಮ, ಮನ್ಮಥ
ಗುಣ್ಪು–ಗಾಂಭೀರ್ಯ, ಆಳ

ಗುರುತಲ್ಪಕ–ಗುರುವಿನ ಹಾಸಿಗೆ ಏರುವವ
ಗುಲ್ಮ–ಕಂಟಿ
ಗೂಳೆಯ–ವಲಸಿಗರ ತಂಡ
ಗೇಹ–ಗೃಹ, ಮನೆ
ಗೋಕುಲ–೧. ದನಗಳ ಹಿಂಡು ೨. ಕಿರಣ ಸಮೂಹ
ಗೋತ್ರ–ಪರ್ವತ
ಗೋಪತಿ–ಬ್ರಹ್ಮ
ಗೋಳಕ–ವಿಧವೆಗೆ ಹುಟ್ಟಿದ ಮಗ
ಗೋಳಾಯಿಲ(ದ್ಭ)–ಕುದುರೆ ಸವಾರ
ಘೋಟಾಯಿಲ(ದ್ಭ)–ಕುದುರೆ ಸವಾರ
ಘೃತ–ತುಪ್ಪ

ಚ, ಛ

ಚಂದನ–ಶ್ರೀಗಂಧ
ಚಂದಳಿರು–ಕೆಂಪಾದ ಚಿಗುರು
ಚಂದ್ರಿಕೆ–ಬೆಳದಿಂಗಳು
ಚಂಬೋತ–ರತ್ನಪಕ್ಷಿ
ಚಿಂತಾಮಣಿ–ಬಯಸಿದುದನ್ನು ಕೊಡುವ ರತ್ನ
ಚೆಂಗುಡಿ–ಹವಳ
ಚೆಂದಳ–ಕೆಂಪು ಅಂಗೈ
ಚೆಂದಿರವಟ್ಟು–ಚಂದ್ರಮಂಡಲ
ಚಕ್ರವಾಕ–ಜಕ್ಕವಕ್ಕಿ
ಚಕಿತಮಭಿಧತ್ತೇ(ಶ್ರುತಿರಪಿ)–ವೇದವು(ದೇವನ ವಿಷಯವಾಗಿ)ಆಶ್ಚರ್ಯವನ್ನು ಹೇಳುತ್ತದೆ.
ಚತುರಾಸ್ಯ–ಬ್ರಹ್ಮ
ಚತುರಂಗಬಲ–೪ ಬಗೆಯ ಸೈನ್ಯ: ಅಶ್ವ ಪದಾತಿ, ಗಜ, ರಥ
ಚದುರಂಗ–ಪಗಡೆಯಂತಹ ಒಂದು ಬಗೆಯ ಆಟ
ಚರಲಿಂಗ–ಜಂಗಮ
ಚರಲಿಂಗಪದಸಪರ್ಯತೃಣೀಕೃಯಜ್ಞ–ಜಂಗಮ ಪಾದಪೂಜೆಯಿಂದ ಯಜ್ಞವನ್ನು ತೃಣೀಕರಿಸಿದವನು
ಚರಿಪುದು–ಆಚರಿಸುವುದು
ಚಲ್ಲವರಿ–ದಿಕ್ಕುಪಾಲಾಗು
ಚಳಯ–ನೀರು ಸಿಂಪಡಿಸು
ಚಳಿಪು–ಥಳಿಸು, ಕುಟ್ಟು
ಚಾದಗೆ–ಚಾತಕಪಕ್ಷಿ
ಚಾಪ–ಬಿಲ್ಲು
ಚಾರು–ಸುಂದರ, ಮನೋಹರ
ಚಿತ್ತಜ–ಕಾಮ
ಚಿತ್ರ–ವಿಚಿತ್ರ, ಸೋಜಿಗ
ಚಿಲಿಪಾಲು–ಸಕ್ಕರೆ ಮಿಶ್ರಿತ ಹಾಲು
ಚೀನಿ–ರೇಶಿಮೆಯ ಬಟ್ಟೆ
ಚೀನಾಂಬರ–ರೇಶಿಮೆಯ ವಸ್ತ್ರ
ಚುಬುಕ–ಗದ್ದ
ಚೂಟಿ–ಗುರಿ
ಚೂಡಾರತ್ನ–ತಲೆಮಣಿ
ಚೂತ–ಮಾವು
ಚೆಚ್ಚರ(ದ್ಭ)–ಸತ್ವರ, ವೇಗ
ಚೆನ್ನಪೊಂಗ–ಅತ್ಯುತ್ಸಾಹಿ
ಚೆಲ್ಲಗಣ್ಣು–ವಿಶಾಲಾಕ್ಷಿ, ದೀರ್ಘಾಕ್ಷಿ
ಚೆಲ್ಲವಜಿ–ಹೊರಸೂಸು
ಚೈತ್ರ–ವಸಂತಋತು
ಚೌಕುಳಿ–ನಾಲ್ಕು ಹರಳುಗಳ ಕಿವಿಯ ಆಭರಣ
ಚೌಪಟ–ನಾಲ್ಕುಪಟ್ಟು
ಛಡಾಳಿಸು–ಪ್ರಜ್ವಲಿಸು

ಜ

ಜಂಬೀರ–ಗಜಲಿಂಬೆ
ಜಾಂಬೂನದ ಶೈಲ–ಬಂಗಾರ ಬೆಟ್ಟ, ಕೈಲಾಸಪರ್ವತ
ಜೊಂಡು–ಹಾವಸೆ
ಜಕ್ಕವಕ್ಕಿ–ಚಕ್ರವಾಕಪಕ್ಷಿ
ಜಗಜಂಪು–ಜಾಲರಿ, ಕುಚ್ಚುಗಳ ಅಲಂಕಾರ
ಜಘನ–ನಿತಂಬ, ದಡ
ಜಡಜಸಂಭವ–ಬ್ರಹ್ಮ
ಜಡಜಾಕ್ಷ–ವಿಷ್ಣು
ಜನಪದ–ನಾಡು
ಜನ್ನ–ಯಜ್ಞ

ಜಯಂತ–ಇಂದ್ರನ ಮಗ
ಜಲಕ್ಕನೆ–ಕೂಡಲೆ
ಜಲಜ–ಕಮಲ
ಜಲಜಪತ್ರ–ಕಮಲ
ಜಲಜಾಕ್ಷ–ವಿಷ್ಣು
ಜಲಂಧರ–(ಒಬ್ಬ)ರಾಕ್ಷಸ
ಜವ(ದ್ಭ)–ಯಮ
ಜವಳಿ–ಜೋಡು
ಜಾನು–ಮೊಳಕಾಲು
ಜಾವಳ–ಹೀನ, ಕೀಳ
ಜಿತಕಾಮ–ಕಾಮನನ್ನು ಗೆದ್ದವ, ಯತಿ
ಜಿನುಗು–ಧ್ವನಿಗೆಯ್ಯು
ಜೀರ್ಕೊಳವಿ–ಜೀಕಳಿ
ಜೂದಾಳಿ–ದ್ಯೂತವ್ಯಸನಿ, ಧರ್ಮರಾಜ
ಜೂಳೆಯ–ಅಲಂಕಾರವಿಶೇಷ
ಜೊನ್ನ(ದ್ಭ)–ಜೋತ್ಸ್ನಾ, ಬೆಳುದಿಂಗಳು
ಜೊನ್ನವಕ್ಕಿ–ಚಕೋರಪಕ್ಷಿ
ಜೋಡೆ–ವ್ಯಭಿಚಾರಿಣಿ

ಝ
ಝುಂಝಾನಿಲ–ಬಿರುಗಾಳಿ
ಠ
ಠಾಯಿ–ಸಂಗೀತದ ಒಂದು ಗತಿ

ಡ
ಡೆಂಕಣಿ–ಕೋಟೆಕಾಳಗದಲ್ಲಿಬಳಸುತ್ತಿದ್ದ ಒಂದು ಯಂತ್ರ
ಡಾವರ(ದ್ಭ)–ಡಾಮರ, ದಾಹ
ಡೇಗೆ–ಗಿಡುಗ
ಡೊಣೆ–ನೀರಿನ ತಗ್ಗು

ಢ
ಢಾಳ–ಉದ್ದವಾದ ಪತಾಕೆ
ಢಾಳಿಸು–ಬೀಸು, ಪ್ರಕಾಶಗೊಳಿಸು

ತ
ತಂಗದಿರ್ವಕ್ಕಿ–ಚಕೋರಪಕ್ಷಿ
ತಂಡುಕ–ಮೋಸಗಾರ
ತಂತ್ರ–ಧಾರ್ಮಿಕವಿಧಾನ
ತಂತ್ರಪಂಚಕ–ರಾಜನ ಐದು ತಂತ್ರಗಳು:
ವಿತ್ರಲಾಭ, ಮಿತ್ರಭೇದ, ಸಂಧಿವಿಗ್ರಹ, ಲಬ್ಧಿನಾಶ, ಆಸಂಪ್ರೇಕ್ಷಕಾರಿತ್ವ
ತಂಬುಲಿಗ–ತಂಬುಲ ಮಾರವವ
ತುಂಬರ–ಬಿಳಿಗರಿಕೆ
ತೆಂಬೆಲರು–ದಕ್ಷಿಣದಿಕ್ಕಿನ ಗಾಳಿ
ತೊಂಡ–ತುಂಟ
ತೊಂಬೆ–ರಾಶಿ, ಸಮೂಹ
ತಟಾಕ–ಕೆರೆ
ತಟ್ಟು–ಕುದುರೆಯ ಗುಂಪು
ತಡಿ–ತಟ, ದಂಡೆ
ತತ್ತಳ–ಹೆದರಿಕೆ, ನಡುಕ
ತದಿಕು–ತಗಲು, ತಾಗು
ತದೆ–ಹೊಡೆ, ನಾಶವಾಡು
ತನ್ವಿ–ಮನೋಹರೆ, ಕೋಮಲೆ
ತರಣಿ–ಸೂರ್ಯ
ತರಣಿಜ–ಕರ್ಣ
ತರಸ(ದ್ಭ)–ತ್ರಾಸ, ಬಂಗಾರತೂಗುವ ತಕ್ಕಡಿ
ತರಹರ–ತಾಳ್ಮೆ
ತರಳಾಯತನೇತ್ರೆ–ಚಂಚಲ ಮತ್ತು ವಿಸ್ತಾರವಾದ ಕಣ್ಣುಳ್ಳವಳು
ತರಿ–ಕತ್ತರಿಸು
ತರಿಸಂದು–ಚೆನ್ನಾಗಿ
ತರಿಸಲ್–ನಿಶ್ಚಯಿಸು
ತರುವಲಿ–ಹುಡುಗ
ತಲ–ಮುಷ್ಟಿ(?)
ತಲ್ಪ–ಹಾಸುಗೆ
ತಲೆವೊಡು–ತಲೆಬುರುಡೆ
ತವದಿರ್ಪ–ಕೊರತೆಯಾಗದ
ತವೆ–ಚೆನ್ನಾಗಿ, ಅಧಿಕವಾಗಿ

ತಳ್ಳಂಕ–ಕಳವಳ
ತಳಿರ್ತು–ಚಿಗಿತು
ತಳುಕು–ಅಪ್ಪಳಿಸು
ತಳವು–ಅಡ್ಡಿ, ವಿಳಂಬ
ತಳೋದರಿ–ಚೆಲುವೆ
ತಾಟಕ–ಜಗಳಗಂಟ
ತಾಟಂಕ–ಕಿವಿಯೋಲೆ
ತಾಟಿತ–ತಾಗಿದ
ತಾನ–ಸಂಗೀತದ ಆಲಾಪ
ತಾಮರಸ–ತಾವರೆ, ಕಮಲ
ತಾಮರಸಾಕ್ಷ–ವಿಷ್ಣು
ತಾಮರಸಾಕ್ಷಿ–ಕಮಲಾಕ್ಷಿ
ತಾಮಸಿ–ಕತ್ತಲೆ
ತಾರ–ಏರಿಕೆಯ ಧ್ವನಿ
ತಾರಕ–ನಕ್ಷತ್ರ
ತಾರಗೆ–ನಕ್ಷತ್ರ
ತಾರಾದ್ರಿ–ಬೆಳ್ಳಬೆಟ್ಟ, ಕೈಲಾಸಪರ್ವತ
ತಾರಾಪತಿ–ಚಂದ್ರ
ತಾರೆ–ನಕ್ಷತ್ರ
ತಾವರೆಯಣುಗ–ಬ್ರಹ್ಮ
ತಾವು–ಸ್ಥಳ, ಬೀಡು
ತಾಳ–ತಾಳೆಮರ
ತಿಟ್ಟು–ತೀಡುವಿಕೆ
ತಿತ್ತಿ–ಚೀಲ
ತಿಮಿರ–ಕತ್ತಲೆ
ತಿರಿ–ಆಯ್ದುಕೊಳ್ಳು
ತಿರು–ಹೆದೆ
ತೀವು–ತುಂಬು
ತುರಿಹ–ವೇಗ
ತುರು–ಆಕಳು
ತುರುಗು–ದಟ್ಟವಾಗಿರು, ನಿಬಿಡವಾಗಿರು
ತುರುಗು–ತುಂಬು
ತುರುವಳ–ದನಗಾಹಿ
ತುರುವಳ್ಳಿ–ಗೌಳಿಗರ ಹಳ್ಳಿ
ತುರುವಿಂಡು–ಆಕಳ ಗುಂಪು
ತುಪಾಕ–ಬಂದೂಕ
ತುಳಿಲಾಳು–ವೀರ, ಕಲಿ
ತೂರ್ಯ–ವಾದ್ಯ
ತೂಳ–ತುಪ್ಪಳ
ತೆಕ್ಕನೆ–ಗಾಢವಾಗಿ
ತೆತ್ತಿಗ–ಸಂಬಂಧಿ
ತೆರಪು–ಅವಕಾಶ
ತೇಜಿ–ಕುದುರೆ
ತೇನತೇನ–ಪುನಃಪುನಃ
ತೊಡಂಬೆ–ಗೊಂಚಲು
ತೊತ್ತಳದುಳಿ–ಚೆಲ್ಲಾಪಿಲ್ಲೆಯಾಗಿ ತುಳಿ
ತೊರೆ–ನದಿ
ತೊಳಸುಗಾರ–ಜಗಳಗಂಟ
ತೋಟಿ–ಕಲಹ
ತೋರಹಾರ–ಸ್ಥೂಲವಾದ ಮಾಲೆ
ತೋಳಬಲ್ಮೆ–ತೋಳಸಾಮರ್ಥ್ಯ
ತೌಳಿ–ಟೌಳಿ, ಹುಸಿ
ತೃಣ–ಹುಲ್ಲು
ತ್ರ್ಯಕ್ಷ–ಶಿವ
ತ್ರಿಗುಣ–ಸತ್ವ, ರಜ, ತಮೋಗುಣಗಳು
ತ್ರಿದಶ–ದೇವತೆ
ತ್ರಿದಶಾಚಲ–ಮೇರುಪರ್ವತ
ತ್ರಿದಿವ–ಸ್ವರ್ಗ
ತ್ರಿವಳಿ–ಸ್ತ್ರೀಯ ಹೊಟ್ಟೆಯ ಮೇಲಿನ ಮೂರು ರೇಖೆಗಳು
ತ್ರಿವಿಧಲಿಂಗ–ಇಷ್ಟ, ಪ್ರಾಣ, ಭಾವಲಿಂಗ

ದ

ದಾಂಗುಡಿ–ಉದ್ಧವಾದ ಕುಡಿ
ದಿಂಡದಿಟ್ಟರು–ಉದ್ಧತರು, ಹುಂಬರು
ದಿಂಡೆಯ–ಹಿಂಸಕ
ದೊಂಬಿ–ಕೋಲಾಹಲ
ದಟ್ಟಿ–ಉಡುವ ಸಣ್ಣಬಟ್ಟೆ(ಸೀರೆ)
ದನುಜ–ರಾಕ್ಷಸ
ದನುಜಾರಿ–ವಿಷ್ಣು
ದರಹಾಸ–ಮುಗುಳ್ನಗೆ
ದಶನ–ಹಲ್ಲು, ಕೋರೆ

ದಸಿ–ಚೂಪಾದ ಗೂಟ
ದಳವಾಯಿ–ಸೇನಾಪತಿ
ದಳಿತ–ಅರಳಿದ
ದಳಿಬ–ಮಡಿಬಟ್ಟೆ
ದಳಿವುತಿಹ–ಬೆಳೆಯುತ್ತಿರುವ
ದಳ್ಳುರಿ–ಪ್ರಬಲವಾದೆ ಉರಿ
ದಾಡಿಮ– ದಾಳಿಂಬ
ದಾನೋಪಾಯ–ಚತುರೋಪಾಯಗಳಲ್ಲಿ ಒಂದು
ದಾಯ–ಮೆಚ್ಚು
ದಾಯಿಗ–ಭಕ್ತ
ದಾರಣ–ಸೀಳುವಿಕೆ
ದಿನಪ–ಸೂರ್ಯ
ದಿಮ್ಮಿತ–ಶ್ರೇಷ್ಠವಾದುದು, ಪ್ರಮುಖವಾದುದು
ದಿಮ್ಮಿದ–ಶ್ರೇಷ್ಠ
ದಿವಾಕರ–ಸೂರ್ಯ
ದಿವಾಣ–ಮಂತ್ರಿ
ದೀಧಿತಿ–ಕಿರಣ
ದೀಹ–ಬೇಟೆಯ ಆಮಿಷಕ್ಕಾಗಿ ಬಳಸುವ ಪ್ರಾಣಿ
ದುಗುಡ–ದುಃಖ, ಚಿಂತೆ
ದುಗಲ(ಧ್ಬ)–ದುಕೂಲ, ರೇಶಿಮೆಯ ಬಟ್ಟೆ
ದುರ್ಭಗ–ಕೆಟ್ಟ ಐಶ್ವರ್ಯ
ದುರಿತ–ಪಾಪ
ದುರುದುಂಬಿತನ–ದುರುಳುತನ
ದುವ್ವಾಳಿಸು–ಬೆನ್ನಟ್ಟು
ದೂಸಿಗರು–ಬಟ್ಟೆ ವ್ಯಾಪಾರಿಗಳು
ದೇವದ್ರುಮ–ದೇವಲೋಕದ ಮರ, ಕಲ್ಪವೃಕ್ಷ
ದೇವಾಗಾರ–ದೇವಾಲಯ
ದೇಶಾಕ್ಷಿ–ಒಂದು ರಾಗದ ಹೆಸರು
ದೇಶಿಗ–ಪರದೇಶಿ, ಅನಾಥ
ದೊಬ್ಬು–ಮುಂದೂಡು, ನೂಕು
ದ್ಯುಮಣಿ–ಸೂರ್ಯ

ಧ
ಧನದ–ಕುಬೇರ
ಧನ್ಯಾಸಿ–ಒಂದು ರಾಗದ ಹೆಸರು
ಧಮ್ಮಿಲ್ಲ–ಹೆಳಲು, ಮುಡಿ
ಧರಣಿಪ–ರಾಜ
ಧರಾದಿಪ–ಅರಸು
ಧಾರಾ–ಖಡ್ಗದ ಅಲಗು
ಧುರ–ಯುದ್ಧ
ಧೂರ್ತ–ವಂಚಕ, ಮೋಸಗಾರ
ಧೃತಿ–ಧೈರ್ಯ
ಧ್ವಾನ–ಧ್ವನಿ, ಸಪ್ಪಳ

ನ
ನಂದನ–ಮಗ
ನಗಕುಲ–ಪರ್ವತಗಳ ಗುಂಪು
ನಡೆಮಾಡ–ದೇವತೆಗಳ ತೇರು, ವಿಮಾನ
ತನ–ನಮಸ್ಕರಿಸಿದ
ನಭ–ಆಕಾಶ
ನನೆಗೋಲ–ಕಾಮ
ನಲ್ವೇಟ–ಒಳ್ಳೆಯ ಅನುರಾಗ
ನಳಿನ–ಕಮಲ
ನಳಿನದಳ–ಕಮಲಪತ್ರ
ನಾಕ–ಸ್ವರ್ಗ
ನಾಗಲೋಕ–ಪಾತಾಳ
ನಾಗವಾಸ–ನಟರ ಮನೆ
ನಾಗಾಂಗನೆ–ನಾಗಲೋಕದ ಸ್ತ್ರೀ
ನಾಗಾಸುರಮರ್ದನ–ಗಜಾಸುರನನ್ನು ಸಂಹರಿಸಿದ, ಶಿವ
ನಾಡಾಡಿ(ಗ)–ಸಾಮಾನ್ಯ(ವ್ಯಕ್ತಿ)
ನಾಡೆ–ಚೆನ್ನಾಗಿ
ನಾಣ್–ನಾಚಿಕೆ, ಲಜ್ಜೆ
ನಾರಿಕೇಳ–ತೆಂಗಿನಕಾಯಿ
ನಾಸಾಮಣಿ–ಮೂಗುತಿಯ ರತ್ನ
ನಾಸ್ತಿತತ್ತ್ವಂ ಗುರೋಃಪರಂ– ಗುರುವಿಗಿಂತ ಶ್ರೇಷ್ಠವಾದ ತತ್ವವಿಲ್ಲ
ನಿಕ್ಷೇಪ–ಹೂಳಿಟ್ಟಧನ
ನಿಗಮ–ವೇದ
ನಿಗಳ–ಬೇಡಿ, ಸಂಕಲೆ
ನಿಚಯ–ಸಮೂಹ

ನಿಟಿಲ–ಹಣೆ
ನಿತಂಬ–ದಡ
ನಿತ್ತರಿಪು–ತಡೆದುಕೊಳ್ಳು
ನಿತಾಂತ–ಅಧಿಕ
ನಿಧಾನ–ಸಂಪತ್ತು
ನಿನದ–ಧ್ವನಿ, ಸಪ್ಪಳ
ನಿಬ್ಬರ(ದ್ಭ)–ನಿರ್ಭರ, ರಭಸ
ನಿಭ–ಹೋಲುವ
ನಿರಸ್ತಾನಂಗ–ಕಾಮನನ್ನು
ಚೆದರಿಸಿದವ(ಶಿವ)
ನಿರವಿಸು(ದ್ಭ)–ನಿರೂಪಿಸು, ಹೇಳು
ನಿರಿಗ–ಸಿಹಿಮಾವು
ನಿರಿಗೆ–ಕ್ರಮ
ನಿಜೆ–ನಿರಿಗೆ
ನಿರುತ–ನಿತ್ಯ, ಯಾವಾಗಲೂ
ನಿರುಪಮ–ಸಾಟಿಯಿಲ್ಲದ
ನಿವಹ–ಗುಂಪು, ಸಮೂಹ
ನಿರ್ವಾಹಕ–ನಿರ್ವಹಿಸುವವ, ದೂತ
ನಿಶಿ–ರಾತ್ರಿ
ನಿಶಿತ–ಹರಿತ
ನಿಸದ–ನಿಶ್ಚಯ
ನಿಸದ–ಸತ್ಯ, ನಿಜ
ನಿಸ್ವನ–ಧ್ವನಿ
ನೀರದ–ಮೋಡ
ನೀರನಿಧಾನ–ಸಮುದ್ರ
ನೀರೆ–ಸ್ತ್ರೀ
ನೀಲಲೋಹಿತ–ಶಿವ
ನೀಹಾರ–ಹಿಮ
ನುಗುತ–ನುಸುಳುತ
ನೂಪುರ–ಪೈಜಣ
ನೆಗಪು–ಮೇಲಕ್ಕೆತ್ತು
ನೆಗಳು–ಪ್ರಸಿದ್ಧಿಯನ್ನು ಪಡೆ
ನೆಣವಸೆ–ಕೊಬ್ಬು
ನೆತ್ತ–ಲೆತ್ತ, ಜೂಜು
ನೆಮ್ಮ–ನಂಬು, ವಿಶ್ವಾಸವಿಡು
ನೆರವಿ–ಸಮೂಹ
ನೆಜೆವೆಜೆ–ಪೂರ್ಣಚಂದ್ರ
ನೆಲಕಲ–ಲೋಭಿ
ನೆಲೆವಾಡ–ಉಪ್ಪರಿಗೆ, ಅಂತಸ್ತು
ನೇಜಯ–ಭರ್ಚಿ
ನೇಲ್ವ–ಇಳಿಬಿದ್ದ
ನೇವಜಿಸು–ಕೈಯಿಂದ ಸವರು
ನೇವುರ(ದ್ಭ)–ನೂಪುರ, ಪೈಜಣ
ನೈದಿಲ–ನೀಲಕಮಲ
ನೊಸಲು–ಹಣೆ
ನೊಳ–ನೊಣ
ನೋನು–ವ್ರತಮಾಡು

ಪ

ಪಂಕಜಭವ–ಬ್ರಹ್ಮ
ಪಂಕರುಹ–ಕಮಲ
ಪಂಕೇರುಹ–ಕಮಲ
ಪಂಚಧಾರೆ–ಕುದುರೆಯ ಐದು ರೀತಿಯ ನಡಿಗೆ; ಆಸ್ಕಂದಿತ, ರೇಚಿತ, ಧೋಂತ, ಪಲ್ಲಿತ, ಪ್ಲುತ
ಪಂಚಾಕ್ಷರಿ–"ನಮಃ ಶಿವಾಯ" ಎಂಬ ೫ ಅಕ್ಷರ ಮಂತ್ರ
ಪಂಚಾನನ–ಸಿಂಹ
ಪಂಡಿತವಕ್ಕಿ–ಗಿಳಿ
ಪಂತ(ದ್ಭ)–ಪಂಥ, ಪ್ರತಿಜ್ಞೆ
ಪಂದಳಿರು–ಹಸಿರು ಎಲೆ
ಪುಂಗವ–ಶ್ರೇಷ್ಠ
ಪುಂಡರೀಕ–೧. ಹುಲಿ ೨. ಕಮಲ
ಪುಂಡ್ರೇಕ್ಷು–ಶ್ರೇಷ್ಠವಾದ ಕಬ್ಬು
ಪೆಂಡವಾಸ–ರಾಣೀವಾಸ
ಪೆಂಡೆಯ–ಕಾಲಲ್ಲಿ ಹಾಕಿಕೊಳ್ಳುವ ಪ್ರತಿಜ್ಞೆಯ ಕಡಗ
ಪೊಂಗು–ಹಬ್ಬು
ಪೊಂಪುಳಿ–ರೋಮಾಂಚ
ಪೊಂಬೊಗರ್–ಬಂಗಾರದ ಕಾಂತಿ
ಪೊಂಬಜೆವಾಣ–ಊಟದ ಹೊನ್ನಪಾತ್ರೆ
ಪೊಂಬೊಗರಿ–ಬಂಗಾರದ ಬೊಗರಿ

ಪೊಂಬೊಡಲ–ಬ್ರಹ್ಮ
ಪಗಲೊಡೆಯ–ಸೂರ್ಯ
ಪಚ್ಚೆ–ಹಸಿರು ರತ್ನ
ಪಟ್ಟಸಾಣಿ–ಕುದುರೆಗಳನ್ನು ಸಾಧು ಮಾಡುವವ
ಪಟ್ಟವಣೆ–ಸಿಂಹಾಸನ
ಪಟ್ಟವರ್ಧನ–ಪಟ್ಟದಾನೆ
ಪಟ್ಟಾವಳಿ–ರೇಶಿಮೆಯ ಬಟ್ಟೆ
ಪಟೀರ–ಗಂಧ
ಪಟ್ಟೆ–ರೇಶಿಮೆಬಟ್ಟೆ
ಪಡ್ಡಳಿ–ಕಣಗಿಲೆ
ಪಡಿಯರ–ದ್ವಾರಪಾಲಕ
ಪಡುಗ–ಪೀಕದಾನಿ
ಪಡುಗಡಲು–ಪಶ್ಚಿಮಸಮುದ್ರ
ಪಡೆನುಡಿ–ಪ್ರತಿಮಾತು
ಪಡೆವಳ–ಸೇನಾಧಿಪತಿ
ಪಣೆಯಕ್ಕರ–ಹಣೆಬರೆಹ
ಪತಿತ–ಭ್ರಷ್ಟ
ಪಥಿಕ–ದಾರಿಗ
ಪದವಾಸನೆ–ಶಬ್ದಶಯ್ಯೆ, ಪದಸಂಘಟನೆ
ಪದ್ಮಸದ್ಮೆ–ಕುಮಲಾಸನವುಳ್ಳವಳು, ಲಕ್ಷ್ಮಿ
ಪದಾತಿ–ಕಾಲಾಳು, ಸೈನಿಕ
ಪದಾರ್ತಿ–ಪದವಿಯ ಪ್ರೀತಿ
ಪದ್ರಾಜೀವ–ಪದರಾಜೀವ, ಪಾದಕಮಲ
ಪನ್ನಗ–ಹಾವು
ಪನ್ನಗಕಟಕ–ಶಿವ
ಪನ್ನತಿಕೆ–ಗರ್ವ
ಪಯೋಧರೆ–೧. ಮೊಲೆಯುಳ್ಳವಳು
೨. ನೀರನ್ನು ಧರಿಸಿದವಳು
ಪಯೋವಾರಿಧಿ–ಹಾಲ್ಗಡಲು
ಪರಡಿ–ಗೋದಿಯಿಂದ ಮಾಡುವ ಖಾದ್ಯ ವಿಶೇಷ
ಪರತತ್ತ್ವ–ಶಿವ
ಪರದಾರ–ಪರಸ್ತ್ರೀ
ಪರಪು–ಹರವು
ಪರಮಾರ್ಥ–ಮೋಕ್ಷ
ಪರಮೆ–ದುಂಬಿ
ಪರಶು–ಕೊಡಲಿ
ಪರಿಕಲಿಸು–ವ್ಯಾಪಿಸು
ಪರಿಕಿಸು(ದ್ಭ)–ಪರೀಕ್ಷಿಸು
ಪರಿಚಾರ–ಸೇವಕ
ಪರಿಜು–ಆಕಾರ
ಪರಿತಪಿಸು–ಸಂಕಟಪಡು
ಪರಿತೋಷ–ಸಂತೋಷ
ಪರಿಭವ–ಅಪಮಾನ
ಪರಿಮರಿ–ಸಡಗರ
ಪರಿವಡು–ಒಪ್ಪು, ಮೆರೆ
ಪರಿವೇಷ್ಟಿಸು–ಸುತ್ತುವರಿ
ಪಲಲ–ಮಾಂಸ
ಪಲ್ಲವಪಾಣಿ–ಎಳೆ ತಳಿರಿನಂತಹ ಹಸ್ತ
ಪಲ್ಲವಾಧರೆ–ಚಿಗುರೆಲೆಯಂಥ ತುಟಿಯವಳು
ಪಲ್ವಲ–ಹೊಂಡ
ಪಸಯಿಸು–ಇಚ್ಛೈಸು
ಪಸರ–ಅಂಗಡಿ
ಪಳವಾತು–ವೇದ
ಪಳಿ–ಹಳಿ, ಪಟೀ, ವಸ್ತ್ರ
ಪಳಿದ್ಯ–ಮೊಸರಿನಿಂದ ಮಾಡಿದ ಆಹಾರ ವಿಶೇಷ
ಪಳಕು(ದ್ಭ)–ಸ್ಫಟಿಕ
ಪಾಗ–ಹಾಗ, ನಾಣ್ಯ ವಿಶೇಷ
ಪಾಟಲ–ಗುಲಾಬಿ ಹೂ, ಪಾದರಿ ಹೂ
ಪಾದಪ–ಗಿಡ
ಪಾದರ–ಹಾದರ, ವ್ಯಭಿಚಾರ
ಪಾದ್ಯ–ಪಾದಗಳನ್ನು ತೊಳೆಯುವ ನೀರು
ಪಾರ್ಥ–ಅರ್ಜುನ
ಪಾರಾವಾರ–ಸಮುದ್ರ
ಪಾರುಪತ್ಯ–ಮೇಲ್ವಿಚಾರಣೆ
ಪಾಲ್ಗಡಲು–ಕ್ಷೀರಸಮುದ್ರ
ಪಾವಕ–ಅಗ್ನಿ, ಬೆಂಕಿ
ಪಾಷಂಡಿ–ನಾಸ್ತಿಕ
ಪಾಸರೆ–ಹಾಸುಗಲ್ಲು
ಪಾಸು–ಹಾಸಿಗೆ
ಪಿಕ–ಕೋಗಿಲೆ

ಪಿನಾಕಿ–ಶಿವ
ಪೀಠಮರ್ದಕ–ಸ್ತ್ರೀ ಬೇಟದಲ್ಲಿ
ರಾಜಕುಮಾರನಿಗೆ ಸಹಾಯಮಾಡುವವ
ಪುಗಿಲ್–ಕೋಗಿಲೆ ಧ್ವನಿ
ಪುಣುಗು–ಒಂದು ಜಾತಿಯ
ಬೆಕ್ಕಿನಿಂದುಂಟಾಗುವ ಸುಗಂಧದ್ರವ್ಯ
ಪುನ್ನಾಗ–೧.ಪುರಶ್ರೇಷ್ಠ ೨. ಸುರಹೊನ್ನೆ
ಪುರವರ್ಗ–ನಾಗರಿಕ ಸಮೂಹ
ಪುರಹರ–ಶಿವ
ಪುಲ್ಲವಡಿನೀರೆ–ಹೂಗಾಡಿತಿ
ಪುಳಕ–ಮೈನವಿರು
ಪುಳಿನತಳ–ಉಸಕಿನ ದಿನ್ನೆ
ಪುಳಿಂದ–ಬೇಡ
ಪುಳಿಂದಿ–ಬೇಡಿತಿ
ಪುಳುಕು–ಹುಳುಕು, ದೋಷ
ಪೂಗ–ಅಡಕೆ
ಪೂತ–ಪವಿತ್ರವಾದ
ಪೆಚ್ಚ–ಉಕ್ಕೇರುವಿಕೆ
ಪೆಟಲು–ಸಿಡಿಯುವ ಶಬ್ದ
ಪೆರೆ–ಅರ್ಧಚಂದ್ರ
ಪೇಚಕ–ಯೋನಿ
ಪೈಕ–ಗುಂಪು
ಪೊಗರ್–ಕಾಂತಿ, ಪ್ರಕಾಶ
ಪೊಚ್ಚ–ಪ್ರವಾಹ, ನದಿ
ಪೊಡಕರಿಸು–ಉತ್ಸುಕನಾಗು
ಪೊಡಮಡು–ನಮಸ್ಕರಿಸು
ಪೊಡೆಯಲರ–ವಿಷ್ಣು
ಪೊಡೆಸೆಂಡು–ಹೊಡೆಯುವ ಚೆಂಡಿನಾಟ
ಪೊಣ್ಮು–ಹೊರಡು, ಹೊರಬೀಳು
ಪೊನ್ನಂಡೆ–ಬಂಗಾರದ ಜೀಕಳಿ
ಪೊರೆಗುಂದು–ಸಂಕೋಚಗೊಳ್ಳು
ಪೊಸಂಬ–ಹೊಸಬ
ಪೊಳಲು–ಪಟ್ಟಣ
ಪೌಜು–ಸೈನ್ಯ
ಪೌತ್ರ–ಮೊಮ್ಮಗ
ಪ್ರಣುತ–ನಮಸ್ಕರಿಸಿದ
ಪ್ರತ್ಯವಾಯ–ತೊಡಕು
ಪ್ರಪೂತ–ಪರಿಶುದ್ಧವಾದ
ಪ್ರವರ–ಶ್ರೇಷ್ಠ
ಪ್ರಸೂನ–ಹೂವು
ಪ್ರಹೀರ–ಶ್ರೇಷ್ಠವಜ್ರ
ಪ್ರಾಣಾಯಾಮ–ಯೋಗದ ಎಂಟು ಅಂಗಗಳಲ್ಲಿ
ಒಂದು. ಪ್ರಾಣವನ್ನು ಚೆನ್ನಾಗಿ
ನಿರೋಧಿಸುವುದು.

ಫ

ಫಣಿಕಟಕ–ಹಾವನ್ನು
ಕಡಗವನ್ನಾಗಿಸಿಕೊಂಡವ, ಶಿವ
ಫಣಿವೇಣಿ–ಹಾವಿನಂತೆ ಜಡೆಯುಳ್ಳವಳು
ಫುಲ್ಲ–ಹೂ, ಪುಷ್ಪ
ಫುಲ್ಲಶರ–ಕುಸುಮಬಾಣ, ಕಾಮ
ಫುಲ್ಲಶರಾರಿ–ಶಿವ

ಬ

ಬಂಟ–ಯೋಧ, ಸೇವಕ
ಬಂಡಣ–ಯುದ್ಧ
ಬಂದಿವಿಡಿ–ಸೆರೆಹಿಡಿ
ಬಂದುಗೆ–ತೊಂಡೆಹಣ್ಣು
ಬಂದುಗೆ(ಧ್ಬ)–ಬಂಧೂಕ, ದಾಸವಾಳ
ಬಂಬಲ್–ಸಮೂಹ
ಬಂಬಾವು–ಸರ್ಪವಿಶೇಷ
ಬಾಂದೊರೆ–ಆಕಾಶಗಂಗೆ
ಬಾಂಬೊಳೆ–ಆಕಾಶಗಂಗೆ
ಬಿಂಬಾಧರ–ತೊಂಡೆಯ ಹಣ್ಣಿನಂಥ ತುಟಿ
ಬೆಂಗೆವಾಯ್–ಬೆನ್ನೇರು
ಬೆಂಚೆ–ಸಣ್ಣಕೆರೆ
ಬೆಂಬಳಿಗೊಳ್ಳು–ಹಿಂಬಾಲಿಸು, ಅನುಸರಿಸು
ಬೊಂಬುಳಿ–ತಮ್ಮಟೆ
ಬಚ್ಚಿವಾಕು–ಹುರುಳಿಲ್ಲದ ಮಾತು
ಬಜಾವಣೆ–ಬಾರಿಸುವಿಕೆ(?)
ಬಟ್ಟ–ವೃತ್ತ, ತುಂಬಿದ
ಬಣಗುತನ–ಕ್ಷುದ್ರತನ

ಬದರಿ–ಬೋರೆಯಗಿಡ
ಬಧಿರ–ಕಿವುಡ
ಬಸ್ನಂಬಡು–ತೊಂದರೆಪಡು
ಬನಿತೆ–ಸ್ತ್ರೀ
ಬಯಲಬಸ್ನಣೆ–ಬ್ರಹ್ಮಹೆಮ್ಮೆ
ಬರಸೆಳೆ–ಬಲವಾಗಿ ಎಳೆದುಕೊಳ್ಳು
ಬಲಗೊಳ್ಳು–ಪ್ರದಕ್ಷಿಣೆಹಾಕು
ಬಲವಂಕ–ಬಲಬದಿ
ಬಲ್ಲತನ–ಪಾಂಡಿತ್ಯ
ಬಲುಮೆ–ಬಲ್ಮೆ, ಪರಾಕ್ರಮ
ಬಲ್ಪು–ಸಾಮರ್ಥ್ಯ
ಬಲ್ಲೆಹ–ಭರ್ಚಿ
ಬವರ–ಯುದ್ಧ, ಭ್ರಮರ
ಬವರಿಪ–ಹೋರಾಡುವ
ಬಳಲು–ಸೇತಾಡು
ಬಳುವಳಿ–ಕಾಣಿಕೆ, ಉಡುಗೊರೆ
ಬಳ್ಕು–ಹೊಯ್ದಾಡು
ಬಳ್ಳು–ನರಿ
ಬಾಕುಳಿತನ–ಅತ್ಯಾಸೆ
ಬಾಜಿಸು–ವಾಚಿಸು, ಓದು
ಬಾಡಬ–ಕಡಲ್ಗಿಚ್ಚು
ಬಾಣಸ–ಅಡುಗೆ
ಬಾಲೇಂದು–ಎಳೆಚಂದ್ರ
ಬಾಹುಪೂರ–ತೋಳಬಂದಿ
ಬಿಕ್ಕೆ–ತೇಗು(?)
ಬಿಜಯಂಗೈ–ಹೊರಡು, ಆಗಮಿಸು
ಬಿಜ್ಜವಣಿಗೆ–ಬೀಸಣಿಕೆ
ಬಿಡಿಕೆ–ಬಿಡುವಿಕೆ
ಬಿಣ್ಗೊನೆ–ದೊಡ್ಡಟೊಂಗೆ
ಬಿದಿ(ದ್ಭ)–ವಿಧಿ
ಬಿನದ(ದ್ಭ)–ವಿನೋದ
ಬಿಯಜನ–ಬೀಸಣಿಕೆ
ಬಿಯದ(ದ್ಭ)–ವ್ಯಾಧ, ಬೇಡ
ಬಿರಹಿ(ದ್ಭ)–ವಿರಹಿ
ಬಿರುಬು–ಬಲವಂತಿಕೆ
ಬಿರುದಾಯತ–ಬಿರುದುಧಾರಿ
ಬಿಸರುಹ–ಕಮಲ
ಬಿಸುಗದಿರ–ಸೂರ್ಯ
ಬಿಸುಸುಯ್–ನಿಟ್ಟುಸಿರುಬಿಡು
ಬಿಳಿಲು–ಆಲದಮರದ ಜಡೆ
ಬೀಗು–ಉಬ್ಬು, ಉತ್ಸುಕನಾಗು
ಬೆಜ್ಜ(ದ್ಭ)–ವೈದ್ಯ
ಬೆದಕು–ಹುಡುಕಾಡು
ಬೆದೆಯಾವು–ಗರ್ಭಧರಿಸಲು ಇಚ್ಛಿಸುವ ಆಕಳು
ಬೆಬ್ಬಳಿಗೊಳಿಸು–ಭಯಗೊಳಿಸು
ಬೆಲೆವೆಣ್ಣು–ವೇಶ್ಯೆ, ಸೂಳೆ
ಬೆವಹರಿಸು–ವ್ಯವಹರಿಸು
ಬೆಸನ–ವ್ಯಸನ
ಬೆಳದಿಗೆಗಣ್ಣು–ಶುಭ್ರವಾದ ಕಣ್ಣು
ಬೆಳಲ–ಬೆಳವಲಮರ
ಬೆಳ್ವಾರ–ಬಲೆ
ಬೇಗುದಿ–ತವಕ
ಬೇಲ–ಬೇಲದಮರ
ಬೇವಸ–ತಳವಳ
ಬೇಹಾರಿ(ದ್ಭ)–ವ್ಯವಹಾರಿ, ವ್ಯಾಪಾರಿ
ಬೊಕ್ಕಸ–ಭಾಂಡಾರ
ಬೊಜಗ–ವಿಟ, ಕಾಮುಕ
ಬೊಪ್ಪ–ತಂದೆ
ಬೊಬ್ಬುಲಿ–ಜಾಲಿ
ಬೊಬ್ಬುಳಿ–ನೀರಗುಳ್ಳೆ
ಬೊಮ್ಮ(ದ್ಭ)–ಬ್ರಹ್ಮ

ಭ

ಭಂಡ–ನಿರ್ಲಜ್ಜ
ಭಕ್ತದೇಹಿಕದೇವ–ಭಕ್ತನೇ ದೇಹವಾಗುಳ್ಳ ದೇವನು
ಭರ್ಗೋ ದೇವಸ್ಯ(+ಧೀಮಹಿ)–
ಭರ್ಗ(ಸೂರ್ಯ)ನಾದ ದೇವನಿಗೆ
ನಮಸ್ಕರಿಸುತ್ತೇನೆ.
ಭವಾನಿ–ಪಾರ್ವತಿ
ಭವಿ–ಲಿಂಗಾಂಗಸಾಮರಸ್ಯ ಹೊಂದದವ
ಭಾರ್ಗವವಾಸರ–ಶುಕ್ರವಾರ
ಭಾಜನ–ತಕ್ಕುದು

ಭಾಮುರಿ-ತೋಳಿನಲ್ಲಿ ಧರಿಸುವ
ಒಂದು ಬಗೆಯ ಆಭರಣ
ಭಾರತಿ-ಸರಸ್ವತಿ
ಭಾವಜಕೇಳಿ-ಕಾಮಕೇಳಿ
ಭಾವಸಂಭವ-ಕಾಮ, ಮನ್ಮಥ
ಭಾಸುರ-ಪ್ರಕಾಶಿಸುವ
ಭಾಳ-ಹಣೆ
ಭಾಳನಯನ-ಹಣೆಯಲ್ಲಿ ಕಣ್ಣುಳ್ಳವ, ಶಿವ
ಭಿತ್ತಿ-ಗೋಡೆ
ಭಿಲ್ಲ-ಬೇಡ
ಭುಜಂಗ-ವಿಟ
ಭುಜಗಕಟಕ-ಹಾವನ್ನು ಕಡಗ
ಮಾಡಿಕೊಂಡವ, ಶಿವ
ಭೂಪಾಳಿ-ಒಂದು ರಾಗದ ಹೆಸರು
ಭೂರಿ-ಬಹಳ
ಭೃತ್ಯ-ಸೇವಕ
ಭೇದೋಪಾಯ-ಚತುರೋಪಾಯಗಳಲ್ಲೊಂದು
ಭೋಗಾವತಿ-ಪಾತಾಳದ ರಾಜಧಾನಿ

ಮ

ಮಂಜೀರ-ಪೈಜಣ
ಮಂಡನ-ಆಭರಣ, ಇಡುವಿಕೆ
ಮಂಡಿಸು-ಕುಳಿತುಕೊಳ್ಳು
ಮಂತಣ(ದ್ಭ)-ಮಂತ್ರಣ, ಆಲೋಚನೆ
ಮಂದಯಾನೆ-ಮಂದವಾದ
ನಡುಗೆಯುಳ್ಳವಳು
ಮಂದ್ರ-ಸಂಗೀತದಲ್ಲಿ ಮೊದಲನೆಯ
ಸಪ್ತಕದ ಸ್ವರ
ಮಂದಾಕಿನಿ-ಗಂಗಾನದಿ
ಮುಂಚೂಣಿ-ಮುಂಭಾಗ
ಮುಂಡಾಡು-ನೇವರಿಸು, ಮುದ್ದಿಸು
ಮುಂಬು-ಸಮ್ಮುಖ
ಮಕರಿಕಾಪತ್ರ-ಸ್ತ್ರೀಯರು ಅಂಗಾಂಗಗಳ
ಮೇಲೆ ಬರೆದುಕೊಳ್ಳುವ ಮೊಸಳೆಚಿತ್ರ
ಮಖ-ಯಜ್ಞ
ಮಗ್ಗಲಿಕ್ಕು-ಮಲಗು
ಮಚ್ಚರ(ದ್ಭ)-ಮಾತ್ಸರ್ಯ
ಮಜ್ಜನ-ಸ್ನಾನ
ಮಡ-ಹಿಮ್ಮಡಿ, ಹಿಂಬಡ
ಮಡಗು-ಅಡಗಿಸು, ಬಚ್ಚಿಡು
ಮಣಿಮಾಡ-ಉಪ್ಪರಿಗೆ, ಅಂತಸ್ತು
ಮಣಿಹ-ಕಾರ್ಯ
ಮತ್ತಕಾಶಿನಿ-ಸುಂದರಿ
ಮತ್ತೇಭ-ಮದ್ದಾನೆ
ಮದನಾಂತಕ-ಶಿವ
ಮದರೇಖೆ-ಮದೋದಕದ ಧಾರೆ
ಮದವಾರಣ-ಮದ್ದಾನೆ
ಮದಾಂಬು-ಮದೋದಕ
ಮದಾಳಿ-ಮದವೇರಿದ ಭ್ರಮರ
ಮಧುರಾಜ-ವಸಂತ
ಮಧುವಸುಧಾರಮಣ-ವಸಂತರಾಜ
ಮನಂಗೊಳ್ಳು-ಮನೋಹರವಾಗಿರು
ಮನಸಿಜಹರ-ಶಿವ
ಮರಕತ-ಹಸಿರುರತ್ನ
ಮರೀಚಿ-ಕಾಂತಿ, ಕಿರಣ
ಮರುಜವನಿ-ಸಂಜೀವಿನಿಮಣಿ
ಮರುಳ-ಭೂತ
ಮಲಯಜ-ಶ್ರೀಗಂಧ
ಮಲ್ಲ-ಕುಸ್ತಿ, ಆಳು
ಮಲ್ಲಳಿ-ಭಯ, ವಿಸ್ಮಯ
ಮಲ್ಲಿಗೆಗೋಲ-ಕಾಮ
ಮಲೆ-ಪರ್ವತ
ಮಳಿಗೆ(ದ್ಭ)-ಮಠಿಕಾ, ಅಂಗಡಿ
ಮಾಗಧ-ಹೊಗಳುಭಟ್ಟ
ಮಾಜದ-ಮಾಸದ, ಅಳಿಸಿಹೋಗದ
ಮಾತಂಗ-ಆನೆ
ಮಾನಿತ-ಪೂಜ್ಯ
ಮಾಮಸಕ-ಅತ್ಯುತ್ಸಾಹ
ಮಾಯಕ-ಅಸತ್ಯ, ಕಪಟ
ಮಾರ-ಕಾಮ
ಮಾರ್ತಂಡ-ಸೂರ್ಯ
ಮಾರ್ಪಡೆ-ವೈರಿಪಡೆ

ಮಾರ್ಬಲ-ವೈರಿಸೈನ್ಯ
ಮಾರ್ಮಲೆ-ಮೇಲೆಬೀಳು
ಮಾರಾಂತ-ಎದುರಿಸಿದ
ಮಾವುತ-ಆನೆ ನಡೆಸುವವ
ಮಾಸತಿ-ಮಹಾಸತಿ, ಪತಿಯೊಂದಿಗೆ
ಪ್ರಾಣ ತ್ಯಾಗಮಾಡುವ ಸಾಧ್ವಿ
ಮಿಗ-ಮೃಗ, ಜಿಂಕೆ
ಮಿಣ್ಣೆ-ಕಲ್ಲಿನ ಹರಳು
ಮಿತ್ರ-ಸೂರ್ಯ
ಮಿರುಪ-ಹೊಳೆಯುವ
ಮಿಸುನಿ-ಬಂಗಾರ
ಮೀಟು-ಚಿಮ್ಮು, ನೆಗೆ
ಮೀನಕೇತನ-ಕಾಮ
ಮುಕ್ತಾಫಳ-ಮುತ್ತು
ಮುಕ್ತಾಸಿ-೧. ದೋಷರಹಿತವಾದ
೨. ಮುತ್ತುಗಳಿಂದ ಶುಭ್ರವಾದ
ಮುಖರ-ಧ್ವನಿಗೆಯ್ವ
ಮುಟ್ಟು-ಉಪಕರಣ
ಮುಡುಬ-ಹೆಳವ
ಮುಡುಹ-ಮೇಲ್ಭುಜ
ಮುತ್ತುಗರೆ-ಮುತ್ತನ್ನು ಸುರಿಸು
ಮುತ್ತಯ್ಯ-ಅಜ್ಜ
ಮುನಿಸು-ಕೋಪ
ಮುಪ್ಪೊಳಲು-ಮೂರುಪಟ್ಟಣಗಳು
ಮುರಹರ-ವಿಷ್ಣು
ಮೂಕೊರೆಯ-ಕೊರೆದ ಮೂಗಿನವ
ಮೂಗುವಡು-ಮೂಕನಾಗು
ಮೂಡಿಗೆ-ಬತ್ತಳಿಕೆ
ಮೂಡೆ-ಧಾನ್ಯತುಂಬುವ ಚೀಲ
ಮೂರೈದು-ಹದಿನೈದು
ಮೂಲಮಂತ್ರ-ಪಂಚಾಕ್ಷರಿಮಂತ್ರ
ಮೃಗಧರಕಾಂತ-ಚಂದ್ರಕಾಂತಶಿಲೆ
ಮೃಗಮದ-ಕಸ್ತೂರಿ
ಮೃಗರಾಜಪೀಠ-ಸಿಂಹಾಸನ
ಮೃಗಲಕ್ಷ್ಮ-ಚಂದ್ರ
ಮೃಗಶಾಬ-ಜಿಂಕೆಮರಿ
ಮೃಗೇಕ್ಷಣೆ-ಜಿಂಕೆಯಂಥ ಕಣ್ಣುಳ್ಳವಳು
ಮೃಡ-ಶಿವ
ಮೃಣಾಳ-ಕಮಲದ ದೇಟು
ಮೆಯ್ಗೆಡು-ಮೆಯ್ಯನ್ನು ಹಾಳುಮಾಡಿಕೊಳ್ಳು
ಮೆಯ್ದೋರು-ಕಾಣಿಸಿಕೊಳ್ಳು
ಮೆಳೆ-ಬಿದಿರುಗುಂಪು
ಮೇಖಲೆ-ಟೊಂಕಪಟ್ಟಿ
ಮೇದಿನಿ-ಭೂಮಿ
ಮೇಲನು-ಅಧಿಕತರವಾದುದನ್ನು
ಮೇಲ್ವರಿ-ಮೇಲೆಬೀಳು
ಮೇಲಾಳು-ಶೂರ
ಮೇಲುದ-ಉತ್ತರೀಯ
ಮೈಗರೆ-ಅಡಗು
ಮೈಯಿಕ್ಕು-ನಮಸ್ಕರಿಸು
ಮೊಗರಂಬ-ಮುಖವಾಡ
ಮೊನೆಗಾರ-ಯುದ್ಧವೀರ
ಮೊರಸುವಡೆ-ಸೈನ್ಯವಿಶೇಷ
ಮೊರೆಧರ್ಮ-ಆಶ್ರಯಬೇಡಿ
ಬಂದವರನ್ನು ರಕ್ಷಿಸುವ ಧರ್ಮ
ಮೊಲ್ಲೆ-ದೊಡ್ಡಮಲ್ಲಿಗೆ
ಮೋಟ-ಅವಯವಹೀನ, ಕುಂಟ
ಮೋಹರ-ಗುಂಪು

ಯ

ಯಜನ-ಯಜ್ಞಮಾಡುವುದು
ಯತೋ ವಾಚೋ(+ನಿವರ್ತಂತೇ ಅಪ್ರಾಪ್ಯ ಮನಸಾ ಸಹ)-ಮುಟ್ಟದಲೇ ಮನಸ್ಸಿನೊಂದಿಗೆ ಮಾತುಗಳು ಹಿಂದಿರುಗುತ್ತವೆ
ಯಕ್ಷಕರ್ದಮ-ಸುಗಂಧ್ರವ್ಯ ವಿಶೇಷ
ಯಜ್ಞಸೂತ್ರ-ಜನಿವಾರ
ಯಾಗ-ಯಜ್ಞ

ರ

ರೆಂಕೆ-ರೆಕ್ಕೆ
ರಜತಾಚಳ-ಕೈಲಾಸಪರ್ವತ, ಬೆಳ್ಳಿಬೆಟ್ಟ
ರತ-ಆಸಕ್ತ, ಮಗ್ನ
ರತಿ-ಪ್ರೀತಿ

ರತಿಪ–ಕಾಮ
ರದನ–ಹಲ್ಲು
ರನ್ನವಚ್ಚ–ರತ್ನದಿಂದ ಮಾಡಿದ ಆಭರಣ
ರನ್ನವಲ್ಲಣ–ರತ್ನದ ತಡಿ
ರಮೆ–ಲಕ್ಷ್ಮಿ
ರಯ್ಯ(ಧ್ಯ)–ರಮ್ಯ, ಸುಂದರ
ರವ–ಧ್ವನಿ, ಶಬ್ದ
ರವಳಿ–ಗದ್ದಲು
ರಸಾಳ–ರಸಾಲ, ಮಾವು
ರಸೆ–ಭೂಮಿ
ರಾಗ–ಪ್ರೀತಿ, ಸಂತೋಷ
ರಾಜವದನೆ–ಚಂದ್ರಮುಖಿ
ರಾಜ್ಯಾಂತೇ ನರಕಂ–ರಾಜ್ಯದ ಅಂತ್ಯದಲ್ಲಿ
ನರಕವಾಗುತ್ತದೆ
ರಾಜಿ–ಗುಂಪು
ರಾಜಿಸು–ಪ್ರಕಾಶಿಸು
ರಾಣುವೆ–ಸೈನ್ಯ
ರಾಮಣೀಯಕ–ಮನೋಹರವಾದ
ರಾಯಸ–ಸರಕಾರದ ಸಂದೇಶ
ರಾವುತ–ಕುದುರೆ ಸವಾರ
ರುಚಿ–ಕಾಂತಿ, ಪ್ರಕಾಶ
ರೇವಂತ–ಸೂರ್ಯ ಸಂಜ್ಞಾ ಇವರ
ಮಗನಾದ ಅಶ್ವಾರೋಹಿದೇವತೆ
ರೋಚಿ–ಕಾಂತಿ, ಕಿರಣ
ರೋಡಾಡು–ಹೀಗಳೆ
ರೌರವ–ನರಕವಿಶೇಷ

ಲ
ಲಂಡ–ನೀಚ
ಲಗ್ಗೆ–ದಾಳಿ, ಮುತ್ತಿಗೆ
ಲತಾಂತಮಾರ್ಗಣಕೇಳಿ–ಸಂಭೋಗಕ್ರೀಡೆ
ಲತಾಂತಶರ–ಕಾಮ
ಲಲಾಮ–ಭೂಷಣ
ಲಲ್ಲೆಗಱೆ–ಪ್ರೀತಿಸು
ಲಸತ್–ಹೊಳೆಯುವ
ಲಳಿ–ಉತ್ಸಾಹ

ಲಾಸ್ಯ–ತೊನೆಯುವಿಕೆ
ಲುಬ್ಧಕ–ಬೇಡ, ವ್ಯಾಧ
ಲುಳಿ–ಕಾಲಲ್ಲಿ ಧರಿಸುವ ಆಭರಣವಿಶೇಷ
ಲೋಗರು–ಜನರು
ಲೋಚನ–ಕಣ್ಣು
ಲೋಲ–ಆಸಕ್ತ
ಲೋವೆ–ಇಳಿಜಾರು ಚಪ್ಪರ
ಲೋಹವಕ್ಕರಿಕೆ–ಲೋಹದಿಂದ ಮಾಡಿದ
ಮೈಜೋಡು

ವ
ವಂಗಡ–ಗುಂಪು
ವಜೀರ–ಪ್ರಧಾನ, ಮುಖ್ಯಮಂತ್ರಿ
ವನವಧು–ವಾಸಂತಿ
ವರ್ಗತ್ರಯ–ರಾಜನಿಗೆ ಸಂಬಂಧಿಸಿದ
ಕ್ಷಯ, ಸ್ಥಾನ, ವೃದ್ಧಿಗಳು
ವರಜ–ಅಣ್ಣ
ವರುಣದಿಕ್–ಪಶ್ಚಿಮದಿಕ್ಕು
ವಸನ–ಬಟ್ಟೆ
ವಸುಧೆ–ಭೂಮಿ
ವಸಂತಕೇಳಿ–ವನಕೇಳಿ
ವಹಣಿ–ತೆರೆ, ಅಲೆ
ವಳಿ–ಸ್ತ್ರೀಯ ಹೊಟ್ಟೆಯ ಮೇಲಿನ ಮೂರು
ಗೆರೆಗಳು
ವಳಿತ–ಸುತ್ತುವರಿದ
ವಕ್ಷೋರುಹ–ಮೊಲೆ
ವಾಚ್ಯವಾಚಕ ಭೇದ–ಅರ್ಥ ಮತ್ತು ಶಬ್ದ ಭೇದ
ವಾಚಿಕ–ಮಾತಿನ
ವಾಜಿ–ಕುದುರೆ
ವಾಮ–ಎಡ
ವಾರಣ–ಆನೆ
ವಾರವಧೂಟಿ–ವೇಶ್ಯೆ
ವಾರಾಸಿ–ಸಮುದ್ರ
ವಾರಿಜಭವ–ಬ್ರಹ್ಮ
ವಾರಿದ–ಮೋಡ
ವಾರುವ–ಕುದುರೆ

ವಾಲ್ಮೀಕ–ಹುತ್ತ
ವಾಹಿನಿ–ನದಿ, ಪ್ರವಾಹ
ವಿಕರಿಸು–ವಿಕಾರಿಸು
ವಿಗಡ(ಢ)–ವಿಕಟ, ಭೀಕರ
ವಿಟ–ಕಾಮುಕ, ವಿಲಾಸಿ
ವಿಟಪಿ–ಮರ
ವಿಡಾಯ–ಆಡಂಬರ
ವಿತತ–ವಿಸ್ತಾರವಾದ
ವಿತರಣ–ದಾನ
ವಿತ್ತ–ಸಂಪತ್ತು
ವಿತ್ಪನ್ನತೆ–ಜಾಣ್ಮೆ
ವಿದಳನ–ಸೀಳುವ
ವಿಧಿ–ನಿಯಮ
ವಿಪಿನ–ಅಡವಿ
ವಿಪೂತ–ವಿಶೇಷ ಜಯಶಾಲಿ
ವಿಬುಧ–ವಿದ್ವಾಂಸ
ವಿಭ್ರಮ–ಶೋಭೆ, ಬೆಡಗು
ವಿಭವ–ಸಡಗರ
ವಿಯತ್–ಆಕಾಶ, ಮುಗಿಲು
ವಿಲಯ–ನಾಶ
ವಿಲೋಪ–ನಾಶಮಾಡುವ
ವಿಶ್ರುತ–ವಿಖ್ಯಾತ
ವಿಷ್ಟರ–ಸಿಂಹಾಸನ
ವಿಷರುಹಭವ–ಕಮಲದಲ್ಲಿ ಹುಟ್ಟಿದವ, ಬ್ರಹ್ಮ
ವಿಸಟಂಬರಿ–ಹರಿದಾಡು
ವಿಸರ–ಸಮೂಹ
ವೀಟಿಕೆ–ತಾಂಬೂಲ
ವೀತ–ತ್ಯಜಿಸಿದ
ವೆಗ್ಗಳ–ಹೆಚ್ಚಳ
ವೇಣು–ಬಿದಿರು
ವೇಚಿಸು–ವೆಚ್ಚಿಸು, ತ್ಯಾಗಮಾಡು
ವೈಕುಂಠ–ವಿಷ್ಣುವಿನ ವಾಸಸ್ಥಳ
ವೈಜಯಂತಿ–ಧ್ವಜ
ವೈಶಿಕ–ವಶೀಕರಣ ತಂತ್ರ
ವ್ರಾತ್ಯ–ಶೂದ್ರ
ವ್ಯಾಳ–ಸರ್ಪ

ಶ
ಶಂಬರಾರಿ–ಕಾಮ
ಶುಂಡಾಲ–ಆನೆ
ಶಕ್ರಪದ–ಇಂದ್ರಪದವಿ
ಶತಪತ್ರ–ಕಮಲ
ಶತಪತ್ರಪುತ್ರ–ಬ್ರಹ್ಮ
ಶಮಿತ–ಶಮನಮಾಡಿದ
ಶಯನಶಾಲೆ–ಮಲಗುವ ಕೋಣೆ
ಶರ–ಬಾಣ
ಶರಧಿ–ಸಮುದ್ರ
ಶರನಿಧಿ–ಸಮುದ್ರ
ಶಶಾಂಕ–ಚಂದ್ರ
ಶಶಿಕಾಂತ–ಚಂದ್ರಕಾಂತಶಿಲೆ
ಶಾತ್ರವ–ವೈರಿಗೆ ಸಂಬಂಧಿಸಿದ
ಶಾಬ್ದಿಕ–ವೈಯಾಕರಣಿ
ಶಾಲ್ಯನ್ನ–ಅಕ್ಕಿಯ ಅನ್ನ
ಶಾಸೆ–ಸೇಸೆ, ಮಂತ್ರಾಕ್ಷತೆ
ಶಿಖಿ–೧. ಬೆಂಕಿ ೨.ನವಿಲು, ೩.ಮುಡಿ
ಶಿವಸಾಹಿತ್ಯ–ಶಿವಯೋಗ
ಶಿಶಿರ–ಚಳಿಗಾಲ
ಶಿಳೀಮುಖ–ಬಾಣ
ಶೂನ್ಯ–ಜೊಳ್ಳು
ಶೂಲಿ–ಶಿವ
ಶೇಷತಲ್ಪ–ಆದಿಶೇಷನನ್ನೇ ಹಾಸಿಗೆಯನ್ನಾಗಿ ಮಾಡಿಕೊಂಡವ, ವಿಷ್ಣು
ಶೈಲ–ಪರ್ವತ
ಶೋಣಾಂಬುಜ–ಕೆಂಪು ಕಮಲ
ಶ್ರುತಿ–ವೇದ

ಷ
ಷಂಡ–ಸಮೂಹ
ಷಟ್ಕರ್ಮ–ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ
ಷಟ್ಪದ–ಭ್ರಮರ
ಷಡ್ಬ್ರಹ್ಮಯೋಗ–ಷಡ್ವಿಧಯೋಗ, ಶಿವಯೋಗ

ಷಡ್ಗುಣ–ರಾಜನೀತಿಯ ಆರು ಗುಣಗಳು:
ಸಂಧಿ, ವಿಗ್ರಹ, ಯಾನ, ಆಸನ,
ಸಂಶ್ರಯ ಮತ್ತು ದ್ವೈಧೀಭಾವ

ಸ

ಸಂಕದಿಕ್ಕೆ–ಶಂಕಗಳ ನೆಲೆ
ಸಂಕಾಶ–ಸಾದೃಶ್ಯ
ಸಂಗರ–ಯುದ್ಧ
ಸಂಗ್ರಾಮ–ಯುದ್ಧ
ಸಂದೆಗ–ಸಂದೇಹ
ಸಂದೋಹ–ಸಮೂಹ
ಸಂಧಿವಿಗ್ರಹ–ಒಪ್ಪಂದ ಮತ್ತು ಯುದ್ಧ
ಸಂವಿತ್ತು–ಜ್ಞಾನ
ಸಾಂಗ–ಸಂಪೂರ್ಣವಾದ
ಸಿಂಗವಣೆ–ಸಿಂಹಾಸನ
ಸಿಂಧುರದೈತ್ಯ–ಗಜಾಸುರ
ಸಿಂಧೂರ–ಕುಂಕುಮ
ಸಗ್ಗಿಗ–ದೇವತೆ
ಸಟೆ–ಸುಳ್ಳು
ಸಡ್ಡೆ ಮಾಡು–ಗಮನ ಕೊಡು
ಸತ್ತಿಗೆ–ಛತ್ರಿ, ಕೊಡೆ
ಸದನ–ಮನೆ, ಗೃಹ
ಸದರ–ರಾಜಾಸ್ಥಾನ
ಸನ್ನಿಭ–ಸಮಾನ
ಸಪ್ತಸಂತಾನ–ರಾಜನ ಏಳು
ಧರ್ಮಕಾರ್ಯಗಳು : ಧನನಿಕ್ಷೇಪ,
ತಟಾಕ, ದೇವಾಲಯ, ವನ,
ವಿಪ್ರಸಂಸ್ಥಾಪನ, ತನಯೋತ್ಪಾದನ
ಮತ್ತು ಗ್ರಂಥರಚನೆ
ಸಪ್ತಾಂಗ–ರಾಜ್ಯದ ಏಳು ಅಂಗಗಳು:
ರಾಜ, ಮಂತ್ರಿ, ಮಿತ್ರ, ಕೋಶ, ರಾಷ್ಟ್ರ,
ದುರ್ಗ, ಸೈನ್ಯ
ಸಬಳ–ಭರ್ಚಿ
ಸಮಕಟ್ಟು–ಸಿದ್ಧತೆ
ಸಮ್ಯಕ್–ಚೆನ್ನಾಗಿ
ಸಮಸಮಯ–ವಸಂತಕಾಲ
ಸಮೀರ–ಗಾಳಿ
ಸರಣಿ–ಶ್ರೇಣಿ, ಸಾಲು
ಸರಜ–ಸರಜಾ, ಸಿಂಹ
ಸರಲ–ಬಾಣ
ಸರ್ವಮನ್ಯತ್ಪರಿತ್ಯಜ್ಯ–ಬೇರೆಯೆಲ್ಲವನ್ನು ಬಿಟ್ಟು
ಸರ್ವವಿದ್ಯಾನಾಮೀಶ್ವರಮಿತಿ–ಸರ್ವವಿದ್ಯೆಗಳಿಗೆ
ಈಶ್ವರನೇ(ಒಡೆಯ)
ಸರಸಿಜನಾಭ–ವಿಷ್ಣು
ಸರಹದಿ–ಸೀಮೆ
ಸರಳಿಸು–ಬಾಣಪ್ರಯೋಗಮಾಡು
ಸರಿವು–ಝುರಿ
ಸರು–ಕಾಡುಮೃಗಗಳು ಹೋದಹಾದಿ
ಸರೋಜ–ಕಮಲ
ಸರೋರುಹ–ಕಮಲ
ಸಲ್ಲಲಿತ–ಸುಂದರವಾದ
ಸವಡು–ಎರಡು
ಸವನಿಸು–ಉಂಟಾಗು
ಸಸಿನ–ಸರಳ,ನೆಟ್ಟಗೆ
ಸಹಕಾರ–ಮಾವಿನಮರ
ಸಹಭೋಗಿನಿ–ಮಿಕ್ಕರಾಣಿಯರು, ಉಪಪತ್ನಿಯರು
ಸಾಗರಶಯನ–ವಿಷ್ಣು
ಸಾಜ–ಸಹಜ
ಸಾನು–ಬೆಟ್ಟದ ಇಳುಕಲು
ಸಾರ–ಅತ್ಯುತ್ತಮ
ಸಾರಸ–ಕೊಕ್ಕರೆಹಕ್ಕಿ
ಸಾರು–ಸಮೀಪಿಸು, ಹೋಗು
ಸಾಳುವ–ಗಿಡಗ
ಸಿಡಿವನಿ–ತುಂತುರ ಹನಿ
ಸಿತ–ಬಿಳಿ
ಸಿತಗ–ವ್ಯಭಿಚಾರಿ, ನೀಚ
ಸಿತದಳ–ಕಮಲ(?)
ಸಿತಪಕ್ಷ–ಶುಕ್ಲಪಕ್ಷ
ಸಿತಿಕಂಠ–ಶಿವ
ಸಿದ್ಧರಸ–ವಸ್ತುವನ್ನು ಬಂಗಾರವನ್ನಾಗಿ
ಪರಿವರ್ತಿಸುವ ರಸ
ಸಿದ್ಧಾಂತ–ನಿಶ್ಚಿತವಾದ ಜ್ಞಾನ

ಸಿರಿಕಂಡ(ದ್ಭ)–ಶ್ರೀಖಂಡ, ಶ್ರೀಗಂಧ
ಸಿರಿಯರಸ–ವಿಷ್ಣು
ಸೀಗುರಿ–ಚಾಮರವಿಶೇಷ
ಸೀತ್ಕಾರ–ಅರಚುವಿಕೆ
ಸೀಮಂತರೇಖೆ–ಬೈತಲೆ
ಸೀರ್ಪನಿ–ತುಂತುರು ಹನಿ
ಸುಖಾಸ್ವೇದ–ಆನಂದಾಶ್ರು
ಸುಗ್ಗಿಗೆಳೆಯ–ಕಾಮ
ಸುತ್ರಾಮ–ದೇವೇಂದ್ರ
ಸುದತಿ–ಸುಂದರಿ, ಸ್ತ್ರೀ
ಸುಧಾ–ಅಮೃತ
ಸುನಿ–ನಾಯಿ
ಸುರಕರಿ–ಐರಾವತ
ಸುರಗಿ–ಖಡ್ಗ
ಸುರಗಿರಿ–ಕೈಲಾಸಪರ್ವತ
ಸುರತ–ರತಿಕ್ರೀಡೆ
ಸುರಧೇನು–ಕಾಮಧೇನು
ಸುರನದಿ–ದೇವಗಂಗೆ
ಸುರಪತಿ–ದೇವೇಂದ್ರ
ಸುರಭಿವಾರಿ–ಸುಗಂಧಭರಿತ ನೀರು
ಸುರಭೂಜ–ಕಲ್ಪವೃಕ್ಷ
ಸುರಸತಿ–ದೇವತಾಸ್ತ್ರೀ
ಸುರೇಂದ್ರ–ದೇವೇಂದ್ರ
ಸುಲಿಪಲ್ಲು–ಸ್ವಚ್ಛವಾದ ಹಲ್ಲು
ಸುಸಿಲ್–ಸಂಭೋಗ
ಸುಸ್ಮೇರ–ಚೆಲುವಾದ ಎಳೆನಗೆ
ಸೂಕರ–ಹಂದಿ
ಸೂಡಂಗ–ಬಳೆ
ಸೂಡು–ಧರಿಸು
ಸೂದನ–ವೈರಿ, ನಾಶಮಾಡುವವ
ಸೂನು–ಮಗ
ಸೂನೃತ–ಸತ್ಯ
ಸೂರಿ–ವಿದ್ವಾಂಸ
ಸೂಳ್–ಸರದಿ, ಪಾಳಿ
ಸೂಳಾಯ್ತ–ಅಂಗರಕ್ಷಕ
ಸೂಳೈಸು–ವಾದ್ಯಧ್ವನಿಮಾಡು
ಸೆಜ್ಜೆವನೆ–ಶಯ್ಯಾಗೃಹ
ಸೆರೆ–ನರ
ಸೆಱಿಗೆಯ್–ಬಂಧಿಸು
ಸೆಳೆಗೊಂಬು–ಉದ್ದವಾದ ಟೊಂಗೆ
ಸೆಳೆನಡು–ಬಳಕುವ ಟೊಂಕ
ಸೇಚನ–ಎರಚುವಿಕೆ
ಸೇರುವೆ–ಗುಂಪು
ಸೈಗಱೆ–ದಟ್ಟವಾಗಿ ಸುರಿ
ಸೈಗೆಡು–ದಂಡನಮಸ್ಕಾರ ಮಾಡು
ಸೈರಿಭ–ಕಾಡುಕೋಣ
ಸೈವೆರಗಾಗು–ಆಶ್ಚರ್ಯಪಡು
ಸೈವೆರಸು–ಚೆನ್ನಾಗಿ ಬೆರಸಿಕೊಳ್ಳು
ಸೊಗ(ದ್ಭ)–ಸುಖ
ಸೊಣಕ(ದ್ಭ)–ಶುನಕ
ಸೊದೆ(ದ್ಭ)–ಸುಧಾ, ಅಮೃತ
ಸೊನ್ನಾರ–ಅಕ್ಕಸಾಲಿಗ
ಸೊವಡು–ಉಗ್ರವಾಸನೆ(?)
ಸೋಗೆ–ನವಿಲುಗರಿ
ಸೋನೆ–ರಸ
ಸೋಮಧರ–ಶಿವ
ಸೋಲ್ಮುಡಿ–ಇಳಿಬಿಟ್ಟ ತುರುಬ
ಸೋವು–ಹೊಡೆದೋಡಿಸು
ಸೋಹಂಭಾವ–ನಾನೇ ದೇವರೆಂಬ ಭಾವನೆ
ಸೌದಾಮಿನಿ–ಮಿಂಚು
ಸೌಸವ–ಪರಿಮಳ
ಸ್ಮರ–ಕಾಮ
ಸ್ಥಾಯಿ–ಸಂಗೀತದಲ್ಲಿ ನಿಲುಗಡೆಯ ಸ್ಥಾನ
ಸ್ವೇದ–ಬೆವರು

ಹ

ಹಂಸಗಾಮಿನಿ–ಹಂಸದ ನಡೆಯುಳ್ಳವಳು
ಹಿಂಗಳ–ಇಂಗಳಮರ(?)
ಹಿಂತಾಳ–ತಾಳೆಮರ
ಹೊಂಗರಿ–ಬಂಗಾರದ ಗರಿ(?)
ಹೊಂಗು–ಸಂತೋಷಪಡು
ಹೊಂತಕಾರ–ಬಲಶಾಲಿ, ಚತುರ

ಹಕ್ಕೆಮನೆ-ಆಶ್ರಯಸ್ಥಾನ
ಹಗರಣಿಗ-ನಟ, ನಾಟಕಕಾರ
ಹಜ್ಜೆ-ತೂತು
ಹತಾಹತಿ-ಕೈಕೈಯಿಂದ ಹೊಡೆದಾಡುವುದು
ಹತ್ತಗಟ್ಟು-ಬಿಗಿದುಕಟ್ಟುವ ಕುಪ್ಪಸ
ಹದನ-ರೀತಿ
ಹಮ್ಮದ-ಪರವಶ
ಹಮ್ಮೀರ-ಶೂರ, ಧೈರ್ಯಶಾಲಿ
ಹರಗಿರಿ-ಕೈಲಾಶಪರ್ವತ
ಹರಣ-ಪ್ರಾಣ
ಹರದ-ವ್ಯಾಪಾರಿ
ಹರ್ಮ್ಯ-ಅರಮನೆ
ಹರವರಿ-ನಿವಾಸ, ನೆಲೆ
ಹರಿ-೧. ಸಿಂಹ ೨. ಕಪ್ಪೆ
ಹರಿಕಾರ-ಗುಪ್ತಚಾರ
ಹರಿಗೆ-ಗುರಾಣಿ
ಹರಿಣಾಂಕ-ಚಂದ್ರ
ಹರಿನೀಲ-ಇಂದ್ರನೀಲರತ್ನ
ಹರಿಸ(ದ್ಭ)-ಹರ್ಷ
ಹಲ್ಲಣ-ತಡಿ, ಜೀನು
ಹಲ್ಲಣಿಸು-ಎಡಬಿಡದೆ ಮುಂದುವರಿ
ಹವಣು-ಸಮೃದ್ಧ
ಹವ್ಯವಾಹನ-ಬೆಂಕಿ
ಹಸಲೆ-ಹುಲ್ಲುಗಾವಲು
ಹಸಾದ(ದ್ಭ)-ಪ್ರಸಾದ, ಅಪ್ಪಣೆ
ಹಸೆ-ಹಾಸಿಗೆ
ಹಳಚು-ತಾಗು
ಹಳಯಿಗೆ-ಧ್ವಜ
ಹಳುವ-ಅರಣ್ಯ
ಹಾವುಗೆ(ದ್ಭ)-ಪಾದುಕಾ
ಹಾಸ(ದ್ಭ)-ಪಾಶ, ಕೊರಳಪಟ್ಟಿ
ಹಾಸರೆ-ಬಂಡೆಗಲ್ಲು
ಹಿಣಿಲ-ಹೆಳಲು, ಜಡೆ
ಹಿಸುಣ-ಚಾಡಿಕೋರ
ಹಿಳಿ-ಹಿಂಡು
ಹೀರಮುದ್ರಿಕೆ-ವಜ್ರದುಂಗುರ
ಹೀಲಿ-ನವಿಲುಗರಿ
ಹುಯ್ಯಲು-ದಾಳಿ
ಹುರುಡು-ಸ್ಪರ್ಧೆ, ಮತ್ಸರ
ಹುಲಿಮೊಗ-ಹುಲಿ ಮುಖದ ಆಕಾರದಲ್ಲಿರುವ
ಹೆಬ್ಬಾಗಿಲು
ಹೂಗಣೆ-ಹೂವಿನ ಬಾಣ
ಹೂತಿತೊ-ಹೂ ಬಿಟ್ಟಿತೊ
ಹೂನ್ಯ-ಪುಣ್ಯ
ಹೆಕ್ಕಳ-ಸಂತೋಷ
ಹೆದೆ-ಬಿಲ್ಲಿನ ದಾರ
ಹೆಮ್ಮೆಳೆ-ದೊಡ್ಡ ಬಿದುರು ಮೆಳೆ
ಹೆರಸಾರು-ಹಿಂದೆಸರಿ
ಹೆರೆಹಿಂಗು-ಹಿಂಜರಿ
ಹೇಜಿಪ-ರಾಜದೂತ(?)
ಹೇರೀಟಿ-ದೊಡ್ಡ ಭರ್ಚಿ
ಹೇಷಾನಿರ್ಘೋಷ-ಕುದುರೆಯ ಧ್ವನಿ
ಹೊಗಜೇರು-ಕಾಂತಿಹೊಂದು
ಹೊಣಕೆ-ಸಾಮರ್ಥ್ಯ, ಯುದ್ಧ
ಹೊದಕುಳಿ-ಬೇಗುದಿ
ಹೊರಜೆ-(ಅನೆ ಕಟ್ಟುವ)ದಪ್ಪ ಹಗ್ಗ
ಹೊರವಳಕೆ-ಬಾಹ್ಯದಲ್ಲಿ
ಹೊರಳಿ-ಗುಂಪು
ಹೊರೆಯೇರು-ಹಿಗ್ಗು, ಉಬ್ಬು
ಹೋಕು-ನಾಶ, ಹಾನಿ
ಹೋರು-ಕಾದಾಡು

❖❖

೩. ನಾಮ ಕೋಶ

ವ್ಯಕ್ತಿನಾಮ

೪. ಗ್ರಂಥನಾಮ

❖❖

೫. ಸ್ಥಳನಾಮ

❖❖

ಬೆಳ್ಳಿ ಬಿಟ್ಟ ಬಳ್ಳಿ : ೩

ಕೊಲ್ಲಾಪುರ

ನಿಂಬಸಾಮಂತ ಚರಿತೆ

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜ ಪೇಟೆ, ಬೆಂಗಳೂರು–೧೮

೧೯೮೧

*

ಪ್ರಸ್ತಾವನೆ

"ದಕ್ಷಿಣ ಭಾರತದ ಜೈನ ಇತಿಹಾಸವೆಂದರೆ ಕರ್ನಾಟಕದ ಜೈನ ಇತಿಹಾಸ" ಎಂಬ ವಿದ್ವಾಂಸರೊಬ್ಬರ ಅಭಿಪ್ರಾಯ, ಅರ್ಥಪೂರ್ಣವಾದುದು. ಈ ಮಾತಿಗೆ ವಾಖ್ಯಾನವೆಂಬಂತೆ ಪ್ರಾಚೀನಕರ್ನಾಟಕ ಸಾಹಿತ್ಯ, ಶಿಲ್ಪ, ರಾಜ್ಯಾಡಳಿತ, ಧರ್ಮ, ವಾಣಿಜ್ಯ ಕ್ಷೇತ್ರಗಳ ಅಪೂರ್ವಸ್ತರವಾಗಿ ಬೆಳೆಯಿತು; ಜೈನಧರ್ಮ, ಅದಕ್ಕಾಗಿಯೇ

ಜಿನಧರ್ಮಾವಸವಾದತ್ತಮಳ ವಿನಯಗಾರವಾದತ್ತು ಪದ್ಮಾ।
ಸನನಿರ್ಪ್ಪಾ ಸದ್ಮವಾದತ್ತತಿವಿಶದಯಶೋಧಾಮವಾದತ್ತು ವಿದ್ಯಾ।
ಧನಜನ್ಮಸ್ಥಾನವಾದತ್ತ ಸಮತರದ ಗಂಭೀರಸದ್ಗೇಹವಾದ।
ತ್ತೇನಿಸಲ್ಕಿಂತುಳ್ಳ ನಾನಾ ಮಹಿಮೆಯೊಳೆಸೆಗುಂ ಚಾರು ಕರ್ಣ್ನಾಟದೇಶಂ ॥[೧]

ಎಂದು ಮುಂತಾಗಿ ಶಾಸನಗಳು, ಕರ್ನಾಟಕದಲ್ಲಿ ಪ್ರವಹಿಸಿದ ಜೈನಸಂಸ್ಕೃತಿಯ ಸಾಂದ್ರತೆಯನ್ನು ಸಾರುತ್ತವೆ.

ಉತ್ತರಭಾರತದಿಂದ ಹನಿಯಾಗಿ ಬಂದು, ಶ್ರೀತೀರ್ಥವಾಗಿ ನಿಂದು, ಶಾಂತ ಸಾಗರದ ಗಾಂಭೀರ್ಯದಿಂದ ಬಾಳಿದ ಈ ಮತವನ್ನು 'ಶರಣುವೊಕ್ಕ' ರಾಜಮನೆತನಗಳೆಂದರೆ ಗಂಗ, ಸವದತ್ತಿ ರಟ್ಟ, ಶಾಂತರಸ, ಭೈರರಸ ಮುಂತಾದವು. ಇವಲ್ಲದೆ ಕೆಲವು ಅಜೈನ ಅರಸುಮನೆತನಗಳೂ ಈ ಮತವನ್ನು ಭಕ್ತಿಯಿಂದ ಪಾಲಿಸಿವೆ: ಪೋಷಿಸಿವೆ. ಇವುಗಳಲ್ಲಿ "ಮಹಾಲಕ್ಷ್ಮೀಲಬ್ಧವರಪ್ರಸಾದ"ರೆನಿಸಿದ ಕೊಲ್ಲಾಪುರ ಶಿಲಾಹಾರರ ಮನೆತನ ಸ್ಮರಣೀಯವಾದುದು. "ಗರುಡಲಾಂಛನ"ರೂ 'ಜೀಮೂತ ವಾಹನಾನ್ವಯ' ರೂ 'ತಗರಪುರವರಾಧೀಶ್ವರ' ರೂ ಆದ ಈ ಮಹಾಮಂಡಲೇಶ್ವರರ ವಂಶಚಿತ್ರ ಹೀಗಿದೆ:[೨]

---

೧. E.C. viii ಸೊರಬ ೨೬೧ ಕಳಸವಳ್ಳಿ, ಕ್ರಿ.ಶ. ೧೪೦೮

೨. ಶಿಲಾಹಾರ ರಾಜವಂಶಾಚಾ ಇತಿಹಾಸ ಅಣಿ ಕೋರೀವ ಲೇಖ: (ಪ್ರೊ.ವಿ.ವಿ. ಮಿರಾಶಿ) ಗ್ರಂಥದಿಂದ ಎತ್ತಿಕೊಳ್ಳಲಾಗಿದೆ. (ಪುಟ ೫೦-೫೧)

ಜಟಿಗ I (೯೪೦-೯೬೦)
|
ನಾಯಿವರ್ಮನ್ (೯೬೦-೯೮೦)
|
ಚಂದ್ರ (೯೮೦-೧೦೦೦)
|
ಜಟಿಗ II (೧೦೦೦-೧೦೨೦)

ಗೊಂಕ I (೧೦೨೦-೪೦) | ಗುವಲ I | ಕೀರ್ತಿರಾಜ | ಚಂದ್ರಾದಿತ್ಯ

ಗೊಂಕ I → ಮಾರಸಿಂಹ (೧೦೫೦-೧೦೭೫)

ಗುವಲ II (೧೦೭೫-೧೧೦೦) | ಗೊಂಕ II | ಬಲ್ಲಾಳ (೧೧೦೦-೧೧೦೫) | ಭೋಜ I | ಗಂಡರಾದಿತ್ಯ (೧೧೦೫-೧೧೪೦)

ಗಂಡರಾದಿತ್ಯ → ವಿಜಯಾದಿತ್ಯ (೧೧೪೦-೧೧೭೫)
|
ಭೋಜ II (೧೧೭೫-೧೨೧೨)

ಇವರಲ್ಲಿ ಮೊದಲಿನ ಮೂವರ ಹೆಸರು ತಾಳಲೆ ತಾಮ್ರಪಟ (೧೧೧೦) ಕೊಲ್ಲಪುರ ತಾಮ್ರಪಟ (೧೧೧೫)ಗಳಲ್ಲಿ ಮಾತ್ರ ಬರುತ್ತವೆ. ಹೀಗಾಗಿ ಆಮೇಲೆ ಬರುವ ಇಮ್ಮಡಿ ಜಟಿಗನೇ ಈ ಮನೆತನದ ಸ್ಪಷ್ಟ ಮೂಲಪುರುಷನೆಂದು ಪರಿಗಣಿಸಬೇಕಾಗುತ್ತದೆ.

* * *

ಈ ವಂಶದವರಿಗೆ ಸಂಧಪಟ್ಟಂತೆ ಮಾರಸಿಂಹನ ಮಿರಜದ ತಾಮ್ರಪಟವೇ ಲಭ್ಯ ಪ್ರಥಮಶಾಸನ(೧೦೫೮). ಇಲ್ಲಿ ಪನ್ನಾಳದುರ್ಗ (ಸಾಲು ೬), ಕಿಳಗಿಳದುರ್ಗ (ಸಾಲು ೧೬)ಗಳ ಪ್ರಸ್ತಾಪ ಬಂದಿದೆ. ಇವರೆಡೂ ಒಂದೇ ಗ್ರಾಮದ ಪರ್ಯಾಯ ನಾಮಗಳೆಂದು ವಿದ್ವಾಂಸರ ಮತ.

ಮಾರಸಿಂಹ "ನಿಜರಾಜಧಾನೀ ಶ್ರೀಖಿಳಗಿಳಿದುರ್ಗ"ದಲ್ಲಿ ಆಳುತ್ತಿದ್ದನೆಂದು ಇಲ್ಲಿ (ಮಿರಜ ತಾಮ್ರಪಟ (೧೦೫೮) ಹೇಳಲಾಗಿದೆ.

ಗಂಡರಾದಿತ್ಯನು "ಎಡೆನಾಡಂತರ್ಗತ ತೀರವಡಿಗ್ರಾಮೇ ಬೀಡಾನುವೃತ್ಯಾ" ಆಳುವಾಗ ತಾಳಲೆ ತಾಮ್ರಪಟ (ಕ್ರಿ.ಶ. ೧೧೧೦), "ವಳಯವಾಡ ಶಿಬಿರ"ದಲ್ಲಿ ಆಳುವಾಗ ಕೊಲ್ಲಾಪುರ ತಾಮ್ರಪಟ (ಕ್ರಿ.ಶ.೧೧೧೫), "ವಳವಾಡದ ನೆಲೆವಿಡಿ ನೊಳು ಆಳುವಾಗ ಹೇರ್ಲೆ ಶಿಲಾಲೇಖ (ಕ್ರಿ.ಶ. ೧೧೧೮) "ವಲ್ಲವಾಡಗ್ರಾಮೋ ಬೀಡಾನುವೃತ್ಯಾ" ಆಳುತ್ತಲಿರುವಾಗ ಕೊಲ್ಲಾಪುರ ತಾಮ್ರಪಟ (ಕ್ರಿ.ಶ. ೧೧೨೬), "ವಳವಾಡದ ನೆಲೆವೀಡಿ"ನೊಳು ಆಳುವಾಗ ಕೊಲ್ಲಾಪುರ ಶೀಲಲೇಖ (೧೧೩೫)ಗಳು ಹುಟ್ಟಿವೆ. ಕನ್ನಡಕವಿ ಕರ್ಣಪಾರ್ಯನು ಗಂಡರಾದಿತ್ಯನನ್ನು "ಕಿಳಕಿಳದುರ್ಗಾಧಿಪಂ" ಎಂದು ತನ್ನ ನೇಮಿನಾಥ ಪುರಾಣದಲ್ಲಿ ಕರೆದಿರುವನು.[೩]

ಮಗ ವಿಜಯಾದಿತ್ಯನು "ವಳವಾಡದ ನೆಲೆವೀಡಿನಲು" ಆಳುವಾಗ ಮಿರಜ ಶಿಲಾಲೇಖ (೧೧೪೧), "ವಳವಾಡ ಸ್ಥಿರಶಿಬಿರೇ" ಆಳುವಾಗ ಕೊಲ್ಲಾಪುರ ಶಿಲಾಲೇಖ (೧೧೪೨), "ವಳವಾಡ ಸ್ಥಿರಶಿಬಿರೇ" ಆಳುವಾಗ ಬಾಮನಿ ಶಿಲಾಲೇಖ (೧೧೫೦), "ವಳವಾಡ ನೆಲೆವೀಡಿನಲು" ಆಳುವಾಗ ಶೇಡಬಾಳ ಶಿಲಾಲೇಖ (೧೧೫೩), "ವಳವಾಡ ನೆಲೆವೀಡಿನಲು" ಆಳುವಾಗ ಜುಗಲ ಶಿಲಾಲೇಖ (ಕ್ರಿ.ಶ.?) ಗಳು ಹುಟ್ಟಿವೆ.

ಮಗ ಭೋಜ II ನು 'ವಲವಾಡಿ ಶಿಬಿರೇ' ಆಳುವಾಗ ಕೊಲ್ಲಾಪುರ ಶಿಲಾಲೇಖ (೧೧೮೨), 'ಪ್ರನಾಳದುರ್ಗ ಶಿಬಿರೇ' ಆಳುವಾಗ ಕೊಲ್ಲಾಪುರ ಶಿಲಾಲೇಖ (೧೧೯೦), 'ಪದ್ಮನಾಲದುರ್ಗೇ' ಆಳುವಾಗ ಕಶೇಳಿ ದಾನಪತ್ರ (೧೧೭೯?)ಗಳು ಹುಟ್ಟಿವೆ. ಹೀಗಾಗಿ ಈ ವಂಶಜರು ಕೊಲ್ಲಾಪುರ ರಾಜಧಾನಿಯಿಂದ ಆಳಿದ ಬಗ್ಗೆ ಸಂದೇಹ. ಆದರೆ ಮಾರಸಿಂಹನಿಂದ ಭೋಜ II ನ ವರೆಗಿನ ಎಲ್ಲ ರಾಜರಿಗೆ ಕೊಲ್ಲಾಪುರ ಸಂಬಂಧವನ್ನು ಸೂಚಿಸುವ "ಶ್ರೀಮಹಾಲಕ್ಷ್ಮೀಲಬ್ಧವರಪ್ರಸಾದ" ಎಂಬ ವಿಶೇಷಣ ಮಾತ್ರ ತಪ್ಪದೆ ಬರುವುದನ್ನು ಮರೆಯುವಂತಿಲ್ಲ.

* * *

ಈ ವಂಶದ ಜಟಿಗ I ನು ಗೋಮಂತದುರ್ಗಾಧಿಪನೆಂದೂ ಗಂಗ ಪೆರ್ಮಾಡಿಯ ಮಾವನೆಂದೂ ಕೊಲ್ಲಾಪುರತಾಮ್ರಪಟ (೧೧೧೫) ತಿಳಿಸುತ್ತದೆ.

ಈ ಜಟಿಗನ ಮೊಮ್ಮಗನಾದ ಮಾರಸಿಂಹ ಈ ಮನೆತನದ ಪ್ರಸಿದ್ಧ ಅರಸು. ಈತನನ್ನು "ಚಕ್ರೇಶಪ್ರಿಯಮಾತುಲ" ಎಂದು ತಾಳಲೆ ತಾಮ್ರಪಟ ಕರೆದಿದೆ. ಶಿಲಾಹಾರ ರಾಜಕುಮಾರಿ ಚಂದ್ರಲೇಖಾ (ಚಂದಲದೇವಿ) ಎಂಬವಳನ್ನು ಕಲ್ಯಾಣಚಾಲುಕ್ಯ ಚಕ್ರೇಶ ವಿಕ್ರಮಾದಿತ್ಯ VI ನು ರಾಜಧಾನಿ ಕರಹಾಡದಲ್ಲಿ ಮದುವೆಯಾಗಿದ್ದನೆಂದು ವಿಕ್ರಮಾಂಕ ದೇವಚರಿತ[೪] ಹೇಳುವುದರಿಂದ ಈಕೆ ಈ ಮಾರಸಿಂಹನ ಮಗಳೇ ಆಗಿರಬೇಕು. ಜೈನಳಾಗಿರಬಹುದಾದ ನಾಗಲದೇವಿಯೆಂಬವಳು ಈ

---

೩. ನೇಮಿನಾಥಪುರಾಣ–ಕರ್ಣಪಾರ್ಯ (೧–೨೪)
೪. ವಿಕ್ರಮಾಂಕದೇವಚರಿತ–ತರಂಗ ೮. ಪ ೯

ಮಾರಸಿಂಹನ ರಾಣಿಯಾಗಿರಹುದು.[೫] ತನ್ನ ಉದರಪುತ್ರನಾಗಿರಬಹುದಾದ ಗಂಡರಾದಿತ್ಯನಿಂದ ಈಕೆ, ಎಡೆನಾಡಿಗೆ ಸಂಬಂಧಿಸಿದ ವಗುಬನಹೇರಿಳಿಗೆಯಲ್ಲಿ ನೇಮಗವುಂಡ ಮಾಡಿಸಿದ ಬಸದಿಗೆ ದತ್ತಿ ಕೊಡಿಸಿರುವುದಾಗಿ ಹೇರ್ಲೆ ಶಿಲಾಶಾಸನ ತಿಳಿಸುತ್ತದೆ. ಶಿಲಾಹಾರರ ಸಾಮಂತರೂ ಜೈನಮತೀಯರೂ ಆಗಿದ್ದ ತಂದೆ ನಾಕಿರಾಜ, ಮಗ ನಿಂಬದೇವರನ್ನು ಕೊಲ್ಲಾಪುರದ ಎರಡು ಶಿಲಾಶಾಸನಗಳು 'ನಾಗಲದೇವಿಯ ಗಂಧವಾರಣಂ' ಎಂದು ಕರೆದಿವೆ.[೬] ಇದರಿಂದ ಶಿಲಾಹಾರ ಅರಸುಮನೆತನದೊಂದಿಗೆ ಜೈನಧರ್ಮವು ನಾಗಲದೇವಿ, ನಾಚಿರಾಜ, ನಿಂಬದೇವರ ಮೂಲಕ ತನ್ನ ಸಂಬಂಧವನ್ನು ಗಟ್ಟಿಗೊಳಿಸಿಕೊಂಡು ಬಾಳುತ್ತಲಿದ್ದಿತು; ಬೆಳೆಯುತ್ತಲಿದ್ದಿತು ಎಂದು ವ್ಯಕ್ತವಾಗುತ್ತದೆ.

ಮಾರಸಿಂಹನ ೫ ಜನ ಮಕ್ಕಳಲ್ಲಿ ಒಬ್ಬನಾದ ಭೋಜನು (ಬನವಾಸಿ) ಕದಂಬ ವಂಶದ ಶಾಂತರಸ (ಶಾಂತಿವರ್ಮ)ನ ಶಿರವನ್ನು ಕೊಯ್ದು ತಂದು ಚಕ್ರವರ್ತಿ ವಿಕ್ರಮಾದಿತ್ಯ VIನ ಪಾದಕ್ಕೆ ಅರ್ಪಿಸಿದನೆಂದೂ "ಸೂರ್ಯಾನ್ವಯಾಂಬರರವಿಸ್ಸ ಬಿಜ್ಜಣೋಪಿಚಕ್ರೇ ಗೃಹಂ ಸುರಪತೇರ್ಭುವಿ ಯಸ್ಯ ಕೋಪಾತ್" ಅಂದರೆ ಸೂರ್ಯವಂಶದ ಬಿಜ್ಜಳನನ್ನು ಕೊಂದನೆಂದೂ ಕೊಲ್ಲಾಪುರ ತಾಮ್ರಪಟ (ಕ್ರಿ.ಶ.೧೧೧೫) ತಿಳಿಸುತ್ತದೆ. ಈ ಬಿಜ್ಜಳನು ಕಲಚುರಿ ವಂಶದ ಜೋಗಮನ ಕಕ್ಕನಾಗಿರಬೇಕೆಂದು ವಿದ್ವಾಂಸರ ಊಹೆ. ಮೇಲೆ ಹೇಳಿದ ರಕ್ತಸಂಬಂಧವಲ್ಲದೆ ಈ ರಾಜಕೀಯ ಘಟನೆಗಳು ಚಾಲುಕ್ಯ ಮತ್ತು ಕಲಚುರಿ ಮನೆತನಗಳ ಕೂಡ ಶಿಲಾಹಾರರಿಗಿದ್ದ ಸಂಬಂಧವನ್ನು ತಿಳಿಸುತ್ತವೆ.

ಈ ಭೋಜನ ತಮ್ಮ ಗಂಡರಾದಿತ್ಯ, ನಿಂಬಸಾಮಂತನ ಅರಸನಾಗಿದ್ದ ಇವನನ್ನು ಒಟ್ಟು ೧೪ ಶಾಸನಗಳು ಉಲ್ಲೇಖಿಸುತ್ತವೆ:

೧.	ಹೊನ್ನೂರು ಶಿಲಾಶಾಸನ	ಕನ್ನಡ	–
೨.	ತಾಳಲೆ ತಾಮ್ರಪಟ	ಸಂಸ್ಕೃತ	ಕ್ರಿ.ಶ.೧೧೧೦
೩.	ಕೊಲ್ಲಾಪುರ ತಾಮ್ರಪಟ	ಸಂಸ್ಕೃತ	ಕ್ರಿ.ಶ.೧೧೧೫
೪.	ಹೇರ್ಲೆ ಶಿಲಾಶಾಸನ	ಸಂಸ್ಕೃತ+ಕನ್ನಡ	ಕ್ರಿ.ಶ.೧೧೧೮
೫.	ಕೊಲ್ಲಾಪುರ ತಾಮ್ರಪಟ	ಸಂಸ್ಕೃತ	ಕ್ರಿ.ಶ.೧೧೨೬
೬.	ಕೊಲ್ಲಾಪುರ ಶಿಲಾಶಾಸನ	ಕನ್ನಡ	–
೭.	ಕೊಲ್ಲಾಪುರ ಶಿಲಾಶಾಸನ	ಸಂಸ್ಕೃತ+ಕನ್ನಡ	ಕ್ರಿ.ಶ.೧೧೩೫
೮.	ಜುಗಲ ಶಿಲಾಶಾಸನ	ಸಂಸ್ಕೃತ+ಕನ್ನಡ	–

---

೫. ಈಕೆಯ ಜೈನತ್ವ ಮತ್ತು ಪಟ್ಟಮಹಿಷಿತ್ವಗಳ ಬಗ್ಗೆ ನೇರ ಉಲ್ಲೇಖಗಳಿಲ್ಲ. ಆದರೂ ಹೀಗೆ ಶ್ರೀ ಮಿರಾಶಿ ಮೊದಲಾದವರು ಊಹಿಸಿದ್ದಾರೆ (ಶಿಲಾಹಾರ ರಾಜವಂಶಾಚಾ ಇತಿಹಾಸ ಆಣಿ ಕೋರೀವ ಲೇಖ. ಪು.೫೪)

೬. ಮುಂದೆ ೩೯೦ ನೆಯ ಪುಟದಲ್ಲಿ ಚರ್ಚಿಸಿದ ೬ನೆಯ ಶಾಸನ ನೋಡಿರಿ.

೯.	ಕೊಲ್ಲಾಪುರ ಶಿಲಾಶಾಸನ	ಸಂಸ್ಕೃತ	ಕ್ರಿ.ಶ.೧೧೪೨
೧೦.	ಬಾಮಣಿ ಶಿಲಾಶಾಸನ	ಸಂಸ್ಕೃತ+ಕನ್ನಡ	ಕ್ರಿ.ಶ.೧೧೫೦
೧೧.	ಎಕ್ಕಸಂಬುಗೆ ಶಿಲಾಶಾಸನ	ಕನ್ನಡ	ಕ್ರಿ.ಶ.೧೧೬೫
೧೨.	ಕೊಲ್ಲಾಪುರ ಶಿಲಾಶಾಸನ	ಸಂಸ್ಕೃತ	ಕ್ರಿ.ಶ.೧೧೮೨
೧೩.	ಕಶೇಳಿ ತಾಮ್ರಶಾಸನ	ಸಂಸ್ಕೃತ	ಕ್ರಿ.ಶ. ೧೧೯೧
೧೪.	ಕುತಾಪುರ ತಾಮ್ರಶಾಸನ	ಸಂಸ್ಕೃತ	ಕ್ರಿ.ಶ. ೧೧೯೧

ಈ ಒಟ್ಟು ೧೪ ಶಾಸನಗಳಲ್ಲಿ[೭] ೧ ರಿಂದ ೮ ರ ವರೆಗಿನ ಶಾಸನಗಳು ಮಾತ್ರ ಈತನಿಗೆ ನೇರವಾಗಿ ಸಂಬಂಧಿಸಿದ್ದು, ೯ ರಿಂದ ೧೪ ರ ವರೆಗಿನವುಗಳಲ್ಲಿ ತರುವಾಯದ ಅರಸರು ಪೂರ್ವವಂಶಾವಳಿ ನಿರ್ದೇಶಿಸುತ್ತ ಪ್ರಾಸಂಗಿಕವಾಗಿ ಈತನನ್ನು ಉಲ್ಲೇಖಿಸಿದ್ದಾರೆ. ಆ ೮ ಶಾಸನಗಳ ವಿಷಯ ಹೀಗಿದೆ:

೧. ಹೊನ್ನೂರು ಶಿಲಾಶಾಸನ:

ಶ್ರೀಮೂಲಸಂಘದ ಪುನ್ನಾಗವೃಕ್ಷಮೂಲಗಣದ ರಾತ್ರಿಮತಿಕಂತಿಯರ ಗುಡ್ಡ ಬಮ್ಮಗಾವುಂಡ ಮಾಡಿಸಿದ ಬಸದಿಗೆ ಮಂಡಳೇಶ್ವರರಾದ ಬಲ್ಲಾಳದೇವ ಮತ್ತು ಗಂಡರಾದಿತ್ಯ (ರೆಂಬ ಸೋದರ)ರು ಮುನಿಗಳ ಆಹಾರದಾನಕ್ಕೋಸುಗ ದತ್ತಿ ಬಿಟ್ಟಿರುವರು.

೨. ತಾಳಲೆ ತಾಮ್ರಪಟ (ಕ್ರಿ.ಶ. ೧೧೧೦)

ಗಂಡರಾದಿತ್ಯನು ೧೬ ಜನ ಬ್ರಾಹ್ಮಣರ ಮದುವೆ ಮಾಡಿ ಅವರಿಗೆ ವೃತ್ತಿ ನೀಡಿರುವನು ಪ್ರಯಾಗದಲ್ಲಿ ಒಂದು ಲಕ್ಷಬ್ರಾಹ್ಮಣರ ಭೋಜನವ್ಯವಸ್ಥೆಗೆ ಮತ್ತು ಪಂಚಲಾಂಗವ್ರತದ ಪಾರಣೆಗೆ ವೃತ್ತಿಗಳನ್ನು ಕೊಟ್ಟಿರುವನು. ಮಿರಜಪ್ರಾಂತದ ಇರುಕುಡಿ ಗ್ರಾಮದ ಸಮೀಪದಲ್ಲಿ 'ಗಂಡಸಾಗರ' ಹೆಸರಿನ ಕೆರೆಯನ್ನು ಕಟ್ಟಿಸಿ ಅದರ ದಂಡೆಯ ಮೇಲೆ ಪ್ರತಿಷ್ಠಾಪಿಸಿದ ಈಶ್ವರ, ಬುದ್ಧ ಮತ್ತು ಜಿನದೇವತೆಗಳ ಪೂಜೆಗಾಗಿ ೩ ನಿವರ್ತನ ಭೂಮಿಯನ್ನು ದಾನವಾಗಿತ್ತಿರುವನು. ಗುಡಾಲಯ ಗ್ರಾಮದ ಮುನಿಗಳ ಯೋಗಕ್ಷೇಮಕ್ಕಾಗಿ, ಅಲ್ಲಿಯ ಗುಡಾಲೇಶ್ವರ ದೇವಮಂದಿರದ ನಂದಾದೀಪ, ಅಗ್ಗಿಷ್ಟಿಕೆ, ಅರವಟ್ಟಿಗೆ, ದೇವರ ತಾಂಬೂಲಗಳಿಗಾಗಿ ದಾನ ಮಾಡಿರುವನು.

೩. ಕೊಲ್ಲಾಪುರ ತಾಮ್ರಪಟ (ಕ್ರಿ.ಶ. ೧೧೧೫)

ಚಾಲುಕ್ಯಚಕ್ರವರ್ತಿಯಾದ ವಿಕ್ರಮಾದಿತ್ಯ VI ನಿಂದ 'ನಿಶ್ಯಂಕಮಲ್ಲ' ಬಿರುದುಗಳಿಸಿದ ಗಂಡರಾದಿತ್ಯನು, ತನ್ನ ಸಾಮಂತನಾದ ನೊಳಂಬನೆಂಬವನಿಗೆ ಮಿರಜದೇಶ ಮತ್ತು ಮಿರಜ ಕಂಪಣದ ಅಂಕುಲಗೆ, ಬೊಪ್ಪರವಾಡ ಮತ್ತು ಆದಗೆರಾವಗಳನ್ನು ಕೊಟ್ಟಿರುವನು.

---

೭. ಎಕ್ಕಸಂಬುಗೆ ಶಾಸ್ಸನವನ್ನು ಡಾ. ಆರ್.ಎನ್. ಗುರವ ಅವರು ಕರ್ನಾಟಕ ಭಾರತಿ (೧೧-೨) ಯಲ್ಲಿ ಪ್ರಕಟಿಸಿದ್ದಾರೆ. ಮಿಕ್ಕುವು ಪ್ರೊ. ಮಿರಾಶಿ ಅವರ "ಶಿಲಾಹಾರ ರಾಜವಂಶಾಚಾ ಇತಿಹಾಸ ಅಣಿ ಕೋರೀವ ಲೇಖ" ಎಂಬ ಗ್ರಂಥದಲ್ಲಿ ಪ್ರಕಟವಾಗಿವೆ. (ಖಂಡ-೨, ವಿಭಾಗ-೩).

೪. ಹೇರ್ಲೆ ಶಿಲಾಶಾಸನ (ಕ್ರಿ.ಶ. ೧೧೧೮)

ತಾಯಿಯಾದ ನಾಗಲದೇವಿಯ ಬಿನ್ನಹದ ಮೇರೆಗೆ ಎಡೆನಾಡಕ್ಕೆ ಸಂಬಂಧಿಸಿದ ವಗುಬನಹೇರಿಳಗೆ ಗ್ರಾಮದಲ್ಲಿ ನೇಮರಾವುಂಡ ಕಟ್ಟಿಸಿದ ಬಸದಿಗೆ ಗಂಡರಾದಿತ್ಯನು ಕೊಲ್ಲಾಪುರತೀರ್ಥದ ಬಸದಿ (ತ್ರಿಭುವನತಿಲಕಬಸದಿ ಅಥವಾ ಚಂದ್ರನಾಥಬಸದಿ) ಯಾಚಾರ್ಯ ಶಾಂತವೀರದೇವರ ಕಾಲಂ ಕರ್ಚಿ ದಾನ ನೀಡಿರುವನು.

೫. ಕೊಲ್ಲಾಪುರ ತಾಮ್ರಪಟ (ಕ್ರಿ.ಶ. ೧೧೨೬)

ಗಂಡರಾದಿತ್ಯನು ತನ್ನ ಮಂತ್ರಿ ಮೈಲಪಯ್ಯನ ವಿನಂತಿಯ ಮೇರೆಗೆ ಕೊಲ್ಲಾಪುರ ಸಮೀಪದ ಪಂಚಗಂಗಾನದಿತೀರದ ಉಪನಗರ ಬ್ರಹ್ಮಪುರಿಯ ಖೇಡಾದಿತ್ಯ ದೇವಾಲಯಕ್ಕೆ ಭೂದಾನ ನೀಡಿರುವನು.

೬. ಕೊಲ್ಲಾಪುರ ಶಿಲಾಶಾಸನ :

ಗಂಡರಾದಿತ್ಯ ಮತ್ತು ಕುಲಚಂದ್ರದೇವರ ಶಿಷ್ಯ ಮಾಘಣಂದಿಗಳ ವರ್ಣನೆ, ನಾಕರಸ ಮತ್ತು ಚಂಪಕಾಂಬಿಕಾದೇವಿಯರಿಗೆ ಭಿಲ್ಲರಸ, ನಿಂಬರಸ, ಕಾವರಸರು ಮಕ್ಕಳು. ನಾಕಿರಾಜನ ಮಗಳು ಕರ್ಣಾದೇವಿ ಗಂಡರರದೇವನ ಹೆಂಡತಿ [ಇಲ್ಲಿ ನಾಕರಸ ಮತ್ತು ನಾಕಿರಾಜ ಎಂಬ ಹೆಸರುಗಳು ಒಂದೇ ವ್ಯಕ್ತಿಯನ್ನು ಸೂಚಿಸುವ ಸಂಭವವಿರುವುದರಿಂದ ಗಂಡರದೇವ(ಗಂಡರಾದಿತ್ಯ)ನ ಹೆಂಡತಿ ಕರ್ಣಾದೇವಿ ಸಾಮಂತನಿಂಬರಸನ ಸಹೋದರಿಯೆಂದು ಹೇಳಬೇಕಾಗುತ್ತದೆ. ಈ ಶಾಸನದ ೬ ಮತ್ತು ೭ ನೆಯ ಪದ್ಯಗಳಲ್ಲಿ ಬರುವ ಗೃಹಪಟ್ಟವರ್ಧನ, ನಾಗಲದೇವಿಯ ಗಂಧವಾರಣ, ಸಾಮಂತ ಕೇದಾರ ಎಂಬ ವಿಶೇಷಣಗಳು ನಾಕರಸನಿಗೆ ಅನ್ವಯಸುವವೆಂದು ಇಟ್ಟುಕೊಳ್ಳುವುದು ವಿಹಿತ. ಇವುಗಳಲ್ಲಿಯ ನಾಗಲದೇವಿಯ ಗಂಧವಾರಣ, ಸಾಮಂತಕೇದಾರ ಎಂಬ ಬಿರುದುಗಳು ಮಗನಾದ ನಿಂಬಶಾಮಂಗನಿಗೂ ಇಳಿದುಬಂದುದು ಕೆಳಗಿನ ೭ನೆಯ ನಂಬರಿನ ಶಾಸನ(ಕ್ರಿ.ಶ. ೧೧೩೫) ದಿಂದ ಸ್ಪಷ್ಟವಾಗುತ್ತದೆ].[೮] ಸಾಮಂತ ನಿಂಬರಸನು ಆದಿತೀರ್ಥಂಕರ ಬಸದಿಯನ್ನು ಕಟ್ಟಿಸಿದನೆಂದು ಇಲ್ಲಿ ಹೇಳಲಾಗಿದೆ. [ಈ ಶಾಸನದ ಪ್ರಾರಂಭದಲ್ಲಿ "ರೂಪನಾರಾಯಣನಾದಿಜಿನ" ಎಂಬ ಉಲ್ಲೇಖ ಬರುವುದರಿಂದ ಈ ಬಸದಿಯ ಆದಿಜಿನನ ಇನ್ನೊಂದು ಹೆಸರು 'ರೂಪ ನಾರಾಯಣ' ನೆಂದು ವೇದ್ಯವಾಗುತ್ತಿದ್ದು, ತನ್ನ ಅರಸು ಗಂಡರಾದಿತ್ಯನ ಈ ಬಿರುದನ್ನೇ ನಿಂಬದೇವ ಇಲ್ಲಿ ತೀರ್ಥಂಕರನಿಗೆ ಇಟ್ಟಿರುವನು. ಈ ಬಿರುದು ಮಾರಸಿಂಹನಿಂದ ಹಿಡಿದು ಮುಂದಿನ ಎಲ್ಲ ಶಿಲಾಹಾರ ಅರಸರಿಗೂ ಕಂಡುಬರುತ್ತದೆ].

೭. ಕೊಲ್ಲಾಪುರ ಶಿಲಾಶಾಸನ (ಕ್ರಿ.ಶ. ೧೧೩೫):

ಗಂಡರಾದಿತ್ಯನು ಆಳುವ ಸಮಯದಲ್ಲಿ ಅವನ ಮಹಾಸಾಮಂತನೂ ನಾಗಲದೇವಿಯ ಗಂಧವಾರಣನೂ ಆದ ನಿಂಬನು ಕವಡೆಳ್ಳಗೊದ ಬಳಿಯ (ಪ್ರಾಂತದ) ಸಂತೆಯ ಮುದ್ದೊಗೆ

---

೮. ಪ್ರೊ. ಮಿರಾಶಿ ಮೊದಲಾದ ವಿದ್ವಾಂಸರು ಕರ್ಣಾದೇವಿಯ ನಿಂಬರಸನ ಸೋದರಿಯೆಂಬ, ನಾಗಲದೇವಿಯ 'ಗಂಧವಾರಣಂ' ಎಂಬ ಬಿರುದು ತಂದೆ ನಾಕಿರಾಜ, ಮಗ ನಿಂಬದೇವ ಇಬ್ಬರಿಗೂ ಇದ್ದಿತೆಂಬ ಅಂಶಗಳನ್ನು ಗಮನಿಸದೆ ಹೋಗಿದ್ದಾರೆ.

ಗ್ರಾಮದಲ್ಲಿ ಮಾಡಿಸಿದ ಪಾರ್ಶ್ವನಾಥದೇವರ ಬಸದಿಗೆ ಕೆಲವು ಸೆಟ್ಟಿಗಳು, ಮಾಘಣಂದಿಗಳ ಶಿಷ್ಯರೂ ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಚಾರ್ಯರೂ ಆದ ಶ್ರುತಕೀರ್ತಿತ್ರೈವಿದ್ಯದೇವರ ಕಾಲಂಕರ್ಚಿ ದತ್ತಿ ಬಿಟ್ಟಿರುವರು.

೮. ಜುಗಲ ಶಿಲಾಶಾಸನ:

ರಾಜವಂಶಾವಳಿಯನ್ನು ಹೇಳತೊಡಗಿ ಗಂಡರಾದಿತ್ಯನ ಉಲ್ಲೇಖ ಮಾಡುವಲ್ಲಿ ಶಾಸನ ಒಡೆದುಹೋಗಿದೆ.

೯. ಕೊಲ್ಲಾಪುರ ಶಿಲಾಶಾಸನ (ಕ್ರಿ.ಶ. ೧೧೪೨), ೧೦. ಬಾಮಣಿ ಶಿಲಾಶಾಸನ (೧೧೫೦), ೧೧. ಎಕ್ಕಸಂಬುಗೆ ಶಿಲಾಶಾಸನ (೧೧೬೫):

ಇವು ಗಂಡರಾದಿತ್ಯನ ಮಗ ವಿಜಯಾದಿತ್ಯನಿಗೆ ಸಂಬಂದಿಸಿವೆ. ಪೂರ್ವವಂಶಾವಳಿ ಹೇಳುವ ಸಂದರ್ಭದಲ್ಲಿ ಗಂಡರಾದಿತ್ಯನ ಪ್ರಸ್ತಾಪ ಮಾಡಲಾಗಿದೆ.

೧೨. ಕೊಲ್ಲಾಪುರ ಶಿಲಾಶಾಸನ (ಕ್ರಿ.ಶ. ೧೧೮೨), ೧೩. ಕಶೇಳಿತಾಮ್ರ ಶಾಸನ (೧೧೯೧),

೧೪. ಕುತಾಪುರ ತಾಮ್ರಶಾಸನ (೧೧೯೧):

ಈ ಮೂರು ಗಂಡರಾದಿತ್ಯನ ಮೊಮ್ಮಗ ಭೋಜ II ನಿಗೆ ಸಂಬಂಧಿಸಿದ್ದು, ಪೂರ್ವವಂಶಾವಳಿಯನ್ನು ಹೇಳುವ ಸಂದರ್ಭದಲ್ಲಿ ಗಂಡರಾದಿತ್ಯನ ಪ್ರಸ್ತಾಪ ಮಾಡುತ್ತವೆ.

ಈ ೧೪ ಶಾಸನಗಳಿಂದ ಗಂಡರಾದಿತ್ಯನ ಚರಿತೆ, ಕೀರ್ತಿ ಮತ್ತು ಅವನ ಜೀವನ ದೃಷ್ಟಿಗಳನ್ನು ಅರಿಯಬಹುದಾಗಿದೆ.

ಇದಲ್ಲದೆ ಈತನು ಕೊಲ್ಲಾಪುರ ಜಿಲ್ಲೆಯ ಆಜ್ರೇಯಲ್ಲಿ ತ್ರಿಭುವನತಿಲಕ ಜಿನಾಲಯವನ್ನು ಕಟ್ಟಿಸಿದುದಾಗಿ ಸೋಮದೇವನ ಶಬ್ದಾರ್ಣವಚಂದ್ರಿಕಾ ಗ್ರಂಥದಿಂದ ತಿಳಿದುಬರುತ್ತದೆ.[೧೦] ಖಿದ್ರಾಪುರ ಕೊಪ್ಪೇಶ್ವರ ದೇವಾಲಯವನ್ನು ಈತನೇ ಕಟ್ಟಿಸಿರಬಹುದೆಂದು ವಿದ್ವಾಂಸರ ಊಹೆ.[೧೧]

ಇರುಕುಡಿ ಗ್ರಾಮದಲ್ಲಿ ಶಿವ, ಜಿನ, ಬುದ್ಧವಿಗ್ರಹ ಪ್ರತಿಷ್ಠಾಪಿಸಿ ಸರ್ವಧರ್ಮ ಪರಿಪಾಲನ ಮನೋಧರ್ಮವನ್ನು ವ್ಯಕ್ತಪಡಿಸಿದ್ದರೂ ಕೊಲ್ಲಾಪುರದ "ಶ್ರೀಮನ್ಮಹಾಲಕ್ಷ್ಮೀಲಬ್ಧವರ ವರಪ್ರಸಾದಾಸಾದ" ನಾಗಿದ್ದರೂ ಇವನು ಆಜ್ರೇಯಲ್ಲಿ ತ್ರಿಭುವನ ತಿಲಕಬಸದಿ ಕಟ್ಟಿಸಿದ್ದಾನೆ: ಕೊಲ್ಲಾಪುರದ ಆದಿತೀರ್ಥಂಕರ ಬಸದಿಗೆ 'ರೂಪ ನಾರಾಯಣ' ಎಂಬ ತನ್ನ ಬಿರುದನ್ನು ಕೊಟ್ಟಿದ್ದಾನೆ. ಹೊನ್ನೂರ,

---

೯. ಈ ಕವಡೆಳ್ಳಗೊದ ಇಂದಿನ ಕೊಲ್ಲಾಪುರ ಜಿಲ್ಲೆಯ ಶಿರೋಳ ತಾಲೂಕಿನ ಕವಡೆಗುಲಂದ ಎಂದು ಪ್ರೊ. ಮಿರಾಶಿ ಊಹಿಸುತ್ತಾರೆ. (ಶಿಲಾಹಾರ ರಾಜವಂಶಾಚಾ ಇತಿಹಾಸ ಅಣಿ ಕೋರೀವ ಲೇಖ, ಖಂಡ ಪು.೨೭೯) ಡಾ.ಎ.ಎನ್. ಉಪಾಧ್ಯಯವರು ಕೊಲ್ಲಾಪುರದ ಶುಕ್ರವಾರ ಗೇಟ ಹತ್ತಿರದ ಪಾರ್ಶ್ವನಾಥ ಬಸದಿ (ಮಾನಸ್ತಂಭ ಬಸದಿ) ಪ್ರದೇಶವೆಂದು ಊಹಿಸುತ್ತಾರೆ.(ಪದ್ಮನಂದಿ ಪಂಚವಿಂಶತಿ, ಮುನ್ನುಡಿ ಪು.೧೮). ಈ ವಿಷಯವನ್ನು ಮುಂದೆ ಚರ್ಚಿಸಲಾಗಿದೆ.

೧೦. ಶಿಲಾಹಾರ ರಾಜವಂಶಾಚಾ ಇತಿಹಾಸ ಅಣಿ ಕೋರೀವ ಲೇಖ: ಡಾ. ಮಿರಾಶಿ (ಪು.೫೬)

೧೧. ಅದೇ.

ಹೇರಿಳಿಗೆ ಬಸದಿಗಳಿಗೆ ದತ್ತಿ ಬಿಟ್ಟಿದ್ದಾನೆ. ತಾಯಿಯಾಗಿರಬಹುದಾದ ನಾಗಲದೇವಿ, ಹೆಂಡತಿಯಾದ ಕರ್ಣಾದೇವಿ, ಸಾಮಂತನಾದ ನಿಂಬದೇವ ಕಾರಣವಾಗಿ ಇವನ ಜೈನ ಒಲವು ಇನ್ನಷ್ಟು ಗಾಢವಾಗಿರುವ ಸಾಧ್ಯತೆಯಿದೆ. ಕಾವ್ಯ, ಶಾಸನಗಳಲ್ಲಿ ಈತನ ಬಗೆಗೆ ಬರುವ ಪದ್ಯಗಳು ಹೀಗಿವೆ:

೧. ಮನುಮಾರ್ಗಂ ಮಱುವಕ್ಕ ಸರ್ಪನವನೀವಿಖ್ಯಾತ ಜೀಮೂತವಾ।
ಹನ ವಿದ್ಯಾಧರಚಕ್ರಿವಂಶತಿಳಕಂ ಶ್ರೀಗಂಡರಾದಿತ್ಯ ಭೂ।
ಪನುದಾತ್ತಂ ಪುರುಷೋತ್ತಮಂ ಕಿಳಕಿಳದುಗಾಂಧಿಪಂ।
ಜನಸಂರಕ್ಷಣದಕ್ಷನೀ ಕ್ಷಿತಿನುತಂ ಗಾಂಭೀರ್ಯರತ್ನಾಕರಂ ॥

–ಕರ್ಣಪಾರ್ಯನ ನೇಮಿನಾಥ ಪುರಾಣ (೧–೨೪)

೨. ತಸ್ಸಾನುಜನ್ಮಾ ಸುಚಿರ(ರಂ) ಚಕಾಸ್ತಿ ಶ್ರೀಗ(ಗಂ)ಡರಾದಿತ್ಯ ನೃಪೋಜಯತ್ಯಾಂ(ತ್ಯಾಮ್)।
ವಿದ್ವಿಷ್ಟದುಷ್ಟಾವನೀಪಾಲರಾಜಿಘೋರಾ (ರಾಂ) ಧಕಾರಕ್ಷರಣೇ(ಣೈ)ದ (ಕ)ಲ(ವ)ಕ್ಷಃ॥
ಅನಾಯಂ ತೇಜಾಸ್ಸತತೋದಯೋ ಯೋ ಮನೋಮ(ರ) ಯಾನನ್ತ ವಿಚಿತ್ರವಾಜೀ।
ರಾತ್ರಿಂದಿವೇ ಸಂಪರಿಭಾಸಮಾನಸ್ಸ (ಸ್ಸಂ) ಮಾನನಾಮಾನ ಮದ[ಃ] ಕರೇತಿ ॥
ಪೀನಾಂಭೋಜಶ್ರೀಯಂ ಕುರ್ವನ್ನುದಿತಃ ಖೇವ(ಚ) ರೇಶ್ವರಃ ।
ಗಂಡರಾದಿತ್ಯಭೂಪಾಲೋ ವಿದ್ವಿಡ್‌ಧ್ವಾಂ [ತಾ] (ತಾಂ) ತಕಸ್ಮ (ಸ್ಸ)ದಾ॥
ರಾಜನ್ನೀರೇಜಹಸ್ತೋ ವಿಬುಧತತಿನುತಸ್ಸೋದಯಃ ಪ್ರತ್ಯಹಶ್ಚಪ್ರಬಿಭೂರ್ಣತಾ
ತ್ಮತೇಜೋನು ವಿರಚಿತಜನೋನಾತ್ಮಕಾರ್ಯಪ್ರವೃತ್ತಃ ।
ಕ್ಷೋಣೀಮೇನಾಮನುದಿನಮಧಿಕ(ಕಂ) ಭಾಸಯನ್ನಾಸಮಂತಾದೇಕಸ್ತೋ(ಸ್ಥೀ)
ವ್ಯಾಪ್ತತೇಜಾಃ ಖಚರಗಣಮಣಿಗಂಡರಾದಿತ್ಯದೇವಃ ॥

–ತಾಳಲೆ ತಾಮ್ರಪಟ (೧೧೧೦)

೩. ಅಜನಿ ತದನುಜಾತಸ್ತಿಗ್ಮರಶ್ಮಿಪ್ರತಾಪೋ ದಿವಿಜಪತಿವಿಭೂತಿಸ್ಸರ್ವ್ವ ಲಕ್ಷ್ಮೀನಿವಾಸಃ।
ಕೃತರಿಪುಮದಭಂಗೋ ರಾಜವಿದ್ಯಾಪ್ರಸಂಗೋ ಭುವನವಿನುತಮೂರ್ತಿ ಗಂಡರಾದಿತ್ಯದೇವಂ॥
ಚಕ್ರೇ ಚಾಳುಕ್ಯಚಕ್ರೇಶೋ ವಿಕ್ರಮಾದಿತ್ಯವಲ್ಲಭಃ ।
ನಿಶ್ಶಂಕಮಲ್ಲ ಇತ್ಯಾಖ್ಯಾಂ ಗಂಡರಾದಿತ್ಯಭೂಪತೇಃ ।
ಧನ್ಯಾಸ್ತೇ ಮಾನವಾಸ್ಸರ್ವೇ ಧನ್ಯಾಶ್ಚ ಮೃಗಜಾತಯಃ।
ಸದೇಶಸ್ಸಪೂತೋ ಯತ್ರ ಗಂಡಾರಾದಿತ್ಯನೃಪತೇಃ (ತಿಃ) ॥
ಯತ್ಖಡ್ಗಾದ್ಭುತತೀಬ್ರ (ವ್ರ) ಘಾತಚಕಿತಸ್ತತ್ಕುಂಡಿದೇಶಾಧಿಪೋ।
ದಂಡಬ್ರಹ್ಮನೃಪೋ ಜಗಾಮ ಸದನಃ ಸಂಸೇವ್ಯಮಾನಂ ಸುರೈ॥
ಸ್ತ್ಯಕ್ತ್ವಾ ರಾಷ್ಟ್ರಮತೀವ ರಮ್ಯಮತುಳಾಂ ಲಕ್ಷ್ಮೀಂ ಭುಜೋಪಾರ್ಜಿತಾಂ।

ಸೋಽಯಂ ಗಂಡರದೇವ ಮಂಡಳಪತಿಸ್ಸಂಶೋಭತೇ ಭೂತಳೇ ॥
ರತ್ನಾನಿ ಯತ್ನೇನ ದದಾತಿ ತಸ್ಮೈ ರತ್ನಾಕರೋ ಭಂಗಭಯಾಜ್ಜಡಾತ್ಮಾ।
ಆಪೂರ್ಯ ಸಮ್ಯಕ್ಸತತಂ ಬ(ವ)ಹಿತಂ ಸೂಕ್ಷ್ಮಾಣಿ ವಾಸಂಸಿಹಯಾಂಶ್ಚ ತಸ್ಮೈ ।
ಕಿಮಿಹ ಬಹುಭಿರುಕ್ತೈರಲ್ಪಗರ್ವೈರ್ವಚೋಭಿರ್ಬ್ಬು(ರ್ಭು)ವನ ವಿವಿತವೀರಃ
ಕ್ರೂರಸಂಗ್ರಾಮಧೀರಃ ।
ಅಪರನೃಪತಿಕೋಶಂ ದೇಶಮತ್ಯಂತಶೋಭಂ ಯದಿಸ ಕುಪಿತಚಿತಃ ಕಾರವತ್ಯಾತ್ಮಕೀಯಂ
(ಯಮ್)

–ಕೊಲ್ಲಾಪುರ ತಾಮ್ರಪಟ (೧೧೧೫)

೪. ತಸ್ಯಾನುಜೋ ಧರ್ಮಧರೋ ಧರಿತ್ರ್ಯಾಂದಧಾರ ವಣ್ಣನಿಖಿಲ್ಲಾ (ಲಾ) ನ್ಸಧರ್ಮೇ।
ಧೈರ್ಯಾಗ್ರಧುರ್ಯೇ ಧನದೋ ಧನಾನಾಂ ಶ್ರೀಗಂಡರಾದಿತ್ಯ ಇತಿ ಪ್ರಸಿದ್ಧಃ।
ಹೀನಾನಾಥ ಧರಿದ್ರದುಃಖಿ ವಿಕಲ್ಲ(ಲ) ವ್ಯಕೀರ್ಣ ನಾನಾವಿಧ।
ಪ್ರಾಣಿತ್ರಾಣ ಪರಾಯಣಃ ಪ್ರತಿದಿನಂ ಗುಪ್ತಾಖ್ಯದನೇನಯಃ ।
ಯಃ ಕೃಷ್ಣಾಜಿನಧೇನುಭೂಮ್ಯುಭಯತೋ ಮುಖ್ಯಾದಿ ದಾನಪ್ರದಃ।
ಶಶ್ವದ್ವ್ರ(ದ್ಬ್ರ)ಹ್ಮಮತಿ ಪ್ರವೀಣಹೃದಯೋ ಭೂದೇವಕಲ್ಪದ್ರುಮಃ ॥

–ಕೊಲ್ಲಾಪುರ ತಾಮ್ರಪಟ (೧೧೨೬)

೫. ಶ್ರೀಯುವತೀಲತಾಲಲಿತ ಕಲ್ಪಮಹಾಮಹಿಜಂಗೆ ಶೌಚಗಾಂ।
ಗೇಯಧರಾಧಿಪಂಗೆ ಖಚರೇಂದ್ರಕುಳಪ್ರಭವಂಗೆ ರೂಪನಾ ।
ರಾಯಣದೇವಭೂಪತಿಗೆ ಗಂಡರದೇವನೃಪಂಗೆ ರೂಪನಾ।
ರಾಯಣದೇವನಾದಿಜಿನನಾದವೆ ಮಾಳ್ಕಭೀವಾಂಛಿತಾರ್ಥಮಂ ॥

ಮನುಸೂತ್ರಂ ನಿಜಸೂತ್ರವೀ ಮನಸಿಜಾಕಾರನ್ನಿಜಾಕಾರಮೆಂ।
ಬಿನಿತಲ್ [ಸು]ತ್ತಲಳುಂಬವಂಬರಚರಪ್ರಸ್ತುತ್ಯಜೀಮೂತವಾ।
ಹನವಂಶಂ ನಿಜವಂಶಮೆಂದೊಡೆ ಬಳಿಕ್ಕೀ ಗಂಡಮಾರ್ತಂಡದೇ।
ವನ ಸನ್ಮಾರ್ಗದ ರೂಪಿನನ್ವಯದುದಾತ್ತಖ್ಯಾತಿ ಸಾಮಾನ್ಯಮೇ॥

–ಕೊಲ್ಲಾಪುರ ಶಿಲಾಲೇಖ (ಕಿ.ಶ. ?)

೬. ತುಲಾಪುರುಷದಾನಾದಿ ಷೋಡಶಕ್ರತುಕಾರಕಃ।
ಶೌಚಗಾಂಗೇಯ ಕೀರ್ತೇಕನಿಲಯಃ ಸ್ವಗುಣೈರ್ಭುವಿ ॥

–ಮಿರಜ ಶಿಲಾಲೇಖ (ಕ್ರಿ.ಶ. ?)

೭ ಎನೆ ನೆಗಳ್ದ ಭೋಜಭೊಭುಜ ।
ನನುಜಾತಂ ಧರ್ಮಧರ್ಮಜಂ ಪರಬಳಭಂ ।

ಜನಶಾಳಿ ಶೌಚಗಾಂಗೇ ।
ಯನಿಡುಮಾದಿತ್ಯ ಗಂಡರಾದಿತ್ಯ ನೃಪಂ ॥
ವಸುಧಾಚಕ್ರಮನಾತ್ಮಬಾಹುಬಳದಿಂ ನಿಃಕಂಟಕಂ ಮಾಡಿ ಪಾ।
ಳಿಸಿದಂ ಷೋಡಶಯಾಚಕಬ್ರಜಮನಿಚ್ಛಾದಾನದಿಂದೆಯ್ದೆ ಮ।
ನ್ನಿಸಿದಂ ಸುಸ್ಥಿರಮಪ್ಪನಂ ಬೆಳಗಿದಂ ಶ್ರೀ ರೂಪನಾರಾಯಣಂ[೧೨]

–ಎಕ್ಕಸಂಬುಗೆ ಶಿಲಾಲೇಖ (ಕ್ರಿ.ಶ. ೧೧೬೫)

೮.A ಸಮಧಿಗತ ಪಂಚಮಹಾಶಬ್ದ ಮಹಾಮಂಡಲೇಶ್ವರಃ।
ತಗರಪುರವರಾಧೀಶ್ವರಃ। ಶ್ರೀ ಶಿಳಾಹಾರನರೇಂದ್ರಃ ।
ಜೀಮೂತವಾಹನಾನ್ವಯಪ್ರಸೂತಃ। ಸುವರ್ಣಗರುಡಧ್ವಜಃ।
ಮರುವಕ್ಕಸರ್ಪಃ। ಅಯ್ಯನ ಸಿಂಹಃ। ರಿಪುಮಂಡಳಿಕಭೈರವಃ।
ವಿದ್ವಿಷ್ಟ ಗಜಕಂಠೀರವಃ। ಗಣಿಕಾಮನೋಜಃ।
ಹಯವತ್ಸರಾಜಃ। ಶೌಚಗಾಂಗೇಯಃ। ಸತ್ಯರಾಧೇಯಃ ಇಡುವರಾದಿತ್ಯಃ।
ರೂಪನಾರಾಯಣಃ। ಕಲಿಯುಗವಿಕ್ರಮಾದಿತ್ಯಃ। ಶನಿವಾರಸಿದ್ಧಿಃ।
ಗಿರಿದುರ್ಗಲಂಘನಃ। ಶ್ರೀಮನ್ಮಹಾಲಕ್ಷ್ಮೀಲಬ್ಧವರಪ್ರಸಾದಿ ಸಮಸ್ತರಾಜಾವಳಿ
ವಿರಾಜಿತಃ ಶ್ರೀಮನ್ಮಹಾಮಂಡಳೇಶ್ವರಃ ಶ್ರೀ ಗಂಡರಾದಿತ್ಯದೇವಃ।

B. "ಸಮಸ್ತಪ್ರಶಸ್ತಿಸಹಿತಂ ಜೀಮೂತವಾಹನಾನ್ವಯಪ್ರಸೂತಂ ಖಚರಚಕ್ರವರ್ತಿ ಶಿಲಾಹಾರನರೇಂದ್ರಂ ಮಂಡಳಿಕಡಂಗೆಯಬರ್ದು ಸಪ್ತಾಂಗರಾಜ್ಯಲಕ್ಷ್ಮೀ ಸ್ವೀಕೃತ, ಮಂಡಳಿಕತ್ತಿನೇತ್ರ, ಶಿಳಾಹಾರವಂಶಪ್ರಾಗುತ್ಮನ್ನ ಭೋಜದೇವ ಪ್ರಭೃತಿ ಕ್ಷತ್ರಿಯರಾಜ್ಯಲಕ್ಷ್ಮೀಪ್ರತಿದಿನಪ್ರವರ್ಧಮಾನ ಗಂಡರಾದಿತ್ಯದೇವರ್"

ಇವುಗಳಲ್ಲಿ ಮೊದಲಿನದು (A) ಸಾಮಾನ್ಯವಾಗಿ ಎಲ್ಲ ಶಾಸನಗಳಲ್ಲಿ, ಎರಡನೆಯದು (B) ಹೇರ್ಲೆ ಶಿಲಾಲೇಕದಲ್ಲಿ ಕಂಡುಬರುವ ಬಿರುದುಗಳಾಗಿವೆ.

ಈ ಗಂಡರಾದಿತ್ಯನ ಮೊಮ್ಮಗನಾದ ಭೋಜನಿಗೆ ಗಂಡರಾದಿತ್ಯ ಹೆಸರಿನ ಮಗನಿದ್ದನೆಂದೂ ಈ "ಕುಮಾರಗಂಡರಾದಿತ್ಯ ವಿಜ್ಞಾಪನೇನ" ತಂದೆ ಭೋಜನು ದತ್ತಿ ನೀಡಿದನೆಂದೂ ಕಶೇಳಿ ದಾನಪತ್ರ (೧೧೯೬ ?) ತಿಳಿಸುತ್ತದೆ.

ಹೀಗೆ ಶಿಲ್ಹಾಹಾರ ವಂಶದಲ್ಲಿ ಗಂಡರಾದಿತ್ಯ ಹೆಸರಿನ ಇಬ್ಬರು ವ್ಯಕ್ತಿಗಳಲ್ಲದೆ ತಕ್ಕೋಲಂ ಕಾಳಗದಲ್ಲಿ ಮಡಿದ ಚೋಳರಾಜಾದಿತ್ಯನ ತಮ್ಮನಾದ ಒಬ್ಬ ಶೈವ ಗಂಡರಾದಿತ್ಯನಿದ್ದ ಬಗ್ಗೆ ತಿಳಿದುಬರುತ್ತದೆ.[೧೩] ಬಳ್ಳಾರಿ ಜಿಲ್ಲೆಯ ಆಲೂರ ತಾಲೂಕಿನ ಕಂಚಗಾರ ಬೆಳಗಲ್ಲು ಗ್ರಾಮದ ಶಾಸನದಲ್ಲಿ (೧೦೪೭) ಮಹಾಮಂಡಳೇಶ್ವರನಾದ ಗಂಡರಾದಿತ್ಯನೆಂಬವನು ಸಿಂದವಾಡಿ–೧೦೦೦,

---

೧೨. ಕರ್ನಾಟಕ ಭಾರತಿ ೧೧–೨

ಬೆಣ್ಣೆವೂರ-೧೨ ಮತ್ತು ತನ್ನ ಭತ್ತ ಗಾವೆಯಾದ ನರಗುಂದಗಳನ್ನು ಆಳುತ್ತಲಿದ್ದನೆಂದು ಹೇಳಲಾಗಿದೆ.[೧೪] ತಿಪಟೂರ ತಾಲೂಕಿನ ಕಿಬ್ಬನಹಳ್ಳಿ ಹೋಬಳ್ಳಿಯ ಹಟ್ಟಣ ಗ್ರಾಮದ ೩ ಶಾಸನಗಳಲ್ಲಿ ೧೧-೧೨ನೆಯ ಶತಮಾನಗಳ ಮಧ್ಯ ಬಾಳಿದ ಶೈವನಾದ ಒಬ್ಬ ಗಂಡರಾದಿತ್ಯನೆಂಬ ಸಾಮಂತನ ಉಲ್ಲೇಖವಿದೆ.[೧೫] ಇವರಿಗೂ ಪ್ರಸ್ತುತ ಶಿಲಾಹಾರ ಗಂಡರಾದಿತ್ಯನಿಗೂ ಸಂಬಂಧವಿಲ್ಲ.

ಕವಿ ಜನ್ನನು ಗಂಡರಾದಿತ್ಯನ ಪೊಳಲಲ್ಲಿ ತಾನು ಅನಂತನಾಥ ಬಸದಿಯನ್ನು ಕಟ್ಟಿಸಿದುದಾಗಿ ಹೇಳುತ್ತಾನೆ.[೧೬]

ಈ ಗಂಡರಾದಿತ್ಯನಪೊಳಲು ಕಿಲಕಿಲದುರ್ಗವೆಂದು ಕವಿಚರಿತೆಕಾರರ ಊಹೆ.[೧೭] ಶಿಲಾಹಾರರ ರಾಜಧಾನಿಯಾಗಿದ್ದ ಈ ಕಿಳಕಿಳದುರ್ಗವೆಂದರೆ ಮಹಾರಾಷ್ಟ್ರದ ಪನ್ನಾಳಗಡವೆಂದು ಪ್ರೊ. ಮಿರಾಶಿ ಅವರು ಹೇಳುವುದರಿಂದ[೧೮] ಜನ್ನನು ಈಪನ್ನಾಳಗಡದಲ್ಲಿ ಅನಂತನಾಥ ಬಸದಿ ಕಟ್ಟಿಸಿದನೆಂಬ ನಿರ್ಣಯಕ್ಕೆ ಬರಬೇಕಾಗುತ್ತದೆ. ಆದರೆ ದ್ವಾರಸಮುದ್ರದಲ್ಲಿದ್ದ ಜನ್ನ ಅಷ್ಟು ದೂರದ ಪನ್ನಾಳಗಡದಲ್ಲಿ ಜಿನಾಲಯ ಕಟ್ಟಿಸಿರುವುದು ಅಸಂಭವ, ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಹೊಳಲಗ್ರಾಮಕ್ಕೆ 'ಗಂಡರಾದಿತ್ಯನ ಪೊಳಲು' ಎಂದು ಹೆಸರಿದ್ದಿತೆಂದು ಅಲ್ಲಿಯ ಎರಡು ಶಾಸನಗಳಿಂದ ತಿಳಿದುಬರುತ್ತದೆ.[೧೯] ಬಹುಶಃ ಇದು ಮೇಲೆ ಹೇಳಿದ ಸಿಂದವಾಡಿಯ ಮಂಡಳೇಶ್ವರನಾದ ಗಂಡರಾದಿತ್ಯ ಹೆಸರಿನ ಗ್ರಾಮವಾಗಿರಬಹುದೇ ಹೊರತು ಜನ್ನನು ಜಿನಾಲಯ ಕಟ್ಟಿಸಿದ ಗಂಡರಾದಿತ್ಯನಪೊಳಲು ಆಗಿರಲಿಕ್ಕಿಲ್ಲ. ಹೀಗಾಗಿ ಜನ್ನನ ಗಂಡರಾದಿತ್ಯನ ಪೊಳಲನ್ನು ವಿದ್ವಾಂಸರು ಇನ್ನೂ ಶೋಧಿಸಬೇಕಾಗಿದೆ.

ನಿಂಬಸಾಮಂತ

ಅರಸರನ್ನು ಬಿಟ್ಟರೆ ಸಾಮಂತರೂ ಮಂತ್ರಿಗಳೂ ಜೈನಮತದ ಏಳ್ಗೆಗಾಗಿ ನಿಷ್ಠೆಯಿಂದ ದುಡಿದುದು ನಮ್ಮ ನಾಡಿನ ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಮಲ್ಲಪಯ್ಯ, ಪುನ್ನಮಯ್ಯ, ಚಾವುಂಡರಾಯ, ಭರತ, ನನ್ನ, ಗಂಗಣ, ಹುಳ್ಳ, ರೇಚಣ, ಗೊಂಕ ಇತ್ಯಾದಿ ಹೆಸರುಗಳನ್ನು ಇಲ್ಲಿ ಸ್ಮರಿಸಬಹುದು. ಇವರ ಸಾಲಿನಲ್ಲಿ ತಪ್ಪದೇ ಧರ್ಮದುರಂಧರನಾಗಿ ಬೆಳಗುತ್ತಾನೆ. ನಿಂಬಸಾಮಂತ. ಈತನಿಗೆ ಪ್ರತ್ಯಕ್ಷ ಪರೋಕ್ಷವಾಗಿ ಸಂಬಂಧಿಸಿದ ಒಟ್ಟು ಏಳು ಶಾಸನಗಳು ನಮಗೆ ಲಭಿಸಿವೆ.

೧. ಕೊಲ್ಲಾಪುರ ಶಿಲಾಶಾಸನ: ಈ ಶಾಸನ ಕೊಲ್ಲಾಪುರ ಮಹಾಲಕ್ಷ್ಮೀ ದೇವಾಲಯದ ಆವರಣದಲ್ಲಿರುವ ಶೇಷಶಾಯೀ ವಿಷ್ಣುದೇವಾಲಯದ ತೊಲೆಯ ಮೇಲೆ ಬರೆಯಲ್ಪಟ್ಟಿದೆ. ಇದು ಹಿಂದೆ ಹೇಳಿದ ೬ನೆಯ ನಂಬರಿನ ಶಾಸನವಾಗಿದ್ದು ವಿವರಗಳನ್ನು ಅಲ್ಲಿ ನೋಡಬಹುದು.

---

೧೩ The quarterly journal of the mythic society, xvii-ii

೧೪. S.I.I.IX-I No. 105

೧೫. E.C. XII No. 101, 104, 105, ಹಟ್ಟಣ (ಕ್ರಿ.ಶ. 1078, 1130, 1078)

೧೬. ಅನಂತನಾಥ ಪುರಾಣಂ (ಮೈ.ವಿ.ವಿ.) ೧೪-೮೩

೧೭. ಕರ್ಣಾಟಕ ಕವಿಚರಿತೆ (೧೯೭೨) ಪು. ೩೭೫ ಅ.ಟಿ.

೧೮. ಶಿಲಾಹಾರ ರಾಜವಂಶಾಚಾ ಇತಿಹಾಸ ಆಣಿ ಕೋರೀವ ಲೇಖ: (ಪು.೫೪)

೧೯. S.I.I.IX-I No. 285, 286

೨. ತೇರದಾಳ ಶಾಸನ (ಕ್ರಿ.ಶ.೧೧೨೩)[೨೦] : ವಿಕ್ರಮಾದಿತ್ಯ VI ನ ಮಹಾಮಂಡಳಿಕನಾದ ಸವದತ್ತಿ ರಟ್ಟವಂಶದ ಕಾರ್ತವೀರ್ಯದೇವನ ಅಜ್ಞೆಯಂತೆ, ಜೀಮುತವಾಹನಾನ್ವಯದ ಮಂಡಳಿಕ ಕೇದಾರಗೊಂಕದೇವನು ತನ್ನ ರಾಜಧಾನಿಯಾದ ತೇರದಾಳದಲ್ಲಿ ನೇಮಿನಾಥ ಜಿನಾಲಯವನ್ನು ಕಟ್ಟಿಸಿ "ಕೊಲ್ಲಾಪುರದ ಶ್ರೀ ರೂಪ ನಾರಾಯಣಬಸದಿಯಾಚಾರ್ಯರು ಮಣ್ಡಳಾಚಾರ್ಯರುಮೆನಿಪ್ಪ ಶ್ರೀ ಮಾಘಣಂದಿ ಸೈದ್ಧಾನ್ತಿಕದೇವರ ಬರಿಸಿ" ಕ್ರಿ.ಶ. ೧೧೨೩ರಲ್ಲಿ ದತ್ತಿ ಬಿಟ್ಟಿರುವನು. ಇಲ್ಲಿ ಮಾಘಣಂದಿಗಳನ್ನು "ಸಾಮನ್ತ ನಿಂಬದೇವನ ಗುರುಗಳ್" "ಸಾಮನ್ತ ನಿಂನೆಜಿಗಲ್ ನೆಗಳ್ದೊಪ್ಪುವ ಮಾಘಣಂದಿಸೈದ್ಧಾನ್ತಿಕ ಚಕ್ರವರ್ತಿ" ಎಂದು ಕರೆಯಲಾಗಿದೆ.

೩. ಕೊಲ್ಲಾಪುರ ಶಿಲಾಶಾಸನ (೧೧೩೫): ಈ ಶಾಸನ ಕೊಲ್ಲಾಪುರದ ಶುಕ್ರವಾರ ಅಗಸಿಯ ಪಾರ್ಶ್ವನಾಥ ಬಸದಿಯ ಅಂಗಳದಲ್ಲಿದೆ. ಇದು ಹಿಂದೆ ಹೇಳಿದ ೭ನೆಯ ನಂಬರಿನ ಶಾಸನವಾಗಿದ್ದು ವಿವರಗಳನ್ನು ಅಲ್ಲಿ ನೋಡಬಹುದು.

೪. ಶ್ರವಣಬೆಳ್ಗೊಳ ಶಾಸನ (೧೧೬೩)[೨೧]: ಪ್ರಾಸಂಗಿಕವಾಗಿ ಮಾಘಣಂದಿ ಸಿದ್ಧಾಂತಿಗಳನ್ನು "ಮಾಘನನ್ದಿಮುನಿಪಃ ಕೊಲ್ಲಾಪುರೇತೀರ್ಥ ಕೃದ್ಧಾನ್ತಾರ್ಣ್ಣವ ಪಾರಗೋಚಳಧೃತಿಶ್ಚಾರಿತ್ರ ಚಕ್ರೇಶ್ವರಃ" ಎಂದು ಈ ಶಾಸನ ವರ್ಣಿಸುತ್ತದೆ. ಮೇಲೆ ಹೇಳಿದ ಶೇಷಶಾಯಿ ವಿಷ್ಣುದೇವಾಲಯದ ಶಾಸನ(ನಂ೧)ದಲ್ಲಿ ಬರುವ "ಎಳೆ ಮಾವಿಂ ಬನವಬ್ಬದಿಂ.." ಎಂಬ ಪದ್ಯ ಇಲ್ಲಿಯೂ ಇದೆ. ಇಲ್ಲಿ ಮಾಘಣಂದಿಗಳನ್ನು ವರ್ಣಿಸುತ್ತ "ಅವರ ಗುಡ್ಡಗಳು ಸಾಮನ್ತಕೇದಾರ ನಾಕರಸ, ದಾನಶ್ರೇಯಾಂಸ ಸಾಮನ್ತ ನಿಂಬದೇವ, ಜಗದಾರ್ಬ್ಬಗಂಡ ಸಾಮನ್ತ ಕಾಮದೇವ" ಎಂಬ ಉಲ್ಲೇಖ ಮಾಡಲಾಗಿದೆ. ಇಲ್ಲಿಯ ನಾಕರಸನು ನಿಂಬನ ತಂದೆ; ಕಾಮದೇವನು ಬಹುಶಃ ನಿಂಬನ ಸಹೋದರ. ಇಲ್ಲಿ ನಿಂಬನಿಗೆ ಬಳಸಿದ 'ದಾನಶ್ರೇಯಾಂಸ' ಎಂಬ ವಿಶೇಷಣ ಗಮನಾರ್ಹವಾಗಿದೆ. ಈ ಶಾಸನದ ಕೊನೆಗೆ "ಶ್ರೀಮನ್ಮಹಾಪ್ರಧಾನಂ ಸರ್ವಾಧಿಕಾರಿ ಹಿರಿಯ ಭಂಡಾರಿ ಅಭಿನವಗಂಗದಂಡನಾಯಕ ಶ್ರೀ ಹುಳ್ಳರಾಜಂ ತಮ್ಮ ಗುರುಗಳಪ್ಪ ಶ್ರೀ ಕೊಂಡಕುಂದಾನ್ವಯದ ಶ್ರೀ ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛದ ಶ್ರೀ ಕೊಲ್ಲಾಪುರದ ಶ್ರೀ ರೂಪನಾರಾಯಣನ ಬಸದಿಯ ಪ್ರತಿವಿದ್ಧದ ಶ್ರೀಮತ್ಕೆಲ್ಲ. ಗೆಜಿಯ ಪ್ರತಾಪಪುರವಂ ಪುನರ್ಬ್ಬರಣವಂ ಮಾಡಿಸಿ ಜಿನನಾಥಪುರದಲು ಕಲ್ಲದಾನ ಶಾಲೆಯಂ ಮಾಡಿಸಿ ಶ್ರೀಮನ್ಮಹಾಮಂಡಳಾಚಾರ್ಯರ್ದ್ದೇವಕೀರ್ತ್ತಿ ಪಂಡಿತ ದೇವರ್ಗ್ಗೆ ಪರೋಕ್ಷವಿನಯವಾಗಿ ನಿಸಿದಿಯಂ ಮಾಡಿಸಿದ......." ಎಂಬ ವಿಷಯ ಬರುತ್ತದೆ.

೫. ತೇರದಾಳ (ಕ್ರಿ.ಶ. ೧೧೮೧)[೨೨] : ಈ ಕಲ್ಲಿನಲ್ಲಿ ಎರಡು ಶಾಸನಗಳಿವೆ. ಮೊದಲ ಶಾಸನ ಕ್ರಿ.ಶ. ೧೧೮೧ ರಂದು ಹುಟ್ಟಿದೆ. ಎರಡನೆಯ ಶಾಸನ ಬಹುಶಃ ಇದೇ ಕಾಲಕ್ಕೆ ಹುಟ್ಟಿದ್ದು ಅಲ್ಲಿ "ಶ್ರೀ ಕೊಲ್ಲಾಪುರದ ನಿಂಬದೇವ ಸಾವನ್ತ ಮಾಡಿಸಿದ ಶ್ರೀ ರೂಪನಾರಾಯಣದೇವರ ಬಸದಿಯ ಪ್ರತಿಬದ್ಧಮಪ್ಪ ತೇರಿದಾಳದ ಗೊಂಕ ಜಿನೇಂದ್ರ ಮಂದಿರ"ವನ್ನು ತೇರದಾಳದ ಮೂಲಸ್ಥಾನದ ಕಲಿದೇವಸ್ವಾಮಿಗೆ ಪ್ರತಿ ಬದ್ಧಂ ಮಾಡಿದರೆಂದು ಹೇಳಲಾಗಿದೆ.

---

೨೦. KI.V. No. 21

೨೧. E.C. II No. 711(1979)

೨೨. KI.V. No. 98

೬. ಶ್ರವಣಬೆಳ್ಗೊಳ ಶಾಸನ (೧೩ ನೆಯ ಶತಮಾನ) :[೨೨a] "ಕೊಲ್ಲಾಪುರದ ಸಾವನ್ತನ ಬಸದಿಯ ಪ್ರತಿಬದ್ಧದ ಶ್ರೀಮಾಘನಂದಿ ಸಿದ್ಧಾನ್ತದೇವರ" ಶಿಷ್ಯ ಪರಂಪರೆಯ ಸಾಗರಣಂದಿಗಳಿಗೆ ವಿಗ್ರಹದಾನ ನೀಡಿದ ವಿಷಯ ಈ ಶಾಸನದಲ್ಲಿದೆ.

೭. ಕಮಲಾಪುರಂ ಶಾಸನ: ಹಂಪೆಯ ಬಳಿಯ ಕಮಲಾಪುರಂ ಗ್ರಾಮದಲ್ಲಿರುವ ತೇದಿಯಿಲ್ಲದ ಒಂದು ಜೈನಶಾಸನದಲ್ಲಿ 'ನಿಂಬಸಾಮನ್ತ' ಎಂಬ ಹೆಸರು ಕಂಡುಬರುತ್ತದೆ. ಶಾಸನ ತುಂಬ ಒಡೆದು ಹೋದುದರಿಂದ ಇವನ ಬಗೆಗೆ ಹೆಚ್ಚು ಹೇಳಲು ಸಾಧ್ಯವಿಲ್ಲ.[೨೩]

ಈ ಶಿಲಾಲೇಖಗಳಿಂದ ತಿಳಿದುಬರುವ ನಿಂಬಸಾಮಂತನ ಚರಿತ್ರೆ ಇಷ್ಟು:

(ಶಿಲಾಹಾರ) ಗೃಹಪಟ್ಟವರ್ಧನ ಮತ್ತು ಸಾಮಂತಕೇದಾರ ಎನಿಸಿದ ನಾಕರಸ (ನಾಕಿರಾಜ, ನಾಕಿಗ, ನಾಗಾರ್ಜುನ)ನು ಅರಸು ಮಾರಸಿಂಹನ ಜೈನಮತೀಯ ರಾಣಿಯಾದ ನಾಗಲದೇವಿಯ ವಿಶ್ವಾಸದ ವ್ಯಕ್ತಿ. ಅದುದರಿಂದ ಈತನನ್ನು 'ನಾಗಲದೇವಿಯ ಗಂಧವಾರಣಂ' ಎಂದು ಶಾಸನ ಕರೆದಿದೆ. ಈ ನಾಕರಸ ಮತ್ತು ಚಂಪಕಾಂಬಿಕೆಯರಿಗೆ ಭಿಲ್ಲರಸ, (ಸಾಮಂತ) ನಿಂಬರಸ (ನಿಂಬದೇವ, ನಿಂಬ ದೇವರಸ, ಸಾಮಂತ ನಿಂಬ, ಸಾಮಂತ ನಿಂಬದೇವ), ಕಾವರಸ, ಕರ್ಣಾದೇವಿಯರು ಮಕ್ಕಳು. ಇವರಲ್ಲಿ ಮಗ ನಿಂಬರಸನೂ ನಾಗಲದೇವಿಯ ವಿಶ್ವಾಸದ ವ್ಯಕ್ತಿಯಾಗಿ, 'ನಾಗಲದೇವಿಯ ಗಂಧವಾರಣಂ' ಎಂದು ಹೆಸರಾಗಿದ್ದನು. ಕರ್ಣಾದೇವಿಯು ನಾಗಲದೇವಿಯ ಮಗ ಗಂಡರದೇವ (ಗಂಡರಾದಿತ್ಯ)ನನ್ನು ವರಿಸಿದ್ದಳು. ಹೀಗಾಗಿ ಅರಸು ಮನೆತನದೊಂದಿಗೆ ಇದ್ದ ಈ ಸಾಮಂತ ಮನೆತನದ ಅಧಿಕಾರಸಂಬಂಧ ರಕ್ತಸಂಬಂಧವಾಗಿ ಪರಿಣಮಿಸಿದ್ದಿತು. ನಿಂಬನು ಕೊಲ್ಲಾಪುರದಲ್ಲಿ ರೂಪನಾರಾಯಣ ಬಸದಿ ಹೆಸರಿನ ಆದಿಜಿನಬಸದಿಯನ್ನು ಕಟ್ಟಿಸಿದನೆಂದು ಕೊಲ್ಲಾಪುರದ ಶೇಷಶಾಯಿ ವಿಷ್ಣು ದೇವಾಲಯದ ಶಾಸನ ಹೇಳುತ್ತದೆ. ಈ ರೂಪನಾರಾಯಣ ಬಸದಿಯೆಂದರೆ ಈಗ ಕೊಲ್ಲಾಪುರದ ಶುಕ್ರವಾರ ಪೇಟೆ ಅಗಸಿಯ ಹತ್ತಿರ ಇರುವ ಪಾರ್ಶ್ವನಾಥ ಬಸದಿಯೆಂದು ಪ್ರೊ. ಮಿರಶಿ ಅವರು ಬರೆದಿರುವರು.[೨೪] ಆದರೆ ಶೇಷಶಾಯಿ ದೇವಾಲಯದ ತೊಲೆಯ ಮೇಲಿರುವ ಶಾಸನದಲ್ಲಿ "ರೂಪನಾರಾಯಣದೇವನಾದಿಜಿನ" ಎಂದೂ "ಆದಿತೀರ್ಥೇಶ್ವರ ಚೈತ್ಯಾಗಾರಮಂ ಮಾಡಿಸಿದಂ" ಎಂದೂ ಹೇಳಿರುವುದರಿಂದ ರೂಪನಾರಾಯಣ ಬಸದಿಯೆಂದರೆ ಪಾರ್ಶ್ವನಾಥ ಬಸದಿಯಲ್ಲ; ಆದಿಜಿನ ಬಸದಿ. ಈಗ ಕೊಲ್ಲಾಪುರದಲ್ಲಿ ಆದಿಜಿನಾಂರ್ಗತ ಬಸದಿ ಇಲ್ಲ. ಕಾರಣ ಈ ಶಾಸನವನ್ನೊಳಗೊಂಡ ಶೇಷಶಾಯಿ ದೇವಾಲಯವೇ ರೂಪನಾರಾಯಣ ಬಸದಿಯಾಗಿದ್ದು ಕಾಲಾಂತರದಲ್ಲಿ ಅದು ಪರಿವರ್ತನವಾಗಿದೆಯೆಂದೂ ಕೊಲ್ಲಾಪುರದ ಶುಕ್ರವಾರಪೇಟೆ ಅಗಸಿಯ ಹತ್ತಿರದ ಪಾರ್ಶ್ವನಾಥ ಬಸದಿಯೇ ಮುದಗೊಡೆಯಲ್ಲಿ ಕಟ್ಟಿಸಿದನೆಂದು ಶಾಸನದಲ್ಲಿ ಹೇಳಲಾದ

೨೨-a. KI.V. No. 98

೨೩. S.I.I.IV 221

೨೪. ಶಿಲಾಹಾರ ರಾಜವಂಶಾಚಾ ಇತಿಹಾಸ ಆಣಿ ಕೋರೀವ ಲೇಖ: ೫೬, ೮೩, ೧೫೯

ಬಸದಿಯೆಂದೂ ಭಾವಿಸಿಬೇಕಾಗುತ್ತದೆ.[೨೫] ಆದಿತೀರ್ಥಂಕರ ಹೆಸರಿಗೆ ಬದಲು ರೂಪ ನಾರಾಯಣ ಬಸದಿಯೆಂದು ಹೆಸರಿಟ್ಟರೂ ಇದು 'ಸಾಮಂತಬಸದಿ' ಎಂದೇ ಪ್ರಸಿದ್ಧಿ ಪಡೆಯಿತೆಂದು ಶ್ರವಣಬೆಳ್ಗೊಳ ಶಾಸನದಲ್ಲಿ ಬರುವ "ಕೊಲ್ಲಾಪುರಸಾವನ್ತನ ಬಸದಿ" ಎಂಬ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ.[೨೬]

ರೂಪನಾರಾಯಣಬಸದಿ ನಿರ್ಮಾಣವಾದುದು ಕ್ರಿ.ಶ. ೧೧೨೫ ಕ್ಕೆ ಮೊದಲು ಎಂದು ತೇರದಾಳ ಶಾಸನದಿಂದ ವ್ಯಕ್ತವಾಗುತ್ತದೆ. ಈ ಬಸದಿಯ ಪ್ರಥಮ ಆಚಾರ್ಯರು ನಿಂಬನ ಗುರುಗಳಾದ ಮಾಘಣಂದಿ ಸಿದ್ಧಾಂತಿಗಳು. ತೇರದಾಳ ಶಾಸನ (೧೧೨೫)ದಲ್ಲಿ ಮಾಘಣಂದಿಗಳನ್ನು "ವರ್ಧಮಾನತ್ರೈವಿದ್ಯರಜ್ಜಗುರುಗಳು" ಎಂದು ಕರೆದಿರುವುದರಿಂದ ಈ ಕಾಲಕ್ಕೆ ಅವರು ಮುಪ್ಪಿನವರಾಗಿರಬೇಕು. "ಕೊಲ್ಲಾಪುರದ ಶ್ರೀ ರೂಪ ನಾರಾಯಣ ಬಸದಿಯಾಚಾರ್ಯರು ಮಂಡಳಾಚಾರ್ಯರುಮೆನಿಪ್ಪ ಶ್ರೀ ಮಾಘಣನ್ದಿ ಸೈದ್ಧಾನ್ತಿಕ ದೇವರ ಬರಿಸಿ" ಎಂದು ಈ ತೇರದಾಳ ಶಾಸನ (೧೧೨೫) ಹೇಳಿದರೆ ಮುದುಗೊಡೆಯ ಪಾರ್ಶ್ವಜಿನ ಸನ್ನಿಧಿಯಲ್ಲಿ "ಕೊಲ್ಲಾಪುರದ ಶ್ರೀ ರೂಪ ನಾರಾಯಣ ಬಸದಿಯಾಚಾರ್ಯರಪ್ಪ ಶ್ರೀ ಶ್ರುತಕೀರ್ತಿತ್ರೈ ವಿದ್ಯದೇವರ ಕಾಲಂಕರ್ಚಿ" ಎಂದು ಕೊಲ್ಲಾಪುರ ಶಾಸನ (೧೧೩೫) ಹೇಳುವುದರಿಂದ ಮಾಘಣಂದಿಗಳು ಕ್ರಿ.ಶ. ೧೧೨೫ ರಲ್ಲಿ ಜೀವಂತವಿದ್ದು ಬಹುಶಃ ಕ್ರಿ.ಶ. ೧೧೩೫ ಕ್ಕೆ ಮೊದಲು ತೀರಿಕೊಂಡಿರಬೇಕೆಂದು ಹೇಳಬೇಕಾಗುತ್ತದೆ.[೨೭]

ನಿಂಬಸಾಮಂತ ೧೧೨೫ ಕ್ಕೆ ಮೊದಲು ರೂಪನಾರಾಯಣ ಬಸದಿ ಕಟ್ಟಿಸಿರುವುದರಿಂದ ಆ ಕಾಲಕ್ಕೆ ಪ್ರೌಢ ವಯಸ್ಸಿನವನೇ ಇರಬೇಕು. ೧೧೩೫ರಲ್ಲಿ ಈತ ಮುದುಗೊಡೆಯಲ್ಲಿ ಪಾರ್ಶ್ವನಾಥ ಬಸದಿ ಕಟ್ಟಿಸಿದ್ದಾನೆ. ಮುಂದೆ ಎಷ್ಟು ವರ್ಷ ಬದುಕಿದನೆಂಬ ಬಗ್ಗೆ ಆಧಾರಗಳು ಲಭ್ಯವಿಲ್ಲ. ನಿಂಬಸಾಮಂತ ಚರಿತೆಯ ಪ್ರಕಾರ ಈತನು ಅರಸು ಗಂಡರಾದಿತ್ಯನಿಗಿಂತ ಮೊದಲು, ಬಿಜ್ಜಳನೊಂದಿಗೆ ಕೈಕೊಂಡ ಯುದ್ಧದಲ್ಲಿ ವೀರಸ್ವರ್ಗವೇರುತ್ತಾನೆ. ಈ ಗಂಡರಾದಿತ್ಯನ ಕೊನೆಯ ಶಾಸನ (ಕೊಲ್ಲಾಪುರ ಶಾಸನ) ದ ಕಾಲ ಕ್ರಿ.ಶ. ೧೧೩೫. ಈತನ ಮಗ ವಿಜಯಾದಿತ್ಯನ ಮೊದಲಶಾಸನ (ಕೊಲ್ಲಾಪುರ ಶಾಸನ)ದ ಕಾಲ ಕ್ರಿ.ಶ. ೧೧೪೨. ಇನ್ನೂ ಚಕ್ರವರ್ತಿಯಾಗಿರದ ಬಿಜ್ಜಳನ ಆಳ್ವಿಕೆಯ ಪ್ರಥಮ

---

೨೫. ಅ.ಟಿ. ೯ ನೋಡಿರಿ, ಮುದುಗೊಡೆಯಲ್ಲಿ ಪಾರ್ಶ್ವನಾಥ ಬಸದಿಯನ್ನು ನಿಂಬನು ಕಟ್ಟಿಸಿದನೆಂಬ ಉಲ್ಲೇಖವನ್ನೊಳಗೊಂಡ ಶಾಸನ (೧೧೩೫) ಇಂದಿನ ಶುಕ್ರವಾರಪೇಟೆ ಅಗಸಿಯ ಹತ್ತಿರದ ಪಾರ್ಶ್ವನಾಥ ಬಸದಿಯ ಅವರಣದಲ್ಲಿ ಇರುವದರಿಂದ ಈ ಬಸದಿಯನ್ನು ನಿಂಬ ನಿರ್ಮಿತವೆಂದು ಸ್ಪಷ್ಟವಾಗುತ್ತದೆ.

೨೬. E.C. II No. 526 (1979).

೨೭. ಕ್ರಿ.ಶ. ೧೧೪೨ರ ಕೊಲ್ಲಾಪುರದ ಶಿಲಾಲೇಖದ ಪ್ರಕಾರ ವಿಜಯಾದಿತ್ಯ ಆಳುವಾಗ ಹಾವಿನ ಹೇರಿಳಿಗೆ ಗ್ರಾಮದಲ್ಲಿ ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಚಾರ್ಯ ಮಾಘಣಂದಿ ಶಿಷ್ಯನಾದ ವಾಸುದೇವನಿಂದ ಪಾರ್ಶ್ವಜಿನಾಲಯ ಕಟ್ಟಲ್ಪಟ್ಟಿತು. ಆಗ ಮಾಘಣಂದಿಗಳ ಶಿಷ್ಯ ಮಾಣಿಕ್ಯನಂದಿಸಿದ್ಧಾಂತಿಗಳ ಕಾಲು ತೊಳೆದು ದತ್ತಿ ಬಿಡಲಾಗಿದೆ. ಮುಂದೆ ೧೧೫೦ ರ ಭಾಮಣಿ ಶಿಲಾಶಾಸನದ ಪ್ರಕಾರ ವಿಜಯಾದಿತ್ಯನು ಆಳುವಾಗ ರೂಪನಾರಾಯಣ ಬಸದಿ ಆಚಾರ್ಯ ಮಾಘಣಂದಿಗಳ ಅಂತೇವಾಸಿ ಅರ್ಹಣಂದಿಗಳ ಕಾಲಂಕರ್ಚಿ ದತ್ತಿ ಬಿಡಲಾಗಿದೆ. ಹೀಗೆ ಕಾಲಗತಿಸಿದಂತೆ ಮಾಘಣಂದಿಯ ಅಂತೇವಾಸಿ-ಶಿಷ್ಯರ ಚಟುವಟಿಕೆಗಳೇ ಕಂಡುಬರುವುದರಿಂದ ಈ ಶಾಸನಗಳ ಕಾಲಕ್ಕೆ ಮಾಘಣಂದಿಗಳು ಜೀವಂತವಿರಲಿಲ್ಲವೆಂದು ಇನ್ನೂ ಸ್ಪಷ್ಟವಾಗುತ್ತದೆ.

ಉಲ್ಲೇಖದ[೨೮] ಕಾಲ ಕ್ರಿ.ಶ. ೧೧೩೦. ಹೀಗಾಗಿ ಕವಿ ಪಾರ್ಶ್ವನು ಹೇಳುವಂತೆ ನಿಂಬಸಾಮಂತನು ಗಂಡರಾದಿತ್ಯನ ಪರವಾಗಿ ನಿಂತು ಬಿಜ್ಜಳನೊಂದಿಗೆ ಕಾದಿರುವುದು ಸಂಭವನೀಯವೆನಿಸುತ್ತದೆ;[೨೯] ಆದರೆ ಆಗ ಬಿಜ್ಜಳ ಮಂಗಳವಾಡದಲ್ಲಿ ಚಾಲುಕ್ಯರ ಸಾಮಂತನಾಗಿ ಆಳುತ್ತಲಿದ್ದನೇ ಹೊರತು ಕಲ್ಯಾಣದಲ್ಲಿ ಚಕ್ರವರ್ತಿಯಾಗಿರಲಿಲ್ಲ. ಬಿಜ್ಜಳನು ಗಂಡರಾದಿತ್ಯನ ಮಗ ವಿಜಯಾದಿತ್ಯನ (೧೧೪೦–೧೧೭೫) ನೆರವಿನಿಂದ ಚಕ್ರವರ್ತಿಯಾದನೆಂದು "ಯತ್ಸಖ್ಯೇನ ಚ ಚಕ್ರವರ್ತಿಪದವೀಂ ಪ್ರಾಪಾತುಲೋ ವೀಕ್ಷಣಃ(=ಬಿಜ್ಜಣಃ) ಸೋಭ್ಯಚ್ಛ್ರೀವಿಜಯಾರ್ಕಾದೇವ ನೃಪತೀ ವೈರಿಭಕಂಠೀರವಃ" ಎಂಬ ಭೋಜನಿಗೆ ಸಂಬಂಧಿಸಿದ ಕಶೇಳಿ ತಾಮ್ರಪಟ, ಕುತಾಪುರ ದಾನಪತ್ರ (೧೧೯೧)ಗಳ ವಾಕ್ಯದಿಂದ ಸ್ಪಷ್ಟವಾಗುತ್ತದೆ. ಹೀಗಿದ್ದೂ ಕವಿಪಾರ್ಶ್ವ ಬಿಜ್ಜಳನು ಕಲ್ಯಾಣದಿಂದಲೇ ಆಳುತ್ತಲಿದ್ದನೆಂಬ ಅರ್ಥ ಬರುವಂತೆ ಬರೆದುದು ಒಪ್ಪಿಗೆಯಾಗುವುದಿಲ್ಲ.

ಮುಂದೆ ವಿಜಯಾದಿತ್ಯನಿಗೂ ಬಿಜ್ಜಳನಿಗೂ ಸಂಬಂಧ ಸರಿಯಾಗಿ ಉಳಿಯಲಿಲ್ಲವೆಂದು ತೋರುತ್ತದೆ. ಮೊದಲಿನಿಂಲೂ ತಮ್ಮ ಶಾಸನಗಳ ಪ್ರಾರಂಭದಲ್ಲಿ ಚಕ್ರವರ್ತಿಯ ಉಲ್ಲೇಖ ಮಾಡದೆ ಪ್ರಾಸಂಗಿಂಕವಾಗಿ ಮಾತ್ರ ಉಲ್ಲೇಖಿಸಿರುವುದು ಈ ಶಿಲಾಹಾರರ ಸ್ವತಂತ್ರ ಮನೋವೃತ್ತಿಯನ್ನು ದ್ಯೋತಿಸುತ್ತದೆ. ಬಹುಶಃ ಈ ಧೋರಣೆ ಕಾರಣವಾಗಿ ಚಕ್ರವರ್ತಿಯಾಗಿದ್ದ ಬಿಜ್ಜಳ ವಿಜಯಾದಿತ್ಯರ ನಡುವೆ ಖಿದ್ರಾಪುರದಲ್ಲಿ(?) ಯುದ್ಧ ಜರುಗಬೇಕು.[೩೦] ಮುಂದೆ ಮಗ ಭೋಜ II ನಲ್ಲಿ ಈ ಸ್ವತಂತ್ರ ಪ್ರವೃತ್ತಿ ಇನ್ನೂ ಪ್ರವರ್ಧಿಸಿದಂತಿದೆ. ಈ ಕಾಲಕ್ಕಾಗಲೇ ಪ್ರಬಲ ಯಾದವ ಸಿಂಘಣನಿಗೂ ಭೋಜನಿಗೂ ಖಿದ್ರಾಪುರದಲ್ಲಿ(?) ಯುದ್ಧ ನಡೆದು ಭೋಜ ಸೆರೆ ಸಿಕ್ಕಿರಬೇಕು.[೩೧] ಅಂದಿನಿಂದ ಈ ಶಿಲಾಹಾರ ಮನೆತನ ಅಸ್ತಂಗತವಾಯಿತೆಂದು ಹೇಳಬಹುದು.

ಚಾಲುಕ್ಯರು ಮತ್ತು ಶಿಲಾಹಾರರು ಚಕ್ರವರ್ತಿ ಮಂಡಲೇಶ್ವರ ಸಂಬಂಧದಿಂದ ಬಾಳಿದವರು. ಈ ಎರಡೂ ಮನೆತನಗಳ ಅರಸರ ಕಾಲಗಡುವನ್ನು ಇಲ್ಲಿ ಜೊತೆಯಿಟ್ಟು ನೋಡಬಹುದು.

ಮಾರಸಿಂಹ
(೧೦೫೦–೧೦೭೫)

ವಿಕ್ರಮಾದಿತ್ಯ (೧೦೭೬–೧೧೨೭)
ಗುವಲ II (೧೦೭೫–೧೧೦೦)
ಗೊಂಕ II
ಬಲ್ಲಾಳ (೧೧೦೦–೧೧೦೫)
ಭೋಜ
ಗಂಡರಾದಿತ್ಯ (೧೧೦೫–೧೧೪೦)

೨೮. ಡಾ. ಪಿ.ಬಿ. ದೇಸಾಯಿ: ಬಸವೇಶ್ವರ ಆಂಡ್ ಹೀಜ್ ಡಾಯಮ್ಸ: ಪು.೨೫–೨೭.
೨೯. ಶ್ರೀ ಜಿನವಿಜಯ ಪತ್ರಿಕೆ (೨೬–೨)ಯಲ್ಲಿ ಕೇಶವ (ಪ್ರೊ.ಕೆ.ಜಿ.ಕುಂದಣಗಾರ?) ಎಂಬವರು 'ಪಾರ್ಶ್ವ' ಹೆಸರಿನ ಲೇಖನ ಬರೆದು ಬಿಜ್ಜಳನು ಭೋಜ ನೊಂದಿಗೆ ಹೋರಾಡಿರಬೇಕೇ ಹೊರತು ಗಂಡರಾದಿತ್ಯನೊಂದಿಗಲ್ಲ ಎಂದು ಹೇಳಿದ್ದಾಗಿದೆ. ಈಗ ಈ ಅಭಿಪ್ರಾಯವನ್ನು ಕೈ ಬಿಡಬಹುದಾಗಿದೆ.
೩೦. ಶಿಲಾಹಾರ ರಾಜವಂಶಾಚಾ ಇತಿಹಾಸ ಆಣೀ ಕೋರೀವ ಲೇಖ–ಡಾ.ವ್ಹಿ.ವ್ಹಿ. ಮಿರಾಶಿ (ಪು. ೫೮)
೩೧. ಅದೇ.

ಸೋಮೇಶ್ವರ III

(೧೧೨೭-೧೧೩೯)

ಜಗದೇಕಮಲ್ಲ II (೧೧೩೯-೪೯)

ತೈಲ II (೧೧೪೯-೬೨)

ವಿಜಯಾದಿತ್ಯ (೧೧೪೦-೭೫)

ಭೋಜನು ಬನವಾಸಿ-ಕದಂಬ ಶಾಂತಿವರ್ಮನ ರುಂಡದಿಂದ ಚಾಲುಕ್ಯ ವಿಕ್ರಮಾದಿತ್ಯVIನ ಪಾದವನ್ನು ಪೂಜಿಸಿದನೆಂಬ, ಗಂಡರಾದಿತ್ಯನು ವಿಕ್ರಮಾದಿತ್ಯನಿಂದ 'ನಿಶ್ಶಂಕಮಲ್ಲ' ಬಿರುದನ್ನು ಪಡೆದನೆಂಬ ಹಿನ್ನೆಲೆಯಲ್ಲಿ ಈ ವಂಶಚಿತ್ರವನ್ನು ನೋಡಿದರೆ ಗಂಡರಾದಿತ್ಯನು ವಿಕ್ರಮಾದಿತ್ಯVIನ ಆಳಿಕೆಯ ಉತ್ತರ ಭಾಗ, ಸೋಮೇಶ್ವರ IIIನ ಆಳಿಕೆಯ ಪೂರ್ಣ ಅವಧಿ ಮತ್ತು ಜಗದೇಕಮಲ್ಲIIನ ಆಳಿಕೆಯ ಪ್ರಾರಂಭಕಾಲಗಳಷ್ಟು ವ್ಯಾಪಕವಾಗಿ ಬಾಳಿದನೆಂದು ಸ್ಪಷ್ಟವಾಗುತ್ತದೆ. ಈ ಗಂಡರಾದಿತ್ಯನ ಸಾಮಂತನಾದ ನಿಂಬನೂ (೧೧೨೫ ಕ್ಕೆ ಮೊದಲು ರೂಪನಾರಾಯಣಬಸದಿಯನ್ನು, ೧೧೩೫ರಲ್ಲಿ ಮುದುಗೊಡೆಯಲ್ಲಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿರುವನು) ವಿಕ್ರಮಾದಿತ್ಯVIನ ಆಳ್ವಿಕೆಯ ಉತ್ತರಭಾಗ, ಸೋಮೇಶ್ವರIIIನ ಆಳ್ವಿಕೆಯ ಪೂರ್ಣ ಅವಧಿ ಮತ್ತು ಜಗದೇಕಮಲ್ಲIIನ ಆಳ್ವಿಕೆಯ ಪ್ರಾರಂಭಕಾಲಗಳಷ್ಟು ವ್ಯಾಪಕವಾಗಿ ಬಾಳಿ ಅರಸು ಗಂಡರಾದಿತ್ಯನಿಗಿಂತ ಸ್ವಲ್ಪ ಮೊದಲು ಸಲ್ಲೇಖನವ್ರತಧಾರಿಯಾಗಿ ಬಿಜ್ಜಳನೊಂದಿಗೆ ಕಾದಿ ಕ್ರಿ.ಶ. ೧೧೪೦ರ ಎಡಬಲಗಳಲ್ಲಿ ತೀರಿಕೊಂಡಿರಬೇಕು.

ಕೊಲ್ಲಾಪುರದ ಎರಡು ಶಾಸನ ಮತ್ತು "ಏಕತ್ವ ಸಪ್ತತಿ ಕನ್ನಡ ಟೀಕೆ"ಗಳಲ್ಲಿ ಬರುವ ಕೆಳಗಿನ ವರ್ಣನೆ ನಿಂಬನ ಸಿದ್ಧಿ-ಪ್ರಸಿದ್ಧಿಗಳನ್ನು ಹೀಗೆ ಸ್ಪಷ್ಟಪಡಿಸುತ್ತವೆ:

U-U-U ಸಹಾಯನಿದನೇ ಜಗದ್ದರಿದ್ರವಿದ್ರಾವಣಂ ।
ನಿಲೆ ಮಾತಾಡುವನೇ ತೊಡಱ್ಗೆಡೆಗುಡಂ ಚಾರಿತ್ರಸಂಪನ್ನನೇ।
ಕಲಿಕಾಲಕ್ಕೊಱಗಟ್ಟಿದಂ ಸಂಚಿಯೆ ಗಂಗಾಸೂನು ಗಂಭೀರನೇ।
ಗೆಲೆವಂದಂ ಜಳರಾಶಿಯಿಂ ಪಿರಿಯರಾರ್ಸ್ಸಾಮಂತ ನಿಂಬಂಬರಂ॥

ಧರೆಯೆಲ್ಲಂ ಜಿನನಾಥಮಂದಿರಮಯಂ ತದ್ದೇಶವೆಲ್ಲಂ ಜಿನೇ ।
ಶ್ವರರಾಧಿ U-U-U ಮಯಮುದ್ಯತ್ ಗ್ರಾಮಮೆಲ್ಲಂ ಮನೋ ।
ಹರ ಸಜ್ಜನಮಯಂ ಪರಿಗ್ರಹಮದೆಲ್ಲಂ ತತ್ವಸಂಪತ್ವದಾ ।
ರ್ತ್ಥರಸಾವೇಶಮಯಂಗಳಾಗೆ ನೆಗಟ್ದಂ ಶ್ರೀ ನಿಂಬದೇವೋತ್ತಮಂ ॥

ನಂಬುಗೆ ವಿನೇಯ ಜನಮದ ।
ನಂಬುಗೆ ದಾನಂ ಚತುರ್ವಿಧಂ ಯತಿಪತಿಗಳ್ ।
ಗಿಂಬಾಗಿರೆ ನೆರಱಿ ನೆಗಟ್ದಿಂ ।
ಕಿಂಬಹುನಾ ಸಕಳಗುಣಕದಂಬಂ ನಿಂಬಂ ॥

ವರವೇಶ್ಯಾವಾಟದಿಂದಿರ್ಕೆಲದೊಳೆಸೆವ ವಾರಾಂಗನಾ ಗೇಹದಿಂ ವಿ।
ಸ್ವರಮಾನಸ್ತಂಭದಿಂ ಮಾಡದಿನೆಸೆವ ವಿತಾನಪ್ರತಾನೊಲ್ಲಸನ್ಮಂ ।
ದಿರಂ ಚೆಂಬೋನ್ನೊಱೊಡಂಬಡೆದ ಪಡಿಗಟೆಂದಿಂದ್ರನಿಂದಾದಿತೀರ್ತ್ಥೇ ।
ಶ್ವರಚೈತ್ಯಾಗಾರಮಂ ಮೂಡಿಸಿದನಸದಳಂ ರಂಜಿಸಲ್ ನಿಂಬದೇವಂ॥

ಸದಮಳಕೀರ್ತಿ ನಿಂಬರಸನಾರ್ಜಿತ ಪುಣ್ಯದ ಪುಂಜದಂತಿರಿ ।
ರ್ದುದು ಜಿನಮಂದಿರಂ ಕಳಸವಿಟ್ಟವೊಲಿರ್ದುದು ಹೆರ್ಮ್ಮೆತ್ಯಪೂ ।
ರ್ವದ ಕಟಿಧೌತರಮ್ಯ ಕಳಸಂ ಪಡಿಗಿಂ ಪಡೆಯೆಲ್ಲ ನೋಡಿ ಬೇ ।
ಡಿದರ್ಗ್ಗೆ ಬರಂಗುಡಟ್ ನೆಱೆದು ನಿಂದವು ಪುತ್ತಳಿ ನೃತ್ಯಶಾಲೆಯೊಳ್॥

ನವಮಂದಾರವಿತಾನಂ ।
ಭುವನದೊಳತಿ ಸೇವ್ಯವೆಂದು ಶಕ್ರಂ ಬಂದಾ।
ದಿವಮಂ ಮಱೆದಿರ್ದ್ದಂ ತಾಂ ।
ಡವಮಂ ಮೆಱೆವಂ ವಿತಾತಕುಮುಹಾಗ್ಯಮೆದೊಳ್ ॥

–**ಕೊಲ್ಲಾಪುರದ ಶೇಷಶಾಯೀ ವಿಷ್ಣು ದೇವಾಲಯ ಶಾಸನ.**

" .... ಶ್ರೀ ಮನ್ಮಹಾಮಂಡಳೇಶ್ವರಂ ಗಂಡರಾದಿತ್ಯ ದೇವರು ವಳವಾಡದ ನೆಲೆವೀಡಿನಲ್ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತಮಿರೆ । ತತ್ಪಾದಪದ್ಮೋಪ ಜೀವಿ ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಂ। ವಿಜಯಲಕ್ಷ್ಮೀಕಾಂತಂ। ರಿಪುಸಾಮಂತಸೀಮಂತಿನೀ ಸೀಮಂತಭಂಗಂ। ವೀರವಾರಂಗನಾಪ್ರಿಯಭುಜಂಗಂ। ವೈರಿಸಾಮಂತಮೇಘವಿಘಟನಸಮೀರಣಂ। ನಾಗಲದೇವಿಯ ಗಂಧವಾರಣಂ । ವಿದ್ವಿಷ್ಟ ಸಾಮಂತ ವಿಳಯಕಾಳಂ। ಸಾಮಂತಗಂಡ ಗೋಪಾಳಂ। ದಾಯಾದ ಸಾಮಂತ ಪುಂಡರೀಕ ಷಂಡ ಪ್ರಚಂಡ ಮದವೇತಂಡಂ। ಯಾಚಕಜನ ಮನೋಭಿಲಷಿತ ಚಿಂತಾಮಣಿ । ಸಾಮಂತ ಶಿರೋಮಣಿ। ಜಿನಚರಣಸರಸಿರುಹಮಧುಕರಂ। ಸಮ್ಯಕ್ತ್ವ ರತ್ನಾಕರ ಸಾಹಾರಾಭಯಭೈಷಜ್ಯಶಾಸ್ತ್ರದಾನವಿ ನೋದಂ। ಪದ್ಮಾವತೀದೇವಿಲಬ್ಧವರ ಪ್ರಸಾದಂ। ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಸಾಮಂತಂ । ನಿಂಬ ದೇವರಸರು"

–**ಕೊಲ್ಲಾಪುರ ಪಾರ್ಶ್ವನಾಥ ಬಸದಿಯ ಶಿಲಾಶಾಸನ** (ಕ್ರಿ.ಶ. ೧೧೩೫).

ಪದ್ಮನಂದಿಕೃತ 'ಪಂಚವಿಂಶತಿ' ಗ್ರಂಥದ ೪ನೆಯ ಪ್ರಕರಣವಾದ 'ಏಕತ್ವ ಸಪ್ತತಿ'ಗೆ ನಿಂಬರಾಜ ಸಂಬೋಧನಾರ್ಥ ಕನ್ನಡ ಟೀಕೆಯನ್ನು ಬರೆಯಲಾಗಿದೆ. ಅದರ ಅಂತ್ಯ ಪ್ರಶಸ್ತಿ ಭಾಗ ಹೀಗಿದೆ :

"ಶ್ರೀ ಪದ್ಮನಂದಿವ್ರತಿನಿರ್ಮಿತೇಯಮ್. ಏಕತ್ವ ಸತ್ಪತ್ಯಖಿಲಾರ್ಥಪೂರ್ತಿಃ।

ವೃತ್ತಿಶ್ಚಿರಂ ನಿಂಬನೃಪಪ್ರಬೋಧಲಬ್ಧಾತ್ಮವೃತ್ತಿರ್ಜಯತಾಂ ಜಗತ್ಯಾಮ್॥

ಸ್ವಸ್ತಿ ಶ್ರೀ ಶುಭಚಂದ್ರರಾದ್ಧಾಂತದೇವಾಗ್ರಶಿಷ್ಯೇಣ ಕನಕನಂದಿಪಂಡಿತವಾಗ್ರಸ್ಮಿ ವಿಕಸಿತ ಹೃತ್ಕುಮುದಾನಂದ ಶ್ರೀಮದ್ ಅಮೃತಚಂದ್ರಚಂದ್ರಿಕೋನ್ಮೀಲಿತನೇತ್ರೋತ್ಪಲಾವ ಲೋಕಿತಶೇಷಾಧ್ಯಾತ್ಮ ತತ್ವವೇದಿನಾ ಪದ್ಮನಂದಿಮುನಿನಾ ಶ್ರೀಮಜ್ಜೈನ ಸುಧಾಬ್ಧಿ ವರ್ಧನಕರಾಪೂರ್ಣೇಂದುರಾರಾತಿ ವೀರ ಶ್ರೀಪತಿ ನಿಂಬರಾಜಾವಬೋಧನಾಯ ಕೃತೈ ಕತ್ವಸಪ್ತತೇ ವೃತ್ತಿರಿಯಮ್-ತಜ್ಞಾಃ ಸಂಪ್ರವದಂತಿ ಸಂತತಮಿಹ ಶ್ರೀಪದ್ಮನಂದಿವ್ರತಿ, ಕಾಮಧ್ವಂಸಕ ಇತ್ಯಲಂ ತದನೃತಂ ತೇಷಾಂ ವಚಸ್ಸರ್ವಥಾ। ವಾಣ್ಯಾ ಸಾರ್ಧ ಮಹರ್ನಿಶಂ ರಣತಿ ಸಂಪ್ರೀತ್ಯಾ ತಪಃ ಕಾಮಿಣೀಮ್, ಆಲಿಂಗ್ಯಾಮಲಕೀರ್ತಿವಾರ ವನಿತಾಂ ವಾಂಛನ್ ಯದಾ ತಿಷ್ಠತಿ। ಶ್ರೀ ಮನ್ನಿಂಬನೃಸಿಂಹಂ ಬೃಹಿರಭವತ್ಸಂಗ್ರಾಮ ಭೀಮಾರವೋದೀರ್ಣೋದೀರ್ಣಭಯಾತ್ ಪುರತ್ರಯಹರಃ ಸ್ಥಾಣುರ್ದಿಶಾದಂತಿನಃ। ಶೇಷಾದಂತಿನ ಏವ ಭೀತಮತಯೋ ಜ್ಞಾತಾ ಯದಿ ಸ್ಥಿಯತೇ, ಕಿಂ ವೀರಾರಿ ನೃಪೈಃ ಪುನಸ್ತವರಣೇ। ಸಾಮಂತಚೂಡಾಮಣಿಃ (?) ॥ ನಿಂಬಸ್ತಂಭೇರ ಮಸ್ತದ್ಬಲವದರಿ ನೃಪಸ್ತಂಭ ವೀರಾವಮರ್ದೀ, ಸದ್ವಂಶೋಽನೂನದಾನಾದ್ಧತಭುವನತಲಶಾಮ ಭಾವೈಕ ರಮ್ಯಃ । ಭದ್ರೋಭದ್ರಪ್ರತೀಕಃ ಪ್ರಬಲತರಕರಾಘಾತಭೀತಾಖಿಲಾಶಾಪಾಲಃ ಪ್ರತ್ಯರ್ಥಿಸೇವಾಮಥನ ಪೃಥುಯಶೋವ್ಯಾಪ್ತದಿಕ್ ಚಕ್ರಪಾಲಃ ॥"೩೨

ಕೊಲ್ಲಾಪುರದ ಈ ಎರಡು ಶಾಸನ ಮತ್ತು "ಏಕಸ್ವಸಪ್ತಸಿ ಕನ್ನಡ ಟೀಕೆ" ಗಳು ನಿಂಬನ ಅಧಿಕಾರ, ಶೌರ್ಯ, ಧಾರ್ಮಿಕ ಮನೋಭಾವನೆಗಳನ್ನು ಸ್ಪಷ್ಟಪಡಿಸುತ್ತವೆ. ತೇರದಾಳದ ಒಂದು ಶಾಸನ ಮಾಘಣಂದಿಗಳನ್ನು "ಸಾಮನ್ತ ನಿಂಬದೇವನ ಗುರುಗಳ್" "ಸಾಮಂತನೆನಿಪ್ಪ ನಿಂಬನೆಱಗಲ್ ನೆಗಟ್ದೊಪ್ಪುವ ಮಾಘನಂದಿ ಸೈದ್ಧಾಂತಿಕ ಚಕ್ರವರ್ತಿ" ಎಂದೂ ಇನ್ನೊಂದು ಶಾಸನ "ಕೊಲ್ಲಾಪುರದ ನಿಂಬದೇವ ಸಾಮನ್ತ ಮಾಡಿಸಿದ ರೂಪನಾರಾಯಣ ಬಸದಿ" ಎಂದೂ ಹೇಳವಲ್ಲಿ ಗುರು ಮಾಘಣಂದಿಯ ಮೇಲೆ ಶಿಷ್ಯ ನಿಂಬದೇವನ ಪ್ರಭಾವ ಬೆಸೆದುಕೊಂಡುದನ್ನು ಗುರುತಿಸಬಹುದು. ಇದಲ್ಲದೆ ಈ ಬಸದಿಯ ಆದಿತೀರ್ಥಂಕರನಿಗೆ ತನ್ನ ಅರಸು ಗಂಡರಾದಿತ್ಯನ "ರೂಪನಾರಾಯಣ" ಬಿರುದನ್ನು ಆರೋಪಿಸಿರುವಲ್ಲಿ ಅರಸನ ಮೇಲಿದ್ದ ಸಾಮಂತನ ಪ್ರೀತಿ ಪ್ರಭಾವವನ್ನೂ ಗುರುತಿಸಬಹುದು. ಸಾಲದುದಕ್ಕೆ ತಂದೆ ನಾಕಿರಾಜ, ಈ ರಾಜಮನೆತನದ ಗೃಹಪಟ್ಟ ವರ್ಧನನಾಗಿ, 'ಸಾಮಂತ ಕೇದಾರ'ನಾಗಿ ರಾಜಮಾತೆ 'ನಾಗಲದೇವಿಯ ಗಂಧವಾರಣ'ನಾಗಿ ಪ್ರಸಿದ್ಧಿ ಪಡೆದು ಮಗಳಾದ ಕರ್ಣಾದೇವಿಯನ್ನು ಗಂಡರಾದಿತ್ಯನಿಗೆ ಕೊಟ್ಟರೆ, ಮಗ ನಿಂಬದೇವನೂ ರಾಜಮಾತೆ 'ನಾಗಲದೇವಿಯ ಗಂಧವಾರಣ', 'ಸಾಮಂತ ಕೇದಾರ' ನಾಗಿ ನಿಂತು ಆ ರಾಜಸಂಬಂಧವನ್ನು ಮುಂದುವರಿಸಿರುವನು; ಗಟ್ಟಿಗೊಳಿಸಿರುವನು. ಈ ಅರಸು ಗಂಡರಾದಿತ್ಯನ ಔದಾರ್ಯ, ಗುರು ಮಾಘಣಂದಿ, ಶಿಷ್ಯ

---

೩೨. ಪದ್ಮನಂದಿ-ಪಂಚವಿಂಶತಿ (ಮುನ್ನುಡಿ, ಪುಟ ೧೭ ಅ.ಟಿ.)

ನಿಂಬದೇವರ ಧಾರ್ಮಿಕ ಮತ್ತು ಲೌಕಿಕ ಪ್ರಭಾವ-ಪ್ರಯತ್ನಗಳಿಂದಾಗಿ ಕೊಲ್ಲಾಪುರ ಪ್ರದೇಶ ಜೈನಮತದ ನೆಲೆವೀಡೆನಿಸಿತು.

ತೇರದಾಳ ಶಾಸನದಲ್ಲಿ (ಕ್ರಿ.ಶ. ೧೧೨೩) ಬರುವ

ಅನ್ತರಿಸ್ಸಿರ್ದ್ದ ಜೈನಸಮಯಕ್ಕೊಗೆದಂ ಜಿನನೀಗಳೊರ್ವ್ವನೆಂ।
ಬನ್ತೆ ಜಿನವ್ರತಂಗಳನಶೇಷ ಜನಕ್ಕುಪದೇಶಮಿತ್ತು ಸಾ।
ಮನ್ತನೆನಿಪ್ಪ ನಿಂಬನೆಱಗಲ್ ನೆಗಳ್ದೊಪ್ಪುವ ಮಾಘಣಂದಿ ಸೈ ।
ದ್ಧಾನ್ತಿಕ ಚಕ್ರವರ್ತಿ ಜಿನಧರ್ಮಸುಧಾಬ್ಧಿ ಸುಧಾಂಶುವಾಗನೆ ॥

ಈ ಪದ್ಯದ "ಅನ್ತರಿಸಿರ್ದ್ದ ಜಿನಸಮಯಕ್ಕೆ" ಅಂದರೆ ೧೧-೧೨ನೆಯ ಶತಮಾನಗಳ ಸಂಧಿಕಾಲದಲ್ಲಿ ಖಿಲವಾಗಿದ್ದ ಜೈನಮತಕ್ಕೆ ತೀರ್ಥಂಕರನಂತೆ ನಿಂತು ಜೀವತುಂಬಿದ ಆಚಾರ್ಯವ್ಯಕ್ತಿಯೆಂಬ ಹೇಳಿಕೆ ಮಾಘನಂದಿಯ ಮತಪ್ರಸಾರದ ಕಾರ್ಯಮಹತಿಯನ್ನು ಸೂಚಿಸುತ್ತದೆ. ಇವರನ್ನು "ಶ್ರೀ ರೂಪನಾರಾಯಣ ಬಸದಿಯಾಚಾರ್ಯ" ಎಂದು ಹೇಳಿ ನಿಲ್ಲದೆ "ಮಂಡಳಾಚಾರ್ಯರುಂ" ಎಂದು ಕರೆದುದು ಇವರ ಪ್ರಾಂತಮಟ್ಟದ ಪ್ರಭಾವವನ್ನು ವ್ಯಕ್ತಪಡಿಸಿತ್ತದೆ. ಗುರುವಿಗೆ ತಕ್ಕ ಶಿಷ್ಯ ನಿಂಬದೇವ. "ಜಿನಚರಣಸರ ಸಿರುಹಮಧುಕರಂ ಸಮ್ಯಕ್ತ್ವರತ್ನಾಕರಂ" ಎಂಬ ಬಿರುದುಗಳೂ ರೂಪನಾರಾಯಣ ನಾಮದ ಆದಿನಾಥ ಬಸದಿ, ಪಾರ್ಶ್ವನಾಥ ಬಸದಿಗಳಂಥ ದೇವಾಲಯಗಳೂ (ಖಿದ್ರಾ)ಪುರದ ಆದಿನಾಥ ಬಸದಿಯನ್ನೂ ಈತನೇ ಕಟ್ಟಿಸಲು ಆರಂಭಿಸಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ)[೩೩] ನಿಂಬನ ಧಾರ್ಮಿಕ ಚಲನವಲನಗಳನ್ನು ಸ್ಪಷ್ಟಪಡಿಸುತ್ತವೆ.

ಧರೆಯೆಲ್ಲಂ ಜಿನನಾಥ ಮಂದಿರಮಯಂ ತದ್ದೇಶವೆಲ್ಲಂ ಜಿನೇ ।
ಶ್ವರರಾದಿ .... ಮಯಮುದ್ಯತ್ ಗ್ರಾಮವೆಲ್ಲಂ ಮನೋ ।
ಹರ ಸಜ್ಜನವಯಂ ಪರಿಗ್ರಹಮದೆಲ್ಲಂ ತತ್ವ ಸಂಪತ್ವದಾ।
ರ್ತ್ಥರಸಾವೇಶಮಯಂಗಳಾಗೆ ನೆಗಟ್ದಂ ಶ್ರೀ ನಿಂಬದೇವೋತ್ತಮಂ॥

ಎಂಬ ಶಾಸನಪದ್ಯ ನಿಂಬನು ಜೈನಮತದ ಉದ್ಧಾರ-ಪ್ರಸಾರ ಕಾರ್ಯದಲ್ಲಿ ವಹಿಸಿದ ಪಾತ್ರವನ್ನು ಪ್ರಕಟಿಸುತ್ತದೆ. ಈ ಗುರು-ಶಿಷ್ಯ ಪ್ರಭಾವಪರಂಪರೆಯೇ ಕೊಲ್ಲಾಪುರ, ತೇರದಾಳ, ಶೇಡಬಾಳ, ಬೆಳಗಾಂವ ಪ್ರದೇಶಗಳಲ್ಲಿ ಜೈನಮತ ದಟ್ಟವಾಗಿ ಹಬ್ಬಲು ಕಾರಣವಾಯಿತು. ಈ ಅಪೂರ್ವವ್ಯಕ್ತಿತ್ವ, ಅತ್ಯಪೂರ್ವ ಧರ್ಮಶ್ರದ್ಧೆಗಳಿಂದಾಗಿ ಚಾವುಂಡರಾಯನಂತೆ ಮಾಡಿದ. ಅದಕ್ಕಾಗಿಯೇ ಒಂದನೆಯ ಪಾಂಡ್ಯನು "ಅಭಿನವ ಚಾವುಂಡರಾಯ" ಎಂದು ಬಿರುದು ಧರಿಸಿದಂತೆ ಮಹಾಮಂಡಳೇಶ್ವರ ಭೈರವರಾಯನು "ಅಭಿನವ ನಿಂಬ" ನೆಂಬ ಬಿರುದು ಧರಿಸಿರುವನು.

---

೩೩. ಶಿಲಾಹಾರ ರಾಜವಂಶಾಚಾ ಇತಿಹಾಸ ಆಣೀ ಕೋರೀವ ಲೇಖ-ಪು. ೧೪೧.

ನಿಂಬಸಾಮಂತ ಚರಿತೆ

೧೨ನೆಯ ಶತಮಾನದ ಪೂರ್ವಾರ್ಧದ ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿ ಸಮರ್ಥ ಪಾತ್ರವಹಿಸಿದ ನಿಂಬನನ್ನು ಕುರಿತು ಪಾರ್ಶ್ವಕವಿಯ ಪ್ರಸ್ತುತ 'ನಿಂಬಸಾಮಂತ ಚರಿತೆ'ಯನ್ನು ಬರೆದಿರುವನು. ಈ ಕವಿ-ಕೃತಿಗಳ ವಿಚಾರವಾಗಿ ನಮಗೆ ತಿಳಿದುಬಂದುದು ಇಷ್ಟು.

ಕವಿ: ಹೆಸರೇ ಸೂಚಿಸುವಂತೆ ಕವಿ ಜೈನಮತೀಯ. ಈತನ 'ನಿಂಬಸಾಮಂತ ಚರಿತೆ'ಯ ಹಸ್ತಪ್ರತಿ ದೊರೆತುದು ಕೊಲ್ಲಾಪುರ ಪ್ರದೇಶದ ಉದಗಾವಿಯಲ್ಲಿ. ಇದನ್ನು "ಅಷ್ಟಿಗಿಪುರದ ಶ್ರೀ ಅಜಿತನಾಥನ ದಿವ್ಯಚೈತ್ಯಾಲಯದಲ್ಲಿ ಪ್ರತಿನೋಡಿ" ನಕಲು ಮಾಡಲಾಗಿದ್ದು, ಈ ಗ್ರಾಮ ಕೊಲ್ಲಾಪುರ ಜಿಲ್ಲೆಯ ನೆರೆಯ ಸಾತಾರಾ ಜಿಲ್ಲೆಯಲ್ಲಿದೆ. ಕೃತಿನಾಯಕ ಕೊಲ್ಲಾಪುರದ ನಿಂಬಸಾಮಂತ. ಹೀಗಾಗಿ ಕವಿ ಕೊಲ್ಲಾಪುರ ಪ್ರದೇಶದವನಾಗಿರಬಹುದು. ಕವಿ "ಸೇನಗಣಾಗ್ರಗಣ್ಯ ಶ್ರೀಮಜ್ಜಿನಸೇನದೇವರ ಭೃತ್ಯಂ" ಎಂದು ಹೇಳಿರುವುದರಿಂದ, "ಕರವೀರಕ್ಷೇತ್ರ ಕೊಲ್ಲಾಪುರದ ಶ್ರೀ ಜಿನಸೇನಭಟ್ಟಾರಕ ಸ್ವಾಮಿ ಕರಕೃತ ಸಂಜಾತ ಗುಣಭದ್ರಸ್ವಾಮಿಗಳ ಶಿಷ್ಯರು ಶಾಂತಿಮತಿಕಂತಿಯರು" ಇದನ್ನು ಪ್ರತಿಮಾಡಿರುವುದರಿಂದ ಪಾರ್ಶ್ವನು ಜಿನಸೇನಾಚಾರ್ಯರ ಅದರಲ್ಲಿಯೂ ಕೊಲ್ಲಾಪುರದ ಜಿನಸೇನಾಚಾರ್ಯರ ಶಿಷ್ಯನಾಗಿದ್ದನೆಂದು ಹೇಳಬಹುದು. ಈ ಪೀಠದ ಪರಂಪರೆಯಲ್ಲಿ ಜಿನಸೇನ ಹೆಸರಿನ ಅನೇಕ ಗುರುಗಳು ಆಗಿಹೋಗಿದುದರಿಂದ ಪಾರ್ಶ್ವನ ಗುರು ಜಿನಸೇನನು ಯಾರೆಂಬುದು ಸ್ಪಷ್ಟವಾಗುವುದಿಲ್ಲ.

ಈ ಹಸ್ತಪ್ರತಿಯ ನಕಲು ಕಾರ್ಯ "ಶ್ರಾವಣಮಾಸ ಕೃಷ್ಣ ಪಕ್ಷ ಪಾಡ್ಯ ಬುಧವಾರ ದಿನ ಮುಗಿಯಿತು. ಶಕ ೧೬೫೮" ಎಂದು ಹೇಳಿರುವುದರಿಂದ ಕವಿ ಶಕ ೧೬೫೮ ಅಂದರೆ ಕ್ರಿ.ಶ. ೧೭೩೬ರ ಪೂರ್ವದವನೆಂದು ಸ್ಪಷ್ಟವಾಗುತ್ತದೆ. ಕೊಲ್ಲಾಪುರದಲ್ಲಿ ಪ್ರಾಚೀನವಾದುದೆಂದರೆ ಲಕ್ಷ್ಮೀಸೇನಮಠ. ಸುಮಾರು ೧೬ನೆಯ ಶತಮಾನದಲ್ಲಿ ಈ ಲಕ್ಷ್ಮೀಸೇನರ ಶಿಷ್ಯರಾದ ಜಿನಸೇನನೆಂಬವರು ಈಗಿನ ಜಿನಸೇನಮಠವನ್ನು ಸ್ಥಾಪಿಸಿದರೆಂದು ವದಂತಿಯಿದೆ. ಹಾಗಿದ್ದರೆ ನಿಂಬಸಾಮಂತ ಚರಿತೆಯು ೧೬ನೆಯ ಶತಮಾನದ ತರುವಾಯ, ಪ್ರತಿಮಾಡಿದ ಕಾಲವಾದ ೧೮ನೆಯ ಶತಮಾನಕ್ಕೆ ಮೊದಲು ಅಂದರೆ ೧೭ನೆಯ ಶತಮಾನದಲ್ಲಿ ಹುಟ್ಟಿರಬಹುದು.

> **ಕೋವಿದನು ಸತ್ಕಳೆಯೊಳನುಪಮ ।**
> **ಭಾವಕನು ಸಚ್ಚರಿತಯುಕ್ತನು।**
> ನಾ ಮಹೋನ್ನತ [ಪುಣ್ಯದಯ] ಧರ್ಮೋಪದೇಶಕನು॥
> ಸೇವಕನು ಗುರುಚರ[ಣಕರು]ಣಿತ ।
> ಭಾವ ಸತ್ಕವಿ ಪಾ[ರ್ಶ್ವ] ವಿರಚಿತ ।
> ವೀ ವಸುಧೆಗಚ್ಚರಿಯಮೆನೆ ಸಾವಂತ ಚರಿತೆಯನು॥

ಎಂದು ಹೇಳಿಕೊಂಡಿರುವುದು ಕವಿಯ ಜಿನಮತಾಸಕ್ತಿಯನ್ನು ವ್ಯಕ್ತಿಪಡಿಸುತ್ತದೆ.

ಕೃತಿ : 'ನಿಂಬಸಾಮಂತ ಚರಿತೆ' ೫೦೬ ಭಾಮಿನಿಷಟ್ಪದಿಗಳುಳ್ಳ ೫ ಸಂಧಿಯ ಕೃತಿ. ಏಕಕಾಲಕ್ಕೆ ಸಾಹಿತ್ಯ, ಧರ್ಮ ಮತ್ತು ಇತಿಹಾಸಗಳನ್ನು ಪ್ರಕಟಿಸುವುದು ಇಂಥ ಕೃತಿಗಳ

ಉದ್ದೇಶವಾಗಿರುತ್ತದೆ. ಆದರೆ ಈ ಕೃತಿಮಾತ್ರ ಸಾಹಿತ್ಯಿಕ ಮತ್ತು ಧಾರ್ಮಿಕ ಅಂಶಗಳಿಗಿಂತ ಹೆಚ್ಚಾಗಿ ಓದುಗರ ಗಮನ ಸೆಳೆಯುವುದು, ಐತಿಹಾಸಿಕ ಅಂಶಗಳ ಮೂಲಕ. ಆದರೆ ಇಲ್ಲಿ ಇತಿಹಾಸಕ್ಕೂ ಸಂಪೂರ್ಣನ್ಯಾಯ ಒದಗದುದು ವ್ಯಸನದ ಸಂಗತಿ. ನಿಂಬಸಾಮಂತನ ತಂದೆ, ತಾಯಿ ಗ್ರಾಮಗಳ; ಆತ ಕೈಕೊಂಡ ಇತರ ರಾಜಕೀಯ, ಅದಕ್ಕಿಂತ ಧಾರ್ಮಿಕ ಕ್ರಿಯಾಕಲಾಪಗಳ; ಜನನ ಮರಣ ಮಿತಿ, ಯುದ್ಧ ವಿಧಾನಗ್ಗಳ ವಿವರಗಳನ್ನು ಸ್ಪಷ್ಟಪಡಿಸದೇ ಹೋದುದಕ್ಕೆ ಪ್ರಾಚೀನ ಕನ್ನಡಿಗರಿಗಿದ್ದ ಐತಿಹಾಸಿಕ ಅವಜ್ಞೆಯೇ ಕಾರಣವೆನ್ನಬೇಕು. ಆದರೂ ನಿಂಬಸಾಮಂತ ಮಾಘಣಂದಿಗಳ ಶಿಷ್ಯನೆಂದೂ ಜೈನಮತೀಯರ ಗಾಢ ಪ್ರೀತಿ-ಭಕ್ತಿಗೆ ಪಾತ್ರನಾದವನೆಂದೂ ತಿಳಿಸುತ್ತಿದ್ದು, ಇದಕ್ಕಿಂತ ಆತನ ಯುದ್ಧ ಘಟನೆಯೇ ಈ ಕೃತಿಗೆ ಮಹತ್ವ ಒದಗಿದೆಯೆಂದು ಹೇಳಬೇಕು. ಇಲ್ಲಿ ಎರಡು ಅಂಶಗಳು ಮುಖ್ಯವಾಗಿವೆ. ಒಂದು: ಬಿಜ್ಜಳನೊಡನೆ ಕಾದಿ ಸಾಮಂತ ತೀರಿಕೊಂಡನೆಂಬುದು[೩೪] ಎರಡು: ಸಲ್ಲೇಖನ ವ್ರತ ಹಿಡಿದು ರಣಾಂಗಣವನ್ನು ಪ್ರವೇಶಮಾಡಿದನೆಂಬುದು.

ಗಂಡರಾದಿತ್ಯನ ಪರವಾಗಿ ನಿಂತು ನಿಂಬದೇವನು ಬಿಜ್ಜಳನೊಂದಿಗೆ ಕೊಲ್ಲಾಪುರದ ನೆರೆಯ ಪಂಚಗಂಗಾ ನದೀ ತೀರದಲ್ಲಿ ಕಾದಿ ಮಡಿದನೆಂದು ಈ ಕೃತಿ ಹೇಳುತ್ತದೆ. ಬಹುಶಃ ಈಗ ಬಿಜ್ಜಳ ಇನ್ನೂ ಚಕ್ರವರ್ತಿಯಾಗಿರದೆ ಮಾಂಡಲಿಕನಾಗಿದ್ದು ಚಾಲುಕ್ಯ ಚಕ್ರವರ್ತಿಗಳ ಪರವಾಗಿ ಏರುಬಂದಿರಹುದೆಂದು ಹಿಂದೆ ಚರ್ಚಿಸಲಾಗಿದೆ.

ಜೈನಧರ್ಮದಲ್ಲಿ ಕರ್ಮಕ್ಷಯದ ತೀವ್ರತೆಗೋಸುಗ ದ್ವಾದಶ ತಪಸ್ಸು ಅವಶ್ಯ. ಇವುಗಳಲ್ಲಿ ಬಾಹ್ಯತಪಸ್ಸುಗಳ ಒಂದು ಅಂಗ, ಉಪವಾಸವಿಧಿ, ಮರಣ ಸನ್ನಿಹಿತವಾದ ಸಂದರ್ಭದಲ್ಲಿ ಹಿಡಿದ ಈ ಉಪವಾಸ ವಿಧಿಯೇ ಸಲ್ಲೇಖನವ್ರತವೆನಿಸುತ್ತದೆ. ಈ ವ್ರತದಿಂದ ಮಡಿಯುವ ಅನೇಕ ಬಗೆಯ ಮರಣಗಳಲ್ಲಿ 'ಸಮಾಧಿ ಮರಣ'ವೂ ಒಂದು. ಹೀಗೆ ಮರಣಹೊಂದಿದವರ ನೆನಪಿಗಾಗಿ ನಿಲ್ಲಿಸಿದ ಶಿಲೆಗಳೇ ನಿಷಧಿ ಶಿಲೆಗಳು. ಸಲ್ಲೇಖನ ವ್ರತವನ್ನು ಅನಾರೋಗ್ಯ ಮತ್ತು ಅಪಾಯಪ್ರಸಂಗ ಕಾರಣವಾಗಿ ಇನ್ನು ತಾನು ಉಳಿಯುವುದು ಸಾಧ್ಯವಿಲ್ಲ, ಮರಣ ಅನಿವಾರ್ಯವೆಂದು ಖಚಿತವಾದರೆ ಮಾತ್ರ ಹಿಡಿಯಬೇಕು. ಈಗ ನಿಂಬಸಾಮಂತ ಯುದ್ಧವೀರನಿಗೆ ತಕ್ಕ ರೀತಿಯಲ್ಲಿ ಹೋರಾಟವನ್ನು ಕೈಗೆತ್ತಿಕೊಂಡಿದ್ದಾನೆ. ಜೀವದ ಮೇಲೆ ಆಸೆಯಿಡದಿದ್ದರೆ ಮಾತ್ರ ರಣದಲ್ಲಿ ಹೋರಾಟ ಅರ್ಥಪಡೆಯುತ್ತದೆ. ಹೀಗಾಗಿ ಹಿಂದುಗಳು 'ಪ್ರಾಣಪರಿಚ್ಛೇದ ಪ್ರತಿಜ್ಞೆ'ಯನ್ನು ಕೈಕೊಂಡರೆ ಇದಕ್ಕೆ ಪ್ರತಿಯಾಗಿ ಜೈನನಾದ ನಿಂಬದೇವ ಮೌನವ್ರತದೊಡನೆ "ಸಲ್ಲೇಖನವ್ರತ"ವನ್ನು ಸ್ವೀಕರಿಸಿ ರಣರಂಗವನ್ನು ಪ್ರವೇಶಿಸುತ್ತಾನೆ. ಇದು ರಣೋದ್ಯೋಗದಲ್ಲಿ ಸಲ್ಲೇಖನವ್ರತ ಹಿಡಿದ ಏಕೈಕ ಉದಾಹರಣೆಯಾಗಿದ್ದು, ಹಿಂದೂ ವೀರಮರಣಕ್ಕೆ ಜೈನ ಸಮಾಧಿಮರಣವನ್ನು ಹೊಂದಿಸಿಕೊಂಡ ರೀತಿಯೂ ಇಲ್ಲಿ ಗಮನಾರ್ಹವಾಗಿದೆ.

ರಣರಂಗದಲ್ಲಿ ಹಯಾರೂಢನಾಗಿ ಮೌನತಾಳಿ ವೈರಿ ಸಂಹಾರ ಕಾರ್ಯದಲ್ಲಿ ತೊಡಗಿದ ನಿಂಬದೇವ, ಕೊನೆಯ ದಿನ ವೈರಿಗಳ ಮೇಲೆ ಮುನ್ನುಗ್ಗಲು ಆಯಾಸ ವ್ಯಕ್ತಪಡಿಸಿದ ತನ್ನ

---

೩೪. ಬಿಜ್ಜಳನು ಕೊಲ್ಲಾಪುರದ ಸೂರ್ಯದಂಡರಾಜನ ಮೇಲೆ ಏರಿಹೋಗಿ ಅವನನ್ನು ಸೋಲಿಸಿದ ನೆಂಬ ವಿಷಯ ಬಿಜ್ಜಳರಾಯ ಚರಿತೆ (ಧರಣಿಪಂಡಿತ)ಯಲ್ಲಿ (ಸಂಧಿ ೧೧-೧೨) ಬರುತ್ತದೆ. ಆದರೆ ಅಲ್ಲಿ ನಿಂಬಸಾಮಂತನ ಪ್ರಸ್ತಾಪವಿಲ್ಲ.

ಕುದುರೆಯ ಕಣ್ಣುಗಳನ್ನು ಉತ್ತರೀಯದಿಂದ ಕಟ್ಟಿ ವೈರಿಸೈನ್ಯ ಸಾಗರದ ಮೇಲೆ ಹರಿಬಿಡುತ್ತಾನೆ. ಮೈದಣಿ-ಮನದಣಿ ವೈರಿಗಳನ್ನು ಕತ್ತರಿಸುತ್ತ ಸೈನ್ಯವನ್ನು ಭೇದಿಸಿ ಹೋಗಿ ಗಜಾರೋಹಿಯಾದ ಬಿಜ್ಜಳನನ್ನು ಎದುರಿಸುತ್ತಾನೆ. ಶಸ್ತ್ರದಿಂದ ತಲೆಯನ್ನು ಸೀಳುವುದರ ಮೂಲಕ ಆನೆಯನ್ನು ನೆಲಕ್ಕುರುಳಿಸಿ, ದಣಿದ ತಾನೂ ಕೈಸೋತು-ಮೈಸೋತು ಕುದುರೆಯ ಮೇಲಿಂದ ನೆಲಕ್ಕುರುಳುತ್ತಾನೆ. ಅತ್ತ ಬಿಜ್ಜಳನ ಪಟ್ಟದಾನೆಯೂ ಅಸುನೀಗಿತು; ಇತ್ತ ನಾಗಲದೇವಿಯ ಗಂಧವಾರಣ ನಿಂಬದೇವನೂ ಅಸುನೀಗಿದ. ಇಂಥ ಮಹಾವೀರರು ಗಂಡರಾದಿತ್ಯನಲ್ಲಿ ಎಷ್ಟು ಜನರಿರುವರೋ ಎಂಬ ಹೆದರಿಕೆಯಿಂದ ಬಿಜ್ಜಳ ಯುದ್ಧಮಾಡದೆ ನಿಂಬನ ಶಕ್ತಿ-ಸಾಹಸಗಳನ್ನು ಹೊಗಳುತ್ತ ಅತ್ತ ಕಲ್ಯಾಣಕ್ಕೆ ಹೊರಟ; ಇತ್ತ ಗಂಡರಾದಿತ್ಯ ಸಾಮಂತನ ಸಾವಿಗೆ ಪರಿಪರಿಯಾಗಿ ಶೋಕಿಸುತ್ತ ಕೊಲ್ಲಾಪುರಕ್ಕೆ ಹೊರಟ-ಎಂಬಲ್ಲಿ ಕಾವ್ಯ ಮುಕ್ತಾಯಗೊಳ್ಳುತ್ತದೆ.

ಕಲ್ಯಾಣಕ್ಕೆ ಬಂದ ಚಂಡಿಪುತ್ರರು ಬಿಜ್ಜಳನ ಎದುರು ಗಂಡರಾದಿತ್ಯನ ಬಿರುದು ಹೊಗಳಿದುದೇ ಈ ಯುದ್ಧಕ್ಕೆ ಕಾರಣವಾಯಿತೆಂದು ಕವಿ ಹೇಳುವುದು ಅಷ್ಟು ಸಮಂಜಸವೆನಿಸುವುದಿಲ್ಲ. ಅಲ್ಲದೇ ನಿಂಬನು ಗಂಡರಾದಿತ್ಯನಿಗೆ ಆಸ್ಥಾನದಲ್ಲಿ ಕೈಮುಗಿಯುವಾಗ ಪರ್ಯಾಯವಾಗಿ ತನ್ನ ಬೆರಳಿನಲ್ಲಿಯ ಉಂಗುರದಲ್ಲಿದ್ದ ಜಿನಮುದ್ರೆಗೆ ನಮಸ್ಕರಿಸುತ್ತಿದ್ದನೆಂಬುದು, ಅರಸನಿಂದ ಒಮ್ಮೆ ಇದರ ಪರೀಕ್ಷೆ ನಡೆಯಿತೆಂಬುದು ಸಾಮಾನ್ಯವಾಗಿ ಬೇರೆ ವ್ಯಕ್ತಿಗಳ ವಿಷಯವಾಗಿಯೂ ಕೇಳಿಬರುವ ಸಂಗತಿಯಾಗಿದೆ. ನಿಂಬದೇವನು ಕಟ್ಟಿಗೆಯ ಖಡ್ಗವನ್ನು ಒರೆಯಲ್ಲಿಟ್ಟಿದ್ದ, ಅರಸನ ಪರೀಕ್ಷೆಯಲ್ಲಿ ಅದು ಜ್ವಾಲೆಯನ್ನು ಸೂಸಿತೆಂಬುದು ಕವಿಯ ಪವಾಡಪ್ರಿಯತೆ, ನಿಂಬಭಕ್ತಿಗಳನ್ನು ಸ್ಥಾಪಿಸಿತ್ತದೆ. ಇದಲ್ಲದೆ ಗಂಡರಾದಿತ್ಯನ ಹತ್ತಿರ ದಾನಕ್ಕಾಗಿ ಹಿಂಡುಗಟ್ಟಿಕೊಂಡು ಬಂದ ಬ್ರಾಹ್ಮಣರು ತಮ್ಮ ತಮ್ಮಲ್ಲಿ ಹೊಡೆದಾಡಿದ ಪ್ರಸಂಗ ಬ್ರಾಹ್ಮಣರನ್ನು ಅಪಹಾಸ್ಯ ಮಾಡಲು ಸೃಷ್ಟಿಸಿ ಕೊಂಡುದಾಗಿದೆ.

ನಿಂಬ, ಸಲ್ಲೇಖನ ಹಿಡಿದುದಕ್ಕಾಗಿ ಜೈನಮತೀಯರು ಮರುಗಿದ ಸಂದರ್ಭ, ನೀತಿಸಾರದ ಪ್ರಸಂಗ, ಗಂಡರಾದಿತ್ಯನ ದುಃಖಪ್ರಸಂಗಗಳು ಈ ಕಾವ್ಯದ ಆಕರ್ಷಕ ಘಟ್ಟಗಳಾಗಿವೆ. ಇದನ್ನು ಬಿಟ್ಟರೆ ಬಾಹತ್ತರನಿಯೋಗ, ಯುದ್ಧಯಾತ್ರೆ, ಯುದ್ಧ ಪದ್ಧತಿ ಇತ್ಯಾದಿ ಸಂಗತಿಗಳು ತಕ್ಕಮಟ್ಟಿಗೆ ಇಲ್ಲಿ ಚಿತ್ರಣಗೊಂಡಿವೆ.

ಒಟ್ಟಿನಲ್ಲಿ ಇದು ಸಾಹಿತ್ಯದೃಷ್ಟಿಯಿಂದ ತೀರ ಮಧ್ಯಮ ವರ್ಗದ ರಸಕಾವ್ಯವಾಗಿದ್ದಂತೆ ಚರಿತ್ರೆಯ ದೃಷಿಯಿಂದಲೂ ಮಧ್ಯಮವರ್ಗದ ಇತಿಹಾಸಕಾವ್ಯವಾಗಿದೆ. ಕವಿ ಮನಸ್ಸುಮಾಡಿದ್ದರೆ ಚರಿತ್ರೆಯನ್ನು ಒದಗಿಸುವ ಮೂಲಕ ಕನ್ನಡಕ್ಕೆ ಮಿಗಿಲಾದ ಕಾಣಿಕೆಯನ್ನು ಕೊಡುವ ಸಾಧ್ಯತೆಯಿದ್ದಿತು. ಅದು ಇಲ್ಲಿ ಕೈಗೂಡಿಲ್ಲವಾದುದರಿಂದ ಕವಿಯು ನಿಂಬನ ಇತಿಹಾಸಪ್ರಸಿದ್ಧ ವ್ಯಕ್ತಿತ್ವವಿಗ್ರಹವನ್ನು ಅಪೂರ್ಣವಾಗಿ ಕೆತ್ತಿದನೆನ್ನ ಬೇಕಾಗುತ್ತದೆ.

ಪರಿಷ್ಕರಣ

ಪ್ರೊ. ಕೆ.ಜಿ. ಕುಂದಣಗಾರ ಅವರು ಪೂರೈಸಬೇಕೆಂದಿದ್ದ 'ನಿಂಬ ಸಾಮಂತ ಚರಿತೆ'ಯ ಪರಿಷ್ಕರಣಕಾರ್ಯ ನನ್ನಿಂದ ಕೈಗೂಡುತ್ತಲಿರುವುದು ಒಂದು ಯೋಗಾಯೋಗ.

ಕರ್ನಾಟಕ ವಿಶ್ವವಿದ್ಯಾಲಯ ಖರೀದಿಸಿದ ಪ್ರೊ. ಕುಂದಣಗಾರವರ ಗ್ರಂಥಗಳ ಜೊತೆ ಅವರು ಸ್ವಹಸ್ತದಿಂದಲೇ ಪ್ರತಿಲೇಖನ ಮಾಡಿಕೊಂಡಿದ್ದ 'ನಿಂಬಸಾಮಂತನ ಚರಿತ್ರೆ'ಯ ಕಾಗದ

ಹಸ್ತಪ್ರತಿಯೊಂದು ಸೇರಿಕೊಂಡು ಬಂದಿದೆ. ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಭಾಂಡಾರದಲ್ಲಿ ಆಕಸ್ಮಿಕವಾಗಿ ಈ ಹಸ್ತಪ್ರತಿ ನನ್ನ ಕಣ್ಣಿಗೆ ಬಿದ್ದುದು. ಸಿಕ್ಕರೆ ಇಂಥವುಗಳನ್ನು ನಾನು ಬಿಡುವುದು ಸಾಧ್ಯವೇ ಇಲ್ಲ. ಹೀಗಾಗಿ ಉಪಗ್ರಂಥಪಾಲಕರಾದ ಡಾ. ಎಸ್.ಆರ್. ಗುಂಜಾಳ ಅವರಿಂದ ಇದನ್ನು ಪಡೆಯುವಲ್ಲಿ ಯಶಸ್ವಿಯಾದೆ. ಓದುತ್ತ ಹೋದಂತೆ ಇದನ್ನು ಸಂಪಾದಿಸಿ ಪ್ರಕಟಿಸುವ ಮನಸ್ಸಾಯಿತು. ಆದರೆ ಹೇರಳ ಪಾಠದೋಷಗಳ ಪರಿಹಾರಕ್ಕೆ ಇನ್ನೊಂದು ಹಸ್ತಪ್ರತಿ ಅತ್ಯವಶ್ಯವೆನಿಸಿತು. ನನ್ನ ಹತ್ತಿರವಿದ್ದ ಈ ಮೂಲಪ್ರತಿಯ ಮೇಲೆಯೇ ಡಾ. ಬಿ.ವ್ಹಿ.ಶಿರೂರ ಅವರು ಮೈಸೂರು ಹಸ್ತಪ್ರತಿ ಭಾಂಡಾರದಲ್ಲಿರುವ ಪ್ರತಿಯ ಪಾಠಾಂತರಗಳನ್ನು ಗುರುತಿಸಿಕೊಂಡು ಬಂದರು. ಸಾಲದುದಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ "ನಿಂಬದೇವ ಸಾಮಂತ ನೀತಿ" ಹೆಸರಿನ ತಾಳೆಗರಿ ಪ್ರತಿಯ (ನಿಂಬಸಾಮಂತ ಚರಿತೆಯ ನೀತಿಬೋಧೆಯ ಭಾಗವಿದು) ನೆರವನ್ನೂ ಪಡೆಯಲಾಯಿತು. ಹೀಗೆ ಸಾಧ್ಯವಿದ್ದಷ್ಟು ಹಸ್ತಪ್ರತಿಗಳನ್ನು ದೊರಕಿಸಿಕೊಂಡು ಪರಿಷ್ಕರಣಕಾರ್ಯವನ್ನು ಪೂರೈಸಲಾಗಿದ್ದರೂ ಮೂಲದಲ್ಲಿಯೇ ಕವಿಯಿಂದುಂಟಾದ ವಾಕ್ಯರಚನಾವಿಧಾನ ದೋಷ, ಆಮೇಲಿನ ಗ್ರಂಥಪಾತ, ಪಾಠದೋಷ ಇತ್ಯಾದಿ ಕಾರಣಗಳಿಂದಾಗಿ ಬಹಳ ಸಲ ಊಹೆಗಳನ್ನೇ ಮಾಡಬೇಕಾಯಿತು. ಹೀಗಿದ್ದೂ ಅನೇಕ ಸಂದೇಹಗಳು ಉಳಿದುಕೊಂಡಿದ್ದು ಬೇರೊಂದು ಹಸ್ತಪ್ರತಿ ಲಭ್ಯವಾದಲ್ಲಿ ಇವು ದೂರವಾಗಬಹುದು. ನೀತಿಬೋಧೆ ಪ್ರಸಂಗದ ಕೆಲವು ಪದ್ಯಗಳಿಗೆ ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿಯ ಪಾಠಾಂತರಗಳನ್ನು ಬಳಸಲಾಗಿದೆ. ಇವು ಕೆಲವೇ ಪದ್ಯಗಳಾಗಿರುವ ಕಾರಣ ಪಾಠಾಂತರ ಪ್ರಸಂಗದಲ್ಲಿ ಆ ಹಸ್ತಪ್ರತಿಯ ಸೂಚನೆಯನ್ನು ಮಾಡಿಲ್ಲ.

'ಕ' ಪ್ರತಿ: ಇದು ಪ್ರೊ. ಕುಂದಣಗಾರರವರು ಸ್ವಹಸ್ತದಿಂದ ನಕಲು ಮಾಡಿಕೊಂಡಿರುವ ಕಾಗದ ಪ್ರತಿ. ಮೊದಲಿನ ಮೂರು ಪುಟ ಕೆಂಪು ಮಸಿಯಿಂದ, ಮಿಕ್ಕ ಪುಟಗಳನ್ನು ಕಪ್ಪು ಮಸಿಯಿಂದ ಬರೆಯಲಾಗಿದೆ. ಒಂದೇ ಮಗ್ಗುಲಿಗೆ ಬರೆದ ೮೬ ಪುಟಗಳ ಈ ಪ್ರತಿಯ ಆಕಾರ ೧೧``X೯`` ಇಲ್ಲಿ ತೆಳ್ಳನೆಯ ಹಾಳೆಗಳಲ್ಲಿ ಷಟ್ಪದಿಗಳನ್ನು ೪ ಸಾಲುಗಳಲ್ಲಿ ಬರೆಯಲಾಗಿದೆ. ಈ ಪ್ರತಿಗೆ ಮೂಲವಾದ ಹಸ್ತಪ್ರತಿ ಕೊಲ್ಲಾಪುರಜಿಲ್ಲೆಯ ಉದಗಾವ ಗ್ರಾಮದ ಪಂಡಿತ ಅಪ್ಪಾಶಾಸ್ತ್ರಿಗಳಿಗೆ ಸಂಬಂಧಿಸಿದ್ದು. ಅವರ ಮರಣದ ತರುವಾಯ ಅದು ಬಾಹುಬಲಿ ಕ್ಷೇತ್ರದ ಹಸ್ತಪ್ರತಿ ಭಾಂಡಾರ ಸೇರಿದೆಯೆಂದು ಮೊದಲ ಹಾಳೆಯ ಮಾರ್ಜಿನಿನಲ್ಲಿ ಪ್ರೊ. ಕುಂದಣಗಾರರು ಇಂಗ್ಲೀಷ್‌ನಲ್ಲಿ ಸೂಚಿಸಿರುವರು (ಇಲ್ಲಿ ಅವರ ಇಂಗ್ಲಿಷ್ ಸಹಿ ಮತ್ತು ೧-೮-೧೯೬೧ ದಿನಾಂಕಗಳ ನಮೂದು ಇದೆ). 'ನಿಂಬಸಾಮಂತ ಚರಿತ್ರೆ'ವು ಎಂದು ಇದನ್ನು ಕರೆಯಲಾಗಿದೆ.

'ಮ' ಪ್ರತಿ: ಇದು ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದ ಪ್ರತಿ, ಇದು ೧೩``X೮`` ಆಕರದ ಕಾಗದ ಪ್ರತಿ. ಒಟ್ಟು ಪುಟಗಳು ೧೫೩. "ಕೊಲ್ಲಾಪುರದ ಸಾಮಂತರಾಜ ಚರಿತೆ" ಎಂದು ಇದನ್ನು ಕರೆಯಲಾಗಿದೆ.

ಈ ಪ್ರತಿಗಳ ಬಲದಿಂದ ಪ್ರಸ್ತುತ ಕೃತಿಯನ್ನು ಸಂಪಾದಿಸಲಾಗಿದ್ದು, ಹೊಸ ಹಸ್ತಪ್ರತಿಗಳು ಲಭ್ಯವಾದಲ್ಲಿ ಈ ಆವೃತ್ತಿ ಇನ್ನೂ ಉತ್ತಮಗೊಳ್ಳುವ ಅವಕಾಶವಿದೆಯೆಂದು ಸೂಚಿಸಬಯಸುತ್ತೇನೆ.

ಕೃತಜ್ಞತೆ

'ಕ' ಹಸ್ತಪ್ರತಿಯನ್ನು ಕೈಮುಟ್ಟಿ ನಕಲು ಮಾಡಿರುವ ಪ್ರೊ. ಕೆ.ಜಿ. ಕುಂದಣಗಾರ, ನಕಲು ಮಾಡಿಕೊಳ್ಳಲು ಅವರಿಗೆ ಪ್ರೇರಣೆ ನೀಡಿದ್ದ ಡಾ. ಎ.ಎನ್.ಉಪಾಧ್ಯೆ ಅವರಿಗೆ,

ಈ ಕೃತಿಯನ್ನು ಪ್ರಕಟಿಸಲು ಮುಂದೆ ಬಂದ ಸ್ನೇಹಿತರೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆದ ಪ್ರೊ. ಹಂಪ ನಾಗರಾಜಯ್ಯ ಅವರಿಗೆ,

ಕೊಲ್ಲಾಪುರದಲ್ಲಿ ನಾನು ನಿಂಬದೇವನನ್ನು ಕುರಿತು ಕೈಕೊಂಡ ಸಂಶೋಧನೆಯಲ್ಲಿ ಅನೇಕ ರೀತಿಯಿಂದ ಸಹಾಯ ನೀಡಿದ ಶ್ರೀ ವಿಜಯ ಕೊಗನೋಳೆ ಅವರಿಗೆ,

ಈ ಕೃತಿಯ ಪ್ರಕಟನೆಯಲ್ಲಿ, ಹಸ್ತಪ್ರತಿಯನ್ನು ಸಿದ್ಧಪಡಿಸುವಲ್ಲಿ, ಪಾಠಾಂತರ ಗುರುತಿಸುವಲ್ಲಿ, ಅಚ್ಚಿಸುವಲ್ಲಿ ನೆರವಾದ ಡಾ. ಗುರುಲಿಂಗ ಕಾಪಸೆ, ಪ್ರೊ. ಬಿ.ಆರ್. ಹಿರೇಮಠ, ಡಾ. ಬಿ.ವ್ಹಿ. ಶಿರೂರ, ಶ್ರೀ ಎಸ್.ವ್ಹಿ. ಅಯ್ಯನಗೌಡರ ಮತ್ತು ಶ್ರೀ ಅಶೋಕ ಜೋಗೂರ ಅವರಿಗೆ ವಂದನೆಗಳು.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೫-೬-೧೯೮೧

–ಎಂ.ಎಂ. ಕಲಬುರ್ಗಿ

❖❖

*

ಪರಿವಿಡಿ

ಕೊಲ್ಲಾಪುರ
ನಿಂಬಸಾಮಂತ ಚರಿತೆ

ಸಂಧಿ : ಒಂದು

ಭೂನುತನು ಭವ್ಯಾಂಬುಜಾಕರ
ಭಾನುವೆನಿಸಿದ ನಿಂಬನುಸುರಿದ
ನಾ[೧]ನರೇಶನ[೧] ಸಭೆಗೆ ಸುವ್ರತಜಾತ ಕೌತುಕವ ॥ಪಲ್ಲ॥

ಶ್ರೀ ಮದುನ್ನತಮುಕ್ತಿಸತಿಗತಿ
ಪ್ರೇಮಸುರನರಕಿನ್ನರೋರಗ
ಸ್ತೋಮಮಣಿಮಯಮಕುಟತಾಟಿತ ಚರಣನಖಕಿರಣ
ಕಾಮಮದಗಜಮದವಿದಾರಣ
ಕೋಮಲ ಸುಬೋಧೋದ[೨] ಯಾಂಬುಧಿ
ಸ್ವಾಮಿ ಪಾರ್ಶ್ವಜಿನೇಶನೆಮಗೊಲಿದೀಗೆ ಸುಖಪದಮಂ ॥೧॥

ಆರುಹಂ[೩][ತರ][೩] ನಿರುಪಮ[೪][ರ][೪] ಸಿ
ದ್ಧರುಗಳನಘ [ರ] ಕರ್ಮನಿರ್ವಿ
ಘ್ನ [ರ] ಮಹಾಚಾರ್ಯ [ರ] ಉಪಾಧ್ಯಾಯ [ರ] ಮಹಾತ್ಮರ [ರ]
ಪರಮತತ್ತ್ವ [೫]ಜ್ಞಾ[೫] ನಪರಿಣತ
ಚರಿತಯುಕ್ತಳ[ರ]ಳ ಸರ್ವಸಾಧುಗ
[೬][ಳು][೬] ರುಗುಣರ ಚರಣಂಗಳೆಮಗೊಲಿದೀಗೆ ಸುಖಪದಮಂ *॥೨॥

ಅತನುಜಿತಜಿನವದನದಿಂ ನಿ
ರ್ವೃತಿಪಥವ ತೋರಲ್ಕೆ [೭][ತಾ][೭] ಸರ
ಸತಿಯೆನಿಸಿ ಪೊರಮಟ್ಟು ನಿರ್ಮಳರೂಪನಾಂತೀಗ
ಯತಿಪ್ರತತಗುನ್ನ [೮][ತವೆ][೮]ನಿಪ ಸ
ದ್ಗತಿಯನೆಯ್ದಿಸಲಾರ್ಪಳಾ [೯]ಭಾ
ರತಿಯ್ ಪದಕಮಲಂಗಳೆಮಗೊಲಿದೀಗೆ ಸುಖಪದಮಂ ॥೩॥

೧–೧ ಮಹೇಶನ(ಕ)೨+ ಯದ (ಕ,ಮ)೩–೩ ತಾ (ಕ,ಮ) ೪–೪ ರು (ಕ,ಮ) * ಕ,ಮ ಪ್ರತಿಗಳೊದಿಗೆ ಈ ಪದ್ಧಯದ ೨–೩ ನೆಯ ಚರಣದಲ್ಲಿ ರು ಇದ್ದು,[ರ]ಎಂದು ತಿದ್ದಿ ಕೊಂಡಿದ್ದೇವೆ. ೫–೫ ಧ್ಯಾ(ಮ) ೬–೬ ಳ(ಕ,ಮ) ೭–೭ x (ಕ,ಮ) ೮– ತಿಯೆ (ಕ,ಮ) ೯–೯ ವಾಗ್ವನಿಯೆತ(ಕ)

ಮಲವಿಗತರೆಂದೆನಿಸುವಾ ಕೇ
ವಲಿಗಳನುಬದ್ಧಾಂಕ ಸತ್ಕೇ
ವಲಿಗಳನಗಾರಾದಿ ಶ್ರುತಕೇವಲಿಗಳೆನಿಪವರ
ಚರಣಯುಗಳಂಗಳು ನಮಗೆ ನಿ
ಶ್ಚಳವೆನಿಪ ಸುಖಶರಧಿಯೊಳು ಸಂ
ಚಲಿಸ[1] [ಲೊಳ್ಳಾಗಿಪ ಉ][1] ಪಾಯವನೀವುದನವರತ ॥೪॥

ಖಂಡಿತಾನಂಗಾಸ್ತ್ರುರುಗುಣ
ಮಂಡನಾಳಂಕಾರರೀ ಭೂ
ಮಂಡಲಸ್ತುತರನು ಪರಮಭವ್ಯಜನ[2][ರ][2] ಹೃದಯ
ಪುಂಡರೀಕಸಹಸ್ರಕಿರಣರು
ಕುಂಡಕುಂದಾಚಾರ್ಯಮುನಿಗಳ
ತಂಡವೆಮಗೀಗಮಳರತ್ನತ್ರಯವಿಭೂಷಣಮಂ ॥೫॥

ವೃಷಭಸೇನಾಚಾರ್ಯರಗಣಿತ
ರಸಮಗುಣ ಜೀನಸೇನದೇವರು
ಕುಸುಮಶರಜಿತ ವೀರಸೇನಾಚಾರ್ಯರೆಂದೆನಿಪ
ವಸುಧೆನುತ ಶ್ರೀಪೂಜ್ಯಪಾದರು
ಎಸೆವ ಗುಣಸೇ[3][ನಾರ್ಯ][3]ಮುನಿಗಳ
ಋಸಿಗಳ ಪದಾಂಬುರುಹವೆಮಗೊಲಿದೀಗೆ ಸಂಪದವ ॥೬॥

ಜನ್ನನಗ್ಗದ ಹಂಪರಾಜನು
ಹೊನ್ನನಭಿನವಹಂಪ ಗುಣಸಂ
ಪನ್ನ ಕುಮುದೇಂದುಗಳು ಜಯಕೀರ್ತಿ[4]ಗಳು[4] ಗುಣವರ್ಮ
ರನ್ನನನುಪಮ ನಾಗವರ್ಮ ಪ್ರ
ಸನ್ನ ಕವಿಗಳ ಚರಣವೀಗೆಮ
ಗುನ್ನತೋನ್ನತ ಶಬ್ದಪದ್ಧತಿ[5][ಗಳನು ಒ][5]ಲವಿಂದ ॥೭॥

೧–೧ ದೊಳಾಗಿ ಪಟ (ಕ) ದೊಳಗಿಪವು(ಮ) ೨–೨ x (ಕ,ಮ) ೩–೩ ನಾಚಾರ್ಯ (ಕ,ಮ) ೪–೪ x (ಕ) ೫–೫ ಯನೊ(ಕ,ಮ)

ಅರಿವವೇ ತಾರೆಗಳು ತಾರೇ
ಶ್ವರನವೊಲು [೧][ಬೆಳ][೧] ಬೆಳಗುವುದಿಳೋ
ದರದಳಗೆ ಮುನ್ನಾದ ಸತ್ಕವಿಗಳ ಮಹಾಕೃತಿಗೆ
ಕಿರುಮತಿಗಳೆಮ್ಮಂದಿಗರ ಕೃತಿ
ದೊರೆಯೆನಿ[೨][ಸದಾದರೆ][೨]ಯುಮಾನೆ
ನ್ನರಿವ ತೆರದಲಿ ವಿರಚಿಸುವೆನಿದನವರ ಕೃಪೆಯಿಂದ ॥೮॥

ಶಶಿಯುದಯದೊಳು ತಾರಕಾಳಿಗ
ಳೆಸೆವುವಲ್ಲದೆ ದಿನಕರನ ನೀ
ರಸರಶಿಮಿಯೊಳಗೆಸೆವುವೇ ಬಡಕವಿಗಳೆಮ್ಮಂತೆ
ವಸುಧೆಯೊಳು ಸದ್ಭಾವಕವಿಗಳು
ರಸಿಕರೊಪ್ಪವನಿಡುವರಲ್ಲದೆ
ಅಶುಭಕವಿಗಳು ಹಳಿದೊಡೇನೆಂದುಸುರುವುದು ಬುಧರು ॥೯॥

ಕೆಸರೊಳುದಯಿಸಿದಾ ಸರೋಜದೊ
ಳೆಸೆವ ಪರಿಮಳ ಗಾಳಿಯಿಲ್ಲದೆ
ಪಸರಿಸುವುದೇ ತನ್ನ ನಿಜಶಕ್ತಿಯಲಿ ಧರೆಯೊಳಗೆ
ಹೊಸಕೃತಿಗಳಾದಡೆ ಮಹಾಬುಧ
ರೆಸಗದಿರ್ದಡದೇನು ಫಲ ಹೊಂ
[೩][ಬೆಸುಗೆ][೩] ಯಗಿದಾಭರಣವೇನಾಳಂಕರಿಸಲಹುದೇ ॥೧೦॥

ತಿರ್ದುವುದು ಪದಬಂಧದೊಳಗೆಯ
ಬದ್ಧವಿದ್ದಡೆ ಬಲ್ಲವರು ನಿಜ
ಬುದ್ಧಿಯಿಂದವೆ ನೋಡುವುದು [೪][ಹದಿನಾರು][೪] ಲಕ್ಷಣವ
ಹೊದ್ದಿಗೆಯ ಮಾಡುವುದು ಬುಧಜನ
ರಿದ್ದ ಸಭೆಯೊಳಗೋದಿ ಮೆರೆವ ಪ್ರ
ಸಿದ್ಧ ಕವಿ[೫][ಯಾ][೫]ದವರೊಲುಮೆ ನಮಗಾ[೬]ವ[೬]ಕಾಲದೊಳು ॥೧೧॥

೧–೧ x (ಕ,ಮ) ೨–೨ ಸಿದಾಧರೆ(ಕ,ಮ) ೩–೩ ಬಿಸಿಗೆ (ಕ,ಮ) ೪–೪ ಹದಿನಾಲ್ಕಲು(ಕ,ಮ) ೫–೫ ಯ (ಕ,ಮ) ೬–೬ ದ(ಕ)

ಅಕ್ಕರವನೋದುವುದು ಮಿಗೆ [೧]ಬೀ
ಳಕ್ಕರವ[೧]ನಿಕ್ಕುವಿದು ರಸಗಳ
ಮಿಕ್ಕು [೨][ನೂಕುದು][೨] ಚಿತ್ತಗತಿ ಗಮಕಾದಿ ವಿಷಯದಲಿ
ಹೊಕ್ಕ [೩][ಧಾ][೩]ತುವ ಬಿಡದೆ ಶಬ್ದವ
ಸಿಕ್ಕಿಸದೆ [೪][ನೃಪ][೪]ಸಭೆಗಳೊಳಗೋ
ದಿಕ್ಕಿ ಮರೆಯಾದವರೊಲುಮೆ ನಮಗಾವ ಕಾಲದೊಳು ॥೧೨॥

ಅರ್ಥವಿಲ್ಲದ ಶಬ್ದಗಳ[೫][ನು][೫] ನಿ
ರರ್ಥವೆನ್ನ[೬][ದ][೬] ಸಭೆಗಳೊಳಗೆ ಸ
ದರ್ಥಗಳನೊಡರಿಸು[೭][ವುದು][೭]ಚಿತಪ್ರತಿಜ್ಞರಾಲದರಿಗೆಲ
ವ್ಯರ್ಥ[೯]ರಿ[೯]ಂಗೆಡೆಗೊಡದೆ ಕವಿಗಳೂ
ಳರ್ಥವನು ಬೆಸಗೊಳ್ಳದಿರ್ದ ಸ
ದರ್ಥವಾದಿಗಳವರೊಲುಮೆ ನಮಗಾವ ಕಾಲದೊಳು ॥೧೩॥

[೧೦][ಶ್ಲೋಕ][೧೦]ದಿಂದವೆ ನುಡಿದು ಸಭೆಯೊಳ
ನೇಕ ಜನವನು ಮೆಚ್ಚಿಸುವ ಶುಭ
ವಾಕ್ಯದಿಂದೊಡರಿಸುವ ತನ್ನಯ ಮಧುರರವದಿಂದ
ಏಕಗುಣಗಳ ಸತ್ಯವಿಽಜನ
ತಾ ಕಥಾಪರಿಣತರೆನಿಪ ವಾ
ಗ್ಮೀಕಿಯಾದವರೊಲುಮೆ ನಮಗಾ[೧೧][ವಾ][೧೧]ವ ಕಾಲದೊಳು ॥೧೪॥

ಪರಹಿತವನೆಸಗುವರು ಸಮ್ಯಕ್
ದರುಶನವಿಶುದ್ಧರ ಮಹಾಸ
ಚ್ಚರಿತಯುಕ್ತರ ವಿಮಲಸದ್ಧರ್ಮೋಪದೇಶಕರ
ಪರಮರತ್ನತ್ರಯವಿಭೂಷಣ
[೧೨]ರು[೧೨]ರುಗುಣರ ಕಥನವಾನು ಕೇಳುವ
ನರರಿಗಭಿವಾಂಛಿತವನೀವುದದಾವಕಾಲದೊಳು ॥೧೫॥

೧–೧ ಖಳರಕ್ಕುವ(ಕ) ೨–೨ ನೂಕುವುದು(ಕ,ಮ) ೩–೩ ದಾ (ಕ,ಮ) ೪–೪ x(ಕ,ಮ) ೫–೫ x(ಕ,ಮ) ೬–೬ ದೆ(ಕ,ಮ) ೭–೭ x(ಕ,ಮ) ೮–೮ ಧತೆಗೆ (ಕ) ೯–೯ ರೆ(ಕ) ೧೦–೧೦ ಸ್ತೋತ್ರ (ಕ,ಮ) ೧೧–೧೧ x(ಕ,ಮ) ೧೨–೧೨ ದು(ಕ)

ಸ್ವಾಮಿಕಾರ್ಯ[೧][ದ ಎಡರಿನೊಳು][೧] ಮ
ತ್ತಾ ಮಹಾರಣದೊಳಗೆ ಕಾದಲು
ನೇಮದಿಂದಾಹಾರಕಾಯನಿವೃತ್ತಿವ್ರತದಿಂದ
ರಾಮತೆಯ ಸ್ವರ್ಗದೊಳು ಪುಟ್ಟಿಯೆ
ಸ್ತೋಮ ಸುಖಕಧಿಪತಿಗಳಾಗಿ
ರ್ದಾ ಮಹಾಪುರಷರ ನೆನೆವುದುತ್ತಮ ಚರಿತ್ರವದು ॥೧೬॥

ಮುನ್ನ ಸದ್ಗತಿವಡೆದ ಬೊಪ್ಪೆಯ
ದಣ್ಣನಾಯಕನಿಂದ ರೇಚಿಮ
ದಣ್ಣನಾಯಕನಿಂದ ಗಂಗಪದಂಡನಾಯಕನು
ತನ್ನ ಭುಜಪ್ರತಾಪದೊಳು ನಿ
ರ್ಭಿನ್ನವಿಲ್ಲದೆ ಕಾದಿ ಸ್ವರ್ಗದೊ
ಳುನ್ನತ ಸುಭೋಗ[೨][ದ][೨] ಗಜಾಂಕುಶದಂಡನಾಯಕನು ॥೧೭॥

ಸೀರ ಮೊದಲಾಗಿರ್ದ ತೊಂಬ
ತ್ತಾರು ಗಜ ಮಡಿದುದು ಸಮರದೊಳು
ಬೇರೆ ಲೆಕ್ಕವದಿಲ್ಲ ನರತುರಗಾದಿ ಭಟರುಗಳು
ಮೂರು ಲೋಕವು ಪೊಗಳಿದುದು ರಣ
ಸೊರೆಕಾರ[೩][ನ][೩] ಜಿನಸಮರದೊಳು
[೪][ನೇರ ಸುಗತಿ][೪]ವಡೆದ ಗಜಾಂಕುಶದಂಡನಾಯಕ[೫][ನ][೫] ॥೧೮॥

ಸ್ವರ್ಗಸುಖಕೆಳಸುವರು ಮನದುಪ
ಸರ್ಗಕಂಜುವರೆ[೬][ಂತು][೬] ಧರೆಯೊಳು
ಸ್ವರ್ಗಸುಖವನು ಬಯಸುವ [೭][ವ][೭]ರುಪಸರ್ಗಕಂಜುವರೇ
ಸ್ವರ್ಗ ತನ್ನಯ ಮನದೊಳಿಹುದುಪ
ಸರ್ಗವನು ಸೈರಿಸಿದಡಾಗಳೆ
ಸ್ವರ್ಗವಹುದೇನರಿದು ಕಾಯನಿವೃತ್ತಿವ್ರತದಿಂದ ॥೧೯॥

೧–೧ ವೆರಡರಾಳು(ಕ) ವೇರವರ‍್ಯಳಾ (೦) ೨–೨ ದೊಳು (ಕ,ಮ) ೩–೩ ಮ (ಕ,ಮ) ೪–೪ ನೀರಸದ್ಗತಿ(ಕ,ಮ) ೫–೫ ಮ(ಕ,ಮ) ೬–೬ x (ಕ,ಮ) ೭–೭–೭ x (ಕ,ಮ)

ಕಾಯಜನ ತೊರೆದಿರ್ದ ಮುನಿಯ ಉ
ಪಾಯನು ನಂಬಿದೊಡೆ ಮನದಘ
ದಾಯ ಹಿಂಗುವುದಲ್ಲದುಳಿದವಳಿಂದೆ ಹಿಂಗುವುದೇ
ಮಾಯಪಾಶದೊಳಿರ್ದ ಮುನಿಯ ಉ
ಪಾಯವನು ನಂಬಿದೊಡೆ ಸಂಸಾ
ರಾಯತದ ದುಃಖದೊಳು ತಿರುಗುವರಾವ ಕಾಲದೊಳು ॥೨೦॥

ತನುವನುಳಿದಿರ್ದಾತ ಗುರು ತನು
ಧನವನುಳಿದಿರ್ದಾತನತಿಶಯ
[೧][ತನುಧನವ ಮನದಾಸೆ][೧]ಗಳ ಬಿಟ್ಟವನೆ ಪರಮಗುರು
[೧][ತನುಧನವ ಮನದಾಸೆ][೧] ಯೆಂಬಿವ
ನಿನಿತನುಳಿದು ಹರುಷದಿ ಸನ್ಯಾ
ಸನವ ಕೈಕೊಂಡಂಗೆ ಸ್ವರ್ಗವದಾವ ಗಹನವದು ॥೨೧॥

ಸಂಚಿತ ಮಹಾಸುಕೃತ ಪುಣ್ಯ ಪ್ರ
ಪಂಚರಹಿತ ವಿನೇಯಜನಕಭಿ
ವಾಂಛಿತಾರ್ಥವನೀವ ರತ್ನತ್ರಯವಿಭೂಷಣನ
ಪಂಚಬಾಣವಿದಾರನೆನಿಸುವ
ಪಂಚಗುರುಚರಣಾಂಬುರುಹಯುಗ
ಚಂಚರೀಕನ ನಿಂಬನ ಚರಿತ್ರವನು ಬಣ್ಣಿಸುವೆ ॥೨೨॥

ಧರೆಗೆ ಮಧ್ಯಮವಾದ ಕಾಂಚನ
ಗಿರಿಯ ದಕ್ಷಿಣಭಾಗದೊಳಗಾ
ಭರತಕ್ಷೇತ್ರದೊಳೆಸೆವ ಕುಂತಳರಾಜ್ಯವದರೊಳಗೆ
ಪರಿವ ನದಿವನಪರ್ವತ ಮಹಾ
ಸಿರಿಯನೊಳಗೊಂಡಂ[೨][ಥ][೨]ಕೊಲ್ಲಾ
ಪುರದ ಮಹಿಮೆಯನೇನನೆಂಬೆನು ಸುರಪುರೋಪಮದ ॥೨೩॥

೧-೧ ತನುಮನದ ಮನೆಯಾಸೆ(ಕ,ಮ) ೨-೨ ತೆ (ಕ,ಮ)

ಬಳ್ಳಿ ಲತೆ ತರು ಗಂಧಗಿಡಗಳು
ಮಲ್ಲಿಗೆಯೆ ಹೊದರುಗಳು ಜಾಜಿಯೆ
[೧][ಹುಲ್ಲೆನಲು ಪಕ್ಷಿಗಳ ಕೂಜನವೆಲ್ಲ][೧] ಶುಕಪಿಕದ
ಕಲ್ಲೆನಲು ಕಾಂಚನದ ಕತ್ತುರಿ
ಯೆಲ್ಲ ಮೃಗ ಜನ ಬಲ್ಲವರು ಪುರ
ದಲ್ಲಿ ಸತಿಯರು ಪದ್ಮಿನಿಯರೇನೆಂಬೆ ವಿಸ್ತರವ ॥೨೪॥

ನಾಳಿಕೇರದ ಫಲದ ಗೊಂಚಲು
ಗಾಳಿಯಿಂದಲೆ ಹಳ[೨][ಚೆ][೨] ಹೊಂಬಾ
ಳೀಳೆಗಳ ಮೇಲಿಳಿದು ಬಾಳೆಯ ಪಣ್ಗೊನೆಯೊಳಿಳಿದು
ದಾಳಿಮದ ಪಣ್ಗಿಳಿದು ಸಿತರಸ
[೩][ದಾ][೩]ಳಿಗರ್ಬಿನೊಳೆಯ್ದೆ ಪರಿಯಲು
ಶಾಳಿವನಗಳಿಗಲ್ಲಿ ತಿದ್ದುವರಾ ಲತಾಂಗಿಯರು ॥೨೫॥

ನೀರ ತಿದ್ದುವ ಕಾಂತೆಯರ ಮಧು
ರಾರವದೊಳೆಳಸಿ[೪][ರಲು][೪] ಕೋಗಿಲೆ
ತೋರ ಮುಡಿಗಳ ಬಳಿವಿಡಿದು ತುಂಬಿ[೫][ಗಳ][೫] ಝೇಂಕಾರ
ದೋರೆ ವಟಫಲಮೆಂದಧರವನು
ಕೀರಕುಳ ಬಳಸಿರಲು ಪಥಿಕರು
ಕಾರಣವನುಳಿದಲ್ಲಿ ವಿಸ್ಮೃತಿಗೊಂಡು ವೀಕ್ಷಿಪರು ॥೨೬॥

ಕಾಲುವೆಯ ನೀರೊಳಗೆ ಕಂಗಳ
ಢಾಳ ಹೊಳೆಯಲು ಮುಗ್ಧೆಯ[ರ] ದಿಟ
[೬][ಬಾ][೬]ಳೆ ಮೀನೆಂದೆಳಸಿ ನೋಡುವರಾಗಳಂತಲ್ಲಿ
ಸಾಲಪಂತಿಯ ದಶನ ಹೊಳೆಯಲು
ಬಾಲಕಿಯರ ಕೊರಳ ಮುತ್ತಿನ
ಮೇಲುಸರ ಪರಿದೊಕ್ಕವೆಂದದರಲ್ಲಿ ನೋಡುವರು ॥೨೭॥

೧–೧ ಹೊಲ್ಲೆನಲು ಪಕ್ಷಿಯ ರಾಜವನ ಪಕ್ಷಿಗಳಲ್ಲ(ಕ) ಹುಲ್ಲೆನಲು ಪಕ್ಷಿಯ ರಾಜನನ ಪಕ್ಷಿಗಹುಲ್ಲ(ಮ) ೨–೨ ಚಿ(ಕ,ಮ) ೩–೩ ಗಾ(ಕ,ಮ) ೪–೪– ಹರೊ(ಕ,ಮ) ೫–೫ ಯ (ಕ,ಮ) ೬–೬ ಬೆ (ಕ,ಮ)

ಏನ ನೋಡುವಿರೆನುತಲಲ್ಲಿಗೆ
ತಾನು ಪರಿತಂದೊರ್ವ ಪಾಮರಿ
ತಾನಿರದೆ ನೋಡಿದೊಡೆ ಬಲು ಮೊಲೆ ಹೊಳೆದವಾಗಲ್ಲಿ
ಏನು ನೀರೊಳಗಿಟ್ಟ ಕಳಸವಿ
ವೆನುತ[1][ವಳು][1] ಕೈದುಡುಕಿ ಕಾಣದೆ
ತಾನು ಲಜ್ಜಿತೆಯಾ[2][ಗೆ][2] ಕೈಗಳ ಹೊಯ್ದು ನಸುನಗುತ ॥೨೮॥

ಒಡೆದು ಸೂಸುವ ನೀರ ಕಟ್ಟುವ
ಮಡದಿಯರ ಬಲು ಮೊಲೆಯ ಭಾರಕೆ
ನಡು ಬಳುಕಲೊಳದೊಡೆಯೊಳೊಸರಿಸುವ ನಿರಿಯ ಸೆರಗ
ಕಡೆಗೆ ನೋಡುವ ಕಾಮುಕರೆದೆಯ
ನೊಡೆದ ಕಡೆಗಂಗಳ ಸರಳಿನೊಳು
ತೊಡಕಿ ಹಮ್ಮಯಿಸುವರು ತಡವಡಿಸುವರು ಮತ್ತಲ್ಲಿ ॥೨೯॥

ಅಂಗನೆಯರ ಕಟಾಕ್ಷದೆಳೆವೆಳು
ದಿಂಗಳಿನ ಬೆಳಗಿನೊಳು ಪಥಿಕರು
ಮುಂಗಡಿಗೆ [3][ತಡ][3] ತಡಿಸದಡಿಯಿಡುವವರ ಹವಣೇನು
ಇಂಗಡಲ ಸಿರಿಯೊಳಗೆ ಕಂಗಳ
ಮಂಗಳೆಂಬಂತೆಸೆವ ಸತಿಯರ
ತುಂಗ ಹೊಂಗಳಸಗಳ ಸ್ತನಮಂಡಲ ನೋಡುವರು ॥೩೦॥

ಹಾಡಲಮ್ಮದೆ ಕೋಗಿಲೆಗೆ ಮಾ
ತಾಡಲಮ್ಮದೆ ಗಿಳಿಗೆ ನಲವಿಂ
ದಾಡಲಮ್ಮದೆ ನವಿಲಿಗಡಿಯಿಡಲಂಜಿ ಮಂಜುಳಿಕೆ
ನೋಡಲಮ್ಮದೆ ಪಥಿಕರಿಗೆ ಸುಯಿ
ಲಾಡಲಮ್ಮದೆ ತುಂಬಿಗಳಿಗ
ಲ್ಲಾಡಲಮ್ಮದೆ ಪಾಮರಿಯರಲ್ಲಲ್ಲಿ ನಿಂದಿಹರು ॥೩೧॥

೧–೧ x (ಕ,ಮ) ೨–೨ ಗಿ (ಕ,ಮ) ೩–೩ x (ಕ,ಮ)

ಹಂಬಲಿಸಿ ಗಿಳಿವಿಂಡುಗಳು ಪಾ
ಲ್ಗೊಂಬ ಕಳವೆಯ ಕೆಯ್ಗೆ ಎರಗಲು
ಅಂಬುಜದ ತಂತುವಿನ ಕವಣೆಯ ಕೈರವದ ಮುಗುಳ
ಸಂಭ್ರಮದಿನಿಡೆ ತೋರ ಮೊಲೆ ತೋ
[೧][ಳಂ ಬಿಡದೆ ಬಿಗಿ][೧]ದಿರಲು ಮುಗ್ಧೆಯ
ರಂಜು[೨][ತವಕೌಷಧವ][೨] ಕೇಳುವರಾ ಪಥಿಕರಲ್ಲಿ ॥೩೨॥

ಬಲ್ಲೆವೌಷಧವಿದಕೆ ಪು[೩]ರುಷರು
ನಿ[೩]ಲ್ಲದನುದಿನ ಸೋಂಕೆ ದಿನಪ್ರತಿ
ಯಲ್ಲಿ ಕರಗುವವೆನಲು ಪುರುಷರದಾವ ಮರನೆನಲು
ಇಲ್ಲಿ ನಮಗಳವಲ್ಲ ನೀನಿ[೪][ರ
ದ][೪]ಲ್ಲಿ ನಿಮ್ಮಯ ಮಾತೃಪಿತೃಗಳಿ
ಗಲ್ಲಿ ಪೇಳಿದೊಡವರು ತಹರಾ ಪುರುಷತರುಗಳನು ॥೩೩॥

ನೀರ ತಿದ್ದಲು ಬಂದ ಸತಿಯರ
ನಾರು ಕಂಡವರೆಲ್ಲ ಬಯಸುವ
ರೂರೊಳಗೆ ನೀರೆಯರ ಕಂಡರೆ ಬಯಸದವರುಂಟೇ
ಮಾರ[೫][ಶರದುರ][೫]ವಣೆಗೆ ಸತಿಯರ
ತೋರ ಮೊಲೆಯಿಟ್ಟಳಕೆ ಕಂಗಳ
ಕೂರಲಗಿನೊಳು ತೊಡರಿ ಬೀಳದರುಂಟೆ ಧರೆಯೊಳಗೆ ॥೩೪॥

ಮುಗ್ಧೆಯರ ಮಾತಿನೊಳು ಕಾಮುಕ
ರದ್ದಿ ಹೋದರು ಕಾಮ[೬][ಶ][೬]ರದೊಳ
ಗದ್ದದವರಾರುಂಟು ಪ್ರೌಢೆಯರೊಡನೆ ತೊಡರಿದರು
ಮುಗ್ಧೆ [೭][ಮಧ್ಯೆ][೭] ಪ್ರಗಲ್ಭೆಯರ ನೆರೆ
ಹೊದ್ದದಿರ್ದಾ ಮುನಿವಚನವನು
ನಿರ್ಧರಿಸಿ ನಂಬಿದವರಿಗಹುದಪವರ್ಗಸಾಧನವು ॥೩೫॥

೧–೧ ಳಂಬಗೆಡಗದ (ಕ,ಮ) ೨–೨ ವಂತವುಪದವ(ಕ,ಮ) ೩–೩ ಮರನೆ(ಕ) ೪–೪ ದರ(ಕ) ದ್ದ(ಮ) ೫–೫ ಸಂನುರ(ಕ,ಮ) ೬–೬ ಸ(ಕ,ಮ) ೭–೭ ಮಧ್ಯಮೆ(ಕ,ಮ)

ಸಾಲಪಂಕ್ತಿಯೊಳೆಸೆವ ಜಿನ ಜೈ
ತ್ಯಾಲಯಂಗಳ ಶಿಖರದೊಳಗಾ
ಬಾಲದಿನಕರನಂತೆ ಥಳಥಳಿಸುವ ಕನಕಕಳಶ
ಮೇಲೆ ಗಗನವ ಚುಂಬಿಸುವ ಮುಖ
ಶಾಲೆಗಳ ಮುಂದೆಸೆವ ನೋಟದ
೧[ಆಲಿಗಳಿಗಳವಡದ]೧ ಮಾನಸ್ತಂಭದೋಳಿಗಳ ॥೩೬॥

ತೋರಲರುಣೋದಯ೨[ವಾದಾ]೨ಗಳೆ
ಪೂರಯಿಸು೩[ತಿಹ]೩ ಧವಳಶಂಖದ
ಬಾರಿಸುವ ಳಜೇಳ ಗಂಟೆಗಳ ಭೋರೆಂಬ ನಾದಗಳ
ಮೂರುಸಂಜೆಯೊಳುಲಿವ ಕಂಚಿನ
ಭೇರಿ ನಿಸ್ಸಾಳಗಳು ದೇವ
ದ್ವಾರದಲಿ ೫[ಮೊಳ]೫ಮೊಳಗುವ೪[ವು]೬ ಪಂಚಮ೪[ಹ]೭ ಶಬ್ದಗಳು ॥೩೭॥

ಬಳಸಿನಿಂದುದು ದುರ್ಗವದು ಮೂ
ವಳಸಿನಲಿ ಮತ್ತಲ್ಲಿ ಮುಗಿಲ
ಟ್ಟಳೆಯ ಬಲುಕೊತ್ತಳದ ತೆನೆ ಗಗನವನು ಚುಂಬಿಸುವ
ಕೋಳುಗೊಳ್ಳದೆ ಹುಲಿಮುಖದ ಬಾ
ಗಿಲ ನಳನಿಯೋ೮[ಳು೮ದಾರವಟ್ಟದೊ
ಳಳವಡಿಸಿದಿಕ್ಕೆಲನ ಕದವಿಯ ಕದ೯[ದ]೯ ಸಿಡಿಕೆಗಳ ॥೩೮॥

ಸೋಮ೧೦[ಸೂರಿಯ]೧೦ ವೀಧಿಯೊಳು ನಿ
ಸ್ಸೀಮದಿಂ ಧನವಂತರಂಗಡಿ
ಕಾಮಿಸಿದ ವಸ್ತುಗಳನೀವರುದಾರ ಸತ್ಕುಲರು
ನೇಮದಿಂ ಸತ್ಪಾತ್ರರಾಶ್ರಿತ
ರಾ ಮಹಾವಿದ್ವಾಂಸರಿಗೆ ಮನ
ದಾ ಮನೋರಥವೀವ ಸಜ್ಜನ ಜನದ ತಿಂಥಿಣಿಯು ॥೩೯॥

೧–೧ ವಾರೆಯಗಳಿಗಳವಕದ (ಕ) ವಾದಿಯಗಳಿಗಳವಕದ (ಮ) ೨–೨ ಗಳಾ(ಕ,ಮ)೩–೩ ವ(ಕ,ಮ) ೪–೪ x(ಕ) ೫–೫ (ಕ,ಮ) ೬–೬ x(ಕ,ಮ) ೭–೭ ಹಾ(ಕ,ಮ) ೮–೮ (ಕ,ಮ) ೯–೯ x (ಕ,ಮ) ೧೦–೧೦ ಸೂರ್ಯ(ಕ,ಮ)

ಆ ಮುರಾಧಿಪ ಗಂಡರಾದಿ
ತ್ಯಾ ಪರಮ ಸೌಶೀಲ ಸಕಲಕ
ಳಾಪನಿಧಿ ಗುಣನಿಳಯ ಶೌರ‍್ಯನುದಾರನಾತಂಗೆ
ಕೂಪದ ಶಿರಃಪ್ರಧಾನ ಸತ್ಕುಲ
ದೀಪ ಸಾಮಂತನು ಮಹಾಮಹಿ
ಮಾಪುರುಷನೀ ತೆರದಿ ಸುಖದಿಂದಿರಲು ಪಲಕಾಲ ॥೪೦॥

ಪರುಷ ಮುಟ್ಟಿದ ಲೋಹದಂದದಿ
ದರುಶನವ ನೋಡುವ[೧][ರ][೧] ಸಮ್ಯ
ಗ್ದರುಶನಾದಿಗಳಾದವರ ಗುಣವಹುದೆ ಬೇರೊಂದು
ಪರಮತತ್ವ[೨][ಜ್ಞಾನ][೨] ಪರಿಚಿತ
ರುರುಗುಣರಿಗವಗುಣವಿದೆಂದಾ
ಕರದ ಲೋಹಾಯುಧವ ಪರಿಹಸಿದ ನಿವೃತ್ತಿಯಲಿ ॥೪೧॥

ಏನುಗುಣವಿಲ್ಲದೊಡೆ ಸಮ್ಯಕ್
ಜ್ಞಾವುಂಟಾದವರು ಲೋಕದ
ಮಾನವರಿಗೆರಗುವುದುಚಿತ[೩][ವ][೩]ಲ್ಲೆಂದು ಸಾಮಂತ
ತಾ ನೆನೆದು ವಿರಚಿಸಿದನೊಂದನು
ಮಾನದಿಂ ಛತ್ರತ್ರಯವ ನಿ
ಧಾನಿಸಿದ ಮುದ್ರಿಕೆಯನಾಳಂಕರಿಸಿ ಬೆರಳೊಳಗೆ ॥೪೨॥

ಆಯುಧವಿದೆಂಬಂತೆನಲು ಕಾ
ಷ್ಠಾಯುಧವ ವಿರಚಿಸಿದನೊಂದನು
ಪಾಯದಿಂದನವರತ ಕೋಶಾಂತರದೊಳಲವಡಿಸಿ
ಮಾಯವೃತ್ತಿಯೊಳದನು ಪಿಡಿದಿಹ
ರಾಯನೊಲುಮೆ ಸ್ವತಂತ್ರವಿರಲಾ
ಪಾಯವನು ಬಗೆದರಗಿ ಭೇದಿಸಿ [೪][ತಿಳಿ][೪]ದ[೫][ರೋ][೫]ಖಳ[೬][ರು] ॥೪೩॥

೧–೧ ರೆ(ಕ,ಮ) ೨–೨ ಧ್ಯಾನ(ಕ,ಮ) ೩–೩ ತಾನ(ಕ,ಮ) ೪–೪ x (ಕ,ಮ) ೫–೫ ನೋ (ಕ,ಮ) ೬–೬ ನು(ಕ,ಮ)

ಕಾಮಸಮರೂಪಾದವಂಗೆ ವಿ
[೧][ಕಾ][೧]ಮಿಯಾದ ಸದ್ಗುಣಿಗೆ ನಿ
ರ್ನಾಮಿಯದವ ಕೋವಿದಂ[೨][ಗ][೨]ತಿ ಮೂರ್ಖನಾಗಿದವ
ಧೀಮ ತತ್ವಜ್ಞಾನಿಗಾ ಕಡು
ಕಾಮಿ ದಾನಿಗೆ ದೀನನಾದವ
ನೀ ಮಹಿಯೊಳಹಿತವನು ಬಗೆಯದೆ ಹಿತವನೆಸಗುನೇ ॥೪೪॥

ಧರಣಿಪತಿ ತಾನೊಂದು ದಿನದಲಿ
ಪರಿಮಿತಾಸ್ಥಾನದೊಳುಮಿರಲಾ
ದುರುಳ ಖಳ[೩][ರೆ][೩]ಯ್ತುಂದ[೪][ರಾ][೪] ಸಾಮಂತನಿರದಾಗ
ಕರವ ಮುಗಿದರಸಂಗೆ ಪೊಡಮ
ಟ್ಟಿರದೆ ಬಿನ್ನಹವುಂಟು ಜೀಯವ
ಧರಿಸುವುದು ನಿಮ್ಮಡಿಗಳೇ ಕಾಂತದೊಳು ಚಿತ್ತಯಿಸಿ ॥೪೫॥

ಉತ್ತಮ ಕ್ಷತ್ರಿಯ[೫]ನೆನುತ ಸಲೆ
ವಸ್ತುವೆಲ್ಲವನಿತ್ತು ನಿಂಬನ
ಹತ್ತೆಯವ ಮಾಡುವಿರಲಾ ನಿಮ್ಮಡಿಯ ಚಿತ್ತದೊಳು
ಮತ್ತು ಮನದಂತಸ್ಥ ಕುಹಕವ
ನೆತ್ತ ಬಲ್ಲಿರಿ ದೇವರುಗಳೊಡ
ನಿತ್ತಲರುಪುವೆವೆಂದು ಬಂದೆವಿದೇ ನಿಮಿತ್ತದಲಿ ॥೪೬॥

ಅವನಿಪತಿ ಸಾಮಂತನಂತ
ಸ್ಥವನು ನಿಮ್ಮಡಿಗಳಿಗೆ ಬಿನ್ನವಿ
ಸುವೊಡೆ ಹುಸಿದಿಟವೆಂಬರೀಗಳೆ ನೀವೆ ಚಿತ್ತಯಿಸಿ
ಸವಣರಿಕ್ಕಿದ ಕುಹಕದುಪದೇ
ಶವನು ಕೇಳಿದು ತನ್ನ ಬೆರ[೬][ಳ್ಗ][೬]ಳೊ
ಳವಧರಿಸಿಕೊಂಡಿಹನು ಛತ್ರತ್ರಯದ ಮುದ್ರಿಕೆಯ ॥೪೭॥

೧–೧ ರಾ(ಕ,ಮ) ೨–೨ ದ(ಕ,ಮ) ೩–೩ ನೆ(ಕ,ಮ) ೪–೪ ನಾ(ಕ,ಮ) ೫+ ನುತಾ(ಕ,ಮ) ೬–೬ x(ಕ,ಮ)

ದೇವ ನಿಮಗೆರಗುವವೊಲಾತನು
ಭಾವದಿಂದೆರಗುವನು ತನ್ನಯ
ದೇವರಾಂಕಿತವೆನಿಪ ಛತ್ರತ್ರಯದ ಮುದ್ರಿಕೆಗೆ
ದೇವರುಗಳೀ ಹದನನರಿ [೧][ಯಿರಿ][೧]
ನಾವು ಬಿನ್ನಹ ಮಾಡಲಮ್ಮೆ [೨][ವಿ][೨]
ದಾವ ಚೋದ್ಯವಿದೆನುತ ಮತ್ತಿನ್ನೊಂದ ಚಿತ್ತವಿಸು ॥೪೮॥

ಏನನೆಂಬೆವು ನಿಂಬದೇವನ
ಮಾನಗರ್ವದ ಮಹಿಮೆಯನು ಕೃ
ಪಾಣವನು ಪರಿಹರಿಸಿ ಪಿಡಿದಿಹ ತುರಕ್ಕೃಪಾಣವನು
ಏನು ಚೋದ್ಯವಿದೆನುತವನಿಪತಿ
ತಾನು ವಿಸ್ಮಯಬಡೆದನಾಗನಿ
ಧಾವಿಸಲುಬೇಕೆನುತ ಬೇಳ್ಕೊಟ್ಟನು ಖಳಾಧಿಪರ ॥೪೯॥

ಚಂಡಕರನುದಯದೊಳು ಧರಣೀ
ಮಂಡಲಾಧಿಪನೋಲಗದೊಳಿರೆ
ಮಂಡಿತಾಖಿಲ ಶೀಲಗುಣಸಾಮಂತನೆಯ್ತಂದು
ಗಂಡರಾದಿತ್ಯಂಗೆ ಪೊಡೆವಡೆ
ಕಂಡು ಬೆರಳೊಳು ಮುದ್ರಿಕೆಯ ಕೈ
ಕೊಂಡು ಮನದೊಳಗದ ನಿಧಾನಿಸಲೆಂದನವನೀಶ ॥೫೦॥

ತನ್ನ ದಕ್ಷಿಣಭಾಗದೊಳಗಾ
ಸನ್ನದೊಳು ಕುಳ್ಳಿರ್ದ ನಿಂಬನ
ಮನ್ನಿಸುತ ಮಾತಾಡಿಸಿದನತಿ ಮೃದುಮಧುರ ರವದಿ
ನಿನ್ನ ಬೆರಳೊಳಿಗಿಟ್ಟ ಮುದ್ರಿಕೆ
ಚಿನ್ನಗೆಲಸ[೩][ವು ಎನಲು][೩] ಗುಣಸಂ
ಪನ್ನ ಕೊಟ್ಟನು ತನ್ನ ಬೆರಳಿಂದಲೆ ತೆಗೆದು ನೃಪಗೆ ॥೫೧॥

೧-೧ಯೆ (ಕ,ಮ) ೨-೨ ವು(ಕ,ಮ) ೩-೩ ವುವೆನಲೆ(ಕ) ವೆನಲೆ(ಮ)

ನೋಡಿದನು ನಾನಾವಿಧದಿ ಕೊಂ
ಡಾಡಿದನು ನೂತನದ ಕೆಲಸವ
ಮಾಡಿದವನಾರೆನುತ ತನ್ನಯ ಬೆರಳೊಳಳವಡಿಸಿ
ಕೂಡಿ ಕೆಲಬಲದವರೊಡನೆ ಮಾ
ತಾಡಿ ಕಳೆದನು ಪಿರಿದು ಹೊತ್ತನು
ನಾಡೆ ಬೀಳ್ಕೊಟ್ಟನು ನರಾಧಿಪನಂದಿನೋಲಗವ ॥೫೨॥

ಮರುದಿವಸದೊಡ್ಡೋಲಗದೊಳಾ
ಧರಣಿಪತಿ ಕುಳ್ಳಿರ್ದನಾಗಳು
ಪರಿಜನದಿ ಪುರಜನದಿ ವಿದ್ಯಾಜನದಿ ಸಜ್ಜನದಿ
ಗುರುಜನದಿ ಸೌಂದರಜನದಿ ಭೂ
ಸುರಜನದಿ ಪರಿವಾರಜನದಿಂ
ಮೆರೆದುದಾ ಸಭೆ ಸುರಪಸಭೆಗನುಪಮವೆನಿ[೧][ಸು][೧]ತಾಗ ॥೫೩॥

ಎಂದಿನಂದದಿ ನಿಂಬದೇವನು
ಬಂದನೋಲಗದೊಳಗೆ ನರಪತಿ
ಗಂದು ಪೊಡಮಡಲೊಲ್ಲದುಚಿತಾಸನದಿ ಕುಳ್ಳಿರಲು
ಇಂದರಿಯಲಾದುದು ನಮಗೆ ನೆರೆ
ಹಿಂದೆ ಹೇಳಿದ ಮಾತು ದಿಟವೆಂ
ದೊಂದನುವ ನೆನೆದನು ಮನದೊಳಾಯುಧ ಕುತೂಹಳವ ॥೫೪॥

ಎಡಬಲದಿ ಕುಳ್ಳಿರ್ದ ನಾಯಕ
ರೊಡನೆ ಮಾತಾಡುತ್ತ ನಿಮ್ಮಯ
ಪಿಡಿದಡಾಯುಧಮೆಂತುಟೆಂದುಸರಿದನು ಮಹಿಪಾಲ
ಒಡನೆ ತಮ್ಮ ನಿಜಾಸಿಗಳನಾ
ಪೊಡವಿಪತಿಗೀಯಲ್ಕೆ ನೋಡುತ
ಗಡಣದಿಂದ ನಿರೀಕ್ಷಿ[೨][ಸಲು][೨] ಸಾಮಂತ ನಿಂಬನನು ॥೫೫॥

೧-೧ ಸಿ(ಕ,ಮ) ೨-೨ ಸುತೆ(ಕ,ಮ)

ಎನ್ನಹದನಿಂ ಬಂದುದೆಂಬುದ
ಮುನ್ನವೇ ತಾನರಿತು ಮನದೊಳು
ಸನ್ನಹಿತಸಾಗಿರ್ದು ನೆನೆದುಪದೇಶಮಂತ್ರವನು
೧[ನಿ]೧ನ್ನ ಕರೆ೨[ದಾ]೨ ಘನಕೃಪಾಣವಿ
ದೆನ್ನ ಗುಣಕೆ ಸಹಾಯವೆನಲಾ
ಸನ್ನಕಂಪದೆ ಬಂದು ನೆಲಸಿದಳ್ಯಕ್ಷದೇವತೆಯು ॥೫೬॥

ತಿರುಗಿ ನೋ೩[ಡುತವಾಗ]೩ ನಿಂಬನು
ಕರಕೃಪಾಣವ ನೀಡಲೊಡನ
ಭರವಸದಿ ಪಿಡದೊರೆಯನುಚ್ಚಿದನಾ ಮಹೀಪಾಲ
ಖರಕಿರಣ ಮೇಘದೊಳು ಮು೪[ಚ್ಚಿ]೪
ರ್ದುರವಣಿಸಿ ಪೊರಮಡುವ ತೆರದಿಂ
ದು೫[ರ್ವಿ]೫ಗವಸಣಿಗೆಯನು ಕಳೆದಂ೬[ದಾ]೬ದುದದ್ಭುತವು ॥೫೭॥

ನೋಡಲಮ್ಮದೆ ಕಂಗಳಿಗೆ ಮೆರೆ
ಮಾಡಿದರು ಮುಂಜೆರಗ ಸೆರಗನು
ಕೂಡೆ ಸುಡುವ ಮಹನಳನ ದಳ್ಳುರಿಯ ನಾಲಗೆ೭[ಯೊ]೭
ದಾಡೆಯೋ ಕಾಳೋರಗನ ಕ
ರ್ಮೋಡದೊಳು ಥಳಥಳಿಪ ೮[ಮಿಂಚೆನೆ]೮
ಮೂಡಿದುದು ಹಗಲುಳು ೯[ಕೆ]೯ನಲು ಭಯ ಹೊಯ್ದುದಾಸ್ಥಾನ ॥೫೮॥

ಸೂಸಿದವು ಕಂಗಳಿಗೆ ಕಿಡಿಗಳ
ರಾಶಿ ಕೆದರಿದವೆನಲು ಸಭೆಯೊಳು
ಭಾಸುರದ ಭಯ ಹೊಯ್ದುದಾಗಳೆ ರಾಯನಾಸ್ಥಾನ
ಈಶನುರಿಗಣ್ಣಿದು ಸುರನ ಕರ
ಹಾಸ ನಗಪಕ್ಷವನು ಭೇದಿಸಿ
ದಾಸಿಯಿದು ಸಂದೇಹ ಬೇಡೆಂದೆನುತ ಮಹಿಪಾಲ ॥೫೯॥

೧–೧ ತ (ಕ,ಮ) ೨–೨ ದಿಂ(ಕ,ಮ) ೩–೩ ಡಿದೊಡಾ(ಕ,ಮ) ೪–೪ ಸುಕಿ(ಕ,ಮ) ೫–೫ ರ್ಯ(ಕ,ಮ) ೬–೬ ತಾ(ಕ,ಮ) ೭–೭ ಯ(ಕ,ಮ) ೮–೮ ಮಿಂಚಿನ(ಕ,ಮ) ೯–೯ ಕಿ(ಕ,ಮ)

ಭರವಸದಿ ಪಿಡಿದೊರೆಯನುಚ್ಚುವ
ನರಪತಿ ಮಹಾಭೀತಿಯಿಂ ಮುಖ
ಧಿರುವಿ ಕೋಶಾಂತರದೊಳಳವಡಿಸಿದನು ಖಡ್ಗವನು
ತ[೧][ರು][೧] ಕೃಪಾಣವಿದೆಂಬುವರ ನಿಂ
ದೊರೆಸಿ ಬಿಸುಡುವೆನೆನುತ [೨][ತಾ][೨] ಸಂ
ಹರಿಸಲನುಗೆಯ್ದರಸಿನೊಳು ಸಾಮಂತ ಬಿನ್ನವಿಸಿ ॥೬೦॥

ಧರಣಿಪತಿ ಚಿತ್ತವಿಸು ಲೋಕದ
ದುರುಳರಾಡುವ ಮಾತಿಗರ್ಥವ
ನೆರಪಿ ನೋಡುವುದೇ ಮಹಾ ಸದ್ಗುಣಿಗಳಾದವರು
ಕರಿಘಟೆಗಳ ವಿದಾರಿಸುವೊಡ
ಬ್ಬರಿಪುದಲ್ಲದೆ ಸಿಂಹ ಮಿಕ್ಕಿನ
ನರಿಗಳೂಳಿದೊಡೇನು ಮಚ್ಚರಿಸುವುದೆ ಧರೆಯೊಳಗೆ ॥೬೧॥

ತನಗೆ ಕುಹಕವ ಬರೆದವರಿ [೩][ಗಿಂ][೩]
ದನುನಯದೊಳೆಸಗಿದ ಹಿತವ ಸ
ಜ್ಜನ ಮಹಾಮಹಿಮೋನ್ನತೋನ್ನತ ಸಚ್ಚರಿತ್ರನು
ಜನ[೪][ಪ][೪] ಸಹಿತಾಸ್ಥಾನದೊಳಗಿ
ರ್ದನಿತು ಜನ ಸಂತೋಷದಿಂದವೆ
ತನತನಗೆ ಕೊಂಡಾಡಿದುದು ಸಾಮಂತನಿಂಬನನು ॥೬೨॥

ಮುನ್ನ ಮಾಡಿದ ಸುಕೃತ ದುಷ್ಕೃತ
ವಿನ್ನು ಬಂದೆಯ್ದಿದೊಡೆ ಲೋಕದೊ
ಳನ್ಯದಿಂದಾಯ್ತೆಂಬುದದು ಸಜ್ಜನರಿಗನುಚಿತವು
ನಿನ್ನ ಕಾರುಣ್ಯಾವಲೋಕನ
[೫][ವೆ][೫]ನ್ನ ಮೇಲುಂಟಾಗಿರಲು ಮ
ತ್ತುನ್ನತೋನ್ನತ ಮಹಿಮೆ ನನಗೆಂದುಸುರಿದನು ನೃಪಗೆ ॥೬೩॥

೧–೧ರ (ಕ,ಮ) ೨–೨ ಲಾ(ಕ,ಮ) ೩–೩ ಗೆ(ಕ,ಮ) ೪–೪ x (ಕ,ಮ) ೫–೫ ನೆ (ಕ,ಮ)

ಅವನಾನೊರ್ವನು ನರನು ನಿಜ
ಭಾವದೊಳಗೆರಡಿಲ್ಲದಿರ್ದಡೆ
ದೇವನೆಂದು ಸುರಾಸುರರು ಬೆಸಕೆಯ್ವರನವರತ
ಆವ ಗಹನವಿದೇನು ಖಡ್ಗದೊ
ಳಾವಗೆಂ ಭೃಗುದೇವತೆಯು ತಾ
ನೀ ವಿಧದಿ ನೆಲಸಿಹಳು ಕೇಳೆಂದುಸುರಿದನು ನೃಪಗೆ ॥೬೪॥

ಎನಲು ತಪ್ಪದು ನಿಂಬದೇವನ
ಘನಮಹಿಮೆಗಿನ್ನಾರು ಸರಿಯೆಂ
[೧][ದನು][೧] ನೃಪತಿ ನಸುನಗುತ ಖಳರ ಮುಖಾವಲೋಕನದಿಂ
ಆನಿಪನಿತ್ತನು ಮುದ್ರಿಕೆಯನಾ
ಕನಕಕೋಶದೊಳಿಕಿಯಾಯುಧ
ವನು ತನಗೆ ನೀಡಿದನು ಪಿರಿದುತ್ಸವದಿ ನಿಂಬಂಗೆ ॥೬೫॥

ಹೊನ್ನಬಟ್ಟಲೊಳಾಗ ವೀಳೆಯ
ವನ್ನು ತೀವಿದ ನೃಪತಿ ಹಸ್ತದಿ
ತನ್ನ ಹತ್ತಿರ ಕರೆದು ಕುಳ್ಳಿರಿಸಿದನು ನಿಂಬನನು
ಮುನ್ನ ನಾನಿದನರಿಯೇ ಮನದೊಳು
ಗನ್ನವನು ತಾಲದಿರುನುತ ತಾ
ಮನ್ನಿಸುತಲಿತ್ತನು ಕನಕಭಾಜನಸಹಿತಲಂದು ॥೬೬॥

ಖಿನ್ನರಾದರು ಸಕಲಖಳಜನ
ರಿನ್ನು ನಾವೆ[೨][ೀವೆ][೨]ನುತ ನೃಪತಿಯ
ಮನ್ನಣೆಯ ಕಂಡ[೩][ರು][೩] ಕನಕಭಾಜನವನಿತ್ತುದನು
ಮುನ್ನ ಬಿನ್ನಹದಿಂದ ಕೆಟ್ಟುದ
ನಿನ್ನ ನುಡಿಯಲ[೪][ದೇ][೪]ಕೆ ಮತ್ತೊಂ
ದುನ್ನತಿಕೆಯೊಳೆ ನೋಳ್ಪೆವೆಂದರು ಕಾಲದಿಂ ಮೇಲೆ ॥೬೭॥

೧–೧ ದೆನೆ (ಕ.ಮ) ೨–೨ x (ಕ.ಮ) ೩–೩ ರೆ(ಕ.ಮ) ೪–೪ ದ(ಕ.ಮ)

ತುಂಬಿದೋಲಗದೊಳಗೆ ಸುಭಟರು
ನಿಂಬನೊಳು ಸಿರಯಿಲ್ಲೆನುತ ಚೀ
ನಾಂಬರಮನುಡುತಲಿತ್ತು ಬೀಳ್ಕೊಟ್ಟನು ನಿಜಾಲಯಕೆ
ಸಂಭ್ರಮದಿ ಪೊರಮಡ[೧][ಲು][೧] ಬೆಸದವ
ರಿಂಬಿನಲಿ ದಂಡಿಗೆಯನಾ[೨][ಂ][೨]ತರು
ಕೊಂಬ ತಿರಿದಿಹರೊಡನೆ ಬಿರುದಾವಳಿಯನುಗ್ಘಡಿಸಿ ॥೬೮॥

ದೇವ ಜಿನಮತಕಮಲದಿನಕರ
ದೇವ ಜಿನಮತಕುಮುದಹಿತಕರ
ದೇವ ಜಿನಮತತುಂಗಶರಧಿತರಂಗನೆಂದೆನುತ
ದೇವ ರಿಪುಮದಕುಧರಕುಲಿಶನೆ
ದೇವ ರಿಪುವನದಹನಪಾವಕ
ದೇವ ನಿನ್ನೊಳಗಾರು ಸರಿಯೆಂದೆನಲು ಪಾಠಕರು ॥೬೯॥

ಇಕ್ಕೆಲನ ಪಾಠಕರು ನಿಂಬನ
ಮಿಕ್ಕು ಹೊಗಳುತ ಬಂದರಾಗಳೆ
ಚಕ್ಕನಾಗಳೆ ತನ್ನ ಚಾವಡಿಯೊಳಗೆ ನಿಂದಿರ್ದು
ಠಕ್ಕಿ[೩]ನೀ[೩] ಬಿರು[೪]ದೇ[೪]ಕೆ ಗುರುಗಳ
ತಕ್ಕ ಗು[೫]ಡ್ಡು[೫]ಗಳೆಂಬುದಲ್ಲದೆ
ತಕ್ಕವಿಸಿ ಪಾಠಕರನುಪಚರಿಸಿದನು ಸಾಮಂತ ॥೭೦॥

ದೇವ ನಿಮ್ಮಯ ಪುಣ್ಯಶಕ್ತಿಯ
ದಾವ ಮನುಜರಿಗುಂಟು[೬][ಕ್ಷಿತಿ][೬]ಯೊಳು
ನಾವರಿ [೭][ಯೆವೇ][೭] ಪೊಗಳುವರು ಮುನ್ನಿನ ಮಹಾತ್ಮಕರ
ಭಾವಜಾರಿ ಜಿನೇಶ್ವರನು [೮]ಪರ[೮]
ಭಾವನೆಯು ಪೊರತಿಲ್ಲ ನಮ್ಮನು
ನೀವೆ ದೊಡ್ಡಿತ ಮಾಡುವಿರಿ ನಿಜ [೯][ನೇ][೯] ಹ ಮಾತ್ರದೊಳು ॥೭೧॥

೧–೧ ಲ (ಕ,ಮ) ೨–೨ (ಕ,ಮ) ೩–೩ (ಕ,ಮ) ೪–೪ ದುಗಳೇ (ಕ) ೫–೫ ಡು(ಕ) ೬–೬ ಕೃತಿ (ಕ,ಮ) ೭–೭ ಯದೆ (ಕ,ಮ) ೮–೮ ಪದ(ಮ) ೯–೯– ಗೇ (ಕ,ಮ)

ಎಂ[೧][ದ][೧] ಬುಧವೃಂದಕ್ಕೆ ತರವೇ
ಳೆಂದು ಕರ್ಪೂರ ವೀಳೆಯಂಗಳ
ಮಂದಿರದೊ[೨]ಳೊಲಿದಿತ್ತ[೨]ನವರವರುಚಿತ ವಚನದೊಳು
ನಿಂದು ಕೈಮುಗಿದೆನ್ನ ಕೀರ್ತಿಯು
ಸಂದು ಬಂದುದು ನಿಮ್ಮ ಭಾಗ
ಕ್ಕೆಂದು ಬಿಜಯಂಗೆಯ್ಯವೇಳ್ದನು [೩]ಮಧುರವಚನದಲಿ[೩] ‖೭೨‖

ಇತ್ತ ಪರಿದುದು [೪][ವಿ][೪] ಬುಧಸ್ತೋಮ ಸ
ಮಸ್ತಜನರನು ಕಳುಹಿದನು ಮ
ತ್ತುತ್ತಮರೊಳೆಕಾಂತವನು ಮಾಡಿ[೫][ದನು][೫] ಸ್ಥಿತಿಗತಿಯ
ಎತ್ತ ಬಲ್ಲನು ನೃಪತಿ ನಮ್ಮ ಚ
ದಿತ್ರವನು ಪೇಳ್ದ [೬][ವ][೬]ರ ಮಾತಿನ
ವೃತ್ತತೆಯೊಳೀ ಹದನ ನೆಗಳಿದ ಗಂಡರಾದಿತ್ಯ ‖೭೩‖

ಆತ ನಮ್ಮಯ ದಾತ ಸಕಲ ಸು
ಪ್ರೀತಿಯಿಂ ಮನ್ನಿಸಿದ ಮತ್ತಿ
ನ್ನೀತಗಳ ಮಾತೇಕೆ ಗುಪ್ತದೊ[೭][ಳಗೆಯ][೭]ದಂತಿರಲಿ
ಆತನವಸರದೊಳಗೆ ಮತ್ತಿ
ನ್ನೀತಗಳಲೇನಹುದೆನುತ ನಿಜ
ನೀತಿಯಿಂ ಬಾಳುವುದೆನುತ ಸುಖವಿರಲು ಮತ್ತಿತ್ತ ‖೭೪‖

ವಿನಯನಿಧಿ ಸಮ್ಯಕ್ತ್ವಯುಕ್ತನು
ಜಿನಪದಾಂಬುಜ ಮತ್ತಮಧುಕರ
ನೆನುಪವೋನ್ನತ ಶೀಲಗುಣಸಂಪನ್ನನಪ್ರತಿಮ
ಘನಮಹಾಸಂಗರದೊಳಗೆ ಸಂ
ಹನನವುಲಿದೆಯ್ದಿದನು ಸ್ವರ್ಗವ
ನನುನಯದಿ ಸಾಮಂತಕಥನದೊಳಿದು ಮೊದಲ ಸಂಧಿ ‖೭೫‖

❖❖

೧– ದು (ಕ,ಮ) ೨–೨ ಳಾರೆರಿತ್ತ (ಕ) ೩+ ಮೃದು(ಮ) ೪–೪ x (ಕ,ಮ) ೫–೫ x(ಕ,ಮ) ೬–೬ x(ಕ,ಮ) ೭–೭ ಳ (ಕ,ಮ)

ಸಂಧಿ : ಎರಡು

ಗಂಡರದಿತ್ಯಾಂಕನನುವರ
ಖಂಡಿತನು ಸಚ್ಚರಿತ ಮಹಿಮೋ
ದ್ದಂಡನೆನಿಸುವ ನಿಂಬನೊಳು ಸರಿದೊರೆಯದಾರೆನಲು ॥ಪಲ್ಲ॥

ದೆಸೆಗೆ ದ್ವಾದಶಯೋಜನದೊಳುಂ
ಪಸರಿಸಿದ ಶಶಿಸೂರ್ಯವೀಥಿಯೊ
ಳೆಸೆದು ೧[ವಿ]೧ ಕ್ಕೆಲನುಪ್ಪರಿಗೆಗಳ ಕನಕಕಳಸ೨[ಗಳು]೨
ವಸುಧೆಗಚ್ಚರಿಯೆನಿಪ ಪುರಜನ
ದೊಸಗೆಗೆಗಳ ತಿಂಥಿಣಿಯಮಯ ಸಂ
ತಸವನೇ ೩[ನೇ]೩ನೆಂಬೆ ಜನ೪[ರು]೪ಗಳುತ್ಸವಂಗಳನು ॥೧॥

ಬಳಸಿದು೫[ರು]೫ ನಂದನವನಗಳಿಂ
ದೊಳಗೆ ಪೊಂಗೇದಗೆಯ ಹೊದರಿಂ
ದೊಳಗೆ ಬಳಸಿದ ಮಾತುಳಂಗ ಲವಂಗ ಚಂದನ೬[ದಿಂ]೬
ಒಳಗೆ ಬಳಸಿದಶೋಕೆ ಮಾಮರ
ಗಳ ವನಗಳಿಂದೊಳಗೆ ಬಳಸಿದ
ಹೊಳೆವ ಹೊಂಬಾಳೆಗಳ ತಂಗು ಕವುಂಗಿನಿಂದೆಸೆವ ॥೨॥

೭ಎ೭ತ್ತಬಳಸಿದ ಸರೋವರದೊಳು
ಮೊತ್ತ ಹೊಂದಾವರೆಯ ಬಳ್ಳಿಯ
ನತ್ತಲಿತ್ತಲು ೮[ಸು]೮ಳಿವ ಕಳಹಂಸಗಳ ಮಿಥುನಗಳ
೯[ಇ]೯ತ್ತ ಕೆಲವಾ ಚಕ್ರವಾಕಗ
ಳೊತ್ತರಿಪ ೧೦[ಹೂಗೊ]೧೦ಳನ ೧೧[ಬಳಿಯಲಿ]೧೧
ಕತ್ತಲಿ೧೨[ಸಿ]೧೨ದೆಲೆವಳ್ಳಿಯಾಗರದೊತ್ತು ವಳಯದಲಿ ॥೩॥

೧–೧ (ಕ,ಮ) ೨–೨ x(ಕ) ಗಳ(ಮ) ೩–೩ x(ಕ,ಮ)೪–೪ ರಿ (ಕ,ಮ) ೫–೫ ದು(ಕ,ಮ) ೬–೬ ವು(ಕ,ಮ) ೭–೭ ಇ(ಮ) ೮–೮ ಸೆ(ಕ,ಮ) ೯–೯ ಎ(ಕ) ೧೦–೧೦ ಹೊಂಗ (ಕ,ಮ) ೧೧–೧೧ ಬಳಲಿಯ (ಕ,ಮ) ೧೨–೧೨ ಯ (ಕ,ಮ)

ಎಡೆಗೆಡೆಗೆ ಮಡುಗಟ್ಟಿ ಬಲು ಹ
ಣ್ಣಡಕೆಗ[೧][ಳು][೧] ಸಾಲೊಳಗೆ ಸಸಿಗ [೧][ಳು][೧]
ತಡಿವಿಡಿದು ಮುಡಿವಾಳ ಬಾಳ ಸುಗಂಧ ಪಚ್ಚೆಗ[೧][ಳು][೧]
ಕಡೆಗೆ ಲತೆವಳ್ಳಿಗಳು ಹೊಮ್ಮರ
ಕಡ[೨][ರಿ][೨] ಜಡಿದು ನೆಲ್ಕೆ ಜೋಂಪಿಸಿ
ತಡೆಯದಲ್ಲಾಡುವವು ಮಂದಾನಿಲನೆಸಗಿದಾಗ ॥೪॥

ಅದರ ಬಳಿವಿಡಿದೊಳಗೆ ಜಾಜಿಯ
ಹೊದರಿನೊಳು ಸರಿವೆರಸಿ ಮಲ್ಲಿಗೆ
ವಿದಿತ ಸೇವಂತಿಗೆ ಸುರಗಿ ಸಂಪಗೆಯ ವನದೊಳಗೆ
ಸುದತಿಯರು ಸಂಗಡಣದಿಂ[೩][ದೊಲೆ
ದೊದವಿ ನವಿಲುಯ್ಯಲನ][೩] ಝೇಂಕೃತಿ
ಗೊದಗಿ ಪಾಡುವರಲ್ಲಿ ಚಿತ್ರವಸಂತಕಾಲದೊಳು ॥೫॥

ಎಳೆದಳಿರ ಮಾಮರನ ಮೇಲರ
ಗಿಳಿಯ ಬಳಗದ ಚಪಲ [೪][ವರ][೪]ಕೋ
ಕಿಳೆಯ ಮಧುರಾಳಾಪರವ ಸಂಗೀತ ಸಾರಗಳ
ಜಳರುಹದ ಪರಿಮಳಕೆ ತುಂಬಿಗ
[೫][ಳೆಲಸೆ][೫] ಬಳಸಿದ [೬][ಝೇಂಕಾರಾವಳಿ][೬]
ತಿಳಿಗೊಳ[೭][ನ][೭] ಬಳಿವಿಡಿ [೮][ದ][೮] ಕಳಹಂಸೆಯ ನಿನಾದಗಳು ॥೬॥

ಎಸೆವ ನಂದನವನದೊಳಗೆ ಕಾ
ಮಿಸುವ ಪುಷ್ಪದ ಪರಿಮಳಂಗಳು
ಹೊಸಖುಲುತುವನೊಡರಿಸುವ ಪಂಚಮಸರನಿನಾದಗಳ
ಶಶಿಮುಖಿಯರಾಳಾಪಿಸಲು ಕ
ಣ್ಗೆಸೆವ ಜಳಕೇಳಿಗ[೯][ಳಿಳೆ][೯]ಗೆ ಶೋ
ಭಿಸಲು ಮೆರೆವುದು ಚಿತ್ರ ಚೈತ್ರ ವಂಸತಕಾಲದೊಳು ॥೭॥

೧–೧ ಳ(ಕ,ಮ) ೨–೨ ಗಿ(ಕ,ಮ) ೩–೩ ದಾಲ। ದೊದವ ನವಿಲುಯ್ಯಲ(ಕ,ಮ) ೪–೪ x(ಕ,ಮ) ೫–೫ ಳೆರಗಿ(ಕ,ಮ)
೬–೬ ಝೇಂಕಾರ ಡಾವಳಿ(ಕ,ಮ) ೭–೭ ದು(ಕ,ಮ) ೮–೮ ದು (ಕ,ಮ) ೯–೯ ಳೊಳ(ಕ,ಮ)

ಅಂತು ಬಳಸಿದ ವನದ ಮಧ್ಯದೊ
ಳೆಂತು ಬಣ್ಣಿಸಲರಿದೆನಿಸಿ ಭೂ
ಕಾಂತೆ ನೆಲಸಿಹಳಲ್ಲಿ ನೋಡುವಡಾವ ಕಾಲದೊಳು
ಸಂತತಂ ಜನಕುತ್ಸವದೆ ಶ್ರೀ
ಕಾಂತೆಗಂ ಸಂಸ್ಥಾನಮಂಡಪ ವಾ
[೧][ಕ್ಯಾಂ][೧] ತೆಗೆದು ಕೇಳೀನಿಳಯವೆನಿಸಿಹುದು ಮತ್ತಲ್ಲಿ ॥೮॥

ಹಗೆಗೆ ಹುಗಲರಿದೆನಿಪ ಕೊತ್ತಳ
ದಗಳ ಘಾರವನೇನನೆಂಬೆನು
ಬಗೆಗೆ ಭೀತಿಯನೀವುದಾ ದುರ್ಗದ ಮಹಾತ್ಮೆಯದು
ಜಗವ ಗೆಲಲಹುದೆಂ[೨][ಬ][೨] ಹುಲಿಮುಖ
ಕೊಗೆದುದಿಕ್ಕೆಲನೊತುಗೋಂಟೆಯು
ಗಗನವನು ಚುಂಬಿಸುವ ಮುಗಿಲಟ್ಟಳ ತೆಗೆಗಳಿಂದ ॥೯॥

ದಾರವಟ್ಟದ ಕಾಳಗದೊಳು ಮು
ರಾರಿಯಾದೊಡೆ ಹುಗಲು ಬಾರದು
ವೀರರನೇಕರಿಹರು ಕಾವಲೊಳಿಕ್ಕೆಲದಿ ಸತತಂ
ಓರಣದ ಕದವೆಸಳ[೩][ಬಿ][೩]ೀಯಗ
ಕಾರಣಿಕದ ಸಿಡಿಕೆವಾಗಿಲು
ಚೋರಕಿಂಡಿಗಳಾಳುವೇರಿಗಳೊಳಗೆ ಬಳಸಿ[೪][ಹವು][೪] ॥೧೦॥

ಕನಕಕಳಸದ ರುಚಿರ ಬಳಸಿಹು
ದನವರತ ಪುರದೊಳಗೆ ಉದಯದ
ದಿನಕರನ ಹಂಗಿಲ್ಲ ಮತ್ತಿನ್ನಾವ ಕಾಲದೊಳು
ವಿನಯಗುಣಯುತರಿಂದ ಬಳಸಿದ
ವನನಿಧಿಗೆ ಸರಿಗಾಣಲಹುದಾ
ಧನದನಳಕಾವತಿಯಿದೆನೆ ಕಲ್ಯಾಣಪಟ್ಟಣ[೫][ವು][೫] ॥೧೧॥

೧–೧ ಕಾಂ(ಕ,ಮ) ೨–೨ ದು (ಕ,ಮ) ೩–೩ ಬ(ಕ) ೪–೪ ದುದು (ಕ,ಮ) ೫–೫ ದ (ಕ,ಮ)

ಸೋಮಮಯ ಕಾಂತೆಯರ ಮುಖದೊಳು
ಹೇಮಮಯ ಸಂಭಟರರ ಪದದೊಳು
ಕಾಮಮಯ ನರಪತಿಕುಮಾರರೊಳೇನಬೆಂಬೆನಿದಂ
ಪ್ರೇಮಮಯ[೧]ಬಂ[೨][ಧು][೨]ಜನದೊಳು ನಿ
ಸ್ಸೀಮಮಯ ಚಾರಿತ್ರದೊಳು ಮ
ತ್ತಾ ಮಹಪುರದುನ್ನತಿಕೆ ಕಲ್ಯಾಣಪಟ್ಟಣ[೩]ದ[೩] ॥೧೨॥

ಇತ್ತ ನೃಪತಿಯ ಮಂದಿರ[೪][ಕೆ ತಾ
ನೆ][೪]ತ್ತಣಿಂದಾ ಬಂದ ಚರರಿಗೆ
ಸುತ್ತಿ ಕಾಣಿಸಲರಿದು ಬರುವವನಾವನೇಂ[೫][ಬವ][೫]ನು
ಮ[೬][ತ್ರ್ಯ][೬]ಕೇ ಸರಿಮಿಗಿಲೆನಿಸುವ ಸ
ಮರ್ಥರಾವಾಸಗಳನೇಕ ಸು
ವಿಸ್ತರವನೇನೆಂಬೆನಾ ಕಲ್ಯಾಣಪಟ್ಟಣದ *॥೧೩॥

ಆರ[೭][ಯಿದು][೭] ನೋಡುವರೆ ಬಾಗಿಲು
ಭೇರಿ ಘಳಿಯರದೊಳು ಉಲಿವುದಾ
ಗೋರಣದ ಚಾವಡಿಯೊಳಿಹರನವರತ [೮][ಕ][೮]ರಣಿಕರು
ಆರು ಬಲ್ಲರು ಕುರುಹು ಮೇ[೯][ಗಣ][೯]
ತೋರಣದೊಳು ವಿಚಾರಿಸು[೧೦]ವೊಡಾ[೧೦]
ಪೂರಯಿಸುವುದು ಶಂಖ ಪಂಚಮಶಬ್ದಮುದಯದೊಳು ॥೧೪॥

[೧೧][ಎಂ][೧೧] ತರಿಯಲಹುದಾ ಪುರದ [೧೨][ಪಿ]ರಿ[೧೨]
ದಂತರದ ವಿಸ್ತೀರ್ಣವನು ಮಿಗೆ
ಸಂತತಂ ನೆರೆ ಬಲ್ಲೆವೆಂಬನ ಮನದ ಹವಣೆಕೆ[೧೩][ಯೇ ?][೧೩]
ಕಾಂತೆಯರ ಕಡೆಗಣ್ಣ ಬೆಳಗಿನೊ
ಳಂತರಿಸಿ ಬೆಳದಿಂಗಳೆಸಗದ
ಚಿಂತೆ[೧೪][ಯಿಂ][೧೪]ದವೆ ಕಂದಿ ಕುಂದಿ ಶಶಾಂಕ ಬೆಳ್ಪಾದ ॥೧೫॥

೧+ ತಾ(ಕ,ಮ) ೨–೨ ದು(ಕ,ಮ) ೩–೩ ವ(ಮ) ೪–೪ ವಕ್ಕೆ(ಕ)೫–೫ ಬುದ(ಕ)೬–೬ ತ್ರ(ಕ) * ಈ ಪದ್ಯ 'ಮ' ಪ್ರತಿಯಲ್ಲಿ ಇಲ್ಲ. ೭–೭ ಯ್ದು(ಕ,ಮ) ೮–೮ x (ಕ,ಮ) ೯–೯ ಗೆ(ಕ,ಮ) ೧೦–೧೦ ವದಾ(ಮ)೧೧–೧೧ ಅಂ (ಕ,ಮ) ೧೨–೧೨ ಕಿ(ಕ,ಮ) ೧೩–೧೩ ಯ (ಕ,ಮ)

ಸೋಮವಿಥಿಗಳೊಲಗೆಸೆವ ಮ
ತ್ತಾ ಮನೋಹರದುಪ್ಪರಿಗೆಗಳ
ಹೇಮಕಳಸದ[೧] ಮೊಲೆಯರೇರುವ ಬಳ್ಳಿಮಾಡಗಳ
ಕೋಮಲದ ರಸಭಾವಚಿತ್ರದ
ಕಾಮ ಚೌರಾಸಿಗಳ [೨][ಬಿಂ][೨]ದದ
ನಾಮು[೩]ವ[೩]ನೆ ಬರೆದಿರ್ದರಾ ಗೇಹದೊಳು ಮತ್ತಲ್ಲಿ ॥೧೬॥

ಬಣ್ಣ ಬಳೆದಿಹ ಮೊಳೆಯ ಮಂಚದ
ತಿಣ್ಣ ಸುಪ್ಪತ್ತಿಗೆ[೪][ಯ][೪] ಮೇಗಣ
ಸಣ್ಣ ಹಚ್ಚಡ ಹಾಸಿಕೆಯ ಮೇಗಲ[೫][ರ][೫] ವಾಸಿಕೆಯ
ತಣ್ಣೆಲರ ಬೀಸಣಿಕೆ ಮದ್ದಿನ
ಸುಣ್ಣ ಘಳಿಗೆಯ [೬][ಮೇಲುಗಟ್ಟಿನ][೬]
ಬ[೭][ಣ್ಣ][೭]ನೆಯ ಮಾತುಗಳನೆಸಗುವ [೮]ತುಂಟ[೮]ಣಿಯರಲ್ಲಿ ॥೧೭॥

ಸಾಲ ನೇಲೆಯ ಮೇಲೆ ಭೂಷಿಸಿ
[೯][ಸೇಲೆ][೯]ಗಳ ನಿರಿವಿಡಿದು ಹಾಕಿದ
ಕಾಲಹಂಗುಳಿಗೆಗಳ ಹಲಗೆಯ ಲೆತ್ತಸಾರಿಗಳು
ಕೀಲ[೧೦][ಮಂ][೧೦]ಚದ ಶಕುನಿಗಳ ಕರ
ವಾಳಿನೊತ್ತೆ[೧೧]ಯ ಕನ್ನಡಿಯ ಹಳಿ
ಸಾಲದರ್ಥದ ಪತ್ರ ರತಿಗೇಹದೊಳುಮೆಸೆದಿರಲು ॥೧೮॥

ವಾರನಾರಿಯ [ರುಗಳ] ಕೇರಿಯೊ
ಳೋರಣದ ಮುಖಸಾಲೆಯೊಳು ಪರಿ
ಚಾರಿಕೆಯರೆಡೆಯಾಟ ಕಪಿಗಿಳಿಪಾರಿವಾಳಗಳ
ವಾರ[೧೨][ಗಿತ್ತಿ][೧೨]ಯ ಹಾರುವರು ಶೃಂ
ಗಾರದೋದಿನ ವಿಟರು ಹರದಿಗೆ
ದೂರ ದೇಶಕೆ ಬಂದವರು ನೆರೆದಿಹರು ಮತ್ತಲ್ಲಿ ॥೧೯॥

೧+ ಕಿರು (ಕ,ಮ) ೨-೨ ಬಂ(ಕ,ಮ) ೩-೩ ವೆ(ಕ) ೪-೪ ಗಳ(ಕ,ಮ) ೫-೫ ರು(ಕ,ಮ) ೬-೬ ಯೇವುಗಟಿನ(ಕ) ಯೇವುಗಟ್ಟಿನ(ಮ)೭-೭ ನ್ನಣೆ(ಕ,ಮ) ೮-೮ ತವುಂಡ(ಮ) ೯-೯ ಸೀರಿ(ಕ,ಮ) ೧೦-೧೦ ಪಂ(ಕ,ಮ) ೧೧+ ಳೆ(ಮ) ೧೨-೧೨ ದಕ್ಕೆ (ಕ,ಮ)

ತಂಬುಲಿಗರೆಲೆಯಡಕೆ ಸುಣ್ಣದ
ನಂಬುಗೆಯ ಮಾರಾಟದವರು ಕ
ದಂಬ ಹೂವಿನ ಮಾಲೆ ಸಾದು ಜವಾದಿ ಕಪ್ಪುರವ
ಕೊಂಬವರು ಸೊಳೆಯರಿಗಲ್ಲಿಯೆ
ತುಂಬಿ ಕರಡಗೆವೆರಸಿ ಕೊಡುವರು
ದೊಂಬಿ ಜಗಳದೊ[೧][ಳೊ][೧]ಳಗನುಚ್ಚುವರಲ್ಲಿ ನೆರೆದಿಹರು ॥೨೦॥

ಹಾಡುವರು ಕೆಲರಲ್ಲಿ ಕೈ ಮೊ
ಯ್ದಾಡುವರು ಕೆಲರಲ್ಲಿ ಹಣಿದವ
ನಾಡುವರು ಕೆಲರಲ್ಲಿ ಜೂಜಾಡುವರು ಕೆಲರಲ್ಲಿ
ನೋಡುವರು ಕೆಲರಲ್ಲಿ ಸುದ್ದಿಯ
ನಾಡುವರು ಕೆಲರಲ್ಲಿ ಜಗಳವ
ಮಾಡುವರು ಕೆಲರಲ್ಲಿ ಗಳಹುವರಲ್ಲಿ ನೆರೆದಿಹರು ॥೨೧॥

ಮಟ್ಟ ಧವಳಾರಗಳ ಮುಂದಣ
ಪಟ್ಟಸಾಲೆಗಳೊಳಗೆ ಕೂರಲ
ಗಿಟ್ಟಳಿಸಿದಂತವರ ಕಡೆಗಂಗಳ ಬೆಳಗಿನೊಳಗೆ
ಕಟ್ಟಿದಿರಿನೊಳು ನಿಂದವರು ಮತಿ
ಗೆಟ್ಟು ಹೋದರು ಕಾಮತಾಪದಿ
ನೆಟ್ಟನವರಿಂಗೊಲಿ[೨][ಯ][೨]ದವ[೩]ರುಗ[೩]ಳುಂಟೆ ಲೋಕದೊಳು ॥೨೨॥

ಸಾಲೆರಡು ಪಂತಿಯೊಳು ನಿಂದಿ
ರ್ದಾ ಲತಾಂಗಿಯವರವರ ನುಡಿಗಳ
ಕಾಲುವಲೆ ಬೀಸುವುದು ಮೊಲೆಗಳ ತೋರಗುಂಡುಗಳ
ಮೇಲು ಮುಸಿಕಿನ ಮೊರೆಯ ತೋಹಿನ
ಭ್ರೂಲತೆಯ [೪]ಚಾಪಕ್ಕೆ ಕರಗಳ[೪]
ಕೋಲ[೫][ಕೊ]ಡಚಿಯರಲ್ಲಿ ಸುಳಿದಾಡುವ[೬][ವ][೬]ರುಗಳುಂಟೆ ॥೨೩॥

೧–೧ x(ಕ,ಮ) ೨–೨ x(ಕ,ಮ) ೩–೩ ರೆ ಮಂಗ (ಕ) ೪–೪ ಪಕ್ಕೆಕಾರಳಳ(ಕ)೫–೫ x(ಕ) ಕಾ (ಮ) ೬–೬ x (ಕ,ಮ)

ಮೊದಲ ಸಂಜೆಗಳೊಳಗೆ ಕಾಮನ
ಕದನ ದಾ[೧][ಳಿಗಳಂತೆ ಸತಿಯರ][೧]
ವಿದಿತ ನೋಟದ ಚಪಳತೆಯ ಕಡೆಗಣ್ಣ ಢಾಳಗಳ
ಹೊದೆವ ಚೀನಾಂಬರದ ಮೇಲುದ
ನೊದೆದು ಕದಕದಿಸುವ ಮೊಲೆಯ ಭಾ
ರದೊಳು ಬಳಕುವ ಸೆಳೆನಡುವಿನಿಂದೆಸೆವ ಗಣಿಕೆಯರ ॥೨೪॥

ತಳಿರಡಿಯ ಪದಯುಗದ ಪಲ್ಲವ
ದೊಳಗೆ ಮಿಂಚಿಟ್ಟರುಣ ನಖ ಸಂ
ಚಳಿ[೨][ಸೆ][೨] ಬಳಸಿದ ಜಾನುಜಂಘೆಯ ವೃತ್ತಕೋಮಲದ
ಒಳುದೊಡೆಯೊಳ[೩][ಶ್ವತ್ಥ ಪತ್ರದ
ವೋಲು ಅಳವಡಿಸಿರ್ದ ಮದನನ][೩]
ನಿಳಯ ರೇಖಾವಳಿಯ ಗಂಗಾವರ್ತನಾಭಿಗಳ ॥೨೫॥

ತೆಳುವಸಿರಿನಿಂದೆಸೆವ ಬಾಸೆಯ
ನಳವಡಿಪ ಕುಚಚೂಚುಕಾಗ್ರದ
ಬೆಳು ನಯನ ಕಪ್ಪೆಸೆವ ನಿಶಿತಾಂಗುಳಿಯ ಸೆಳ್ಳುಗುರ
ಹೊಳೆವ ಮೃದು ಕೆಂದಳದ ಹಸ್ತದ
ನಲಿವ ತೋಳಿನ ಕಂಬುಕಂಠದ
ಪೊಳೆವ ಬಿಂಬಾಧರದ ಸ್ತನಮೌಕ್ತಿಕ ಸುಧಾಳಗಲ ॥೨೬॥

ತಿಳಕುಸುಮ ನಾಸಿಕವನುತ್ಪಳ
ದಳಗಳಂತೆಸೆವೆಸಳುಗಂಗಳು
ಹೊಳೆವ ಕದಪಿನ ಕರ್ಣಪಾಲೆಯ ಪೆರೆನೊಸಲಿನಿಂದ
ಸುಳಿಗುರುಳ ಸೋರ್ಮುಡಿಯ ನಯ ವಿ
ತ್ತಳದ ಪರಭಾಗದೊಳು ಕುಂಭ
ಸ್ಥಳ ನಿತಂಬಗಳಿಂದ ವಾರಾಂಗನೆಯರೆಸೆದಿರಲು ॥೨೭॥

೧-೧ ಳಿಂಬಂತೆಯರ(ಕ) ದಾಳಿಂಬಂತೆ ಸತಿಯರ(ಮ) ೨-೨ ಸಿ (ಕ,ಮ) ೩-೩ ಸ್ವಸ್ಥನದವೊಲು ಪತ್ರವನಳವಡಿಸಿ(ಕ,ಮ)

ಉಲಿವ ಪದನೂಪುರದ ಮದನಾ
ವಳಿಯ ವಸ್ತ್ರದ ನಿರಿಯ ಮೇಗಣ
ಹೊಳೆವ ಕಾಂಚೀದಾಮ ಉಳಿಸರ ವಜ್ರಬಂಧಗಳ
ಗಳಸರದ ಮೌಕ್ತಿಕದ ಮಣಿಮಯ
ದೊಳು ಪದಕ ಕಂಠದೊಳು ಹಸ್ತಾ
೧[ವಳಯದುಲಿಯುವ]೧ ಕಂಕಣದ ಮುದ್ರಿಕೆಯ ಬೆರಳಿಂದ ॥೨೮॥

ನೋಡಿದರೆ ನುಡಿಸುವರಿರದೆ ಮಾ
ತಾಡಿದರೆ ನಿಲಿಸುವರು ನಿಂದಡೆ
ಕೂಡೆ ಸರಸವನಾಡುವರು ಸರಸದೊಳು ಮನೆಗೊಯ್ದು
ಕೂಡುವರು ಕೂಡಿದರೆ ಮೆಚ್ಚಿನ
ಕೋಡಗವ ಮಾಡುವರು ಮೆಚ್ಚಿಸಿ
ನಾಡೆ ಧನವನು ಸೆಳೆದು ತಿರಿದುಣಿಸುವರು ಮತ್ತಲ್ಲಿ ॥೨೯॥

ಸೂಳೆಯರ ಮನದೊಳವ ಬಯಸುವ
ಗಾಳುತನವೆಲ್ಲಿಯದು ಪೆಂಡಿರ
ಬಾಳುವೆಗಳೆಲ್ಲಿಯದು ವಿದ್ಯಾಳಾಪವೆಲ್ಲಿಯದು
೨ಓ೨ಳಿ ಸಾಲೆಲ್ಲಿಯದು ಸಜ್ಜನ
ಮೇಳ ತಾನೆಲ್ಲಿಯದು ಲೋಕದ
ಖೂಳತನ ಬಂದಿಹುದು ಕಾಮುಕರಾದ ಮನುಜರಿಗೆ ॥೩೦॥

ಒಲಿ೩[ಯ]೩ಲೀಸದೆ ಮನದೊಳಗೆ ಸಂ
ಚಳಿಸದಾಳಾಪಿಸದೆ ನೋಡದೆ
೪[ಕಿವಿ]೪ಗುಡದೆ ಮಾತಾಡದೆಳಸದೆ ಬಯಸದಿರ್ದವರ
ಇಳೆಯೊಳಾತ್ಮಧ್ಯಾನ ಮುನಿಸಂ
ಕುಳದ ವಚನವ ನಂಬಿದರಿಗು
ತ್ಪಳದಳಾಕ್ಷಿ೫[ಯು]೫ ರಂಭೆ ಮೊದಲಾದವರು ಬಯಸುವರು ॥೩೧॥

೧–೧ ವಳಿಯದ (ಕ) ವಳಯರಲೆಯದ(ಮ) ೨–೨ ಇ(ಮ) ೩–೩ ಸ (ಕ,ಮ) ೪–೪ ಕೆಳಿ(ಕ) ಕೆಳೆ(ಮ) ೫–೫ ಯ (ಕ,ಮ)

ಎಂತು ಬಣ್ಣಿಪೆನಾ ಪುರದ ಭೂ
ಕಾಂತೆ ನಿರುಕಿಪ ಮಣಿಮುಕುರವೆಂ
ಬಂತೆಸೆ೧[ಯೆ]೧ ಮೂಲೋಕ ಮೋಹನನಿಟ್ಟ ತಿಲಕವದು
ಚಿಂತಿಪರ ಚಿಂತಾಮಣಿಗಳೆಂ
ಬಂತೆ ಗುಣವಂತರ ಸದನ ನಿ
ಶ್ಚಿಂತಮಯವಾಗಿಹುದು ನೀಡುವೊಡಾವ ಕಾಲದೊಳು ॥೩೨॥

ಆ ಪುರಾಧಿಪ ರಾಯಬಿಜ್ಜಣ
ಭೂಪರೊಳಗಪ್ರತಿಮ ಭುಜ ಪ್ರ
ತಾಪನೆನಿಸುವ ಕಾರ್ಯಶೀಲನುದಾರ ಗುಣಯುತನು
೨[ಭೂಪ]೨ ಸತ್ಕುಲನಿಳಯ ಸಕಳ ಕ
ಕಳಾಪನಿಧಿ ರಿಪುವನಜಕುಂಜರ
ವ್ಯಾಪಿಸುವ ಸತ್ಕೀರ್ತಿಕಾಂತಾರಮಣನಮಲಗುಣ ॥೩೩॥

ಇನನ ಸುತನೌದಾರತೆಯನಾ
ಮನಸಿಜನ ಸೌಂದರ್ಯವನು ಧನ
ದನ ೩[ಸಿರಿಯ ಪೆಂಪನು]೩ ಸುರಪನುನ್ನತಿಯ ಭೋಗವನು
ವನನಿಧಿಯ ಗಾಂಭಿರ್ಯವನು ಚಂ
ದ್ರಮನ ಮಹಸತ್ಕಳೆಗಳನು ಬಿ
ಜ್ಜಳನೃಪಾಲಂಗಿತ್ತನೊಚ್ಚತವಾಗಿ ವನಜಭವಂ ॥೩೪॥

ಅರಮನೆಯ ಲಾಯದೊಳು ನೃಪತಿಯ
ತುರಗ ನಾಲ್ವತ್ತೆಂಟು ಸಾವಿರ
ಕರಿಮಹಾಬಲವೆಂಟು ಘಟೆಯೋಷ್ಠಿರಮೆ ನೂರೆಂಟು
ನರಪತಿಯ ಸರಿಗದ್ದುಗೆಯೊಳವ
ತರಿ೪[ಪ]೪ ರಾಜಕುಮಾರರಿಚ್ಛಾ
ಸಿರವು ನೆರವಿನ ಕರಿತುರಗಭಟನರರಸಂಖ್ಯಾತ ॥೩೫॥

೧-೧ ವ(ಕ,ಮ) ೨-೨ ಧೀಱು (ಕ,ಮ) ದೀಪ(ಮ) ೩-೩ ಪೆಂಪು(ಕ,ಮ) ೪-೪ ಸಿ(ಕ,ಮ)

ಒಂದು ದಿನ ಬಿಜ್ಜಣನೃಪಾಲಕ
ನಿಂದು ಹೊರಚಾವಡಿಯೊಳೋಲಗ
ಕೆಂದು ನಡೆತರೆ ಧವಳಶಂಖಗಳೂದೆ ಹೆಗ್ಗಾಳೆ
ಬಂದರವಸರದವರು ಮುಂದ[೧][ಕೆ][೧]
ಸಂದಣಿಸಿ ಬ[೨][ಹ][೨] ಮಂದಿಯನು ಹೊ
ಯ್ದಿಂದು [೩][ಸಂ][೩]ಧಿಸಿದವ[೪][ರ][೪]ನಡೆ ಹೋಗೆಂದರುಗ್ಘಡಿಸಿ ॥೩೬॥

ಎಡಬಲದಿ ಬಹ ರಾಜಪುತ್ರರ
ಗಡಗಣದಿಂದ ನಿರೀಕ್ಷಿ[೫]ಸುತಲಾ[೫]
ಗೊಡನೆ ಮೆಲ್ನುಡಿಗಳನ ನುಡಿವುತ ಮಂತ್ರಿಗಳ ದೂ[೬]ಡೆ[೬]
ಬಿಡದೆ ಬಳಸಿದ ಬಹುಜನದ ಸಂ
ಗಡಣ[೭][ವೊಗ್ಗಡಿಸಿದುದು][೭] ಹೋಗೆನ
ಲೊಡೆಯನಿಕ್ಕೆಲಗಳೊಳಗೆ ಸಾರಿದುದಖಿಳ ಪರಿವಾರ ॥೩೭॥

ಕಟ್ಟಿದಿರಿನೊಳು ನಿಂದ ಖೂಳರ
ನಟ್ಟಿ ಹು[೮][ಯ್ಯ][೮]ಲು [೯][ಕಂಬಿವಿಡಿದರ][೯]
ಸೆಟ್ಟಗೊಂಡೊಂದೆರಡ ತಿವಿಯಲು ಕೂಡೆ ಕಂಬಿಯೊಳು
[೧೦]ಒ[೧೦]ಟ್ಟವಿಸಿ ನಾಕೆಂಟನೂ [೧೧][ದೆ][೧೧]ಯಲು
ಬಿಟ್ಟು ಕೆಲಕೋಡಿದ [೧೨][ರು ಆ][೧೨]ಗಳು
[೧೩][ಪುಟ್ಟದೇ][೧೩] ಬಹುಜನದೊಳಗೆ ನೃಪತಿಗಳ ನೋಡುವುದು ॥೩೮॥

ಸಾಲು ಪಂಕ್ತಿಯೊಳೆಸೆದು ಬರೆ ಭೂ
ಪಾಲಕನೊಳಿಕ್ಕೆಲದ ಸುಭಟರ
ಕಾಲ ಹೊಂದೊಡರುಗಳ ರಭಸದೊಳಾಲಿಸಲು ನುಡಿಯ
ಕೇಳಲರಿದು ಸಿತಾತಪತ್ರದ
ಮೇಳವದಿ ಢಾಳಿಸುವ ಚಾಮರ
[೧೪][ದೋ][೧೪]ಳಿ[೧೫][ಬಳಗ][೧೫]ಗಳಿಂದ ಬಂದನು ಬಿಜ್ಜಣಾಧಿಪನು ॥೩೯॥

೧– ಣ(ಕ,ಮ) ೨–೨ ಹು(ಕ,ಮ) ೩–೩ ಸಾ(ಕ,ಮ) ೪–೪ ರು(ಕ,ಮ) ೫–೫ ಸಲೋಲಾ(ಮ)೬–೬ ಡಿ(ಮ) ೭–೭ ದೊಗ್ಗಡಿಸಿದರು(ಕ,ಮ) ೮–೮ ಯ(ಕ,ಮ) ೯–೯ ಕಂಬನಿವಿಡು (ಕ) ಕಂಬಿವಿಡಿರದ್ವ(ಮ) ೧೦–೧೦ ಉ(ಕ)೧೧–೧೧ ಗೆ (ಕ,ಮ) ೧೨=೧೨ ವನಾ(ಕ,ಮ) ೧೩–೧೩ ಸುಟ್ಟರೇ (ಕ,ಮ) ೧೪–೧೪– ರೋ (ಕ,ಮ) ೧೫–೧೫ x (ಕ,ಮ)

ಬರಲು ಚಾವಡಿಯೊಳಗೆ ಹಾಸಿದ
ಹರಿವರಿಯೊಳಾ ಭೂಭುಜಾಸನ
ಸರಿಯೊಳಿಕ್ಕಿದ ರತ್ನಗಂಬಳಿಯೊಳು ತಿವಾಸಿಯೊಳು
ಎಡೆಯೊಳಿಕ್ಕಿದ ಗದ್ದುಗೆಯೊಳವ
ತರೆಸಿದನು ಬಿಜ್ಜಣನೃಪಾಲಕ
ಹೊರೆಯ ರಾಜಕುಮಾರರುಚಿತಾಸನದಿ ಕುಳ್ಳಿರಲು ॥೪೦॥

ಏನನೆಂಬೆನು ಬಳಸಿದುದು ಸ
ನ್ಮಾನನಿಧಿಗಳುದಾರಚರಿತರು
ಭಾನುಶಶಿವಂಶಜರು ಧರ್ಮದಯಾನುಕಾರಿಗಳು
ಭೂನುತರು ಸತ್ಕುಲಜ ವಿಮಲ
ಜ್ಞಾನರನು[೧][ಪ][೧]ಮರಗಣಿತರು ಮ
ತ್ತಾ ನೃಪನ ಸನ್ನಿಧಿಯೊಳುಚಿತಾಸನದಿ ಕುಳ್ಳಿರಲು ॥೪೧॥

ಸಾಲುಗಟ್ಟಿಗೆಯವರು ನೃಪತಿಯ
ಮೇಲು ಸನ್ನೆಯನಾರಯಿದು ಬರ
ವೇಳಿದರು ಕವಿಗಮಕಿಗಳ ವಾದಿಗಲ ವಾಗ್ಮಿಕರ
ಭಾಳಲೋಚನನೆಂಬ ಬಿರುದ ವಿ
ಶಾಲಮತಿಗಳು ಬಂದು ಕುಳ್ಳಿರೆ
ಲೀಲೆಯಿಂ ಮರೆದುದು ಬಹಳಗೊಂದಳದೊಳಾಸ್ಥಾನ ॥೪೨॥

ಇಂದು ಬಿಜ್ಜಣರಾಯನೋಲಗ
ಕೆಂದು ಹೊರಚಾವಡಿಗೆ ಬಂದುದ
ನಂದು ಕೇಳ್ದರು ವಿಪ್ರಜನರಾನಂದದಿಂದೆಯ್ದೆ
ಸಂಧಿಸಿರೆ ಯಜ್ಞೋಪವೀತವ
ನಂದವಿಟ್ಟರು ನೊಸಲು ಮಟ್ಟಿಯ
ಬಂದ ಬಾರದ ಮಂತ್ರಗಳನುಚ್ಚರಿಸುತೆಚ್ಚರಿಸಿ ॥೪೩॥

೧-೧ ಸ (ಕ,ಮ)

ಸಂಧಿಸಿದರಾ ಬೆರಳ ದರ್ಭೆಯ
ನಂದು ಧೋತ್ರವನಿಳಿಯಲುಟ್ಟರು
ಹಿಂದೆ ಸಿಕ್ಕಿದ ಲಂಬಗಾಸೆಯ ನಾಮದ್ವಾದಶದ
ಸಂದಣಿಸಿದರು ಬಾಲವೃದ್ಧರು
[೧][ಮುಂದೆಸೆಗೆ ಕೆ][೧] ಲರಂಥಕರು ಬರೆ
ಮುಂದೆ ಶತವೃದ್ಧರು ಸಮೂಹದೊಳಿಪ್ಪಿಗೋಲಗಳ ॥೪೪॥

ನಡೆದು ಬಂದರು ವಿಪ್ರಜನರೋ
ಗೊಡೆಯದೊತ್ತೊಲಿಸಿದರು ಚಾವಡಿ
ಗಡರಿ[೨]ನಿಂತರು[೨] ಹಸ್ತಮಾತ್ರದಿ ಸ್ವಸಿಗೊಟ್ಟವರು
ಒಡನೆ ಮಂತ್ರವನುಚ್ಚರಿಸಿ ಮ
ತ್ತೊಡನೆ ಮಾರ್ಕಂಡಾಯುಮೆಂದಾ
ತಡೆಯದಿತ್ತವರಂದು ಬಿಜ್ಜಣರಾಯಗಕ್ಷತೆಯ ॥೪೫॥

ಅಂದು ಮೌ[೩]ಳಿ[೩]ಯೊಳಾಂತು ಭೂಸೂರ
ವೃಂದದಾ ಹಸ್ತಾಕ್ಷತೆಯನೊಲ
ವಿಂದಲಿತ್ತನು ವೀಳೆಯಂಗಳ ತನ್ನ ಹಸ್ತದಲಿ
ಕುಂದು ಕೊರತೆಯದಾನುದೇನುಂ
ಟೆಂದು ಕೇಳಿದ ಬಿಜ್ಜಣಾಧಿಪ
ನಂದು ಕಳುಹಿದಡಾಗ[೪] ನೆರೆ[೪]ದುದು ವಿಪ್ರಸಂದೋಹ ॥೪೬॥

ದೇವ ನಿಮ್ಮಯ ಬ್ರಹ್ಮಪುರಿ ನಮ
ಗಾವ ಕೊರತೆಗಳಿಲ್ಲ ತಿಥಿ ಮತಿ
ಈವ ದಾನವದೇ ಕೊರ[೫][ತೆಯು][೫] ಸಮಸ್ತ ವಿಪ್ರರಿಗೆ
ದೇವ ಬಿನ್ನಹವುಂಟೆಮಗೆ ಹೊರ
ಚಾವಡಿ[೬][ಗೆ ಎಯ್ದಿದಿರಿ ಇಂದು][೬]
ಈವು[೭]ದನುಕ್ರಮ[೭]ವೆಂದರಾ ಗೋದಾನಗಳನೊಲಿದು ॥೪೭॥

೧–೧ x ಮಂದಿಸಿಕೆ(ಕ) ಮಂದಿಸೆಕೆ(ಮ) ೨– ನಿಲ್ಲದ(ಕ) ೩–೩ ರಿ(ಮ) ೪–೪ ನರಿ(ಮ) ೫–೫ x (ಕ,ಮ) ೬–೬ ಗೆಯ್ದಿದಿರೆಂದು (ಕ,ಮ) ೭–೭ ದುಕ್ರತ್ರಮ(ಕ,ಮ)

ಎಂದ ಮಾತಿನ ಬಿನ್ನಹದೊಳರ
ಸಂದು ಗೋದಾನಗಳನಿತ್ತನು
ಬಂದ ಭೂಸುರ[೧][ರಾ][೧] ಸಮೂಹ[೨]ವ[೨]ನಂದದಿಂದೆಯ್ದೆ
ಅಂದಿ[೩][ನಂದಿನ[[೩]ನಮ್ಮ ಬಿನ್ನಹ
ವಿಂದು ನೃಪತಿಯ ಚಿತ್ರದೊಳು ನೆರೆ
ಬಂದ ಕಾರಣ ಮನ್ನಿಸಿದ ವಿದ್ವಾಂಸರೆಂದೆ[೪]ಮ್ಮ[೪] ॥೪೮॥

ಭೃಷ್ಟರಾಡುವ ಮಾತ ಕಂಡಿರೆ
ಇಷ್ಟನೇನಹ ನಿಮಗೆ ಬಿಜ್ಜಣ
ದೃಷ್ಟಿಯಿಲ್ಲದರೆಂದು ನಮಗೀಗಿತ್ತ ಗೋವುಗಳ
ದೃಷ್ಟಿಯುಳ್ಳ ಶತಾಯುವೃದ್ಧರು
ದೃಷ್ಟಿ[೫]ದ್ವೇಷಿಗಳೆಂದು[೫]ನಮ್ಮನು
ತುಷ್ಟಿ ಬಡಲೆಂದಿತ್ತನೀ ಗೋದಾನಗಳನೆನಲು ॥೪೯॥

ಆವ ಮಂತ್ರವನೋದಿದಿರಿ
ಮತ್ತಾವ ವೇದವನುಚ್ಚರಿಸಿದಿರಿ
ಆವ ನಕ್ಷತ್ರವನರಿತು ಗ್ರಹವರಿತು ಪೇಳಿದಿರಿ
ಆವ ಲಗ್ನವ ತಂದಿರೀಗಲ
ದಾವ ಸಂಕ್ರಾಂತಿಯನು ಗುಣಿಸಿದಿ
ರಾವ ವಿದ್ಯೆಗೆ ಕೊಟ್ಟನೆಂದಂಧಕರು ಮೊಳಗಿದರು ॥೫೦॥

ಇಲ್ಲಿಯಾಡುವ ಮಾತ ಚಾವಡಿ
ಯಲ್ಲಿ ಬೊಗಳಿದೊಡಾಗ ದೃಷ್ಟಿಗ
ಳಿಲ್ಲದವರೆಂದೆನಿಸಿ ಕೊಂಬೆವು ಬೇರೆ ಗೋವುಗಳ
ಬಲ್ಲಿಹರು ವಿದ್ಯಾಧಿಕರು ನೀ
ವಲ್ಲವೇನೆಂದೆನುತ ನಾವಿ
ದ್ದಲ್ಲಿ ಮೆಲ್ಲನೆ ಬಂದು ಬದುಕಿದಿರೆನಲು ಕೋಪಿಸಿದ ॥೫೧॥

೧-೧ (ಕ,ಮ) ೨-೨ ವಾ(ಮ) ೩-೩ ನಿಂದೆಗೆ (ಕ,ಮ) ೪-೪ ದು(ಮ) ೫-೫ ದೃಷ್ಟಿಗಳಿಂದು(ಕ)

ಏಸುದಿನ ಬದುಕುವಿರಿ ನಿಮ್ಮೊಂ
ದಾ[೧][ಸೆಯಕೆ][೧] ಕಡೆಯಿಲ್ಲ ನಮ್ಮನು
ಬೇಸರಿಸಿ ಕಾಡುವಿರಿ ದೃಷ್ಟಿಗಳಿಲ್ಲದವರೆಂದು
ಏಸುದಿನ ನೃಪನಿತ್ತ ದಾನವ
ಗ್ರಾಸವನು ಮಾಡಿಲ್ಲವೆಂಬಾ
ಶೇಷವನು ಬಿಡಿಸುವೆವು ನಾವೀಗೊಂದು ನಿಮಿಷದಲಿ ॥೫೨॥

ಎಂದು ವಿದ್ವಾಂಸರನು ಜರೆದವ
ರಂದು ಮೊದಲಿಸಲ್ಕೆ ವೃದ್ಧರು
ಹಿಂದಕಾಗಳೆ ತಿರು[೨][ಗುತ][೨]ವರೇಳೆಂಟು ಹೆಜ್ಜೆಯನು
ನಿಂದು ಚಪ್ಪರಿಸಿದರು ಕೆಮ್ಮುತ
ಬಂದಡರಿಯಲು ಬಹುದೆನುತ ಬಲು
ಹಿಂದೆ ನಿಂದವರಿಷ್ಟಿಗೋಲೊಳು ನೆವರಿ ಪೋವವರು ॥೫೩॥

ಕೂಡಿ ಬೆರಸಿದರಂಧಕರು ಕೆಲ
ಕೋಡಲೀಸದೆ ಹಿಡಿದಿವರ ಕೈ
ಮಾಡಲೀಸದೆ ಕೆಡಹಿದರು ಗುದ್ದಿದರು ಕಿಬ್ಬದಿಯ
ನೋಡಿರಿವದಿರ ಕೊಬ್ಬುಗಳನೊಡ
ನಾಡಿ ನಮ್ಮನು ಕೆಡಹಿ [೩][ಮೈ][೩]ಹುಡಿ
ಮಾಡಿ ಧೋತ್ರವ ಹರಿದಿರಿ[೪][ರಿ]ದೋ ಎನುತ ಮೊರೆಯಿಡಲು ॥೫೪॥

ಎಂದು ಮೆಲ್ಲನೆ [೫]ಚ[೫]ಚ್ಚರಿ[೬][ಯ]ಗೊಂ
ಡಂದು ನೋಡಿದರವರ ಕಡೆಗ
ಣ್ಣಿಂದ ಕೋಪಿಸಿ ಚಪ್ಪರಿಸಿದರು ಕುಳಿ[೭][ತು]ತೇಂಕುತಲಿ
ಇಂದು ನಿಂದಿರಿಸಿದೊಡೆ ನಿಮ್ಮನು
ಕೊಂದು ಕೆಡಹುವೆವೆನುತಲಾಗಳು
ಹಿಂದೆ ಮುಂದಿರಿಸಿದರು [೮][ತಂ][೮]ತಮ್ಮಿಷ್ಟಿಗೋಲಗಳ ॥೫೫॥

೧–೧ ಸೋದಕೆ (ಕ,ಮ) ೨–೨ ಗಿದ (ಕ,ಮ) ೩–೩ x(ಕ,ಮ) ೪–೪ x(ಕ,ಮ) ೫–೫x(ಕ ೬–೬ x(ಕ,ಮ) ೭–೭ x(ಕ,ಮ) ೮–೮x(ಕ,ಮ)

ಎನಲು ಮತ್ತಂಧಕರು ತಿರುಗಿದ
ರೆನಲು ಸಂವರಿಸಿದರು ಧೋತ್ರವ
ಕನಲಿ ತೆಗೆದವರಿಷ್ಟಿಗೋಲಾದರದಿನಂದೆಯ್ದೆ
ಆನಪಗರಪುವೆವೆನುತಲಾ ನಡು
ವಿನೊಳು ಚಾಚಿದರಂದು ಹಸ್ತವ
ಇನಿತರಿಂ[೧][ಮೇಲ್ ಮತ್ತೆಯೂ][೧] ತಿರುಗಿದರು ಮೋಹರಿಸಿ ॥೫೬॥

ಕೇಶವನ ಕೆಡಹಿದರು ವಿಠ್ಠಲ
ನೋಸರಿಸಿ ಬದುಕಿದನು ಹೊಸ ಜೋ
ಯಿಸನೋಡಿದ ಮಾಧವನ ಲೇಸಾಗಿ ಗುದ್ದಿದರು
ಬೇಸರಿಸಿ ವಿದ್ವಾಂಸರನು ನೆರೆ
ಘಾಸಿ ಮಾಡಿದರೆಳೆದು ಕೆಸರೊಳು
ಹೇಸಿ[೨][ಗು][೨]ರುಡರೆಗೇನ ಮಾಡುವೆವೆನುತಲವುಡೊತ್ತಿ ॥೫೭॥

ನಮ್ಮ ಹೇಸಿಗಳೆಂಬುದದು ದಿಟ
ನಿಮ್ಮ ಚೊಕ್ಕಟ ಕಾಣಬಾರದೆ
ಕೆಮ್ಮಿ ಕೇಕರಿಸುತ್ತಲುಗುಳುವ ತುತ್ತನುಂಬುವಿರಿ
ಬೊಮ್ಮರಸಪಂಡಿತರ ಮನೆಯಲಿ
ನಮ್ಮಗಲ ಹೂರಿಗೆಯ ಕದ್ದಿರಿ
ಸುಮ್ಮನಿರಿ ನಮ್ಮೊಡನೆ ಮಚ್ಚರಿಸುವುದು ಲೇಸಲ್ಲ ॥೫೮॥

ಎತ್ತ ನೃಪತಿಯ ದಾನವಿದು ನಿಮ
ಗೆತ್ತ ಜಗಳವಿದೇಕೆನುತಲಾ
ಸುತ್ತಿ ನಿಂದಿರ್ದವರು ಮರುಳಾಡಿದರು ತಮತಮಗೆ
ಇತ್ತ ಗೋದಾನಗಳ ತೆರನರಿ
ತಿತ್ತು ಸಂತವ ಮಾಡಿದರು ಮ
ಧ್ಯಸ್ಥರಾಗಳೆ ಕಳುಹಿದರು ಮನೆಗಾಗಿ ಮತ್ತಿತ್ತ ॥೫೯॥

೧-೧ ರಿಂ ಮೇಲೆ ಮತ್ತೆ (ಕ,ಮ) ೨-೨ ಗ (ಕ,ಮ)

ಭೂಸುರರಿ[೧][ಗಾ][೧] ದಾನಗಳನಿ
ತ್ತಾ ಸಮಯದೊಳು ಬಂ[೨][ದ][೨] ನಾನಾ
[೩][ದೇಶ][೩] ದೇಶಾಂತರದೊಳಗ್ಗದ ರಾಯರನು ಬೇ[೪][ಡಿ][೪]
ಈ ಸಕಲ ಕಲೆಯೊಳಗೆ ಪರಿಚಿತ
ರಾ ಸಹಾನಿಯ ಸಂಬಭಟ್ಟರು
[೫][ಓಸರಿಸಿದರು ಅಂದು][೫] ಬಿಜ್ಜಣರಾಯನೊಲಗಕೆ ॥೬೦॥

ಇಟ್ಟನೊಸಲ ತ್ರಿರೇಖಗಂಧದ
ಕಟ್ಟಿದುಜ್ಜಲ ಕೈಪು ಮೈಯೊಳು
ದಟ್ಟಯಿಸಿದ ವಿಭೂತಿ ಭೂಷಣರೇ [೬]ಖ[೬]ಜಡೆಗಳಲ್ಲಿ
ನೆಟ್ಟನಾ ಹುಲಿದೊವಲಿನಿಂದಳ
ವಟ್ಟ ಕೊರಲೊಳು ಜೋಗವಟ್ಟಗೆ
[೭][ಯಷ್ಟಿ][೭]ಕರದೊಲ[೮][ಗೆ][೮]ಸೆವ [೯][ಲಾ][೯] ಕುಳವೆರಸಿ ನಿಂದಿರ್ದು ॥೬೧॥

ಹೊದೆದ [೧೦][ಕಾಷಾಯಾಂಬರದ ಚೀ
ರದ ಸು][೧೦] ಭಸ್ಮದ ಕಕ್ಷಪಾಳದ
ಪುದಿವ ಬ್ರಹ್ಮ [೧೧][ಶ್ಚರ್ಯ ವೇದೆ][೧೧] ಜ್ಞೋಪವೀತಗಳು
ಅದಟ ಬಿಜ್ಜಣರಾಯ ಕುಳ್ಳಿ
ರ್ದಿದಿರಿನೊಳು ನಿಂದಿರ್ದು ಮತ್ತಾ
ಮುದದಿ ದೇವಾಂಗವ ನಿವಾಳಿಸಿ ಬಿಟ್ಟರಿಕ್ಕೆಲಕೆ ॥೬೨॥

ಶರನಿಧಿಯ ದಿಕ್ಕರಿಯ ಕುಲಗಿರಿ
ಧರೆಯನಂಬರ ಚಂದ್ರಸೂರ್ಯರ
ಸುರಪ ಮೊದಲಾದಷ್ಟದಿಕ್ಪಾಲಕ[೧೨][ರ][೧೨]ಹೊಗಳಿದರು
ಸರಸಿರುಹ ಮುರವೈರಿ ರುದ್ರನ
ಬಿರುದ ಹೊಗಳಿದರಂದು ತದನಂ
ತರದೊಳೆಪ್ಪತ್ತೇಳು ಸಿಂಹಾಸನವ ಹೊಗಳಿದರು ॥೬೩॥

೧–೧ ಗೋ(ಕ,ಮ) ೨–೨ ದು(ಕ,ಮ) ೩–೩ x(ಕ,ಮ) ೪–೪ ಡೆ(ಕ,ಮ) ೫–೫ ಆಸರಿಸಿದರಂದು(ಕ,ಮ) ೬–೬ ಕ(ಕ) ೭–೭ ದೃಷ್ಟಿ(ಕ,ಮ) ೮–೮ x(ಕ,ಮ) ೯–೯ ವಾ(ಕ,ಮ) ೧೦–೧೦ ಕಾಶಾಂಬರ ಚೀವರಿದ (ಕ,ಮ) ೧೧–೧೧ ಚರ್ಯವೇದ(ಕ,ಮ) ೧೨–೧೨ ರು(ಕ,ಮ)

ಕೃತಯುಗ ತ್ರೇತಾಯುಗದೊಳ
ಪ್ರತಿಮರಾಯರ ಹೊಗಳಿದರು ಮ
ತ್ತತುಳಬಲ ದ್ವಾಪರದ ಕಲಿಯುಗದರಸುಗಳ ಹೊಗಳಿ
ಕ್ಷಿತಿ[೧][ಪತಿಗಳಾನ್ವಯವವನು][೧]ಪ
ದ್ಧತಿಯೊಳನುಕ್ರಮದಿಂದ ಹೊಗಳಿದ
ರತಿ ಮುದದಿ ಚಂಡೇಶಪುತ್ರರ ಮತಿಯನೇನೆಂಬೆ ॥೬೪॥

ಸೋಮ ಸೂರ್ಯ[೨][ರ][೨] ವಂಶ ಮೊದಲಾ
ದಾ ಮಹಾಛತ್ತೀಸರಾಯ ಸ
ನಾಮ ಬಿರುದಾವಳಿಯ ಹೊಗಳಿ ಸಮಸ್ತ ರಾಯರೊಳು
ಈ ಮ [೩][ಹೀ][೩]ಗಪ್ರತಿಮನೆನಿ[೪][ಪ]ನಿ
ಸ್ಸೀಮಪುರುಷ [೫][ನ][೫] ಗಂಡರಾದಿ
ತ್ಯಾಮಹೀಶನ ಹೊಗಳಿ ತದನಂತರದಿ ಬಿಜ್ಜಣನ ॥೬೫॥

ಬಿಜ್ಜಣಾಧಿಪ ನಿಮ್ಮ ಸೈನ್ಯದ
[೬][ಹಜ್ಜೆಗಿಲ್ಲರಿ ನೃಪರು][೬] ಮಹಿಯೊಳು
ಅರ್ಜುನನು ಸರಿಯಲ್ಲ ನಿಮ್ಮಯ [೭][ಖಳ್ಗ][೭]ದೇಳಿಗೆಗೆ
ಅಜ್ಜರಾಯರ ಖ್ಯಾತಿಯೊಳು ಮಿಗೆ
ದೂಜ್ಜವೆನಿಸಿತು ನಿಮ್ಮ ಖ್ಯಾತಿಯ
[೮][ಧೂರ್ಜಟಿಯು][೮] ರಕ್ಷಿಸಲಿಯೆಂದಾಶೀರ್ವಚನವಿತ್ತು ॥೬೬॥

ನಮ್ಮ ಹೊಗಳುವುದಂತಿರಲಿ ಮ
ತ್ತೊಮ್ಮೆ ಹೊಗಳಿ ಸಮಸ್ತರಾಯರ
ಸುಮ್ಮನಿರವೇಳ್ದಾಗ ನೃಪನೋಲಗದೊಳುಲು[೯]ಹು[೯]ಗಳ
ಬ್ರಹ್ಮ ವಿಷ್ಣು ಮಹೇಶ ಮೊದಲಾ
ಗೆಮ್ಮ ಹೊಗಳಿದುದಿಲ್ಲ ರಾಯರ
ಹೆಮ್ಮೆಯೊಳಗಪ್ರತಿಮನೆಂದರು ಗಂಡರಾದಿತ್ಯ ॥೬೭॥

೧-೧ ಗಳನ್ಯಾಯವನು (ಕ) ಪರಿಗಳನ್ಯಾಯವನು(ಮ) ೨-೨ x(ಕ,ಮ) ೩-೩ ಹಿಮೆ (ಕ,ಮ) ೪-೪ ಸಿ(ಕ,ಮ) ೫-೫ ನು(ಕ,ಮ) ೬-೬ ಹಜ್ಜೆಗೆ ಬಿಲ್ಲರೀ ನೃಪರ(ಕ) ೭-೭ ಗಳ್ಳ(ಕ) ಗಳ್ಗ (ಮ) ೮-೮ ದುರ್ಜಯದಿ(ಕ,ಮ) ೯-೯ ಹೆ(ಕ)

ಅರಸು ಸೂಚಿಸಲಾಗ ತನ್ನಯ
ಬಳಿಯಲಿರ್ದಾ ಮಂತ್ರಿವರ್ಗಕೆ
ಪರಿಯ ಕೇಳಿದರೆಲ್ಲವೀಗಾಶ್ಚರ್ಯವೆಂದೆನುತ
ಪರಿಕಿಸಲುಬೇಕೆಂದು ಭಟ್ಟರ
ಕರೆದು ಕೇಳಿದನಾಗ ಬಿರುದಿನ
ದೊರೆಯದಾರೆಂದೆಮಗೆ ಪೇಳುವುದೆಂದು ಬಿಜ್ಜಣನು ॥೬೮॥

ಈ ಪುರದ ಪಶ್ಚಿಮದೊಳಾ ಕೊ
ಲ್ಲಾಪುರದರಸು ಗಂಡರಾದಿ
ತ್ಯಾ ಪರಮಸೌಶೀಲ ಮಹಿಮೊದ್ದಂಡಖಂಡನನ
ಕೋಪದೋಳಗರಿಭಟರು ನಾನಾ
ದ್ವೀಪದ್ವೀಪಾಂತರದೊಳಗೆ ನೆರೆ
ವ್ಯಾಪಿಸುತ್ತಂಜುವರು ಈತನ ಕೀರ್ತಿಕಾಂತಿಯೊಳು ॥೬೯॥

ಸುರಪನಾಗ್ನೇಯ[1][ಯಮ][1]ನೈರುತಿ
ವರುಣ ವಾಯುವ್ಯರ ಕುಬೇರನ
ಹರನ ದೆಸೆಗಳೊಳಿಲ್ಲರಸುಗಳು ನಾವರಿಯದವರು
ಬಿರುದ ಗಂಡರಸೂರ್ಯನೆಂಬೀ
[2]ನೊರಹ ಸಾರವಿರಲ್ಲವಿದು[2] ನಿ
ರ್ಧರವನೇನೇಕೆಂಬಿನೀ ಧರೆಯೊಳಗೆ ನಿಶ್ಚಯವೇ ॥೭೦॥

ಅಕ್ಷಿಲ್ಲ[3] ಬಿಜ್ಜಳರಾಯ ಕೇಳರ
ಸಿಲಲವೆಂಬೀ ಮಾತಿನ ಭ್ರಮೆ
ಸಲ್ಲದೆಲ್ಲಿಯು ಬೇಡೆನುತ್ತಿನ್ನೇಕೆ ಸಂದೇಹ
ಇಲ್ಲದಗ್ಗಲದ ಬಿರುದ ಹೊಗಳಿಯೆ
ಸೊಲ್ಲುಗೆಡಿಸಲು ಬೇಡ ನೀವೆ
ಬಲ್ಲಿರೆಂದನು ನೃಪಕಥೆಯೊಳರಸುವರೆ ಕಾಲುಗಳ ॥೭೧॥

೧-೧ ಮನ (ಕ,ಮ) ೨-೨ ನೊರಹುವಿಲ್ಲವಿದ(ಕ) ೩-೩ ಲ್ಲಿ (ಮ)

ಏಕೆ ಬಿಜ್ಜಣರಾಯ ನಮ್ಮೊಡ
ನೇಕೆ [೧][ಯು][೧]ಕುತಿಯ ಮಾತನಾ[೨][ಳ್ಪಿ][೨]ಯ
ನೇಕ ದೇಶಾಂತರ[೩][ವ][೩] ತಿರುಗಿ ಸಮಸ್ತರಾಯರೊಳ
ಧಿಕ ಗುಣನ[೪][ನ][೪] ಪ್ರತಿಮ[೫][ನನ್ನೀ][೫]
ಸಕಲಕಳವಿದ ಗಂಡರಾದಿ
ತ್ಯಂಕನೊಳು ಸರಿಗಾಣೆವೆಂದರು ವೀರವಿತರಣಕೆ ॥೭೨॥

ಅಸಮ ಸಾಸಿರರಾಯರೊಳು ಹೆ
ಬ್ಬಸಿಯ ಬಿರುದುಗಳೇಕೆ ತನ್ನಿ
ರ್ದೆಸೆ[೬][ಗೆ][೬]ಸಂದಿಹುದಲ್ಲದರಿಗಳ ಮುಂದೆ ಹೊಗಳಿದರೆ
ಅಸುವ [೭][ಕಳೇವುದು][೭] ತನ್ನನೀಗಳು
ವಿಷಮಲೋಚನ ಕಾವನೆನಲು
ಬ್ಬಸವ [೮][ಮಾಡದೆಯುಚ್ಚರಿಯಕೆ ಹಿಗ್ಗಿ][೮] ನಿಮಿಸದೊಳು ॥೭೩॥

ಆಸೆವಿಡಿ [೯][ದಿಹ][೯] ರಾಯ[೧೦] ಮನಕು
ಬ್ಬಸದ ರಾಯನು ಗಂಡರಾದಿ
ತ್ಯಸಮ ಬುರುದರೊಳಗ[೧೧][ವನ][೧೧] ಪ್ರತಿಮಪ್ರತಾಪನನು
ಹೆಸರ ಬೆಸಗೊಂಡಂಜಿ ನಮ್ಮನು
ಹುಸಿಗರನು ಮಾಡುವರೆ ಮಾತಿನ
ನುಸುಳುಗಂಡಿಗೆ ನುಸುಳುವರೆ ನಾವರಿಯೆವೆಂದವರು ॥೭೪॥

ಕೇಳು ಬಿಜ್ಜಣರಾಯ ನಮ್ಮೊಡ
ನಾಳಿಯಾಡಿದ[೧೨][ರೇ][೧೨]ನು ನಿನ್ನ
ರ್ದಾಳು ಕುದುರೆಯ ಬಲದ ಬಹಳವದಾರಿಗೇನಿಹುದು
ಕಾಳೆಗದೊಳತಿ ದಾಳಿಯೊಳು ಭೂ
ಪಾಳ[೧೩][ರೊಳು][೧೩] ಬಿರುದಾವಳಿಗಳೊಳ
ಗಾಳುತನಗಳನರಿಯಲಹುದೆಂದವರು ಮೂದಲಿ[೧೪][ಸೆ][೧೪] ॥೭೫॥

೧-೧ x(ಕ,ಮ) ೨-೨ ಡುವೆ(ಕ,ಮ) ೩-೩ x(ಕ,ಮ) ೪-೪ x(ಕ,ಮ) ೫-೫ ನೀ (ಕ,ಮ) ೬-೬ x(ಕ,ಮ)
೭-೭ ಕಳುವುದು(ಕ,ಮ) ೮-೮ ಮಾಡದೆನಚ್ಚರ್ಯರ್ಕೆ ಹಿದಿ(ಕ) ಮಾಡದೆನಚ್ಚರ್ಯರ್ಕೆ ಹಿಗ್ಗೆ(ಮ) ೯-೯ ದ(ಕ,ಮ)
೧೦+ ರಿಗೆ (ಕ,ಮ) ೧೧-೧೧ x(ಕ,ಮ) ೧೨-೧೨ ದೇ (ಕ,ಮ) ೧೩-೧೩ (ಕ,ಮ) ೧೪-೧೪ ಸಿ(ಕ,ಮ)

ಏನು ಕೊಟ್ಟನು ನಿಮಗೆ ಗಂಡರ
ಭಾನುವೆಂಬೀ ಬಿರುದು ಹೊಗಳಲ
ದೇನು ಕಾರ್ಯಾ ನಂಟನಹನೇ ನಿಮಗೆ ಸೋದರನೇ
ತಾನಹನು ಪರನಾರಿಸೋದರ
ಮಾನನಿಧಿಗಳ ನಂಡ ಗಂಡರ
ಗಾಣವೆಂದರು ಗಂಡರಾದಿತ್ಯರಿನ್ನೃಪಾಲರಿಗೆ ॥೭೬॥

ಏನು ಮಾಡಲಿ [೧][ಹೊಗಳುವರುದರ
ವನ್ನು][೧] [೨][ಕಾಂಕ್ಷೆಗೆ][೨] ಹಣವನಿತ್ತೊಡೆ
ದಾನಿಯೆಂದಾ ನರಿಗಳನು ಹರಿಕರಿಯ ಮಾಡುವರು
ಏನು ನಿಮಗೀ ಚಿಂತೆ ಗಂಡರ
ಭಾನುಸೂನುಗಲಾದರಾಗಲಿ
ತಾನೆ ಬಲ್ಲೆನೆನುತ್ತ ಬಿಜ್ಜಣರಾಯ ನಗುತೆಂದ ॥೭೭॥

ಅರ್ಥದಾಸೆ[೩][ಗೆ][೩] ಹೊಗಳುವವರು ಸ
ಮಸ್ತ ಬೇಡುವರಹುದು ಚಂಡಿ
ಪುತ್ರರಾದವರರ್ಥದಾಸೆಯೊಳಲ್ಲ ಹೊಗಳುವರು
ಇತ್ತ ರಾಯರ ಬೇಡಿ ಕುಡದರಿ
ಗಿತ್ತು ಬಲ್ಲೆವು [೪][ಮೇಣು][೪]ಗಂಡರ
ದಿತ್ಯರಾಯನ ಮನೆಯ [೫][ಭಟ್ಟರು][೫] ಕೇಳು ನಾವೆನಲು ॥೭೮॥

ಆರಮನೆಯವರಾದರಾಗಿ ವಿ
ಚಾರವಿಲ್ಲ[೬][ದೆ][೬] ಬಿರುದು ಗಂಡರ
ಸೂರಿಯನು ನೀವೆಂದೊಡದು ನಿರ್ಧಾರವಾದಪುದೇ
ಪಾರಗುಣಗಳ ಹೊಗಳಲಹುದೀ
ಧಾರಿಣಿಯೊಳೀ ಬಿರುದ ಕೇಳಿದ
ಡಾರು ಮುನಿಯರು ನಿಮಗೆ ನಿಮ್ಮರಸಿಂಗೆ ನಿಮಿಷದೊಳು ॥೭೯॥

೧–೧ ಹೋಗಳುವವರುದರವನು (ಕ,ಮ) ೨–೨ ಕೊಂಕೆ(ಕ) ೩–೩ ಸಿಗಳಿ(ಕ,ಮ) ೪–೪ x (ಕ,ಮ) ೫–೫ ಭಂಟರು(ಕ,ಮ) ೬–೬ ದ(ಕ,ಮ)

ಮುನಿದಡೇನಹಂದಿನನ ತೇಜಕೆ
ಘನಪಥದ ತಾರಾಗಣಂಗಳು
ಮನದ ಬಡವನ ಕೋಪವವುಡಿಗೆ ಮಿಳ್ತು ಕೇಳೆನುತ
ತನಗೆ ಬಲ್ಲಿದರೊಡನೆ ಸೆಣಸಿದ
ಮುನಿಸು ಮಾಡುವುದೇನು ಕನಸಿನ
ಧನದ ಹೆಮ್ಮೆಗೆ ಬೆರತಡೇನು ಸದರ್ಥ ತನಗಹು[ದೇ] ॥೮೦॥

ಬರಿಯ ಮಾತುಗಳೇಕೆ ಬಿರುದಿನ
ಹೊರೆಗೆಯನು ಸಾರೆಂದು ನಮ್ಮೊಳು
ಕುರುಹನರಿಪುವೊಡೆಂದು ಬಿಜ್ಜಣರಾಯ ಕೈಮುಗಿದ
ಉರುವ ರಾಯರೊಳೆಲ್ಲರಿಂದಾ
ಮೆರೆವ ರಾಯನು ಗಂಡ[೧][ದಿನಪಗೆ][೧]
ಸರಿಯ [೨][ಕಾಣೆವು ಎಂದರವರು][೨] ವೀರವಿತರಣಕೆ ॥೮೧॥

ಕರೆದು ಭಟ್ಟರನಾಗ ಬಿಜ್ಜಣ
ಹೊರೆಯೊಳಿಕ್ಕಿದ ಗದ್ದುಗೆಯೊಳವ
ತರಿಸಿ ಕುಳ್ಳಿತು ತನ್ನ ಗದ್ದುಗೆಗವರ ಕುಳ್ಳಿರಿಸಿ
ಕರವ ಮುಗಿದನು ಚಂಡಿಪುತ್ರರಿ
[೩][ಗ][೩] ರಿದೆನಿಪ ಸಪ್ತಾಂಗಮಿತ್ತನು
ಖರೆಯ ಹೇಳೆಂದೆನುತ ಬಹುವಾದಗಳ ಬಿಡಿಸಿದನು ॥೮೨॥

ಎಂದ ಮಾತಿನ ಹಿಂಚು ಮುಂಚಿನೂ
ಳಂದು ಬಿದ್ದುದು ವಸ್ತ್ರಭೂಷಣ
ಮಂದಿರದೊಳಿಟ್ಟ [೪][ಯ್ಸ][೪] ಗಳಿಗೆಯ ಮೇಲೆ ಗಳಿಗೆಗಳು
ಚೆಂದ ಚೆಂದದ ಬಣ್ಣಗಳನೊಲ
ವಿಂದ [೫][ಇ][೫]ಷ್ಟರು ರಾಜಪುತ್ರರು
ಹಿಂದೆ ಮುಂದೆನದಿ[೬][ತ್ತರವದಿ]ರು ಸಕಳಪರಿವಾರ ॥೮೩॥

೧–೧ ರಾದಿತ್ಯನೊಳ್ (ಕ,ಮ) ೨–೨ ಗಾಣೆವೆಂದರು (ಕ,ಮ) ೩–೩ x (ಕ,ಮ) ೪–೪ ಯ್ಸ (ಕ,ಮ) ಬಿ (ಕ,ಮ)
೬–೬ ತ್ತೂ (ಕ) ತ್ತ (ಮ)

ಸಂಗಡದ ನಾಗಾದಿಗಳು ಕೆಲ
ವಿಂಗಿಸಿದರಾ ವಸ್ತ್ರಚಯವನು
ತುಂಗವಾಹನ ಬಂದುದಾಗಳೆ ರಾಯನೊಲುಮೆಯಲಿ
ಪೊಂಗಳಸ ದರ್ಪಣವ ಪಿಡಿದಿ
ರ್ದಂಗನೆಯರೊಳು ವಿವಿಧ ವಾದ್ಯದಿ
ಮಂಗಳಾರವವೆ[೧][ಸಗಿತೋ][೧]ಲಗಶಾಲೆಯೊಳಗಾಗಿ ॥೮೪॥

ಆಗ ಬಿಜ್ಜಣರಾಯ ಭಟ್ಟರ
ಬೇಗದಿಂ ಗಜವೇರಿಸಿದನನು
ರಾಗದಿಂದಂಗಡಿಗಳೊಳಗುತ್ಸವದಿ ಮೆರೆಸಿದನು
ಮೂಗಿನೊಳು ಕೈಯಿಟ್ಟು ವಿಸ್ಮಯ
ವಾಗ ಪಡೆದುದು ಸಕಲ ಪರಿಜನ
[೨][ಬೇಗ ಪರಿವಾರೆಸಗಿತುತ್ಸಹಕ್ಕೆ][೨] ತಕ್ಕುದನು ॥೮೫॥

ಮೆರೆದು ಬಂದಾ ಭಟ್ಟರಿಗೆ ಮನ
ಕುರುವ ವಸ್ತ್ರಾಭರಣಚಯವನು
ತೆರಹುಗಾಣಿಸಿಕೊಳ್ಳದಿತ್ತನು ಬಿಜ್ಜಣಾಧಿಪನು
ಹೊರಗೆ ಘಳಿಯಾರದಲಿ ಹೊಯ್ದುವು
ಕುರುಹಿನಿಂ ಮಧ್ಯಾಹ್ನದಿಂ ಮೇ
ಲೆರಡು ಗಳಿಗೆಗಳಾದುದನು ಸೂಚಿಸಿದರರಸಂಗೆ ॥೮೬॥

ಆರಯಿದು ನೃಪನೋಲಗದೊಳಂ
ದೋರಣದಿ ಕುಳ್ಳಿರ್ದ ಸುಭಟರ
ಪಾರಮಹಿಮರನಮಲ ಕುಲಜರನುಭಯಭೂಷಣರ
ಕಾರಣಿಕರ ಕುಶಲವಿದ್ಯಾ
ಧಾರಕರ [೩][ಪ][೩] ರಿಹಾಸಕರನಾ
ಚಾರಗುಣಿಗಳ ಬಹಳವ ನಿರೀಕ್ಷಿಸಿ [೪][ದ][೪]ನೊಲವಿಂದ ॥೮೭॥

೧–೧ ನಿಸಿದೋ (ಕ,ಮ) ೨–೨ ವೇಗೆದರಿವರರಿಸಗಿದುತ್ಸಾಹಕ್ಕ(ಕ,ಮ) ೩–೩ ಪಿ(ಕ,ಮ) ೪–೪ x (ಕ,ಮ)

ಅವರ ಕ್ರಮದಂತರವನರಿತಾ
ಗವರಿಗಿತ್ತನು ವೀಳೆಯಂಗಳ
ನವರ ಕಳುಹಿದನುಚಿತ ವಚನದ ಮೇಲೆ ಬಹುಜನರ
ವಿವಿಧ ವಿದ್ಯಾಧಿಕರ ನೆರವಿಯೊ
ಳವರ ಕೈವಿಡಿದಿದ್ದನಾಗಳು
ಅವನಿಪತಿ ಚಂಡೀಶಪುತ್ರರವೆರಸಿ ಭರದಿಂದ ॥೮೮॥

ಎದ್ದನೋಲಗದಿಂದ ಬಿಜ್ಜಣ
ನಿರ್ದೆಸೆಯೊಳಿರ್ದಖಿಳ ಜನದಿಂ
೧[ದೆ]೧ರ್ದು ಕೈಮುಗಿದವರು ಪೊಡವಡಲವರ ಕಳುಹಿದನು
ತೀರ್ದುದೋಲಗವೆಂದು ಕಹಳೆಗೆ
೨[ಳಾರ್ದುದೋಲಗವೆಂದು ಕಹಳೆಗ
೨[ಳಾರ್ದವಿಸಿದವು]೨ ದೆಸೆದೆಸೆಯೊಳು ಸು
ವಿದ್ಯರೊಗ್ಗಿನಲೆಯ್ದೆ ಬಂದ ನಿಜಾಲಯಕೆ ನೃಪತಿ ॥೮೯॥

ಮುಂದೆ ಬಾಗಿಲ ಕಾ ೩[ಯುವವ]೩ರಿವ
ರೆಂದು ಬಂದವರಲ್ಲ ನೃಪತಿಗೆ
ತಂದರೇನನು ನಂಟರೀಗಹರಿವರು ಗುರುವೆನುತ
ಸಂದೆಯುವದೇಕೆನುತ ಮನದೊಳು
ನಿಂದು ಹಿಂದಕೆ ಸಾರ್ದು ಪೊಡಮಡ
ಲಂ೪[ದವೆ]೪ಯ್ದೆ ಲಕ್ಷ್ಮೀನಿವಾಸದೊಳೊಸೆದು ಕುಳ್ಳಿರ್ದು ॥೯೦॥

ಬಂದು ಬಿಜ್ಜಣರಾಯಗೆ ಕ್ರಮ
ದಿಂದಲೆತ್ತಿದರಾರತಿಗಳನು
ಕುಂದದಾರತಿ ಹೇಮಕಳಸದಿ ತೀವಿದಂಬುವಿನಿಂ
ತಂದು ಪಡಿಗವನಿಟ್ಟು ಪಾದದ
ನಂದು ಪ್ರಕ್ಷಾಲಿಸಿದರಾಗಳು
ಬಂದ ಮಣಿಪಾದುಕದಿ ಭೋಜನಶಾಲೆಯೊಳಗಾಗ ॥೯೧॥

೧-೧ ದಿ(ಕ,ಮ) ೨-೨ ಳದಲಿಸಿದ್ದವು(ಕ,ಮ) ೩-೩ ವ(ಕ,ಮ) ೪-೪ ದೆ (ಕ,ಮ)

ಕಾಣಬಾರದ ತೆರೆಯೊಳಿಕ್ಕಿದ
ಟಾಣದೇವಿಗೆ ಬೆಳಗಲಾ ಹರಿ
ವಾಣಗಳನೋರಣಿಸಿದ [೧][ರು ಅ][೧]ಡ್ಡಣಿಗೆಗಳ ಮೇಲೆ
ತ್ರಾಣದಂತಸ್ಥವನರಿತು ದಿ
ವ್ಯಾನ್ನ ಭಕ್ಷ್ಯಾದಿಗಳ ಬಡಿಸಲು
ಬಾಣಸಿಗನವಸರವೆನಲು ಭೋಜನಕೆ ತೆರಳಿದನು ॥೯೨॥

ಒಡನೆ ನೃಪತಿಯು ಚಂಡಿಪುತ್ರ [೨][ರ][೨]
ಗಡಣದಿಂದ ಸಪಂತಿಯೊಳಗಾ
ತಡೆಯದಾರೋಗಣೆಯ ಮೇಲುಪ್ಪಾರತಿಯ ನೋ[೩][ಡೆ][೩]
ಒಡನೆ ಪಡಿಗವನಿಟ್ಟವರು ಮ
ತ್ತೊಡನೆ ಕರಿವಟ್ಟುಗಳ ನೀಡಿದ
ರೊಡನೆ ಕರವದನಂಗಳಿಗೆ ಕಳಸಾಂಬುಗಳನೆರೆದು ॥೯೩॥

ಭೋಜನದ ಕಡೆಯವಸರದವರು
ಓಜೆಯಿಂದವೆ ನೀಡಿದರು ಮಹ
ರಾಜಗಾಗಳೆ ಹಸ್ತಮುಖದಟ್ಟದ ಸುವಸ್ತ್ರವನು
ಆ ಜಲವ ತೊಡೆಯುತ್ತ ಸೌಗಂ
ಧಾಜಲವನುಂ ಪಿಡಿದ ಕಲ್ಪವ
ಹೀಜದಂದದಿ [೪][ಬಂದು][೪] ಲಕ್ಷ್ಮೀಮಂಟಪದೊಳಾಗ ॥೯೪॥

ಅಂದು ಬಿಜ್ಜಣರಾಯ ಕುಳ್ಳಿರ
[೫][ಲೆಂದು][೫] ಮುತ್ತಿನ ಗದ್ದುಗೆಯನೊಲ
ವಿಂದೆ ತಂದಿಕ್ಕಿದರು ಲಕುಮೀಮಂಟಪದೊಳಾಗ
ಬಂದು ಕುಳ್ಳಿದನರಸು ಹಡಪದ
ಚಂದ್ರಮುಖಿಯರು ನೀ[೬][ಡೆ][೬] ಕರ್ಪೂರ
ದಿಂದ ವೀಳೆಯಗಳನು ನೃಪತಿಗೆ ಚಂಡಿಪುತ್ರರಿಗೆ ॥೯೫॥

೧–೧ ವರ(ಕ,ಮ) ೨–೨ ರು (ಕ,ಮ) ೩–೩ ಡಿ(ಕ,ಮ) ೪–೪ x (ಕ,ಮ) ೫–೫– ಲು (ಕ,ಮ) ೬–೬ ಡಿ(ಕ,ಮ)

ಮನ್ನಣೆಯನರಿತಾಗ ಭ[೧][ಟ್ಟ][೧]ರು
ಮುನ್ನವೇ ಹೊಗಳಿದರು ಬಿಜ್ಜಣ
ನಿನ್ನ ಪಾಟೆಯೊಳಾದ ರಾಯರ ಕಾಣೆವೆಂದೆನಲು
ಚೆನ್ನ ಮಾಡಿದಿರೆನುತ ಗುಣಸಂ
ಪನ್ನ ನುಡಿದನು ಲೋಕದೊಳು ಮ
ತ್ತನ್ಯರಾಯರೊಳೇನ ಹೋಲುವವೆನುತ ಕೈಮುಗಿದು ॥೯೬॥

ತರಿಸಿ ದುಕುಲಾಂಬರವನಿಜ್ಞಾ
ಸಿರದ ಮೇಲ್ಯೆನೂರು ಹೊನ್ನನು
ಭರದಿನಿತ್ತನು ಬಿಜ್ಜಣಾಧಿಪ ಚಂಡಿಪುತ್ರರಿಗೆ
ಹೊರೆಯಲಿಹ ನಾಗರಿಗಳಿಗೆ ತಂ
ದರಸು ಬಣ್ಣದ ವಸ್ತ್ರವನು ಹ
ನ್ನೆರಡು ದಿಂಡನು ಹೊರಿಸಿ ಹಳುಹಿದನವರ ಬೀಡಿಕೆಗೆ ॥೯೭॥

ತ್ಯಾಗವಿದು ನಿಮಗಲ್ಲ ದಾರಿಯ
ಹೋಗಿ ಬಹ ವೀಳೆಯದ ವೆಚ್ಚದೊ
ಳಾಗಬೇಕೆಂದಿತ್ತುದಲ್ಲದೆ ಗಹನವಲ್ಲವಿದು
ಆಗ ಭಟ್ಟರನಾದರಿಸಿ ಗುಣ
ಸಾಗರನು ಬಿಜ್ಜಣನೃಪಾಲನು
ಬೇಗದಿಂ ಮನ್ನಿಸಿದ ಚಂಡೀಪುತ್ರರ [೨][ನು][೨] ಭರದಿಂ ॥೯೮॥

ಸಾರತರ ಸೌಗಂಧವೆನೆ ಕ
ರ್ಪೂರ ಚಂದನ ಕುಂಕುಮವ ಪ
ನ್ನೀರ ಚೆಂಬುಜವಾದಿ ಕತ್ತುರಿಯ ಮಣಿಹಾರವನು
ಚಾರು ಸೆಲ್ಲರಸವ ಪುಷ್ಪ [೩][ವ][೩]
ಸಾರತೈಲವನಂಗಲೇಪನ
ಕಾರಣ[೪][ದ][೪] ವಸ್ತುಗಳನಿತ್ತಾದರದಿ ಮನ್ನಿಸಿದ ॥೯೯॥

೧-೧ ಟ (ಕ,ಮ) ೨-೨ x(ಕ,ಮ) ೩-೩ x(ಕ,ಮ) ೪-೪ x(ಕ,ಮ)

ನಿಮ್ಮ ರಾಯರ ಬಿರುದಿನಗ್ಗದ
ಹೆಮ್ಮೆಯನು ನೋಡುವ ೧[ಆಪೇಕ್ಷೆಯ]೧
ದೆಮ್ಮ ಚಿತ್ತದಲುಂಟು ನೀವರಿ ೨[ಯು]೨ವುದು ಚಿತ್ತದಲಿ
ಸುಮ್ಮನಿರು ಬಿಜ್ಜಣನೃಪಾಲಕ
ಬ್ರಹ್ಮವಿಷ್ಣುಮಹೇಶ ಹಳಚಿದೊ
ಡೊಮ್ಮೆ ಕಾಳಗವೀವ ಮೇಲಾವರಿಯೆವೆಂದೆನಲು ॥೧೦೦॥

ಅರಸು ಸಂತೋಷವ೩[ವ]೩ನೆಯ್ದಿ ಮ
ತ್ತರಸುಗಳ ಕೊಂಡಾಡುವರೆ ಭ
ಟ್ಟರೊಳುವಿವರಗ್ಗಳೆಯರೆಂದನು ತನ್ನ ಮನದೊಳಗೆ
ಕರವ ಮುಗಿದನು ಗದ್ದುಗೆಯೊಳಿ
ದ್ದರಸು ನಿಂದಿರ್ದವರ ಕಳುಹಿದ
ತರಣಿ ಸಾರಿದ ಪಶ್ಚಿಮಾದ್ರಿಯ ಹೊರೆಯೊಳಂತಾಗ ॥೧೦೧॥

ಸಾರಿದುದು ಸಂಧ್ಯಾನಿನಾದದೊ
ಳಾರಿದುದು ಭೂತಳದ ೪[ಉ]೪ಷ್ಣವು
ಚಾರಿದುದು ಪದ್ಮಿನಿಯ ಸಿರಿ ಕುವಲಯಕೆ ಪೆಂಪೇರೆ
ಬೀರಿ ಪಾರಿದುದಾ ರ೫[ಥಾಂ]೫ಗ೬[ವು]೬
ಮೀರಿದುದು ಜಾರೆಯರಮ ೭[ರ]೭ ಕಲೆ
ತೋರಿದುದು ಕತ್ತಲೆಯ ಮುಖವಿನನಸ್ತಮಿಸಿದಾಗ ॥೧೦೨॥

ಸಾರಿದನು ಗಣಿಕಾಜನಕೆ ಮೆ
ಯ್ದೋರಲೆಂದಂಗಜ೮[ನು]೮ ವಿಟರಿಗೆ
ಬೀರಿದನು ಕುಸುಮಾಸ್ತ್ರಗಳ ೯[ನಾವಾವ]೯ ವೀಥಿಯಲಿ
ತೋರಿದು ತಾಪವ ವಿಯೋಗಿಗೆ
ಮೀರಿ ನೆನಹಿನ ಮನದ ಚಿತ್ತವ
ಸೂರೆಗೊಂಡನು ರಾಜರುಗಳಿಬ್ಬರ ವಿಸಂಧಿಯಲಿ ॥೧೦೩॥

೧–೧ x(ಕ,ಮ) ೨–೨ x(ಕ,ಮ) ೩–೩x(ಕ,ಮ) ೪–೪ ಮು(ಕ,ಮ) ೫–೫ ಧಾಂ(ಕ,ಮ) ೬–೬ ಲೋ (ಕ,ಮ) ೭–೭ ರಿ(ಕ,ಮ) ೮–೮ ನ(ಕ,ಮ) ೯–೯ ರಾವ(ಕ) ರಾಮ(ಮ)

ನೋ[೧][ಡೆ][೧] ಕುಳಿ ತೆವರೊಂದು ಮಟ್ಟವ
ಮಾಡಿದಂತಾದುದು ಮಹೀತಳ
ಕೂಡೆ ಗ[೨][ಗ][೨]ನವ ಬೆಚ್ಚವೊಲು [೩]ಸಂದಿಲ್ಲದಂತಾಗೆ[೩]
ಬೀಡು ಬಿಟ್ಟುದು ತಾರಗೆಯ[೪][ತು][೪]ಳ
ಕಾಡಿದುದು ತಂಪಿನೊಳು ಲೋಕವು
ಮೂಡಣಾದ್ರಿಯೊಳಾಗ ಮೂಡಿದುದಿಂದುಮಂಡಲವು ॥೧೦೪॥

ಬಂದನಾ[೫][ಗ][೫] ಶಶಾಂಕನುತ್ಸವ
ದಿಂದ ಮಧ್ಯಸ್ಥಾನದೊಳು [೬][ನೆ][೬]ರೆ
ನಿಂದು ನೋಡಲು ಸಕಲಜನ ಮಗ್ನತೆಯೊಳಿರೆ ಕಂಡು
ಬಂದುದೆನ್ನಯ ಬರವೆನುತ ಮುಖ
ವಂ[೭][ದು][೭] ಬೆಳ್ಪೇರಿದೊಡೆ ಭೋರನೆ
ಬಂದು ಬಿದ್ದ ಶಶಾಂಕನಪರಾಂಬುಧಿಯೊಳಂದಾಗ ॥೧೦೫॥

ಒಡೆಯರಿಲ್ಲಂದಾಗ ಲೋಕ
ಕ್ಕಡರಿದನು ಪೂರ್ವಾದ್ರಿಯೊಳು ಮಿಗೆ
ತಡೆಯದಾಗಳೆ ರಥವನೆಸಗಿದನರುಣ ಕಿರಣದಲಿ
ಜಡಿದುದಾ ಭೇರಿ [೮][ಯ][೮] ನಿನಾದದೊ
ಳೊಡನೆ ಶಂಖಧ್ವನಿಯ ಬಹುಳತೆ
ಬಿಡದೆ ಮೊಳಗಿ[೯][ದವ][೯]ಖಿಲ ದೇವದ್ವಾರದೊಳಗೆಯ್ದೆ ॥೧೦೬॥

ಸಕಲಜನದುತ್ಪತ್ತಿಸ್ಥಿತಿಲಯ
ಪ್ರಕಟವಾಗಲ[೧೦][ದಂ][೧೦]ದು ಲೋಕದೂ
ಳಖಿನ ಪುಣ್ಯಸ್ಥಿತಿಗತಿಯನರಿವುದಕೆ ದೃಷ್ಟಿಯಲಿ
ಮಕರಕೇತನ ಬೆಚ್ಚಿಸುತಲಾ
ಸುಕವಿಗಳ ಹೊಸಬಗೆಯ ಕಾವ್ಯ
ಪ್ರಕರವನು ಕಣ್ದೆ[ರ]ವೆಗೆಯ್ಯುತ್ತಿನನುದಯಗೆಯ್ದ ॥೧೦೭॥

೧-೧ ಡಿ (ಕ,ಮ) ೨-೨ (ಕ,ಮ) ೩-೩ ಸಂದಿತಾಗೆ(ಕ) ೪-೪ ತ (ಕ,ಮ) ೫-೫ x(ಕ,ಮ) ೬-೬ ವಿ (ಕ,ಮ)
೭-೭ ದ (ಕ,ಮ) ೮-೮ x(ಕ,ಮ) ೯-೯ ದುದ (ಕ,ಮ) ೧೦-೧೦ ದೆಂ (ಕ,ಮ)

ವಿನಯನಿಧಿ ಸಮ್ಯಕ್ತ್ವಯುಕ್ತನು
ಜಿನಪದಾಂಬುಜ ಮತ್ತಮಧುಕರ
ನನುಪಮೋನ್ನತಶೀಲಗುಣಸಂಪನ್ನನಪ್ರತಿಮ
ಘನಮಹಾಸಂಗರದೊಳಗೆ ಸಂ
ಹನನವುಳಿದೆಯ್ದಿದನು ಸ್ವರ್ಗ[೧][ವ[೧]]
[೨][ನನುನಯದಿ][೨] ಸಾಮಂತ ಕಥನಗೊಳೆರಡನೆಯ ಸಂಧಿ ॥೧೦೮॥

❖❖

೧–೧ ವನು (ಕ,ಮ) ೨–೨ x (ಕ,ಮ)

ಸಂಧಿ : ಮೂರು

ಗಂಡರಾದಿತ್ಯಾಂಕನೆನಲು
ದ್ದಂಡ ಬಿರುದಿಗೆ ಸೆಣಸಿ ಬಿಜ್ಜಣ
ಗಂಡನೆಸಗಿದನಸಮಬಲ[೧][ನ][೧]ದ್ಭುತವನೇನೆಂಬೆ ॥ಪಲ್ಲವಿ॥

ಅಂದು ಕಳುಹಿಸಿಕೊಂ[೨]ಡ[೨] ಭಟ್ಟರು
ಮುಂದೆ ಪಯಣದ ಮೇಲೆ ಪಯಣದೊ
ಳೊಂದು ದಿನ[೩][ದ][೩]ಲು ಪಯಣ ಮಧ್ಯದೊ[೪][ಳ್ನಿ][೪]ಲ್ಲದೆಯ್ತಂದು
ಬಂದು ಕೊಲ್ಲಾಪುರದರಸಿಗವ
ರಂದು ಸುದ್ದಿಯ ಹೇಳಿ ಬಿಜ್ಜಣ
ಬಂದನೆಂದರುಪಿದೊ[೫][ಡಮಾ][೫] ವೃತ್ತಾಂತವೇನೆಂ[೬][ದು] ॥೧॥

ಗಂಡರಾದಿತ್ಯಾಂಕನೆ[೭][ನುವು][೭]
ದ್ದಂಡ ಬಿರುದಿನ ಮಹಿಮೆಯನು ಷ
ಟ್ಖಂಡದೊಳು ಕೊಂಡಾಡಿ ಕಲ್ಯಾಣಕ್ಕೆ ಬಂದಾಗ
ಗಂಡುಗಲಿ ಬಿಜ್ಜಣನೃಪಾಲನ
ಕಂಡು ನಾವೀ ಬಿರುದ ಹೊಗಳಲು
ಕೊಂಡು ಮನದೊಳು ಕೋಪದಿಂ ನಡೆತಂದ ವೃತ್ತಾಂತ ॥೨॥

ಆಳು ಕುದುರೆಯ ಬಲದಿ ಬಿಜ್ಜಣ
ದಾಳಿಯನು ಬಹನೆಂಬ ಗರ್ವದ
ಮೇಳಕನುವನು ಕಾಂಬೆನೆಂದನು ಗಂಡರಾದಿತ್ಯ
ಭಾಳಲೋಚನನಾ[೮]ದೊಡಾ[೮]ಗಲಿ
ಕಾಳಗದೊಳೆನ್ನೊಡನೆ ಹಳಚಲು
ನಾಳೆ ಬರಲೆಂದೀಗ [೯][ಬರಲೆಂ][೯]ದೆನಲು ಮತ್ತಿತ್ತ ॥೩॥

೧–೧ ದ (ಕ,ಮ) ೨–೨ ಡು(ಕ) ೩–೩ x (ಕ,ಮ) ೪–೪ ಳಿ (ಕ,ಮ) ೫–೫– ಡೆಮೀ (ಕ,ಮ) ೬–೬ ದ (ಕ,ಮ) ೭–೭ ನಲು (ಕ,ಮ) ೮–೮ ದುದಾ (ಕ) ೯–೯ ಬಾರನೆಂ (ಕ) ಬಾರೆನೆ(ಮ)

೧[ಎ]೧ಂದಿನಂದದಿ ಬಿಜ್ಜಣಾಧಿಪ
ಬಂದು ಕುಳ್ಳಿತನೋಲಗದಿ ಕರ
ಸೆಂದನಾಗಳೆ ಮಂತ್ರಿಗಳನವಸರದವರ ಕೂಡೆ
ಎಂದ ಮಾತಿನ ಹಿಂಚುಮುಂಚಿನೊ
ಳಂದು ಪರಿ೨[ದು]೨ ಪ್ರಧಾನಿಗಳಿಗವ
೩[ರಿಂ]೩ದು ನೃಪನೀಕ್ಷಣದಿ ಬರವೇಳಿದನೆನಲ್ಕವರು ॥೪॥

ತ್ವರಿತದಿಂದೀಗರಸು ೪[ಕರೆ]೪ಸುವ
ಭರವಸವಿದೇನೆನುತ ಮನದೊಳು
ಕರೆಯ ಬಂದವಸರದವರ ಕೇಳಿದೊಡೆಯವರಾಗ
ದೊರೆಯ ಚಿತ್ತವರಾನು ಬಲ್ಲರು
ಪರಕಿಸುವುದೆಂದೆನಲು ಬೇಗದೊ
ಳುರವಣಿಸಿ ದಂಡಿಗೆಯೊಳೆಯ್ದಿದರಾಗ ನೃಪನೆಡೆಗೆ ॥೫॥

ಅಂದು ಬಿಜ್ಜಣರಾಯನಲ್ಲಿಗೆ
ಬಂದು ಕುಳಿತಿಹ ಮಂತ್ರಿಗಳಿಗರ
ಸೆಂದನಾಗಳೆ ಗಜತುರಗನರಬಲವ ನೆರಹೆನಲು
ಇಂದು ಹುಟ್ಟಿದ ಸುದ್ದಿ ಯಾವುದು
ಬಂದು ಕಾ೫[ದು]೫ವರಾರು ನಮ್ಮೊಡ
ನೆಂದು ಸೆಣಸುವರಿಲ್ಲವೆನೆ ೬[ನೀವರಿತುದಿಲೆಂದು]೬ ॥೬॥

ನಿನ್ನಿನೋಲಗದೊಳಗೆ ಭಟ್ಟರು
ಮುನ್ನಿನಗ್ಗದ ರಾಯರೊಳು ಮ
ತ್ತುನ್ನತ ಮಹೋದ್ದಂಡ ಗಂಡರಸೂರ್ಯನೆಂಬವನ
ನನ್ನ ಚಾವಡಿಯೊಳಗೆ ಹೊಗಳಿದ
ರಿನ್ನು ಕೊಲ್ಲಾಪುರಕೆ ದಾಳಿ ೭[ಯು]೭
ಸನ್ನಿಹಿತರಾಗೆನಲುಮವರಿಂತೆಂದರರಸಂಗೆ ॥೭॥

೧–೧ ಅಂ (ಕ,ಮ) ೨–೨ ದಂ (ಕ,ಮ) ೩–೩ ನಿಂ(ಕ,ಮ) ೪–೪ x(ಕ)ತರ (ಮ) ೫–೫ ಡು (ಕ) ೬–೬ ನೀವೆರತದಿಲೆಂದ (ಕ,ಮ) ೭–೭ ಯ (ಕ,ಮ)

ಬೂತುಗಳು ಕೊಂಡಾಡುವಗ್ಗದ
ಮಾತವರಿಗದು ಸಹಜ ಲೋಕದ
೧[ಭೀತರನು]೧ ದುರ್ಜನರ ನಿಸ್ಸೀಮರ೨ನು ಹೊಗಳುವರು
ಆತಗಳಿಗದು ನೈಜ ಕದನವ
ನೀ ತೆರದಿ ನೆರಹುವರು ನೃಪ೩ರಿ೩ಗೆ
ಮಾತನಾರ೪[ಯ್ಯ]೪ದು ಮಹೋತ್ತಮವೆಂದರರಸಿಂಗೆ ||೮||

ಎಮ್ಮೊಡನೆ ನಿಜಮಂತ್ರಶಕ್ತಿಯ
ಹೆಮ್ಮೆಯನು ತೋರದಿರಿ ಕಾಳಗ
ಕಮ್ಮೆವೆಂದೊಡದೇನು ಕುಂದಹು೫[ದದು]೫ ಪ್ರಧಾನರಿಗೆ
ನಿಮ್ಮ ಕೇಳುವುದಾವವು೬ಚಿತ೬ವಿ
ದೆಮ್ಮ ಮಹಿಮೆಗೆ ತಕ್ಕ ಬುದ್ಧಿಯ
ನಿರ್ಮಿಸಿದಿರೆಂದೆನಲು ಕೈಕೊಂಡವರು ಮನದೊಳಗೆ ||೯||

ದೇವರುಗಳೀ ಹದನ ನೆನೆದುದ
ನಾವು ಬಲ್ಲೆವದೇನು ಕಿರುಕುಳ
ಭಾವಕರು ನಿಮ್ಮಡಿಯ ಚಿತ್ತದ ಘನಮಹಾತ್ಮೆಯನು
ದೇವ ಬಿನ್ನಹವುಂಟು ಉದಯದ
ಜಾವದೊಳು ಚಿತ್ತಯಿಸು ಸೇನೆಯ
ದಾವ ಕಡೆಯಿಂ ಬಂದುದೆನೆ ನೆರಹುವೆವು ನಿಮಿಷದಲಿ ||೧೦||

೭[ಬರೆದು]೭ ರಾಯಲಸಗಳನು ಬೇಗದೊ
ಳರಸಿನಾಜ್ಞೆಯ ಮೇಲೆ ದೆರ್ಸೆದೆರ್ಸೆ
ಗಿರದೆ ಕಳುಹಿದರಾಗ ತಮ್ಮಯ ವರದ ದೊರೆಗಳಿಗೆ
ನರತುರಗ ಬಲವೆರಸಿ ಉದಯದೊ
ಳೆರಡು ಗಳಿಗೆಗೆ ಬಹುದುಮಿಲ್ಲಿಗೆ
ಭರದಿ ರಾಯಸಗಾಣುತವೆ ಸಂವರಿಸಿ ಬೇಗದೊಲು ||೧೧||

೧-೧ ನೀತರನು (ಕ) ನಿರಕನು(ಮ) ೨+ ವಿನೀತರ (ಕ,ಮ) ೩-೩ ತಿ (ಕ) ೪-೪ಯ್ದು(ಕ,ಮ) ೫-೫ ದೇ (ಕ,ಮ) ೬-೬ ಗ ಚಿತ್ತ (ಕ) ೭-೭ ಬಿರುದು(ಕ) ಬರುದು(ಮ) ೮+ ರ (ಕ) ೯-೯ x (ಕ)

ಕಾಣುತವೆ ರಾಯಸವ ದೊರೆಗಳು
ಕ್ಷೋಣಿಪತಿಗಂಜುವವೊಲಾಗಳು
[೧]ಹೂಣಿಸಿದ[೧] ಭೀತಿಂದ ಹೊಣಕೆಯ ನಾಯಕರು ಸಹಿತ
ಮಾಣದಗ್ಗದ ಸುಭಟರೆಯ್ದೆ ಕೃ
ಪಾಣ ಸಹಿತವೆ ಸಂಬರಿಸಿ ಕ
ಲ್ಯಾಣಕಾಗಳೆ ಬಂದುಬಿಟ್ಟರು ಸತ್ತುವಳಯದಲಿ ॥೧೨॥

ಮರುದಿವಸ ಬಿಜ್ಜಣನೃಪಾಲನು
ಹೊರವೊಡಲು ತಿದ್ದಿದುದು ವಾಯಸ
ನಿರಿಗೆಯಿದೆಡನಿದೆಇರಿನೊಳಗಾ ಗೌಳಿ ಸ್ವರದೋರೆ
ಹೊರಿಗೆಯಿಂದವೆ ಹಂಗ ವಾಮದ
ಗರಿಯ ತೋರುತ ಹಾಯ್ದೊಡಂತಾ
ತೆರದಿ ಬೆಂಬಳಿಯೊಳಗೆ ಹಾದುದು ಮೂಗಿ ಮುಂದೊಂದು ॥೧೩॥

ಹರಡಿ ಕೆಲೆದುದು ಬಾಮಭಾಗದೊ
ಳಿರದೆ ಪಿಂಗಲಿ ಬಿಗಿದು ಬಾಯ್ಕೊಂ
ಡುರು ಮುದದಿ ಮಯನಾಗಭೂಸ್ವರ[೨][ವನ್ನು][೨]ನುಡಿವುತಿರೆ
ಭರದಿ ಶಕುನವ ಬಲ್ಲವರನಂ
ದರಸು ನೋಡಿದೊಡವರು ಮತ್ತಾ
ಪಿರಿದು ಲೇಸಿದು ಶಕುನ ನಮಗೆ ಮುಹೂರ್ತಮುತ್ತಮವು ॥೧೪॥

ಎನಲು ಬಿಜ್ಜಣರಾಯ ಕೈಕೊಂ
ಡನುನಯದಿ ಗಜವೇರಿ ಪೊರಮ
[೩][ಟ್ಟ][೩] ನನುದಯದೊಳು ನೋಡಿ[೪][ದಂ ತನ್ನಯ ಮ][೪] ಹಾಬಲವ
ವನನಿಧಿಯು ನೆರೆ ಮೇರೆದಪ್ಪಿದು
ದೆನಲು ಕಂಡನು ಕಟಕವನು ಸ
ಜ್ಜನರುಮಿವರೆನಗೇಕೆ ತಪ್ಪುವರೆಂದ ಮಂತ್ರಿಗಳ ॥೧೫॥

೧–೧ ಹೂ.....ಸದ (ಕ) ೨–೨ ಮನು (ಕ,ಮ) ೩–೩ ಟ್ಟ (ಕ,ಮ) ೪–೪ ದ ತನ್ಮ (ಕ,ಮ)

ತಿರುಗಿ ನೋಡಲು ಕರಿನಿಕರ ಕುಲ
ಗಿರಿಯ ಸಾಲಂದದಲಿ ಮೇಘದ
ಹರವರಿಯೊಳುರವಣಿಪ ಹಯಮೋಹರದ ನಿಚಯದೊಳು
ಅರಸು ಮೆಲ್ಲನೆ ನಡೆಗೊಳಲು ಮಿಗೆ
ಜಡಿದುದಬ್ಜಭವಾಂಡ ಸೇನೆಯ
ಹೊರಳಿ ಮೋಹರಿಸಿದುದು ಕೊಲ್ಲಾಪುರದ ದೆಸೆಗಾಗಿ ॥೧೬॥

ದುರುಳ [೧]ಬಾ[೧]ರಿಕರೆಯ್ದೆ ಬಂದಾ
ಪುರದ ಸೂಳೆಯರೆಲ್ಲರನು ಸಂ
ವರಿಸಿ ಬರವೇಳಿದನೆನಲು ಬಿಜ್ಜಳನೃಪಾಲಕನು
ಇರದೆ ಸೂಳೆಯರೆಲ್ಲ ಗಳಿಸುವ
ಭರವಶದಿ ಸಂವರಿ[೨][ಸು][೨]ತಾಗಳೆ
ಅರಸಿನಾಜ್ಞೆಯ ಮೇಲೆ ಮೋಹರಿಸಿ [೩][ದರು][೩] ತಮತಮಗೆ ॥೧೭॥

ಕೇಳಿದತಿ ವೇಗದಲಿ ಜೀವಿತ
ದಾಳು ಬಾಡಿಗೆಯೆತ್ತು ಕಂಟಣಿ
ಜೋಡು ಗುಡಿಗಳ [೪]ಲಳಿಗೆ[೪] ಎಣ್ಣೆಯ ಕಟ್ಟ ದೀವಿಗೆಯ
[೫]ಜಾ[೫]ಳಿಗೆಯ ಕಿರು ಹೊರಸು ಕೌಂದಿಯ
ಮೇಲುವಾಸಿಕೆ ಹಳೆಯ ಹಚ್ಚಡ
ದೋಳಿ ಸೂಳಿಯರೆಯ್ದಿ ನಡೆದುದು ಪಾಳೆಯದೊಳಾಗ ॥೧೮॥

ಹಾಸುಮಂಚದ ಸುಪ್ಪತಿಗೆ ಕಿರಿ
ದೂಸ ಪಡಿಗದ ಹಡಪ ಗಿಂಡಿಯ
ಬೀಸಣಿಗೆ ಹಾಸಂಗಿ ಲೆತ್ತದ ಹಲಗೆ ಸಾರಿಗಳ
ಆಸುರದ ಕುಂಟಣಿಯರೊಳು ವಿ
ಶ್ವಾಸದೋಹಿಯ ಹಳೆಯ ಮಿಂಡರು
ವೇಶ್ಯೆಯರು ಸಂವರಿಸಿ ನಡೆದುದು ಪಾಳೆಯದೊಳಾಗ ॥೧೯॥

೧-೧ ಚಾ (ಮ) ೨-೨ ಸಿ (ಕ,ಮ) ೩-೩ ದುದು(ಕ,ಮ) ೪-೪ ಲಳೆ (ಕ,ಮ) ೫-೫ ಜೋ (ಕ)

ಒಡನೆ ನಾಕೆರಡೆತ್ತು ಕುದುರೆಯ
ಮಡಕೆ ಚರವಿಗೆ ಬೋನವಟ್ಟಿಗೆ
ನಿಡಿಯ ಹರಿವಾಣಗಳ ರವಯದ ಗುಣುಮ ಗಿಂಡಿಗಳ
ಪಡಿಗ ಹಡಪದ ಕಪಿ ಗಿಳಿಯ ಹೆ
ಗ್ಗುಡಿಯ ದೂಸದ ಸಖಿಯ[೧][ರೊಡನೆಯೆ][೧]
ಸಡಗರದ ಸೂಳೆಯರು ನಡೆದರು ಪಾಳೆಯದೊಳಾಗ ॥೨೦॥

ಖೂಳ ಸೂಳೆಯರೆಲ್ಲ ಚೂಣಿಯ
ದಾಳಿಯೊಳು ಸಂದಣಿಸಿ ನಡೆದುದು
ಆಳುಗಂಬಳಿ ಚಾಪೆ ಹಸೆ ಬೀಸಣಿಗೆ ಸಂವರಣೆ
ಹಾಳುದೇಗುಲ ಮೆಳೆಯ ಮ[೨]ರೆ[೨]ಯ ಕ
ಲ್ಲೋಳಿಯೊಳು . . . .
ಮಾಳದೊಚ್ಚಿಯಲೆಯ್ದೆ ಸಂದಣಿಸಿದುದು ತಮತಮಗೆ ॥೨೧॥

ಪಾಳೆಯದ ಹಂಗೇನು ಚೂಣೆಯ
ದಾಳಿಯೊಳು ನಮಗೇನು ಗಳಿಸುವ
ವೇಳೆಯಿದು ಪಟ್ಟಣದೊಳಗೆ ನೆರೆ ಸಂದಿ [೩][ಯೋಳಿಯಲಿ][೩]
ಹಾಳುಗೊಟ್ಟಿಗೆಯೊಳಗೆ ಮುದುಕರ
[೪]ಜಾ[೪]ಳವಿಸಿಕೊಂಡಿಹೆವೆನುತ ಮುದಿ
ಸೂಳೆಯರು ತಿರುಗಿದರು ಕೆಮ್ಮುತ ಕೋಲನೂರುತಲಿ ॥೨೨॥

ಅರ್ಥಗಳಿಸುವ ಹೊನ್ನು ಹಣ[೫][ದಿಂ][೫]
ದಿತ್ತಲೊಮ್ಮನ ಭತ್ತ ಸಾಕೆಂ
ದೊತ್ತರಿಸಿ ತಿರುಗಿದರು ಶತವೃದ್ಧೆಯರು ಸಂದಣಿಸಿ
ಬತ್ತು ಗಲ್ಲದ ಬೋಡು ಬಾಯ್ಗಳ
ನೆತ್ತಿ ತರಟಿನ ಸೂಳೆಯರ ಮನ
ದರ್ತಿಯಲಿ ತಿರುಗಿದರು ಶತವೃದ್ಧರ ಸಮೇಳದಲಿ ॥೨೩॥

೧–೧ ರ (ಕ,ಮ) ೨–೨ ರಿ(ಕ) ೩–೩ ಯವೋಳೊಯಲಿ(ಕ) ಯರಗಿಯಲಿ (ಮ) ೪–೪ ಬಾ(ಮ) ೫–೫ ವಿಂ (ಕ,ಮ)

ಮಜ್ಜನಿಗನವಸರಿಗ . . . . .
ಸೆಜ್ಜೆವಾಳುಕನುಭಯ ಭಾಷಿಕ
ಸಜ್ಜನದ ಬಾಣಸಿಗ ಸೇನಾಧೀಶ ನಟ್ಟವಿಗ
ಬಿಜ್ಜಣಿಗ ಚಾಮರಿಗ ಚಾಹಿಕ
ಹಜ್ಜೆವಾಳಕನಂಗರಕ್ಷಕ
ಅಜ್ಜನಂತಃ ಪುರಿಗನರಸಿನೊಳೆಯ್ದೆ ಸಂವರಿಸಿ ॥೨೪॥

ಮಂತ್ರಿ ಹೆಗ್ಗಡೆ ಸೇನಬೋವ ಸ್ವ
ತಂತ್ರ ಲೇಹಕನಶ್ವವಾಹಕ
ಮಂತ್ರಿ ವಾದಿಕ ಕೋಶರಕ್ಷಕ ಸಂಧಿವಿಗ್ರಹಿಕ
ಯಂತ್ರವಾಹಕನಾತ್ಮಬೋಧಕ
ತಂತ್ರನಿಪುಣ ಮದೇಭವಾಹಕ
ಜಂತ್ರಸೂತ್ರಿಗರಾ ಮಹೀಶನೊಳೆಯ್ದೆ ಸಂವರಿಸಿ ॥೨೫॥

ಪರಿಹಸಕ ಮ[೧]ಸೆ[೧]ಗಾರ ಜೂಜಿಗ
ನುರತರ[೨]ದ[೨]ಜ್ಯೋತಿಷ್ಕ ರತ್ನ
ಧರಪರೀಕ್ಷಕ ಶಸ್ತ್ರಶಿಕ್ಷಕ[೩] ವಸ್ತ್ರ ಕಾರಣಿಕ
ಪರಿಮಳಿಗ ಶಿಲ್ಪಿಗ ಮಹಾಪುರ
ವರದ ಗಂದಿಗ ಗಂಧವಾಳಿಗ
ಭರವಸದ ಬೇಹಿಗನುದಾರಿಗರೆಯ್ದೆ ಸಂವರಿಸಿ ॥೨೬॥

ಕವಿಕಥಕ[೪] ಸರಿಪಾಠ ಸುಂಬಿಗ
ವಿವಿಧವಸ್ತುಪರೀಕ್ಷಕ ಮಹಾ
ನ್ನವಸರದ ಚಿತ್ರಿಗ ಕೊಠಾರಿಗಳ ಕಳುವನುಗ್ರಾಣಿ
ವಿವಿಧ ತಸ್ಕರನಕ್ಕಸಾಲೆ ಸು
ಪವನನೆನೆ ಹರಿಕಾರನಂಕದ
ಸುವಿಧ ಟಂಕಿಗ ಚಮ್ಮಕರ ಮಾತಂಗ ಮೊದಲಾದ ॥೨೭॥

೧–೧ ಸಿ(क ೨–೨ x(क) ೩+ ರ(क,म) ೪+ ನ (क)

ಇಂತು ಬಾಹತ್ತ[೧][ರ][೧] ನಿಯೋಗಿಗ
ಳಂತು ಸಂವರಿಸಿದರು ಕಾಳಗ
ವೆಂತಹುದು ನೋಡುವರೆ ಬಿಜ್ಜಣರಾಯನೊಡನೆಯ್ದೆ
ಮುಂತೆ ಸನ್ನೆಯ ಕಹಳೆ ಮೊಳಗಿದ
ವಂತು ಪಾಳೆಯ ನ[೨][ಡೆ][೨]ಗೊಳಲು ದಿ
ಗ್ದಂತಿ ಕುಸಿದಂಬರ ನಡುಗಿತೇನೆಂಬೆನದ್ಭುತವ ॥೨೮॥

ಸಿಡಿಲು ಗುಡುಗುಡಿಸಿದು [೩][ವು][೩]ಮೆನಲಾ
ನಡೆವ [೪][ಪಾಳ್ಯದ][೪] ಪಾದಘಾತಕೆ
ನಡುನಡುಗಿ ದಿಕ್ಕರಿಗಳದರಿದವಾ ಕುಲಾದ್ರಿಗಳು
ಹೊಡೆವ ನಿಸ್ಸಾಳಗಳ ಭೇರಿಯ
ಬಡಿವ ತಮ್ಮಟಿಯಬ್ಬರಣೆ ಮುಂ
ಗುಡಿಯ ಬಿರುದಿನ ಕಹಳೆ ಮೊಳಗಿದುದಾ[೫]ದುದ[೫]ದ್ಭುತವು ॥೨೯॥

ಅಲಗಲಗು ಹಲಚಿದವು ಸೇನೆಯ
ದಳ[೬][ದ][೬] ತೆರಳಿಕೆ ತೆಕ್ಕೆಗಟ್ಟಲು
ಕೊಳುಗುಳದ ಗಜದಳದ ಹಯಮೋಹರದ ಸಂದಣಿಯ
ಜಳನಿದಿಗಳೊಂದಾಗಿ ಬಂದಿ
ಟ್ಟಳಿಸಿದಂತಾದುದು ಮಹೀತಳ
ಘಳುಘುಳುಧ್ವನಿ ಮೊಗೆದುದದನೇನೆಂಬೆನದ್ಭುತವ ॥೩೦॥

ಹೋಳ ಹೀಲಯ ಝುಲ್ಲರಿಯ ಗೊಂ
ದಳದ ಬಿರುದಿನ ಟಕ್ಕೆಯಂಗಳ
ಪೊಳೆವ ಸಿಂದದ ಪಳಹರದ ಬೆಳುಗೊಡೆಯ ತೋಮರದ
ಹಳವಿಗೆಯ ಸೀಗುರಿಯ ಚಮರಾ
ವಳಿಯ ಛತ್ರಪತಾಕೆಯಿಂದತಿ
ದಳದ ಸಂಪತ್ತಿನಲಿ ನಡೆದನು ಬಿಜ್ಜಣಾಧಿಪನು ॥೩೧॥

೧-೧ ರಿ (ಕ,ಮ) ೨-೨ ಡಿ (ಕ,ಮ) ೩-೩ ದು (ಕ,ಮ) ೪-೪ ಪಾಳೆಯದ (ಕ,ಮ) ೫-೫ ವಹ (ಕ)
೬-೬ ವ (ಕ,ಮ)

ಮುಂದೆ ನಡೆದರು ಕಾಮವಟ್ಟ ೧[ವ]೧
ಸಂದಣಿಸಿ ಕಡಿಗತ್ತಿ ಕೊಡಲಿಗ
ಳಿಂದ ಹೊಯ್ದರು ರಾಯಚಾರಣಿಯಿಂದ ಗಿಡುಮರನ
ನಿಂದು ಒಡೆದುದು ಕಟ್ಟಕಲ್ಲ೨[ನ
ದೊಂ]೨ದು ಗಾವುದದಳತೆಯಲಿ ಹ
ನ್ನೊಂದು ದಿವಸಕೆ ಬರಲು ಕೊಲ್ಲಾಪುರದ ಗಡಿಯೆಡೆಗೆ ॥೩೨॥

ಸೂಳಯಿ೩[ಪ]೩ ನಿ೪[ಸ್ನಾಳ]೪ ದೆಡಬಲ
ನೋಳಿಯೊಳಗಬ್ಬರಿಪ ಡೊಳ್ಳಿನ
ಮೊಳಗು೫[ತಿ]೫ಹ ಬಾರಿಸುವ ರಣ ಮುಹುರಿಗಳ ಬೊಂಬಾಳ
ಆಳು ಕುದುರೆಯ ನಡುಹಿನಲಿ ಕೆಂ
ಧೂಳಿ ಮಸಗಿದುದಾಗ ಚೂಣಿಯ
ದಾಳಿ ಕವಿದುದು ಬಂದು ಬಿಟ್ಟುದು ಪಂಚನದಿಗಳಲಿ ॥೩೩॥

೬[ನಿ]೬ಡು ಪಯಣದಿ ೭[ಂ]೭ ಪಂದಪಾಳಿಯ
ಬೀಡು ಬಿಟ್ಟುದು ತೊರೆದಯ ತಡಿಯಲಿ
ಕೂಡಿ ಹೊಯ್ದವು ಗುಡಿ ಸರಾಥಿ ದೊಸರಹಿಜಲಾ (?)
ನೋಡುವರೆ ಕಣ್ಣ ೮[ಳ]೮ ವಿಗೊಳ್ಳದು
ನಾಡು ತೆರಹಿಲ್ಲೆನಲು ರಾಯವಿ
ಭಾಡ ಬಂದನು ಬಿಜ್ಜಣಾಧಿಪ ಸರ್ವದಳ ಸಹಿತ ॥೩೪॥

ಮುಂದೆ ಹರಿದುದು ಸುದ್ದಿ ನಾಡೊಳು
ಬಂದ ಬಿಜ್ಜಣರಾಯನೆಂಬುದ
ನಂದು ಕೇಳಿದ ಗಂಡರಾದಿತ್ಯಾಂಕ ಮಹಿಪಾಲ
ಒಂದು ಬೇಹಿನ ಚರರಿಗುದಯದೊ
ಳೊಂದು ಜಾವಕೆ ತಹುದು ಸುದ್ದಿಯ
ನಿಂದು ಪಯಣವ ಮಾಡಿ ಬೇಗದೊಳೆನಲು ೯[ಎಯ್ದಿದ]೯ರು ॥೩೫॥

೧-೧ ದ(ಕ,ಮ) ೨-೨ ನೊಂ (ಕ,ಮ) ೩-೩ ಯ್ಸಿ (ಕ,ಮ) ೪-೪ ಸ್ತಾತ (ಕ,ಮ) ೫-೫ ವ (ಕ,ಮ) ೬-೬ ನೀ (ಕ,ಮ) ೭-೭ x(ಕ,ಮ) ೮-೮x(ಕ,ಮ) ೯-೯ ವವರೆಯ್ದು (ಕ,ಮ)

ಬಂದು ಬೇಹಿನ ಚರರು ಕಟಕವ
ನಂದು ಹೊಕ್ಕರು ಸುತ್ತುವಳಯವ
ನಿಂದು ನೋಡಲು; ಕಣ್ಣುಮನಗೊಳ್ಳದ ಮಹಾಬಲವ
ಸಂದಣಿಪ ಕರುತುರಗಭಟರುಗ
ಳಿಂಗೆ ಹೊಯ್ದುದು ಭೀತಿಯವರಿಗೆ
ಹಿಂದಿಕಾಗಳೆ ತಿರುಗಿದರು ಕೊಲ್ಲಾಪುರಕೆ ಭರದಿ ॥೩೬॥

ಬರುತ ತಮ್ಮಯ ಮನದೊಳೆಂದ [೧][ರಿ
ವರೆಲೆ][೧] ನಮ್ಮರಸಿಂಗೆ ಗೆಲುವರು
ಹರಿವಿರಿಂಚಿಮಹೇಶನಲ್ಲದೆ ಉಳಿದರೀ ಬಲವ
ಬಿರುದು ಭಟ್ಟರು ಹೊಗಳಿ ಕೊಲ್ಲಾ
ಪುರಕೆ ಮಾರಿಯ ತಂದರಲ್ಲದೆ
ಅರಸಿಗೇನೆಂತೆಂ[೨][ದು][೨] ಪೇಳುವೆವೆನುತ ಚಿಂತಿಸುತ ॥೩೭॥

ಹೇಳಬಾರದು ಹೇಳದಿರ್ದೊಡೆ
ಗಾಳಿ ಹುಸಿಯೆಂದೆಂಬನೋ ನೃಪ
ಪೇಳಿದೊಡೆ ತ[೩][ಮ್ಮಾ][೩]ಳು ಮನಗುಂದುವುದು ಮೇಣೆನುತ
ಆಳುತನದಂಗವಣಿಯೆಂದವೆ
ಕೇಳಿದೊಡೆ ವೃತ್ತಾಂತವೆಲ್ಲವ
ಹೇಳು[೪][ವೆವೊ][೪] ನಮಗೇನು ಬೇಹಿನೊಳುಳ್ಳ ಸ್ಥಿತಿಗತಿ[೫][ಯು][೫] ॥೩೮॥

[೬][ಎನುತ][೬] ಬರುತಿರಲಿತ್ತ ಗಂಡರ
ದಿನಪನೆಂದನು ಬೇಹಿಗಟ್ಟಿದ
ಮನುಜರೇತಕೆ ತಡೆದರೆನುತ[೭]ವೆ[೭]ತನ್ನ ಮನದೊಳಗೆ
ಜನಪನೋಲಗದುದಯದೊಂಬ
ತ್ತನೆಯ ಗಳಿಗೆಗೆ ಬಂದವರ ಮನ
ದನುವನರಿ[೮][ಯು][೮] ಮೊಗದ ಬಿಗು[೯]ಹನು[೯] ಕಂಡು ದಿಟವೆಂದ ॥೩೯॥

೧-೧ ವರಂದು (ಕ,ಮ) ೨-೨ ತು (ಕ,ಮ) ೩-೩ ನ್ನಾ (ಕ) ನ್ನೊ(ಮ) ೪-೪ ವರೊ (ಕ,ಮ) ೫-೫ ಯ (ಕ,ಮ) ೬-೬ ಇನ್ನು (ಕ,ಮ) ೭-೭ ಲೆ (ಮ) ೮-೮x (ಕ,ಮ) ೯-೯ ಹಿನ(ಕ)

ಏನು ಸುದ್ದಿಯದೇನು ಹುಸಿ ದಿಟ
ವೇನು ಬಿಜ್ಜಣಭೂಪ ಬಂದನ
ದೇನು ಬಲದೊಡ್ಡವಣೆ ಕರಿತುರಗಾದಿಭಟರುಗಳ
ಏನು ಮುಖದೊಳಗೊಗೆದ ದುಗುಡವಿ
ದೇನು ನಿಮ್ಮಯ ಹಿಡಿದು ಬಿಟ್ಟರೊ
ಏನು ಮೋಸವದೇನು ಹೇಳೆಂದನು ಮಹೀಪಾಲ ॥೪೦॥

ನುಡಿಯಲಮ್ಮವು ಜೀಯ[೧][ಯ][೧]ದ ನಿ
ಮ್ಮೊಡನೆ ಬಿನ್ನಹ ಮಾಡಲಮ್ಮೆವು
ತಡೆಯದೀಗಳೆ ತಂದ ಸುದ್ದಿಯಪಾರವೆನೆ ಕೆಲರು
ಒಡೆಯನೊಳು ಬಿನ್ನಹವ ಮಾಡದೆ
ನಡುವೆ ಕೇಳುವರಾರೆನುತ ಮ
ತ್ತೆಡಬಲದಿ ಕುಳ್ಳಿರ್ದವರು ತಮತಮಗೆ ಹೇಳೆನಲು ॥೪೧॥

ಚಿತ್ತಯಿಸು ಬಿನ್ನಹವ ಗಂಡರಾ
ದಿತ್ಯ ಬಿಜ್ಜಣ ಬಿಟ್ಟ ಕಟಕವ
ಸುತ್ತಿ ನೋಡಿದಡೆತ್ತ ತೆರಹಿಲ್ಲದ ಮಹಾಬಲವು
ಸತ್ತಿಗೆಯ ನೆಳಲಿಂದ ಸೂರಿಯ
ನಸ್ತವಿಸಿದಂತೊಗೆದುದಾಗಳೆ
ಕತ್ತಲಿಸಿದುದು ಪಾಳೆಯದ ವಿಸ್ತರವನೇನೆಸಲು ॥೪೨॥

ನೆಗಳು ಸಿಂಹದ ಕಪಿ ಗರುಡ ರಾ
ಹುಗಳ ಮತ್ಸ್ಯದ ಗಂಡಭೇರುಂ
ಡಗಳ ಹರಿಶರಭಗಳ ಶಾರ್ದೂಲಗಳ ವೃಷಭಗಳ
ಆಗಿವ ಹುಲಿ ರಕ್ಕಸರ ಬಿರುದಿನ
ಬಿಗಿದ ಸಿಂಗದ ಟಕ್ಕೆಯಂಗಳು
ಮುಗಿಲ ತೆರೆಯಂದದಲಿ ಮುಸಿಕಿತು ಗಗನಮಂಡಲವ ॥೪೩॥

೧-೧ ಮ (ಕ,ಮ)

ತರಣಿ ತೇಜವದಿಲ್ಲ ಪಾಳೆಯ
ಲರಸ ಕಾಣಿಸಲರಿದು ನಮಗದು
ತೆರೆಯ ಪಲ್ಲವ ಸತ್ತಿಗೆಯ ಚಮರಾವಳಿಗಳಿಂದ
ಕರಿಮಕರಕೂರ್ಮ[೧][ದ][೧] ವರಾಹದ
ಹರಿಯ ಚಕ್ರದ ಚಂದ್ರಸೂರ್ಯರ
ಬಿರುದಿನ ಪತಾಕೆಗಳ ಬಹಳವನಳತೆಗೊಳಲರಿದು ॥೪೪॥

ತುರಗ ತೊಂಬತ್ತಾರುಸಾವಿರ
ಕರಿ ಮಹಾಬಲವೆಂಟು ಘಟೆ ಮೋ
ಹರದೊಳುರವಣಿಸಿರಿವ ಸುಭಟರು ನಾಲ್ಕು ಲಕ್ಷವರು
ನೆರವ ಬಂದಿಹ ರಾಜಪುತ್ರರು
ದೊರೆಗಳಂತವರೆರಡು ಲಕ್ಷವು
ಸರಿವೆರಸಿ ಬಹ ಸೂರೆ ಸುಲಿಗೆಯ ನರರಸಂಖ್ಯಾತ ॥೪೫॥

ಹೇಳಲಮ್ಮೆವು ಜೀಯ ಚೂಳಿಯ
ದಾಳಿಯೊಳು ಪಂಚಾಂಗ ಜೋಡಿನ
ಕಾಳಗಕೆ ಹದಿನೇಳು ಸಾವಿರ ತುರಗಗಳು ಬೇರೆ
ಆಳು ಲಕ್ಕದ ಮೇಲೆ ತೊಂಬ
ತ್ತೇಳುಸಾವಿರ ಮೊನೆಯ ಮೋಹರ
ಧೂಳಿಕೋಟೆಯ ಕೊಂಬೆವೆಂದರು ಹೊಣಕೆಯಾಳುಗಳು ॥೪೬॥

ಕೇಳಿ ಸುದ್ದಿಯನಾಗ ಗಂಡರ ಭಾಳಲೋಚನ ತನ್ನ ದುರ್ಗವ
ಕಾಳಗಕೆ ಕೈಗೈಯ್ದು ಗೆಲುವೆನು ವೈರಿವರ್ಗವನು
ಹೇಳಿದನು ತಂತಮ್ಮ ಸೀಮೆಯೊ
ಳಾಳವೇರಿಯ ಬಲಿವುದೆನೆ ನಿ
ಸ್ಸಾಳ ಮೊಳಗಿದುದಾಗ ಕೊಲ್ಲಾಪುರದ [೨][ಬಿರು][೨]ದರಿಗೆ ॥೪೭॥

೧-೧ x (ಕ,ಮ) ೨-೨ ಬಾರು(ಕ,ಮ)

ತಿರುಹಿದರು ಬಾಗಿಲೊಳು ಮದಕರಿ
ಯುರವ[೧][ಣಿಸೆ ಬಹರೊಡ್ಡು][೧]ಗಲ್ಲ[೨][ದು][೨]
ಹೊರೆದುದಾಗಳೆ ಮುಂದೆ ಹುಲಿಮುಖ ಜವನ ದಾಡೆಯಲಿ
ತರಹರದ ಕೊತ್ತಳದ ಮೇಲ
ಬ್ಬರಿಸಿ ಹಿಡಿದ[೩]ರು[೩] ಕಹಳೆ ಬಿರುದಿನ
ಹೊರೆಯಲೆತ್ತಿದ ಸಿಂದ ಸಂದಣಿಸಿದವು ಮುಂಗುಡಿಗೆ ॥೪೮॥

ವಂಕದಾರದೊಳರಿಭಟ[೪][ರ][೪] ಬಲು
ಬಿಂಕವನು ಮುರಿವುದಕೆ ಚಾಚಿದ
ರಂಕೆ ಝುಂಕೆಯ ಬಿಲ್ಲಭಲ್ಲೆಹದವರು ಬಲುಮುಖಿರ
ಸಂಕಿಸದೆ ಕೈಗಲ್ಲು ಚಿಮ್ಮುಕ
ಡೆಂಕಣಿಯ ನೂಕಿದರು ಕವಣೆಯೂ
ಳಂಕಿನಿಡುವ ಮಹಾಬಲರನಿದಿರೊಡ್ಡಿನೊಳಗೊಡ್ಡಿ ॥೪೯॥

ಸಾಲಸಂಕಲೆ ಬಿಗಿದುವಾಗಳೆ
ನೂಲ ಹರಿಗೆಗಳಿಕ್ಕೆ ಕಟ್ಟಿನ
ಗಾಲಿ ಹಿಡಿದವಲಂಗದಲಿ ತೆನೆತೆನೆಯ ಮಧ್ಯದಲಿ
ಮೇಲೆ ಸೆಣಸುವ ರಾಯಮಸ್ತಕ
ಶೂಲನೆಂಬೀ ಬಿರುದಿನಗ್ಗದ
ಸಾಲೊಳೆಸೆದವು ಧ್ವಜಪತಾಕೆಗಳಖಿಳ ದೆಸೆಗಳಲಿ ॥೫೦॥

ಸುಣ್ಣ ತೊಡೆದುದು ಕೋಟೆ ತೆನೆಯೊಳು
ಬಣ್ಣ ದಂಡೆಗಳಿಕ್ಕಿ . . . . ..
. . . ಕಣಗಿಲೆಯ ಸರಿವೆರಸಿ ಬೇವಿನ ವೇಂಟೆಗಳ ಹಾಕಿ
ಗಣ್ಯವಿಲ್ಲದ ಬಿಜ್ಜಣನು [೫][ಮು][೫]
ಕ್ಕ[೬][ಣ್ಣ][೬] ಸಹಿತವೆ ಬಂದಡೆ [೭][ಯು][೭] ಮ
ಮತ್ತಿನ್ನು ಕಾದುವೆ[೮][ವೆಂ]ದು ಮೊಳಗಿದುದಖಿಲ ಪರಿವಾರ ॥೫೧॥

೧-೧ ಣಿಸಿ ಬಾಹರೋಡು (ಕ) ಣಿಸಿ ಬಹದೊಡ್ಡ (ಮ) ೨-೨ ನು (ಕ,ಮ) ೩-೩ ವು(ಮ) ೪-೪ ರು (ಕ,ಮ) ೫-೫ ಮ (ಕ,ಮ) ೬-೬ ಣ (ಕ,ಮ) ೭-೭ ವು (ಕ,ಮ) ೮-೮ ವೆಂ (ಕ,ಮ)

ಬಸಿದ ಬಸಿ ಹೊಸ ಹುಲ್ಲದುಂದದ (?)
ಎಸುಗೆಗಳ ಹೊಸಪರಿಯ ಸೂತ್ರದ
ಕುಸಿದ ಕೊಂತದ [೧][ನೂ][೧]ಕಿದಳಿಗಳ ಬಿಗಿದ ಬದ್ದರದ
ಬೀಸಿ ಗಡ ಹುರಿಮ[೨]ಳ[೨]ಲ ಸೂಸಿದ
ಹಸಿದ ಹಾವಿನ ಕೊಡನ ರಾಶಿಯ
ದೆಸೆಯೊಳುರಿಯೆಣ್ಣೆಗಳ ಕೊಪ್ಪರಿಗೆಗಳ ಸಂದಣಿಸಿ ॥೫೨॥

ರಾಯ ಡೆಂಕಣಿ ಮಕರ ಬಿಬ್ಬಿಯ
ನಾಯದಲಿ ಹೊಡಿದರು ಕಾಳಗ
ದಾಯವನು ನೋಡಿದರು ಹೋಖಂಡಿಗಳ ಬಲಿದವರು
ಮಾಯಗತ್ತರಿಯಿಕ್ಕಿ ಹೊರಗಣ
ರಾಯಗಸದಳವೆಂಬ ಬುದ್ಧಿಯ
ಸಾಯಶೂರರು ನಿಂದು ಕಾದಿವೆವೆಂದರಲ್ಲಲ್ಲಿ ॥೫೩॥

[೩]ಲ[೩]ಗ್ಗೆ ನೂಕುವ ಮುಖದೊಳಗೆ ಪಡಿ
ದುರ್ಗವಿಕ್ಕಿದುದಗಳ ಕಂಡವ
ನುಗ್ಗಗುಟ್ಟಿದರೊಂದು ಕೋಲಳವಿಯಲಿ ಮುಂ[೪]ಬಲಿದು
ತಗ್ಗಿಸಿದರೆಡಬಲನ ಗಾಲಿಯ
ಮುಗ್ಗುವಂದತಿ ನೆಲನ ಬಲಿದವ
ರೊಗ್ಗನೊಡ ಹೊಯ್ದದಕೆ ಮೋಸವ ಗೆಲುವುದಕೆ ಮ[೫][ನ][೫]ವ ॥೫೪॥

ಅಗಳೊಡ[೬]ಲ[೬] ಬಲಿದವರು ತುಂಬನು
ತೆಗೆದು ಕೆರೆಗಳ ನೀರ ಬಿಟ್ಟರು
ಮುಗಿಲ ಬಾರದೆ ತುಂಬಿ ಕೋಟೆಗೆ ತೆರೆಗಳದ್ದಲ[೭][ಸ][೭]
ಜಗದೊತಿಶಯವೆನಿಪ ಲಂಕೆಯ
ನಗುವವೊಲು ಕೊಲ್ಲಾಪುರದ ಮ
ತ್ತಗಣಿತ ಮಹಾಮಹಿಮೆಯನು ಪೊಗಳು ವೊಡದಾರಳವು ॥೫೫॥

೧–೧ ಮ (ಕ,ಮ) ೨–೨ ಗ (ಮ) ೩–೩ ರೆ (ಮ) ೪+ಬಿ(ಕ) ೫–೫ ನು(ಕ,ಮ) ೬–೬ ವ(ಕ) ೭–೭ ಸಿ (ಕ,ಮ)

ಬರೆದು ಗಂಡರಸೂರ್ಯನೆಂಬಾ
ಬಿರುದಿನ ಮಹೋದ್ದಂಡ ಧ್ವಜಗಳ
ನುರವಣೆಯ ಕಾಳಗದ ೧[ಸೈನ್ಯದ]೧ ಮುಖದೊಳಿದಿರೊಡ್ಡಿ
ಕರಿತುರಗ ಬಲವೆರಸಿ ಬಿಜ್ಜಣ
ನರಸುತನದ ೨[ಸಘಾಟ]೨ಕೆಯ ನಿ
ರ್ಧರವ ಬಿಡಬೇಕೆಂಬವೊಲು ಸಾರಲು ಪತಾಕೆಗಳು ॥೫೬॥

ಆಯದಿಂದವೆ ಬಲಿದು ದುರ್ಗವ
ರಾಯ ಬಿಜ್ಜಣಭೂಪ ಬರಲಸ
ಹಾಯದಂದಿವೆ ಗೆಲುವೆನೆಂದನು ಗಂಡರಾದಿತ್ಯ
ಪಾಯದಿಂದವೆ ಕಾದಿ ತನ್ನಯ
ಕಾಯವೆರಸಿಯೆ ತಿರುಗಿದೊಡೆ ನಿಜ
ನ್ಯಾಯದಿಂ ಸನ್ಯಾಸವೆಂದನು ಬಿ೩[ರು]೩ದು ನಮಗೀಗ ॥೫೭॥

ಎಂದು ಗಂಡರಸೂರ್ಯ ಭಟ್ಟರ
ನಂದು ಕಳುಹಿದ ಕಾಳಗಕೆ ಬರ
ಲೆಂದು ಬಿಜ್ಜಣರಾಯಗ೪[ರು]೪ಪುವುದೆನಂತ ಬೇಗದೊಳು
ತಂದ ಸುದ್ದಿಯ ಪೇ ೫[ಳೆ]೫ ನೃಪನಿಂ
ತೆಂ೬[ದ]೬ ದುರ್ಗವ ಬಲಿದು ಕಾಯುವ
ಹಂ೭[ದೆ]೭ಗಳಿಗೀ ಬಿರುದಿನಗ್ಗದ ಮಹಿಮೆ ತಮಗೇಕೆ ॥೫೮॥

ಕೋಂಟೆಗಾಳಗವೆಂಬುದೆನಗದು
ಘಾಟವಲ್ಲದು ಬಿಜ್ಜಣನ ಕಿರು
ನೋಟದೊಳು ಕೆಡುವುದು ನಿಮಿಷದೊಳು ಗಹನವಿಲ್ಲೆನುತ
ಪಾಟರಾಯರು ಕೇಳಿದೊಡೆ ಮರು
ಳಾಟವೇಕೆನ ೮[ಗೆ]೮ನುತ ವರ ನಿ
ರ್ದಾಟಿಸಿದ ಹೋಗೆಂದೆನುತ ಬಂದವರನವನೀಶ ॥೫೯॥

೧–೧ x(ಕ,ಮ) ೨–೨ ಸಾಗುಡಿ (ಕ,ಮ) ೩–೩ ರಿ (ಕ,ಮ) ೪–೪ ರಿ (ಕ,ಮ) ೫–೫ ಳಿ (ಕ,ಮ) ೬–೬ ದು (ಕ,ಮ) ೭–೭ ದಿ (ಕ,ಮ) ೮–೮ ಗಹು(ಕ,ಮ)

ಹೊ೧ರ೧ಗೆಯನು ನೋಡುವರೆ ರಾಯರಿ
ಗೆರೆಯನೆಂ೨[ಬಾ]೨ ಬಿರುದು ದುರ್ಗದ
ಮರೆಯ ಕಾಳಗವೇಕೆ ಗಂಡರಸೂರ್ಯನೆಂಬವಗೆ
ಹೊರಗೆ ಬಂದಿದಿರಾದೊಡಾ೩[ಂ]೩ ಮನ
ಕುರುವ ಕಾಳಗವಿತ್ತು ತನ್ನಯ
ಮೆರೆವ ಬಿರುದನು ಸೆಳೆದು ಕಳುಹುವೆ ನಿಮ್ಮ ಪಾಳೆಯಕೆ ॥೬೦॥

ಎಂದು ಕಳುಹಿದ ತಿರುಗಿ ಭಟ್ಟರ
ನಂದು ಕೊಲ್ಲಾಪುರಕೆ ಬೇಗದಿ
ಬಂದು ನಿಂದವರೆಂದರಾ ಗಂಡರಾದಿತ್ಯಂಗೆ
ತಂದ ಸುದ್ದಿಯ ಪೇ೪[ಳೆ]೪ ನಿನ್ನನು
ಹಿಂದೆ ೫[ಘೊ]೫ಕ ಪ್ರತೀಕನೆಂದನು
ಬಂದು ಕಾದಿದೊಡರಿವೆನೆಂದನು ಬಿಜ್ಜಣಾಧಿಪನು ॥೬೧॥

ಹೊರೆಗೆ ಕಾದುವ ಶಕ್ತಿಯುಳ್ಳೊಡೆ
ಮರು೬[ನುಡಿಯು]೬ ತನಗೇಕೆನುತಲಾ
ಜರೆದ ಬಿಜ್ಜಣರಾಯನೆಂದವರಂದು ಪೇಳಿದರು
ಉರುವ ಬಿರುದಿನ ರಾಯಭಟರ
ಬರಿದೆ ಕಳುಹಲದೇಕೆ ದುರ್ಗದ
ಮರೆಯ ಕಾಳಗವೇಕೆ ಗಂಡರಸೂರ್ಯನೆಂಬವಗೆ ॥೬೨॥

ಕೇಳಿ ಗಂಡರಸೂರ್ಯ ತನ್ನಿ
ದಿರ್ದಾಳ ಕುದುರೆಯ ನೆರ ಬಲವ ಸಹಿ
ತೋಳಿಯಿಂದವೆ ನಿಲಿಸಿ ನೋಡಿದನೆಣಿಕೆಗೊಳಲೆಂದು
ಆಳು ಲೆಕ್ಕದ ಮೇಲೆ ತೊಂಬ
ತ್ತೇಳುಸಾವಿರ ಜೋಡನಾನುವ
ಕಾಳಗದೊಳಿರಿ೭[ಯು]ವ ತುರಗ೮[ವದು]೮ ಹತ್ತುಸಾವಿರವು ॥೬೩॥

೧–೧ ರಿ(ಮ) ೨–೨ ಬ (ಕ,ಮ) ೩–೩ x(ಕ,ಮ) ೪–೪ ಳಿ (ಕ,ಮ) ೫–೫ ಗು(ಕ) ಗುಲ (ಮ) ೬–೬ ಮಾತು (ಕ,ಮ) ೭–೭x(ಕ,ಮ) ೮–೮ ವು (ಕ,ಮ)

ಕರಿಗಳಿಪ್ಪತ್ತೈದು ಸಾವಿರ[೧]
ಬಿರು[೨][ದರಿ][೨]ರ್ಭಾಸಿರವು ರಿಪುಸಂ
ಗರದೊಳಿ[೩][ರಿ][೩]ವತಿ ಬಲ ಸುಭಟರೇಳೆಂಟು ಸಾವಿರವು
ತರತರದೊಳೆಲ್ಲವನು ಲೆಕ್ಕಿಸೆ
[೪][ಎ][೪]ರಡು ಲಕ್ಕದ ಮೇಲೆ ಮೂವ
ತ್ತೆರಡು ಸಾವಿರವಾದುದಾಗಳೇ ಸರ್ವಪಾಯದಳ ॥೬೪॥

ನಾಳೆ ನೃಪ ತಾ ಬಿಟ್ಟ ಕಟಕಕೆ
ದಾಳಿಯಿಸುವೆನು ಪರಬಲವನಿರ
ದೇಳಿಸುವೆನಿದಿರಾದ[೫][ರ್ವೊ][೫] ಚಂಡಾದುವೆನು ಶಿರವ
ಭಾಳಲೋಚನ ಬಿಜ್ಜಳನ ಹಿಡಿ
ಯಾಳ ಹಿಡಿವೆನು ಸರ್ವದಳವನು
ಕಾಳಗೌತಣವೆಂದು ಮಾಡುವೆನೊಂದು ನಿಮಿಷದಲಿ ॥೬೫॥

ಸೆಣಸಿ ಬಿರುದಿಗೆ ಬಂದ ರಿಪು ಬಿ
ಜ್ಜಣನ ಗೆಲುವೆನು ಕಾಳಗಕೆ ಸಂ
ದಣಿಪ ಗಜಮೊಹರವ ಹಣಿವೆನು ಸಮರಭೂಮಿಯೊಳು
ರಣವ ಕಾಲನ ಹಸಿದ ಪಡಿಗೌ
ತಣವ ಮಾಡುವೆ ಸುಭಟರೆಲ್ಲರ
ತೃಣವ ಕಚ್ಚಿಸಿ ಬಿಡುವೆನಂದನು ಗಂಡರಾದಿತ್ಯ ॥೬೬॥

ಜಲವ ಹುಗಬೇಕೆಂದು ಜಲಧಿಯ
ಕೆಳಗೆ ಬಿಟ್ಟುದನರಿತೆ ನಾನದ
ಹಲವ ನುಡಿಯಲದೇಕೆ ಕಾದುವೆ ನಾಳೆ ಸಂವರಿಸಿ
ಕೆಲಬಲದಿ ಕುಳ್ಳಿರ್ದವರ ಮುಖ
ದೊಲವ ನೋಡಿದನೆನ್ನೊಡನೆ ಹಿಂ
ದುಳಿಯದೆಯ್ತಹ ಸುಭಟರಾರೆಂದನು ಮಹೀಪಾಲ ॥೬೭॥

೧+ ನಾಯಕ (ಕ,ಮ) ೨–೨ ದಿನಿ(ಕ,ಮ) ೩–೩ ರೆ(ಕ,ಮ) ೪–೪ ಮತ್ತೆ(ಕ,ಮ) ೫–೫ ರೊ (ಕ,ಮ)

ಗಂಡರಾದಿತ್ಯಾಂಕ ತನ್ನಯ
ಗಂಡುತನವನು ನುಡಿವುತಿರೆ ಕೈ
ಕೊಂಡನಾಗಳೆ ಮನದೊಳಗೆ ಸಾಮಂತಮಂತ್ರೀಶ
ಖಂಡೆಯುವ ನೋಡಿದನು ಮೆಲ್ಲನೆ
ಮಂದಿಯನು ಸಡಲಿಸಿದ ಮನ ಮುಂ
ಕೊಂಡು ನಿಂದನು ರಾಯನಿದಿರಲಿ ಕರವ ಮುಗಿದಾಗ ॥೧೮॥

ರಾಯ ಗಂಡರಸೂರ್ಯ ರಿಪುಕುಲ
ರಾಯಮಸ್ತಕಶೂಲ ನಿನ್ನೊಳು
ರಯರಾರಿದಿರಾನುವರು ಬಿನ್ನಹ[೧][ವ][೧] ಚಿತ್ತಯಿಸು
ರಾಯ ಬಿಜ್ಜಣಭೂಪನನು ನಿ
ರ್ದಾಯದಿಂದವೆ ಗೆಲುವೆ ಸಂಧಿಗು
ಪಾಯದಿಂ ತಲೆ [೨]ಬಾಗಿಸುವೆ[೨] ನಾ ಮಂತ್ರಶಕ್ತಿಯಲಿ ॥೧೯॥

ಅಹುದು ಬಿನ್ನಹ ಜೀಯ[೩][ಯಿ][೩]ವರಿಗೆ
ಸಹಜವದು ಕೊಲೆಗಂಜುವರು[೪][ಯೀ][೪]
ಬಹಳ ದಳದೊಳು ಕಾದುವರೆ ಪಾಪ[೫][ಕ್ಕೆ][೫] ಹೇಸುವರು
ನಿಹಿತಮಾರ್ಗದಿ ಬದಕುವರು ಪರ
ರಹಿತಕಳುಕುವರೆಂದು ಮನದೊಳು
ಕುಹರೆಂದರು ಗಂಡರಾದಿತ್ಯಂಗೆ [೬]ಕೊಂಕಿನ[೬]ಲಿ ॥೨೦॥

ದುರ್ಜನರಿಗಂಜುವುದು ಮನದೊಳ
ಗರ್ಜಿಸುವದನವರತ ಕೀರ್ತಿಯ
ಸಜ್ಜನರಿಗೆ[೭][ಳ][೭]ಸುವುದು ರಿಪುಗಳ ಕೂ[೮][ಡೆ][೮] ಕಾದು[೯] [ವೊಡೆ]
ಬಿಜ್ಜರಿಸದನವರತ ಮುಂದಣ
ಹೆಜ್ಜೆಯನು ಹಿಂದಕ್ಕೆ ತೆಗೆದರೆ
ವರ್ಜಿಸುವೆ[೧೦] ಬಿರುದೇಕೆನಗೆ ಸನ್ಯಾಸವಿಧಿಯಿಂದ ॥೨೧॥

೧–೧ x(ಕ,ಮ) ೨–೨ x(ಕ) ೩–೩ ಮಿ (ಕ,ಮ) ೪–೪ ಮಿ(ಕ,ಮ) ೫–೫ ಕೆ(ಕ,ಮ) ೬–೬ ಕೃತಿಯ (ಕ) ೭–೭ ಳಿ (ಕ,ಮ) ೮–೮ ಡಿ (ಕ,ಮ) ೯–೯ ಮರೆ(ಕ,ಮ) ೧೦+ ನೀ (ಕ,ಮ)

ಚಿತ್ತೈಸು ಬಿನ್ನಹವ ಗಂಡರಾ
ದಿತ್ಯರಿಪು ಬಿಜ್ಜಣನನಾ ಬೆಂ
ಬತ್ತಿ ತ[೧][ಗು][೧]ಳುವೆ ತ[೨][ಡೆವೆನಾನವ][೨] ಸಂಧಿಗೆಳಸಿದೊಡೆ
ಮತ್ತೆ ತಲೆವಾಗಿಸುವೆ ನಿಮ್ಮಯ
ಚಿತ್ತಕುತ್ಸವದಂತೆ ಪಾದಕೆ
ಹತ್ತೆಯವ ಮಾಡುವೆನು ಕೇಳೆನಲರಸು ತಲೆದೂಗಿ ॥೭೨॥

ಮಾತನಾಡಲಿಬಹುದು ರಣದೊಳ
[೩][ಗಾ][೩] ತು ಕಾದುವುದರಿದು ಮನಸಿನ
ಭೀತಿಯನುವ[೪][ದು][೪] ಬಲ್ಲರಳವೇ ಬ್ರಹ್ಮನೆಂಬಂಗೆ
ಸಾತಿಶಯವೇಂದೆಂಬೆವೇ ಮ
ತ್ತಾತ ಬಲ್ಲನು ತನ್ನ ಹವಣನು
ದಾತ್ತ ಚಿತ್ತಯಿಸುವುದು [೫][ಈ][೫] ನಿಂಬಂಗೆ ವೀಳೆಯುವ ॥೭೩॥

ಒಡೆಯ ಗಂಡರಸೂರ್ಯನೆಂಬುದು
ಪೊಡವಿಯೊಳು ವಿಖ್ಯಾತಿ ಬಲುಹನು
ನುಡಿವುದೇನರಿದೆನಲು ನೃಪ ನಡುನಗುತ ತಲೆದೂಗಿ
ಜಡರು ನಿಮಗಳವಲ್ಲವಿದು ಗಾ
ರುಡದಿ ಬಿಜ್ಜಣನೆಂಬ ಸರ್ಪನ
ಹೆಡೆಯನುಡಗಿಸಿ ಹಿಡಿವೆ ನಾನಾಡಿಸುವೆ ರಣದೊಳಗೆ ॥೭೪॥

ಕೇಳು ಗಂಡರಸೂರ್ಯ ಬಿಜ್ಜಣ
ನಾಳುಕುದುರೆಯ ಮೋಹರಕೆ ಪಡಿ
ಯಾಳ ನಿನ್ನಲಿ ಬೇಡೆನೊಂದಾಶ್ಚರ್ಯವನು ನೋಡು
ನಾಳೆ ನಡೆವೆನು ಕಾಳಗಕೆ ನೃಪ
ವೀಳೆಯವ ಚಿತ್ತಯಿಸು ಬೇಗದಿ
ದಾಳಿಯಿಡುವೆನು ನಿಮಿಷ ಕೋಳಾಹಳವ ಮಾಡುವೆನು ॥೭೫॥

೧-೧ ಗ (ಕ,ಮ) ೨-೨ ಡಿರೆವೆನು(ಕ,ಮ) ೩-೩ ಗಾಂ (ಕ,ಮ) ೪-೪ ನು (ಕ,ಮ) ೫-೫ ಯಂ (ಕ) x(ಮ)

ಸತ್ಯವಿದು ಸಾವಂತ ನಿಂಬನ
ಉತ್ತರದೊಳೆರಡಿಲ್ಲವೆನುತಲೆ
ಗುತ್ತರಾದರು ಸುತ್ತ ಕುಳ್ಳಿತ ಸಕಲ ಖಳಜನರು
ಇತ್ತ ಕರ್ಪುರ ವೀಳೆಯವ ನೃಪ
ಮತ್ತೆ ಬೀಳ್ಕೊಟ್ಟನು ನಿಜಾಲಯ
ಕರ್ತಿಯಿಂದವೆ ಬಂದ ನಿಂಬ ನಿಃಶಂಕತನದಿಂದ ॥೭೬॥

ಬರುತ ನಿಶ್ಚಯಿಸಿದನು ಮನದೊಳ
ಗರುಹ ಚರಣಸ್ಮರಣೆಯಿ[೧][ಂ][೧]ದಘ
ಹ[೨][ರಿಯು][೨]ವುದು ಬಲವೇನರಿದು ಕಿಡಿಸುವುದೆ ನಿಮಿಷದೊಳು
ಸುರಪತಿಯ [೩][ಪು][೩]ರಕಿನ್ನು ದಾಳಿ [೪][ಯ][೪]
ನುರುಮುದದಿ ಮಾಡುವೆನೆನುತ ನಿ
ರ್ಧರಿಸಿದನು ಸಾಮಂತ ನಿಂಬ ನಿಃಶಂಕರನದಿಂದ ॥೭೭॥

ಮುದದಿ ಬಿಜ್ಜಳನೆಂಬ [೫][ರೋ][೫]ಷವ
ನೊದಗಿಸುವ ಮದಗಜವ ಹಣಿವೆನು
ತ್ರಿದಶಪತಿನತ ಮಹಿಮೆಯರ[೬][ಸಿಯೆ][೬]ಭಾಷೆಯಾಜ್ಞೆಯಲಿ
ಸದಳವೆಂಬ [೭]ಭವಾಂಬುಧಿಯನಿಂ
ದೊ[೮][ದೆದು][೮] ದಾಂಟುವೆ[೭] ನಿವೃತಿ ಮಹಾ
ಸುದತಿಪತಿಗೆರಗುವೆನು ನಿ[೯][ಶ್ಚಿ][೯]ತ [೧೦][ಜೀವಿತವ ಪಡೆವೆ][೧೦] ॥೭೮॥

ಎನುತ ತನ್ನಾಲಯಕೆ ಬಂದಾ
ದಿನದಿರುಳಿನೊಳು ನಾಲ್ಕು ಜಾವದೊ
ಳನುಪಮ ಗುಣಾನ್ವಿತರೆನಿಪ ಸಜ್ಜನರ ಸಂಗದೊಳು
ನಾದವೆಸೆದುದು ಸಂ[೧೧][ಜೆ][೧೧]ವರೆ ವಿವಿ
ಧಾದಿದೇವಾಲಯದೊಳಗೆ ಜಿನ
ಪಾದವನು ನೆನೆಯು [೧೨]ತ್ತ[೧೨]ಲುಪ್ಪವಡಿಸಿದ ಸಾಮಂತ ॥೭೯॥

೧–೧x(ಕ,ಮ) ೨–೨ ʻರ (ಕ,ಮ) ೩–೩ ಪ (ಕ,ಮ) ೪–೪x(ಕ,ಮ) ೫–೫ ದೋ(ಕ,ಮ) ೬–೬ ಸಿ (ಕ,ಮ) ೭–೭x(ಕ) ೮–೮ ಡೆದು (ಮ) ೯–೯ ಶ್ಚಿಂ(ಕ) ೧೦–೧೦ ಜಿತವನು ಪಡೆಡವೆ(ಕ) ಜಿತವನು ಪಡೆದವೆ(ಮ) ೧೧–೧೧ಜಿ(ಕ) ೧೨–೧೨ ತ್ತಿರ(ಕ)

ಉಪ್ಪವಡಿಸಿದ ನಿಂಬ ಮನದೊಳು
ತಪ್ಪದೆರಡಿಲ್ಲದ ಮಹಾತ್ಮೆಯೊ
ಳೊಪ್ಪುತಿಹ ಕರಚರಣಮುಖಪ್ರಕ್ಷಾಳನಂಗೆಯ್ದು
ಕಪ್ಪುರದ ವೀಳೆಯದಿ ಗಂಧದಿ
ಪುಷ್ಪ ನಾನಾ ಫಲಚಯದಿ ಕಂ
ದರ್ಪಹ[೧][ರನ][೧] ಜಿನಾಲಯಕೆ ನಡೆತಂದನುದಯದಲಿ ॥೮೦॥

ಬಂದನಾಗ ಜಿನಾಲಯವನಾ
ನಂದಿಂದ ಪ್ರದಕ್ಷಣಂಗೆಯಿ
ದಂದು ತ್ರಿಕರಣಶುದ್ಧಿಯಿಂದೊಳ ಪೊಕ್ಕು ಬೇಗದೊಳು
ವಂದಿಸಿ[೨][ದನು][೨] ಜಿನೇಂದ್ರನನು ಮುನಿ
ವೃಂದವನು ಬಲಗೊಂಡನು ಮಾಘ
ಣಂದಿಸಿದ್ಧಾಂತಿಗಳ ಚರಣಂಗಳಿಗೆ ಬೀಳ್ಕೊಂ [೩][ಡ][೩] ॥೮೧॥

ಗುರುಚರಣಕೆರಗಿದನು ಭಕ್ತಿಯ
ಭರವಸದೊಳು ನಮೋಸ್ತು ಜೀಯೆಂ
ದುರು ಮುದದಿ ಕ್ಷಂತವ್ಯ ಕ್ಷಮೆ ನಿಶ್ಯಲ್ಯಮೆಂದೆ[೪][ನುತ][೪]
ಮರಳ[೫][ನೇ][೫] ಸಾಮಂತ ಧುರದನು
ವರವ [೬][ಗೆಲುವನೆ][೬] [೭][ಮರಳಿ][೭]ನಿಮ್ಮಯ
[೮][ಚರಣವದು ಪುನರ್ದರುಶನವೆ ಎಂತೆಂಬುದೆಂದೆನುತ][೮] ॥೮೨॥

.... ನಿಮ್ಮಡಿಯ ಚಿತ್ತದೊ
ಳೆಂತಹುದು ನಿರೂಪವನು ಕೊ
ಟ್ಟಂತೆ ಮಾಡುವೆ ನಿಮ್ಮ ಚರಣವ ಪುನರ್ದರುಶನವ
ಭ್ರಾಂತುವಿಲ್ಲದೆ ಮೋಕ್ಷದೊಳು ಬಂ
ದಂತೆ ಕಾಂಬೆನು ನಿಮ್ಮ ಚರಣವ
ನಂತೆ ಚಿತ್ತಯಿಸುವುದೆನಗೆ ಮರುಮಾತು[೯][ವೃಥಾ][೯]ಯೆಂದ ॥೮೩॥

೧-೧ ಹರಿ (ಕ,ಮ) ೨-೨x(ಕ,ಮ) ೩-೩ ಡು(ಕ,ಮ) ೪-೪ ನಲು(ಕ,ಮ) ೫-೫ ನೀ (ಕ,ಮ) ೬-೬ ಗೆಲವೆನು(ಕ,ಮ) ೭-೭ ಮಕಾಳಿ (ಕ,ಮ) ೮-೮ ಚರಣವನು ನಾ ಪುನರ್ದ್ದರುಶನವೆಂಬುದೆಂದೆನಲು (ಕ,ಮ) ೯-೯ ವೃತ(ಕ,ಮ)

ಲೇಸು ಮಾಡಿದೆ ನಿಂಬ ನಮಗಿ
ನ್ನಾಸೆ ಯಾರೆಂದೆನುತ ಮುನಿಗಳ
೧[ವಾಸಕಿನ್ನಾರರಾರು ಆಧಾರೇನು ಲೋಕದೊಳು]೧
ವಾಸವದಕ್ಕೆಳಸಿದ್ಯೆ ಭವ
ಪಾಶವನು ಪರಿದಿಕ್ಕಿದ್ಯೆನಿ
ರ್ದೋಷನಾದ್ಯೆ ನಿಂಬ ೨ನೀ೨ ನಿರ್ಧರಿಸಿ ೩[ನಿರವಣವ]೩ ॥೮೪॥

ಮುನಿಗಳಾ ಸಜ್ಜನಜನರು ೪[ಧು]೪ ರ
ದನುವರದೊಳಗೆ ನಿಂಬ ತನ್ನಯ
ತನುವನಳಿವುದನರಿತವರು ಕಣ್ಬನಿಯ ತೀವಿದರು
ಜನಪನನುವರ೫[ಕಾದೆ ವಲ ನೀ
ತನುವನಳ್ಕಾಡಿದಿರೆನುತ ಘೋ]೫
ಳೆನುತ ಮರುಗಿದುದಾಗ ಚಾತುರ್ವರ್ಣ ಸಂದೋಹ ॥೮೫॥

ಧಾತ್ರಿಯೊಳಗಿನ್ನಾರು ಸಕಲ ಸು
ಪಾತ್ರವನು ಮನ್ನಿಸುವರಾರೀ
ಧಾತ್ರತನದುನ್ನತ ಮಹಾಮಹಿಮೆಯೊಳಗಿನ್ನಾರು
ಮಾತೃಪಿತೃವಂದದಲಿ ಲೋಕದ
ಚಾತುವರ್ಣವ ಪಾಲಿಸು೬[ವವರು]೬
ಗೋತ್ರ ಜನಕಾನನ್ಯ೭ರಾರೆಂದೆನುತ ಮರುಗಿದರು ॥೮೬॥

ಮುನ್ನ ಧರ್ಮವನಾಂತನೇ ಕೇ
ಳಿನ್ನು ಹವಣೇನೆನುತ ಲೋಕದೊ
ಳುನ್ನ ಮಹಾಮಹಿಮಗುಣ ಸಂಪನ್ನರಪ್ಪವರು
ಸನ್ನುತಿಯ ಸುಕೃತೋಪಶಕ
ಧನ್ಯರುತ್ತಮ ಪುರುಷರಗಣಿತ
೮[ರಿ]೮ನ್ನು ಮುನ್ನಾ೯[ದಾರು] ಚಾತುರ್ವರ್ಣಜನಗಳಿಗೆ ॥೮೭॥

೧–೧ವೇಸಕಿನ್ನಾರಾಧಾರವೇನು ಲೋಕದೊಳು(ಕ,ಮ) ೨–೨ ನ (ಮ) ೩–೩ ದ್ಯೆನಿರವಾಣವಾ (ಕ) ದ್ಯೆರಣವಾ(ಮ) ೪–೪ ಧ(ಕ,ಮ) ೫–೫ ಕಾದ್ಯೆವಲ । ದುನವಕ್ಕಾರೆನುತ ಘೋ(ಕ) ಕಾದ್ಯೆವಲ । ಮನವಕ್ಕಾರೆನುತ ಹೇ(ಮ) ೬–೬ ಹ (ಕ,ಮ) ೭+ಕಿ(ಕ,ಮ) ೮–೮ ರ (ಕ,ಮ) ೯–೯ ಧಾರ (ಕ,ಮ)

[೧]ನುಡಿಯೊಳೆರಡಿಲ್ಲದರು ಪಾಪ
ಕೈಡೆಗೊಡದರುತ್ತಮರು ಚಿತ್ತದ
[೨][ದೃಢ][೨]ರು ಲೋಕೈಕರು ವಿಮಲ ಕುಲಜರು ಮಹಾತ್ಮಕರು
ತಡೆಯದೆನ್ನಯ ಧರ್ಮವನುಮೀ
ಪೊಡವಿಯೊಳು ಚಂದ್ರಾರ್ಕರುಳ್ಳನ
ನಡೆಸುವುದು ನೀವೆಂದೆನುತ ಸಾಮಂತ ಬೀಳ್ಕೊಂಡ ॥೮೮॥

ಅಂತರಿಸಿದುದು ಲೋಕದೊಳು ಸಾ
ಮಂತ ನಿನ್ನಯ ಧರ್ಮವನು ಪೋ
ಲ್ವಂತೆ ಮಾಡುವರಾರುಮೀ ಕಲಿಕಲದೊಳಗೆನುತ
ಚಿಂತೆ ಮಸಗಿದುದಾಗ ಚಿತ್ತದ
ಭ್ರಾಂತು ಕವಿದುದು ಸಜ್ಜನರು ನಾ
ವೆಂತು ಮಾಡುವೆವೆನುತ ಮನಗುಂದಿದರು ಖೇದದಲಿ ॥೮೯॥

ಅಂಬರ [೩][ವದಿ][೩] ನನುದಯಮಿಲ್ಲದ
ವಂಬುಜಗಳಿಲ್ಲದ ಸರೋವರ
ಕುಂಭಿನಿ [೪][ಯು][೪] ಪತಿಯಿಲ್ಲದಾನನ ನಯನವಿಲ್ಲದುದು
ಶಂಬರಾರಿವಿದಾರ ಜಿನಚರ
ಣಾಂಬುರುಹಯುಗ ಮತ್ತಮಧುಕರ
ನಿಂಬ ನೀನಿಲ್ಲದೊಡೆ ಧರ್ಮವದಿಲ್ಲವೆನೆ ಕೆಲರು ॥೯೦॥

ಅಸಮಸಾಸಿರದೊಳಗೆ ಕಾದುವ
ವ್ಯಸನವಿದು ನಿಮಗೇಕೆನುಂತಲಾ
ಬಸದಿಯೊಳು ನೆರೆದಿರ್ದವರು ತಮತಮಗೆ ಬಿನ್ನವಿ[೫][ಸೆ][೫]
ವಸುಮತೀಶಗೆ ಬಂದನುವರಕೆ
ನುಸುಳಿ ಬದುಕುವುದೇಸು ದಿನ ನಾ
ನೊಸೆದು ಮಾಡಿದ ಧರ್ಮ ನಿಃಫಲವೆಂದ ಸಾಮಂತ ॥೯೧॥

---

೧ + ನುಡಿಯೊ(ಕ) ೨–೨x(ಕ,ಮ) ೩–೩ ದೊಳಿ (ಕ,ಮ) ೪–೪ ಗೆ(ಕ,ಮ) ೫–೫ ಸಿ(ಕ,ಮ)

ಒಂದಗುಳ ಪರರಿ[೧][ತ್ತು][೧]ದದು ಕುಡಿ
ನಿಂದ ಭಾರಕೆ ಮಿಗಿಲೆನಲು ನೆರೆ
ಹಿಂದೆ ನಮಗೀಗಿತ್ತ ಜೀವಿತದರ್ಥ ಭಾರವನು
ಇಂದು ನಾನುಳುಹಿದೊಡೆ ನರಕದೊ
ಳೊಂದು ಪಲ್ಯೋಪಮದೊಳಾಯಸ
ವೆಂದು ಹಿಂಗಿಸಲರಿದೆನುತ ಸಾಮಂತನಿಂತೆಂದ ॥೯೨॥

ಏನು ಸದ್ಗುಣವಿರಲಿ [೨][ತನ್ನುವ
ರನುವಕಾದವ][೨] ಹೊರೆವ ನೃಪರಿಗೆ
ಏನು [೩][ಸೇವೆಯ ಮಾಡಿದರೆ][೩] ಸರಿಯಹುದೆ ಲೋಕದೊಳು
ದಾನ ಧರ್ಮದ ಫಲವ ಬಯಸುವೊ
ಡಾ ನೃಪಗೆ ತನ್ನ ಸುವನೊಪ್ಪಿಸ
ಲೇನು ಮಾಡಿದ ಧರ್ಮ ತನಗಹುದೆಂದ ಸಾಮಂತ ॥೯೩॥

ಒಡಲಿಗೊಡವೆಯನಿತ್ತ ಜೀವಿತ
ದೊಡೆಯನವಸರದೊಳಗೆ ಬೈಚಿ
ಟ್ಟೊಡಲು ಸ್ಥಿರವಾಗಿಹುದೆ [೪][ನೋ][೪] ಡೆಯದಾವ ಕಾಲದೊಳು
ಒಡಲನೊಡೆಯುಗಿತ್ತು ಜೀವಿತ
[೫]ದೊಡ[೫]ವೆಯನು ಧರ್ಮದೊಳು ಬೈಚಿ
ಟ್ಟಿಡುವ ಸಮ್ಯಕ್ತರಿಗಹುದು ಸ್ವರ್ಗಾಪವರ್ಗವದು ॥೯೪॥

ಸತ್ತ ಸೂತಕ ಷೋಡಶ ದಿವಸ
ಹೆತ್ತ ಸೂತಕವಷ್ಟ ದಿವಸದೊ
ಳರ್ತಿ ಮದುವೆಯ ಮಾ[೬][ಡೆ][೬] ಸೂತಕ ನಾಲ್ಕು ದಿವಸದೊಳು
ಇತ್ತ ಪರಿಹಿಸುವುದು ಜೀವಿತ
ದರ್ಥ ಸೂತಕ ಭವಭವ[೭][ಗಳೊ][೭]ಳು
[೮][ಮ][೮]ತ್ತೆ ಪರಿಹರಿಸುವೊಡರಿದು ಕೇಳೆಂದ ಸಾಮಂತ ॥೯೫॥

೧–೧ ತ್ತ(ಕ,ಮ) ೨–೨ ತಂನುದಾರಾನುಕಾದವ(ಕ) ತಂನುದರಾನು ಕಾದರರ(೦) ೩–೩ ಸೀಮೆಯ ಮಡಿದರೆ(ಕ,ಮ) ೪–೪ x(ಕ,ಮ) ೫–೫ ಡೆ(ಕ) ೬–೬ ಡಿ (ಕ,ಮ) ೭–೭ ದೊ (ಕ,ಮ) ೮–೮ ನು(ಕ,ಮ)

ಧನವೆ [೧]ಸದ್ಧರ್ಮಕ್ಕೆ[೧] ಕಾರಣ
ಧನವೆ ಸ್ವರ್ಗಪವರ್ಗ ಕಾರಣ
ಧನವೆ ನಿವೃತಿಪಥಕೆ ಕಾರಣ ಧನವಿಹೀನರಿಗೆ
ತನುವೇ ಕಾರಣವಾಗಿಹುದು ತನು
ಧನದ ಶಕ್ತಿಗಳಿಲ್ಲದವರಿಗೆ
ಮನವೆ ಕಾರಣವೇಂಬುದಿದು ಸಿದ್ಧಾಂತವಚನದೊಳು ॥೯೬॥

ಧನವ ಸದ್ಧರ್ಮಂಗಲೆಡೆಯೊಳು
ತನುವ ಸಚ್ಚಾರಿತ್ತದೆಡೆಯೊಳು
ಮನವ ತಾಪಸಧ್ಯಾನದೆಡೆಯೊಳಗಿಟ್ಟ ಮನುಜರಿಗೆ
ತನುಧನದ ಮನಸಫಲವೆಂಬುದ
ನನುಮಿಷರೆ ಕೊಂಡಾಡುವರು ಸ
ಜ್ಜನರು ಪೊಗಳುವುದೇನರಿದು ಸಮ್ಯುಕ್ತ್ವರಾದವರ ॥೯೭॥

ದಾತನನುವರಕಾಗದವ ಸಂ
ಪ್ರೀತಿಯೊಳಗೆರ[೨][ಡನ್ನು][೨] ಬಗೆದವ
ಜಾತದೊಳು [೩][ವರ][೩] ಸುವವ ಪರರಪಘಾತಕೆಳಸುವವ
ನೀತಿವಿದನಲ್ಲದವ ಪರರೊಳ
ನೀತಿಯನು ಬಯಸುವವ ರಣದೊಳು
ಭೀತನಾದಂಗಹುದೆಲೇ ಜನ್ಮಾಂತಪಾತಕವು ॥೯೮॥

ವಿತರಣ ವಿಹೀನದವ ಸಜ್ಜನ
ಪ್ರತತಿಗಹಿತವ ಬಹೆವನನುದಿನ
ಸುತವಿದಾದದೊಳಿ[೪][ಹ][೪]ವನಾ ಪರಸತಿಗೆ ಬಯಸುವನ
ಸುತಮಹಾ ಸಚ್ಚರಿತರೊಳಸಂ
ಗತವನೆಸಗುವ ರಣದೊಳಾದ
ದ್ಭುತಕೆ ಹಿಮ್ಮೆಟ್ಟುವಗಹುದು ಜನ್ಮಾಂತಪಾತಕವು ॥೯೯॥

೧-೧ ಷಡ್ಧರ್ಮಕ್ಕೆ (ಕ) ೨-೨ ಡು (ಕ,ಮ) ೩-೩ ವರು (ಕ), ಮರ(ಮ) ೪-೪ x (ಕ,ಮ)

ಸತಿಯ ಸೆರೆಯಿಟ್ಟವಗೆ ಮಾತಾ
ಪಿತವಿರೋಧವಂಗೆ ಧನದೆಡೆ
ಗತಿಮಹಾಲೋಭಂಗೆ ಸಂಪ್ರೀತಿಯೊಳು ಪುಸಿವಂಗೆ
ಹಿತವನರಿಯದವಂಗೆ ಪರರವ
ಗತಿಯನೆಸಗುವವಂಗೆ ಕಾಲೋ
ಚಿತದೊಳೋಸರಿಪಂಗಹುದು ಜನ್ಮಾಂತಪಾತಕವು ॥೧೦೦॥

ಭೂತಹಿತನಲ್ಲದವ ದುರ್ವಿಷ
ಯಾತುರಂಗದಳಿಹವ ತನ್ನೊಳು
೧[ಸಾತಿಶಯ]೧ವಿಲ್ಲದವ ಖಳರೊಳು ಪ್ರೀತನಾಗಿದವ
ಓತೆಡೆಯೊಳಪಘಾತದವ ಬಹು
ಮಾತುಗಳ ಗಳಹುವವ ಪಾಪಕೆ
ಭೀತನಾಗದವಂಗಹುದು ಜನ್ಮಾಂತಪಾತಕವು ॥೧೦೧॥

ಗುರುವ ನಿಂದಿಸಿದಂಗೆ ಪಂಚಾ
ಕ್ಷರವನರಿಯದವಂಗೆ ಸಮ್ಯ
ಗ್ದರುಶನವಿಹೀನಂಗೆ ಸತ್ಕುಲವಿಕಲನಾದಂಗೆ
ವಿರಥನಾದಂಗಾ ಮಹಾಸಂ
ಗರದೊಳಗೆ ದೊರೆಯವಸರದೊಳೋ
ಸರಿಸಿ ೨[ಪೋ]೨ ದಂಗಹುದಲಾ ಜನ್ಮಾಂತಪಾತಕವು ॥೧೦೨॥

ಹುಸಿಯನುಸುರುವವಂಗೆ ಮಾತೆಯ
ಶಿಶುವನಗಲಿಸಿದಂಗೆ ಮೊರೆಗೆ
ಟ್ಟಸಮ ಸಂಗದವಂಗೆ ದುರ್ಗುಣ೩ವಿ[ಷ]೩ಯನಾದಂಗೆ
ಕುಸುಮಶರತಾಪಂಗೆ ಸಂಚಿತ
ದಶುಭ ಕರ್ಮದವಂಗೆ ದಾತನ
ಪಿಸುಣನಾದಂಗಹುದಲಾ ಜನ್ಮಾಂತಪಾತಕವು ॥೧೦೩॥

೧–೧ ಸಾತಿಕ(ಕ,ಮ) ೨–೨ x (ಕ,ಮ) ೩–೩ ಸ (ಕ,ಮ)

ಜಲವ ಶೋಧಿಸದಂಗೆ ಕೃಷಿಯೊಳು
ನೆಲನ ಸುಡಿಯಿಸುವಂಗೆ ಪಕ್ಷಿಗೆ
ಬಲೆಯ ಬೀಸುವವಂಗೆ ಮೃಗಸಂಕುಲ[೧][ವ][೧] ಕೊಲುವಂಗೆ
ಹಲವನುಸುರುವವಂಗೆ ಧರ್ಮದ
ನೆಲೆಯನರಿಯದವಂಗೆ ಪಾಪದೊ
ಳೊಲಿದು ತೊಡರಿದವಂಗಹುದು ಜನ್ಮಾಂತಪಾತಕವು ॥೧೦೪॥

ಕೊಟ್ಟು ಮರುಗುವವಂಗೆ ದೈವದ
ನಿಷ್ಠೆಯಿಲ್ಲದವಂಗೆ ಪುಣ್ಯದ
ಬಟ್ಟೆಯರಿಯದವಂಗೆ ಫಲದೊಳು ದುಷ್ಟನಾದಂಗೆ
ಕೆಟ್ಟು ಬಳಸುವವಂಗೆ ಲಜ್ಜೆಯ
ಸುಟ್ಟು ಕರುಕಿದವಂಗೆ ಬಡವರ
ನಿಷ್ಟಸಾಧಿಸುವಂಗಹುದು ಜನ್ಮಾಂತಪಾತಕವು ॥೧೦೫॥

ಗುರುವುದಾ[೨]ಸಿನ[೨] ಮಾಡುವಗೆ ತಾ
ನಿರದೆ ಧರ್ಮವ ಬಿಟ್ಟು ತಮಗೇ
ನಿರದೆ ಮಕ್ಕಳ ಮಾರಿತಿಂಬಗೆ ದೂರವೆಂದಕಟವಗೆ (?)
ದುರುಳತನದಲಿ ನಡೆದ ಪಾಪಿಗೆ
ಕರುಣವಿಲ್ಲದೆ ಕೊಲುವ ತಪ್ಪಗೆ
ನಿರದೆ ಜಾತಿಯ ಸಂಕರಗ ಜನ್ಮಾಂತಪಾತಕವು[೩] ॥೧೦೬॥

ಕೊಂಡೆಯವ ನುಡಿವಂಗೆ ನೃಪರಿಗೆ
ದಂಡದೀರಿಸುವಂಗೆ ಗಂಡರ
ಪೆಂಡಿರಿಂಗೆಲಸುಗೆ ಕಂಡಿಚ್ಛೆಯೊಳು ನುಡಿವಂಗೆ
ಭಂಡ ಬೆಳಸುವವಂಗೆ ಲಂಚವ
ಕೊಂಡು ನ್ಯಾಯವನುಸುರುವಂಗೆ ಪ್ರ
ಚಂಡ ಕೋಪದವಂಗಹು[೪][ದು][೪] ಜನ್ಮಾಂತಪಾತಕವು ॥೧೦೭॥

೧–೧ x (ಕ,ಮ) ೨–೨ ಸನವ (ಮ) ೩ ಈ ಪದ್ಯ 'ಮ' ಪ್ರತಿಯಲ್ಲಿ ಮಾತ್ರ ಇದೆ(ಸಂ) ೪–೪ ದಲಾ(ಕ,ಮ)

ಅತಿಥಿಗಿಲ್ಲೆಂದವಗೆ ಮಾತಿನೊ
ಳಿತರನತಿಗಳೆವಂಗೆ ಧರ್ಮೋ
ಚಿತವನರಿಯದವಂಗೆ ವಿತರಣಗುಣವಿಹೀನಂಗೆ
ಪತಿವ್ರತೆಯ ಹಳಿದಂಗೆ ಲೋಕದೊ
ಳತಿಕೃಪಣನಾದಂಗೆ ಮಾನ್ಯರ
ನುತಿಗೆಡಿಸಿದಂಗಹುದಲಾ ಜನ್ಮಾಂತಪಾತಕವು ॥೧೦೮॥

ಒಳಗೆರೆಯನುತ್ತ [೧][ಂಗೆ][೧] ಕಾಮದ
ಕಳವಳಕೆ ಹರಿದಂಗೆ ಸತಿಯರ
ನುಳಿದು ಬಯಸುವವಂಗೆ ದಾಸಿಯೊಳೊಸೆದು ನೆರೆವಂಗೆ
ಕಳೆವುಮಾಡುವವಂಗೆ [೨][ಕುಟಿಲೆಯ
ರೊಳಗೆ ಭುಂಜಿಸುವಂಗೆ][೨] ದೊರೆಯಿ
ಟ್ಟುಳದೊಳೋಡುವವಂಗಹುದು ಜನ್ಮಾಂತಪಾತಕವು ॥೧೦೯॥

ಶಿಶುವ ದಾಂಟಿದವಂಗೆ ಬಿತ್ತಿದ
ಸಸಿ[೩][ಯ][೩] ಮೆಟ್ಟಿಳದವಂಗೆ[೪] ಕದನವ
ಮಸೆದು ಹೇಳುವವಂಗೆ [೫][ಇ][೫]ರ್ವರ ಪೆರಸನಿಡುವವಗೆ
ವಿಷದ ವಿಕ್ರಯದಂಗೆ ಮೃತಕರ
ಹೆಸರ ಹಸಿದಿಟ್ಟವಗೆ ಮಾತಿಗೆ
ಹಸಿದು ಭುಂಜಿಸುವಂಗಹು[೬][ದು][೬] ಜನ್ಮಾಂತಪಾತಕವು ॥೧೧೦॥

ನುಡಿದೆರಡು ನುಡಿವಂಗೆ ಸಂತತ
ಬಿಡದೆ ಕಲಹದವಂಗೆ ಕರುವಿಗೆ
ಕುಡದೆ ಪಾಲಂಬವಗೆ ರಿಣಗೊಂಡರ್ಥ ಕುಡದಂಗೆ
ಹಡಗನೇರಿದವಂಗೆ ಬಡವರ
ನೆಡಹಿಕಾಣದವಂಗೆ ಸುವ್ರತ
ವಿಡಿದು ಬಿಡುಹಂಗಹುದಲಾ ಜನ್ಮಾಂತಪಾತಕವು ॥೧೧೧॥

೧–೧ ಗ(ಕ,ಮ) ೨–೨ ಕುಲಜೆಯರೊಳಗೆ ಚುಂಬಿಸುವಂಗೆ(ಕ,ಮ) ೩–೩ x (ಕ,ಮ) ೪–೪ ಕೀಳುವಂಗೆ(ಕ) ೫–೫ ಮಿ(ಕ,ಮ) ೬–೬ ದಲಾ(ಕ,ಮ)

ಕಾಡಿಬೇಡುಂಬುವಗೆ ಧರ್ಮವ
ಮಾಡಲಾರದವಂಗೆ ಮುನಿಗಳ
ನೋಡಿ ನಿಲಿಸದವಂಗೆ ಸದ್ಗತಿಗಾಡಲರಿ[೧][ಯದ][೧]ಗೆ
ನಾಡದುರ್ಜನದವಗೆ ಪಾಪವ
ಪಾಡು[೨][ಗೊಳ್ಳುವವಂಗೆ][೨] ರಣದೊಳು
ಹೇಡಿಗೊಂಡಂಗಹುದಲಾ ಜನ್ಮಾಂತಪಾತಕವು ॥೧೧೨॥

ಕಪಟವೇಷದವಂಗೆ ಪಶುಗಳ
ನಪದಯದಿ ಗೆಯ್ವಂಗೆ ಮಿಥ್ಯಾ
ತಪವನೆಸಗುವವಂಗೆ ಸಜ್ಜನರುಪಹತದವಂಗೆ
ಸಫಲ ತರುಗಡಿದವಗೆ ಕೋಪದೊ
ಳುಪಶಮವನುಳಿದಂಗೆ ತನ್ನಯ
ನೃಪವಿರೋಧದವಂಗಹುದಲಾ ಜನ್ಮಾಂತಪಾತಕವು ॥೧೧೩॥

ಕಂಕವಿಕ್ರಯದಂಗೆ ಕೃಷಿಯೊಳು
ಶಂಕೆಯಿಲ್ಲದವಂಗೆ ಲೋಕದ
ಸುಂಕ ಮಣಿಹದವಂಗೆ ಸತಿಪತಿಗಂಕವಿಟ್ಟವಗೆ
ಕೊಂಕಿದರನವ[೩][ಗಡಿ][೩] ಸುವಗೆ ನಿ
ಶ್ಯಂಕೆ ಇಲ್ಲದೆ ಸಮರದೊಳಗಾ
ತಂಕ ಕೊಂಬವಗಹುದಲಾ ಜನ್ಮಾಂತಪಾತಕವು ॥೧೧೪॥

ಅಚವಿಗಿಚ್ಚಿಡುವಂಗೆ ಮುನಿಗಳ
ನುಡಿಯನೊಲ್ಲದವಂಗೆ ವಿಬುಧರ
ನೆಡಹಿ ಕಾಣದವಂಗೆ ತನ್ನಿರ್ದೆಡೆಗೆ ಮುನಿವಂಗೆ
ಕಡು ಚಪಳನಾದಂಗೆ ಧರ್ಮದಿ
ನಡೆಯಲರಿಯದವಂಗೆ ಕೋವಿದ
ರೊಡನೆ ಮಚ್ಚರಿಪಂಗಹುದು ಜನ್ಮಾಂತಪಾತಕವು ॥೧೧೫॥

೧–೧ ದವ(ಕ,ಮ) ೨–೨ ಳ್ಳದವಂಗೆ(ಕ,ಮ) ೩–೩ ಘಟಿ(ಕ,ಮ)

ಕಿರುಗೊಳ ೧[ಗದಳೆ]೧ವಂಗೆ ಮಾತಿನ
ಮರೆಯ ೨[ಲೆಕ್ಕ]೨ದವಂಗೆ ರಾಶಿಯೊ
ಳುರುವ ಜೊಳ್ಳಿಟ್ಟವಗೆ ಪರರಳತೆಯಲಿ ಕುಂದಿಪಗೆ
ಕುರುಗಡನ ಕುಹಿಡಹಿದಂಗೆ ೪[ಕೊಟ್ಟುದ
ಮರೆದು ಇಲ್ಲೆಂಬವಗೆ]೪ ಧರ್ಮವ
ನರಿತು ಮಾಡದವಂಗಹುದು ಜನ್ಮಾಂತಪಾತಕವು ॥೧೧೬॥

ಉಪ್ಪಿನೊಳು ಮಣ್ಣಿಡುವನೆಣ್ಣೆಯ
ತುಪ್ಪದೊಳು ಬೆರಸುವವ ಮಾನದೊ
ಳಪ್ಪುಗೆಯನಿಕ್ಕುವವ ಪಾಲೊಳು ಜಲವ ಬೆರಸುವವ
ಸೊಪ್ಪನೀ ೫[ರೊಳಡ]೫ ಸುವ ಸಂ೬[ತೆ]೬ಯ
ಸೊಪ್ಪ ಕೊಂಬುವ ಕಾರ್ಯವಿಲ್ಲದೆ
ತಿಪ್ಪ ತಿರುಗುವಗಹುದಲಾ ಜನ್ಮಾಂತಪಾತಕವು ॥೧೧೭॥

ಅನ್ನವಿಕ್ಕದವಂಗೆ ತನ್ನೊಳು
ನನ್ನಿಯಿಲ್ಲದವಂಗೆ ಮಾತಿನ
ಗನ್ನಗತಕದವಂಗೆ ಮುನಿಗಳ ಮುನ್ನಿಸದವಂಗೆ
ಕನ್ನ ವಿಕ್ಕಿಸುವಂಗೆ ಗುಣಸಂ
ಪನ್ನನಲ್ಲದವಂಗೆ ಶಾಸ್ತ್ರದಿ
ಧನ್ಯನಲ್ಲದವಂಗಹುದಲಾ ಜನ್ಮಾಂತಪಾತಕವು ॥೧೧೮॥

೭[ಹಾಸ]೭ ವಿಲ್ಲದವಂಗೆ ನಾನಾ
ವೇಷದೊಳು ತಿರಿವಂಗೆ ಮುನಿಗಳ
ವೇಷವನು ಹಳಿವಂಗೆ ಹೀನರನಾ೮[ಸೆ]೮ಗೆಯ್ದಂಗೆ
ನಾಶಧರ್ಮದವಂಗೆ ಮಾಯಾ
ಪಾಶವನು ಬಿಡದಂಗೆ ಸಮರದೊ
ಳೋಸರಿಸಿದಂಗಹುದಲಾ ಜನ್ಮಾಂತಪಾತಕವು ॥೧೧೯॥

೧–೧ x(ಕ) ಗರಳ(ಮ) ೨–೨ ಲಿಕ್ಕಿ (ಕ,ಮ) ೩–೩ ಡಿ(ಕ) ೪–೪ ಕೊಟ್ಟ ಮರದಿಲ್ಲೆಂಬಂಗೆ(ಕ,ಮ) ೫–೫ ರುಳಡಿ (ಕ) ರುಕುಡಿ(ಮ) ೬–೬ ಥಿ(ಕ,ಮ) ೭–೭ ಹೋಸ(ಕ) ಹೊಸ(ಮ) ೮–೮ ಶ(ಕ,ಮ)

ಸರಳ ಮಾಡುವವಂಗೆ ಕುಮ್ಮರಿ
ಗುರಿಯನಿಕ್ಕುವವಂಗೆ ಕೆಯ್ಯೊಳು
ತೊರವ ಸುಡಿಸುವವಂಗೆ ಕರವಾಳಗಳನೆಸಗುವಗೆ
ಸರಸವಿರಸದವಂಗೆ ಮಲಗುವ
ಹೊರಸ ಮಾಡುವವಂಗೆ ಕಟ್ಟಿದ
ಕೆರೆಯನೊಡೆದಂಗಹುದಲಾ ಜನ್ಮಾಂತಪಾತಕವು ॥೧೨೦॥

ಗಂಟ ಕತ್ತರಿಪಂಗೆ ಪರರೊಳು
[೧][ಟೆಂಟಣಿಸಿ][೧] ಗಳಹುವಗೆ ವಿಬುಧರ
ನಂಟನೊಲ್ಲದವಂಗೆ ನೆರೆಮನೆ ಕಂಟಕದವಂಗೆ
[೨][ಮಂಟೆ][೨] ಯದಲಿಂಬಂಗೆ ಸಾಲದ
ಗಂಟ ನುಂಗುವವಂಗೆ ರಣದೊಳು
ಬಂಟನುಳಿದಂಗಹುದಲಾ ಜನ್ಮಾಂತಪತಕವು ॥೧೨೧॥

ಕಾಗೆಗುಣಲಿಕ್ಕುವಗೆ ಮುನಿಗಳ
ಹೋಗ ಹೇಳುವವಂಗೆಯನುದಿನ
ರೋಗ ಹೇಳುವವಂಗೆಯನುದಿನ
ರೋಗದೊಳು ನವೆವಂಗೆ ಧರ್ಮವನಾಗದೆಂಬವಗೆ
[೩][ಜೋಗಿಗಳಿಗೆರಗುವಗೆ][೩] ತನ್ನಯ
ಬಾಗಿಲನು ಪೂಜಿಪಗೆ ಕಾಟದ
ನಾಗರೆಂಬಂಗಹುದಲಾ ಜನ್ಮಾಂತಪಾತಕವು ॥೧೨೨॥

ಕೊಡಲಿಗಾವಿಕ್ಕುವಗೆ ಕಾಟದ
ಸುಡಿಗೆಯನು ಸುಡುವಂಗೆ ಗೊಬ್ಬರ
[೪][ದೆಡೆ][೪] ಯನೊದಗಿಸುವಂಗೆ ಬಡವನ ಹಿಡಿಯೊಳ್ಹಿಡಿವಂಗೆ
ಬಿಡದೆ ಕಲಹದವಂಗೆ ಕೋಪವ
ತಡೆಯಲಾರದವಂಗೆ ಸಜ್ಜನ
ರೊಡನೆ ಮಚ್ಚರಿಸುವಗಹುದಲಾ ಜನ್ಮಾಂತಪಾತಕವು ॥೧೨೩॥

೧–೧ ಗೆಂಠಣಿಸಿ (ಕ,ಮ) ೨–೨ ಮಠೆ (ಕ,ಮ) ೩–೩ ಮೂಗನಾಗಿರ್ದವಗೆ(ಕ,ಮ) ೪–೪ ದಡಿ(ಕ) ದಡೆ(ಮ)

ದೇವಪೂಜೆಯನೊಲ್ಲದವ ಗುರು
ಭಾವನೆಗಳಲ್ಲದವ ಆಗಮ
ಕೋವಿದರ ಕೇಳದವ ನಿಜಶುಭಭಾವವಿಲ್ಲದವ
ಆವ ವ್ರತವಿಲ್ಲದವ ಧರ್ಮವ
ನಾವಗಂ ಮಾಡದವ ಕೃಷಿಯೊಳು
ಕಾವ ಬಿಜ್ಜಿಕ್ಕುವಗಹುಮ ಜನ್ಮಾಂತಪಾತಕವು ॥೧೨೪॥

ಮತಿಯ ಬಲದಿಂದೋದುವನು ಕು
ಶ್ರುತದ ಬಲದಿಂ ಪೇಳಿ ಕುಜ್ಞಾ
ನತೆಯ ಬಲದಿಂದೊಡಬಡಿಸುವಂ ತನ್ನ ಸ್ವೇಚ್ಛೆಯೊಳು
ಮತಿಶ್ರುತಜ್ಞಾನಗಳುಮೆಂದವ
ನತಿಶಯದೆ ನಂ [೧][ಬ][೧] ದೊಡೆ ಪಾಪದ
ಪಥಕೆ ನಡೆಸುವದೆಂಬುದಿದನರಿಯದೆ ಕಿಡುವರೊಲಿದು ॥೧೨೫॥

ಎಲ್ಲ ಗುಣಗಳನೀಯನಘಹರ
ಘುಲ್ಲಶರಜಿತ ಜಿನಪದಾಂಬುಜ
ದಲ್ಲಿ ನಂಬುಗೆಯುಳ್ಳೊ [೨][ಡಾ][೨] ಗುಣವೆಲ್ಲ ನೆಲಸಿಹುದು
ಸಲ್ಲಲಿತ ಮನವಚನಕಾಯಗ
ಳಲ್ಲಿ ದೃಢಸಮ್ಯಕ್ತ್ವರಿಗೆ ನಾ
ನೆಲ್ಲರಿಗೆ ಕೈಮುಗಿ[೩][ವೆ][೩] ಕಳುಹಿಸಿ [೪][ಕೊಡಿರಿ ಎನಲಿತ್ತ][೪] ॥೧೨೬॥

ಕೇಳು ಗಂಡರಸೂರ್ಯ ನಿಂಬನೂ
ಳಾಲುತನವುಂಟೆಂಬೆ ಪರಬಲ
ದಾಳಿಯಿಡುವುದನರಿತು ಬೇಗ ಜಿನಾಲಯಕೆ ಪೋಗಿ
ನಾಳೆ ಕಾದುವೆನೆಂಬ ಮಾತಿನ
[೫]ಹೇ[೫]ಳೆಯಲಿ ನುಸುಳಿದನು ಮುನಿಗಳ
ಮೇಳದಲ್ಲೈ [೬][ದಿದನೆ][೬]ನುತ ಖಳರಂದು ಬಿನ್ನವಿಸೆ ॥೧೨೭॥

೧–೧ ಬಿ(ಕ,ಮ) ೨–೨ ದಾ(ಕ,ಮ) ೩–೩ ದು(ಕ,ಮ) ೪–೪ ಕೊಂಡೆನೆನಲಿತಾ(ಕ), ಕೊಂಡೆನೆನಲಿತ್ತ(ಮ) ೫–೫ ಗೆ (ಮ) ೬–೬ ದನೆವು (ಕ), ದನೆಎ(ಮ)

ದೇವ ಬಿನ್ನಹವುಂಟುಮಿವರಿಗೆ
ಭಾವಹಿಂಸೆಗಳಿಲ್ಲ ಪರರಿಗೆ
ನೋವಿಗೆಳಸವರಲ್ಲವೀರಣದೊಳಗೆ ಕಾದುವ೧[ರೆ]೧
ನಾವು ಬಲ್ಲೆವು ಇವರ ಪರಿಗಳ
೨[ನೀವು]೨ ನಾವಾರದವರೆಂದು
೩[ದೇವ]೩ ಚಿತ್ತವಿಸಿದಿರಲಾ ನಿಂಬಂಗೆ ಕಾಳಗವ ॥೧೨೮॥

ಮಾಡಲಮ್ಮೆವು ಬಿನ್ನಹವ ಮಾ
ತಾಡಲಮ್ಮೆವು ದೇವರುಗಳೊಡ
ನಾಡಲಮ್ಮೆವು ನಿಂಬದೇವನ ಕುಹಕತನದನುವ
ಜೋಡಿಸಿದ ಬಿಜ್ಜಣನ ಬಲದೊಳು
ಮಾಡುವೆನು ಕಾಳಗವನೆಂದೊಡೆ
ದೇವ ಬಸದಿಗೆ ಸರಿವ ಸುಭಟರ ನಂಬುವಿರಿ ನೀವು ॥೧೨೯॥

ಆತ ಬಲ್ಲನು ತನ್ನ ಧರ್ಮದ
ನೀತಿಶಾಸ್ತ್ರಂಗಳೊಳು ಪರಿಚಿತ
ಭೂತಸರ್ವಹಿತೋಪಕರಣದೊ೪[ಳೇನು]೪ ಕಾದುವರೆ
ಭೀತಿಗೊಂಬನು ಪಾಪವೆನೆ ಪರ
ಘಾತಕೆಳಸುವನಲ್ಲ ಕೈ ಮೈ
ಗಾಂತು ತುರಿಸಲು ಕೈದೊಳೆನೆಂದರು ಖಳಜನರು ॥೧೩೦॥

ಮುಟ್ಟಿ ಬಂದುದು ಬಿಜ್ಜಣನ ಬಲ
ವಿಟ್ಟಳಿಸಿದುದನರಿತು ನಿಂಬನು
ಬಿಟ್ಟನಾಗಳೆ ಹೇಮ೫[ಕಾ]೫ ಮಾವನಿಗಳಾಸೆಯನು
ತಟ್ಟಿ ಹೊದೆದನು ಮುನಿಸಮೂಹದ
ನಟ್ಟನಡುವೈದನೆಯೆನುತಲಾ
ಕಷ್ಟ ನಾಯಕರಂದು ಕಟಕಿಯನಾಡಿದರು ಕೂಡಿ ॥೧೩೧॥

೧-೧ ನೆ(ಕ,ಮ) ೨-೨ x(ಕ,ಮ) ೩-೩ ದೇವರು ನೀವೊ(ಕ) ದವರನಿಲೊಚಿ(ಮ) ೪-೪ ತಾನೇಕೆ(ಕ,ಮ) ೫-೫ ರಾ(ಕ,ಮ)

ಒಂದು ಬಿನ್ನಹ ಜೀಯ ನಾವೇ
ನೆಂದಡದು ನಿಮ್ಮಡಿಯ ಚಿತ್ತಕೆ
ಸಂದೆಹವದಾಗಿಹುದು ನಿಂಬನ ಕರೆಸೆನಲು ನೃಪತಿ
ಎಂದನಾಗಳೆ ಕುಹಕವನು [1][ಈ][1]
ಹಿಂದೆಗಳಹಿದಿರಾಯುಧವ ಮರ
ನೆಂದು ಭಂಗಿತರಾದಿರೆನೆ ಮನಗಂದಿದರು ಖಳರು ॥೧೩೨॥

ಜರೆಯಲಾ ನೃಪ ಖಳಜನರ ಮುಖ
ದರಿ[2]ವು[2] ಪಾರಿತು ಮುಖದೊಳಿಹ
ಮೆರಹುಗೆಟ್ಟಿತು ಬಿನ್ನಹದ ಮಾತರತು ಹೊಯ್ತಾಗ
ತೆರಹುಗೊಂಡುದು ದುಗುಡ ಮಂದಿಯ
ಮರೆಯ ಸಾರುತಲೆದ್ದು ಮಂದಿಯ
ಸೆರಗಿನಿಂದೊಸರಿಸಿದರವರತ್ತ ಮತ್ತಿತ್ತ ॥೧೩೩॥

ವಿನಯನಿಧಿ ಸಮ್ಯಕ್ತ್ವಯುಕ್ತನು
ಜಿನಪದಂಬುಜಮತ್ತಮಧುಕರ
ನನುಪಮೊನ್ನತಶೀಲಗುಣಸಂಪನ್ನನಪ್ರತಿಮ
ಘನಮಹಾಸಂಗರದೊಳಗೆ ಸಂ
ಹನನವುಳಿದೆಯ್ದಿದನು ಸ್ವರ್ಗವ
ನನುನಯದಿ ಸಾಮಂತಕಥನದೊಳಿದು ತ್ರಿತಯ ಸಂಧಿ ॥೧೩೪॥

❖❖

೧–೧ x(ಕ,ಮ) ೨–೨ ರೊ (ಮ)

ಸಂಧಿ : ನಾಲ್ಕು

ಗಂಡರಾದಿತ್ಯಾಂಕ ಮಹಿಮೋ
ದ್ದಂಡ ರಿಪುವೇತಂಡನುದಯದ
ಚಂಡಕರಸಮತೇಜ ತನ್ನಯ ಬಲವನೀಕ್ಷಿಸುತ
ಮಂಡಿತಾಖಿಲ ಶೀಲಗುಣ ಭೂ
ಮಂಡಲಾಶಿರೋಮಣಿಯೆನಿಪ ಪರ
ಮಂಡಲಪ್ರಳಯಕಾಲ ನಿಂಬನದೇಕೆ ತಡೆದನೆನೆ ॥೧॥

ಇತ್ತ ಸಾಮಂತನು ಮಹಾದೃಢ
ಚಿತ್ತನಾದನು ಮುನಿಸಮೂಹಕೆ
ಮತ್ತೆ ಬೀಳ್ಕೊಂಡಾಗ ಪೊರಮೊಟ್ಟನು ಜಿನಾಲಯವ
ಉತ್ತಮರು ಪೊಡಮಡಲು ಕೈವಿಡಿ
ದೆತ್ತಿ ತಳ್ಕೈಸಿದನು ಧರ್ಮವ
ಮತ್ತೆ ಮರೆಯದಿರಿಂದ್ರಚಂದ್ರಾದಿತ್ಯರುಳ್ಳನ್ನ ॥೨॥

ಧರ್ಮವೆಂಬುದು ಭವಭವದಿ ಬಹು
ದುರ್ಮತಿಯ ಕಿಡಿಸುವುದು ಪಾಪದ
ವರ್ಮ ನಿರ್ಮೂಲಕ್ಕೆ ಕಾರಣ ಮುಕ್ತಿಸಾಧನವು
ಧರ್ಮವನು ಮರೆಯಲ್ಕೆ ಮತ್ತಾ
ಕರ್ಮ ಬೇರೊಂದಿಲ್ಲೆನುತ ಜಿನ
ಧರ್ಮವನು ನಂಬುವುದೆನುತ ಸಾಮಂತ ಬೀಳ್ಕೊಂಡ ॥೩॥

ಅನುಜರಾಂತಾ ಕಮಬಲದೇವರು ಮಹಾಬಿರುದರು ಮಹಾ
ಸುಭಟರೆಂದೆನಿಸಿ ಗಂಡರಧಿಪನರಮನೆಗೆ ॥೪॥

---

೧ 'ಕ' ಹಸ್ತಪ್ರತಿಯಲ್ಲಿರುವ ಪರಿಷ್ಕರಿಸಲು ಸಾಧ್ಯವಾಗದ ಈ ಅಪೂರ್ಣ ಪದ್ಯವನ್ನು ಹಾಗೆಯೇ ಇಡಲಾಗಿದೆ. 'ಮ' ಪ್ರತಿಯಲ್ಲಿ "ಇಲ್ಲಿ ಪದ್ಯ ಬಿಟ್ಟಿದೆ" ಎಂದು ಬರೆಯಲಾಗಿದೆ.

ಮುಂದೆ ನಡೆದುದು ಪಾಠಕರ ಕೃತಿ
ಬಂ[ಧ] ಬಿರುದಾವಳಿಯ ನೋಡುತ
ಗೊಂದಣದಿ ಸಮ್ಯಕ್ವಯುಕ್ತರು ವಿಬುಧತಿಂಥಿಣಿಯ
ಹಿಂದೆ ಸಾಲಿಟ್ಟುದುದು ಬಿಜ್ಜಣ
.........*...........................
.... ನೊಡನೆ ಕಾದುವ ವೀರನೀತನಲ್ಲದಾರೆನುತ ॥೫॥

ನಗೆಮೊಗದ ಸಾಮಂತ ನಿಂಬನ
ಪೊಗಳುವರು ಕಡೆಯಿಲ್ಲ ಬಿಜ್ಜಣ
ನಗಣಿತ ಮಹಾಬಲವ [೧][ಗೆಲ್ವ][೧] ನಿಶ್ವಂಕನೆಂದೆನುತ
ಮಿಗುವ [೨][ಪೌರುಷ][೨] ವಂತನೀ ಮೂ
ಜಗದೊಳಚ್ಚರಿಯೆಂದೆನುತ ಕಾ
ಳಗದೊಳತಿಬಳವೀರನಲ್ಲ[೩]ದೆ ಧೀರದಾ[೩]ರೆನುತ ॥೬॥

ತೆಗೆದು ಬಂದುದು ವಾಜಿ ಕತ್ತಳ
ಬಿಗಿದ ಬಿಂಕದ ಹೊನ್ನ ಪಲ್ಲಣ
[೪][ಮೊಗದ][೪] ಮೊಗರಂಬದೊಳು ಕಿರುಗೆಜ್ಜೆಯ[೫][ದ][೫] ಸೂತ್ರಿಕೆಯ
ಮಿಗುವ ಮಾಣಿಕವಟ್ಟಿ [೬]ಸಕತಿಯೊ
ಳೊಗೆದ ಪಟ್ಟಾವಳಿಯ ಗೊಂಡೆಯ
ಝುಗಝುಗಿಸಿದುದು ರವಿಯ ರಥದುರವಣೆಯ ತೇಜಿವೊಲು ॥೭॥

ಕೊರಳ ಸರಪಳಿ ದೃಷ್ಟಿಗಿಕ್ಕಿದ
[೭][ಕರಿಯ][೭] ಕರುವಳಿ ದಂಡೆಯಿಂದವೆ
ಮುರಿದ ಕಡೆ ನೇಣಿಂದ ಹಿಡಿ [೮][ದ][೮] ವರೆಡಬಲನ ನಡುವೆ
ಶಿರದ ಮೂಗಿನ ಪವಳ[೯] ....[೯]
ಕರಿದಿದೆನಿಪ [೧೦][ಚವುರಿಯ][೧೦] ತೆತ್ತಿಸಿ
ಮರತಮಾವದು ತೆಗೆದು ಬಂದುದು ನಿಂಬನೊಡನಾಗ ॥೮॥

---

* ಈ ಪದ್ಯದಲ್ಲಿ ಬಿಂದುಗಳಿಂದ ತೋರಿಸಿದ ಭಾಗ ಎರಡೂ ಹಸ್ತಪ್ರತಿಗಳಲ್ಲಿಲ್ಲ.
೧–೧x(ಕ) ಗೆಲ್ಲುವ(ಮ) ೨–೨ ಪೌರಸಾ (ಕ,ಮ) ೩–೩ ದಡಾ(ಮ) ೪–೪ x(ಕ,ಮ) ೫–೫ x(ಕ,ಮ) ೬+ ಯ(ಕ,ಮ) ೭–೭ ಕಯ್ಯ (ಕ,ಮ) ೮–೮ x(ಕ,ಮ) ೯–೯ ಇಷ್ಟು ಎರಡೂ ಹಸ್ತಪ್ರತಿಗಳಲ್ಲಿಲ್ಲ. ೧೦–೧೦ ಚಟ(ಕ) , ಚೌ(ಮ)

ಉರಿಯನುಗುಳುವ ಬಣ್ಣ ಬಳೆದಿಹ
ತರದ ಹಲಗೆಯ ಹಕ್ಕರಿಕೆ ಪೇ
ರುರದ ಘಮ್ಮಗೆ ನೇಣು ಕುಣಿಕೆಯ ಬೆಂಡುಕೊಂಡಿಗಳ
ಸರಿದು ಸಂದಿಗೆ ಜಡಿದ ಬೆಳ್ಳಿಯ
ತರದ ಮೊಳೆಗಲ ಚೌಕು ಪುಲ್ಲಿಯ
ಸರಿಗೆ ಹೊದಿಸಿದ ಹೊನ್ನ ಹೊಂಬಟ್ಟೆಗಳ ಹೊಳಹುಗಳ ॥೯॥

ಕಂದವ[೧][ಕ್ಕ][೧]ರಿಕೆಯೊಳೆಸವ ಬಲ
ಬಂದದೋರಣ ತೆರೆಯ ಮಿಂಚಿನ
ಮುಂದೆ ಮೊಗರಂಬದೊಳು ತೆತ್ತಿಸಿ ನೊಸಲಕನ್ನಡಿಯ
ಚಂದಚಂದದ ಸಡಕು ಚಟಕದೊ
ಳಂದವಿಟ್ಟಂತಿರಲು ಬಳಸಿರ
ಲಂದು ಬಂದುದು ತುರಗ ಸಾಮಂತನೊಳು ಸಂವರಿಸಿ ॥೧೦॥

ಹೊಳೆದು ಮೆಟ್ಟುತ ಸುಳಿವ ಸುಳುಹಿನ
ನೆಳಲಿಗದರುತ ಮುಂದೆ ದಾರಿಯ
ಕುಳಿತವರನೆಡಗಲಿಸಿ ದಾಂಟುತ ನೋಡುತಿಕ್ಕೆಲನ
ನೆಲನ ಕೆದರುತ ಖುರದ ಮೊನೆಯಲಿ
ಕಲೆದು ಕೆಂಕರಿಸುತ್ತ ರಿಪುಗಳ
ತುಳಿವವೊಲು ಬಂದುದು ತುರಗ ಸಂವರಿಸಿ ಸಂಗಡದಿ ॥೧೧॥

ರಾಜವಾಹನವೆರಸಿಯಂಗಡಿ
ರಾಜವೀಥಿಯೊಳೆಸೆದು ಬರಲಾ
ರಾಜಪುತ್ರರು ಮಧ್ಯದಲಿ ಮೃಗರಾಜಂದದಲಿ
ರಾಜರಾಜನ ಪೋಲ್ತು ನೊಸಲೊಳು
ರಾಜಿಸುತ್ತಿರೆ ಧರ್ಮಚಕ್ರ ವಿ
ರಾಜಿಸಲು ನಡೆತಂದನರಮನೆಗಂದು ಸಾಮಂತ ॥೧೨॥

೧-೧ ಕ(ಕ,ಮ)

ಮಂಡಳಿಕರಪ್ರತಿಮ ಸುಭಟರು
ಗಂಡುಗಲಿಗಳು ರಿಘುನಿಕರವನು
ಖಂಡಿತರು ನಿಸ್ಸೀಮ ಮಹಿಮೋದ್ದಂಡರಗಣಿತರು
ಮಂಡಳಿಸಿ ಬಳಸಿರಲು ಮಧ್ಯದ
ಚಂಡಕರಸಮತೇಜನಂದದಿ
ಗಂಡರಾದಿತ್ಯಾಂಕನೆಸೆದಿರ್ದನು ಮಹೀಪಾಲ ॥೧೩॥

ಬರಲು ನಿಂಬನ ಕಂಡು ಹರುಷದೊ
ಳುರು ಮುದದೊಳಿದ್ದನು ಮಹೀಪತಿ
ಭರವಸದೊಳಾ ಕರಿತುರಗ ಹಲ್ಲಣಿಸಿದವು ಕೂಡಿ
ಹೊರೆಯ ಸುಭಟರು ಸಹಿತ ಭೋರೆಂ
ದರಸು ಪೊರವಟ್ಟಾಗ ಕೊಲ್ಲಾ
ಪುರದ ಹೊರವಳಯದಲಿ ಸಂದಣಿಸಿದುದು ಪಾಯದಳ ॥೧೪॥

ಕಯಿ[೧][ದು][೧]ವಿಡಿದ[೨][ರು ಅರ][೨] ಸಿನಾಜ್ಞೆಯ
ಭರದಿ ಪೊರವಡಲೆಂದು ಪುರದೊಳು
ಹೊಯಿದು ಡಂಗುರ ಸಾರಿತಾಗ।ಳೆ ರಾಜವೀಥಿಯಲಿ
ಪಯಣಗೆಯಿದರು ರಾಯನೊಡನ
ನ್ವಯದ ಕ್ಷತ್ರಿಯ ಕುಲದವರು ನ
ಮ್ಮಯ ಮಹಾಕಾಳಗವ ತೋರುವೊಡರಸಿಗಿದು ವೇಳೆ ॥೧೫॥

ಸ್ನೇಹ ಮೋಹದ ಮಂತ್ರಿವರ್ಗವು
ಸಾಹಸದ[೩][ವ][೩] ಬಳಸಿ ರಾಯನ
ಸಾಹಸಕ್ಕಿನ್ನಾರು ಸರಿ[೪][ದೊರೆ][೪]ಯೆನುತ ಮನದೊಳಗೆ
ಆಹವದ ಮೋಹರವು ಮೆಲ್ಲನೆ
ಮೋಹರಿಸಿದುದು ಮುಂದೆ ಗಂಡರ
ಬಾಹುಬಳ ಗಜವೇರಿ ನೋಡಿದನಿಕ್ಕೆಲ [೫][ವ][೫] ಭರದಿಂ ॥೧೬॥

೧–೧ x (ಕ,ಮ) ೨–೨ x(ಕ,ಮ) ೩–೩ ಸುಭಟ (ಕ,ಮ) ೪–೪x(ಕ,ಮ) ೫–೫ ದ(ಕ,ಮ)

ಮೊಳಗಿದವು ನಿಸ್ಸಾಳದೆಡಬಲ
ನಳವಿಯೊಳಗಬ್ಬರಿಪ ಡೊಳ್ಳಿನ
ಕೂಳುಗುಳದ ತಂಬಟದ ಕಿಣಮುಹರಿಗಳ ಮೇಳವದ
ಬಳಸಿ ಸನ್ನೆಯ ಕೊಂಬು ಚೂಣಿಯ
ದಳದ [1][ಹೆ][1]ಗ್ಗಾಳೆಗಳ ರಭಸದ
ಘುಳುಘುಳುಧ್ವನಿ ಮುಸುಕಿತಬ್ಜವಾಂಡಕಾಂಡವನು ॥೧೭॥

ನೋಡಲಿಕ್ಕೆಲನೊಳಗೆ ಥಾಳಿಪ
ಕೂಡಿ ಚಮರಾವಳಿಯ ಛತ್ರಸ
ಗಾಢಿಕೆಯನೇನೆಂಬೆ ಮುಸಿಕಿ[2][ತು][2] ಗಗನಮಂಡಲವ
ಬೀಡಿನಳವಿಯ[3][ನೆಯ್ದೆ][3] ಸೂರ್‍ಯಳ[ಗ]ಳ
ನೋಡಲನುವಲ್ಲೆನಲು ರಾಯವಿ
ಭಾಡ ಗಂಡರ ದಿನಪನಿದಿರೆತ್ತಿದನು ಕಾಳಗಕೆ ॥೧೮॥

ಇಕ್ಕೆಲದ ಪಾ[4][ಠ][4]ಕರ ಮುಂದಣ
ತೆಕ್ಕೆಗಟ್ಟಿದ ಸಬಳ ಸುರಿಗೆಯ
ಮಿಕ್ಕು ನೂಕುವ ರಾವುತರ ಪಂಗಡದ ಮೋಹರದ
ಉಕ್ಕಡದ ಕಾಳೆಗಳ ಬಿರುದರ
ಠಕ್ಕೆಯದ ಸೀಗುರಿಯ ಸಿಂದದ
ಲೆಕ್ಕಗೊಳಲರಿದೇನನೆಂಬೆನು ಬಲದ ಬಹುಳತೆಯ ॥೧೯॥

ಗಂಡರಾದಿತ್ಯಾಂಕ ತನ್ನು
ದ್ದಂಡತನವನು ತೋರುವೊಡೆ ಭೂ
ಮಂಡಲದೊಳರಸಿಲ್ಲೆನಲು ಬಿಜ್ಜಣ ಮಹೀಪಾಲ
ಗಂಡುತನದಲಿ ಸೆಣಸಿ ಬಿರುದಿಗೆ
ದಂಡನೆತ್ತಿದನೆನ್ನೊಡನೆ ಕಡಿ
ಖಂಡಮಾಡುವೆನೆಂದ ಬಜೆಗಾರಿಸುವೆ ನಿಮಿಷದಲಿ ॥೨೦॥

೧–೧ ಹೊ (ಕ,ಮ) ೨–೨ ದ(ಕ,ಮ) ೩–೩ ಲೆಯಿದೆ(ಕ,ಮ) ೪–೪x(ಕ,ಮ) ೫–೫ ರ(ಕ,ಮ)

ಎನುತ ನೋಡಿದ ಬಲವು ಗಂಡರ
ದಿನಪ ನಡೆಗೊಳಲೆಂದು ಸೂಚಿಸೆ
ಮನದ ಸನ್ನೆಯನರಿತುಭೋರೆಂದುಲಿದು ಸಂದಣಿಸಿ
ತನತನಗೆ ಸಂವರಿಸಿ ಚೂಣಿಯ
ಮೊನೆಯ ಮೋಹರ ಕವಿದುದಾಗಳೆ
ಇನನುಡುಗಿ [೧][ತೇ][೧]ಜವನು ದಿಕ್ಕರಿ ಬೆದರಿ ನೆಲನದರಿ ॥೨೧॥

ಆ ದಿನದುದಯ ಜಾವಕಾಗಳೆ
ಮೇದಿನೀಶನು ಗಂಡರಾಧಿಪ
ಕಾದಲೆಂದಿದಿರೆತ್ತಿ ಬಂದನು ಪಂಚನದಿಗಾಗಿ
ಆದಳೀದಳ ಮಧ್ಯ ಹರಿವೊಂ
ದಾದುದೆಂಬಳವಿಯಲಿ ಬಿಟ್ಟನು
ಸಾ [೨][ರ್ದು][೨] ಮೆಲ್ಲನೆ ತರಣಿ ತೇಜವನುಗಿಸಿ ಪಶ್ಚಿಮಕೆ ॥೨೨॥

ಪಶ್ಚಿಮಾದ್ರಿಗೆ ತರಣಿ ಸಾರಲು
ಮುಚ್ಚಿದವು ಶತಪತ್ರ ಕುವಲಯ
ಬೆಚ್ಚಿದವು ನೆರೆ ಚಕ್ರವಾಕಗಳಚ್ಚೊಡೆದು ಪಾರೆ
ಕಿಚ್ಚುಗೊಂಡುದು ಜಾರೆಯರ ಮನ
ದಚ್ಚು ಸಡಿಲಿತು ಕಾಮುಕರ ಮತಿ
ಹೆಚ್ಚಿದುದು ತಮ ಮೆಲ್ಲಮೆಲ್ಲನೆ ಕೂಡೆ ತಲೆದೋರಿ ॥೨೩॥

ಅಸ್ತಮಯವಾಗಲು ಮಹಾಬಳ
ವಿಸ್ತರಿಸಿ ಬಿಟ್ಟುದುದ ಕಟಕ[೩][ವ][೩]
ಸುತ್ತಿ ಪಹರೆಗಳಿಕ್ಕಿ ಕಾವಲ ಗುಡಿಗಳಿಟ್ಟಣಿಸಿ
ಎತ್ತ ನೋಡುವೊಡತ್ತ ಬಯಸಿದ
ವಸ್ತು ಮಾರುವ ಪರದರಂಗಡಿ
ಹೊತ್ತಿಸಿದ ದೀವಿಗೆಯ ಬೆಳಗುಗಳೆಸೆದು[೩][ವ][೩]ಂಬರಕೆ ॥೨೪॥

೧–೧ ಡಿ (ಕ) ದೇ(ಮ) ೨–೨ ದ(ಕ,ಮ) ೩–೩ ದ(ಕ,ಮ)

ನಾಳೆ ಕಾಳಗವೆನಲು [೧][ಪಡೆವಳ][೧]
ರೋಳಿಯಿಂದಿಕ್ಕೆಲನ ವೀಥಿಯೊ
ಳಾಳಗಜತುರಗಾದಿ ಸಹ ಸನ್ನದ್ಧರಹುದೆಂದು
ಕೇಳಿದತಿ ವೇಗದಲಿ ಚೂಣಿಯ
ದಾಳಿಗನುವಹುದೆಂದುಮುದಯಕೆ
ಹೇಳಿ ಹೊಯಿದುದು ಸಾರಿ ಡಂಗುರ ಪಾಳೆಯಂಗಳಲಿ ॥೨೫॥

ಇರುಳಿನೋಲಗದೊಳಗೆ ಗಂಡರ
ಸೂರ್ಯನಾಳೋಚಿಸಿದ ಬಿಜ್ಜಣ
ಸುರವಣೆಯ ನಿಲಿಸುವೊಡೆ ನನ್ನೊಳು ಸುಭಟದಾರೆನಲು
ನೆರೆದ ಸುಭಟರು ಶಿರವ ತಗ್ಗಿಸಿ
ಬರೆದು ನೆಲನ ಮಹಾಭಯದಿ
[೨][ನಿರೆ ಮುನಿದ ದೊರೆಯಲ್ಲಿ][೨] ಬಿನ್ನಹ ಮಾಡಿದರು ಕೆಲರು ॥೨೬॥

[೩]ವೀರ[೩] ಗಂಡರ ಸೂರ್ಯ ವೀರರೊ
ಳಾರ [೪][ಕೇಳುವಿ][೪] ರೆನುತ ಸಲೆ ಪರಿ
ವಾರ [೫][ಬಲ್ಲೆವು][೫] ಬಿನ್ನಹ[೬][ವ ಮಾಡುವೆವು][೬] ಮನದೆಡೆಗೆ
ಪಾರಗುಣ [೭][ಗಂಭೀರ][೭] ನಿಮ್ಮ ವಿ
ಚಾರವನು ಬಲ್ಲವ[೮][ನು ರಣದಲಿ][೮]
ಧೀರ[೯]ನೀ[೯] ಸಾಮಂತನಿರಲಾ [೧೦]ದೆಮ್ಮ ಬಿನ್ನ[೧೧][ಪವು][೧೧] ॥೨೭॥

ಮಾತಿನೊಡ್ಡವಣೆಯಲಿ ನುಸುಳುವ
ನೀತಿವಂತರು ಕೆಲರು ಪರರುಪ
ಘಾತಕೆಳಸುವ[೧೨][ರೆ][೧೨]ಲ್ಲ ೧೩ದೊರೆಯ[೧೩]*[ನು]*ವರದ ಸಜ್ಜನರು
ಆತ ಬಲ್ಲನು ದೇವ [೧೪][ಅಡಿ][೧೪]ದ
ಮಾತಿನೊ [೧೫][ಳಿ][೧೫]ಹನು ನಿಂಬದೇವನು
ದಾತ ಕೆಲರಳವೇನು ಸಂಗರದೊಳಗೆ ನಿಲಲರಿದು ॥೨೮॥

೧–೧ ಪಡುವಲ (ಕ,ಮ) ೨–೨ ನೆರೆ ಮುನಿದುದು ಮನದೊರೆಯಲು (ಕ) ನೆರೆ ಮುನಿದು ಮನದೊರೆಯಲು (ಮ) ೩–೩ ಪರ (ಮ) ೪–೪ ಕೆದಿ (ಕ,ಮ) ೫–೫ ವಿದೇನು ಬಲ್ಲವ(ಕ,ಮ) ೬–೬ ಮಾಡುವುದರಿದು (ಕ,ಮ) ೭–೭ ಗಾಂಭೀರ್ಯ (ಕ,ಮ) ೮–೮ ರು (ಕ,ಮ) ೯–೯x(ಮ) ೧೦+ ರ(ಮ) ೧೧–೧೧ ಹಕೆ (ಕ,ಮ) ೧೨–೧೨ ರ (ಕ,ಮ) ೧೩–೧೩ x(ಮ) *–* ನ (ಕ,ಮ) ೧೪–೧೪ ಕಾದಿ (ಕ,ಮ) ೧೫–೧೫ ಳು (ಕ,ಮ)

ಮಾತನಾಡುವುದರಿದು ಕಾಳಗ
ವಾಂತಡಿರಿಯಲಿಬಹುದು ದುರ್ಜನ
೧[ಧೂರ್ತ]೧ರನು ಗೆಲಲರಿದು ಖಳರಭಿಸಂಧಿ ಮತ್ತರಿದು
೨[ದಾತನನುವರಕಹುದರಿದು]೨ ಸಲೆ
ನೀತಿವಿದೆನಹಡರಿದು ಸಜ್ಜನ
ಪ್ರೀತನಹುದೆ ೩[ನ್ನುತ್ತ]೩ ಕಲಿ ಸಾಮಂತಳನಿಂತೆಂದ ॥೨೯॥

ದೂರವೇ೫[ತ]೫ಕೆ ಬಿಜ್ಜಣನ ಬಲ
ವಾರಿಧಿಗ೬ಳೇಲ೬ಂತೆ ಬಿಟ್ಟಿದೆ
ಮೇರೆದಪ್ಪಿದ ಕಟಕದೊಳು ಪೌರುಷವರಿಯಬಹುದು
ಆತು ಕಟಕಿಯನಾಡಲಿಂದು ವಿ
ಚಾರವೇನರುಣೋದಯದೊಳಗೆ
ಸೂರಿಯನ ರಥವ೭[ನ್ನು]೭ ನಿಲಿಸುವೆನೊಂದು ತು೮[ರ]೮ಗದಲಿ ॥೩೦॥

ಏಳು ಗಂಡರಸೂರ್ಯ ಬಿಜ್ಜಣ
ನಾಳುತನವನು ಬಲ್ಲೆ ನಾನೊಂ
ದಾಳಿನಲಿ ನಿಲಿಸುವೆನು ಕರಿತುರಗಾದಿ ಭಟರುಗಳ
ಆಳುತನದಂಗವಣೆಯಿಲ್ಲದೆ
ಖೂಳರಿಂದೇಹುದು ಉದಯಕೆ
ದಾಳಿ ಇಡುವೆನು ಪರಬಲವನೊರೆಸುವೆನು ನಿಮಿಷದಲಿ ॥೩೧॥

ಎನಲು ಗಂಡರಸೂರ್ಯ ನಿಂಬನ
ಮನದಣಿಯೆ ನೋಡಿದನು ಚಿತ್ತದೊ
ಳನುಪವೋನ್ನತ ಮಹಿಮಗುಣನುದ್ದಂಡ ಶೌರ್ಯವನು
ಜನಪ ನಿಶ್ಚೈಯಿಸಿದನು ಮನದೊಳ
ಗನುವರಕೆ ಸಾಮಂತನಲ್ಲದೆ
ಧನದ ೯[ಆಸೆಗೆ]೯ ನೆರೆದವರಲೇನಹುದು ಹೇಳೆಂದ ॥೩೨॥

೧–೧ ದೂತ (ಕ,ಮ) ೨–೨ ದಾನನುವರಕಹುದು (ಕ) ದಾತನನುವರತಹುದರಿದು (ಮ) ೩–೩ ನುತ (ಕ,ಮ) ೪+ ನಿಂಬ(ಕ,ಮ) ೫–೫ x(ಕ,ಮ) ೬–೬ ಳಿಗಂ (ಕ) ೭–೭ ನು (ಕ,ಮ) ೮–೮ ರಂ(ಕ,ಮ) ೯–೯ ದಾಸೆಯೊಳು (ಕ,ಮ)

ಎನುತ ಗದ್ದುಗೆಯಿಂದ ಗಂಡರ
ದಿನಪನೆದ್ದನು ನಿಂದು ಸಾಮಂ
ತನನು ಕಳುಹಿದ[೧][ನೆಲ್ಲ][೧]ವರ ಬೀಳ್ಕೊಟ್ಟನುಚಿ[೨][ತ][೨]ದೊಳು
ಮನದ ಸನ್ನೆಯನರಿತು ಸಾರಿದ
ರನುನಯ ಇದೊಳವಸರದವರು ಬೆಳ
ಗಿನನುದಯದೊಳು ಬಹುದೆನುತ ಸಂವರಿಸಿ ಕಾಳಗಕೆ ॥೩೩॥

ಹರಿದುದಿರುಳೊಲಗವು ಜಾವಗ
ಗಳೆರಡುವರೆ ಘಳಿಯಾರ ಹೊಯಿದವು
ನೆರೆದು ಮುತ್ತಿತ್ತು ಮೆಲ್ಲಮೆಲ್ಲನೆ ಮಂಜು ಕವಿತಂದು
ಕುರುಳು ಕೆಂಪೇರಿದವು ಸತಿಯರ
ಭರದ ನಿದ್ರೆಯ ಹರವಿನಲಿ ತಂ
ಬೆರಲ ಬೀಸಿದುದಾಗ ಕುಕ್ಕುಟ ಕೂಗಿತುತ್ಸವದಿ ॥೩೪॥

ಮೂಡಲರುಣೋದಯದ ಬೆನ್ನಲಿ
ಮೂಡಣಾದ್ರಿಯೊಳಾ ದಿವಾ[೫]ಕರ[೫]
ಮೂಡಿದನು ಶತಪತ್ರಕಾಗಳೆ ನೀಡಿದನು ಕರವ
ಬೀಡಿನೊಳು, ತಂತಮ್ಮ ಸನ್ನೆಯ
ಮಾಡಿ ಕಹಳೆಗಳೂದಿ ಹೆಬ್ಬಲ
ಕೂಡಿ ಸಂದಣಿಸಿದುದು ಕಾಳಗಕೆಂಧುಮುದಯದೊಳು ॥೩೫॥

ಇನನುದಯದೊಳು ರಾಯಗಂಡರ
ದಿನಪ ಪೊರಮಟ್ಟನು ಮಹಾಬಲ
ತನತನಗೆ ಸಂವರಿಸಿ ಮೋಹರಿಸುದುದು ಕಾಳಗಕೆ
ಜನಪ ನೋಡಿದನೆಡ ಬಲ[೬][ವ][೬] ಸಂ
ದಣಿಪ ರಾವುತರೋಳಿಯೊಳು ಮಿ
ಕ್ಕಿನ ಮಹಾಬಲ ಕೂಡಲೆಂದನು ಸನ್ನೆಗಾಳೆಯಲಿ ॥೩೬॥

೧–೧ ನ (ಕ,ಮ) ೨–೨ ತ್ರ(ಕ,ಮ) ೩+ ದಿ (ಕ) ೪ ಈಪದ್ಯ 'ಮ' ಪ್ರತಿಯಲ್ಲಿ ಮಾತ್ರ ಇದೆ. ೫–೫ ರಿಗ(ಮ) ೬–೬ ದ(ಕ,ಮ)

ಒಡನೆ ಹಿಡಿದಾ ಸನ್ನೆಗಾಳೆಯ
ಗಡಣದಿಂದವೆ ಕೇಳಿದವರು
ಗ್ಘಡಿಸಿ ಸಾರಿದರೆಲ್ಲ ಪಾಳೆಯದೊಳಗೆ ತಮತಮಗೆ
ನುಡಿಯೆಡೆಗೆ [೧]ಇಂತಿದು[೧](?)
ತೊಡೆಯನಲ್ಲಿಗೆ ಬಳಸಿ ಬಹ ಕಡ
ಲೆಡೆಯ ತೆರೆಯಂದದಲಿ ಮುಸಿಕಿತು ಸರ್ವಪಾಯದಳ ॥೩೭॥

[೨][ತೂ][೨]ಳ ಬೀಡಿನ ಹೊರಳವಯದೆರ
ಡೋಳಿಯಲಿ ಸಂವರಿಸಿ ಪಾಳೆಯ
ದಾಳನೆಲ್ಲವ ನಿಲಿ[೩][ಸಿರೆಂ][೩] ದಾಗರಸು ಬೆ[೪][ಸ][೪]ಸಿದನು
[೫][ಕೀ][೫]ಳು [೬][ಮೇಲಿಂದೆ][೬]ನ್ನದೆಲ್ಲರು
ದಾಳಿಗನುವಹುದೆಂದು ಬೇಗದಿ
ಕೋಲ ಕ[೭][ಟ್ಟಿಗೆ][೭]ಯವ [೮][ರು][೮] ಸಾರಿದರೆಯಿದೆ ತಮತಮಗೆ ॥೩೮॥

ಮೋಹರಿಸಿ [೯][ದರು][೯] ಹೊರವಳಯದೊಳ
ಗಾಹವಕೆ ಸನ್ನದ್ಧವಾ [೧೦][ದರು][೧೦]
ಸಾಹಸದ ಬಲುಭಟರು ಸಂದಣಿಸಿದರು ತಮತಮಗೆ
ಆಹ[೧೧][ವ][೧೧]ದ ಸಾಲೊಳಗೆ ಗಂಡರ
ಬಾಹುಬಲ ಗಜನೇರಿ ಪೊರಮ
ಟ್ಟಾ ಹದನ ಸೂಚಿಸಿದರಾ ಬಿಜ್ಜಣನೃಪಾಲಂಗೆ ॥೩೯॥

ಕೇಳಿ ಬಿಜ್ಜಣರಾಯ ಗಂಡರ
ಭಾಳಲೋಚನ ಬಂದನೆಂಬುದ
ಪೇಳಿದವರೊಡನೆ[೧೨][ಯ್ದೆ][೧೨] ನಸುನಗುತೆಡಬಲವ ನೋಡಿ
ದಾಳಿಯಿಡದೊಡೆ ಬ[೧೩][ಹು][೧೩]ದೆನಗೆ ಹೀ
ಹಾಳಿ[೧೪][ತಳವಿದಡಿನ್ನು ನಾಚಿಕೆ][೧೪]
[೧೫][ಬಳೆಯ ತೋಳಹುದಹದು][೧೫] ತನಗೆಂದೆತ್ತಿ ನಡೆತಂದ ॥೪೦॥

೧–೧ ಇಲ್ಲೆಂದಿಂ(ಮ) ೨–೨ ಕೂ(ಕ,ಮ) ೩–೩ ಸಲೆ (ಕ,ಮ) ೪–೪ ರ(ಕ,ಮ)೫–೫ ಕೇ (ಕ,ಮ) ೬–೬ ಮೆಲ್ಲೆಂತೆ (ಕ,ಮ) ೭–೭ ಟಿ (ಕ,ಮ)'೮–೮ ರ (ಕ,ಮ) ೯–೯ ದುದು (ಕ,ಮ) ೧೦–೧೦ ಯ (ಕ,ಮ) ೧೧–೧೧ x(ಕ,ಮ) ೧೨–೧೨ ರುವು(ಕ,ಮ) ೧೩–೧೩ ರುವು (ಕ,ಮ) ೧೪–೧೪ ಯಹುದೆಂಬ ನಾಚಿಕೆ (ಕ) ಯಹುದೆಂಬನೆಂಬುದ(ಮ) ೧೫–೧೫ ಒಳಿಯರೋಳಹುದು(ಕ,ಮ)

ಎನುತ ಬಿಜ್ಜಣರಾಯ ಗಂಡರ
ದಿನಪ ಬಂದನೆನುತ್ತ ಕಾಳಗ
ದನುವರವ ಗೆಲಲೆಂದು ಸಂವರಿಸಿದನು ಸೇನೆಯನು
ತನತನಗೆ ಭಟರೆಯಿದೆ ತಮ್ಮಯ
ಮನಕುರುವ ಕಯದುಗಳ ಕೊಂಡಾ
ಗನುನಯದಿ ನಡೆಗೊಂಡು ಬಂ[೧][ದರು][೧] ರಾಯನಿದ್ದೆಡೆಗೆ ॥೪೧॥

ಹಲ್ಲಣಿಸಿದುದು ತುರಗ ಹೀಲಿಯ
ಝುಲ್ಲರಿಗಳಿಕ್ಕಿದ[೨][ರೆ][೨] ಚೌಕದ
ಪುಲ್ಲವಟ್ಟಿಯ ಹಕ್ಕರಿಕೆ ಇಕ್ಕೆಲವ ಪಚ್ಚಳದ
ಬಲ್ಲೆಹದ ನಾಸಿಕದ ಮಸ್ತಕ
ದಲ್ಲಿ ತೆತ್ತಿಸ ಚವುರಿಗಲ ನಭ
ವೆಲ್ಲ ನೆಲ[೩][ಸೆ][೩]ಡೆಯಿಲ್ಲವೆಂಬಂತೆಯ್ದಿ ಮುಸುಕಿದುದು ॥೪೨॥

ಕಂಡವಕ್ಕರಿಕೆಗಳ ಪೇರುರ
ದಿಂದಲೊಪ್ಪುವ ಸಡಕುಗಳ ಕೊರ
ಳಿಂದಲೊಪುವ ದಂಡೆ ಮೊಗರಂಬಗಳ ಹೊಳಹುಗಳ
ಒಂದಿದಗ್ಗದ ರಾವುತರ ಶಿರ
ದಿಂದಲೊಪ್ಪುವ ಸೀಸಕದ ಶಿರ
ಬಂದ ರಾಘಾವಳಿಯ ಜೋಡುಗಳಿಂದ ಸಂವರಿಸಿ ॥೪೩॥

ಅಳಗ ಮಂಗಳ ಬೊಲ್ಲ ಬೊಲ್ಲಂ
[೪]ಕಿ[೪]ಳಕನುಜ್ಜಳ ಬೋರ ಬೋರಂ
ಬಳಗ ಜನ್ನಕುಮಿತತ ಕತ್ತಳ ನೀಲ ಕಮ್ಮೀಲ
ಹೊಳೆವ ಚೇರಂ ಕೊಂಗ ಪಿಂಗಳ
ಬಳಯುತ ಮಹಾಖಯಿರ ಧೂಮಂ
ಗಳದ ವರ್ಣದ ವಾಜಿ ಮೋಹರಿಸಿದುದು ಸಂದಣಿಸಿ ॥೪೪॥

೧-೧ ದುದು (ಕ,ಮ) ೨-೨ ರು(ಕ,ಮ) ೩-೩ ದೆ(ಕ,ಮ) ೪-೪ ಕ(ಮ)

ಗಿರಿಗಳೆಂಬಂತಾಗಲಾ ಮದ
ಕರಿ[೧][ಯು][೧] ಮಸ್ತಕದಿಂದೆಸೆವ ಸಿಂ
ಧುರದ ರಜರೇಣುಗಳ ಪಲ್ಲವ ಛತ್ರ[೨][ಡಂಬರದ][೨]
ಪರಬಲದ ತಮ[೩][ಕೊಡ್ಡೆ][೩] ನೆರವಿಯ
ತುರಗ.ತೆರೆ ಮುಗಿಲಂದದಿಂ ದಿನ
ಕರನುದಯಗೆಯಿದಂತೆ ಕನ್ನಡಿ ಸಿರದೊಳಗೆ ಹೊಳೆಯೆ ॥೪೫॥

ಮಾವತಿಗರೇರಿದರು ತಂತ
ಮ್ಮಾವ[೪][ಗ][೪] ಜಗಳ ನೋಡಿ ಶಿರಂಶಿಚಿಯ
ನೋವಿ ಹಮ್ಮೆಯ ಮೇಲೆ ಪಲ್ಲವ ಛತ್ತಗಳನೆಸಗಿ
ಅವೆಡೆಯ ನೋಡಿದೊಡೆ ದಿಕ್ಕರಿ
ಯಾವವೆಂಬಂತ್ತಕ್ತರಿಯಬಾರದೆ
ಆವ ಬೇಗದೊಳೆಯ್ದಿ ಸಂವರಿಸಿ[೭][ದರು][೭] ಸಂಗರಕೆ ॥೪೬॥

ಹೊರಜೆ ಹಬ್ಬಿಬ ಲ[೮][ತೆ][೮] ಸಿರದ ಸಿಂ
ಧುರದ ಕೆಂಗರಿ ನವಿಲ ಛತ್ರದ
ತರು ಮಹಾರೆಂಬೆಗಳ ಗೊಣೆ ಲಾವುಗೆಯ [೯]ಕೂರಂಬ[೯]
ಸುರಿವ ಮದನಿರ್ಝರೆ ಕೈದು ಕಾ
ಳುರಗ ಜೋದರು ಸಿದ್ಧರೆನೆ ಕುಲ
ಗಿರಿಯ ಸಾಲಂದದಲಿ ಮದಗಜದೊಡ್ಡು ಬಳಸಿದುದು ॥೪೭॥

ಅರಸು ತಾನೇರುವ ಗಜವ ಸಂ
ವರಿಸಿ ಬರಲೆಂದೆನಲು ಬೇಗದೊ
ಳುರವಣಿಸಿ ಮಾವುತ[೧೦][ರು ಎಯ್ದಿ][೧೦]ದರಾ ಗಜದ ಬಳಿಗೆ
ಹೊರೆಯ ಗನಗಳನೋಸರಿಸಿ ಗಳ
ಸರವ ಬಿಗಿದರು ಮೇಲೆ ಮಹಹ
ಕ್ಕರಿಕೆ ಬೀಸಿದ [೧೧][ಚಮರಛತ್ರದ][೧೧] ರಾಮತೇಯನೆಸಗಿ ॥೪೮]

೧–೧ ಯ(ಕ,ಮ) ೨–೨ ದಿಂಬಂದ(ಕ), ದಂಬರದ (ಮ) ೩–೩ ದೊಡ್ಡ (ಕ,ಮ) ೪–೪ ರ(ಕ,ಮ) ೫–೫ ಯ (ಮ) ೬–೬ ತೆ(ಮ) ೭–೭ ದುದು (ಕ,ಮ) ೮–೮ x(ಕ,ಮ) ೯–೯ ವಿಕುರಂಬ (ಮ) ೧೦–೧೦ ರೆಯಿದಿ (ಕ,ಮ) ೧೧–೧೧ ಚಾಮರದ ಛತ್ರದ ವೇಸಾಳಿ (ಕ,ಮ)

ಹೇಮವಟ್ಟದ ಹಲಗೆಗೆತ್ತಿಸಿ
ದಾ ಮಹಾ ಹಕ್ಕರಕೆ ಬೀಸಿದ
ಚಾಮರದ ಛತ್ರದ ವಿಳಾಸದ ರಾಜತೆಯನೆಸಗಿ
ಆ ಮೃಗದ ಸಿಂಧುರದ ಚಂದ್ರನಿ
೧[ದೇಂ]೧ ಮಹಾ ವಿಪರೀತ ಹಗಲೆನೆ
ವ್ಯೋಮವನು ಬಿಟ್ಟಿಳಿದ ಗಜಮಸ್ತಕದೊಳೆಂಬಂತೆ ॥೪೯॥

೨[ಕೂ]೨ರವೆನಿಪಂಕುಶದ೩[ಲೊತ್ತುತ]೩
ಕೀರಿದರು ಮಾವತಿಗರಿಕ್ಕೆಲ
ನಾರಿಗಟ್ಟಗೆಯವರನೊತ್ತಿದರವರು ಝುಂಕಿಸುತ
ವೀರಡವುಡೆಯ ಪೊಯಿದು೪[ಮಂ]೪ದಿಯ
ಸಾರಿಸಿದರೆಡ ಬಲಕೆ ಭೋರೆನೆ
೫[ಮೇ]೫ರು ನಡೆಗೊಂಬಂತೆ ಬಂದುದು ೬ನಿಂದು೬ದಾ ಗಜವು ॥೫೦॥

ವಾರುವಂಗಳನೇರಿ ರಾಜಕು
ಮಾರರಿಕ್ಕೆಲನೊಳಗೆ ಬಂದುದು
ಸೂರ್ಯ ಪೂರ್ವಾದ್ರಿಯೊಳು ನಿಂದಾರ್‍ಯೆವೆನೆನ್ನುತ್ತ
ಆರು ಬಲ್ಲರು ನಮ್ಮ ಕುದುರೆಯ
ವೀರಬಿಜ್ಜಣ ಸೆಳೆದುಕೊಂಡಡೆ
ತೇರ೭[ನಡೆ]೭ಗನುವಲ್ಲೆನುತಲಂಬರದೊಳೆಸೆದಿರ್ದ ॥೫೧॥

ನೋಡಿ ಬಿಜ್ಜಣಭೂಪ ಭಟರಿಗೆ
ನೋಡಿ ಕರ್ಪುರ ವೀಳೆಯಂಗಳ
ನೀಡಿದನು ಶ್ರೀಗಂಧ ಸಾದು ಜವಾದಿ ಕುಂಕುಮವ
ಆಪಿ ಹೊಣಕೆಯ ಬಿರುದ೮[ಸು]೮ ಭಟರು
ಬೇಡಿ ಪೈಜೆಯ ವೀಳೆಯಂಗಳ
ಮಾಡುವೆವು ಚೂಣಿಯಲಿ ಕಾಳಗ೯[ವೆ]೯ಮಗೆ ಬೆಸಸೆನಲು ॥೫೨॥

೧–೧ ಧೀ (ಕ,ಮ) ೨–೨ ಕು(ಕ,ಮ) ೩–೩ ಮೊತ್ತಿದ (ಕ,ಮ) ೪–೪ ಪಂ (ಕ,ಮ) ೫–೫ ಮ(ಕ,ಮ) ೬–೬ x(ಕ) ೭–೭ ಡ(ಕ) ಡಿ(ಮ) ೮–೮ x(ಕ,ಮ) ೯–೯ ವಲೆ(ಕ,ಮ)

ಅಹುದು ಬಲ್ಲೆನು ನಿಮ್ಮನುವನಾ
ಸಹಜ ಪೌರುಷವಂತರೆಂಬುದ
ಬಹ[1]ಳ ದಳದೊಳದೇಕೆ ಹೊಣಿಕೆಯ ಕಾಣಿಸುವೊಡರಿದು
ಬಹುದು [2][ನ][2]ನ್ನಯ ಬಳಿಯಲೆಲ್ಲರು
ಕುಹರಗಂಡರಸೂರ್ಯನನು ಹಿಡಿ
[3][ತಹುದು][3] ಹಿಡಿಯಾಳಾಗಿ ನಾವೆಲ್ಲೆಂದನವನೀಶ ॥೫೩॥

ಎಂದು ಗಜವೇರಿದನು ಬಿಜ್ಜಣ
ನಿಂದು ನೋಡಿದ ಸೇನೆ ನಡೆಗೊಳ
ಲೆಂದು ಸೂಚಿಸಲಾಗಸನ್ನೆಯ ಕಹಳೆಗಳು ಹಿಡಿಯೆ
ಮುಂದೆ ಮುಂದಕೆ ಕರಿಉರಗಭಟ
ರಿಂದ [4][ಮೊ][4] ಹರಿಸಿದುದು ನಡೆಗೊಂ
ಡಂದು ಚೂಣಿಯೊಳ್ಳೈದೆ ಸಂದಣಿಸಿದುದು ಪಾಯದಳ ॥೫೪॥

ಮಸಗಿದವು ನಿಸ್ಸಾಳ ಭೇರಿಗ
ಳೆಸಗಿ ಹೊಯಿದವು ಕಹಳೆ ಚೂಣಿಯ
ಉಸುರಿದವು ಬಿರುದಾವಳಿಯ ತಂತಮ್ಮ ನಾಯಕರ
ಅಸಮಬಲ ನಡೆಗೊಳಲು ಸೂರ್ಯನು
ಮಸುಳಿಸಿದ ಕೆಂಧೊಳಿನಲಿಯು
ಬ್ಬಸ ಮಸಗಿ ಬ್ರಹ್ಮಾಂಡ ಜಡಿದುದು ದಳದ ತೆರಳಿಕೆಗೆ ॥೫೫॥

ಓಳಿಯಿಂದಬ್ಬರಿಪ [5][ಡೊ][5]ಳ್ಳಿನ
ಮೇಳವದ ರಣಮುಹುರಿಗಳ ಬೊಂ
ಬಾಳಿಕೆಯ ಹೆಗ್ಗಾಳೆ ಎಕ್ಕಡಗಾಳೆ ಚೆಂಗಾಳೆ
ಭಾಳಲೋಚನ ಬಿಜ್ಜಳನ ದಳ
ದೇಳಿಗೆಯನೇನೆಂಬೆ ಚೂಣಿಯ
ಪಾಳಿ ಕವಿದುದು ಕಾಬಳವಿಯಲಿ ಬಂದು ಮೋಹರಿಸಿ ॥೫೬॥

---

೧ + ದ(ಮ) ೨–೨ ನೆ (ಕ,ಮ) ೩–೩ ತಹೆವು (ಕ,ಮ) ೪–೪ ನೋ (ಕ,ಮ) ೫–೫ ಕೊ (ಕ) ಗೊ(ಮ)

ಮೋಹರದ ಕರಿಘಟೆಯ ಮುಂದೆ ಸ
ಮ[೧][ದ][೧]ಹಯದ ಭಾರಣೆಯ ಮುಂದೆ ಪ್ರ
ವಾಹ ಪಾರಕರಿಂದ ಮುಂದೆ[೨][ಸೆ][೨] ನಾಯಕಾದಿಗ [೩][ಳು][೩]
ಬಾಹುಬಳ ಹೊಣಕೆಯ ಸುಭಟರಿಂ
ಸಾಹಸಿಕ ಬಲುಬಿಲ್ಲವರ ಮುಂ
ದಾ [೪][ಹರಿಗೆ][೪] ಪಣಿಯಿಕ್ಕಿದುದು ತೆರೆ ಮುಗಿಲ ಕವಿದಂತೆ ||೫೭||

ನೆಗಳ ಸಿಂಧೂ ಗಜಮುಖದ ಝುಗ
ಝುಗಿಪ ಮಾಣಿಕವಟ್ಟಿ ಶಂಖದ
ಮುಗಿದ ಕ[೫]ಲಿ[೫]ಗಳ ಕೈಯ ಮಕರಂದಗಳ ರಾಹುಗಳ
ಬಗೆಗೆ ಭೀತಿಯ ಹುಲಿಯ ಹನುಮಂ
ತಗಳ ನಂದಿಯ ಗರುಡಭೇರುಂ
ಡಗಳ ತೆರಗಳ ಹರಿಗೆ ಪಣಿಯಿಕ್ಕಿದುದು ಸಂದಣಿಸಿ ||೫೮||

ಮುಗಿಲು ನೆ[೬][ರೆ][೬] ಕೂರಿದು [೭][ದೊ][೭] ಮೇಣಿದು
ಬಿಗಿದ ಸಿಂಧದ ತೆರೆಯಿದೋ ಕಾಳ್
ಮೃಗದ ಸಂದಣಿ ಕವಿದುದೋ ಚಿತ್ರಸಿದ ಕೋಡೆಯಿದೋ
ಹೊ[೮][ಗೆ][೮]ವ ದಾವಾನಲನುರಿಯ ನಾ
ಲಗೆಯೊ ಬಣ್ಣವ ಬರೆದ ಬಲು ಹರಿ
ಗೆಗಳ ಪಣಿಯಿಕ್ಕಿದುದ ಕಂಡಿದಿರವರು ಭಯಗೊಂಡು ||೫೯||

ಹಗಲ ತಾರಾವಳಿಯ ಬೆಳಗುಗ
ಳೊಗೆದುವೆನಲಾ ಹೊನ್ನ ಬೆಳ್ಳಿಯ
ಬಿಗಿದ ಕಟ್ಟಿನ ಬಿಲ್ಲು ಜೇವೊಡೆಗೆಯಿದ ಕೈಹೊಡೆಯ
ತೆಗೆದ ಬಲು [೯][ಹೊಸ][೯] ಗಾಸೆಗಳುದಯ
ರಾಗ ಪಟ್ಟಾವಳಿಯ ದಟ್ಟಿಯ
ಹೊಗರ ಕೂರಂಬುಗಳ ಹೊದೆಗೆದರಿದರು [೧೦][ಸೈನಿಕರು][೧೦] ||೬೦||

೧-೧ x(ಕ,ಮ) ೨-೨ x(ಕ,ಮ) ೩-೩ ಳ (ಕ,ಮ) ೪-೪ ಹರಣೆ (ಕ) ಹಣಿಕೆ(ಮ) ೫-೫ ಲ(ಕ) ೬-೬ ರ (ಕ,ಮ) ೭-೭ ದು (ಕ,ಮ) ೮-೮ ಗ (ಕ,ಮ) ೯-೯ x(ಕ,ಮ) ೧೦-೧೦ x(ಕ,ಮ)

ರಾಯ ಮದಕರಿಗಳಭಸಿಂಹಸ
ಹಾಯ ಬಿಜ್ಜಣರಾಯ ತನ್ನಯ
ಪಾಯದಳವನು ಮೋಹರಿಸಿದಯದನರಿತು ಮತ್ತಿತ್ತ
ರಾಯ ಗಂಡರಸೂರ್ಯ ಬಿರುದಿನ
ಭಾಯತದಿ ಗಜವೇರಿ ಪೊರಮ [೧][ಡೆ][೧]
ಹಯದ ರಾವುತ[೨][ರಾಗ][೨] ಸಂದಣಿಸಿದರು ತಮತಮಗೆ ॥೬೧॥

ರಂಗ ನೀಲಂ ಬೆಳಗನೆಳಗ ಸು
ರಂಗನುಜ್ಜಳ ಬೋಳನಾ ಸಾ
ರಂಗ ಮಂಗಳ ನಿಳಸ ಬೊಲ್ಲಕುಮೇತ ಕತ್ತಳನ
ರಂಗ ಚೇರ ಕದಂಬ ಬಿಂಬಾ
ಪಿಂಗಳ ಧವಳ ಪಂಚಕಲ್ಯಾ
ಣಂಗಳೆಂಬ ತುರಂಗಮಂಗಳನೇರೆ ರಾವುತರು ॥೬೨॥

ಸಿರದಲಿಕ್ಕಿದ ಸೀಸಕದ ಚೌ
ದರದ ಪುಲ್ಲಿಯ ಮೊಳೆಯ ಕಂಗಲ
ಸರಿದ ಹಮ್ಮುದೆ ನೇಣ ರಾಘಾವಳಿಯ ಕಾಸೆಗಳ
ಕರದ ಬಲು ಬಲ್ಲೆಯದ ಹಲಗೆಯ
ತರದ ಲೌಡಿಯ ರಾವುತರ ಹ
ಕ್ಕರಿಕೆ ಬೀಸಿದ ವಾಜಿಗಳಲೆಯ್ದಿದರು ಸಂದಣಿಸಿ ॥೬೩॥

ಹೊಡೆವ ನಿಸ್ಸಾಳಗಳ ಭೇರಿಗ
ಳೊಡನೆ ಜಡಿದವು ತಂಬಟ [೩][ದ][೩] ಗಿಡಿ
ಬಿಡಿಯ ಕೋಳಾಹಳದ ಬಿರುದಿನ ಕಹಳೆಯುಬ್ಬರದ
ಸಡಗರದ ಸೀಗುರಿಯ ಸಿಂದದ
ನಡುವೆ ಬೀಸುವ ಚಾಮರಂಗಳ
[೪]ಸ[೪] ದಳವೆಸೆದುದು ಗಂಡರಾದಿತ್ಯನ ಮಹಾಬಲದ ॥೬೪॥

೧–೧ ಡಲಾ (ಕ,ಮ) ೨–೨ ರು (ಕ,ಮ) ೩–೩ x (ಕ,ಮ) ೪–೪ x (ಕ)

[೧][ಬಿರುದು][೧] ಗಂಡರಸೂರ್ಯನೆಂಬಾ
ಬಿರುದಿನಗ್ಗದ ಸಿಂದಗಳು ಧರ
ಧುರದ ಕಾಳಗದೆಡೆಯ ಮುಖದೊಳು ಸಂದಣಿಸಿ ಕೂ[೨][ಡೆ][೨]
ಅರಸ ನೋಡಿದ ರಾವುತರ ಮೋ
ಹರದೊಳಗೆ ಸಾಮಂತ ನಿಂಬನ
ಬರವಿದೇತಕೆ ತಡೆದುದೆಂಡನು ತನ್ನ ಮನದೊಳಗೆ ॥೬೫॥

ಮನದನುವನರಿತಾಗ ಕುಹಕರು
ಜನಪಗೆಂದರು ನಿಂಬದೇವನು
ಅನುವರದೊಳಹನೆಂದು ದೇವರು ಚಿತ್ತವಿಸುವಿರಲಾ
ಜಿನಮತದ ಮಹಿಮೆಯವನೀ ಬಿ
ಜ್ಜಣ[೩][ನ][೩] ದಳದೊಳು ಕಾದುವನೆ ಸ
ಜ್ಜನಿಕೆಯರಿಯಲು ಬಂದುದೇ ನಿಮ್ಮಡಿಯ ಚಿತ್ತದೊಳು ॥೬೬॥

ಮೋಹರಿಸಿದುದು ಬಿಜ್ಜಣನ ದಳ
ವಾಹವಕ್ಕಿದು ವೇಳೆಯೆಂಬುದು
ನೀ ಹದನನರಿತವನು ಬಹನೇ ಸವಣರೊಡನಾಡಿ
ನೇಹ ಮಿಗೆ [೪][ಜಿನರೊಳಗೆ][೪] ತನ್ನು
ತ್ಸಾಹದಿಂದಿಹನೀಗ ಗಂಡರ
ಬಾಹುಬಳ ನಿನಗವನ ಬಲವೇನೆಂದು ಖಳಜನರು ॥೬೭॥

[೫][ಎನಲು][೫] ಗಂಡರಸೂರ್ಯ ಸಾಮಂ
ತನ ಮಹಾಮಹಿಮೆಯನು ನೀವಂ
ದನುವನರಿಯದೆ ಗಳಹಿದಿರಲಾ ತರುಕೃಪಾಣವನು
ಜನಪ ನಿಮ್ಮಯ ಚಿತ್ತಕಂಜುವೆ
ವೆನುತ ಹಿಮ್ಮೆಟ್ಟಿದರು ಖಳಜನ
ಇನನುದಯವಾದಂತೆ ಬಹ ನಿಂಬನ ನೃಪತಿ ಕಂಡ ॥೬೮॥

೧–೧ ಬಂದು (ಕ,ಮ)೨–೨ ಡಿ(ಕ,ಮ) ೩–೩ ನು (ಕ,ಮ) ೪–೪ ಜನದೊಳಗೆ(ಕ,ಮ) ೫–೫ ಎನುತ(ಕ,ಮ)

ಈತನಲ್ಲದೆ ನಮ್ಮನುವರವ
ನಾತು ಕೊಂಬವರಾರು ರಣದೊಳು
ಭೀ[೧][ತಿಯವ][೧] ರಿವರಲ್ಲವಸರದ ಮಾತನಾಡುವರು
ನೂತನದ ಭುಜಸಿರಿಯದಾರೊಳ
[೨][ಗೋತಿ][೨] ರುಹಳೆಂದರಿಯಲಹುದೆಂ
ದಾತ ಗಂಡರಸೂರ್ಯನನುಕಿರಸಿದನು ಮನದೊಳಗೆ ॥೬೯॥

ಪಿರಿದು ಮನದುತ್ಸವದಿ ಬಂದಾ
ದರದಿ ಕೈಗಳ ಮುಗಿದು ಗಂಡರ
ಸೂರ್ಯಗೆಂದನು ನೋಡು ಬಿಜ್ಜಣನ ಸಮಬಲದೊಡ್ಡ
ಕರಿತುರಗಭಟರುಗಳನೊಂದೇ
ತುರಗದಿಂದಿದಿರ್ಚುವೆನು ನಿಮಿಷಕೆ
ಹರಿಸಿ ಹೊಯಿವೆನು ಬಿಜ್ಜಣನ ಗಜಮಸ್ತಕವನೀಗ ॥೭೦॥

ರಾಯ ಗಂಡರಸೂರ್ಯ ಬಹಳಾ
ದಾಯ ಜೀವಿತವಿತ್ತು ಸಲಹುವ
ಪಾಯ ಪಿರಿದಾಗಿಹುದಲಾ ಬಹುಜನದ ಚಿತ್ತದೊಳು
ರಾಯ ನೀನೆನಗಿತ್ತ ಜೀವಿತ
ದಾಯವೆಲ್ಲ [೩][ದ][೩] ಲೆಕ್ಕ ನಿರ್ಣಯ
ವಾಯಿತೆಂದೆನಗೀಗ ಚಿತ್ತಯಿಸುವುದು ವೀಳೆಯವ ॥೭೧॥

ಅಸಮಬಲದೊಳು ಕಾದುವರೆ ಹೆ
ಬ್ಬುಸಿಯನಾಡುವುದಿಲ್ಲವದು ಸ
ನ್ಯಸನವಾಗಿಹುದೆನಗೆ ನೋಡುವುದಾವ ಕಾಲದೊಳು
ನುಸುಳಿದೊಡೆ ಕಾಳಗದೊಳಗೆ ನಾ
ನೊಸೆದು ಮಾಡಿದ ಧರ್ಮವ ಸಮ
ರ್ಪಿಸುವೆ ನಿಮ್ಮಡಿಗಳಿಗೆ ಚಿತ್ತಯಿಸುವುದು ವೀಳೆಯವ ॥೭೨॥

೧–೧ ತರ (ಕ,ಮ) ೨–೨ ಗೊತ್ತಿ (ಕ,ಮ) ೩–೩ ರ(ಕ,ಮ)

ಕೇಳು ನಿಜಗತಿ ನಿನ್ನ ಧರ್ಮವ
ನಾಳುವರ ಪೆಸರೆನೆನುತ ಪಾ
ತಾಳಕಿಳಿದುದು ಬೇರು ಲತೆ ತ್ರಿದಶಕ್ಕೆ ಪರ್ವಿದುದು
ಹೇಳಲನುವಹುದಲ್ಲ ೧[ವೆ]೧ನ್ನಯ
ಕೇಳು ಧರ್ಮವನಿತ್ತೆ ನೀ ಸಂ
ಬಾಳಿಸುವುದೆನುತಿತ್ತನಾ ಕರ್ಪೂರದ ವೀಲೆಯವ ॥೭೩॥

ನೋಡು ಬಿಜ್ಜಣನಸಮಬಲದ ಸ
ಘಾಡಿಕೆಯ ೨[ಕಣ್ಣಳವಿಗೊಳ್ಳದ]೨
ಬೀಡಿನೊಳು ಹೆಬ್ಬಟ್ಟೆ ಮಾಡುವೆ ನಿಟ್ಟಲಿನೊಳಗೆ
ರೂಢಿಗಿದು ಕೌತುಕವೆನಲು ಕುಣಿ
ದಾಡಿಸುವೆನಟ್ಟಿಗಳ ವೀರರ
ಹೇಡಿಗೊಳಿಸುವೆ ಸಂಗರದೊಳತಿಬಳರ ನಿಮಿಷದಲಿ ॥೭೪॥

ನಿನ್ನೊಡನೆ ಮಾತಾಡಿ ಗಳಹುವ
ಗನ್ನ ಚಾವಡಿಯೊಳಗೆ ಮರೆದುದು
ನನ್ನೊಡನೆ ಬಂದೆಯಿದೆ ನೋಡಿದೊಡಹುದು ಕಾಳಗ೩[ವು]೩
ಕಣ್ಣಿವೆಯ ೪[ಸೀ]೪ದಂತೆ ನೋಡುವೊ
ಡಿನ್ನರಿದು ರಣದೊಳಗೆ ಹರನುರಿ
ಗಣ್ಣ ತೆರೆದಂತಹುದಲಾ ಸಂಗರದೊಳದ್ಭುತವು ॥೭೫॥

ಧರಣಿಪತಿ ಕೇಳಿತ್ತ ಸಂಗರ
೫[ದರಿ]೫ ಭಟರನೊರೆಸುವೆನು ಬಿಜ್ಜಣ
ನುರವಣಿಯ ನಿಲಿಸುವೆನು ಕರಿತುರಗಾದಿ ಸೇನೆಯನು
ಮರಳುದಲೆ ಇಲ್ಲೆನಿಸಿ ರಕ್ತದ ತೆರೆಯ ತುಳುಕಾಡಿಸುವೆ ರಣದೊಳು
ಮರುಳ ಪಡೆಗೌರಣವ ಮಾಡುವೆನೊಂದು ನಿಮಿಷದಲಿ ॥೭೬॥

೧-೧ x(ಕ,ಮ) ೨-೨ ಕಣ್ಣವಿಗೊಳ್ಳದೆ(ಕ) ಕಣ್ಣಗವಿಗೊಳದ(ಮ) ೩-೩ ವ(ಕ,ಮ)೪-೪ಸಿ(ಕ,ಮ) ೫-೫ದೊಳರಿ(ಕ,ಮ)

[೧]ಇಂದು[೧] ನಿಂಬ ನಿಶ್ಯಂಕನಾದುದ
ನಂದು ಗಂಡರ ಸೂರ್ಯನರಿದಾ
ನಂದದಿಂದವೆ ನೋಡಿದನು ಸಂದಣಿಪ ಸುಭಟರೊಳು
ತಂದೆ ಮುನ್ನಿನ ಜನ್ಮದೊಳು ಭವ
ಬಂ[೨]ಧದಿಂ[೨]ದಂತಾದ ಕಾರಣ
ಇಂದು ನಮ್ಮನುವರವನಾನಲಿಕಾದ ಸಾಮಂತ ॥೭೭॥

ಎಂದು ಗಂಡರಸೂರ್ಯ ಬಿರುದಿಗೆ
ಬಂದ ಬಿಜ್ಜಣನೊಡನೆ ಕಾದುದ
[೩][ನಿಂದು ನೀನಲ್ಲೆನಗ] ದಾರುಂಟೆಂದನವಸರಕೆ
ನಿಂದು ತಕ್ಕೈಸಿದನು ನೊಸಲೊಳ
ಗಂದು ತುಂಬಿದ ವೀರಸೇಸೆಯ
ಮುಂದೆ ರಣದೊಳು ವಿಜಯನಾಗೆಂದನು ಮಹೀಪಾಲ ॥೭೮॥

ಅರಸು ಕೊಟ್ಟನು ನೆರವಿನಿಚ್ಚಾ
ಸಿರದ ಮೇಲೈನೂರು ಕುದುರೆಯ
ವರ ಮಹಾಪಂಚಾಂಗ ಜೋಡಿನ ರಾವುತರನಾಗ
ಉರವಣಿಯ ಮುಖದೊಳಗೆ ನಿಂಬನ
ಹೊರೆಯೊಳೆಯ್ದಿಯೆ ಕಾಳಗದೊಳ
ಬ್ಬರಿಸಿ [೪][ಹೊಯ್ವವಸರದೊಳಾನೈದುವವನು][೪] ಸಂವರಿಸಿ ॥೭೯॥

ನೆರವದೇತಕೆ ನನಗೆ ನಿಮ್ಮಯ
ಕರುಣವುಂಟಾಗುರಲು ಶತ ಸಾ
ವಿರ ಮುಖದೊಳ[೫][ಗೆ ಕೈಯ][೫] ತೋರುವೆನೊಂದು ತುರಗದಲಿ
ಅರಸು ಸಂತಸ[೬][ವೆಯ್ದಿರೆ ಜನಾ][೬]
ಶ್ಚರ್ಯವೆನಿಸುವ ಮಂತ್ರ ತಂತ್ರದ
ನೆರವು ನಿಂಬಂಗುಂಟೆನಲು ಸಾಮಂತನಿಂತೆಂದ ॥೮೦॥

೧–೧ಎಂ(ಮ) ೨–೨ ದುವಿಂ(ಕ) ೩–೩ ನಿಂತೆಂದು ನಿನಗಲ್ಲ (ಕ,ಮ)೪–೪ ಹೊಯಿವಸರದೊಳಾನೆದುವೇನು(ಮ)೫–೫ ಗಿರೆ(ಕ,ಮ) ೬–೬ ವನೆಯ್ದಿರಲಾ (ಕ,ಮ)

ಮಂತ್ರವೆನಗಾ ಪಂಚಪದಗಳು
ತಂತ್ರ ಜಿನಗಂಧಾಂಭು ಸೇಸೆಯು
ಯಂತ್ರನೊಸಲೊಳು ಧರ್ಮಚಕ್ರವದಿರಲು ಬಿಜ್ಜಣನ
ತಂತ್ರಬಲವನು ಗೆಲುವೆ ಮೋಕ್ಷ ಸ್ವ
ತಂತ್ರವೆಂಬಾವಾಸದೊಳಗೆ ನಿ
ರಂತ್ರ ಸುಖವನು ಪಡೆವೆ ಮಂತ್ರಗಳುಂಟು ನಮಗೆಂದು ॥೮೧॥

ಎನಲು ಗಂಡರಸೂರ್ಯ ನಮ್ಮಯ
ತನುವನುಳುಹುವ ಮಂತ್ರವದು ನಿಂ
ಬನೊಳು ಕಾಣಿಸಲಾಯ್ತು ಮಿಕ್ಕಿನ ಮಂತ್ರವೇಕೆನುತ
ಜನಪ ಕೇಳಿದ ಕಾಳಗವನಿಂ
[೧][ದು][೧]ದಯದೊ [೨][ಳಗಾ][೨]ರನೆಯ ಘಳಿಗೆಯೊ
ಳನುವರವ ಗೆಲಲಹುದು ನಿಂಬಂಗೆ[೩][ನೆ][೩]ನಿಮಿತ್ತಕರು ॥೮೨॥

ಕಾಳಗವ ಗೆಲುವುದಕೆ ನಮಗಿದು
ವೇಳೆಯಹು [೪][ದೆಂ][೪]ದೆಂಬ ಮಾತನು
ಕೇಳಿದೊಡೆ ಬಿಜ್ಜಣನು ಮನದೊಳು ಗಾಳವಾಡುವನು
ಕೇಳು ಗಂಡರಸೂರ್ಯ ನೀ ಭೂ
ಪಾಳರೊಳಗಪ್ರತಿಮ ಬಿರುದನು
ಹೇಳಿಸುವೆ ಮಿಗೆ ಜಗದೊಳಗೆ ಜನಜನಿತ ಮಾಡುವೆನು ॥೮೩॥

ರಾಯ ಗಂಡರಸೂರ್ಯ ಬಿಜ್ಜಣ
ರಾಯನೊಡ್ಡಿದ ಬಲವ ನೋ[೫][ಳ್ಪ][೫]ನಿ
ಜಾಯತವ ಕೆಡಿಸುವೆನು ಬಂದಸಹಾಯ ಸುಭಟರನು
ಕಯುವೆರಸಿಯೆ ಕನುಗಿ[೬] ಜವಗಾ
ದಾಯವನು ಮಾಡುವೆನು ಮಿಕ್ಕಿನ
ಪಾಯದಳವನು ರಣದೊ[೭][ಳೊ][೭]ರಸುವೆನೆಂದ ಸಾಮಂತ ॥೮೪॥

೧–೧ದಿನನು(ಕ,ಮ) ೨–೨ ಳಾ(ಕ,ಮ)೩–೩ x(ಕ,ಮ) ೪–೪ x(ಕ,ಮ) ೫–೫ ಡುವ(ಕ,ಮ)೬+ಹಿ(ಕ,ಮ)೭–೭ ಳ (ಕ,ಮ)

ಎಂದು ತನ್ನಯ ಮನದೊಳಾಗ ಜಿ
ನೇಂದ್ರರನು ವಂದಿಸಿದ ಮಾಘ
ಣಂದಿಸಿದ್ಧಾಂತಿಗಳ ಚರಣಂಗಳಿಗೆ ಬೀಳ್ಕೊಂಡು
ಮುಂದೆ ಬಳಲುವ ಭವದ ದಂದುಗ
ವಿಂದೆನಗೆ ಹಿಂಗಿದುದೆನುತಲಾ
ಗಂದು ಕಾಯನಿವೃತ್ತಿವ್ರತವನು ನೆನೆದ ಮನದೊಳಗೆ ॥೮೫॥

ವಿನಯನಿಧಿ ಸಮ್ಯಕ್ತ್ವಯುಕ್ತನು
ಜಿನಪದಾಂಬುಜಮತ್ತಮಧುಕರ
ನನುಪಮೋನ್ನತಶೀಲಗುಣಸಂಪನ್ನನಪ್ರತಿಮ
ಘನಮಹಾಸಂಗರದೊಳಗೆ ಸಂ
ಹನ[1]ವನುಳಿದೆಯ್ದಿದನು ಸ್ವರ್ಗವ
ನನುನಯದಿ ಸಾಮಂತ[2][ನಾ][2] ಕಥೆ ನಾಲ್ಕನೆಯ ಸಂಧಿ ॥೮೬॥

❖❖

೧+ ನ(ಕ,ಮ) ೨–೨ ನ (ಕ,ಮ)

ಸಂಧಿ : ಐದು

ಒಂದು ಸಮ್ಯಕ್ತ್ವದ ಮಹಿಮೆಯೊಳ
ಗಂದು ಬಿಜ್ಜಣನಸಮಬಲವನು
ಕೊಂದು ಸದ್ಗತಿವಡೆದ ನಿಂಬನು ವೀರವ್ರತದಿಂದ ॥ಪಲ್ಲ॥

ಒಂದು ತುರಗವನೇರಿ ಬೀದಿಯ
ನೊಂದ ಮಾಡಿದನೆಡಬಲನ ಬಲು
ಬಂದ ದೊರೆ[೧][ಗಳ][೧] ನೋಡಿ ಬೋಳೈಸಿದನು ಕತ್ತಳನ
ದಂದುಗದ ಭವಶರಧಿಯನಾ ನಾ
ನೆಂದು ದಾಂಟುವೆನೆಂದು ಮನದೊಳ
ಗೆಂದು ಸನ್ಯಾಸವನು ರಣವೋನವನು ಕೈಕೊಂಡ ॥೧॥

ಸುಸರಭಾವ ಸುರೇಖ ಬಂದದ
ವಿಷಮಗತಿ ಸಂಚಾರ ಪೇರೆಯ
ಮಿಸುಪ ಲುಳಿ ಹೆಲ್ಲವಣೆ ವೇಡೆಯದೊತ್ತು ಸಾರಿಕೆಯ
ಪಸರ ಮಹುಚಾರಿಗಳೆನಿಪ ನಿ
ಪ್ಪಸರದಲಿ ಸಾವಂತನೇರಿದ
ನಸಮಬಲವನು ಗೆಲುವುದಕೆ ಹಯವಹುದು ತನಗೆಂದ ॥೨॥

ಎರಡು ದಳ[೨][ದ][೨]ಬ್ಬರಣೆ ಮಸಗಿದು
ದುರವಣೆಯ ಕಹಳೆಗಳು ಹಿಡಿದವು
ಮೊರೆ[೩][ಯೆ][೩] ಭೇರಿ ನಿಸಾಳ ಬಿರುದಿನ ಸುಭಟರಬ್ಬರದ
ತರಹರದ [೪][ಗಜ][೪] ದಳದ ಮುಂದಣ
ತುರಗದಳವೆದ್ದವು ಕೆಲೆದು ಸಂ
ಗರದೊಳತಿ ಬಳ[೫][ಕೆ][೫]ಯ್ಯುದಕೆ ಕುರುಹಾಯ್ತು ಬಲದೊಳಗೆ ॥೩॥

೧-೧ಯ(ಕ,ಮ) ೨-೨ ವ (ಕ,ಮ) ೩-೩ ವ(ಕ,ಮ) ೪-೪ ಜಗಳ (ಕ,ಮ) ೫-೫ ನೆ (ಕ,ಮ)

ಬೊಬ್ಬೆ ವೆಗ್ಗಳವಾಯ್ತು ಸುಭಟರಿ
ಗುಬ್ಬಗವಳವ ಕೊಂಡವೊಲೆರಡು
ಹೆಬ್ಬಲ ಚಡಾಳಿಸಿದುದಾಗಳೆ ಮೊರೆದುದಂಬರವು
ಹಬ್ಬುಗೆಯ ಸಾಲೊಳಗೆ ವೀರ ೧[ರು
ವೊ]೧ಬ್ಬರೊಬ್ಬರ ನೂಕಿ ನಡೆ೨[ದರು]೨
ಒಬ್ಬನೆಯ್ದಿದ ನಿಂಬ ಸಂಗರರಂಗದಿದಿರಿನೊಳು ||೪||

ಮೀರಿದನು ಕಿರಿದಂತರವ ತಲೆ
ದೋರಿದನು ಪರಬಲದ ಸುಭಟರು
ವೀರನಿವನಾರೆನುತ ನೋಡಿದರೆಯ್ದೆ ತಮತಮಗೆ
ಬೇರೆ ತಾನೀಗೊಂದು ಕುದುರೆಯ
ನೇರಿ ಹೊಯ್ವುವಸರದೊಳಾ ಜಯ
ಸೂರೆಕಾರನೆನುತ್ತ ಚೂಣಿಯೊಳೇರೆ ರಾಹುತರು ||೫||

ಶಿರದ ಬಲು ಸೂಸಕದ ಲೋಹದ
ತರದ ಹಲಗೆಯ ಮೆಳೆಯ ಕಂಗಳ
ಕೈಯ ಪ೩[ಟ್ಟಾ]೩ವಳಿಯ ರಾಘಾವಳಿಯ ಹಮ್ಮುಗೆಯ
ಕರದ ಕರವಾಳಿಂದೆಸೆವ ಹ
ಕ್ಕರಿಕೆ ಬೀಸಿದ ತುರಗದಲಿ ಸಂ
ಗರದೊಳತಿಬಳನೆಯ್ದಿದನು ಸಾಮಂತನಿದಿರಿನಲಿ ||೬||

ಇವನಹುದು ರಾಹುತರೊಳತಿಬಳ
ನಿವನನುಳುಹುವೆನೆಂದೆನುತ ಮೋ
ನವನು ಕೈಕೊಂಡಾಗ ಕೈಸನ್ನೆಯಲಿ ಸಾರೆನಲು
ಅವನರಿಯದೊತ್ತರಿಸಿದೊಡೆ ಕೈ
ದುವುನೊ೪[ಳವ]೪ನಬ್ಬಳಿಸಿ ತೆಗೆಯುದೆ
ತವಕದಲಿ ನೂಕಿದೊಡೆ ತಲೆಕೆಳಗಾದ ನಿಮಿಷದಲಿ ||೭||

೧–೧ ರನೊ (ಕ,ಮ) ೨–೨ ದುದು(ಕ,ಮ) ೩–೩ ಟ (ಕ,ಮ) ೪–೪ ಳೆಯ (ಕ,ಮ)

ಕೆಡಹಿದನು ರಾಹುತನನೆಂದಾ
ಪಡಿಬಲದ ರಾವುತರು ಕವಿದರು
ತುಡುಕದಿರು ಕೈದುವನೆನುತ ಮೋಹರಿಸಿ ಮುತ್ತಿದರು
ಹೊಡೆದನತಿ ವೇಗದಲಿ ಸೀಸಕ
ಕಡಿದು ಚಿಪ್ಪುಗಳೊಡೆದು ಪೇರುರ
ನಡು ಹರಿದು ಹಲ್ಲಣ ತುರಗ ತುಂಡಾಯ್ತು ನಿಮಿಷದಲಿ ॥೮॥

ಅಸುರನಿವನೆಂದೆನತು ಚೂಣಿಯ
ಲೆಸಗಿ ಬಹ ರಾವುತರು ಮುರಿಯಲು
ನಸುನಗುತ ಸಾವಂತ ನೂಕಿದನತುಳ ಕತ್ತಳನ
ಉಳಿಸಲುಬ್ಬಸವಾಯ್ತು ತಮ್ಮಿ
ದ್ದೆಸೆ[೧][ಯ][೧] ಬಲದೊಳು ಕೂಡಿ ಮತ್ತಾ
ಮಸಗಿ ರಾಹುತರೆಯ್ದಿ ಸಂದಣಿಸಿದರು ಮೂದಲಿಸಿ ॥೯॥

ಪೇರೆಯಂಗಳನಿಕ್ಕೆ ರಾಹುತ
ರೋರೆಯಿಂದೇರಿದರು ಒರ್ವನ
ವೀರದಿಂದೇನಹುದೆನತು ಮುತ್ತಿದರು ಕರವಾಳ
ಕಾರಮಿಂಚಿನ ಹೊಳೆವ ಬೆಳಗಿನ
ಕೂರಸಿಗಳುರವಣಿಯ ಗಾಯವ
ದಾರಿಯಿಂದವೆ ಕಳೆದ ನಿಂಬನು ತರುಕೃಪಾಣದಲಿ ॥೧೦॥

ಎಲೆಲೆ ಹೊಯ್ದರು ರಾವುತರು ಪರ
ಬಲದ ಸುಭಟನನೆಂದೆನುತ ಹೆ
[೨]ಬ್ಬಲ ಮುಸುಕಿತಬ್ಬರಿಸಿ ಕೋಳಾಹಳದ ಬೊಬ್ಬೆಯಲಿ
ನೆಲನ ಧೂಳ[೨]ಬ್ಬರಿಸಿ ನೆಗೆದುದು
ಜಲಜಸಖ ಮುಸುಖಿದನೆನುತ ಕ
ತ್ತಲೆ ಕವಿದ ನರತುರಗಭಟರುಗಳ್ಳೈದೆ ಸಂದಣಿಸಿ ॥೧೧॥

೧–೧ ವ(ಕ,ಮ) ೨–೨ x(ಕ)

ಒತ್ತರಿಸಿ ರಾವುತರು ಕವಿದರು
ಮುತ್ತಿದರು ಸಾಮಂತನನು ಮನ
ದರ್ತಿಯಾದುದು ಕಾಳಗವಿದೆಂದೆನುತ ಹೆಲ್ಲವಿಸಿ
ಕತ್ತಳನನವು[೧][ಕಿ][೧]ದನು ರಾವುತ
ರತ್ತಲಿತ್ತಲಿ ಚೆಲ್ಲಿದರು ಬೆಂ
ಬತ್ತಿ ಹೊಯ್ದು [೨][ನ][೨]ಪಾರ ಸುಭಟರ ಶಿರಗಳುದುರಿದವು ॥೧೨॥

ರುಂಡಗಳು ಕಡಿದುರುಳಿ ಮುಂಡದ
ತಂಡ ಕುದುರೆಯೊಳೇರಿ ಬರಲಾ
ಕಂಡು ವಿಸ್ಮಯಬಡೆದು ರಣದೋರ್ದನಂಡನಹುದೆನುತ
ಗಂಡುಗಲಿಗಳು ಮಸಗಿ ವೀರನ
ತುಂಡುಗಡಿವೆವೆನುತ್ತ ಪೈಜೆಯ
ಕೊಂಡು ಸುಭಟರು ನಿಂಬನೊಳಗಿದಿರಾಂತರುರವಣಿಸಿ ॥೧೩॥

ಕುಣಿವ ಕುದುರೆಯ ಮೇಲೆ ನಿಂಬನು
ರಣದ ಭೈರವನೆಂದೆನಲು ದಾ
ಸಣದ ಹೂವಿನೊಳರ್ಚಿಸಿದರೆಂಬಂತರುಣಮಯದೆ
ಹೊಣಕೆಯಾಳಿವನಲ್ಲ ಜವಗೌ
ತಣವ ಮಾಡುವ ಸಂವರಣೆಕಾ
ರಣನೆತ್ತಬ್ಬರಿಸಿ ಮುತ್ತಿದರಖಿಳ ದೆಸೆಗಳಲಿ ॥೧೪॥

ಹೆಬ್ಬಳನ ಭಾರಣೆಯ ಚೂಣಿಯೊ
ಳಬ್ಬರಣೆ ಮಸಗಿದುದು ರಾಹುತ
[೩][ರು][೩]ಬ್ಬಿ ಮುನ್ನರಿಯ[೪][ದೊಲು][೪] ಮಾಡಿದ[೫]ನೊಬ್ಬನೆಂದೆನುತ
ಕೊಬ್ಬಿನಿಂದುರವಣಿಸಿ ತಮ್ಮೊಳ
ಗೊಬ್ಬರೊಬ್ಬರ ನೂಕಿ ಕವಿದರು
ನಿಬ್ಬರದ ಸಾವಂತನಿದಿರಿನೊಳೆಯ್ದೆ ಸಂದಣಿಸಿ ॥೧೫॥
ಕೂರಸಿಯನುಚ್ಚಿದರು ನಿಂಬನ

೧–೧ ರತಿ (ಕ,ಮ) ೨–೨ ನು(ಕ,ಮ) ೩–೩ ರ (ಕ,ಮ) ೪–೪ ದೆ(ಕ,ಮ) ೫ + ನಿವ (ಕ,ಮ)

ವಾರುವದ ಮೇಲಡರಿ ರಾವುತ
ಕೀರಿ ಹೊಯ್ದರು ಮುಸುಕಿದರು ಕರವಾಳ ಬೆಳಗಿನಲಿ
ವೀರ ತನ್ನಯ ತರುಕೃಪಾಣದಿ
ಧಾರೆಗಳ ನೋಡಿದರೆ ತಾಗಿದ
ಕೂರಸಿಗಳಿಕ್ಕಡಿಗಳಾಗಿ[೧][ಯೆ][೧]ಕೆಲದೊಳುದುರಿದವು ॥೧೬॥

[೨][ತಡೆಯದೌಕಿದ][೨] ಕತ್ತಳನ ಮೇ
ಲೆಡಬಲನ ರಾವುತರ ಹಿಯ್ದನು
ಸಿಡಿದು ಶಿರ ನಭದೊಳಗೆ [೩][ಆ][೩] ದಬ್ಬರದ ಬೊಬ್ಬೆಗಳ
ಸಿಡಿಲೆರಗಿದಂತಾಯ್ತು ಕಾಲನ
ಪಡೆ ದಣಿದು ಹಿಮ್ಮೆಟ್ಟಿ ವೀರರ
ಕುಡುಹು ಮುರಿದುದು ಚೂಣಿಗಾಳಗದವರು ತಿರುಗಿದರು ॥೧೭॥

ಚೂಣಿಗಾಳಗ ಮುರಿದು ಹರಿಗೆಯ
ಠಾಣಿಯದ ಮೇಲೋಸರಿಸಿದುದು
ಹೋಣಿಸಿದ ಕತ್ತಳನ [೪][ಖ][೪] ರಪುಟದೊಳಗೆ ನಿಲ[೫][ಲ][೫]ರಿದು
ತ್ರಾಣಗೆಟ್ಟುದು ಸುಭಟರೆಯ್ದೆ ಕೃ
ಪಾಣಗಳ ನೆಲಕಿಳುಹಿ ಕಾಲನ
ಬಾಣಸಿನ ಮನೆಯಾಯ್ತು ಸಂಗರರಂಗದದ್ಭುತವು ॥೧೮॥

ಬಂದುದಾಗಳೆ ವಾಜಿ ಹೆಬ್ಬಲ
ಮುಂದೆ ಕಣ್ಣಳವಿಯೊಳು ವಾರಿಧಿ
ಯಂದದೊಡ್ಡವಣೆಯಲಿ ಮಿಂಚುವ ಶಸ್ತ್ರಮೋಹರ [೬][ದಿ][೬]
ಮುಂದೆ ಹರಿಗೆಯ ಅದಟ ಸಾಲೊಳು
ನಿಂದ ಬಲು ಬಿಲ್ಲವರು ಜೇವೊಡೆ
ದಂದು ಸುರಿದರು ನಿಂಬನೊಳು ಮೇಘಾವಳಿಯ ಸರಳ ॥೧೯॥

೧–೧ x(ಕ,ಮ) ೨–೨ ತಡಿಯದನೂಕಿದ (ಕ) ತಡೆಯಡಾಕಿದ (ಮ) ೩–೩ x(ಕ,ಮ) ೪–೪ ಖ (ಕ,ಮ) ೫–೫ (ಕ,ಮ) ೬–೬ ದ (ಕ,ಮ)

ಸರಳಗೊಂದಳದೊಳಗೆ ನಿಂಬನ
ತುರಗ ಹೊಳೆದುದು ಮಿಂಚಿನಂದದಿ
ಮುರಿದು ಮೂಡಿದುದೆತ್ತ ನೋಡಿದೊಡತ್ತ ಕತ್ತಳನ
ತರದ ಸಾಲುಬ್ಬರದ ಬಿರುದಿನ
ಹರಿಗೆಯಲಿ ಬಳರೊಡ್ಡಿನಲಿ ಸಂ
ವರಿಸಿ ನೂಕಿದೊಡಖಿಳ ದೆಸೆಯೊಳು ಮಸಗಿತಬ್ಬರವು ॥೨೦॥

ಭರದಿ ತಾಗಿದ ತುರಗ ಖುರದೊಳು
ಹರಿಗೆ ಹೊಡೆಗೆಡೆದೊಡೆದು ಕತ್ತಳ
ನುರವಣೆಯೊಳರಿಭಟರು ನಿಲಲರಿದಾಯ್ತು ಸಮರದೊಳು
ತರಹರವಿದಲ್ಲೆನುತ ವೀರರ
ನೆರವಿ ಬೊಬ್ಬಿರಿದಖಿಲ ದೆಸೆಯೊಳು
ಮೊರೆದು ಮುಸುಕಿ[೧][ದರಾ][೧]ಗ ಸಂಗರರಂಗದತಿಬಳರು ॥೨೧॥

ಎಲೆಲೆ ಬಂದುದು ವಾಜಿಯ[೨][ದುವ][೨]
ತ್ತೆಲೆಲೆ ಚೂಣಿಯ ರಾಹುತರ ಹೊ
ಯ್ದೆಲೆಲೆ ಹರಿಗೆಯ ದಳವ ದಾಂಟಿದನೆನುತಲಬ್ಬರಿಸಿ
ಎಲೆಲೆ ಹೊಯ್ ಹೆಬ್ಬರೆಯ ಕಹಳೆಯ
ನೆಲೆಲೆ ಹಿಡಿ ಮೋಹರಿಸಿ ಸುಭಟರು
ಎಲೆಲೆ ಬಲು ಬೊಬ್ಬೆಯಲಿ ಕೋಳಾಹಳ ಮಸಗಿತಾಗ ॥೨೨॥

ಹೊಳೆದುದಾಗಳೆ ತುರಗ ವೀರರ
ಕೊಳುಗುಳದ ಬೊಬ್ಬೆಯಲಿ ಕಾಳಾ
ನಳನುರಿಗೆ ಸರಿಯಾಯ್ತು ಖುರದುರವಣಿಯ ಕೆಂಧೂಳಿ
ಬೆಳಗು ಮಸಳಿಸಿತಿನನುದಯ ಕ
ತ್ತಳನ ಲುಳಿ ಸಂಚಳಿಸಿತರಿಬಲ
ದೊಳಗೆ ರಾಹುತರೆಯ್ದೆ ಸಂದಣಿಸಿ[೩][ದರು][೩] ಸಂವರಿಸಿ ॥೨೩॥

೧-೧ ದುದಾ (ಕ,ಮ) ೨-೨ x(ಕ,ಮ) ೩-೩ ದುದು(ಕ,ಮ)

ನೀಲವರ್ಣದ ಪಚ್ಚೆವಲಗೆಯ
ಮೇಲೆ ಮಾಣಿಕವಟ್ಟೆ ಚೌಕದ
ಸಾಲ ಸರಿಗೆಯ ವಜ್ರಬಂಧದ ಬಿಗಿದ ಕಂಧರದ
ಮೇಲೆ ಹೊದಿಸಿದ ಮೀನಚಿಪ್ಪಿನ
ಕೀಲ ಮೊಳೆಗಳ ಚೌಕ ಪುಲ್ಲಿಯ
ಸಾಲ ಹಕ್ಕರಿಕೆಗಳು ಬೀಸಿದ ತುರಗದುರವಣೆಯ ॥೨೪॥

ನಿಚ್ಚಳದ ಚೋಡುಗಳ ಕೆಲಬರು
ಮುಚ್ಚೆ ಮುಸುಕಿದ ಲೋಹಬಂಧದ
ಪಚ್ಚೆ ರಾಘಾವಳಿಯ ಹೊಳಹಿನ ಮೊಳೆಯ ಮಿಂಚುಗಳ
ಉಚ್ಚೆ ಕರವಾಳಗಳ ಧಾರೆಯ
ಬಿಚ್ಚೆ ಬೆರಲೊಳು ತೀಡಿ ರಣದಲಿ
ಮೆಚ್ಚುಗೊಂಬೆವೆನುತ್ತ ರಾಹುತರೆಯ್ದೆ ಸಂದಣಿಸಿ ॥೨೫॥

ಹೊಲ್ಲಯಿಸಿ ಪರಬಲದ ರಾಹುತ
ರೆಲ್ಲ ಮುಸುಕಿ[೧][ದರಾ][೧]ಗ ನಿಂಬನ
ನೆಲ್ಲಿ ಕಾಣಲು ಬಾರದೆಂಬಂತಾಹವದ ನಡುವೆ
ಸಲ್ಲೆಹದ ರಾವುತರ ಮಸ್ತಕ
ದಲ್ಲಿ ಹೊಡೆಯಲು ಚಿಪ್ಪೊಡೆದು ಮಿದು
[೨][ಳಂಗಳಲ್ಲಿಯೆ][೨] ಚೆಲ್ಲಿ ಬೊಂಬಾಳಿಸಿತು ರಕ್ತಗಳ ॥೨೬॥

ತೆರಹುಗೊಂ[೩][ಡರು][೩] ರಾವುತ[೪][ರು][೪] ಮಿಗೆ
ಹೆರೆ ತೆಗೆದು ಹಿಮ್ಮೆಟ್ಟೆ ಸುಬ್ಬಟರೊ
ಳಿರಿವ ರಾಹುತನಿವನಹುದೆನುತ ಸುತ್ತಿ ಬಳಸಿ[೫][ದರು][೫]
ಮರಹಿನಲಿ ಹೊಯ್ದೆಡಬಲದವರು
ಕುರಿಗಡಿದು ಕೆಡಹುವೆವೆನುತ ಚೆ
ಚ್ಚರಿಸಿಕೊಂ[೬][ಡರು][೬] ವಾಜಿಗಳ ಬೊಳವಿಸಿ ರಾವುತರು ॥೨೭॥

೧-೧ ದುದಾ (ಕ,ಮ) ೨-೨ ಳಲ್ಲಿ (ಕ,ಮ) ೩-೩ ಡುದು (ಕ,ಮ) ೪-೪ ರ (ಕ,ಮ) ೫-೫ ದುದು (ಕ,ಮ) ೬-೬ ಡುದು (ಕ,ಮ)

ಕೂರಲಗು ಸಂದಣಿಸಿ ಪಾರಕ
ರೋರಣದೊಳೋರಯಿಸಿ ನಿಂದುದು
ಮೇರೆದಪ್ಪಿದ ವಾರುವಂಗಳು ಭಾರಣೆಯ ಮುಂದೆ
ಕಾರಮಿಂಚಿನ ಹೊಳೆವ ಬೆಳಗಿನ
ಸಾರಸಾಲೊಳು ನಿಂಬದೇವನು
ಸೂರ್ಯನುದಯಂಗೆಯ್ದವೊಲು ಸಂಗರದೊಳೊಪ್ಪಿದನು ॥೨೮॥

ಓರೆಗಚ್ಚುಟ ಕಟ್ಟಿ ಡೊಂಕಣಿ
ಕಾರರೆಲ್ಲರು ಮುಂದೆ ಬಂ[೧][ದರು][೧]
ಸೀರಿ ಮಂಡೆಯ ಸುತ್ತಿ ಕಾರಿಯ ನಾರಹಗ್ಗದಲಿ
ವೀರನಿವನೆ[೨][ನ್ನುತ್ತ][೨] ಸಬಳದ
ಕೇರ ಕಟ್ಟಿದರಾಗ ಬಳಸಿದ
ಸೂರಿಯನ ಕಣದಂತೆ ಸಂಗರರಂಗ ಮಧ್ಯದಲಿ ॥೨೯॥

ಪಾರಕರು ಮೊಹರಿಸಿ ಕವಿದುದು
ವಾರುವನನಿಕ್ಕರಿಸಿ ನಿಂಬನ
ಸಾರುಸಾರೆಂದೆನುತ ಮೂದಲಿಸಿದುದು ತಮತಮಗ
ಪಾರ ಶೌರ್ಯೋನ್ನತ ಕೃಪಾಣದ
ಧಾರೆಯೆರಡನು ಕಳೆದುದಟ್ಟಿನೊ
ಳೋರಣಿಸಿ ಹೊಯ್ದನು ಸಮರದುರವಣೆಯ ಸಿಡಿಲಂತೆ ॥೩೦॥

ಪಾರಕರು ಮುರಿದವರು ನಮಗಿದು
ಹಾರವಲ್ಲೆಂದೆನುತ ಕುದುರೆಯ
ಭಾರಣೆಯ ಮೇಲಿಕ್ಕಿದರು ತೆಗೆತಂದು ಕಾಳಗವ
ವೀರಸಂಗರಧೀರ ನಿಂಬನ
ವಾರುವನನಿಕ್ಕಲಿಸಿ ರಾಹುತ
ರೇರಿದರು ತಮತಮಗೆ ಖುರರಜ ಮುಸುಕಿತಂಬರವ ॥೩೧॥

೧-೧ ದುದು (ಕ,ಮ) ೨-೨ ನುತ (ಕ,ಮ)

ಅಬ್ಬರಣೆ ಮುಸುಕಿದುದು ವೀರರ
ಬೊಬ್ಬೆ ವೆಗ್ಗಳವಾಯ್ತು ಬಿರುದುಗ
ಳಬ್ಬರಿಪ ಕಹಳೆಗಳ ತಮ್ಮಟಿ ವೀರಡವುಡೆಗಳ
ಸಬ್ಬ ಲಗ್ಗೆಯದಾಯ್ತು ಧೂಳಿನೊ
ಳೊಬ್ಬರೊಬ್ಬರ ಕಾಣಬಾರದ
ಮಬ್ಬುಗತ್ತಲೆ ಕವಿದುದೇನೆಂಬೆನು ಮಹಾಹವನ ॥೩೨॥

ದೆಸೆಗೆ ಮಸಗಿದುದಾಗ ಕತ್ತಳ
ನಸಮ ಬಲದೊಳು ಬೀದಿವರಿದುದು
ಮಿಸುಪ ಖುರ ಲಘು ಜಘನ ಜಂಘನ ಪಟದ ಪೈಸರದ
ಕುಸುರಿ ಬಂಧದ ಭಾಗವತಿ ನಿ
ಪ್ಪಸರದೊಳು ಸಾಮಂತ ರಣದಲಿ
ನಸುನಗುತಲುಬ್ಬಸವ ಮಾಡಿದನಸಮ ರಿಪುಬಲಕೆ ॥೩೩॥

ಸೈರಿಸದೆ ರಾವುತರು ಬೇಗದೊ
ಳೆಯ್ದೆ ಬಲಸಿದ[೧][ರಾಗ][೧] ನಿಂಬನ
ಕೈದುವಿಡಿಯದಿರೆಂದೆನುತ ಮೂದಲಿಸಿ ಮುತ್ತಿದರು
ಹೊಯ್ದನತಿ ವೇಗದಲಿ ಕಾಲನ
ಬಯ್ಕೆಯಾದುದೆನುತ್ತ ಹಯಮೋ
ಹರ ಮುರಿದು [೨][ಬಿದ್ದಿರಲು][೨] ರಾವುತರೆಯ್ದೆ ಹೊಡೆಗೆಡೆದು ॥೩೪॥

ದಳ ಮುರಿದು ನಿಲಲರಿದು ಹೆಬ್ಬಲ
ದೊಳಗೆ ಕೋಳಾಹಳ[೩][ದ ಕಳ][೩] ಕಳ
ನಳವಿಯಲಿ ನಿಲಲರಿದು ಭಯಭೀಕರದ ರಣದೊಳಗೆ
ಅಳವುಗಿಡೆ ಹಮ್ಮೈಸಿ ಘಾಯದೊ
ಳೊಲೆದು ಬೀಳುವ ಚಚ್ಚರಿಸಿ ಬಸ
ವಳಿದು ಬೀಳುವ ಕುಣಿವ ಮುಂಡದ ತಂಡದದ್ಭುತವು ॥೩೫॥

೧-೧ ದುದಾ(ಕ,ಮ) ೨-೨ x(ಕ,ಮ) ೩-೩ x(ಕ,ಮ)

ಹೊಳೆವ ಸುರಗಿಯ ಕೊಂತ ಕಡಿತಲೆ
ಗಳ ಮಹಾ೧[ಬೆಳಗು]೧ಗಳ ಮಿಂಚಿನ
ಮೊಳಗುವಬ್ಬರ ಭೇರಿ ನಿಸ್ಸಾಖಗಳ ಡೊಳ್ಳುಗಳ
ಕೊಳಗುಳದ ಬರಸಿಡಿಲ ಮೇಘಾ
ವಳಿಯ ಸರಳಿನ ರಕ್ತಪೂರದ
ತಳಿಕುಗಟ್ಟಿದ ಹೆಣನ ತೆಪ್ಪದೊಳೊಪ್ಪುವಾಹವದ ॥೩೬॥

ಗಾಯವಡೆದರು ರಾವುತರು ರಣ
ದಾಯದೊಳಗೋಸರಿಸಿ ಸುಭಟರು
ಬಾಯಬಿಟ್ಟುದು ಭರದಿ ಬೆಂಗೊಟ್ಟುದು ಮಹಾ ಬಲವು
ರಾಯ ಗಂಡರಸೂರ್ಯ ಬಾರದ
ಪಾಯ ಬರಸಿಡಿಲಂತೆ೨[ಯೊ]೨ರ್ವನ
ಸಾಯಶೂರನಿದಾರೆನುತ ಸಂಗರದಳತಿಬಳನು ॥೩೭॥

ಅರುಬಿದನು ಕಾಲಾಳ ಸುಭಟರ
ಸುರುಬಿದನು ರಾಹುತರನೆಲ್ಲರ
ಬರಿಕೆಯಿದ ಪಾರಕರನೆಬ್ಬಿದ ಹರಿಗೆಯತಿಬಳರ
ಕುರುಗಡಿದ ಮಿಕ್ಕತುಳ ಬಳರೆ
ಚ್ಚರಿಕೆಯನು ಕೆಡಿಸಿದನು ಬಿಜ್ಜಣ
ನುರುವ ಬಲವನು ತರಿದ ನಿಂಬ ನಿಶ್ಯಂಕ ನಿಮಿಷದೊಳು ॥೩೮॥

ಬೆಚ್ಚುವರೆ ಗಾಯದಲಿ ಸುಭಟರು
ಮುಚ್ಚುಗಂಗಳ ರಾಜಪುತ್ರರು
ಉಚ್ಚಿದಲಗಿನ ಕೈಯ ಸಂದಿಯ ಬೆಚ್ಚು ಬೇರುಗಳ
ಕಚ್ಚಿ ಕುಡಿಮೀಸೆಗಳ ಮುಂದಲೆ
ಬಿಚ್ಚು ಚುಂಚಿನ ಹಿಳಿಲ ರಕ್ತದ
ಬಚ್ಚ ಬಸಿಯುಡೆಗೆಗಳೊಳೊರಗಿದುದಾಹವ೩[ದ]೩ ಭಟರು ॥೩೯॥

೧–೧ ಬೆಳು (ಕ,ಮ) ೨–೨ ಮೊ (ಕ,ಮ) ೩–೩ x(ಕ,ಮ)

ಹರಸಿ ರಣದೊಳು ಹೊಯ್ವನಿಂಬನ
ತುರಗಖುರದೊಳು ತೊಡಕಿ ಬಂಬಲ
ಗರುಳುಗಳು ಕಾಳಜದ ಹೊರಳಿಯ ಖಂಡದಿಂಡೆಗ೧[ಳು]೧
ಭರದಲವುಕಲಿ ಪರಿವ ರಕ್ತದ
ತೆರೆಯ ನೊರೆ ತುಳುಕಾ೨[ಡಿ]೨ ಚೆಲ್ಲಲು
ಕರದ ಕರವಾಳಿನ೩[ಲಿ]೩ ರೌದ್ರಳದ್ಬುತವನೇನೆಂಬೆ ॥೪೦॥

ಪರಿವ ರಕ್ತದ ಕಡಲ ತೆರೆಯೊಳು
ಹೊರಳಿ ಹೊರಳುವ ಹೆಣನ ತೆಕ್ಕೆಯ
ತುರಗ ತುಂಡಿನ ಖುರಕೆ ಸಿಕ್ಕುವ ಶಿರಕೆ ಸರಳುಗಳ
ಮರಳುಗಳು ಪಿಡಿದೆಳೆವ ಬಾರ೫[ದೆ]೫
ಭರದಿ ಮತ್ತೊಂದಕೆ ಪರಿವ ಸಂ
ಗರದೊಳಾದದ್ಭುತವನೇನೆಂಬೆನು ಮಹಾರಣವ ॥೪೧॥

ದೊಂಡೆಗರು೪[ಳಿ]೬ ಮಿದುಳ ಕಾಳಜ
ಖಂಡನೆಣನುಬ್ಬರದ ರಕ್ತದ
ಹೊಂಡೆಯದ ಬೊಬ್ಬುಳಿಕೆಯಲಿ ಕಿರುನೊರೆಯ ಪು೭[ಯ್ಯ]೭ಗಳ
ತುಂಡು ಬೇರೊಂದೊಂದು ಹತ್ತಿ ವಿ
ತಂಡಮಯವಾಗಿರ್ದ ರಣವನು
ಗಂಡುಗಲಿ ಸಾಮಂತ ಕೊಂದದ್ಭುತವನೇನೆಂಬೆ ॥೪೨॥

ತಲ್ಲಣಿಸಿದರು ಭಟರು ಕೈಗಳ
ಬಿಲ್ಲುಗಳ ನೆಲಕಿಳುಹಿ ಬೆರಳನು
ಹಲ್ಲಿನಿಂದವೆ ಕಚ್ಚಿ ಕಿಂಕರಿಗೊಂಬುದದ್ಭುತವು
ಭಲ್ಲೆಯದ ಕಡಿತಲೆಯ ಲವುಡೆಯ
ಸೆಲ್ಲೆಹದ ರಾವುತರು ನಮಗಿ
ನ್ನಿಲ್ಲಿ ನಿಲಲರಿದೆನುತ ತಿರುಗಿ೮[ದರ]೮ಖಿಳ ದೆಸೆಗಳಲಿ ॥೪೩॥

೧–೧ ಳ (ಕ,ಮ) ೨–೨ಡೆ (ಕ,ಮ) ೩–೩ x (ಕ,ಮ) ೪+ ದ(ಕ,ಮ) ೫–೫ ದೊ(ಕ,ಮ) ೬–೬ x(ಕ,ಮ) ೭–೭ ಯ (ಕ,ಮ) ೮–೮ ದುದ(ಕ,ಮ)

ನರತುರಗಬಲ ಮುರಿದು ಸುಭಟರು
ಧರಧುರದ ಕಾಳಗವ ಗೆರೆತಂ
ದುರವಣೆಯ ಕರಿಘಟೆಯ ಮೇಲಿಕ್ಕಿದರು ಸಂದಣಿಸಿ
ಹರವರಿಯ ಬಲುಬೊಬ್ಬೆಯಬ್ಬರ
ಭರದ ಕೋಳಾಹಳವ ಬಿಜ್ಜಣ
ನರಿದೆನುತ ಕೇಳಿದನು ಸಂಗರರಂಗಭೂಮಿಯೊಳು ॥೪೪॥

ಏನೆಲವೊ ಬಲ ಮುರಿದು ತಿರುಗಿದು
ದೆನುತ ಕೋಳಾಹಳವು ಮುಸಗಿದು
ದೇನು ಬಂದವನಾರೆನುತ ಬೆಸಗೊಳಲು ಬಿಜ್ಜಣನು
ಏನ ಬಲ್ಲೆವು ಜೀಯ ಸಂಗರ
ದಾನವನೊ ರಕ್ಕಸನೊ ಕಾಲನೊ
ಚೂಣಿಯಲಿ ಬಹು[1][ಯೇ][1]ರಿ ಹೊಯ್ದನಪಾರ ಸುಭಟರನು ॥೪೫॥

ವಿಷಮಸಂಗರವಾಯ್ತು ಸುಭಟ[2][ರಿ][2]
ಗುಸಿರಲುಬ್ಬಸವಾಯ್ತು ಬಂದವ
ನಸುರತನವನದೇನನೆಂಬೆವು ದೇವರುಗಳೊಡನೆ
ಅಸಮದಳ ಹಿಮ್ಮೆಟ್ಟಿದುದು ಕೂ
ರಸಿಯಲುರವಣಿಸಿದನನೇಕರ
ನಸುವ ತಗಿಬಗಿ ಮಾಡಿದವನಿದಿರೊಳಗೆ ನಿಲಲರಿದು ॥೪೬॥

ತಡೆಗಡಿದ ರಾವುತರ ಸುಭಟರ
ಹುಡಿಯ ಮಾಡಿದ ನೂರು ಹರಿಗೆಯ
ನೊಡೆಯ ಹೊಯ್ದನು ಬಿಲ್ಲವರನಿಬ್ಬಿದನು ಪಾರಕರ
ಬಿ[3][ಡೆ][3] ಜಡಿದ ನಾಯಕರ ಹೆಮ್ಮೆಯ
ನುಡಿಗಿಸಿದ[4][ನವ][4] ಹೊಣಿಕೆಯಾಳಿನ
ಕಡುಪ ಮುರಿದನು ಸಂಗರದೊಳೆಡೆಗೆಡಿಸಿದನು ಬಲವ ॥೪೭॥

೧-೧ ದೇ (ಕ,ಮ) ೨-೨ ರ (ಕ,ಮ) ೩-೩ ಡದೆ (ಕ,ಮ) ೪-೪ ನು(ಕ,ಮ)

ಹೇಳಲಮ್ಮೆವು ಜೀಯ ಬಂದವ
ನಾಳುತನದಂಗವಣೆಯನು ಕಾ
ಲಾಳ ಹೊಯ್ಯದೆ ರಾಹುತರೊಳತೊಬಲರ ಕೆಡಹಿದನು
ಕೇಳಿ ನಿಮ್ಮಡಿಗಳು ವಿಚಾರಿಸಿ
ಕಾಳಗದೊಳುಬ್ಬೆದ್ದು ಗಳಹುವ
ಖೂಳತನವನದೇನನೆಂಬೆವು ದೇವರುಗಳೊಡನೆ ॥೪೮॥

ವೀರನವನಹುದೆನುತ ಬಿಜ್ಜಣ
ವಾರುವನನಿಳಿದೇರಿ ಗಜವನು
ಸಾರಗಟ್ಟಿದ ಕರಿಘಟೆಯ ಮೋಹರ[೧][ದಿ ಮುಂ][೧]ದೆಸೆವ
ವೀರಡೌಡೆಯ ಹೊಯ್ದು ಸುಭಟರು
ಕೊರಲಗ ಕಿತ್ತೈದೆ ಹೊಣಕೆಯ
ಸೂರೆಕಾರರು ಮುಂದೆ ಮೊಹರಿಸಿದರು ಸಂದಣಿಸಿ ॥೪೯॥

ನೂಲಹರಿಗೆಯನಿಕ್ಕಿ ಪಾರಕ
ರಾಳು ನಿಂದುದು ಮುಂದೆ ಕತ್ತಳ
ಮೇಲೆ ಹೌದೆನು[೨][ತೆತ್ತೆ][೨] ಕಡಿತಲೆ ಬಿಲ್ಲಭಾಲೆಯ[೩][ವ][೩]
ಸಾಲಸಂಗರ ಬಿರುದಿನುಗ್ಘಡ
ಗಾಳೆ ಮಸಗಿದವಖಿಳ ದೆಸೆಯಲಿ
ಕೋಲ ಕಟ್ಟಿಗೆಯವರು ಸಾರಿದರೆಡಬಲದ ವರೆಗೆ ॥೫೦॥

ಕಿತ್ತಸಿಯ ಕೂರಲಗು ಸುರಗಿಯ
ಮೊತ್ತವಲಗೆಯ ಪರಶುಮುದ್ಗರ
ಹಸ್ತದ[೪][ಲಿ][೪] ಕರವಾಳ ಕಡಿತಲೆ ಕೊಂತ ಲವುಡಿಗ[೫][ಳು]
ಇತ್ತರದೊಳೊರಣಿಸಿ ನಿಂದುದು
ಕತ್ತಳನು ಬರಲರಿಯಬಹುದೆ
ನ್ನುತ್ತ ಸಾರುವೆವೆನುತ ಸಂಭ್ರಮಿಸಿದರು ತಮತಮಗೆ ॥೫೧॥

೧–೧ x(ಕ,ಮ) ೨–೨ ತ್ತ(ಕ,ಮ) ೩–೩ ದ(ಕ,ಮ) ೪–೪ x(ಕ,ಮ) ೫–೫ ಳ(ಕ,ಮ)

ಅಬ್ಬರಿಸುವುರವಣೆಯ ಸುಭಟರ
ಹೆಬ್ಬಲದ ಗಜಮುಖದ ಕಾಳಗ
ಒಬ್ಬರೊಬ್ಬರನೊತ್ತರಿಸಿ ನಿಂದುದು ಮಹಾಬಲರು
ಹಬ್ಬುಗೆಯ ಕರಿಘಟೆಯ ಕುಲಗಿರಿ
ವೊಬ್ಬುಳಿಸಿದಂತಾಯ್ತು ಕಂಗಳ
ಹಬ್ಬವಾದುದೆನುತ್ತ ಸಂದಣಿಸಿದರು ಭಟರೆಯ್ದೆ ॥೫೨॥

ಕ್ಷೋಣಿಪತಿ ಸನ್ನದ್ಧನಾಗಲು
ಕಾಣುತವೆ ಭಟರೆಯ್ದೆ ಸಮೆದ ಕೃ
ಪಾಣ ಸಹಿತವೆ ಸಂವರಿಸಿತೆಡಬಲದ ಮನ್ನೆಯರು
ಹೊಣಿಸಿದರಿಕ್ಕೆಲದೊಳಗೆ [೧][ಮುಂ][೧]
ಚೂಣಿ ಕಾಳಗ ನಮ್ಮ ಮೇಲೆನೆ
ತ್ರಾಣದಂತಸ್ಥವನರಿವುದರಿದಬ್ಜಸಂಭವಗೆ ॥೫೩॥

ಕರಿಘಟೆಗಳುರವಣೆಯ ಹಯಮೋ
ಹರದ ಖುರಪುಟ ಧೂಳಿನಿಂದಂ
ಬರ ಮುಸುಕಿತೇನೆಂಬೆ ಸುಭಟರ ಬೊಬ್ಬೆಯಬ್ಬರದ
ಮೊರೆವ ಭೇರಿ ಮೃದಂಗ ಡೊಳ್ಳಿನ
ಥರದ ನಿಸ್ಸಾಳಗಳು ಮೊಳಗುವ
ಬಿರುದಿನಗ್ಗದ ಕಹಳೆ ಮೊಳಗಿದವಖಿಳ ದೆಸೆಗಳಲಿ ॥೫೪॥

ಹಲವು ಕರಿಘಟೆವೆರಸಿ ಬಿಜ್ಜಣ
ಕಲಹಲಂಪಟವೆಂಬ ಗಜವನು
ಉಲಿದು ನೂಂಕಲು [೨]ನೆಲನದಿರೆ[೨] ದಿಕ್ಕರಿ ಭಯದಿ ಬೆದರೆ
ಅಲಗಲಗು ಹಳಚಿದವು ಮೋಹರ
ದೊಳಗೆ ಸುಭಟರು ಸಂದಣಿಸಿ ನಡೆ
ಗೊಳಲು ಕೊಳಗುಳ ಮಸಗಿತಬ್ಜಭವಾಂಡದಳವಿಯೊಳು ॥೫೫॥

೧–೧ x(ಕ,ಮ) ೨–೨ ನೆನದಿರೆ(ಕ)

ನೋಡೆಲವೊ ಕತ್ತಳನ ಬರವನು
ಗೂಢಗೊಂಡಿದಿರೊಡ್ಡಿನಿಲಿ ನಿಂ
ದೋಡದಿರಿ ನೀವೆನುತ ಸಾರಿದರೆಯ್ದೆ ತಮ್ಮೊಳಗೆ
ಕೂಡಿ ಕಣ್ಣಳವಿಯಲಿ ಹೊಳೆದುದು
ಮೂಡಿದುದು ಮಿಂಚಿನೊಳು ದಳವೆ
ಲ್ಲೊಡಿದುದು ಭಯ ಹೊಯ್ದುದಾಗಳೆ ಸಂಭಟರಸುವುನೊಳು ॥೫೬॥

ಆವೆಡೆಯ ನೋಡಿದಡೆ ಕತ್ತಳ
ನಾವಬೇಗದಿ ಹೊಳೆದುದೆನಲಿದಿ
ರಾವನಹನೆಂದೆನುತ ಹರನುರಿಗಣ್ಣಿನುರವಣಿಗೆ
ಈ ವಸುಧೆಗಚ್ಚರಿಯವಿದು ಸಂ
ಭಾವಿಸುವೊಡರಿದೀ ಬಲದೊಳಗೆ
ಸಾವ ಬಯಸುವಗಹುದು ನಿಂಬ೧[ನ]೧ ನಿದಿರಿನೊಳಗಾಗ ॥೫೭॥

ಮುರಿದು ನಿಂದುದು ವಾಜಿಖುರದಲಿ
ಕೆರೆದುದಾಗಳೆ ನೆಲನನಂಬರ
ಕುರವಣಿಸಿ ಪುಟನೆಗೆದು ಹಾದುದು ತಿರುಗಿತರಿಬಲವ
ಸರಿವೆರಸಿದರು ರಾವುತರು ಮೋ
ಹರಿಸಿ ನಿಂದುದು ನಿಂಬನೊಳು ಧರ
ಮರದ ಕಾಳಗವಾಯ್ತು ಸಂಗರರಂಗಭೂಮಿಯೊಳು ॥೫೮॥

ಸಿಡಿಲುಸಿಡಿಲೊಳಗಡರಿ ೨[ಹೊಯ್ದಂ]೨
ತೊಡೆಯನಿದಿರಿನೊಳಾಯ್ತು ಕಾಳಗ
ಬಿಡದೆ ಹೆಬ್ಬಲ ಮಸಗೆ ಮುಸುಕಿತು ಅಖಿಳ ದೆಸೆಗಳಲಿ
ತುಡುಕಿದರು ರಾವುತರು ಖಡ್ಗವ
ಜಡಿದು ಮುಸುಕಿದರೆಯ್ದೆ ಕೂರಲ
ಗಿಡಿದ ಪಂ೩[ಜ]೩ರವನು ನಿವಾರಿಸಿದನು ನಿಜಾಸಿಯಲಿ ॥೫೯॥

೧-೧ ಲ (ಕ,ಮ) ೨-೨ ಹೋದ (ಕ,ಮ) ೩-೩ ಚ (ಕ,ಮ)

ಒಡನೆ ಕತ್ತಳನಡರಿದುದು ಬೆಂ
ಬಿಡದೆ ಹೊಡೆದನು ರಾವುತರ ವಂ
ಗಡವನೆಡಗೆಡಿಸಿದನು ಸಮರದೊಳುರವಣೆಯ ಭಟರ
ತಡಿಗಡಿದ [೧][ತಾ][೧]ನೆಂಟು ಸಾವಿರ
ಕಡಿವಡೆದು ಹೊರಳಿದುದು ರಕ್ತದ
ಕಡಲು ಪರಿದುದು ಮರುಳ ಪಡೆ ಹರಿದಾಡೆ ರಣದೊಳಗೆ ||೬೦||

ಜಿಯ್ಯ ಬಂದುದು ವಾಜಿಯೆನೆ ನ
ಮ್ಮಯ್ಯನಹುದೋ ವೀರನೆನುತವೆ
ಕಯ್ಯ ತೋರುವೆನೆನ್ನ ಮೇಲೆಂದೆಂಬ ಸುಭಟನಿವ
ಹೊಯ್ಯದಿರಿ ನೀವೆನುತ ನಾನಾಂ
ತೊಯ್ಯ[೨]ನೊರಸುವೆನೆನುತ ಬಿಜ್ಜಣ
ನೊಯ್ಯನೊಯ್ಯನೆ ನೂಂಕಿದನು ಸಾಮಜ[೨]ವನಿದಿರಿನೊಳು ||೬೧||

ಎಲಬಲಕೆ ತೋರಿದನು ವಾಜಿಯ
ಸಡಗರದ ಗಜದಳವ ಮುಂದಣ
ಕಡುಗಲಿಗಳಬ್ಬರಿಸಿ ನಿಂ[೩][ದರು][೩] ನಿಂಬನಿದಿರಿನೊಳು
ಮಡದಲೌಂಕಲು ಕತ್ತಳನ ಕಾ
ಲೆಡೆಗೆ ಬಿದ್ದುದು ವೀರರೆದೆಗಳ
ಮಿಡುಕೆ ಕತ್ತಳದುಳಿದ ಹಯದುರವಣೆಯನೇನೆಂಬೆ ||೬೨||

ಇಟ್ಟಗಲ ದಾಂಟಿದುದು ಕತ್ತಳ
ಬಟ್ಟೆಗೊಟ್ಟುದು ಸಮರದಲಿ ಬಲ
ಕಟ್ಟಿದಿರಿನಲಿ ನೂಂಕಲಾ ಹಯ ಗಜಕೆ ಹಿಮ್ಮೆಟ್ಟಿ
ಉಟ್ಟ ಪಟ್ಟಾವಳಿಯ ದಟ್ಟಿಯ
ಕಟ್ಟಿದನು ಕತ್ತಳನ ಕಣ್ಣನು
ಬಿಟ್ಟನತಿ ವೇಗದಲಿ ಬಿಜ್ಜಣನೆಡೆಗೆ ಸಾಮಂತ ||೬೩||

೧–೧ x(ಕ,ಮ) ೨–೨ ನೆ ನೊಂಕಿದನು ಸಾಮಜ (ಕ) ೩–೩ ದುದು (ಕ,ಮ)

ಏನನೆಂಬೆನು ಸುಭಟನುರವಣೆ
ಗಾ ನೆರೆದ ಮೋಹರ[೧][ದೊ][೧]ಳರುವ
[೨]ತ್ತಾನೆ ಬೆದರಿದುವಾಗ ಭುಗಿಲೆಂದುದು ಮಹಾಬಳವು
ಆ ನಡುವೆ ಕತ್ತಳನ ನೂಂಕಿ ನಿ
ಧಾನಿಸಲು ಬಿಜ್ಜಣನ ವಾಹನ[೨]
[೩]ಶೂಲಿಗೆಯೆ [೪]ತೆ[೪]ತ್ತಿಸಿದ ದಂತದ ಮತ್ತಗಜವೆನಲು ||೬೪||

ನುಡಿದ ಬಾಸೆಗೆ ಬಿಜ್ಜಣನ ಮೇ
ಲಡರಿದೊಡೆ ಸಾವಂತನನು ಗಜ
ವೊಡನೆ ಕತ್ತಳ ಸಹಿತ ಹಿಡಿದೀಡಾಡಿತಂಬರಕೆ
ಕಡುಭರದೊಳಬ್ಬರಿಸಿ ಬೀಳುತ
ಲೆಡೆಗುಡದೆ ಗಜಮಸ್ತಕವ ಬರ
ಸಿಡಿಲೆರಗಿ ಹೊಯ್ವಂದದಲಿ ಹೊಯ್ದೊರಗಿದನು ಧರೆಗೆ ||೬೫||

ಒಡನೆ ಬಲ ಮುಸುಕಿದುದು ಬಿಜ್ಜಣ
ನೊಡನೆ ಹಳಚಿದ ವೀರನನು ಕಂ
ಡೊಡನೆ [೫][ಹೊದ್ದಿತು][೫] ಪಾಪವೆಮಗೆಂದೆನುತ ಸಂದಣಿಸಿ
ಪೊಡವಿಪತಿಗಳು ನೋಡಿ ವಿಸ್ಮಯ
ಬಡೆದು ತಂತಮ್ಮೊಳಗೆ ನಿಂಬನ
ಬಿಡದೆ ಕೊಂಡಾಡಿದರು ಬಿಜ್ಜಣರಾಯ ಸಹಿತಾಗ ||೬೬||

ವೀರನೀತನಿದಾರೆನುತ್ತ ವಿ
ಚಾರಿಸಲು ಸಾವಂತನೆಂಬುದ
ವೀರಬಿಜ್ಜಣನರಿದು ವೀರರೊಳಹುದು ಹೇಳೆನುತ
ವೀರರಿಂತಪ್ಪವರುಮಿರಲು ವಿ
ಚಾರಿಸುವುದೇನೆನುತ ಗಂಡರ
ಸೂರಿಯನು ತಾ[೬]ನೆಂ[೬]ಬ ಬಿರುದಿಂಗಹುದು ಪೇಳೆಂದ ||೬೭||

೧-೧ ದ (ಕ,ಮ) ೨-೨ x(ಕ) ೩+ನ (ಮ) ೪-೪ (ಕ) ೫-೫ ಹೌದು (ಕ,ಮ) ೬-೬ ನಿಂ(ಕ)

ಆಳಿನಂಗವನಾರು ಬಲ್ಲರು
ಭಾಳಲೋಚನಗರಿದು ನಮ್ಮನು
ಕಾಳಗದೊಳುಹಿದನು ಕಯ್ಗಾಯಿದನು ಸಾವಂತ
ಘೀಳಿಡಲು ಗಜಮಸ್ತಕವ ಹೊಯ್
ವಾಳುತನವನದಿನ್ನು ಮುನ್ನವೆ
ಕೇಳಿದಿ[೧][ರೆ][೧] ಏನೆನುತ ತಿರುಗಿದನವನಿಪತಿ ಪುರಕೆ ॥೬೮॥

ಏನು ಬಿಜ್ಜಣನಸಮಬಲ ಮುರಿ
ದೇನು ತಿರುಗಿತ್ತೆನುತ ಗಂಡರ
ಭಾನು ಗಜವೇರಿದನು ನೋಡಿದನಾಹವದ ದೆಸೆಯ
ಮೀನ ಕಪಿ ಭೇರುಂಡ ಗಜಪಂ
ಚಾನನ ವೃಷಭ ಗರುಡ ರಾಹುಗ
ಳಾನೆ ರವಿಯ ಪತಾಕೆ ತಿರುಗಿದವಖಿಳ ದೆಸೆಗಳಲಿ ॥೬೯॥

ಆಳು ಗಜ ತುರಗ ನರಬಲಸಹಿ
ತೋಳಿಯಿಂದವೆ ತಿರುಗಿದುದು ಕೆಂ
ಧೂಳಿ ಮಸಗಿದುದಾಗ ಮುಸುಕಿದುದಿನನ ತೇಜವನು
ಸೂಳಯಿಸಿತೆಡಬಲದ ಕಟಕವ
ನೋಳಿಯೊಳಗಬ್ಬರದ ಸನ್ನೆಯ
ಮೇಳವದ ಕಹಳೆಗಳು ಮೊಳಗಿದವಖಿಳ ದೆಸೆಗಳಲಿ ॥೭೦॥

ಇತ್ತ ಬಿಜ್ಜಣಕ[೨][ಲ್ಯಣದ][೨] ಪುರ
ದತ್ತ ತಿರುಗಿದ ಸುದ್ದಿಯನು ಪರಿ
ದತ್ತ ಪೇಳಿದರಾಗ ಗಂಡರಸೂರ್ಯನಿದ್ದೆಡೆಗೆ
ಕತ್ತಳನ ಖುರಪುಟಕೆ ಗಜವರು
ವತ್ತು ಬೆದರಲು ಬಿಜ್ಜಣನ ಗಜ
ಮಸ್ತಕವ ಹೊಯ್ದೊರಗಿದನು ಸಾವಂತನೆಂದೆನಲು ॥೭೧॥

೧–೧ ರಿ (ಕ,ಮ) ೨–೨ ಲ್ಯಾಣ (ಕ,ಮ)

ಗಂಡುಗಲಿಗಳು ಸುಭಟರಗಣಿತ
ಮಂಡಲೀಕರು ರಾಜಪುತ್ರರು
ಚಂಡಕರಸಮತೇಜರ ಪ್ರತಿಮರು ಮಹಾಭಟರು
ಮಂಡಿತಾಖಿಲ ಶೀಲ ಶೌರ್‍ಯೋ
ದ್ದಂಡನಿರಿದಾಹವದೊಳಗೆ ಕಡಿ
ಖಂಡಮಯವಾಗಿರ್ದು [೧][ಬಿರ್ದು][೧]ದು ನಿಂಬನೆಡಬಲದಿ ॥೭೨॥

ವೀರ ಸಂಗರಧೀರರಗ್ಗದ
ಪಾರಕರ ರಾವುತರ ಸುಭಟರ
ಚಾರುಭುಜರ ಪ್ರತಾಪರುದ್ದಂಡರ ಮಹಾಭಟರ
ಸಾರದಿಗ್ಗಜ ಹೆಣನ ರಕ್ತದ
ಘೋರ ಕವಿಯಲು ಕೊಂದು ನಿಂಬ ಶ
ರೀರವನು ತಾನುಳಿದನೆಂದರು ಗಂಡರಾಧಿಪಗೆ ॥೭೩॥

ಕೇಳಲಾ ಸುದ್ದಿಯನು ಕಂಬನಿ
ಥಾಳಿಸಿದವೆಡಬಲದೊಳೆಸೆವ ದು
ಕೂಲ ದಿವ್ಯಾಂಬರ ನೆನೆದು ಮೂರ್ಛೆಯೊಳು ಮೈನೆನೆದು
ಆಲವಟ್ಟದಿ ಬೀಸಿದರು ತಂ
ಗಾಳಿಗಳನೆಸಗಿದರು ದೇವರು
ಮೇಳವಿದು ತಾನೆನುತಲೆಚ್ಚರಿಸಿದರು ಆ ನೃಪನ ॥೭೪॥

ಮಂಡಲಿಕ ಸಾವಂತನೆ[೨][ಲ್ಲಿ][೨]ದ
ದಂಡಧರ ಸಾವಂತನೆಲ್ಲಿದ
ಚಂಡಕರಸಮತೇಜನೀ ಸಾಮಂತನೆಲ್ಲಿಹನೋ
ತೊಂಡ ಬಿಜ್ಜಳನಸಮಬಲವನು
ಖಂಡಿಸಿದ ಸಾಮಂತನೆಲ್ಲಿದ
[೩]... .... [೩]ನೆನುತ ನೃಪ ಹಲುಬಿ ॥೭೫॥

೧–೧ x(ಕ,ಮ) ೨–೨ ತ್ತಿ (ಕ,ಮ) ೩–೩ x(ಕ,ಮ)

ಏನುತಹುಸಿರವೆನುತ (?) ಗಂಡರ
ಭಾನು ಕೇಳಲು ರಣದೊಳರುವ
ತ್ತಾನೆ ಬೆದರಲು ಬಿಜ್ಜಣನ ಗಜಮಸ್ತಕವ ಹೊಯ್ದು
ಮಾನನಿಧಿ ಧರೆಗೊರಗಿದನು ದಿಟ
ವೇನು[೧][ಯೆಂ][೧] ದೆನಲವನಿಪತಿ ನಮ
ಗೇನುಪಾಯವ ಮಾಡಿ ಹೋದೆಯೆನುತ್ತ ಹೊಗಳಿದನು ॥೭೬॥

ಎತ್ತ ಭ[೨][ಟ್ಟ][೨] ರು ಬಿರುದು ಹೊಗಳಲ
ದೆತ್ತ ಬಿಜ್ಜಣ ಭೂಪಬರಲಿಕಿ
ದೆತ್ತ ಕಾಳಗ ನಿನ್ನ ಮೇಲಾದುದು ಮಹಾಪುರುಷ
ಮತ್ತಗಜಮಸ್ತಕವ ತಳ್ತಿರಿ
ದೆತ್ತಲೊರಗಿದನೆಂಬ ಸುದ್ದಿಯ
ನಿತ್ತ ಕೇಳಲದಾಯಿತೆನುತವನೀಶ ಹಲುಬಿದನು ॥೭೭॥

ಮರಳಿ ನಿನ್ನಯ ರೂಪ ಕಾಣಿಸ
ಲರಿದು ಕಂಗಳಿಗಾಯಿತೆನುತ ಮೆ
ಯ್ಮರೆದು ದುಃಖದ ತಾಪದೊಳಗವನಿಶ ಘೋರ್ಣಿಸಿದ
ಹೊರಳಿದನು ಮುಸುಕಿಟ್ಟು [೩][ಬಸಿ][೩]ರೊಳ
ಗುರಿ ಮಸಗಿದುದು ಕಣ್ಣ ನೀರಲು
ಸುರಿವ ಧಾರೆಗೆ ನೆನೆದು ದಿವ್ಯಾಂಬರಕೆ [೪][ಕೆಸರ್ಮಸಗೆ][೪] ॥೭೮॥

ಅವನಿಪತಿ ದುಃಖದೊಳು ಮೆಯ್ಮರೆ
ದವನಿಯೊಳು ಹೊರಳುತ್ತಮಿರಲಾ
ಗವಯವನು ಪಿಡಿದೆತ್ತಿ ಸಂತಯಿಸಿದರು ಮಂತ್ರಿಗಳು
ತವಕದಲಿ ಸಾವಂತನನು ತೋ
ರುವ ಬಲುಹು ನಿಮಗಿಲ್ಲಲಾ ಹೇ
ಳುವೆನದಾರಿಗೆನುತ್ತ ಬಾಯಳಿದನು ಮಹೀಪಾಲ ॥೭೯॥

೧–೧ ವೆ(ಕ,ಮ) ೨–೨ ೧ (ಕ,ಮ) ೩–೩ ಬ್ಬುಸ (ಕ,ಮ) ೪–೪ ಕೆಸರು ಮಸಗೆ (ಕ,ಮ)

ಕೊಂಡು ದಾನವ ಭಟ್ಟನೆನ್ನನು
ಗಂಡರಾದಿತ್ಯಾಂಕನೆನ ೧[ಷ
ಟ್ಖಂಡ]೧ ಮಂಡಲದೊಳಗೆ ವಿಸ್ತರಿಸಿದುದು ಬಿರುದಾಗಿ
ಗಂಡ ಬಿಜ್ಜಣರಾಯ ಬರಲು
ದ್ದಂಡ ಬಿರುದನು ನನಗುಳಹಿ ಗೆಲ
ಗೊಂಡು ರಣದಲಿ ಮುಂಚುವುದೆ ಹೇಳೆಂದು ಹಲುಬಿದನು ॥೮೦॥

ಅಸಮಸಾಸಿರ ಬಲದೊಳಗೆ ಪೌ
ರುಷವ ತೋರುವ ಕಲಿತನದ ಸಾ
ಹಸದ ಭಟರೊಳು ರಣದೊಳಗೆ ಕಾದುವ ಮಹಾವ್ಯಸನ
ವಸುಮತೀಶನು ಬಿಜ್ಜಣನ ಬಲ
ದಸುವ ಕಳೆದುಬ್ಬಸವ ಮಾಡುವ
ಹೆಸರು ದೆಸೆ೨ ನಿನಗಲ್ಲದಾರಿಗೆ ಉಂಟು ಹೇಳೆಂದ ॥೮೧॥

ಹಿಂದೆ ನಾನರಿತೆಹೆನು ಖಳಜನ
ರಂದು ಖಳ್ಗವ ಮರನೆನಲು ನಾ
ನಂದು ನೋಡಿದೆ ನಿಂಬದೇವನ ಮನದನುವಿನಿರವ
೩[ಒಂ]೩ದನಾಡಿದ ಬಳಿಕ ತಾ ಮ
ತ್ತೊಂದನಾಡನು ಹುಸಿಯನೆಂಬುದ
ದಿಂದು ಮಿಗೆ ಜನಜನಿತವಾಯ್ತೆಂದನು ಮಹೀಪಾಲ ॥೮೨॥

ಆರಿಗಾಗದ ಧರೆಯು ಬಂದು೪[ದ]೪
ದಾರ ಹಂಗಿಲ್ಲದೆ ಮಹಾಬಲ
ಕೋರವರಿಯದೆ ಕಾದಿ ಹಿಮ್ಮೆಟ್ಟಿಸಿದ ಬಿಜ್ಜಣನ
ಆರು ಬಲ್ಲರು ನಿಂಬದೇವನ
ಪಾರಗುಣದುನ್ನತದ ಮಹಿಮೆಯ
ವೀರವ್ರತಕೆಣೆಯಂಟೆ ಹೇಳೆಂದನು ಮಹೀಪಾಲ ॥೮೩॥

೧-೧ ಸತ್ಕಂ(ಕ,ಮ) ೨+ಗೆ (ಕ,ಮ) ೩-೩ ಬಂ (ಕ,ಮ) ೪-೪ ದು (ಕ,ಮ)

ಎನಗುಸುರಿದನುವರದೊಳಗೆ ಸಂ
ಹನನವನು ನೀನುಳಿವು[೧][ದದು][೧] ಸ
ಜ್ಜ[೨][ನಿ][೨] ಕೆಯಹುದಲ್ಲೆಂಬುದ ವಿಚಾರಿಸದೆ ಕಳೆಧೆಯಲಾ
ಘನಮಹಾತ್ಮಕ ನಿಂಬ ನಿನ್ನನು
ನೆನೆದು ಮರಗುತ್ತಿರಲೆನುತಲನು
ದಿನದ ಗೆಲುವನು ಕೊಂಡೆಯೆಂದನು ಗಂಡರಾದಿತ್ಯ ॥೮೪॥

ಆಡಿದುತ್ತರವನು ದಿಟವ ನೀ
ಮಾಡಿದ್ಯೆ ಸಂಗರದೊಳಗೆ ಮನ
ಹೇಡಿಗೊಳ್ಳದೆ ಕಿಡಿಸಿದ್ಯೆ ಬಿಜ್ಜಣನ ಮಾಬಲವ
ರೂಢಿಯೊಳಗೆನ್ನಯ ಬಿರುದು ಕೊಂ
ಡಾಡಿದ್ಯೆ ರಣಶರಧಿಯಲಿ ಈ
ಸಾಡಿದ್ಯೆ ಸಾವಂತ ಎಂದವನೀಶ ಹಲುಬಿದನು ॥೮೫॥

ಖಳಜನರು ತಮ್ಮನುವನರಿಯದೆ
ಗಳಹುವರಲಾ ಸಜ್ಜನರ ನಿ
ರ್ಮಳ ಗುಣಕೆ [೩][ಸ್ಯೆರಿಸರಲಾವಾವಾವ}[೩] ಕಾಲದೊಳು
ತಿಳಿಯಲಾದುದು ನಮ್ಮ ಚಿತ್ತಕೆ
ಬಳಯುತ ಮಹಾ ನಿಂಬನನು ಕೊಳ
ಗುಳದಲಿಕ್ಕುವರುಳಿದು ಫಲವೇನೆಂದನವನೀಶ ॥೮೬॥

ಆರು ತಿಳಿ[೪][ದೇನು ಫಲ][೪] ನಮಗಾ
ಧಾರವಿಲ್ಲೆಂದೆನುತ ನಿಂಬನ
ಪಾರಗುಣಶೌರ್ಯೋನ್ನತ ಮಹಾವೀರವನು ಹೊಗಳಿ
ಭೇರಿ ನಿಸ್ಸಾಳಗಳು ಮೊಳಗಲು
ಪೂರಯಿಸಿದವು ಶಂಖ ಗಂಡರ
ಸೂರಿಯನು ತಿರುಗಿದನು ಕೊಲ್ಲಾಪುರಕೆ ಮತ್ತಿತ್ತ ॥೮೭॥

೧–೧ ದೆಂದು (ಕ,ಮ) ೨–೨ ನ (ಕ,ಮ) ೩–೩ ಸ್ಯೆರಿಸಲಾರಮಾವ (ಕ,ಮ) ೪–೪ ದು ಫಲವೇನು (ಕ,ಮ)

ತನುಧರೆಯೊಳೊರಗಿದುದು ನಿಂಬನ
ಮನ ಜಿನರ ಪದಕೆರಗಿದುದನರಿ
ತನಿಮಿಷರು ಪುಷ್ಪಕದೊಳುರವಣಿಸಿದರು ತಮತಮಗೆ
ಘನಮಹಾ ದುಂದುಭಿ ಮೊಳಗಲಾ
ತನ ತನುವನು ಪ್ರದಕ್ಷಣಂಗೆ
ಯ್ದನುನಯದಿ ಪೂಜಿಸಲು ಪಂಚಮಶಬ್ದಮೊಳಗಿದುದು ॥೮೮॥

ಕರಿಯಮಲ್ಲಿಗೆ ಪುಷ್ಪ ಜಾಜಿಯ
ಬಿರಿಮುಗುಳ ಸೇವಂತಿಗೆಯ ಸಿಂ
ಧುರದ ಪೊಂದಾವರೆಯ ಸುರಗಿಯ ನೀಲಕೈರವದ
ಸುರಕುಜದ ಪಲ್ಲವದ ಕುಂಕುಮ
ವರಸುಗಂಧಾಕ್ಷತೆಯ [೧][ಲಿಂ][೧]ದ್ರರು
ಸರಿವೆರಸಿ ನಿಂಬನ ತನುವಿಗಭಿಷೇಕವಂ ಮಾಡಿ ॥೮೯॥

ಯುಕ್ತಮೆಂಬುವಿದಾವುದೆನೆ ಸ
ಮ್ಯಕ್ತ್ವವೇ ಲೋಕಕ್ಕೆ ಯುಕ್ತವು
ಮುಕ್ತಿಪಥಕಿದು ತಾನೆ ಕಾರಣವೆಂದರಿದವರು
ಯುಕ್ತಿಯಿಂದವೆ ಹಲವು ದೈವದ
ಭಕ್ತಿಯನು ಮಾಡಿದೊಡೆ ಪಾಪದ
ಶಕ್ತಿಗೊಳಗಾದವರ[೨][ಲಿಂದೇ][೨]ನೆಂದರನಿಮಿಷರು ॥೯೦॥

ಸುರರ ಸುರಕನ್ನಿಕೆಯರಿರಿದಿರ್ಗೊಂ
ಡುರುಮುದದಿ ಸೌಧರ್ಮಕಲ್ಪದೊ
ಳಿರಲು ಪರಮಾಯುಷ್ಯದಿಂದದು ಸಾಗರೋಪಮವು
ಪರಮಜಿನಪದ ಭಕ್ತಿಯಿಂದನ
ವರತ ಸುಖದಿಂ ಬಾಳ್ವುದಿದು ನಿ
ರ್ಧರವೆನುತ ನಂಬುವುದು ರತ್ನತ್ರಯವಿಭೂಷಣರು ॥೯೧॥

ವೀರಜಿನಚರಣಾಂಬುರುಹಯುಗ
ಸಾರತರ ಸೌಗಂಧ ಮಧುಕರ

೧-೧ ನಿಂ(ಕ,ಮ) ೨-೨ ಲೇ (ಕ,ಮ)

ಸೂರಿಜನಹೃತ್ಯಮಲದಿನಕರಪಾರಗುಣನಿಳಯ
ಧೀರನೀ ಸಾವಂತ ನಿಂಬನ
ಚಾರುಸತ್ಯಥನವನು ಕೇ [೧][ಳೆಯು][೧]
ದಾರಭವ್ಯರಿಗಭಿಮತ ಫಲವನೀವುದನವರತ ॥೯೨॥

ಭೂನುತರು ಸತ್ಯರು ಮಹಾತ್ಮ
ಧ್ಯಾನಯುಕ್ತರು ಸಕಲಜೀವದ
ಯಾನು೨ಯುಕ್ತರು ವಿಮಲರತ್ನತ್ರಯವಿಭೂಷಣರು
ಸೇನಗಣಗಣ್ಯರು ಶ್ರೀಮಜ್ಜಿನ
ಸೇನದೇವರಭೃತ್ಯ ಸತ್ಯವಿ
[೩][ಯೆನಿಪ][೩] ಪಾರೀಶ್ವರ ರಚಿತ ಸಾಮಂತಚರಿತ[೪][ಯಿದು][೪] ॥೯೩॥

ವಿನಯನಿಧಿಸಮ್ಯಕ್ತ್ವಯುಕ್ತನು
ಜಿನಪದಾಂಬುಜಮತ್ತಮಧುಕರ
ನನುಪಮೋನ್ನತ ಶೀಲಗುಣಸಂಪನ್ನನಪ್ರತಿಮ
ಘನಮಹಾಸಂಗರದೊಳಗೆ ಸಂ
ಹನನವುಳಿದೆಯ್ದಿದನು ಸ್ವರ್ಗದ
ಮನೆಯನೆಯ್ದ ಸಾಮಂತಚರಿತೆಯೊಳಿದು ಕಡೆಯ ಸಂಧಿ ॥೯೪॥

ಕೋವಿದನು ಸತ್ಕಳೆಯೊಳನುಪಮ
ಭಾವಕನು ಸಚ್ಚರಿತಯುಕ್ತನ
ನಾ ಮಹೋನ್ನತ [೫][ಪುಣ್ಯದಯ][೫] ಧರ್ಮೋಪದೇಶಕನು
ಸೇವಕನು ಗುರುಚರ[೬][ಪುಣ್ಯದಯ][೫] ಧರ್ಮೋಪದೇಶಕನು
ಸೇವಕನು ಗುರುಚರ[೬][ಣಕರು][೬]ಣಿತ
ಭಾವ ಸತ್ಕವಿ ಪಾ[೭][ರ್ಶ್ವ][೭] ವಿರಚಿತ
ವೀವಸುಧೆಗಚ್ಚರಿಯವೆನೆ ಸಾಮಂತಚರಿತೆಯನು ॥೯೫॥

ಧಾರಿಣಿಯೊಳನುಪಮ ಸುಚರಿತರು
ಪಾರ ಮಹಿಮರು ವಿಮಲಕುಲಜರು

೧–೧ ಳುವು(ಕ,ಮ) ೨+ ಕೂಲ (ಕ,ಮ) ೩–೩ ತಾನೆನುತನಿಪ್ಪ (ಕ) ತಾನೆನಿಪ (ಮ) ೪–೪ ಯನು (ಕ,ಮ) ೫–೫ ದಯದ ಪುಣ್ಯದ (ಕ,ಮ) ೬–೬ x(ಕ,ಮ) ೭–೭ ಲ (ಕ,ಮ)

ಧೀರರಪ್ರತಿಮರು ಸುಭಟರೌದಾರ್ಯ ಗುಣಯುತರು
ವೀರನಿಂಬನ ಸತ್ಕಥನವನ
ದಾರು ಕೇಳಿದೊಡವರು ಸಂತತ
ಶ್ರೀರಮಣರಾಗಿಹರು ಧರೆ ರವಿ ಚಂದ್ರರುಳ್ಳನತ ॥೯೬॥

ಬಡವರೊಡೆಯರದೆನ್ನದನುದಿನ
ಬಿಡದೆ ಧರ್ಮವ ಮಾಡು[೧][ತಿರಲೊಡ][೧]
[೨][ನೊ][೨]ಡನೆ ಬಂದುಹುದಾತ್ಮತತ್ವ ಹಿತೋಪದೇಶವದು
ಬಡವರೊಡೆಯರು ತಮ್ಮನುವಿಗಳ
ವಡುವ ತೆರದಿಂದವೆ ಸಧರ್ಮವ
ತಡೆದಿರದೆ ಮಾಡುವರಿಗಹುದಪವರ್ಗ ಸಾಧನವು ॥೯೭॥

ಧರ್ಮ ಸಮ್ಯಗ್ದರ್ಶನವು ತಾ
ಧರ್ಮ ಸಮ್ಯಕ್‌ಜ್ಞಾನವದು ತಾ
ಧರ್ಮವೇ ಸಮ್ಯಕ್‌ಚರಿತ್ರವು ಧರ್ಮಜೀವದಯಾ
ಧರ್ಮವೇ ಸತ್ಪಥಕೆ ಕಾರಣ
ಧರ್ಮವೇ ಸದ್ಗತಿಗೆ ಕಾರಣ
ಧರ್ಮವನು ಮಾಡುವರಿಗೆಣೆಯುಂಟೇ ಧರಿತ್ರಿಯೊಳು ॥೯೮॥

ಇಂತು ಧರ್ಮವ ಮಾಡುವರು[೩][ತಾ][೩]
ಸಂತತಂ ಸುಖದಿಹರುಭಯಸಿರಿ
ವಂತರಾಗಿಹರನವರತ ಮತ್ತಾವ ಕಾಲದೊಳು
ಕಂತುಹರ ಜಿನವಚನವನು ಕೇ
ಳ್ದಂತೆ ನಂಬಿದ ಭವ್ಯ ಜನರಿಗೆ
ನಂತಸುಖಪದವೀವ ಪಾರ್ಶ್ವಜಿನೇಶನನವರತಳ ॥೯೯॥

❖❖

೧-೧ತ್ತಿರ(ಕ,ಮ) ೨-೨ ಲೋ (ಕ,ಮ) ೩-೩ (ಕ,ಮ) ೪+ ಸ್ವಸ್ತಿ ಶ್ರೀ ಸೇನ ಗಣಾಗ್ರಣ್ಯರು ಕರವೀರಕ್ಷೇತ್ರ ಕೊಲ್ಹಾಪುರ ಶ್ರೀ ಜಿನಸೇನಭಟ್ಟಾರಕ ಸ್ವಾಮಿಕರಕೃತಸಂಜಾತಗುಣಭದ್ರಸ್ವಾಮಿಗಳ ಶಿಷ್ಯರು ಶಾಂತಿಮತಿಕಂತಿಯರು ಅಪ್ಪಿಗೆಪುರದ ಶ್ರೀ ಅಜಿತನಾಥನ ಚೈತ್ಯಾಲಯದಲ್ಲಿ ಪ್ರತಿನೋಡಿ ಬರೆದೆವು. ತಪ್ಪುಳ್ಳಾದರೆ ತಿದ್ದಿಯೋದುವದು; ಬೈಲಾಗದು. ವರ್ದ್ಧತಾಂ ಜಿನಶಾಸನಂ। ಶ್ರಾವಣಮಾಸ ಕೃಷ್ಣಪಕ್ಷ ಪಾಡ್ಯ ಬುಧುವಾರ ಮುಗಿತು. ಶಕ ೧೬೫೮(ಕ)
ಸಾವಂತನ ಚರಿತೆಗೆ ಮಂಗಳಮಹಾ. ಕರಕೃತಮಪರಾಧಂ ಕ್ಷನ್ತುಮರ್ಹನ್ತಿ. ಸ್ವಸ್ತಿ ಶ್ರೀ ವೀತರಾಗಾಯನಮಃ.
ತಪ್ಪ ಬರದಾತಂ ಕಡುಜಡವಪ್ಪಾತಂ ಬರದನೆಂದು ಬಯ್ಯಲು ಬೇಡಂ
ತಪ್ಪಕ್ಕು ಶುದ್ಧಮಕ್ಕುಂ ತಪ್ಪುಳ್ಳಡೆ ತಿದ್ದಿಕೊಂಬುದುತ್ತಮ ಪುರಷಂ । ಶ್ರೀ(ಮ)

ಅನುಬಂಧ

೧. ನಿಂಬಸಾಮಂತನ ಶಾಸನಗಳು

೨. ಪದ್ಯಗಳ ಅಕಾರಾದಿ

೩. ಕಠಿಣ ಪದಕೋಶ

೪. ವಿಶೇಷ ಪದಕೋಶ

೧. ನಿಂಬಸಾಮಂತನ ಶಾಸನಗಳು

❖

ಕೊಲ್ಲಾಪುರದ ಶೇಷಶಾಯಿ ದೇವಾಲಯ

ತೊಲೆ : ಒಂದು

೧ ಶ್ರೀಯುವತೀಲತಾಲಲಿತಕಟ್ಟಿ ಮಹಾಮಹಿಜಂಗೆ ಶೌಚಗಾಂಗೇಯಧರಾಧಿಪಂಗೆ ಖಚರೇಂದ್ರಭವಂಗೆ ರೂಪನಾ[।*] ರಾಯಣದೇವಭೂಪತಿಗೆ ಗಂಡರದೇವ ನೃಪಂಗೆ ರೂಪನಾರಾಯಣದೇವನಾದಿಜಿನನಾದವೆ ಮಾಲ್ಕಿಭಿವಾಂಛಿತಾರ್ತ್ಥ ಮಂ [॥೧॥*] ಮನುಸುತ್ರಂ ನಿಜಸೂತ್ರ

೨. ಮೀ ಮನಸಿಜಾಕಾರಮೆಂಬಿನಿತಲ್ [ಸು]ತ್ತರಲುಬುಂಬವಂಬರಚರಪ್ರಸ್ತುತ್ಯ ಜೀಮೂತವಾ[।*]ಹನವಂಶಂ ನಿಜವಂಶಮೆಂದೊಡೆ ಬಟಿಕ್ಕೀ ಗಂಡರಾದಿತ್ಯ ದೇವನ ಸನ್ಮಾರ್ಗ್ಗದ ರೂಪಿನನ್ವಯದುದಾತ್ತಖ್ಯಾತಿ ಸಾಮಾನ್ಯವೇ ॥[೨॥*] ಶ್ರೀಮಂ(ಮ)ನ್ಮಹಾಮಣ್ಡಳೇಶ್ವರಂ ಗಂಡರಾದಿತ್ಯದೇವ ವಿಜಯೀ ಭವ।

ತೊಲೆ : ಎರಡು

೩. ಎಳೆಮಾವಿಂ ಬನವಬ್ಬದಿಂ ತಿಟಿಗೊಜಿಂ ಮಾಣಿಕ್ಯದಿಂ ಮಂಡನಾವಜಿ ತಾ ರಾಧಿಪನಿಂ ನಭಂ ಶುಭದವಾಗಿರ್ಪ್ಪಂತಿರಿರ್ದ್ದತ್ತು ನಿ[।*]ರ್ಮ್ಮಳವೀಗಳ್ ಕುಳಚಂದ್ರದೇವಚರಾಣಾಂಭೋಜಾತ ಸೇವಾವಿನಿಶ್ಚಳ ಸೈದ್ಧಾಂತಿಕ ಮಾಘನಂದಿ ಮುನಿಯಿಂ ಶ್ರೀಕೋಂಡಕುಂದಾನ್ವಯಂ॥[೨॥*] ಪರಮಜಿನಂ ದಯ್ವಂ ನಾಕರಸಂ ಪತಿ ತನಗೆ [ತನ]

೪ ಯರುದ್ವಯಶರ್ಭಿ[।*]ಲ್ಲರಸಂ ನಿಂಬರಸಂ ಕಾವರಸರೆನಲ್ ಚಂಪಕಾಂಬಿಕೆಯನಾ ಪ್ಪೊರ್ಲ್ವರ್ [॥೪॥*] ಆವರಸಿಯರುಂ ಗಂಡರದೇವನ ಸತಿ ನಾಕಿರಾಜನಾತ್ಮಜೆ ಗರ್ಹ[।*]ದ್ದೇವಪದಭಕ್ತೆ ಕರ್ಣ್ಣಾದೇವಿಗೆ ಸರಿದೊರೆ ಸಮಾನವೇನಾದಪರೇ ॥[೫॥*] ಬರೆವರಾದಿತ್ಯಂ ಸುಕವಿಮಕರಧ್ವಜಂ ವಾಚಕ ವಾಚವ್ಯ......

ಶಿಲಾಹಾರ ರಾಜವಂಶಾಚಾ ಇತಿಹಾಸ ಆಣಿ ಕೋರೀವ ಲೇಖ : ಖಂಡ–೨, ಭಾಗ–೩

ತೊಲೆ : ಮೂರು

೫ ಪರನರಪಾಟಿಭುಂಭುಕಬಳಂ ಕಬಟಿಂ ಪರಿದಗ್ಧವಿದ್ವಿಷತ್ಪುರಮದೆ ಧೂಟಿ ಸಜ್ಜರಮುದಾತ್ತಯಶಂ ಜಯಡಿಂಡಿಮಂ ಮನೋ[।*]ಹರತರವೀರಲಕ್ಷ್ಮಿಯೆ ಕರೇಣುವೋಲಾಗಿರೆ ಯೋಗ್ಯಮಾಯ್ತಧೀಶ್ವರಗೃಹಪಟ್ಟವರ್ದ್ಧನಕೆ ನಾಗಲ ದೇವಿಯ ಗಂಧವಾ[ರಣಂ] ॥[೬॥*] U U - - UU

೬ ವಿದ್ದಿಯೋ ತೆಱಿಯೋ ಮೇಣ್ಮೆಯ್ಸಾಲವೋ ನಾಡಱೊಡಂಗರಂ ಪೂಣ್ಕಗೆ ಕಾದುವಿತ್ತುವಿಜಿದುಂ ನಿನ್ನಂತೆ ಸತ್ಕೀರ್ತ್ತಿಗ[॥*]ರ್ತ್ಥಿಗನಾಗಿರ್ಪ್ಪುದು ಜೀಯ ಬಾಪ್ಪ ಚಲರೇಂ ಸಾಮಂತಕೇದಾರ ನಾಕಿಗ ಸಾಮಂತಲಲಾಮ ನಾಕರಸ ಸಾಮಂತೇಂದ್ರ ನಾಗಾರ್ಜುನ ॥[೭॥*] U U - - UU

ತೊಲೆ : ನಾಲ್ಕು

೭ ಸಹಾಯನಿವನೇ ಜಗದ್ದರಿದ್ರವಿದ್ರಾವಣಂ । ನಿಲೆ ಮಾತಾಡುವನೇ ತೊಡಱ್ಗಿಡೆ ಗುಡಂ ಚಾರಿತ್ರಸಂಪನ್ನನೇ [।*] ಕಲಿಕಾಲಕ್ಕೊಱಗೈಟ್ಟಿದಂ ಶುಚಿಯೆ ಗಂಗಾ ಸೂನು ಗಂಭೀರನೇ । ಗೆಲೆವಂದಂ [ಜ]ಲರಾಶಿಯಿಂ ಪರಿಯರಾಸ್ಸಾಮಂತ ನಿಂಬವರ ॥ [೮॥*] ಧತೆಯಲ್ಲಂ ಜಿನನಾಥಮಂದಿರಮಯಂ ತದ್ದೇಶವೆಲ್ಲಂ

೮ U-U-U ಮಯಮುದ್ಯದ್ ಗ್ರಾಮಮೆಲ್ಲಂ ಮನೋ[।*]ಹರ ಸಜ್ಜನಮಯಂ ಪರಿಗ್ರಹಮದೆಲ್ಲಂ ತತ್ವಸಂಪತ್ಪದಾರ್ತ್ಥರಸಾವೇಷಮಯಂಗಳಾಗೆ ನೆಗಟ್ದಂ ಶ್ರೀನಿಂಬದೇವೋತ್ತಮಂ ॥[೯॥*] ನಂಬುಗೆ ವಿನೇಯಜನದಮ ನಂಬುಗೆ ದಾನಂ ಚತುರ್ವ್ವಿಧಂ ಯತಿಪತಿಗ[।*]ಳ್ಗಿಂಬಾಗೆ ನೆಗಟ್ ನೆಗಟ್ದಂ ಕಿಂ ಬಹುನಾ ಸಕಳಗುಣಕದಂವಂ ನಿಂಬಂ ॥[೧೦॥*]

ತೊಲೆ : ಐದು

೯ ವರವೈಶ್ಯಾಬಾಟದಿಂದಿರ್ಕ್ಕೆಲದೊಳೆಸೆವ ವಾರಾಂಗನಾಗೇಹದಿಂ ವಿಸ್ತರಮಾನ ಸ್ತಂಭದಿಂ ಮಾಡದಿನೆಸೆವ ವಿತಾನಪ್ರತಾನೋಲ್ಲಸನ್ಮಂ[।*]ದಿರಂ ಚೆಂಬೊನ್ನೊಟಿಂ ದಂಬಡೆದ ಪಡಿಗಟೆಂದಿಂದ್ರನಿಂದಾದಿತೀರ್ತ್ಥೇಶ್ವರ ಚೈತ್ಯಾಗಾರಮಂ ಮಾಡಿಸಿದ ನಸದಳಂ ರಂಜಿಸಲ್ ನಿಂಬದೇವಂ ॥[೧೧॥*] ಸದಮಳಕೀರ್ತ್ತಿ ನಿಂಬರಸ ನಾರ್ಜ್ಜಿತಪುಣ್ಯದ ಪುಂಜದಂತಿರಿರ್ದ್ದುದು ಜಿನಮಂದಿರಂ ಕಳಸವಿಟ್ಟವೊಲಿ ದ್ರ್ದುದು ಹೆರ್ಮ್ಮೆಗತ್ಯಪೂ[।*]ರ್ವ್ವದ ಕಲಧೌತ

೧೦ ರಮ್ಯಕಳಸಂ ಪಡಿಗಿಂ ಪಡಿಯೆಲ್ಲಂ ನೋಡಿ ಬೇಡಿದರ್ಗ್ಗೆ ಬರಂಗುಡಟ್ ನೆಱೆದು ನಿಂದವು ಪುತ್ತಳಿ ನೃತ್ಯಶಾಲೆಯೊಳ್ ॥[೧೨॥*] ನವಮಂದಾರವಿತಾನಂ ಭುವನ ದೊಳತಿ ಸೇವ್ಯವೆಂದು ಶಕ್ರಂ ಬಂದಾ[।*] ದಿವಮಂ ಮಱೆದಿರ್ದ್ದಂ ತಾಂಡ ವಮಂ ಮೆಱೆವಂ ವಿತಾನಕುಮುಹಾಗ್ರ[ಗ್ರಿ]ಮದೊಳ್ ॥೧೩॥*] ಸರಸತಿ ಪೆಂಬರಿಜಂ ಬಿಟ್ಟು ರೂಢಿವೆತ್ತೀಗ ಬರೆವರಾದಿತ್ಯನ ಕಯ್ವೆರಗಿನ ಕಂಟದೊಳಿರ್ದ್ದ ಕ್ಷರಪದಮಂ ಪಡೆದು ಪಿರಿಯಂ ಸಿರಿಯಂ ಮೆಱೆವಳ್ [॥]

❖❖

ತೇರದಾಳದ ನೇಮಿನಾಥ ಬಸದಿಯ ಹೊರಮಂಟಪದ ಗೋಡೆ
(ಕ್ರಿ.ಶ. ೧೧೨೫)

---

೧ • ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ ಜೀಯಾತ್ರೈಲೋಕ್ಯ ನಾಥಸ್ಯ ಶಾಸನಂ ಜಿನಶಾಸನಂ॥ ಶ್ರೀಮಂನಮ್ರಸುರಾಸುರೋರಗಲಸನ್ಮಾಣಕ್ಯಮೌಲಿ

೨ ಪ್ರಭಾಸ್ತೋಮಾಳಂಕ್ರಿತ ಪಾದಪದ್ಮಯುಗಳಂ ಕೈವಲ್ಯಕಾನ್ತಾಮನಃಪ್ರೇಮಂ ಸನ್ಮತಿ ನೇಮಿನಾಥ ಜಿನನಾಥಂ ತೇರಿದಾಳಾತಿಶಯ ಶ್ರೀಮತು ಭಬ್ಯಜ

೩ ನಕ್ಕೆ ಮಾಳ್ಕನುದಿನಂ ದೀರ್ಗ್ಘಾಯುಮಂ ಶ್ರೀಯುಮಂ • ಕ್ಷಿತಭೃತ್ರಾಣ ಪ್ರಭಾವೋತ್ಕರಕ ಕಿಮಕರೋದ್ಯತ್ಪ್ರಯುಕ್ತಾಬ್ಧಿವಳಾವೃತ ಜಂಬೂದ್ವೀಪಮ ಧ್ಯೋದ್ಭವ ಕನಕನಗಕ್ಕೀಕ್ಷಿಸಲು ದಕ್ಷಿಣಾಶಾಕಿತಿ ಕಣ್ಗೊಪ್ಪಿಪ್ಪುದೆತ್ತಂ

೪ ಭರತವಿಷಯಮಾ ದೇಶದೊಳು ಕುಂತಲೋಧ್ಯತ್ ಕ್ಷಿತಿ ತೋರ್ಕ್ಕುಂ ಚೆಲ್ವಿನಿಂ ತದ್ಧರಣಿಯೊಳೆಸೆಗುಂ ಕೂಂಡಿನಾಮೋದ್ಘದೇಶಂ • ತದ್ವಿಷಯಮಧ್ಯೋದ್ದೇಶ ದೊಳು ॥ ನಿರುಪಮ ಗನ್ಧಶಾಳಿವನದಿಂ ಬ

KI-V ೨೧ ತೇರದಾಳ(ತಾ) ಜಮಖಂಡಿ (ಕ್ರಿ.ಶ. ೧೧೨೫)

೫ ನದಿಂ ಕೊಳದಿಂದ ತಟಾಕದಿಂ ಗಿರಿವನತೋಯದುರ್ಗ್ಗಕುಳದಿಂದಗಳಿಂ ಬುಧ
ಮಾಧವಾರ್ಕ್ಕಶಂಕರಜಿನಸದುಮದಿಂ ವಿಪಣಿಮಾರ್ಗದಿನೊಪ್ಪುವ ತೇರಿದಾಳ
ಪಂನ್ನೆರಡಱ ಚೆಲ್ವನೆಯ್ದೆ ಪೊಗಳಲುಕಜ

೬ ನುಂ ನೆಱಯಂ ಧರಿತ್ರಿಯೊಳು • ತಜ್ಜನಪದವಿಳಾಸವನಿತಾವದನಕಮಳಕ್ಕೆ
ವಿಶಾಳನಯನಕಮಳಮೆನೆ ಸೊಗಯಿಸಿ॥ ಉಪಮಾತೀತಮೆನಲ್ಕಗಳ್ದಗಳ
ಕೋಟಾಚಕ್ರದಿಂ ಕೂಡೆ ಕೂಪ

೭ ಪಯೋಜಕರ ಕೀರಭ್ರಿಂಗವನ ನಾನಾದೇವ ಮಾದೇವ ವೈಶ್ಯಪವಿತ್ರಾಸ್ಪದ
ಕೋಟಿಯಂ ಸುಜನರಿಂ ಶ್ರೀ ತೇರದಾಳಭಿಧಾನಪುರಂ ತೀವಿ ಕರಂ ಸ್ಥಿರಂ ಪ್ರತಿ
ದಿನಂ ತೋರ್ಕ್ಕುಂ ಜಗಚ್ಚಕ್ರದೊಳು॥ ದುರ್ವ್ವಾರಾತೀಭ ಪಂಚಾನನ ನಿಭ ಸುಭ

೮ ಟಾನೀಕದಿಂ ವಿಶ್ವವಿದ್ಯಾಗರ್ವ್ವೋನ್ಮತ್ತ ಪ್ರಸಿದ್ಧಾಗಮಕುಶಳಬುಧಭ್ರಾತದಿಂದಾ
ಶ್ರಿತಗ್ಗಿಂದ್ರೋರ್ವ್ವಿಜಾತೋಪಮಾನೋಂನತ ಚತುರಜನಶ್ರೇಣಿಯಿಂ ತೀವಿ
ತತ್ಪಣನ್ನಿರ್ವ್ವಗ್ಗಾವುಂಡರಿಂ ಕಣ್ಗೆಸೆವುದಸದಳಂ ಭಾವಿಸಲು

೯ ತೇರಿದಾಳಂ ॥ ಭೂವಿನುತ ಚತ್ಸಮಯನಾವಗಮೆಸೆವಾಱುದರ್ಶನಂಗಳುಮಂ
ಕೈಗಾವಗ್ಗದ ಪಂನಿರ್ವ್ವಗ್ಗಾವುಂಡಗಳಿರ್ದ್ದು ರಕ್ಷಿಪರ್ತ್ತತುಪುರಮಂ॥ ಧನದನ
ನೆವನೆಂದು ಕೊಱಚಾಡುವ ಕಾಡುವ ತಂಮ ಕಾಂಚನನಿ

೧೦ ಚಯಂಗಳಿಂ ಮಣಿಗಣಂಗಳ ರಾಸಿಗಳಿಂ ನವೀನಮಣ್ಣನಬಹುವಸ್ತ್ರದಿಂ ಪಯ
ಗಳಿಂ ಬಹುಧಾನ್ಯಾದಿನೊಪ್ಪಿತೋರ್ಪ್ಪ ನಚ್ಚಿನ ಪರದರ್ಕ್ಕಳಿಂ ಭರಿತವಾಗಿ
ಕರಂ ಸೊಗಯಿಕ್ಕು ತತ್ಪುರಂ ॥ ಅನ್ತು ಸಂತಮುಂ ಬಸಂತಮುಮೆನೆ

೧೧ ತೀವಿ ಸಂತತಂ ಸಕಳಧರಿತ್ರಿಗಳಂಕಾರಮಾಗೆ ಸೊಗಯಿಸುವ ತೇರಿದಾಳ ಪಂನೆರ
ಡಱ ಮಂನೆಯ ವಲ್ಲಭರ್ಗ್ಗೆ ವಲ್ಲಭರಾದ ಕುಂತಳಮಹೀತಳ ಚಕ್ರವರ್ತ್ತಿ
ಗಳನ್ವಯಾವತಾರಮೆಂತೆಂದಡೆ ॥ವೃ॥ ವನಜಕ್ಷೀ

೧೨ ದರಪದ್ಮಸದ್ಮಜನಜಂ ಪ್ರೋದ್ಭೂತಹಾರೀತನಂದ ಮಾಣ್ಡವ್ಯನಿನಾದ ಪಂಚ
ಶಿಖನಿಂ ಬನ್ದಾ ಚಳುಕ್ಯಾನ್ವಯಾವನಿಪರ್ಮ್ಮುಂ ಪಲರಾಗೆ ಮತ್ತಹಿತರಂ ಗೆಲು
ದುರ್ವ್ವಿಯಂ ತಾಳ್ದ ತೈಲನದೊಂದನ್ವಯ ಮೇರುವಾನ್ತ ನಿಳಯಂ ಶ್ರೀ

೧೩ ರಾಯಕೋಳಾಹಳಂ ॥ವ॥ ಮತ್ತವಾ ವಂಶದೊಳು ಜಯಸಿಂಹವಲ್ಲಭನೆಂಬ
ಸಿಂಹಪರಾಕ್ರಮನಾದಂ ॥ ಆತನ ತನಯಂ ದುಷ್ಟಮಹೀತಳಪತಿಗಳನನೇಕರಂ
ಗೆಲ್ದಖಿಳೋರ್ವ್ವಿತಳಮಮಂ ತಳೆ

೧೪ ದಂ ವಿಖ್ಯಾತ । ತ್ರೈಲೋಕ್ಯಮಲ್ಲನಾಹವಮಲ್ಲಂ ॥ವ॥ ಅನ್ತು ಸಮಸ್ತಧಾತ್ರೀ
ವಲ್ಲಭೆಗೆ ವಲ್ಲಭನಾದಹವಮಲ್ಲದೇವನ ಪ್ರಿಯತನೂಜನೆ ॥ ಘನದೋರ್ವ್ವಿ
ಕ್ರಂಸ್ತದಿಂ ಗುರ್ಜ್ಜರನ್ರಿಪಬಳಮಮಂ ಗೆಲ್ದು ಮಾಱಾಂತ ಚೋಳಾವನಿಪಂಗಾಭೀಳ
ಕಾಳಾ

೧೫ ನನಮನೊಸೆದು ಸಂಗ್ರಾಮದೊಳು ತೋಱಿ ಭೀತಾವನಿಪರ್ಗ್ಗಾತಂಕಮಮಂ
ಪುಟ್ಟಿಸಿದನುದಯದಿಂ ವಿಶ್ವಭೂಚಕ್ರಮಂ ಸಜನವಾಗಲು ರಾಯಕೋಳಾಹಳನೆನೆ
ತಳೆದಂ ರಾಯ ಪೆಂರ್ಮ್ಮಾಡಿರಾಯಂ ॥ವ॥ ಅನ್ತು ಕುಂತಳ

೧೬ ಮಹೀತಳಕಾಂತಾಕಾಂತನೆನಿಸಿದ ವೀರಪೆರ್ಮ್ಮಾಡಿರಾಯನ ಕಟ್ಟಿದಲಗೆನಿಸಿದ
ತೇರಿದಾಳದ ವೀರಗೊಂಕಕ್ಷಿತೀಶ್ವರನನ್ವಯದೊಳೆನೆಬರಾನುಂ ಸಲೆ ನಿಜ ಜನ
ನೀಕಂ ಜನಕರ್ಗ್ಗೆ ಪೂರ್ವಪುಣ್ಯವೆಂಬ ಕಳ್ಪಾವನೀಜಕ್ಕೆ ಫಳವುದಯಿಸುವಂ

೧೭ ತೆ ಪುಟ್ಟಿ ॥ ಕಲಿಗಂ ಬೆತ್ತಿದ ವೀರವಾಂತಹಿತರಂ ಗೆಲುದುರ್ಕ್ಕು ವಿದ್ವಿಷ್ಟ
ಮಂಣ್ಡಳಮಂ ಚಕ್ರಿಗೆ ಸಾಧಿಸಿತ್ತಳವದೇಕಚ್ಛತ್ರವಾಗಲುಕೆ ನಿರ್ಮ್ಮಳ
ಕೀರ್ತ್ಯಾಂಗನೆ ಗಾರ್ತು ಕೂರ್ತ್ತು ಕುಡು[ತುಂ] ಶ್ರೀ ತೇರಿದಾಳಾವನಿತಳನಾ

೧೮ ಥಂ ನೆಗಳ್ದಂ ನೃಪಾಳತಿಲಕಂ ಲೋಕಂ ಮಹೀಲೋಕದೊಳು ॥ವೃ॥ ಆತನ
ನಂದನಂ ಚಲದೊಳು ರಘುನಂದನನೇಕವಾಕ್ಯ ವಿಖ್ಯಾತಿಯೊಳರ್ಕನನ್ದನನ
ನಿಂದಿತ ಶೌರ್ಯ್ಯದೊಳಿಂದ್ರ ನಂದನಂ ನೀತಿಯೊ

೧೯ ಳಬ್ಬನಂದನನೆನಿಪ್ಪ ಮಹತ್ವವನಪ್ಪುಕೆಯಿದನುರ್ವ್ವಿತಳದೊಳು ಬುಧರ್ಪೊ್ವಗಳ
ಲಿಂತೆಜಿಗೋರ್ವ್ವಿವರಂ ನಿರಂತರಂ ॥ವ॥ ತಂನ್ರಪೋತ್ತಮ ಪ್ರಿಯಪುತ್ರನು ॥ವೃ॥
ಬಲ್ಲಿದರಾಗಿ ಪೋಗದಿದಿರಾನ್ತರಿ ಮಂನೆ

೨೦ ಯರಂನೆಯರ್ಕ್ಕಳಂ ಬಲ್ಲಹನೊಲ್ದು ನೋಡೆ ರಣರಂಗದೊಳೋಡಿಸಿ ತೇರಿದಾಳ
ದೊಳು ವಲ್ಲಭನಾಗಿ ನಿಂದ ಜಯವಲ್ಲಭನಂ ಸಿತಕೀರ್ತಿಕಾಮಿನೀವಲ್ಲಭನನ್ದು
ಬಣ್ಣಿಸಿದನಾವನೋ ಮನ್ನೆಯ ಮಲ್ಲಿದೇವನನು ॥ಕ॥ ಆ

೨೧ ವೀರಮಲ್ಲಿದೇವ ಮಹೀವಲ್ಲಭನರ್ದ್ಧನಾರೀಗುಣಮಣಿಗಣದಿಂ ಭೂವಧುಗೆಣೆ
ಯೆನೆ ಬಾಚಲದೇವಿ ಮಹೀಂದ್ರಜೆಗೆ ಸೀತೆಗಾರೆ ದೊರೆಯಲ್ತೆ ॥ವ್ರಿ॥ ಅವ
ರಿರ್ವ್ವರ್ಗನುರಾಗದಿಂ ಸಿರಿಗಮಾ ಕಂಜೋದರಗಂ ಮನೋ

೨೨ ಭವನದ್ರಿಪ್ರಿಯ ಪುತ್ರಿಗಂ ಶಶಿಧರಂಗಂ ಶಣ್ಮುಖಂ ಬನ್ದು ಪುಟ್ಟುವವೊಲು
ಪುಟ್ಟಿ ವಿರೋಧಿಮಂನೆಯ ಘರಟ್ಟಂ ತೇರಿದಾಳ ಕ್ಷಿತೀಶಂ ವಿಳಾಸಂ
ಪರಿರಂಜಿಪಂ ಭುವನದೊಳು ನಿಶ್ಶಂಕೆಯಿಂ ಗೊಂಕಮನೆ ॥ವ್ರಿ॥ ಕನ್ತುವಿಳಾಸ
ಲಕ್ಷ್ಮಿಯೆನಿಪಗ್ಗದ ಬಾ

೨೩ ಚಲದೇವಿ ಮಾತೆ ವಿಕ್ರಾನ್ತವಿಭಾಸಿ ಮಲ್ಲಮಹಿಪಂ ಜನಕಂ ಮುನಿಮಾಘಣಂದಿ
ಸೈದ್ಧಾನ್ತಿಕಚಕ್ರವರ್ತ್ತಿ ಗುರು ನೇಮಿಜಿನಂ ಮನದಿಷ್ಟದೆಯ್ವವೋರಂತೆನೆ ತೇರಿ
ದಾಳದ ನ್ರಿಪಾಗ್ರಣಿ ಗೊಂಕನಿದೇಂ ಕೃತಾರ್ತ್ಥನೋ॥ ಅಡಸುವ

೨೪ ಕುತ್ತವೊತ್ತರಿಪ ಮ್ರಿತ್ತು ಕಡಂಗುವ ಮಾರಿ ಕಾಯ್ವಿನಿಂ ತೊಡರ್ವ್ವ ವಿರೋಧಿ
ಪಾಯ್ವ ಪುಲಿ ಪೊಯ್ವ ಸಿ[ಡಿ]ಲು ಪಿಡಿವುಗ್ರ ಪನ್ನೆಗಂ ಸುಡುವ ದವಾಗ್ನಿ ಬಾರ್ದೆ
ಕಡೆಗಂ[ಚು] ವುದೆಂದಡೆ ತೇರಿದಾಳದೀ ಕಡುಗಲಿ ಗೊಂಕಭೂಪತಿಯ

೨೫ ಭವ್ಯತೆ ಕೇವಳವೇ ನಿರೀಕ್ಷಿಸಲು ॥ ಪಸಿದಸಿತಾಹಿ ಸೋಂಕಿದೊಡೆ ಸಂಕಿಸಿ
ಮಂತ್ರದ ತಂತ್ರದಾಸೆಯಿಂದಸುವಜಿೀಯಾಗಿ ಬಿರ್ದ್ದಿರದೆ ಪಂಚಪದಂಗಳನೋದಿ
ತ[ದ್ವಿ]ಶಪ್ರಸರಮನೆಯ್ದೆ ಪಿಂಗಿಸಿ ಜಿನಬ್ರತದೊ

೨೬ ಳು ದ್ರಿಡನಾದ ತಂನ ಪೆಂಪೆಸೆದಿರೆ ತೇರಿದಾಳದರಸಂ ನೆಗಳ್ದಂ ಕಲಿಗೊಂಕ ಭೂಭುಜನು ॥ ಯೆತ್ತಿಸಿ ತೇರಿದಾಳದೊಳಗೊಪ್ಪೆ ಜಿನೇಶ್ವರ ಸದ್ಮಮಂ ಸಮಂ ತೆತ್ತಿಸಿದಂ ಜಯಧ್ವಜಮನುರ್ವ್ವಿಗೆ ದಿಗ್ಮುಖದಂತಿದನ್ತದೊಳೆತ್ತಿಸಿದಂ ನಿಜಾಂಕ ಮಹಿಮಾ

೨೭ ಕ್ಷರಮಾಳಿಕೆಯಂ ಗಡೆಂದಡೇನುತ್ತಮ ಭವ್ಯನೋ ಜಿನಮತಾಗ್ರಣಿ ಸದ್ಗುಣಿ ಗೊಂಕಭೂಭುಜನು ॥ ಸತತಂ ಕೀರ್ತ್ತಿಸದಿರ್ಪ್ಪರಾರ್ಬ್ಭುವನದೊಳು ಭವ್ಯರ್ಜ್ಜಗತ್ಸೇವ್ಯನಂ ಜಿತಕಾಳೇಯಕಳಂಕಪಂಕಪಟಹಧ್ವಾನ್ತಾಂತನಂ ಗೊಂಕನಂ

೨೮ ಪ್ರತಿಪಕ್ಷ ಕ್ಷಿತಿನಾಥ ಹೃತ್ಸರಸಿಜೋದ್ಯಾತಂಕನಂ ಗೊಂಕನಂ ಕ್ಷಿತಿಯೊಳು ರಂಜಿಪ ತೇರಿದಾಳದೆಸವಿನಿಶ್ಶಂಕನಂ ಗೊಂಕನಂ ॥ ಅಂನ್ತೆನಿಸಿದ ಗೊಂಕ ಮಹೀಕಾನ್ತ ಶ್ರೀಮಾಘಣಂದಿ ಸೈದ್ಧಾನ್ತಿಕರಂ[ಭ್ರಾ]

೨೯ ನ್ತೇನೊ ಕೊಲ್ಲಗಿರದಿಂ ತರಿಸಿ ಸಮಸ್ತ ಭವ್ಯರಭಿವರ್ಣ್ನಿಪಿನಂ ॥ ತದಾಚಾರ್ಯ್ಯ ಪ್ರಭಾವವೆನ್ತೆಂದಡೆ ॥ ಧರೆ ದುಗ್ಧಾಬ್ಧಿಯನಬ್ಧಿ ಚಂದ್ರನಿನಿನಂ ತೇಜಾಗ್ನಿಯಿಂದೆನ್ತನ್ತಿರಲೀ ಪೊಸ್ತಕಗಚ್ಛ ದೇಸಿಗಗಣಂ ಶ್ರೀಕೊಣ್ಡಕುನ್ದಾನ್ವಯಂ ನಿರುತಂ ಶೃಕುಳ

೩೦ ಚಂದ್ರದೇವ ಯತಿಪೋದ್ಯತ್ಸಿಸ್ಯರಿಂ ಸದ್ಗುಣಾಕಾರ ರಾದ್ಧಾನ್ತಿಕ ಮಾಘಣಂದಿ ಮುನಿಯಿಂ ಕಣ್ಗೊಪ್ಪುಗುಂ ಧಾತ್ರಿಯೊಳು ॥ಕ॥ ಅಗಣಿತಗುಣಜಳಧಿಗಳೆನೆ ನಗಧೈರ್ಯ್ಯರ್ಮ್ಮಾಘಣಂದಿ ಸೈದ್ಧಾನ್ತಿಕರಾವಗಮೆ

೩೧ ಸೆದರ್ಸ್ಸನುಮತಿಯಿಂ ಜಗೊಳ್ಸಾಮನ್ತ ನಿಂಬದೇವನ ಗುರುಗಳು ॥ವ್ರಿ॥ ಸಂತತವನ್ಯ[ಚ]ನ್ತೆಗಳನೊಕ್ಕು ಜಿನಾಸ್ಯವಿನಿರ್ಗ್ಗತಾಗಮಾರ್ತ್ಥಾನ್ತರ ಚಿನ್ತೆಯೊಳು ನೆಱೆದು ನಿಲ್ಲದೆ ಸಿದ್ಧರ ಸದ್ಗುಣಂ

೩೨ ಗಳಂ ಚಿನ್ತಿಸುತಿರ್ಪ್ಪಕೊಲ್ಲಗಿರದಗ್ಗಸನ ಮಾಘಣಂದಿ ಸೈದ್ಧಾನ್ತಿಕ ಚಕ್ರವರ್ತ್ತಿ ಜಿತಮನ್ಮಥಚಕ್ರಿಯೆನಿಪ್ಪನುರ್ವ್ವರೆಯೊಳು ॥ವ್ರಿ॥ ಅನ್ತರಿಸಿರ್ದ್ದ ಜೈನಸಮಯಕ್ಕೊಗೆದಂ ಜಿನನೀಗಳೊಂವ್ರ್ವನೆಂಬನ್ತೆ ಜಿನವ್ರತಂಗಳ

೩೩ ನಶೇಷಜನಕ್ಕುಪದೇಶಮಿತ್ತು ಸಾಮನ್ತನೆನಿಪ್ಪ ನಿಂಬನೆಱಿಗಲು ನೆಗಳ್ದೊಪ್ಪುವ ಮಾಘಣಂದಿ ಸೈದ್ಧಾನ್ತಿಕ ಚಕ್ರವರ್ತಿ ಜಿನಧರ್ಮನ ಸುಧಾಬ್ಧಿ ಸುಧಾಂಶುವಾಗನೆ॥ ಅವರಗ್ರಶಿಷ್ಯರು ॥ ವಾದಿ ವಿಶೋರಗತಾಕ್ಷ

೩೪ ಕರ್ವ್ವಾದಿ ಮಹಾಗಹನದಾವದಹನರ್ವ್ವಳವದು ವಾದೀಭಸಿಂಹರೆಸೆದರ್ಮ್ಮದಿನಿ ಯೊಳು ಕನಕಣನ್ದಿಪಣ್ಡಿತದೇವರು ॥ ತತು ಪರವಾದೀಭಪಂಚಾನನರ ಸಧರ್ಮ್ಮರು ॥ ಶ್ರುತಕೀರ್ತ್ತಿ ತ್ರೈವಿದ್ಯಬ್ರತಿಪರ್ಶಟುತರ್ಕ ಕರ್ಕ್ಕಶ

೩೫ ರು ಪರವಾದಿ ಪ್ರತಿಭಾಪ್ರದೀಪಪವನರ್ಜಿತದೋಶರ್ನ್ನೆಗಳ್ದರಖಿಳ ಭುವನಾನ್ತರ ದೊಳು ॥ ತತ್ಪರವಾದಿ ಶಿಖರಿಶಿಖರನಿರ್ಭೇಧನೋಚಣಪಣೆದಣ್ಡರ ಸಧರ್ಮರು ॥ವ್ರಿ॥ ಜಿತಕುಸುಮಾಯುಧಾಸ್ತರನ ನಿಂದಿತ

೩೬ ಜೈನಮತ ಪ್ರಸಿದ್ಧ ಸಾಧಿತಹಿತಶಾಸ್ತ್ರರುಂ ವಿದಳಿತೋನ್ಮದಮನವಿಮೋಹ ಲೋಭ ಭೂಭ್ರಿತುಕುಳಿಶಾಸ್ತ್ರರಂ ಪದಪಿನಿಂ ಪೊಗಳ್ಗುಂ ಧರೆ ಚಂದ್ರಕೀರ್ತ್ತಿ ಪಂಣ್ಡಿತರನತಕ್ಕ್ಯರ್ಯತಾರ್ಕ್ಕಿಕ ಚತುರ್ಮ್ಮುಕರಂ ಪರವಾದಿ

೩೭ ಶೂಲರನು ॥ ತತ್ಪರವಾದಿಮಸ್ತಕಶೂಲರ ಸಧರ್ಮರು॥ವ್ರಿ॥ದ್ವಿತಿಭೂಭ್ರಿ ತ್ಪತಿಯಂ ಗಭೀರವಮ್ರಿತಾಂಭೋರಾಶಿಯಂ ಸಾಲೆ ಸನ್ಮತಿ ವಾಚಸ್ಪತಿಯಂ ಪಳಂಚಲುವಿನಂ ಮೈಯ್ವೆತ್ತ ಸನ್ಮಾರ್ಗ್ಗ ಸನ್ತತಿಯಿಂದ ನೆಗದಿರ್ದ್ದಡೆ ಶಿ

೩೮ [ಧ] ಗಣಾಧೀಶ [ಪ್ರ]ಭಾಚಂದ್ರಪಂಡಿತದೇವೋಜ್ಜಳಕೀರ್ತ್ತಿ ಮೂರ್ತ್ತಿವಡೆ ದಾದಂ ವರ್ತ್ತಿಕುಂ ಧಾತ್ರಿಯೊಳು ॥ ತನ್ಮುನೀಶ್ವರರ ಧರ್ಮರು॥ಪರವಾದಿಪ್ರಕರ ಪ್ರತಾಪಮಹೀಭ್ರಿತ್ವಗ್ರೋಗ್ರವಜ್ರಗ್ರುರ್ಗ್ಗಣಾಭರಣರ್ ಶ್ರೀ ವ

೩೯ ಸುಧೈಕಬಾಂಧವಜಿನೇಂದ್ರಾಧೀಶ್ವರೋತ್ತುಂಗಮಂದಿರದಾಚಾರ್ಯ್ಯರಗೇಂದ್ರ ರುಂದ್ರರ್ನ್ನಿರ್ಭರ್ಯ್ಯರ್ಯ್ಯವ್ರ್ವದ್ಧರ್ಮಾನಬ್ರತೀಶ್ವರರಿಂತೀ ಧರೆಯೊಳು ನೆಗರ್ತ್ತಿ ವಡೆದ ತ್ರೈವಿದ್ಯ ವಿದ್ಯಾಧರರು ॥ ಯಿನ್ತು ನೆಗಳ್ತೆಗಂ ಪೊಗಳ್ತೆಗಮಧೀಶ್ವರರಾದ ವರ್ಧಮಾ

೪೦ ನ ತ್ರೈವಿದ್ಯದೇವರಜ್ಜಗುರುಗಳಪ್ಪ ಶ್ರೀ ಮಾಘಣನ್ದಿಸೈದ್ಧಾನ್ತಿದೇವರದಿವ್ಯ
ಶ್ರ ಪಾದಪದ್ಮಂಗಳು। ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪ್ರಿಥ್ವೀಬಲ್ಲಭ
ಮಹಾರಾಜಾಧಿರಾಜಂ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾ

೪೧ ಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀಮದ್ವಿಕ್ರಮಚಕ್ರವರ್ತ್ತಿ ತ್ರಿಭುವನ
ಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವ್ರಿದ್ಧಿಪ್ರವರ್ದ್ಧಮಾನಮಾ
ಚಂದಾರ್ಕ್ಕ ತಾರಂ

೪೨ ಬರಂ ಕಲ್ಯಾಣಪುರದ ನೆಲವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂ
ಗೆಯ್ಯುತ್ತಮಿರೆ ತತ್ಪಾದಪದ್ಮೋಪಜೀವಿ । ಸ್ವಸ್ತಿ ಸಮಧಿಗತ ಪಂಚಮಹಾಶಬ್ದ
ಮಹಾಮಣ್ಡಳೇಶ್ವರಂ ಲತ್ತನೂರ ಪುರವರಾ

೪೩ ಧೀಶ್ವರಂ ತ್ರಿವಳಿಪಱಿ ಘೋಷಣಂ ರಟ್ಟಕುಳಭೂಷಣಂ ಸುವರ್ಣ್ನಗರುಡಧ್ವಜಂ
ಸಿನ್ದೂರ ಲಾಂಛನಂ ವಿವೇಕವಿರಿಂಚನಂ ಗಣ್ಡಮಣ್ಣಳಿಕಗಣ್ಡ ತಳಪ್ರಹಾರಿ
ದೆಸೆಕಾಱರದೇವ ಮೂಱುರಯರಾಸ್ಥಾನ ಕಲಿ ಬಿರುದರ ಗಂ

೪೪ ಡ ನುಡಿದಂತೆ ಗಂಡ ಸಾಹಸೋತ್ತುಂಗ ಸೇನನ ಸಿಂಹ ನಾಮಾದಿ ಸಮಸ್ತ ಪ್ರಶಸ್ತಿ
ಸಹಿತಂ ಶ್ರೀ[ಮ*]ನ್ಮಹಾಮಣ್ಡಳೇಶ್ವರಂ ಕಾರ್ತ್ತವೀರ್ಯ್ಯದೇವರಸರು
ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರಲು

೪೫ ತದಾಜ್ಞೆಯಿ ॥ ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತಂ ಶ್ರೀಮನ್ಮಣ್ಡಳಿಕಂ ಪರಬಳ
ಸಾಧಕಂ ಜೀಮೂತವಾಹನಾನ್ವಯ ಪ್ರಸೂತಂ ಶೌರ್ಯ್ಯರಘುಜಾತಂ[ಪ]ಮರ
ಜಯೋತ್ತುಂಗಂ ರಣರಂಗಸಿಂಗಂ ಮಯೂರ ಪಿಂಚ್ಛಧ್ವಜಂ ರೂಪಮಕರ

೪೬ ಧ್ವಜಂ ಪದ್ಮಾವತೀದೇವಿಲಬ್ಧವರ ಪ್ರಸಾದ ಜಿನಧರ್ಮಕೇಳಿ ವಿನೋದಂ
ಭಾವನ[ಂ*]ಕಕಾಱ ಮಂಡಳಿಕಕೇದಾರ ನಾಮಾದಿ ಸಮಸ್ತ ಪ್ರಶಸ್ತಿಸಹಿತಂ
ಶ್ರೀಮತು ಗೊಂಕಿದೇವರಸರು ನಿಜರಾಜಧಾನಿಯಪ್ಪ ತೇರಿದಾಳದ ಮಧ್ಯ
ಪ್ರದೇಶ

೪೭ ದೊಳು ಗೊ[ಂ*]ಕ ಜಿನಾಲಯಮಂ ನಿರ್ಮ್ಮಿಸಿ ಶ್ರೀನೇಮಿಜಿನನಾಥ ಪ್ರತಿಷ್ಠೆ
ಯಂ ರಾಷ್ಟ್ರಕೂಟಾನ್ವಯ ಶಿರಶಿಖಾಮಣಿ ಕಾರ್ತ್ತವೀರ್ಯ್ಯ ಮಹಾಮಣ್ಡಳೇಶ್ವರಂ
ಮುಖ್ಯವಾಗಿ ಸದ್ಭಕ್ತಿಯಿಂ ಶುಭದಿನಮುಹೂರ್ತ್ತದೊಳು ಮಾಡಿ ತಜ್ಜಿನ

೪೮ ಮುನಿ ಪ್ರಧಾನರಪ್ಪ ದೇಸಿಗಗಣ ಪೊಸ್ತಕಗಚ್ಛದ ಶ್ರೀಕೊಣ್ಡಕುನ್ದಾ
ಚಾರ್ಯ್ಯಾನ್ವಯದ ಕೊಲ್ಲಾಪುರದ ಶ್ರೀರೂಪನಾರಾಯಣನ ಬಸದಿಯಾ
ಚಾರ್ಯ್ಯರು ಮಣ್ಡಳಾಚಾರ್ಯ್ಯರುಮೆನಿಪ್ಪ ಶ್ರೀ ಮಾಘಣಂದಿ ಸೈದ್ಧಾನ್ತಿಕ

೪೯ ದೇವರ ಬರಿಸಿ ಸಕವರ್ಷ ೧೦೪೫ನೆಯ ಶುಭಕ್ರಿತ್ಸಂವತ್ಸರದ ವೈಶಾಖದ
ಪುಣ್ಣಮಿ ಬ್ರಿಹಸ್ಪತಿವಾರದಲು ಗೊಂಕಜಿನಾಲಯಕ್ಕೆ ಪನ್ನಿರ್ವ್ವಗ್ಗಾ೯ವುಂಡು
ಗಳುಮಂ ಸಮಸ್ತ ಪರಿವಾರ ಪ್ರಜೆಗಳುಮಂ ಆ ಸ್ಥಳದ ಸೆಟ್ಟಿ

೫೦ ಗುತ್ತ ಮುಖ್ಯ ಸಮಸ್ತ ನಕರಂಗಳುಮಂ ಬರಿಸಿ ನೇಮಿತೀರ್ತ್ಥೇಶ್ವರನ ಬಸದಿಯ
ರಿಷಿಯರಾಹಾರದಾನಕ್ಕಂ ದೇವರಷ್ಟವಿಧಾರ್ಚ್ಚನೆಗಂ ಖಣ್ಡಸ್ಫುಟಿತಜೀರ್ಣ್ಣೋ
ದ್ಧಾರಕ್ಕಂ ಪೆಸರ್ಗ್ಗೊಣ್ಡು ತನುಮುನೀಶ್ವರರ ದಿವ್ಯ ಶ್ರೀಪಾದಪದ್ಮಂ

೫೧ ಗಳಂ ದಿವ್ಯತೀರ್ತ್ಥಜಳಂಗಳಿಂ ತೊಳೆದು ಶಾತಕುಂಭಕುಂಭಸಂಭೃತ ಜಳಂಗಳಿಂ
ಧಾರಾಪೂರ್ವ್ವಕಂ ಮಾಡಿ ತೇಳಿರಿದಾಳದ ಪಶ್ಚಿಮ ಭಾಗದಲು ಹಾರುನಗೇರಿಯ
ಬಟ್ಟೆಯಿಂ ಬಡಗಲು ಯಿಪ್ಪತ್ತನಾಲ್ಗೇಣ ಕೋಲೊಳು

೫೨ ಕೊಟ್ಟ ಮತ್ತರೆಪ್ಪತ್ತೆರಡು ದೇವಿಯಣ ಭಾವಿಯಿಂ ತೆಂಕಲಾ ಕೋಲೊಳು
ಕೊಟ್ಟ ತೋಂಟಮತ್ತರೊನ್ದು ಅನ್ತು ಮತರು ೭೨ ತೋಂಟ ಮತ್ತ ೧ ಅಲ್ಲಿಯ
ಪನ್ನಿರ್ವ್ವಗ್ಗಾ೯ವುಣ್ಡುಗಳುಂ ಅಜಿವತ್ತೊಕ್ಕಲುಂ ಹನ್ನಿಧಾನ್ಯಕ್ಕ ರಾಸಿಗೊಳಗವಂ ಬಿಟ

೫೩ ರು ಅಲ್ಲಿಯ . ಸೆಟ್ಟಿಗುತ್ತ ಮುಖ್ಯ ನಗರಂಗಳು ತಾವು ಮಾಱಿಕೊಣ್ಡ ಭಣ್ಡ
ಮಾಣಿಕ ಪಟ್ಟಸೂತ್ರವಾದಡಂ ಹೊಂಗೆ ವೀಸ ಲಾಭಾಯದ ಅಡಕೆ ಹೊಂಗೆ
ಹನ್ನೊನ್ದು ತಾವು ತಗೆದ ಯಲೆಯ ಹೇಱಿಂಗಂ ಅದರಿ

೫೪ ನ್ತರುವಟ್ಟಿಗರು ತೆಗೆದ ಹೇಱಿಗೆ ನೂಱಿಲೆಯಿಂತಿನಿತುವಂ ಬಿಟ್ಟರು ತೆಲ್ಲಿಗರು ಮಾನ್ಯಸಾನ್ಯವೆನ್ನದೆ ದೇವರ ಸಂಜೆಸೊಡರಿಂಗಂ ಧೂಪಾರಿತೆಗಂ ಗಾಣಕ್ಕೆ ಸೊಲ್ಲಗೆ ಹೊಱಗಣಿಂ ಬನ್ದ ಎಣ್ಣೆಯ ಕೊಡಕ್ಕೆ ಸೊಲ್ಲಗೆಯಿನ್ತಿವಂ

೫೫ ಬಿಟ್ಟರು ಗಾಣ ಕುಂಬಾಱರು ದೇವರ ಅಷ್ಟವಿಧಾರ್ಚ್ಚನೆ ಆಹಾರ ದಾನ ನಡವನ್ತಾನಿ ದಾನಶಾಲೆಗೆ ಆವಗೆ ಗಲನ ಬಿಟ್ಟರು ಹಲಸಿಗೆಹನ್ನಿರ್ಚ್ಛಾಸಿರದ ಹೆಬ್ಬಟ್ಟಯಲು ನಡೆವ ಗಾತ್ರಿಗರು ದೇವರಿಗೆ ಅಷ್ಟವಿಧಾರ್ಚ್ಚನೆ ನಡೆವನ್ತಾಗಿ ಹೇಱಿಂಗೆ ನುಱು ವೊ

೫೬ ಳೆಲೆಯಂ ಬಿಟ್ಟರು ।

❖❖

ಕೊಲ್ಲಾಪುರದ ಪಾರ್ಶ್ವನಾಥಬಸದಿಯ ಶಾಸನ
(ಕ್ರಿ.ಶ. ೧೧೩೫)

೧ ಸಿದ್ಧಮ್ [।*] ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ (ನಮ್) [।*] ಜೀವಾತ್ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ(ನಮ್) ॥[೧॥*] ಸ್ವಸ್ತಿ [।*] ಸಮಧಿಗತಪಂಚಮಹಾಶಬ್ದಮಹಾಮ

೨ ಣ್ಡಲೇಶ್ವರಂ। ತಗರಪುರವರಾಧೀಶ್ವರಂ ಶ್ರೀ ಶಿಳಾಹಾರ ನರೇಂದ್ರಂ । ಜೀಮೂತವಾಹನಾನ್ವಯಪ್ರಸೂತಂ । ಸುವರ್ಣ್ಣಗರುಡಧ್ವಜಂ ಮಱುವೊಕ್ಕ ಸರ್ಪ್ಪಂ । ಅಯ್ಯನ

೩ ಸಿಂಗಂ।ರಿಪುಮಂಡಳಿಕಭೈರವಂ । ವಿದ್ವಿಷ್ಟಗಜಕಂಠೀರವಂ।ಇಡುವರಾದಿತ್ಯಂ। ರೂಪನಾರಾಯಣಂ । ಕಲಿಯುಗವಿಕ್ರಮಾದಿತ್ಯಂ । ಶನಿವಾರಸಿದ್ಧಿ ಗಿರಿದು

ಶಿಲಾಹಾರ ರಾಜವಂಶಾಚಾ ಇತಿಹಾಸ ಆಣಿ ಕೋರೀವ ಲೇಖ : ಖಂಡ–೨, ಭಾಗ–೩

೪ ಗ್ಗ್‌ಲಂಘನಂ । ಶ್ರೀಮಹಾಲಕ್ಷ್ಮೀದೇವಿಲಬ್ಧವರಪ್ರಸಾದಾದಿ ಸಮಸ್ತ ರಾಜಾ
ವಳೀ ವಿರಾಜಿತರಪ್ಪ ಶ್ರೀಮನ್ಮಹಾಮಂಡಳೇಶ್ವರಂ ಗಂಡರಾದಿತ್ಯದೇವರು
ವಳವಾಡದ ನೆ

೫ ಲೆವೀಡಿನಲ್ಸುಖಸಂಕಥಾವಿನೋದದಿಂ ರಾಜ್ಯಂಗೆಪುತ್ತಮಿರೆ । ತತ್ಪಾದಪದ್ಮೋಪ
ಜೀವಿ ಸಮಧಿಗತಪಂಚಮಹಾಶಬ್ದಮಹಾಸಾಮಂತಂ । ವಿಜಯಲ

೬ ಕ್ಷ್ಮೀಕಾಂತಂ । ರಿಪುಸಾಮಂತಸೀಮಂತಿನಿಸೀಮಂತಭಂಗಂ । ವೀರವಾರಾಂಗ
ನಾಪ್ರಿಯಭುಜಂಗಂ ವೈರಿಸಾಮಂತಮೇಘವಿಘಟನಸಮೀರಣಂ । ನಾಗಲ
ದೇವಿಯ ಗಂಧವಾ

೭ ರಣಂ । ವಿದ್ವಿಷ್ಟಸಾಮಂತವಿಳಯಕಾಳಂ । ಸಾಮಂತಗಂಡ ಗೋಪಾಳಂ ।
ದಾಯಾದಸಾಮಂತತಾರಾಸುರವೀರಕುಮಾರಂ । ಸಾಮಂತಕೇದಾರಂ । ತೊಂಡ
ಸಾಮಂತಪುಂಡರೀಕ

೮ ಷಂಡಪ್ರಚಂಡಮದವೇದಂಡಂ । ಗಂಡರಾದಿತ್ಯದೇವದಕ್ಷದಕ್ಷಿಣಭುಜಾದಂಡಂ ।
ಯಾಚಕಜನಮನೋಭಿಲಷಿತಚಿಂತಾಮಣಿ । ಸಾಮಂತಶಿರೋಮಣಿ । ಜಿನಚರಣ
ಸರಸಿರು

೯ ಹಮಧುಕರಂ ಸಮ್ಯಕ್ತ್ವ ರತ್ನಾಕರನಾಹಾರಾಭಯಭೈಷಜ್ಯಶಾಸ್ತ್ರದಾನವಿನೋದಂ।
ಪದ್ಮಾವತೀದೇವಿಲಬ್ಧವರಪ್ರಸಾದಂ । ನಾಮಾಡಿ(ದಿ) ಸಮಸ್ತಪ್ರಶಸ್ತಿಸಹಿತಂ
ಶ್ರೀಮನ್ಮಹಾ

೧೦ ಸಾಮಂತಂ । ನಿಂಬದೇವರಸರು । ಕವಡೆಳ್ಳಗೊದ ಬಳಿಯ ಸಂತೆಯ
ಮುದ್ಗೊಡೆಯಲ್ಮಾಡಿಸಿದ ಬಸದಿಯ ಪಾರ್ಶ್ವನಾಥದೇವರಷ್ಟವಿಧಾರ್ಚನಕ್ಕಮಾ
ಬಸದಿಯ ಜೀರ್ಣ್ಣೋದ್ಧಾರಕ

೧೧ ಮಲ್ಲಿಪ್ಪ ರಿ(ಋ)ಷಿವಯರಾಹಾರದಾನಕ್ಕಂ । ಸ್ವಸ್ತಿ[।*] ಸಮಸ್ತಭುವನ
ವಿಖ್ಯಾತಪಂಚಶತವೀರಶಾಸನಕಲಬ್ಧಾನೇಕಗುಣಗಣಾಲಂಕೃತ ಸತ್ಯಶೌಚಾಚಾರ
ಚಾರುಚರಿತ್ರನಯವಿನಯ

೧೨ ವಿಜ್ಞಾನ ವೀರಬಳಂಜಧರ್ಮ್ಮಪ್ರತಿಪಾಳನವಿಶುದ್ಧ ಗುಡ್ಡ ಧ್ವಜವಿರಾಜಮಾನಾ
ನೂನಸಾಹಸೋತ್ತುಂಗ ಕೀರ್ತ್ಯಂಗನಾಲಿಂಗಿತ ನಿಜಭುಜೋಪಾರ್ಜ್ಜಿತವಿಜಯ
ಲಕ್ಷ್ಮೀನಿವಾಸವಕ್ಷ [ಃ*] ಸ್ಥಲರುಂ

೧೩ ಭುವನಪರಾಕ್ರಮೋನ್ನತ ವಾಸುದೇವಖಂಡಳೀಮೂಳಭದ್ರವಂಶೋದ್ಭವರುಂ ।
ಭಗವತೀಲಬ್ಧವರಪ್ರಸಾದರುಂ। ತಾವು ಕಾದಿ ಸೋಲದರುಂ । ಮಱುವಕ್ಕ
ಮಾರಿಗಳುಂ । ಪರಸ್ತ್ರೀ ಪರ

೧೪ ಧನ ವರ್ಜ್ಜಿತರುಂ ಚತುಃಷಷ್ಟಿಕಳೆಗಳೊಳ್ ಪ್ರವೀಣರಪ್ಪುದಱಿಂ ಬ್ರಹ್ಮ
ನನ್ನರುಂ । ಚಕ್ರಮುಳ್ಳುದಱಿಂ । ನಾರಾಯಣನನ್ನರುಂ । ದೃಷ್ಟಿಯೊಳ್ನೋಡಿ
ಕೊಲ್ವುದಱಿಂ।ಕಾಳಾಗ್ನಿರುದ್ರನನ್ನರುಂ ಕೊ

೧೫ ನ್ದರನೊಱಿಸಿ ಕೊಲ್ವುದಱಿಂ । ಪರಶುರಾಮನನ್ನರುಂ।ತುಳಿದು ಕೊಲ್ವೊ(ಲ್ವು)
ದಱಿಂ । ಮದಾಂಧಗಂಧಸಿಂಧುರದನ್ನರುಂ । ಗಿರಿದುರ್ಗ್ಗಮಂ ಮಱಿವೊಕ್ಕರಂ
ತೆಗೆದು ಕೊಲ್ವೆಡೆಯೊಳು ಸಿಂಹದನ್ನರುಂ

೧೬ ಪಾತಾಳಮಂ ಪೊಕ್ಕರಂ ಕೊಲ್ವೆಡೆಯೊಳು ವಾಸುಗಿಯನ್ನರುಂ ಆಕಾಶದೊಳಿದ್ದರಂ
ಕೊಲ್ವೆಡೆಯೊಳ್ಗರುತ್ಮನನ್ನರುಂ । ಪೆಂಪಿನಲ್ ಪೃಥ್ವಿಯನ್ನರುಂ ಬಿಣ್ಪಿನಲ್
ಕುಲಗಿ

೧೭ ರಿಯನ್ನರುಂ । ಗುಣ್ಪಿನಲ್ ಮಹಾಸಮುದ್ರದನ್ನರುಂ । ಉದ್ಯೋಗದಲ್ ರಾಮ
ನನ್ನರುಂ । ಪರಾಕ್ರಮದೊಳ್ ಪಾರ್ಥನನ್ನರುಂ । ಶೌಚದೊಳ್ ಗಾಂಗೇಯ
ನನ್ನರುಂ । ಸಾಹಸದೊಳ್ ಭೀಮನನ್ನ

೧೮ ರುಂ । ಧರ್ಮದಲ್ ಧರ್ಮಪುತ್ರನನ್ನರುಂ । ಜ್ಞಾನದಲ್ ಸಹದೇವನನ್ನರುಂ ।
ಭೋಗದಲಿಂದ್ರನನ್ನರುಂ । ತ್ಯಾಗದಲ್ ಕರ್ಣನನ್ನರುಂ । ತೇಜದಲಾದಿತ್ಯ
ನನ್ನರುಂ । ಅಹಿಚ್ಛತ್ರಮೆನಿಸುವಯ್ಯವೊಳೆಪುರಪ

೧೯ ರಮೇಶ್ವರರುಮಪ್ಪಯ್ನೂರ್ವ್ವಸ್ವಾಮಿಗಳುಂ ಗವಱೆಯರುಂ । ಗಾತ್ರಿ ಯರುಂ । ಸೆಟ್ಟಿಯರುಂ । ಸೆಟ್ಟಿಗುತ್ತರುಂ । ಗಾಮಂಡರುಂ । ಗಾಮಣ್ಡಸ್ವಾಮಿ ಗಳುಂ । ಬೀರ–

೨೦ ರುಂ । ಬಿ(ಬೀ) ರವಣಿಗರುಂ । ಕೊಲ್ಲಾಪುರದ ಬಿಲ್ವಾಣಸೆಟ್ಟಿಯುಂ । ಗೋವಿಂದ ಸೆಟ್ಟಿಯುಂ।ಕೋಮರ ಅಣ್ಣಮಯ್ಯನುಂ । ಮಿರಿಂಜೆಯ ಬಿಜ್ಜಸೆಟ್ಟಿಯುಂ । ಬೊಪ್ಪಿಸೆ

೨೧ ಟ್ಟಿಯುಂ । ಗಣ್ಡರಾದಿತ್ಯದೇವರ ರಾಜಶ್ರೇಷ್ಠಿ ವೇಸಪಯ್ಯಸೆಟ್ಟಿಯರುಂ । ಆ ಮಣ್ಡಳೇಶ್ವರನ ಬೀಡಿನ ಬಮ್ಮಿಸೆಟ್ಟಿಯುಂ । ಕೂಂಡಿಪಟ್ಟಣದಾದಿತ್ಯಗೃಹ

೨೨ ದ ಸಾಸನಿಗಂ ಹೆಗ್ಗಡೆ ರಾವಸೆಟ್ಟಿಯುಂ । ಚೌಧೋರೆ ಬೊಪ್ಪಿಸೆಟ್ಟಿಯುಂ । ತೋರಂಬಗೆಯ ಪ್ರಭು ಕನ್ನಪಯ್ಯಸೆಟ್ಟಿಯುಂ । ಮಯಿಸಿಗೆಯ ಕಾಜರಾಗರಂ ಚೌಧೌ

೨೩ ರೇ ಗೊರವಿಸೆಟ್ಟಿಯುಂ। ಬಳೆಯವಟ್ಟನಡ(ದ) ಶಾಂತಿಸೆಟ್ಟಿಯುಂ । ಅಯ್ಯ ವೊಳೆಯನೂರ್ವ್ವರ ಸಿಂಗಂ ಹಾಲಿಯಸೆಟ್ಟಿಯುಂ । ಕವಡೆಗೊಲ್ಲದ ಪ್ರಭು ಖಪ್ಪರಯ್ಯನಾ

೨೪ ಧಿ(ದಿ) ಯಾಗಿ ಸಮಸ್ತದೇಶಂ ನೆರೆದು। ಶಕವರ್ಷದ ಸಾಸಿರದಯ್ವತ್ತೆಂಟನೆಯ ರಾಕ್ಷಸಸಂವತ್ಸರದ ಕಾರ್ತಿಕಬಹುಳ ಪಂಚಮಿಾ ಸೋಮವಾರದಂದು ಶ್ರೀಮೂಲ ಸಂಘ

೨೫ ದೇಸಿ(ಶಿ)ಯ ಗಣ ಪುಸ್ತಕಗಚ್ಛದ ಕೊಲ್ಲಾಪುರದ ಶ್ರೀ ರೂಪನಾರಾಯಣಬಸದಿ ಯಾಚಾರ್ಯ್ಯರಪ್ಪ ಶ್ರೀ ಶ್ರುತಕೀರ್ತ್ತಿತ್ರೈವಿದ್ಯದೇವರ ಕಾಲಂ ಕರ್ಚ್ಚಿ। ಧಾರಾಪೂ

೨೬ ರ್ವ್ವಕವಾಗಿ ಕೊಂಟ್ಟಾಯಮೆಂತ್ತೆಂದೊಡೆ ಅಡಕೆ ಹೇಱಿಂಗೆ ಅಯ್ವತ್ತು। ಜವ ಳಕ್ಕಿರ್ಪ್ಪತ್ತು । ಹಸರಕಯ್ದು । ಎಲೆ ಹೇಱಿಂಗೆ ನೂರು । ತೆಲೆವೊಱೆಗೆಯ್ವತ್ತು ಹಸರಕಿರ್ಪ್ಪ

೨೭ ತ್ತಯ್ದು । ತುಪ್ಪಮೆಣ್ಣೆಯೆಂಬಿವು ಕೊಡಕ್ಕೆ ಸೊಲ್ಲಗೆ ಸಿದ್ದಿಗೆಗರವಾನಂ ಸಂಗಡಿ
ಗೊರ್ಮ್ಮಾನಂ ದೂಸಿಗವಸರಕ್ಕಮ್ಮಕ್ಕಸಾಲೆಗಂ ಹೊಂಗೆ ಹಣಂ । ಪತ್ತಿ
ಮಳೆವೆಗ

೨೮ ಯ್ವಲಂ ಭಂಡಿಯ ಕುರುಸೆಯ ಮಳವೆಗೆರಡು ಬೀಸಿಗೆ । ಜವಳಕ್ಕೆ ಪಲಂ
ಪತ್ತು । ಲಂಕರೊಕ್ಕಲಲ್ಲಿ ಆಱು ತಿಂಗಳ್ಗೆ ಮಣೆತಿವಿಗೆ ಮರವಿಯೆಂಬಿ
ವೊಂದಕ್ಕುಂ । ವರ್ಷಕ್ಕೆ ಮಂ

೨೯ ಚವೊಂದಕ್ಕುಂ । ಅಲ್ಲವರಿಸಿನಂ ಶುಂಠಿ ಬೆಳ್ಳುಳ್ಳಿ ಬಜೆ ಭದ್ರಮುಸ್ತೆಯೆಂಬಿವು
ಮೊದಲಾಗಿ ತೂಗಿ ಮಾರುವ ಭಂಡಗಳ್ಗೆ ಹೇಱಿಂಗಯ್ವಲಂ ಜವಳಕ್ಕಿಪ್ಪಲಂ
ಹಸ

೩೦ ರಕೊಪ್ಪಲಂ ಜೀರಗೆ ಮೆಳಸು ಸಾಸವಿಯೆಂಬಿವು ಹೇಱಿಂಗೊಮ್ಮಾನಂ ಜವಳಕ್ಕರ
ವನಂ ಹಸರಕ್ಕೆ ಸೊಲ್ಲಗೆ । ಉಪ್ಪು ಮೊದಲಾಗಿ ಹಡಿ(ದಿ)ಹೆಂಟು ಧಾನ್ಯಂ

೩೧ ಗಳ್ಗಂ ಭಂಡಿಗೆ ಕೊಳಗವೊಂದು ಹೇಱಿಂಗೆ ಮಾನವೆರಡು ತಲೆವೊಱೆ
ಗೊರ್ಮ್ಮಾನಂ ಬಾಡು ಕಾಯೆಂಬಿವು ಭಂಡಿಗೆ ಹತ್ತು ತಲೆವೊರೆಗೆ ನಾಲ್ಕಕ್ಕುಂ ।
ಭಂಡಿಗೆ ದಂಡಿಗೆವೊಂ[ದು]

೩೨ ಸೆವೆಯ್ದು ಹೂಟೆಯೆರಡರ್ಕ್ಕಂ ದಂಡಿಗೆವೊಂಡು(ದು) ಸೆವೆಯೆರಡು ಹೂವಿನ
ಹೆಡಲಿಗೆಗೆ ಮಾಲೆ ವೊಂದು ಕುಂಬಱರಲ್ಲಿ ಹಸರಕ್ಕೆ ಮಡಕೆವೊಂದು ॥
ಇಂತಿಯಾ–

೩೩ ಯಮನಳಿದಾತಾಂತೇ ಬಾಣರಾಶಿಕುರುಕ್ಷೇತ್ರಾದಿಗಳೊಳ್ ಪಂಚಮಹಾಪಾತ
ಕಮಂ ಮಾಡಿದ ಫಳಮಕುಂ॥

❖❖

ಶ್ರವಣಬೆಳ್ಗೊಳ : ದಕ್ಷಿಣ ಮಹನವಮಿ ಮಂಟಪದ ಕಂಬದಲ್ಲಿ
(ಕ್ರಿ.ಶ. ೧೧೬೩)

ದಕ್ಷಿಣ ಮುಖ

೧ ಭದ್ರಂ ಭೂಯಾಜ್ಜಿನೇಂದ್ರಾಣಾಂ ಶಾಸನಾಯಾಘನಾ
೨ ಶಿನೇ । ಕುತೀರ್ತ್ಥಧ್ವಾನ್ತಸಂಘಾತಪ್ರಭಿನ್ನ ಘನ ಭಾ
೩ ನವೇ ॥ ಶ್ರೀಮನ್ನಾಭೇಯನಾಥಾದ್ಯಮಳಜಿನ
೪ ವರಾನೀಕ ಸೌಧೋರುವಾರ್ದ್ಧಿಃ । ಪ್ರಧ್ವಸ್ತಾಘ
೫ ಪ್ರಮೇಯ ಪ್ರಚಯ ವಿಷಯ ಕೈವ
೬ ಲ್ಯಬೋಧೋರುವೇದಿಃ । ಶಸ್ತಸ್ಯಾತ್ಕಾರಮುದ್ರಾಶ
೭ ಬಳಿತ ಜನತಾನನ್ದನಾದೋರು ಘೋಷಃ । ಸ್ಥೇಯಾ
೮ ದಾಚಂದ್ರತಾರಂ ಪರಮಸುಖ ಮಹಾವೀರ್ಯ್ಯ
೯ ವೀಚೀನಿಕಾಯಃ ॥ ಶ್ರೀಮನ್ಮುನೀಂದ್ರೋತ್ತಮರ
೧೦ ತ್ನ ವರ್ಗ್ಗಾಃ ಶ್ರೀಗೌತಮಾದ್ಯಾಃಪ್ರಭವಿಷ್ಣವಸ್ತೇ ।
೧೧ ತತ್ರಾಂಬುಧೌ ಸಪ್ತಮಹರ್ದ್ಧಿಯುಕ್ತಾಸ್ತತ್ಸಂತತೌ ಬೋಧ
೧೨ ನಿಧಿರ್ಬ್ಬಭೂವ ॥ ಭದ್ರಸರ್ವತೋ ಯೋ ಹಿ ಭದ್ರಬಾಹು
೧೩ ರಿತಿ ಶ್ರುತಃ। ಶ್ರುತಕೇವಳಿ ನಾಥೇಷು ವರಮಜ್ಜಿರಮೋ
೧೪ ಮುನಿಃ ॥ ಚಂದ್ರಪ್ರಕಾಶೋಜ್ವಳ ಸಾಂದ್ರಕೀರ್ತ್ತಿಃ ಶ್ರೀ ಚಂದ್ರ
೧೫ ಗುಪ್ತೋಜನಿ ತಸ್ಯ ಶಿಷ್ಯಃ । ಯಸ್ಯ ಪ್ರಭಾವಾದ್ವನದೇವತಾಭಿ
೧೬ ರಾರಾಧಿತಃ ಸ್ವಸ್ಯಗಣೋಮುನೀನಾಂ ॥ ತಸ್ಯಾನ್ವಯೇ ಭೂವಿ
೧೭ ದಿತೇ ಬಭೂವಯಃ ಪದ್ಮನಂದಿ ಪ್ರಥಮಾಭಿಧಾನಃ । ಶ್ರೀ ಕೊಂ
೧೮ ಡಕುನ್ದಾದಿಮುನೀಶ್ವರಾಖ್ಯಸ್ಸತ್ಸಂಯಮಾದುದ್ಗತಚಾರ
೧೯ ಣರ್ದ್ಧಿಃ । ಅಭೂದುಮಾಸ್ವಾತಿಮುನೀಶ್ವರೋ ಸಾವಾಚಾರ್ಯ್ಯ ಶ
೨೦ ಬ್ದೋತ್ತರ ಗೃದ್ಧಪಿಚ್ಛಃ । ತದನ್ವಯೇ ತತ್ಸದೃಶೋಸ್ತಿನಾನ್ಯಸ್ತಾ
೨೧ ತ್ಕಾಳಿಕಾಶೇಷ ಪದಾರ್ತ್ಥವೇದೀ ॥ ಶ್ರೀಗೃದ್ಧಪಿಚ್ಛಮುನಿ
೨೨ ಪಸ್ಯ ಬಳಾಕಪಿಚ್ಛಃ ॥ ಶಿಷ್ಯೋಜನಿಷ್ಟಭುವನತ್ರಯವರ್ತ್ತಿ ಕೀ
೨೩ ರ್ತ್ತಿಃ ಚಾರಿತ್ರಚಂಚುರಖಿಳಾವನಿಪಾಳಮೌಳಿಮಾಲಾಶಿಳೀಮು

EC -II 71(1979)

೨೪ ಖವಿರಾಜಿತ ಪಾದಪದ್ಮಃ ॥ ಏವಂ ಮಹಾಚಾರ್ಯ್ಯ ಪರಂಪರಾಯಾಂ
೨೫ ಸ್ಯಾತ್ಕಾರಮುದ್ರಾಂಕಿತ ತತ್ವದೀಪಃ । ಭದ್ರಸ್ಸಮಂತಾದ್ಗುಣತೋ
೨೬ ಗಣೇಶಸ್ಸಮನ್ತಭದ್ರಾಜನಿ ವಾದಿಸಿಂಹಃ ॥ ತತಃ ॥ ಯೋ
೨೭ ದೇವನನ್ದಿ ಪ್ರಥಮಾಭಿಧಾನೋ ಬುದ್ಧ್ಯಾ ಮಹತ್ಯಾ ಸ ಜಿನೇಂ
೨೮ ದ್ರ ಬುದ್ಧಿಃ । ಶ್ರೀ ಪೂಜ್ಯ ಪಾದೋಜನಿದೇವತಾಭಿರ್ಯ್ಯ
೨೯ ತ್ಪೂಜಿತಂ ಪಾದಯುಗಂಯದೀಯ್ಯಃ ॥ ಜೈನೇಂದ್ರಂ ನಿಜ
೩೦ ಶಬ್ದಭೋಗಮತುಳಂ ಸರ್ವಾರ್ತ್ಥ ಸಿದ್ಧಿಃ ಪರಾ ಸಿದ್ಧಾನ್ತೇ ನಿಪು
೩೧ ಣತ್ವಮುದ್ಧಕವಿತಾಂ ಜೈನಾಭಿಷೇಕಃ ಸ್ವಕಃ । ಛನ್ದಸ್ಸೂ
೩೨ ಕ್ಷ್ಮಧಿಯಂ ಸಮಾಧಿಶತಕ ಸ್ವಾಸ್ಥ್ಯಂ ಯದೀಯಂ ವಿದಾಮಾ
೩೩ ಖ್ಯಾತೀಹ ಸ ಪೂಜ್ಯಪಾದಮುನಿಪಃ ಪೂಜ್ಯೋ ಮು
೩೪ ನೀನಾಂ ಗಣ್ಯೈಃ ॥ ತತಶ್ಚ

ಪಶ್ಚಿಮ ಮುಖ

೩೫ ಅಜನಿಷ್ಟಾಕಳಂಕಂ ಯಜ್ಜಿನಶಾಸನಮಾದಿತಃ । ಅಕಳಂಕ[ಃ] ಬಭೌ
೩೬ ಯೇನ ಸೋಽಕಳಂಕೋ ಮಹಾಮತಿಃ ॥ ಇತ್ಯಾದ್ಯುದ್ಧಮು
೩೭ ನೀಂದ್ರ ಸನ್ತತಿನಿಧೌ ಶ್ರೀಮೂಲಸಂಘೇ ತತೋ ಜಾತೇ ನಂದಿಗಣ
೩೮ ಪ್ರಭೇದ ವಿಲಸದ್ದೇಶೀಗಣೇ ವಿಶ್ರುತೇ । ಗೊಲ್ಲಾಚಾರ್ಯ್ಯ ಇ
೩೯ ತಿ ಪ್ರಸಿದ್ಧಮುನಿಪೋ ಭೂದ್ಗೊಲ್ಲದೇಶಾಧಿಪಃ ಪೂರ್ವಂ ಕಿಂ ನ
೪೦ ಚ ಹೇತುನಾಭಿವಭಿಯಾದೀಕ್ಷಾಂ ಗೃಹೀತಸ್ಸುಧೀಃ ॥
೪೧ ಶ್ರೀಮತ್ತ್ರೈಕಾಲ್ಯಯೋಗೀ ಸಮಜನಿ ಮಹಿಕಾ ಕಾಯ
೪೨ ಲಗ್ನಾ ತನುತ್ರಂ । ಯಸ್ಯಾಭೂದ್ವೃಷ್ಟಿಧಾರಾ ನಿಶಿತಶರಗ
೪೩ ಣಾ ಗ್ರೀಷ್ಮ ಮಾರ್ತ್ತಣ್ಡಬಿಂಬಂ ಚಕ್ರಂ ಸದ್ವೃತ್ತ ಚಾಪಾಕಳಿತ
೪೪ ಯತಿವರಸ್ಯಾಘಶತ್ರೂನ್ವಿಜೇತುಂ ಗೊಲ್ಲಾಚಾರ್ಯ್ಯಸ್ಸ
೪೫ ಶಿಷ್ಯಸ್ಸ ಜಯತು ಭುವನೇ ಭವ್ಯಸತ್ಕೈರವೇಂದುಃ ॥ ತಚ್ಛಿಷ್ಯ
೪೬ ಸ್ಯ ॥ ಅವಿದ್ಧಕರ್ಣ್ನಾಧಿಕಪದ್ಮನನ್ದಿಸೈದ್ಧಾನ್ತಿಕಾಖ್ಯಾಜನಿ
೪೭ ಯಸ್ಯ ಲೋಕೇ । ಕೌಮಾರದೇವಬ್ರತಿತಾಪ್ರಸಿದ್ಧೇರ್ಜ್ಜೀ
೪೮ ಯಾತ್ತು ಸೋ ಜ್ಞಾನನಿಧಿಸ್ಸಧೀರಃ ॥ ತಚ್ಛಿಷ್ಯಃ ಕುಳ
೪೯ ಭೂಷಣಾಖ್ಯಯತಿಪಶ್ಚಾರಿತ್ರವಾರಾಂನಿಧಿಸ್ಸಿದ್ಧಾ
೫೦ ನ್ತಾಂಬುಧಿಪಾರಗೋ ನತವಿನೇಯಸ್ತತ್ಸಧರ್ಮ್ಮೋ ಮ

೪೧ ಹಾನ್ ಶಬ್ದಾಂ ಭೋರುಹ ಭಾಸ್ಕರಃ । ಪ್ರಥಿತ ತರ್ಕ್ಕ ಗ್ರ
೪೨ ನ್ಥಕಾರಃ ಪ್ರಭಾಚಂದ್ರಾಖ್ಯೋ ಮುನಿರಾಜ ಪಂಡಿತ
೪೩ ವರಃ ಶ್ರೀಕುಂಣ್ಡಕುಂದಾನ್ವಯಃ ॥ ತಸ್ಯ ಶ್ರೀಕುಳ
೪೪ ಭೂಷಣಾಖ್ಯ ಸುಮುನೇಶ್ಶಿಷ್ಯೋ ವಿನೇಯಸ್ತುತಸ್ಸ
೪೫ ದ್ವೃತ್ತಃ ಕುಳಚಂದ್ರದೇವಮುನಿಪಸ್ಸಿದ್ಧಾನ್ತ ವಿದ್ಯಾನಿ
೪೬ ಧಿಃ ತಚ್ಛಿಷ್ಯೇಜನಿ ಮಾಘನನ್ದಿ ಮುನಿಪಃ ಕೊಲ್ಲಾ
೪೭ ಪುರೇತೀರ್ತ್ಥಕೃದ್ರಾದ್ಧಾನ್ತಾರ್ಣ್ನವಪಾರಗೋಚ
೪೮ ಳಧೃತಿಶ್ಚಾರಿತ್ರಚಕ್ರೇಶ್ವರಃ ॥ ಎಳೆ ಮಾವಿಂ ಬ
೪೯ ನವಬ್ಜದಿಂ ತಿಳಿಗೊಳಂ ಮಾಣಿಕ್ಯದಿಂ ಮಂಡನಾವ
೫೦ ಳಿ ತಾರಾಧಿಪನಿಂ ನಭಂ ಶುಭದಮಾಗಿರ್ಪ್ಪನ್ತಿರಿರ್ದ್ದತ್ತು
೫೧ ನಿರ್ಮ್ಮಳವೀಗಳ್ಕುಳಚಂದ್ರದೇವ ಚರಣಾಂಭೋಜಾತಸೇ
೫೨ ವಾವಿನಿಶ್ಚಳ ಸೈದ್ಧಾಂತಿಕ ಮಾಘನಂದಿ ಮುನಿಯಿಂ ಶ್ರೀ
೫೩ ಕೊಂಡಕುಂದಾನ್ವಯಂ ॥ ಹಿಮವತ್ಕುಕ್ಕೀಳ ಮುಕ್ತಾಫಳತ
೫೪ ರಳತರತ್ತಾರಹಾರೇಂದುಕುಂದೋಪಮಕೀರ್ತಿವ್ಯಾಪ್ತದಿಗ್ಮಂ
೫೫ ಡಳನವನತಭೂಮಂಡಳಂ ಭವ್ಯಪದ್ಮೋಗ್ರಮರೀಚೀ ಮಂ
೫೬ ಡಳಂ ಪಂಡಿತತತಿವಿನತಂ ಮಾಘನಂದ್ಯಾಖ್ಯವಾಚಂ ಯಮಿ
೫೭ ರಾಜಂ ವಾಗ್ವಧೂಟೀನಿಟಿಳತಟಹಟನ್ನೂತ್ನಸದ್ರತ್ನಪ
೫೮ .... ತಮದರದೆನಿಕುಳಮಂ ಭರದಿಂ ನಿರ್ಭೇದಿಸಲು ಕೇ
೫೯ .... ಸರಿಯೆನಿಪಂ ವರಸಂಯಮಾಬ್ಧಿ ಚಂದ್ರಂ ಧರೆಯೊಳ್
೬೦ ..ಮಾಘನನ್ದಿ ಸೈದ್ಧಾನ್ತೇಶ ॥ತಚ್ಛಿಷ್ಯಸ್ಯ॥
೬೧ ಅವರ ಗುಡ್ಡುಗಳು ಸಾಮನ್ತ ಕೇದಾರ ನಾಕರಸ ದಾನಶ್ರೇಯಾಂಸ ಸಾ
೬೨ ಮನ್ತ ನಿಂಬದೇವ ಜಗದಾರ್ಬ್ಬಗಂಡ ಸಾಮನ್ತ ಕಾಮದೇವ॥

ಉತ್ತರ ಮುಖ

೬೩ ಗುರು ಸೈದ್ಧಾನ್ತಿಕ ಮಾಘನಂದಿಮುನಿಪಂ ಶ್ರೀಮಚ್ಚಮೂ
೬೪ ವಲ್ಲಭಂ ಭರತಂ ಛಾತ್ರನಪಾರಶಾಸ್ತ್ರನಿಧಿಗಳ್ ಶ್ರೀಭಾ
೬೫ ನುಕೀರ್ತ್ತಿ ಪ್ರಭಾಸ್ಫುರಿತಾಳಂಕೃತದೇವಕೀರ್ತ್ತಿ ಮುನಿಪ
೬೬ ಶ್ಶಿಷ್ಯರ್ಜ್ಜಗನ್ಮಂಡನರ್ದ್ದೊರೆಯೇ ಗಂಡವಿಮುಕ್ತದೇವ ನಿನಗಿಂ
೬೭ ನೀ ನಾಮಸೈದ್ಧಾನ್ತಿಕರ್ ಕ್ಷಿರೋದಾದಿವಚಂದ್ರಮ ಮ

ಣಿರಿವಪ್ರಖ್ಯಾತ ರತ್ನಾಕರಾತ್ ಸಿದ್ಧಾಂತೇಶ್ವರ ಮಾಘನ
ನ್ದಿಯಮಿನೋ ಜಾತೋ ಜಗನ್ಮಣ್ಡನಃ ಚಾರಿತ್ರೈಕ ನಿಧಾ
ನಧಾಮಸುವಿನಮ್ರೋ ದೀಪವರ್ತ್ತಿ ಸ್ವಯಂ ಶ್ರೀಮದ್ಗಂ
ಡವಿಮುಕ್ತದೇವ ಯತಿಪಸ್ಸೈದ್ಧಾನ್ತ ಚಕ್ರಾಧಿಪಃ ॥ ಅವ
ರ ಸಧರ್ಮರ್ ॥ ಆವೊಂ ವಾದಿಕಥಾತ್ರಯಪ್ರವಣದೊ
ಳ್ ವಿದ್ವಜ್ಜನಂ ಮೆಚ್ಚೆ ವಿದ್ಯಾವಷ್ಟಂಭಮನಪ್ಪುಕೆಯ್ದು ಪರವಾ
ದಿ ಕ್ಷೋಣಿಭೃತ್ಪಕ್ಷಮಂ ದೇವೇಂದ್ರಂ ಕಡಿವಂದದಿಂ ಕಡಿದೆಲೆ
ಸ್ಯಾದ್ವಾದವಿದ್ಯಾಸ್ತ್ರದಿಂ ತ್ರೈವಿದ್ಯಶ್ರುತಕೀರ್ತಿ ದಿವ್ಯ ಮುನಿವೋ
ಲು ವಿಖ್ಯಾತಿಯಂ ತಾಳ್ದಿದೊಂ ॥ ಶ್ರುತಕೀರ್ತಿತ್ರೈವಿದ್ಯವ್ರತಿ ರಾಘವ
ಪಾಣ್ಡವೀಯಮಮಂ ವಿಬುಧಚಮತ್ಕೃತಿಯೆನಿಸಿ ಗತಪ್ರತ್ಯಾಗತದಿಂ ಪೇ
ಳ್ದಮಳ ಕೀರ್ತಿಯಂ ಪ್ರಕಟಿಸಿದಂ ॥ ಅವರಗ್ರಜರು ॥
ಯೋ ಬೌದ್ಧಕ್ಷಿತಿಭೃತ್ಕರಾಳಕುಳಿಶಶ್ಚಾರ್ವಾಕ ಮೇಘಾನಳೋ ಮೀ
ಮಾಂಸಾಮತವರ್ತ್ತಿವಾದಿಮದವನ್ಮಾತಂಗ ಕಣ್ಠೀರವಃ । ಸ್ಯಾದ್ವಾದಾಬ್ದಿ
ಶರತ್ಸಮುದ್ಗತ ಸುಧಾಶೋಚಿಸ್ಸಮಸ್ತೈಸ್ತುತಸ್ಸ ಶ್ರೀ ಮಾನ್ಭುವಿ ಭಾ
ಸತೇ ಕನಕನನ್ದಿಖ್ಯಾತಯೋಗೀಶ್ವರಃ ॥ ವೇತಾಳೀ ಮುಕುಳೀ ಕೃತಾಂಜ
ಳಿಪುಟಾ ಸಂಸೇವತೇ ಯತ್ಪದೇ ಝೊಟ್ಟಿಂಗಃ ಪ್ರತಿಹಾರನಿವಸತಿ ದ್ವಾ
ರೇಚಯಸ್ಯನ್ತಿಕೇ ಯೇನ ಕ್ರೀಡತಿ ಸಂತತಂ ನುತತಪೋಲಕ್ಷ್ಮೀರ್ಯ್ಯ
ಶಶ್ರೀ ಪ್ರಿಯಸ್ಸೋಯಂ ಶುಂಭತಿ ದೇವಚಂದ್ರಮುನಿಪೋ ಭಟ್ಟಾರಕೌ
ಘಾಗ್ರಣೀಃ ಅವರ ಸದ್ಧರ್ಮಮ್ಮಾಘನನ್ದಿತ್ರೈವಿದ್ಯದೇವರು ವಿದ್ಯಾ
ಚಕ್ರವರ್ತ್ತಿ ಶ್ರೀಮದ್ದೇವಕೀರ್ತ್ತಿ ಪಂಡಿತದೇವರ ಶಿಷ್ಯರು ಶ್ರೀ ಶುಭಚಂ
ದ್ರತ್ರೈವಿದ್ಯದೇವರುಂ ಗಂಡವಿಮುಕ್ತವಾದಿಚತುರ್ಮ್ಮುಖ ರಾಮಚಂ
ದ್ರತ್ರೈವಿದ್ಯದೇವರುಂ ವಾದಿವಜ್ರಾಂಕುಶ ಶ್ರೀಮದಕಳಂಕತ್ರೈವಿದ್ಯ
ದೇವರುಮಾ ಪರಮೇಶ್ವರನ ಗುಡ್ಡುಗಳು ಮಾಣಿಕ್ಯಭಂಡಾರಿ ಮಜಿ
ಯಾನೆ ದಂಡನಾಯಕರುಂ ಶ್ರೀ ಮನ್ಮಹಾಪ್ರಧಾನಂ ಸರ್ವಾಧಿಕಾರಿ ಪಿರಿ
ಯ ದಂಡನಾಯಕಂ ಭರತಿಮಯ್ಯಂಗಳುಂ ಶ್ರೀಕರಣದ ಹೆಗ್ಗಡೆ ಬೂ
ಚಿಮಯ್ಯಂಗಳುಂ ಜಗದೇಕದಾನಿ ಹೆಗ್ಗಡೆ ಕೋರಯ್ಯನುಂ ॥ ಅಂಕಳಕಂ ಪಿತೃ
ವಾಜಿವಂಶತಿಳಕ ಶ್ರೀ ಯಕ್ಷರಾಜಂ ನಿಜಾಂಬಿಕೆ ಲೋಕಾಂಬಿಕೆ ಲೋಕವಂ
ದಿತೆ ಸುಶೀಲಾಚಾರೆ ದೈವಂ ದಿವೀಶಕದಂಬಸ್ತುತ ಪಾದಪದ್ಮನರುಹಂ
ನಾಥಂ ಯದುಕ್ಷೋಣಿಪಾಳಕ ಚೂಡಾಮಣಿ ನಾರಸಿಂಗನೆನಲೇಂ ನ್ನೋಂ

೧೦೭ ಪುಳ್ಳನೋ ಹುಳ್ಳಪಂ ॥ ಶ್ರೀ ಮನ್ಮಹಾಪ್ರಧಾನಂ ಸರ್ವಾಧಿಕಾರಿ ಹಿರಿಯ ಭಂ
೧೦೮ ಡಾರಿ ಅಭಿನವಗಂಗದಂಡನಾಯಕ ಶ್ರೀ ಹುಳ್ಳರಾಜಂ ತಮ್ಮ ಗುರುಗಳಪ್ಪ
೧೦೯ ಶ್ರೀ ಕೊಂಡಕುಂದಾನ್ವಯದ ಶ್ರೀ ಮೂಲಸಂಘದ ದೇಶಿಯಗಣದ ಪುಸ್ತಕಗ
೧೧೦ ಚ್ಚದ ಶ್ರೀ ಕೊಲ್ಲಾಪುರದ ಶ್ರೀ ರೂಪನಾರಾಯಣನ ಬಸದಿಯ ಪ್ರತಿವಿ
೧೧೧ ದ್ಧದ ಶ್ರೀಮತ್ಕೆಲ್ಲಂಗೆಱೆಯ ಪ್ರತಾಪಪುರವಂ ಪುನರ್ಬ್ಭರಣವಂ ಮಾಡಿಸಿದ
೧೧೨ ಜಿನನಾಥಪುರದಲು ಕಲ್ಲದಾನಶಾಲೆಯಂ ಮಾಡಿಸಿದ ಶ್ರೀ ಮನ್ಮಹಾಮಂಡ
೧೧೩ ಳಾಚಾರ್ಯರ್ದ್ದೇವಕೀರ್ತ್ತಿಪಂಡಿತದೇವರ್ಗ್ಗೆ ಪರೋಕ್ಷ ವಿನಯವಾಗಿ ನಿಶಿದಿಯಂ ಮಾ
೧೧೪ ಡಿಸಿದ ಅವರ ಶಿಷ್ಯರ್ಲ್ಲಕ್ಖಣಂದಿ ಮಾಧವತ್ರಿಭುವನದೇವರ್ಮ್ಮಹಾದಾನಪೂಜಾ
೧೧೫ ಭಿಷೇಕ ಮಾಡಿ ಪ್ರತಿಷ್ಠೆಯಂ ಮಾಡಿದರು ಮಂಗಳಮಹಾಶ್ರೀಶ್ರೀಶ್ರೀ

❖❖

ತೇರದಾಳದ ನೇಮಿನಾಥ ಬಸದಿಯ ಹೊರಮಂಟಪದ ಗೋಡೆ
(ಕ್ರಿ.ಶ. ೧೧೮೧)

---

೧ ಸ್ವಸ್ತಿ ಸಮಸ್ತಭುವನವಿಖ್ಯಾತ ಪಂಚಶತವೀರಶಾಸನಲಬ್ದಾನೇಕಗುಣಗಣಾಳಂಕ್ರಿತ ಸತ್ಯಶೌಚಾಚಾರಚಾರುಚಾರಿತ್ರನಯವಿನಯ ವಿಜ್ಞಾನ ವೀರಬಣಂಜುಧರ್ಮ್ಮ ಪ್ರತಿಪಾಳನ ವಿಶುದ್ಧ

೨ ಗುಡ್ಡಧ್ವಜವಿರಾಜತಾನೇಕ ಸಾಹಸಲಕ್ಷ್ಮಿಸಮಾಲಿಂಗಿತವಕ್ಷಸ್ಥಳ ಭುವನಪರಾಕ್ರ ಮೋನ್ನತರುಂ ಮುಖಪಟ್ಟಿಗುರೂತ್ಪತ್ತಿ ಬಲದೇವ ವಾಸುದೇವಖಡ್ಡಳಿ ಮೂಳಭದ್ರವಂಶೋದ್ಭವರುಂ ಪದ್ಮಾವತೀದೇವಿಲಬ್ದವರಪ್ರಸಾದರು

೩ ಮಪ್ಪ ಶ್ರೀಮದಯ್ಯವಳೆಯಯ್ನೂರ್ವಸ್ವಾಮಿಗಳು ಕುನ್ತಳವಿಷಯದೊಳು ಗ್ರಾಮನಗರಖೇಡಕರ್ವಡಮಡಂಬದ್ರೋಣಾಮುಖಪತ್ತಣಂಗಳಿಂದಮನೇಕ ಮಾಟಕೂಟಪ್ರಾಸಾದದೇವಾಯತನಂಗಳಿಂದಮೊಪ್ಪು

೪ ವಗ್ರಹಾರ ಪಟ್ಟಣಂಗಳಿಂದಮತಿಶಯವಪ್ಪ ಶ್ರೀಮತು ಕೂಂಡಿ ಮೂಱುಸಾಸಿರ ದೊಳಗೆ ಹನ್ನೆರಡಕ್ಕಂ ಮೊದಲಬಾಡಂ ಬಣಂಜುವಟ್ಟಣಂ ನಡವೆಯ ಮನೆ

KV-V -98 ತೇರದಾಳ(ತಾ) ಜಮಖಂಡಿ (ಕ್ರಿ.ಶ. ೧೧೮೧)

ತೇರಿದಾಳದಲು ಸಕವರ್ಷ ೧೧೧೪ ನೆಯ ಪ್ಲವಸಂವತ್ಸರದ ಆಶ್ವಯುಜ ಬಹುಳ ३ ಆ

೫ ದಿ ವಾರದಲು ದ್ವಾತ್ರಿಂಸತು ವೇಳಾವುರಮುಂ ಮಷ್ಟಾದಶ ಪಟ್ಟಣಮುಂ ಚೌಸಷ್ಟಿ ಯೋಗ್ಗಪೀಠಮುಂ ಮಱುವತ್ತನಾಲ್ಕು ಘಟಿಕಸ್ಥಾನಮುಂ ನಾನಾದೇಶಾಭ್ಯನ್ತರದ ಗವಱೆಗಾತ್ರಿಗರುಂ ಸೆಟ್ಟಿಯರುಂ ಸೆಟ್ಟಿಗುತ್ತರುಂ ಮ

೬ ಹಾನಾಡಾಗಿ ನೆರೆದಾಸ್ಥಳದಲು ಶ್ರೀಮನ್ಮಂಡಳಿಕಂ ಗೊಂಕದೇವರಸಂ ಮಾಡಿಸಿದ ನೇಮಿತೀರ್ತ್ಥೇಶ್ವರನ ಚೈತ್ಯಾಲಯಮಂ ಕಣ್ದು ಬಲಂಗೊಣ್ದು ಪೊಡೆವಟ್ಟು ಹರ್ಷಚಿತ್ತರಾಗಿ ದೇವರಷ್ಟವಿಧಾರ್ಚನೆ ಚಂದ್ರಾರ್ಕ್ಕತಾರಂಬರ ನಡೆವನ್ತಾ.

೭ ಗಿ ಕೊಟ್ಟ ಶಾಸನಮರ್ಯಾದೆಯೆನ್ತೆಂದೊಡೆ ಚತುಸ್ಸಮುದ್ರಪರ್ಯ್ಯನ್ತಂಬರಂ ನಡವನ್ತಾಗಿ ೧೨೦ ನೂಱುಪ್ಪತ್ತೆತ್ತು ಕತ್ತೆ ಕೋಣ ಭಣ್ಡಿ ಭೈತ್ರ ದೋಣಿ ದುರ್ಗ್ಗಿ ಗಲಪಥಮೆಂಬಿವಱೊಳು ಆನೆ ಮಾಣಿಕ ವಸ್ತುವೇನನಾದಡಂ ಪೇಱೆ ಜಳಸ್ಥಳ ಯಾ

೮ ತ್ರೆಯಲು ನಡೆವಡಂ ಸುಂಕಪರಿಹಾರವಾಗಿ ಕೊಟ್ಟರು ಮತ್ತಂ ಶಾಸನಪರಿಹಾರಿಗ ರೆನ್ನದೆ ವೊಕ್ಕಲೊನ್ದು ಪಣವಂ ಬಿಟ್ಟರು । ಯಿನ್ತೀ ಕೆಯಿ ಮನೆ ತೋಟ ಮುಖ್ಯ ಸಮಸ್ತ ಆಯ[ದ್ವಾ] ಯಮೆಲ್ಲಮಂ ಸರ್ವ್ವ ಬಾಧಾಪರಿಹಾರವಾ

೯ ಗಿ ಧಾರಾಪೂರ್ವಕಂ ಮಾಡಿಬಿಟ್ಟರು । ಸ್ವಸ್ತಿ ಶ್ರೀಮತು ಕೊಣ್ಡಕುಂನ್ದಾ ಚಾರ್ಯ್ಯಾಂನ್ವಯದ ಶ್ರೀ ಮೂಲಸಂಗದ ದೇಸಿಯಗಣದ ಪೊಸ್ತಕಗಚ್ಛದ ಶ್ರೀ ಕೊಲ್ಲಾಪುರದ ನಿಂಬದೇವಸಾವನ್ತ ಮಾಡಿಸಿದ ಶ್ರೀ ರೂಪನಾರಾ

೧೦ ಯಣದೇವರ ಬಸದಿಯ ಪ್ರತಿಬದ್ಧಮಪ್ಪ ತೇರಿದಾಳದ ಗೊಂಕಜಿನೇಂದ್ರ ಮಂದಿರಕ್ಕೆ ಕೊಲ್ಲಾಪುರದಗಸ್ತ್ಯೇಶ್ವರವ ಕಣಗಿಲೇಶ್ವರದ ಮಹಾಲಕ್ಷ್ಮೀ ದೇವಿಯ ಗೋಕಾಗೆಯ ಮಹಾಲಿಂಗದೇವರ ಯಿನ್ತೀ ಘಟಿಕಾಸ್ಥಾನದಾ

೧೧ ಚಾರ್ಯರು ಮುಖ್ಯ ಎಳ್ಕೋಟಿ ಯುವಸಂಖ್ಯಾತಗಣಗಳು ಮಹಾಮಣ್ಡಳಿ ಯಾಗಿ ತೇರಿದಾಳದ ಮೂಲಸ್ಥಾನದ ಕಲಿದೇವಸ್ವಾಮಿಗೆ ಪ್ರತಿಬದ್ಧಂ ಮಾಡಿ ಆ ನೇಮಿನಾಥಸ್ವಾಮಿಯ ಪ್ರತಿಷ್ಠಾಕಾಲದಲಾ ಗೊಂಕ

೧೨ ಜಿನಾಲಯದಾಚಾರ್ಯ್ಯರಪ್ಪ ಪ್ರಭಾಚಂದ್ರಪಂಡಿತದೇವರಿಗ್ಗಿಳೆಯ ಜೋಗವಟ್ಟಿ
ಗೆಯ ಸ್ಥಾನಮೆನ್ದು ಜೋಗವಟ್ಟಿಗೆಮನಿಕಿದರು ಬಸದಿಯ ಮೇಲೆ ಶೂದ್ರಕನ
ಸಿಂಹದ ಚಕ್ರದ ಚಿಹ್ನಮೆಂಬಿವಂ ತಿಸುಳದ ಘಂಟೆ

೧೩ ಯಂ ಪಱಿಯ ನಾಗದೆನಿಪ್ಪವನೇಳುಕೋಟಿ ತಾಪಸರ್ಗ್ಗೆ ಮಹಾವರೋದಿಯವ
ನೀಶ್ವರ ವೈರಿಯೆನುತವಿಕ್ಕಿದಂರ್ಮ್ಮಿಸು[ಗುವೆ] ಜೋಗವಟ್ಟಗೆಯನಾ ಮುನಿ
ಸಂಕೆಯ ಕೋಟಿತಾಪಸರು ।

❖❖

ಜಿನನಾಥಪುರ (ಶ್ರವಣಬೆಳಗೊಳ)ದ ಶಾಂತೀಶ್ವರ ಬಸದಿಯ ಶಾಂತೀಶ್ವರ ದೇವರ ಪೀಠ (೧೩ನೆಯ ಶತಮಾನ)

೧ ಸ್ವಸ್ತಿ ಶ್ರೀ ಮೂಲಸಂಘ ದೇಶಿಯ ಗಣ ಪೊಸ್ತಕಗಚ್ಛದ ಕೊಣ್ಡಕುನ್ದಾನ್ವಯ
ಕೊಲ್ಲಾಪುರದ ಸಾವನ್ತನ ಬಸದಿಯ ಪ್ರತಿಬದ್ಧದ ಶ್ರೀ ಮಾಘನಂದಿಸಿದ್ಧಾನ್ತ
ದೇವರ ಶಿಷ್ಯರು ಶುಭ
೨ ಚಂದ್ರತ್ರೈವಿದ್ಯದೇವರ ಶಿಷ್ಯರಪ್ಪ ಸಾಗರಣಂದಿ ಸಿದ್ಧಾನ್ತದೇವರಿಗೆ ವಸುಧೈಕ
ಬಾಂಧವ ಶ್ರೀಕರಣದ ರೇಚಿಮಯ್ಯದಣ್ಡನಾಯಕರು ಶಾನ್ತಿನಾಥದೇವರ
ಪ್ರತಿಷ್ಠೆಯಂ ಮಾಡಿ ಧಾರಾಪೂರ್ವ್ವಕಂ ಕೊಟ್ಟರು ॥

❖❖

ಕಮಲಾಪುರದ ಮಹಾನವಮಿ ದಿಬ್ಬದ ಶಾಸನ (ಈಗ ಮದ್ರಾಸ ವಸ್ತುಸಂಗ್ರಹಾಲಯದಲ್ಲಿದೆ)

೧ ....ಮದದಶಾಂ ಲಾವಣ್ಯಲಕ್ಷ್ಮೀಧವಾಃ ದರ್ಪ್ಪಿಷ್ಠಾಶ್ಚ ಚತುಃ
ಕಷಾಯ ......
೨ ..... ಪ್ತೇ ಶ್ರೀಮಳಧಾರಿದೇವಯಮಿನಿ(ಃ) [ಸ್ವ]ರ್ಗ್ಗಾಂಗನಾಲಿಂಗನಂ ॥
ಸನ್ಯಸ್ಯಾಪ್ತ.......

EC-II ಶ್ರವಣಬೆಳಗೊಳ ೩೨೬ ಜಿನನಾಥಪುರ(೧೩ನೆಯ ಶತಮಾನ)
SII-V 221 ಕಮಲಾಪುರ(ತಾ) ಹೊಸಪೇಟೆ

೩ ..... ಧಿಃ ಸಾಫಲ್ಯಂ ನಿಜಪಾದಪಂಕಜನಂತಂ ಕ್ರಿತ್ವಾ ಮುನೀಂದ್ರೋ
ತ್ತಮಃ ಸಂಸಾಧ್ಯಾಶುಸ[ಮ].......

೪ .... ಶಾಂ ಭೂತಳೇ ಯಾತು[ಃ*] ಶ್ರೀಮಳಧಾರಿದೇವಮುನಿಪೋ
ಮುಕ್ತ್ಯಂಗನಾಸಂಗಮಾಂ ॥

೫ ......[ತ್ರಿ]ನಿ ನವತ್ರಿಂಶಜ್ಜಯಾಖ್ಯಾನ್ವಿತೇ ವರ್ಷೇ ಚಾಶ್ವ ಯುಜೇ ಚ
ಮಾಸಿ ವಿಧಿನಾ ನಿರ್ಗಗ್ಧ........

೬ ...... ನೇ ಚ ಶುಭದ ಶ್ರೀ ಶುಕ್ರವಾರೇ ತಃ ಸನ್ಯಸ್ತೋ ಮಳಧಾರಿದೇವ
ಮುನಿಪೋ ದೇವೇಂದ್ರ [ಲೋಕಂ]...

೭ ......ರ್ವ್ವಿ ಧುರಿಯೋಳ್ ನೀಳುರ್ವ್ವಿ. ರ್ವ್ವಾಗ್ನಿಯಿಂ ಸಿಡಿಲಿಂ ಮುಪ್ಪುರಿ
ದಣ್ಡ ಕಾಯ್ದಿನಲಗು ......

೮ .... ಗಲಿದಿರ್ಚರೊಡ್ಡಿಸ ... ಕಲ್ಕೆ ಕೂಂಕಲೆಯ್ತುಪ್ಪ ಮಾರ್ಪ್ನಡೆ
ಯುಂಟೇ ಮರುಬಾ ....

೯ .... ನು । ಇನಿಸಾನುಂ [ಸಾಕ್ಷಿ]ಪಾತಂ ಬಡೆದು ಮಡಿಯೊಳೇಂ ನಿಂಬ
ಸಾಮನ್ತ ಗೋಪಾಳನಿ .....

೧೦ .... ರಿಕಾನ್ತಾದಿನೀತಾಂಜನಲೇಖಂ ನೇತ್ರಯುಗ್ಮಂ ಮಣಿ
ಗಣವಳಯಂ ನ್ಯಸ್ತ ....

೧೧ ..... ರಂ ತಾವೆ ಬಳಲೆ ಸಾ .....

❖❖

೨. ಪದ್ಯಗಳ ಅಕಾರಾದಿ

❖❖

೩. ಕಠಿಣ ಪದಕೋಶ

ಅಗಲ–ಊಟದ ತಟ್ಟೆ
ಅಗಳ–ಕಂದ
ಅಗಿ–ಅಲುಗಾಡು
ಅಂಕ–ಕಾಳಗ, ಜಗಳ
ಅಂಗವಣೆ–ಸಾಮರ್ಥ್ಯ
ಅಂಕಿನಿಡುವ–ಗುರುತಿಟ್ಟು ಹೊಡೆಯುವ
ಅಜ್ಜರಾಯ–ಪೂರ್ವಕಾಲದ ಅರಸು
ಅರ್ಜಿಸು–ಗಳಿಸು
ಅಟ್ಟಳ–ನಿಚ್ಚಣಿಕೆ
ಅಡಸು–ಸೇರಿಸು
ಅಡಾಯುಧ–ಒಂದು ಬಗೆಯ ಖಡ್ಗ
ಅತನುಜಿತ–ಕಾಮನನ್ನು ಗೆದ್ದ
ಅದಟ–ಶೌರ್ಯ
ಅದ್ದಲ–ಅಬ್ಬರ
ಅನಗಾರ–ಮನೆಯನ್ನು ತೊರೆದ ಸನ್ಯಾಸ ಧರ್ಮ
ಅನಳ–ಬೆಂಕಿ
ಅನುನಯ–ಸ್ನೇಹ
ಅನುಬದ್ಧ–ಕೇವಲಜ್ಞಾನಿಯಾದರೂ ಕೆಲವು ಕೊರತೆಯುಳ್ಳವ
ಅನುವರ–ಕಾಳಗ
ಅಂತರಿಸು–ದೂರವಾಗು
ಅಪವರ್ಗ–ಮೋಕ್ಷ
ಅಭಿಸಂಧಿ–ಸಂಧಿಕಾರ್ಯ ಪ್ರಾರಂಭ
ಅಮ್ಮು–ಅಣ್ಮು, ಸಮರ್ಥವಾಗು
ಅರುಣ–ಕೆಂಪು
ಅರುಬು–ಕೂಗು, ಧ್ವನಿಮಾಡು
ಅಲಗು–ಖಡ್ಗ
ಅವಸರ–ಸಂದರ್ಭ
ಅವರಸರದವರು–ಸೇವಕರು
ಅವುಡಿ–ದವಡೆ
ಅಶ್ವತ್ಥಪತ್ರ–ಅರಳೆಯ ಮರದ ಎಲೆ
ಅಳ್ಕಾಡು–ತ್ಯಜಿಸು
ಆಚಾರ್ಯ–ಜೈನ ಪಂಚಪರಮೇಷ್ಠಿಗಳಲ್ಲಿ ಒಂದು ವರ್ಗ
ಆತು–ಆಂತು, ಎದುರಿಸಿ
ಆಯ–ಸಾಮರ್ಥ್ಯ
ಆಯತ–ವಿಸ್ತಾರವಾದ, ಸಾಮರ್ಥ್ಯ
ಆರ್–ಆರ್ಭಟಿಸು
ಆರದವರು–ಸೇರದವರು
ಆರುಹಂ[ತ]–ಅರ್ಹಂತ, ತೀರ್ಥಂಕರ
ಆಲವಟ್ಟ–ಬೀಸಣಿಕೆ
ಆವಾಸ–ಮನೆ
ಆಸನ್ನ–ಸಮೀಪ
ಆಸನ್ನಕಂಪ–ಆಸನ ನಡುಗುವಿಕೆ(ಜೈನ ದೇವತೆಗಳ ಪ್ರಸನ್ನವಾಗುವಾಗ ಇದು ಜರುಗುತ್ತದೆ)
ಆಸುರ–ಹಟಮಾರಿತನ
ಆಹಾರಕಾಯ ನಿವೃತ್ತಿವ್ರತ–ಸಲ್ಲೇಖನ ವ್ರತ
ಆಳವೇರಿ–ಸುತ್ತಲೂ ಕಂದಕವುಳ್ಳ ಕೋಟೆಯ ಎತ್ತರ ಗೋಡೆ
ಆಳಿ–ತಿರಸ್ಕಾರ, ಒರಟು
ಆಳುವೇರಿ–ಕೋಟೆಯ ಎತ್ತರ ಭಾಗ
ಇಂಗಡಲ–ಹಾಲಸಮುದ್ರ
ಇಟ್ಟಯಿಸು–ಒಟ್ಟು
ಇಟ್ಟಳ–ಮನೋಹರ, ಅಡ್ಡಿ

ಇಂಡೆ-ಗುಂಪು
ಇನನಸುತ-ಕರ್ಣ
ಇಷ್ಟ-ಪ್ರೀತಿಯ
ಇಷ್ಟಿಗೋಲ-ಯಜ್ಞಮಾಡುವಾಗ
ಉಪಯೋಗಿಸುವ: ಅರಳೆಮರದ ಸಣ್ಣ ಕೋಲು
ಇಳೋದರ-ಭೂಲೋಕ
ಉಕ್ಕಡ(ದ್ಭ)-ಉತ್ಕಟ
ಉಗ್ರಾಣಿ-ಉಗ್ರಾಣದ ಅಧಿಕಾರಿ
ಉದಯಾಂಬುಧಿ-ಪೂರ್ವಸಮುದ್ರ
ಉಗಸರ್ಗ-ತೊಂದರೆ, ಹಿಂಸೆ
ಉಪಹತಿ-ಹಿಂಸೆ
ಉಪ್ಪವಡಿಸು-ನಿದ್ದೆಯಿಂದ ಏಳು
ಉಪಾಧ್ಯಾಯ-ಜೈನಪಂಚಪರಮೇಷ್ಠಿಗಳಲ್ಲಿ
ಒಮದು ವರ್ಗ
ಉಪ್ಪಾರತಿ-ಓಕುಳಿಯ ಆರತಿ
ಉಬ್ಬಗವಳ-ಹುರುಪು ಹುಟ್ಟಿಸುವುದಕ್ಕೆ ತಿನ್ನುವ
ತಿನಿಸು
ಉರವಣೆ-ರಭಸ
ಉರುವ-ತಕ್ಕುದಾದ
ಉರುಗುಣರು-ಶ್ರೇಷ್ಠ ಗುಣಶಾಲಿಗಳು
ಉರುಬು-ಮೇಲೆ ಬೀಳು
ಉಳುಕೆ(ದ್ಭ)-ಉಲ್ಕೆ
ಊರು-ತೊಡೆ, ಗ್ರಾಮ
ಊಳ್-ನರಿಯ ಕೂಗು
ಎರೆಯ-ಒಡೆಯ
ಏ[ವೆ]-ಏನು ಮಾಡುವೆ
ಏಳಿಸು-ಎಬ್ಬಿಸು, ಹೀಯಾಳಿಸು
ಒಕ್ಕವು-ಚಲ್ಲಿದವು
ಒಗ್ಗಡಿಸು-ಒಂದಾಗು
ಒಚ್ಚತ-ಸಂತೋಷ
ಒಟ್ಟವಿಸಿ-ಒಂದುಗೂಡಿ
[ಒ]ಡಚು-ಒಡರ್ಚು, ಒದಗಿಸು
ಒಡ್ಡವಣೆ-ಸಿದ್ಧತೆ
ಒತ್ತುಗೋಂಟೆ-ಆನಿಕೆಯಾದ ಕೋಟೆ
ಒಮ್ಮನ-ಒಂದು ಮಾನ, ೪ ಸೊಲಿಗೆ
ಒಳಗೆರೆ-ಕೆರೆಯ ಒಳಗೆ
ಓಗೊಡೆಯದೆ-ಹೇಸಿಕೊಳ್ಳದೆ
ಓರಯಿಸು-ಒಂದಾಗು
ಓಸರಿಸು-ಹಿಂದೆ ಸರಿ
ಓಹಿ-ಅವಧಿ
ಓಳಿ-ಸಾಲು, ಸಮೂಹ
ಕಕ್ಷಪಾಳು-ಬಗಲ ಚೀಲ
ಕಂಕ-ಕಂಕಿ(?) ಕಾಳು ಉದುರಿಸಿದ ತೆನೆ
ಕಂಬಿ-ಕೋಲು
ಕಚ್ಚುಟ-ಬಟ್ಟೆ, ಕಚ್ಚೆ(?)
ಕಟಕ-ಸೈನ್ಯ
ಕಟಾಕ್ಷ-ಕಡೆಗಣ್ಣಿನ ನೋಟ
ಕಡಿತಲೆ-ಆಯುಧ ವಿಶೇಷ
ಕಡುಪು-ಶೌರ್ಯ, ಗರ್ವ
ಕಡೆ-ಕಬ್ಬಿಣದ ಬಳೆ
ಕಣ್ಣಳವಿಗೊಳ್ಳು-ಕಣ್ಣಿಗೆ ಕಾಣು
ಕರ್ಣಪಾಲೆ-ಕಿವಿಯ ಹಾಲೆ
ಕಣ್ದೆ[ರ]ವು-ಪ್ರಕಟವಾಗುವಿಕೆ
ಕಂಟಣಿ-ಕಂಟಲಿ ಎತ್ತು; ಬೆನ್ನ ಮೇಲೆ ಭಾರ
ಹೊರುವ ಎತ್ತು
ಕತ್ತಳ-ಒಂದು ಬಗೆಯ ಕುದುರೆ
ಕದಕದಿಸು-ನಡುಗು, ಅಲ್ಲಾಡು
ಕದಬಿ-ಕದಬೆ(?)ತೆಂಗಿನ ನಾರು
ಕಮ್ಮರಿ-ಗಿಡಗಳನ್ನು ಸುಟ್ಟು ಸಾಗು ಮಾಡಿದ
ಕ್ಷೇತ್ರ
ಕಂಬುಕಂಠ-ಶಂಖದಂಥ ಕುತ್ತಿಗೆ
ಕಯ್ಗಾಯು-ಕಾಪಾಡು
ಕರವಾಳ-ಖಡ್ಗ
ಕರಹಾಸ-ಖಡ್ಗ, ಸಿಡಿಲು(?)
ಕರ್ಮ-ಜೀವ ಅಜೀವದೊಂದಿಗೆ
ಸೇರಿಕೊಂಡಾಗ ಅದಕ್ಕೆ ಅಂಟುವ ಬಂದ
ಕಳಭ-ಆನೆಯ ಮರಿ
ಕಳವೆ-ಭತ್ತ
ಕಾಂಚನಗಿರಿ-ಮಂದರಪರ್ವತ
ಕಾಂಚೀದಾಮ-ಟೊಂಕಪಟ್ಟಿ, ಡಾಬು
ಕಾಮವಟ್ಟ-ಕಾಮವಾಟ, ಉಪ್ಪಾರಕೆಲಸ
ಕಾಯಜ-ಕಾಮ
ಕಾಯನಿವೃತ್ತಿವ್ರತ-ಸಲ್ಲೇಖನವ್ರತ

ಕಾರಣಿಕ-ಅವಶ್ಯಕತೆ
ಕಾರಿ-ಕಾರಿಕಂಟೆ(?)ಕಾಲು-ಕಾಲ(?)ಕಪ್ಪು, ದೋಷ
ಕಾಲುವಲೆ-ಕಾಲಿನ ಬಲೆ
ಕಾವ-ಕಾಯುವ
ಕಾಷಾಯ-ಕಷಾಯ, ಕಾವಿಬಣ್ಣ
ಕಾಷ್ಠಾಯುಧ-ಕಟ್ಟಿಗೆಯ ಆಯುಧ
ಕಾಸೆ-ಚಡ್ಡಿ
ಕಾಳಜ-ಹೃದಯ
ಕಾಳಾನಳ-ಪ್ರಳಯಕಾಲದ ಬೆಂಕಿ
ಕಬ್ಬದಿ-ಪಕ್ಕದ ಕೆಳಗು
ಕೀರ-ಗಿಳಿ
ಕೀರು-ಚೀರು
ಕುಂಜರ-ಆನೆ
ಕುಡುಹು-ಗರ್ವ, ಸಾಮರ್ಥ್ಯ
ಕಂಧರ-ಪರ್ವತ
ಕುಂಭಸ್ಥಳ-ಆನೆಯ ತಲೆ
ಕುರುಗಡ-ಸಣ್ಣ ಕೈಗಡ
ಕುರಿಗಡಿ-ಕುರುಗಿಡ, ಸಣ್ಣಾಗಿ ಕತ್ತರಿಸು
ಕುಲಾದ್ರಿ-ಸಪ್ತಕುಲಪರ್ವತಗಳು
ಕುಲಿಶ-ಸಿಡಿಲು
ಕೂರ್-ಹದವಾಗು
ಕೊಜನ-ಹಕ್ಕಿಯ ಕೂಗು
ಕೂಪ-ಕೂರ್ಪ, ಸ್ನೇಹದ
ಕೂರಂಬ-ಹರಿತವಾದ ಬಾಣ
ಕೃಪಾಣ-ಖಡ್ಗ, ಆಯುಧ
ಕೆಲೆ-ಕೂಗು, ಧ್ವನಿಮಾಡು
ಕೇವಲಿ-ಪೂರ್ವೋತ್ತರಭವಗಳನ್ನು ಅರಿತವ, ಸರ್ವಜ್ಞ
ಕೈಗೆಯ್-ಸಿಂಗರಿಸು
ಕೈಪು-ಲಂಗೋಟಿ
ಕೈರವ-ರಾತ್ರಿಕಮಲ
ಕೈಹೊಡೆ-ಬಾಣಕ್ಕೆ ಗರಿ ಹಚ್ಚಿದ ಭಾಗ
ಕೊಠಾರಿ-ಉಗ್ರಾಣದ ಅಧಿಕಾರಿ
ಕೊತ್ತಳ-ಕೋಟೆಯ ಮೇಲಿನ ಬುರುಜು
ಕೊಂತ-ಭರ್ಚಿ
ಕೊಂಬು-ಕಹಳೆ
ಕೊಳುಗುಳ-ಯುದ್ಧಭೂಮಿ
ಕೋಲ-ಬಾಣ
ಕೋಲಕಟ್ಟಿಗೆಯವರು-ಪರಿಚಾರಕರು
ಕೋವಿದ-ಬಲ್ಲಿದ, ವಿದ್ವಾಂಸ
ಕೋಶಾಂತರ-ಆಯುಧದ ಮೇಲಿನ ಹೊದಿಕೆ
ಕೋಳು-ಸೆರೆ
ಕೌಂದಿ-ಕೌದಿ
ಕ್ಷೋಣಿಪತಿ-ಭೂಪತಿ, ಅರಸು
ಖಂಡ-ಮಾಂಸ
ಖಂಡೆಯ-ಖಡ್ಗ
ಖರಕಿರಣ-ಸೂರ್ಯ
ಖರೆ-ಸತ್ಯ
ಖುರರಜ-ಕೊಳಗದ ಧೂಳು
ಖೂಳತನ-ದುಷ್ಟತನ
ಗನ್ನ-ಮೋಸ, ವ್ಯಥೆ
ಗಂದಿಗ-ಸುಗಂಧ ದ್ರವ್ಯದವ
ಗಂಧವಾಳಿ-ಸುಗಂಧ ದ್ರವ್ಯ ಮಾರುವವ
ಗವಸಣಿಗೆ-ಹೊದಿಕೆ
ಗಳ-ಕುತ್ತಿಗೆ
ಗಳಹು-ಹರಟೆ ಕೊಚ್ಚು
ಗಾಳವಾಡು-ಅಪಹಾಸ್ಯ ಮಾಡು
ಗಾಳುತನ-ಕೀಳುತನ
ಗುಡ್ಡು-ಶಿಷ್ಯ
ಗುತ್ತ -ಎತ್ತರ
ಗೊಂದಳ-ಸಮೂಹ
ಗೊಣೆ-ಬಿಲ್ಲಿನ ಹೆದೆಯ ನಡುಭಾಗ
ಗೌಳಿ-ಹಲ್ಲಿ
ಗ್ರಾಸ-ತುತ್ತು, ಆಹಾರ
ಘನಪಥ-ಆಕಾಶ
ಘಳಿಯರ-ಗಡಿಯಾರ
ಘಾಟು-ಸೋಪಾನಮಾರ್ಗ
[ಘೂ]ಕಪ್ರತೀಕ-ಗೂಗೆಯ ಪ್ರತಿರೂಪ
ಚಚ್ಚರ-ತ್ವರೆ, ವೇಗ
ಚಂಚರೀಕ-ಭ್ರಮರ
ಚಟಕ-ಗುಬ್ಬಿ

ಚಡಾಳಿಸು–ಹೆಚ್ಚಾಗುಚಂಡಕರ–ಸೂರ್ಯ
ಚರವಿಗೆ–ಊಟದ ಪಾತ್ರೆ
ಚಾತುರ್ವರ್ಣ–ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ
ಚಾರಣೆ–ಚಾನ(?), ಕಬ್ಬಿಣದ ಉಪಕರಣ
ಚಾಹಿತ–ಛತ್ರಿ ಹಿಡಿಯುವವ
ಚಿತ್ತಗತಿ–ಮನೋವ್ಯಾಪಾರ
ಚಿಮ್ಮುಕ–ಚಿಮ್ಮುವ ಆಯುಧ
ಚೀನಾಂಬರ–ರೇಶಿಮೆ ಬಟ್ಟೆ
ಚೀರ–ಬಟ್ಟೆ
ಚುಂಚು–ಸಿಂಗರಿದ, ಕೆಂಪುಬಣ್ಣ
ಚೂಚು–ಮಾಲೆಯ ತುದಿ
ಚೂಣಿ–ಕಾಳಗದ ಮುಂಭಾಗ
ಚೂಳಿ–ಮುಂಗಾಳಗ
ಚೆಂಬು–ನೀರು ಹಾಕುವ ಬಟ್ಟಲು
ಚೈತ್ಯಾಲಯ–ದೇವಾಲಯ
ಚೋರಕಿಂಡಿ–ಗುಪ್ತಮಾರ್ಗ
ಛತ್ರತ್ರಯ–ತೀರ್ಥಂಕರನ ಮೇಲಿರುವ ಮೂರು ಕೊಡೆ
ಛತ್ತೀಸರಾಯ–೩೬ ರಾಜರು
ಜಂಘೆ–ಮೊಳಕಾಲ ಕೆಳಗಿನ ಭಾಗ
ಜವಾದಿ–ಸುಗಂಧದ್ರವ್ಯ
ಜಾನು–ಮೊಳಕಾಲು
ಜಾಳವಿಸು–ಮೋಹಿಸು
ಜೇಗಂಟೆ–ಜಾಗತಿ
ಜೋಗವಟ್ಟಿಗೆ–ಯೋಗದಂಡ
ಜೋಡ–ಯುದ್ಧದ ಅಂಗಿ
ಜೋದರು–ಯೋಧರು
ಝುಲ್ಲರಿ–ಜಾಲರಿ, ಜೋಮಾಲೆ
ಟಕ್ಕೆಯ–ಧ್ವಜ
ಟೆಂಟಣಿಸು–ಮತ್ಸರಿಸು
ಡಂಬ–ಆಡಂಬರ
ಡವುಡೆ–ಚರ್ಮವಾದ್ಯವಿಶೇಷ
ಡೆಂಕಣಿ–ಕೋಟೆಯ ಬುರುಜು
ಡೊಂಕಣಿ–ಭರ್ಚಿ
ಢಾಳ–ಅಧಿಕ ಕಾತಿ
ತಗಿಬಗಿ–ಅಲ್ಲೋಲಕಲ್ಲೋಲ
ತಡೆಗಡಿ–ಗಡಿಗೆಡೆ, ಮುಗ್ಗುರಿಸು
ತಂಬಟ–ವಾದ್ಯವಿಶೇಷ
ತಂಬೆರಲ–ತಂಗಾಳಿ
ತರಟ–ಕೂದಲಿಲ್ಲದ
ತರಣಿ–ಸೂರ್ಯ
ತರಹರ–ತತ್ತರಿಸುವಿಕೆ
ತಸ್ಕರ–ಕಳ್ಳ
ತಾಟಿತ–ಅಪ್ಪಳಿಸಲ್ಪಟ್ಟ
ತಾರಕಾ–ನಕ್ಷತ್ರ
ತಾರೇಶ್ವರ–ಚಂದ್ರ
ತಿಣ್ಣ–ದಟ್ಟ, ಸಾಂದ್ರ
ತಿಂಥಿಣಿ–ಸಮೂಹ
ತಿಪ್ಪತಿರುಗು–ಕೆಲಸವಿಲ್ಲದೆ ತಿರುಗು
ತಿವಾಸಿ–ಮೆತ್ತನೆಯ ಹಾಸಿಗೆ
ತಿಳಕುಸುಮ–ಎಳ್ಳಿನ ಹೂವು
ತೀವು–ತುಂಬು
ತುರಂಗಮ–ಕುದುರೆ
ತೂಳ–ಉತ್ಸಾಹ
ತೆಕ್ಕೆಗಟ್ಟು–ಸಾಂದ್ರವಾಗು
ತೆರಳಿಕೆ–ಪ್ರಯಾಣ, ಹೋಗುವಿಕೆ
ತೊಂಡ–ಹಟಮಾರಿ, ದುಷ್ಟ
ತೊಡರು–ಬಿರುದುಬಾವಲಿ
ತೋಮರ–ಈಟಿ
ತೋರ(ದ್ಧ)–ಸ್ಥೂಲ
ತೋಹು–ಉಪಾಯ, ಸಂಚು
ತ್ರಿದಶಪತಿ–ಇಂದ್ರ
ತ್ರಿಕರಣ–ಕಾಯಾ, ವಾಚಾ, ಮನಸಾ
ದಕ್ಷಿಣಭಾಗ–ಬಲಭಾಗ
ದಟ್ಟದ–ದಟ್ಟವಾದ, ದಪ್ಪನೆಯ
ದಟ್ಟಯಿಸು–ಸಾಂದ್ರವಾಗು
ದಟ್ಟಿ–ಸೊಂಟಕ್ಕೆ ಸುತ್ತುವ ಬಟ್ಟೆ
ದಟ್ಟಿನೊಳ್–ಘಟ್ಟಿನೊಳ್, ಸೈನ್ಯದಲ್ಲಿ
ದಂಡಿಗೆ–ಪಲ್ಲಕ್ಕಿ
ದಂಡೆ–ಸರಮಾಲೆ
ದಂದುಗ–ತೊಂದರೆ
ದರ್ಭೆ–ಎಳೆಯ ಕರಿಕೆ

ದರುಶನ–ಧರ್ಮತತ್ವ
ದಶನ–ಹಲ್ಲು
ದಾತೃ–ದಾನಿ
ದಾರವಟ್ಟ–ಹೆಬ್ಬಾಗಿಲು
ದಾಸಣ–ದಾಸವಾಳ ಹೂವು
ದುಕೂಲ–ರೇಶಿಮೆ
ದುಷ್ಕೃತ–ಪಾಪ
ದೂಸ–ಬಟ್ಟೆ
ದೃಷ್ಟಿದ್ವೇಷಿ–ಕುರುಡ
ದೇವಾಂಗ–ರೇಶಿಮೆಬಟ್ಟೆ
ದೊಂಡೆ–ಮುದ್ದೆಯಾದ
ದೊಂಬಿ–ಗದ್ದಲ
ದೋರ್ದಂಡ–ದಂಡದಂಥ ಬಾಹುವುಳ್ಳವ, ಶೂರ
ಧರಧುರ–ಅಬ್ಬರ
ಧರಮರ–ಧರಧುರ, ಆರ್ಭಟೆ
ಧವಳಾರ–ಸೌಧ, ಬಿಳಿಯ ಬಣ್ಣದ ಮನೆ
ಧಾರೆ–ಖಡ್ಗದ ಹರಿತಭಾಗ
ಧೂರ್ಜಟಿ–ಶಿವ
ಧೂಳಿಕೋಟೆ–ಪುಡಿಪುಡಯಾದ ಕೋಟೆ
ನಗಪಕ್ಷ–ಪರ್ವತದ ರೆಕ್ಕೆ
ನಟ್ಟವಿಗ–ನರ್ತಕ
ನಮೋಸ್ತು–ಜೈನಪರಿಭಾಷೆಯಲ್ಲಿಯ ನಮಸ್ಕಾರ
ನಾಗ–ದೊಡ್ಡ ಮನುಷ್ಯ
ನಾಗರಿ–ನಾಗರಿಕ
ನಾಳಿಕೇರ–ತೆಂಗು
ನಿದಾನಿಸು–ತಡೆಮಾಡು, ಪರಿಕ್ಷಿಸು
ನಿಪ್ಪಸರ–ನಿಷ್ಠುರ
ನಿಬ್ಬರ–ಹೆಚ್ಚಾದ
ನಿರವಣ–ನಿರ್ವಾಣ, ಮೋಕ್ಷ
ನಿರಿಗೆ–ಕ್ರಮ
ನಿರ್ವೃತಿ–ಮುಕ್ತಿ
ನಿವೃತಿಪಥ–ಮೋಕ್ಷಮಾರ್ಗ
ನಿವೃತಿ–ಬಿಡುಗಡೆ, ತೊರೆಯುವಿಕೆ
ನಿಸ್ಸಾಳ–ಢೋಲು, ರಣವಾದ್ಯ
ನಿಹಿತಮಾರ್ಗ–ಯೋಗ್ಯದಾರಿ
ನುಸುಳುಗಂಡಿ–ನುಸುಳುವ ಕಿಂಡಿ
ನೆಗಳು–ಮೊಸಳೆ
ನೆರವಿ–ಸಮೂಹ
ನೆರೆ–ಚೆನ್ನಾಗಿ
ನೆವರು–ನುಸುಳು, ಏರು
ನೇಲೆ–ನೆಲಗಣಿ
ಪಚ್ಚಳ–ಪಚ್ಚಡ, ಹೊದಿಕೆ
ಪಂಚಗುರು–ಪಂಚಪರಮೇಷ್ಠಿಗಳು
ಪಂಚಪದ–ಪಂಚಪರಮೇಷ್ಠಿಗಳ ನಾಮ
ಪಂಚಬಾಣ–ಕಾಮ
ಪಂಚಮಸರ–ಕೋಗಿಲಧ್ವನಿ
ಪಂಚಮ[ಹ]ಶಬ್ದ–ದೇವರ ಮುಂದೆ, ಅರಸರ ಮುಂದೆ ಬಾರಿಸುವ ೫ ಬಗೆಯ ವಿಶಿಷ್ಟವಾದ ಧ್ವನಿ
ಪಂಚಾನನ–ಸಿಂಹ
ಪಂಚಾಕ್ಷರ–ಅ, ಸಿ, ಆ, ಉ, ಸಾ(ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು)
ಪಡಿಗ–ಉಗುಳಲು ಉಪಯೋಗಿಸುವ ಪಾತ್ರೆ
ಪಡಿದುರ್ಗ–ಪ್ರತಿದುರ್ಗ
ಪಡಿಯಾಳ–ಪ್ರತಿಸೈನ್ಯ
ಪಡೆವಳ–ಸೈನ್ಯಾಧಿಕಾರಿ
ಪಣಿಯಿಕ್ಕು–ಹೆಣೆದುಕೊಂಡು ಕಾದು
ಪದ್ಮಿನಿ–ಸ್ತ್ರೀಯರ ೪ ಜಾತಿಗಳಲ್ಲಿ ಒಂದು
ಪರಭಾಗ–ಹಿಂಭಾಗ
ಪರಮಾಯುಷ್ಯ–ಪೂರ್ಣಾಯುಷ್ಯ
ಪರಶು–ಕೊಡಲಿ
ಪರಿಹಸಕ–ವಿದೂಷಕ
ಪಲ್ಯೋಪಮ–ಗಣನೆಗೆ ಮೀರಿದ ಒಂದು ಸಂಖ್ಯೆ
ಪಳಹರ–ಪಟಹ(?), ನಗಾರಿ
ಪಾಟಿ–ವಿರೋಧಿ
ಪಾಡು–ಅವಸ್ಥೆ
ಪಾಮರಿ–ಗ್ರಾಮೀಣ ಸ್ತ್ರೀ
ಪಾಯ–ರೀತಿ
ಪಾಯದಳ–ಪದಾತಿ, ಕಾಲ್ದಳ
ಪಾರಕ–ಪಾರಗ(?), ನುರಿತವರು
ಪಿಂಗಲಿ–ಹಲುವಕ್ಕಿ, ಒಂದು ಬಗೆಯ ಗೂಗೆ
ಪಿಸುಣ–ಚಾಡಿಕೋರ


ಪುಂಡರೀಕ–ಕಮಲ
ಪುಯ್ಯ–ಪುಯ್ಯಲ್(?), ಅಬ್ಬರ
ಪೂರಯಿಸು–ಒದಗಿಸು, ಊದು
ಪೇರೆ–ಫೇರೆ(?), ಸುತ್ತುವಿಕೆ
ಪ್ರಕ್ಷಾಲಿಸು–ತೊಳೆದುಕೊಳ್ಳು
ಪೈಜೆ–ಪ್ರತಿಜ್ಞೆ
ಪ್ರತತಿ–ಸಮೂಹ
ಫುಲ್ಲಶರ–ಕಾಮ
ಬಚ್ಚಬಸಿ–ಪಚ್ಚಪಸಿ, ಹಸಿಹಸಿಯಾದ
ಬಜೆಗಾರಿಸು–ವಜಾಮಾಡು
ಬಂಬಲ–ಗುಂಪು
ಬಳ್ಳಿಮಾಡ–ಬಳ್ಳಿಹಬ್ಬಿದ ಮಹಡಿ
ಬ್ರಹ್ಮಪುರಿ–ಊರಲ್ಲಿ ಬ್ರಾಹ್ಮಣರು ವಾಸಿಸುವ ಓಣಿ
ಬಾಯ್ಕೊಂಡು–ಬಾಯಿಮಾಡಿ, ಕೂಗಿ
ಬಾರಿಕ–ತಳವಾರ
ಬಾಹತ್ತ[ರ]–ಅರಸನ ಊಳಿಗದ ೭೨ ಬಗೆಗಳು
ಬಾಸೆ–ಸ್ತ್ರೀಯರ ಹೊಟ್ಟೆಯ ಮೇಲಿನ ರೋಮ, ಭಾಷೆ, ಪ್ರತಿಜ್ಞೆ
ಬಿಜ್ಜಣಿಗ–ಬೀಸಣಿಕೆಯವ
[ಬಿಂ]ದ–ವೃಂದ, ಸಮೂಹ
ಬಿಂಬಾಧರ–ತೊಂಡೆ ಹಣ್ಣಿನಂಥ ತುಟಿ
ಬೀಯಗ–ಬೀಗ, ಕೀಲಿ
ಬೀಳಕ್ಕರ–ವ್ಯರ್ಥ ಅಕ್ಷರ
ಬೂತು–ಸೋಗುಗಾರ
ಬೆಚ್ಚ–ಪಶು–ಪಕ್ಷಿಗಳನ್ನು ಬೆದರಿಸಲು ಹೊಲದಲ್ಲಿ ನಿಲ್ಲಿಸುವ ಮನುಷ್ಯಾಕೃತಿ
ಬೆಚ್ಚವೊಲು–ಬೆಸೆದಂತೆ
ಬೆಜ್ಜರ–ಬೆಚ್ಚರ, ಗಾಬರಿ
ಬೆಸದವರು–ಅಪ್ಪಣೆ ಪಾಲಿಸುವವರು, ಸೇವಕರು
ಬೇಹಿಗ–ಗುಪ್ತಚಾರ
ಬೇಹು–ಗೂಢಚಾರಿಕೆ
ಬೊಬ್ಬಿಕೆ–ತೆರೆ
ಬೊಂಬಾಳ–ಅತಿಪ್ರಕಾಶ
ಬೊಂಬಾಳಿಕೆ–ಬೊಂಬುಳಿ(?), ಡೋಲು
ಬೋಡು–ಹಲ್ಲಿಲ್ಲದ
ಬೋನವಟ್ಟಿಗೆ–ಬೋನದ ಪಾತ್ರೆ
ಬೋಳೈಸು–ಸಮಾಧಾನ ಪಡಿಸು
ಭಲ್ಲೆಹ–ಭರ್ಜಿ
ಭವ್ಯ–ಕರ್ಮದಲ್ಲಿ ಅಷ್ಟಾಗಿ ಮುಳುಗಿ ಹೋಗದೆ ಮುಂದೆ ಸಿದ್ಧಿ ಹೊಂದುವ ಸಾಮರ್ಥ್ಯ ಉಳಿಸಿಕೊಂಡ ಜೀವ
ಭಾಜನ–ಪಾತ್ರ
ಭಾರಣೆ–ಹೆಚ್ಚಳ
ಭೂಸುರ–ಬ್ರಾಹ್ಮಣ
ಮಕರಕೇತನ–ಕಮ
ಮಂಜುಳಿಕೆ–ಹಂಸ
ಮಟ್ಟ–ಅಳತೆ, ಪ್ರಮಾಣ
ಮಟ್ಟಿ–ಗಂಧ
ಮಡ–ಹಿಮ್ಮಡ
ಮಣಿಹ–ಕೆಲಸ
ಮಂಟೆ–ಮಣ್ಣಿನ ಪಾತ್ರೆ
ಮಂಡಿತ–ಧರಿಸಿದ
ಮತಿ ಶ್ರುತಿಜ್ಞಾನ–ಬುದ್ಧಿಯಿಂದ ಬಂದ ಮತ್ತು ಗ್ರಂಥವಾಚನದಿಂದ ಬಂದ ಜ್ಞಾನ
ಮಯ–ಒಂಟೆ, ಹೇಸರಗತ್ತೆ
ಮರಳುದಲೆ–ಮರಳುತ್ತಲೇ
ಮಾಣಿಕವಟ್ಟ–ಮಾಣಿಕದಪಟ್ಟಿ
ಮಾತುಳಂಗ–ಮಾದಲ
ಮಾನ–ಅಳತೆ
ಮಾನಸ್ತಂಭ–ಜೈನ ಬಸದಿಯ ಮುಂದೆ ನಿಲ್ಲಿಸಿದ ಎತ್ತರವಾದ ಕಂಬ
ಮಾಯವೃತ್ತಿ–ಮರೆ ಮಾಡಿದ ರೀತಿ
ಮಾರಶರ–ಕಾಮಬಾಣ
ಮಿಥುನ–ಜೋಡಿ
ಮುಖಶಾಲೆ–ಮನೆಯ ಮುಂಭಾಗ
ಮುಗ್ಧೆ ಮಧ್ಯೆ ಪ್ರಗಲ್ಭೆ–ಸ್ತ್ರೀಯ ಮೂರು ಅವಸ್ಥೆಗಳು
ಮುಂಗಡಿ–ಮುಂಭಾಗ
ಮುಂಗುಡಿ–ಮುಂದು ಹಿಡಿದ ಧ್ವಜ
ಮುದ್ಗರ–ದೊಣ್ಣೆ
ಮುದ್ರಿಕೆ–ಉಂಗುರ

ಮೂಗಿ–ಮುಂಗಲಿ(?)
ಮೂವಳಸ–ಮೂರು ದುಗ್ಗಲು
ಮೆರಹು–ಉತ್ಸಾಹ
ಮೇಲುದ–ಕುತ್ತಿಗೆಯ ಸುತ್ತ ಹಾಕುವ ಬಟ್ಟೆ, ಮೇಲದಿ
ಮೆಲುವಾಸಿಕೆ–ಒಳ್ಳೆಯ ಹಾಸಿಗೆ
ಮೊಗರಂಬ–ಮುಖವಾಡ
ಮೊನೆ–ಯುದ್ಧ
ಮೋಹರ–ಗುಂಪು
ರಜರೇಣು–ಧೂಳುಕಣ
ರಂಚಿ–ರಂಚೆ, ಕುದುರೆಯ ಮೈಮೇಲಿನ ಜೂಲ
ರತ್ನತ್ರಯ–ಸಮ್ಯಕ್‌ದರ್ಶನ(ಒಳ್ಳೆಯ ನಂಬುಗೆ), ಸಮ್ಯಕ್‌ಜ್ಞಾನ(ಒಳ್ಳೆಯ ತಿಳುವಳಿಕೆ), ಸಮ್ಯಕ್‌ಚಾರಿತ್ರ(ಒಳ್ಳೆಯ ನಡವಳಿಕೆ)
ರ[ಥಾ]ಂಗ–ಚಕ್ರವಾಕಪಕ್ಷಿ
ರಸದಾಳಿ–ಶ್ರೇಷ್ಠಜಾತಿಯ ಬಿಳಿಯ ಕಬ್ಬು
ರಾಮತೆ–ಸೌಂದರ್ಯ
ರಾಯಸ–ರಾಜಶಾಸನ, ರಾಜಾಜ್ಞೆ
ರಾವುತ–ಕುದುರೆ ಸವಾರ
ಲಗ್ನ–ಮುಹೂರ್ತ
ಲಗ್ಗೆ–ಏರಿಹೋಗುವುದು, ದಾಳಿ
ಲಂಬಗಾಸೆ–ಉದ್ದವಾದ ಕಟ್ಟೆ
ಲಳಿಗೆ–ಎಣ್ಣೆಯ ಪಾತ್ರೆ
ಲುಳಿ–ವೇಗ, ಹೊಳಪು
ಲೌಡಿ–ಉಕ್ಕಿನ ದೊಣ್ಣೆ
ವಂಕದಾರ–ವಕ್ರದ್ವಾರ
ವಂಗಡ–ಸಮೂಹ
ವಟಫಲ–ತೊಂಡೆಹಣ್ಣು
ವರದ–ಶ್ರೇಷ್ಠವಾದ, ಅನುಕೂಲವಾದ
ವರ್ಮ–ಕವಚ
ವಾಗ್ಮೀಕಿ ವಾಗ್ಮಿವಾಂಛಿತ–ಇಚ್ಛಿಸಿದವಾಯಸ–ಕಾಗೆ
ವಾರನಾರಿ–ವೇಶ್ಯೆ, ಸೂಳೆ
ವಾರುವ–ಕುದುರೆ
ವಾಸವಪದ–ಇಂದ್ರಪದವಿ
ವಿತಂಡ–ಅಸ್ತವ್ಯಸ್ತ
ವಿತರಣ–ಹಂಚುವಿಕೆ
ವಿದಾರಣ–ಸೀಳು
ವಿಭಾಡ–ಸೋಲಿಸುವವ
ವೀರವ್ರತ–ಸಲ್ಲೇಖನವ್ರತ
ವೇಂಟೆ–ವಲಯ
ವೇತಂಡ–ಆನೆ
ಶತಪತ್ರ–ಕಮಲ
ಶಂಬರಾರಿ–ಕಾಮ
ಶರಭ–ಪುರಾಣದಲ್ಲಿ ಉಕ್ತವಾದ ಎಂಟು ಕಾಲಿನ ಪ್ರಾಣಿ
ಶಶಾಂಕ–ಮೊಲದ ಗುರುತನ್ನುಳ್ಳವ, ಚಂದ್ರ
ಶಾಳಿವನ–ಬತ್ತದ ಗದ್ದೆ
ಶಿರಃಪ್ರಧಾನ–ಶ್ರೇಷ್ಠ ಮಂತ್ರಿ
ಷಟ್ಖಂಡ–ಜೈನರ ಪ್ರಕಾರ ಭಾರತದ ೬ ಉಪಖಂಡಗಳು
ಸಂವರಿಸು–ಸವರಿಸು, ವ್ಯವಸ್ಥೆ ಮಾಡಿಕೊಳ್ಳು
ಸಗಾಢಿಕೆ–ರಭಸ
ಸಂಕಲೆ–ಸಂಕೋಲೆ, ಬೇಡಿ
ಸಂಚಿತ–ಕೂಡಿಹಾಕಲ್ಪಟ್ಟ, ಹಿಂದಿನ ಜನ್ಮದ
ಸಡಕು–ಅಲಂಕಾರ
ಸನ್ಯಾಸ–ಸಲ್ಲೇಖನವ್ರತ
ಸನ್ನೆಗಾಳೆ–ಯುದ್ಧ ಸೂಚನೆಯ ಕಹಳೆ
ಸನ್ನೆಯ ಕಹಳೆ–ಯುದ್ಧಸೂಚನೆಯ ಕಹಳೆ
ಸಂಧಿವಿಗ್ರಹಿ–ಒಪ್ಪಂದ ಯುದ್ಧಗಳನ್ನು ಏರ್ಪಡಿಸುವವ
ಸಪ್ತಾಂಗ–ಏಳು ಬಗೆಯ ಸನ್ಮಾನ; ಆಂದೋಳನ, ವಸ್ತ್ರ, ಆಭರಣ, ವಾಹನ, ರಾಜ್ಯವಧು, ಕರ್ಪೂರವೀಳ್ಯ
ಸಬ್ಬ–ಸರ್ವ, ಎಲ್ಲ
ಸಮ್ಯಕ್‌ಚಾರಿತ್ರ–ಒಳ್ಳೆಯ ನಡತೆ
ಸಮ್ಯಕ್‌ಜ್ಞಾನ–ಒಳ್ಳೆಯ ತಿಳುವಳಿಕೆ
ಸಮ್ಯಕ್‌ದರುಶನ–ಧರ್ಮದಲ್ಲಿ ಒಳ್ಳೆಯ ಕಾಣ್ಕೆ ಅಥವಾ ನಂಬುಗೆ
ಸರಳ–ಬಾಣ
ಸಲ್ಲೆ–ಶಲ್ಯ, ಭರ್ಚಿ

ಸವಣರು-ಶ್ರವಣರು, ಜೈನಸನ್ಯಾಸಿಗಳು
ಸರ್ವಸಾಧು-ಜೈನಪಂಚಪರಮೇಷ್ಠಿಗಳಲ್ಲಿ ಒಂದು ವರ್ಗ
ಸಾಗರೋಪಮ-ಗಣನೆಗೆ ಮೀರಿದ ಒಂದು ಸಂಖ್ಯೆ
ಸಾದು-ಕಪ್ಪುವರ್ಣದ ಸುಗಂಧದ್ರವ್ಯ
ಸಾರಿ ಪಗಡೆಕಾಯಿ
ಸಿಡಿಕೆ-ಸಿಡಿಯುವಿಕೆ
ಸಿತ-ಬಿಳಿಯ
ಸಿತಪತ್ರ-ಬಿಳಿಯ ಕೊಡೆ
ಸಿದ್ಧ-ಜೈನ ಪಂಚಪರಮೇಷ್ಠಿಗಳಲ್ಲಿ ಒಂದು ವರ್ಗ
ಸಿಂದ-ಪತಾಕೆ
ಸಿಂಧು-ಸಮುದ್ರ
ಸೀಗುರಿ-ಒಂದು ಬಗೆಯ ಚಾಮರ
ಸೀರ-ಚೀರ, ವಸ್ತ್ರ, ಸೀರ್ಯ ಎಂಬ ಊರು
ಸೀಸಕ-ಶಿರ್ಷಕ, ಶಿರಸ್ತ್ರಾಣ
ಸುಪ್ಪತ್ತಿಗೆ-ಮೆತ್ತನೆಯ ಹಾಸಿಗೆ
ಸುಕೃತ-ಪುಣ್ಯ
ಸುಯಿಲ್-ಉಸಿರು
ಸುವ್ರತ-ಒಳ್ಳೆಯ ವ್ರತ, ಸಲ್ಲೇಖನವ್ರತ
ಸೂರಿಜನ-ವಿಸ್ವಾಂಸರು
ಸೂರಿಯ-ಸೂರ್ಯ
ಸೂಳಯಿಸು-ಒಂದೊಂದಾಗಿ ಹೊಡೆ
ಸೆಟ್ಟಗೊಂಡು-ಸಿಟ್ಟಿಗೆದ್ದು
ಸೆಲೆ-(ಚೀರ>ಚೀಲ>ಚೀಲೆ) ಬಟ್ಟೆ
ಸೆಲ್ಲರಸ-ಸುಗಂಧವಿಶೇಷ
ಸೆಳ್ಳುಗುರು-ಚೂಪಾದ ಉಗುರು
ಸೆಳೆನಡುವು-ತೆಳು ಸೊಂಟ
ಸೊಜ್ಜ-ಸಜ್ಜು
ಸೌಧರ್ಮಕಲ್ಪ-ಊರ್ಧ್ವಲೋಕದಲ್ಲಿಯ ಒಂದನೆಯ ಸ್ವರ್ಗ
ಹಕ್ಕರಿಕೆ-ಪಕ್ಷರಕ್ಷಾ, ಮೈಯ ಎರಡೂ ಬದಿಗಳ ರಕ್ಷಣೆಗೆ ಮಾಡಿದ ಉಪಕರಣ
ಹರಿಗ-ಪಕ್ಷಿವಿಶೇಷ
ಹಜ್ಜೆ-ರೀತಿ, ಕ್ರಮ
ಹಜ್ಜೆವಾಳ-ಹಿಂಬಾಲಕ, ಅನುಯಾಯಿ
ಹಣಿದ-ಜೂಜು
ಹದನ-ರೀತಿ
ಹದಿನಾರು ಲಕ್ಷಣ-ಕಾವ್ಯದ ಮುಖ್ಯ ೧೬ ಅಲಂಕಾರಗಳು
ಹನನ-ಕೊಲೆ, ವಧೆ
ಹಮ್ಮಯಿಸು-ಮೂರ್ಛೆಹೋಗು
ಹಮ್ಮುಗೆ-ಹಗ್ಗ
ಹರದು-ವ್ಯಾಪಾರ
ಹರಿಕಾರ-ಸುದ್ದಿ ಒಯ್ಯುವ ಓಲೆಕಾರ
ಹರಿಗೆ-ಢಾಲು
ಹರವರಿ-ನೆಲೆ, ಪ್ರಕಟ
ಹಳಚು-ತಾಗು
ಹಳವಿಗೆ-ಧ್ವಜ
ಹಾರ-ತುತ್ತು, ಸಾಧ್ಯ
ಹಾಸ-ಹಾಸ್ಯ, ನಗೆ
ಹಾಸಂಗಿ-ಪಗಡೆಯಾಟದ ಪಟ್ಟ
ಹಿಳಿಲ-ಹೆಳಲು, ಜಡೆ
ಹೀಲಿ-ನವಿಲುಗರಿಯ ಛತ್ರ
ಹುರಿಮಳಲ-ಕಾಸಿದ ಉಸುಬು
ಹುಲಿಮುಖ-ಕೋಟೆಯೊಳಗಿನ ಸಣ್ಣ ಸೀಳುದಾರಿ
ಹೂಣಿಸು-ಪೂಣಿಸು, ಅಬಿವಚನ ಕೊಡು
ಹೆಬ್ಬರೆ-ದೊಡ್ಡ ಹಲಗೆ
ಹೆಬ್ಬುಶಿ-ಅಧಿಕ ಸುಳ್ಳು
ಹೆರೆತೆಗೆ-ಹಿಂದೆ ಸರಿ
ಹೇಮವಟ್ಟ-ಬಂಗಾರದ ತಗಡು
ಹೊಗರ-ಕಾಂತಿ
ಹೊಡೆಗೆದರು-ಗುಂಪನ್ನು ಚಲ್ಲಾಪಿಲ್ಲೆಗೊಳಿಸು
ಹೊಣಕೆ-ಪೊಣರ್ಕೆ, ಶಕ್ತಿ
ಹೊರೆಯ-ಪಕ್ಕದ, ಬದಿಯ
ಹೊಂಡೆಯ-ಹೊಂಡ, ಜಲಾಶಯ
ಹೊಂಬೆಸುಗೆ-ಬಂಗಾರದ ಬೆಸುಗೆ

❖❖

೪. ವಿಶೇಷ ಪದಕೋಶ



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ. ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ:97390 67359